ಕೋಟೆ - ಕೊತ್ತಳಗಳು : ಒಂದು ಅಧ್ಯಯನ

(ಬಳ್ಳಾರಿ ಜಿಲ್ಲೆ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ

ಎಂ. ಕೊಟ್ರೇಶ್

ಮಾರ್ಗದರ್ಶಕರು

ಪ್ರೊ. ರವಿ ಕೋರಿಶೆಟ್ಟರ

ಪ್ರಾಧ್ಯಾಪಕರು

ಪುರಾತತ್ವ ಮತ್ತು ಇತಿಹಾಸ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ


ವಿದ್ಯಾರಣ್ಯ - ೫೮೩ ೨೭೬

೨೦೦೨

ಕೋಟೆ - ಕೊತ್ತಳಗಳು : ಒಂದು ಅಧ್ಯಯನ

(ಬಳ್ಳಾರಿ ಜಿಲ್ಲೆ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ



ಸಂಶೋಧಕ

ಎಂ. ಕೊಟ್ರೇಶ್

ಮಾರ್ಗದರ್ಶಕರು

ಡಾ. ರವಿ ಕೋರಿಶೆಟ್ಟರ

ಪ್ರಾಧ್ಯಾಪಕರು

ಪುರಾತತ್ತ್ವ ಮತ್ತು ಇತಿಹಾಸ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೨

ಪ್ರಮಾಣ ಪತ್ರ

'ಕೋಟೆ - ಕೊತ್ತಳಗಳು : ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ)' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ರವಿ ಕೋರಿಶೆಟ್ಟರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಎಂ. ಕೊಟ್ರೇಶ್

ದಿನಾಂಕ : ೧೨-೧೧-೨೦೦೭

(ಎಂ. ಕೊಟ್ರೇಶ್)
ಯೋಜನಾ ಸಹಾಯಕರು
ವಸ್ತುಸಂಗ್ರಹಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ದೃಢೀಕರಣ ಪತ್ರ

ಶ್ರೀ ಎಂ.ಕೊಟ್ರೇಶ್ ಇವರು **'ಕೋಟೆ - ಕೊತ್ತಳಗಳು : ಒಂದು ಅಧ್ಯಯನ** (ಬಳ್ಳಾರಿ ಜಿಲ್ಲೆ)' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೭.೧೧.೨೦೦೭
ಸ್ಥಳ : ವಿದ್ಯಾರಣ್ಯ

(ಡಾ. ರವಿ ಕೋರಿಶೆಟ್ಟರ್)
ಮಾರ್ಗದರ್ಶಕರು
ಪ್ರಾಧ್ಯಾಪಕರು
ಪುರಾತತ್ವ ಮತ್ತು ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ - ೫೮೦ ೦೦೩

ನೆನಕೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನ ಕೈಗೊಳ್ಳಲು ನನಗೆ ಅವಕಾಶ ಕಲ್ಪಿಸಿಕೊಟ್ಟ ವಿಶ್ರಾಂತ ಕುಲಪತಿಗಳಾದ ಮಾನ್ಯ ಡಾ. ಎಂ.ಎಂ.ಕಲಬುರ್ಗಿ ಹಾಗೂ ಪ್ರಸ್ತುತ ಕುಲಪತಿಗಳಾದ ಮಾನ್ಯ ಡಾ. ಎಚ್.ಜೆ.ಲಕ್ಕಪ್ಪಗೌಡ ಅವರಿಗೆ, ನಿಗದಿತ ಸಮಯದಲ್ಲಿ ಮುಗಿಯದ ನನ್ನ ಅಧ್ಯಯನಕ್ಕೆ ಕಾಲಾವಕಾಶ ನೀಡಿ ಪ್ರೋತ್ಸಾಹಿಸಿದ ಕುಲಸಚಿವರಾದ ಡಾ. ಕೆ.ವಿ.ನಾರಾಯಣ ಅವರಿಗೆ, ಅಧ್ಯಯನದ ಉದ್ದಕ್ಕೂ ನನ್ನ ಮೇಲೆ ವಿಶ್ವಾಸವಿಟ್ಟು ಪ್ರೀತಿಯಿಂದ ಮಾರ್ಗದರ್ಶನ ಮಾಡಿದ ಡಾ. ರವಿ ಕೋರಿಶೆಟ್ಟರ ಅವರಿಗೆ, ಸಂಶೋಧನಾ ಪ್ರವೃತ್ತಿ ಬೆಳೆಸಿ ನನ್ನ ಅಧ್ಯಯನಕ್ಕೆ ಪ್ರೇರಕರಾದ ಡಾ. ಕೆ.ಎಂ.ಸುರೇಶ್, ಡಾ. ದೇವರಕೊಂಡಾರೆಡ್ಡಿ, ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೆ ತುಂಬು ಹೃದಯದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ ಹಾಗೂ ಹಿಂದಿನ ನಿರ್ದೇಶಕರುಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಡಾ. ಹಿ.ಚಿ.ಬೋರಲಿಂಗಯ್ಯ ಮತ್ತು ಶ್ರೀ ಬಾಲಸುಬ್ರಮಣ್ಯ ಅವರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ಅಧ್ಯಯನದ ಕ್ಷೇತ್ರಕಾರ್ಯ ಮೊದಲ್ಗೊಂಡು ಪ್ರತಿ ಹಂತದಲ್ಲೂ ಸಹಕರಿಸಿದ ಶ್ರೀ ಕೆ.ಎಲ್. ರಾಜಶೇಖರ್, ಸಲಹೆ ಸೂಚನೆಗಳನ್ನು ನೀಡಿದ ಡಾ. ಡಿ.ವಿ. ಪರಮಶಿವಮೂರ್ತಿ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಡಾ. ಚಿನ್ನಸ್ವಾಮಿ ಸೋಸಲೆ, ಶ್ರೀ ಕೆ. ಪ್ರೇಮಕುಮಾರ, ಡಾ. ಸಿ.ಮಹಾದೇವ, ಡಾ. ವಾಸುದೇವ ಬಡಿಗೇರ, ಶ್ರೀ ಕೆ.ಜಿ.ಶಂಕರಾನಂದ, ಡಾ. ಎಸ್.ಜಿ. ಘಟಪಣದಿ, ಡಾ. ಜಡ್.ಕೆ. ಅನ್ಸಾರಿ, ಡಾ. ಎಚ್.ಎಸ್. ಶ್ರೀಮತಿ ಅವರಿಗೆ ನನ್ನ ನಮನಗಳು.

ಗೆಳೆಯರುಗಳಾದ ಡಾ. ತಾರಿಹಳ್ಳಿ ಹನುಮಂತಪ್ಪ, ಡಾ. ಮಲ್ಲಿಕಾರ್ಜುನ ವಣೇನೂರು, ಶ್ರೀಮತಿ ಸುಚೇತ ನವರತ್ನ, ಶ್ರೀ ಜನಾರ್ದನ, ಎ.ಎಂ. ಭಾರತಿ, ಡಾ. ಎಸ್.ವೈ.ಸೋಮಶೇಖರ್, ಎ. ಕಾಶಿವಿಶ್ವನಾಥ, ಓಬಯ್ಯ, ರಮೇಶ, ಅಧ್ಯಯನಾಂಗದ ಸಿಬ್ಬಂದಿಗಳಾದ ಶ್ರೀ ಡಿ.ವಿ.ಪ್ರಕಾಶ್, ಶ್ರೀ ಸೋಮನಾಥ ಕುಡಿತಿನಿ, ಕೃಪಾಶಂಕರ್ ಅವರಿಗೆ, ಗ್ರಂಥಾಲಯದ ಎಲ್ಲ ಸಿಬ್ಬಂದಿಗಳಿಗೆ ಹಾಗೂ ಪ್ರಬಂಧವನ್ನು ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಜೆ.ಎಂ.ವಿ.ನಂದೀಶ ಅವರಿಗೆ ಹಾಗೂ ರಚನಾ ಗ್ರಾಫಿಕ್ಸ್‌ನ ಶ್ರೀಮತಿ ರೂಪ ಸೋಮನಾಥ ಅವರಿಗೆ ಹಾಗೂ ನನ್ನ ಅಧ್ಯಯನಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಪ್ರೀತಿಪೂರ್ವಕ ವಂದನೆಗಳು.

ಅಂತಿಮವಾಗಿ ಅಧ್ಯಯನದ ಸಮಯದಲ್ಲಿ ನನ್ನೆಲ್ಲ ಕಿರುಕುಳಗಳನ್ನು ತಾಳ್ಮೆಯಿಂದ ಸಹಿಸಿ ಸಹಕರಿಸಿದ ಪ್ರೀತಿಯ ಪತ್ನಿ ಸುಧಾಳ ಸಹಕಾರವೇ ಅಧ್ಯಯನಕ್ಕೆ ಪ್ರೇರಣೆ. ಪೂಜ್ಯ ಅವ್ವ-ಅಪ್ಪ, ಅಣ್ಣ-ಅತ್ತಿಗೆಯರಿಗೆ, ಒಡನಾಡಿ ಸಹೋದರಿಯರ ನೆರವು ಈ ಕಾರ್ಯ ನಿರ್ವಹಿಸಲು ಸಾಧ್ಯವಾಗಿದೆ ಎಂದು ಹೇಳಬೇಕು.

ಇವರೆಲ್ಲರ ಪ್ರೋತ್ಸಾಹವೇ ಈ ಅಧ್ಯಯನದ ಫಲಶ್ರುತಿ.

ಎಂ. ಕೊಟ್ರೇಶ್

ದಿನಾಂಕ : ೧೨-೧೧-೨೦೦೭

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆ





೧

ಅಧ್ಯಯನ ಕುರಿತು

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

೧.೩ ಜಿಲ್ಲೆಯ ಭೌಗೋಳಿಕ ಲಕ್ಷಣಗಳು

೧

ಅಧ್ಯಯನ ಕುರಿತು

೧.೧ ಪ್ರಸ್ತಾವನೆ

ಕರ್ನಾಟಕದ ಮಧ್ಯದ ಸ್ಥಾನದಲ್ಲಿರುವ (ದಕ್ಷಿಣೋತ್ತರವಾಗಿ ನೋಡಿದರೆ) ಬಳ್ಳಾರಿ ಜಿಲ್ಲೆಯು ಈಶಾನ್ಯ ಮತ್ತು ನೈರುತ್ಯದಿಕ್ಕಿನಲ್ಲಿ ಉದ್ದಕ್ಕೆ ಹಬ್ಬಿದೆ. ಕ್ರಿ.ಶ. ೧೯೯೭ಲಕ್ಕಿಂತ ಮೊದಲು ಈ ಜಿಲ್ಲೆ ಎಂಟು ತಾಲೂಕುಗಳನ್ನು ಒಳಗೊಂಡಿತ್ತು. ಅವುಗಳೆಂದರೆ ಬಳ್ಳಾರಿ, ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮತ್ತು ಶಿರುಗುಪ್ಪ. ಕ್ರಿ.ಶ. ೧೯೯೭ಲ ರಿಂದೀಚೆಗೆ ಹೊಸದಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕನ್ನು ಸೇರಿಸಲಾಗಿದೆ. ಹಾಗಿದ್ದು, ಹರಪನಹಳ್ಳಿ ತಾಲೂಕನ್ನು ಬಳ್ಳಾರಿ ಜಿಲ್ಲೆ ಕೋಟೆ - ಕೊತ್ತಳಗಳ ಅಧ್ಯಯನಕ್ಕೆ ಏಕೆ? ಸೇರಿಸಿಕೊಳ್ಳಲಾಗಿದೆ ಎಂಬ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ.

ದಾವಣಗೆರೆ ಜಿಲ್ಲೆಯನ್ನು ರಚಿಸುವಾಗ ಹಡಗಲಿ ಹರಪನಹಳ್ಳಿ ತಾಲೂಕುಗಳನ್ನು ಸೇರಿಸಬೇಕೆಂದು ಕರ್ನಾಟಕ ಸರಕಾರದ ಶ್ರೀ. ಎ.ಡಿ.ಗೊರ್ವಲ ಮತ್ತು ಶ್ರೀ. ಪಿ.ಸಿ.ಮಹಾಲನೋಬಿಸ್ ಮುಂತಾದ ತಜ್ಞರನ್ನು ಒಳಗೊಂಡ ಸಮಿತಿ ಸೂಚಿಸಿತ್ತು. ಈ ಸೂಚನೆಗೆ ಹಡಗಲಿ ಮತ್ತು ಹರಪನಹಳ್ಳಿ ತಾಲೂಕುಗಳಿಂದ ಭಾರಿ ವಿರೋಧ ವ್ಯಕ್ತವಾಯಿತು. ಈ ವಿರೋಧಗಳ ಮಧ್ಯೆಯು ಶ್ರೀ ಹುಂಡೇಕಾರ್ ಮತ್ತು ಗದ್ದಿಗೌಡರ್ ಸಮಿತಿಗಳು ಹರಪನಹಳ್ಳಿ ತಾಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರ್ಪಡೆಗೊಳಿಸಿದವು.[1] ಹಡಗಲಿ ತಾಲೂಕು ಮಾತ್ರ ಬಳ್ಳಾರಿ ಜಿಲ್ಲೆಯಲ್ಲೇ ಉಳಿಯಿತು. ಈ ವೇಳೆಗಾಗಲೇ ಪಿಎಚ್.ಡಿ. ಅಧ್ಯಯನಕ್ಕಾಗಿ ಹರಪನಹಳ್ಳಿ ತಾಲೂಕಿನಲ್ಲಿ ಕ್ಷೇತ್ರಕಾರ್ಯ ಮಾಡಲಾಗಿತ್ತು. ಅಲ್ಲದೆ ಹರಪನಹಳ್ಳಿ ತಾಲೂಕನ್ನು ಆಡಳಿತಾತ್ಮಕವಾಗಿ ದಾವಣಗೆರೆ ಜಿಲ್ಲೆಗೆ ಸೇರಿಸಿದರೂ, ಈ

ತಾಲೂಕಿನ ಸಂಬಂಧಗಳು ಭೌಗೋಳಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಬಳ್ಳಾರಿ ಜಿಲ್ಲೆಯೊಂದಿಗೆ ಬೆಸೆದುಕೊಂಡಿರುವುದನ್ನು ಈ ಜಿಲ್ಲೆಯ ಚರಿತ್ರೆಯಿಂದ ತಿಳಿಯಬಹುದು. ಈ ಜಿಲ್ಲೆಯಲ್ಲಿ ಹರಪನಹಳ್ಳಿ ತಾಲೂಕನ್ನು ಈ ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

ಬಳ್ಳಾರಿ ಜಿಲ್ಲೆಯು ಅನೇಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಇಲ್ಲಿ ಬೃಹತ್ ಬಂಡೆಗಳನ್ನು ಹೊತ್ತ ಬೆಟ್ಟಗಳು, ನದಿ - ಹಳ್ಳ ತೊರೆಗಳಿಂದ ಕೂಡಿದ ನೀರಿನ ನೆಲೆಗಳು ಅದಿರಿನ ನಿಕ್ಷೇಪಗಳು ಫಲವತ್ತಾದ ಭೂ - ಭಾಗಗಳು ಇದ್ದು ಭೌಗೋಳಿಕವಾಗಿ ಸಮೃದ್ಧವಾಗಿದೆ. ಹೀಗಾಗಿ ಆದಿಶಿಲಾಯುಗ ಕಾಲದಿಂದಲೂ ಮಾನವನ ತಾಣವಾಗಿ ಈ ಪ್ರದೇಶ ಬೆಳೆದು ಬರಲು ಸಹಕಾರಿಯಾಯಿತು. ಅಂತಲೇ ಭೂ-ವಿಜ್ಞಾನಿ ಬ್ರೂಸ್ ಫೂಟರು "ಇತಿಹಾಸ ಪೂರ್ವ ಕುರುಹುಗಳು ಈ ಜಿಲ್ಲೆಯಲ್ಲಿ ಅತ್ಯಂತ ಶ್ರೀಮಂತವಾಗಿವೆ" ಎಂದಿದ್ದಾನೆ.[೨]

ಪ್ರಾಗಿತಿಹಾಸಕಾಲದ ಜನಸಂಸ್ಕೃತಿಯನ್ನು ಗಮನಿಸಿದರೆ ಹಲವು ಪ್ರಮುಖ ಅಂಶಗಳು ಕಂಡುಬರುತ್ತವೆ. ಈ ಅವಧಿಯಲ್ಲಿ ಮಾನವನು ಬೇಟೆಯಾಡುತ್ತಾ ಆಹಾರ ಸಂಗ್ರಹಿಸುತ್ತ ಜೀವನ ನಡೆಸುತ್ತಿದ್ದನು. ಆತನು ನಿರಂತರವಾಗಿ ಪ್ರಕೃತಿಯೊಡನೆ ಸೆಣಸಬೇಕಾಗಿತ್ತು. ಮಳೆ, ಗುಡುಗು, ಸಿಡಿಲು, ಕಾಳ್ಗಿಚ್ಚು ನಿಸರ್ಗದಲ್ಲಿ ನಡೆಯುವ ಇಂಥಹ ಘಟನೆಗಳು ಆತನಲ್ಲಿ ಭಯ ಹುಟ್ಟಿಸಿದವು. ಇವುಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ದೊಡ್ಡ ದೊಡ್ಡ ಬಂಡೆಗಳ ಆಶ್ರಯದಲ್ಲಿ ವಾಸಿಸಿದನು. ತಾನು ಸುಭದ್ರವಾಗಿ ಇರಬೇಕೆಂದರೆ ಬೃಹತ್ ಬಂಡೆಗಳ ಸಮೂಹಗಳ ಮಧ್ಯದಲ್ಲಿ ಎಂದು ಅರಿತನು. ಇಂಥ ಬೃಹತ್ ಬಂಡೆಗಳ ಸಮೂಹಗಳು ಗುಡೇಕೋಟೆ, ಜರಿಮಲೆ, ಕುರುಗೋಡು, ಹಂಪಿ ಮುಂತಾದ ಸ್ಥಳದಲ್ಲಿ ಕಾಣಸಿಗುತ್ತವೆ. ಹೀಗೆ ರಕ್ಷಣೆಯ ಕಲ್ಪನೆಯನ್ನು ನಾವಿಲ್ಲಿ ಕಾಣಬಹುದು.

ಈ ಪ್ರದೇಶವು ಮೌರ್ಯ, ಶಾತವಾಹನ, ಪಲ್ಲವ, ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಕಳಚೂರ್ಯ, ನೊಳಂಬ, ಕೊಟ್ಟೂರಿನ ಕದಂಬರು, ಸಿಂದರು, ಪಾಂಡ್ಯರು ಹೊಯ್ಸಳರು, ಯಾದವರು, ವಿಜಯನಗರದರಸರು, ಹರಪನಹಳ್ಳಿ, ಗುಡೇಕೋಟೆ, ಜರಿಮಲೆ ಪಾಳೆಯಗಾರರು, ಬಿಜಾಪುರದ ಸುಲ್ತಾನರು. ಸಂಡೂರು ಘೋರ್ಪಡೆಯವರು, ಹಂಡೆ ಪಾಳೆಯಗಾರರು, ಹೈದರಾಲಿ, ಟಿಪ್ಪು ಮತ್ತು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತ್ತು.

ಕ್ರಿ.ಪೂ. ೩ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಅಧಿಕಾರ ಹೊಂದಿದ್ದ ಮೌರ್ಯರು ದಕ್ಷಿಣಭಾರತದ ಕೆಲವು ಪ್ರದೇಶಗಳ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ಈ ಜಿಲ್ಲೆಯಲ್ಲಿಯೂ ಅವರು ಆಳ್ವಿಕೆ ಮಾಡಿದರೆಂಬುದು ಅವರ ಶಾಸನಗಳಿಂದ ತಿಳಿಯುತ್ತದೆ.[೩] ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಉತ್ಖನನದಲ್ಲಿ ಕೆಲವು ಕಟ್ಟಡ ಅವಶೇಷಗಳು ದೊರೆತಿದ್ದರೂ ಅವು ಕೋಟೆಗಳಿಗೆ ಸಂಬಂಧಿಸಿಲ್ಲದಂತೆ ಕಾಣುತ್ತವೆ.

ಮೌರ್ಯರ ನಂತರ ಆಡಳಿತಕ್ಕೆ ಬಂದ ಶಾತವಾಹನರು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶದ ಬಹುಭಾಗವನ್ನು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ತಂದುಕೊಂಡಿದ್ದರು. ಈ ಅವಧಿಯಲ್ಲಿ ಅವರು ಕರ್ನಾಟಕದ ಸನ್ನತಿ ಮತ್ತು ಬನವಾಸಿಗಳಲ್ಲಿ ಕೋಟೆ ಕಟ್ಟಿಕೊಂಡರು. ಬಳ್ಳಾರಿ ಜಿಲ್ಲೆಯು ಅವರ ಆಡಳಿತ ಮಿತಿಯಲ್ಲಿದ್ದರೂ ಅವರ ಕಾಲದ ಕೋಟೆಗಳಾವುವೂ ಇಲ್ಲಿ ನಿರ್ಮಾಣವಾದಂತಿಲ್ಲ.

ಶಾತವಾಹನರ ಸಮಕಾಲೀನರಾಗಿ ಪಲ್ಲವರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರೆಂಬುದು ಹಿರೇಹಡಗಲಿ[೪] ಮತ್ತು ಅಣಜಿ[೫] ಶಾಸನಗಳಿಂದ ತಿಳಿದುಬರುತ್ತದೆ. ದಾವಣಗೆರೆ ಮತ್ತು ಹರಪನಹಳ್ಳಿ ತಾಲೂಕುಗಳ ಗಡಿ ಪ್ರದೇಶವಾಗಿದ್ದ ಅಣಜಿ ಶಾಸನದಲ್ಲಿ ನಣಕ್ಕಸ ಪಲ್ಲವನ ಉಲ್ಲೇಖವಿದ್ದು, ಪಲ್ಲವರು ಈ ಪ್ರದೇಶದಲ್ಲಿ ಕೆಲವು ಕಾಲವಿದ್ದಿರಬೇಕು, ಅಣಜಿ ಗ್ರಾಮದ ಉತ್ತರದಿಕ್ಕಿನಲ್ಲಿರುವ ಉಚ್ಚಂಗಿದುರ್ಗದಲ್ಲಿರುವ ಕೋಟೆಯು ಪಲ್ಲವರ ಕಾಲದೆಂದು ಕೆಲವರು ಅಭಿಪ್ರಾಯಪಡುತ್ತಾರೆ.[೬] ಈ ಪ್ರದೇಶದಲ್ಲಿ ದೊರೆಯುವ ಪಲ್ಲವರ ಯಾವ ಶಾಸನದಲ್ಲೂ ಕೋಟೆಯ ಪ್ರಸ್ತಾಪಗಳಿರುವುದಿಲ್ಲವಾದ್ದರಿಂದ ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುವುದಿಲ್ಲ.

ಬಾದಾಮಿ ಚಾಲುಕ್ಯರ ಆಡಳಿತಕ್ಕೆ ಈ ಪ್ರದೇಶ ಸೇರಿತ್ತೆಂಬುದು ಕುರುಗೋಡು,[೭] ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿರುವ ಶಾಸನಗಳಿಂದ ತಿಳಿದುಬರುತ್ತದೆ. ಬಾದಾಮಿ ಚಾಲುಕ್ಯರ ಒಂದನೆಯ ಪುಲಿಕೇಶಿಯು ಕ್ರಿ.ಶ. ೫೪೩ರಲ್ಲಿ ಬಾದಾಮಿ ಬೆಟ್ಟದಲ್ಲಿ ಕೋಟೆ ಕಟ್ಟಿಸಿದನಾದರು[೮] ಬಳ್ಳಾರಿ ಜಿಲ್ಲೆಯಲ್ಲಿ ಅವರ ಯಾವ ಕೋಟೆಗಳು ಕಂಡುಬರುವುದಿಲ್ಲ.

ಇವರ ನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿ, ಮಳಖೇಡ ರಾಜಧಾನಿಯಲ್ಲಿ ಬಹುದೊಡ್ಡ ಕೋಟೆಯನ್ನು ಕಟ್ಟಿಸಿದರು.[೯] ರಾಷ್ಟ್ರಕೂಟರ ಹತ್ತಾರು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರಕೂಟರು ಆಡಳಿತ ನಡೆಸಿದ ಬಗ್ಗೆ ತಿಳಿಸಿದರೂ ಅವರಿಲ್ಲಿ ಕೋಟೆ ಕಟ್ಟಿಕೊಂಡ ಬಗ್ಗೆ ಶಾಸನಗಳು ಮೌನವಾಗಿವೆ.

ರಾಷ್ಟ್ರಕೂಟರ ಆಡಳಿತವನ್ನು ಕೊನೆಗಾಣಿಸಿ ಕಲ್ಯಾಣಚಾಲುಕ್ಯರು ಕಲ್ಯಾಣವನ್ನು ರಾಜಧಾನಿ ಮಾಡಿಕೊಂಡು ಚಾಳುಕ್ಯರ ರಾಜ್ಯವನ್ನು ಪುನರರಾರಂಭಿಸುತ್ತಾರೆ. ಇವರ ಆಡಳಿತಾವಧಿಯಲ್ಲಿ ಕರ್ನಾಟಕದ ಬಹುತೇಕ ಕಡೆ ಕೋಟೆಗಳು ನಿರ್ಮಾಣವಾಗಿವೆ. ಅಲ್ಲದೆ ಈ ಜಿಲ್ಲೆಯ ಉಚ್ಚಂಗಿದುರ್ಗದಲ್ಲಿಯು ಕೋಟೆ ನಿರ್ಮಾಣವಾಗಿರುವುದನ್ನು ಶಾಸನಗಳು ದೃಢಪಡಿಸುತ್ತವೆ.[೧೦] ಇದೇ ಬಳ್ಳಾರಿ ಜಿಲ್ಲೆಯ ಶಾಸನೋಕ್ತ ಮೊದಲ ಕೋಟೆ ಇವರ ಸಾಮಂತರಾದ ಕದಂಬ ವಂಶದವರು ಕೊಟ್ಟೂರಿನಲ್ಲಿ ಕೋಟೆ ಕಟ್ಟಿಸಿದಂತೆ ಶಾಸನದಲ್ಲಿ ಪ್ರಸ್ತಾಪವಾಗಿದೆ.[೧೧] ಚಾಳುಕ್ಯರ ಇನ್ನೊಬ್ಬ ಸಾಮಂತರಾದ ಸಿಂದರ ಕಾಲದ ಕೋಟೆಯು ಕುರುಗೋಡಿನಲ್ಲಿದೆ.[೧೨] ಇದೇ ಕಾಲದಲ್ಲಿ

ಕೊಳೂರಿನಲ್ಲಿಯು ಕೋಟೆ ಇದ್ದ ಬಗ್ಗೆ ಶಾಸನದಲ್ಲಿ ಉಲ್ಲೇಖವಾಗಿದ್ದರೂ[೧೩] ಕೋಟೆಯ ಯಾವ ಕುರುಹುಗಳು ಆ ಗ್ರಾಮದಲ್ಲಿಲ್ಲ. ಕ್ರಿ.ಶ. ೧೧೦೪ - ೦೫ರ ದರೋಜಿ ಶಾಸನವು[೧೪] ದೊರವದಿ ಕೋಟೆಯನ್ನು ಉಲ್ಲೇಖಿಸುತ್ತದೆ.

ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಹೊಯ್ಸಳರು ಹಳೇಬೀಡಿನಲ್ಲಿ ಕೋಟೆ ಕಟ್ಟಿಸಿದ್ದರು.[೧೫] ಹಂಪಿಯ ಮೂಲಕೋಟೆಯು ಇವರದ್ದೇ ಎಂದು ತಿಳಿದುಬರುತ್ತದೆ.[೧೬] ಹೊಯ್ಸಳರ ವೀರಬಲ್ಲಾಳನ ಕಾಲದಿಂದೀಚೆಗೆ ದೇವಗಿರಿಯ ಯಾದವರ ಶಾಸನಗಳು[೧೭] ಈ ಪ್ರದೇಶದಲ್ಲಿ ಕಂಡುಬರುವುದಲ್ಲದೆ ಹರಪನಹಳ್ಳಿ ತಾಲೂಕಿನ ಹಲುವಾಗಿಲು ಕೋಟೆ ಯಾದವರದೆಂದು ಅಂದಾಜಿಸಲಾಗಿದೆ. ಹೊಯ್ಸಳ ಸಮಕಾಲೀನರಾದ ಕಂಪಿಲ, ಕುಮಾರರಾಮನು ಹೊಸಮಲೆದುರ್ಗ ಹಾಗೂ ಕುಮ್ಮಟದುರ್ಗಗಳಲ್ಲಿ[೧೮] ಕೋಟೆಯನ್ನು ಕಟ್ಟಿಸಿದ್ದಾರೆ.

ಹಂಪಿಯನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ನಡೆಸಿದ ವಿಜಯನಗರದ ಅರಸರು ರಾಯಚೂರು, ಮುದುಗಲ್ಲ, ಆನೆಗೊಂದಿ ಮುಂತಾದ ಕಡೆಗಳಲ್ಲಿ ಕೋಟೆ ಕಟ್ಟಿಸಿದ್ದಾರೆ.[೧೯] ಅಂತೆಯೇ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ಬಲಿಷ್ಠವಾದ ಕೋಟೆಯನ್ನು ಕಟ್ಟಿಕೊಂಡಿದ್ದರು.

ವಿಜಯನಗರ ಅವನತಿಯತ್ತ ಸಾಗಿದಂತೆ ಅನೇಕ ಸಣ್ಣಪುಟ್ಟ ಪಾಳೆಯಪಟ್ಟುಗಳು ಸ್ವತಂತ್ರ ಆಳ್ವಿಕೆಯನ್ನು ಆರಂಭಿಸಿದವು. ಅವುಗಳಲ್ಲಿ ಹಂಡೇಪಾಳೆಯಗಾರರು, ಗುಡೇಕೋಟೆ, ಜರಿಮಲೆ, ಹರಪನಹಳ್ಳಿ ಪಾಳೆಯಗಾರರು ಮುಖ್ಯವಾಗಿದ್ದಾರೆ. ಇವರುಗಳು ತಮ್ಮ ರಾಜ್ಯಗಳ ರಕ್ಷಣೆಗಾಗಿ ಚಿಕ್ಕ - ಪುಟ್ಟ ಕೋಟೆಗಳನ್ನು ನಿರ್ಮಿಸಿಕೊಂಡಿದ್ದನ್ನು ನಾವು ಕಾಣುತ್ತೇವೆ. ಈ ಪಾಳೆಯಗಾರರ ಕೋಟೆಗಳ ಬಗ್ಗೆ ಇಲ್ಲಿ ದೀರ್ಘವಾಗಿ ಚರ್ಚಿಸಲಾಗಿದೆ. ಹೈದರಾಲಿ-ಟಿಪ್ಪು, ಬ್ರಿಟಿಷರು ಸಹ ಇಲ್ಲಿ ಹಲವು ಕೋಟೆಗಳನ್ನು ದುರಸ್ಥಿ ಮಾಡಿಕೊಂಡು ಆಳ್ವಿಕೆ ನಡೆಸಿದರು.

೧.೨. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಇತಿಹಾಸವೆಂದರೆ ರಾಜಕೀಯ ಇತಿಹಾಸ. ಅದರಲ್ಲಿಯೂ ಗಣ್ಯ ರಾಜಮನೆತನಗಳ ಇತಿಹಾಸವೆಂಬ ದೃಷ್ಟಿಕೋನ ಬೆಳೆದು, ಅಗಣ್ಯ ರಾಜಮನೆತನಗಳು ಅಲಕ್ಷ್ಯಕ್ಕೆ ಗುರಿಯಾಗುತ್ತಾ ಬಂದಿವೆ. ಇಂದಿನದು ರಾಜಸತ್ತಾಯುಗವಲ್ಲ. ಪ್ರಜಾಸತ್ತಾಯುಗ. ಹೀಗಾಗಿ ಇಂದು ನಮ್ಮ ಇತಿಹಾಸದ ಅಧ್ಯಯನ ರಾಜರಿಂದ ಪ್ರಜೆಗಳತ್ತ ಸರಿಯುತ್ತಲಿದೆ. ಶಿಷ್ಟಸಾಹಿತ್ಯದೊಂದಿಗೆ ಜನಪದ ಸಾಹಿತ್ಯದ ಕಡೆಗೆ ಹರಿದ ಅಧ್ಯಯನವೇ ಇದಕ್ಕೆ ಸಾಕ್ಷಿಯಾಗಿದೆ. ಸಾಮ್ರಾಟರ ಅಧ್ಯಯನದ ಜೊತೆಗೆ ಸಾಮಂತರ ಅಧ್ಯಯನ, ಪ್ರಜೆಗಳ ಅಧ್ಯಯನಗಳ ಕಡೆಗೆ ಇಂದು ಅಭ್ಯಾಸಿಗಳು ಗಮನಹರಿಸುತ್ತಲಿರುವುದು ಪ್ರಾಚೀನ ಪರಂಪರೆಯ ಸಮಗ್ರ ಚಿತ್ರಣವನ್ನು ನೀಡುವಲ್ಲಿ ಸಫಲತೆ ಕಾಣುತ್ತಿದೆ.

ಹೊಸ ರೀತಿಯ ರಕ್ಷಣಾ ವ್ಯವಸ್ಥೆಯಿಂದಾಗಿ ಗಣ್ಯ ಮತ್ತು ಅಗಣ್ಯ ರಾಜ ಮನೆತನಗಳೆರಡು ನಿರ್ಮಿಸಿದ್ದ ಪ್ರಾಚೀನ ಕೋಟೆಗಳು ಇಂದು ಉಪೇಕ್ಷೆಗೆ ಗುರಿಯಾಗುತ್ತಾ ನಡೆದಿವೆ. ನಾಶವಾಗುವ ಮುನ್ನ ಈ ವಿಶಿಷ್ಟ ವಾಸ್ತುಗಳನ್ನು ಅಕ್ಷರಗಳಲ್ಲಿ - ಛಾಯಾಚಿತ್ರಗಳಲ್ಲಿ ಹಿಡಿದಿಡುವುದು ತುಂಬಾ ಅವಶ್ಯವಾಗಿದೆ.

ಈ ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ಅನೇಕ ರಾಜಮನೆತನಗಳು, ಸಾಮಂತರರು, ಪಾಳೆಯಗಾರರು ಆಳ್ವಿಕೆ ನಡೆಸಿರುವುದನ್ನು ನಾವು ಕಾಣುತ್ತೇವೆ. ವಿಭಿನ್ನವಾದ ಈ ರಾಜ್ಯಾಡಳಿತಗಳು ರಕ್ಷಣೆಗಾಗಿ ತಮ್ಮದೇ ಆದ ವಿಶಿಷ್ಟ ರೀತಿಯ ಕೋಟೆ - ಕೊತ್ತಳದಂತಹ ಸ್ಮಾರಕಗಳನ್ನು ನಿರ್ಮಿಸಿಕೊಂಡಿದ್ದರು. ಇವುಗಳನ್ನು ಒಂದೆಡೆ ಕ್ರೋಢಿಕರಿಸಿ ಅಧ್ಯಯನ ಮಾಡುವುದು ಈ ಪ್ರಬಂಧದ ಉದ್ದೇಶವಾಗಿದೆ.

ಹನ್ನೊಂದು ಅಧ್ಯಾಯಗಳಲ್ಲಿ ಹಬ್ಬಿರುವ ಈ ಪ್ರಬಂಧವು ಬಳ್ಳಾರಿ ಜಿಲ್ಲೆಯ ತಾಲೂಕುವಾರು ಗೋಚರಿತ ಕೋಟೆ - ಕೊತ್ತಳಗಳ ಎಲ್ಲಾ ಆಯಾಮಗಳನ್ನು ಅಭ್ಯಸಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ. ಕೋಟೆಯ ಅರ್ಥ, ಪ್ರಾಚೀನತೆ, ಪ್ರಕಾರ ಹಾಗೂ ಮಹತ್ವದಿಂದ ಈ ಅಧ್ಯಯನ ಆರಂಭವಾಗುತ್ತಿದ್ದು, ಪ್ರತಿಯೊಂದು ಕೋಟೆಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುತ್ತಾ ಕ್ಷೇತ್ರಕಾರ್ಯದ ಮೂಲಕ ಹೊಸದಾಗಿ ಅಲಕ್ಷಿತ ಕೋಟೆಗಳು ಒಳಗೊಂಡಂತೆ ಒಟ್ಟು ೩೧ ಕೋಟೆ ಮತ್ತು ಕೊತ್ತಳಗಳ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಬಳ್ಳಾರಿ ಜಿಲ್ಲೆಯು ಎಂಟು ತಾಲೂಕುಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಬಳ್ಳಾರಿ, ಕುರುಗೋಡು (ಬಳ್ಳಾರಿ ತಾಲೂಕು), ಶಿರುಗುಪ್ಪ, ತೆಕ್ಕಲಕೋಟೆ, ನಡಿವಿ, ಕೆಂಚನಗುಡ್ಡ (ಶಿರುಗುಪ್ಪ ತಾಲೂಕು), ಕೃಷ್ಣಾನಗರ, ಹೊಸಮಲೆದುರ್ಗ, ದೊರವದಿ (ಸಂಡೂರು ತಾಲೂಕು), ಗುಡೇಕೋಟೆ, ಜರಿಮಲೆ, ದೇವಲಾಪುರ, ಪಾಲಯ್ಯನ ಕೋಟೆ, ವೀರನದುರ್ಗ (ಕೂಡ್ಲಿಗಿ ತಾಲೂಕು), ಹಂಪಿ, ಹೊಸಪೇಟೆ, ಕಂಪ್ಲಿ, ಕಮಲಾಪುರ, ರಾಮಸಾಗರ, ಪಾಪಿನಾಯಕನಹಳ್ಳಿ, (ಹೊಸಪೇಟೆ ತಾಲೂಕು), ಹರಪನಹಳ್ಳಿ, ಉಚ್ಚಂಗಿದುರ್ಗ, ಬಂಡ್ರಿ, ಕರಡಿದುರ್ಗ, ಹಲುವಾಗಿಲು (ಹರಪನಹಳ್ಳಿ ತಾಲೂಕು), ಹಡಗಲಿ, ಹೊಳಲು, ಹ್ಯಾರಡ (ಹಡಗಲಿ ತಾಲೂಕು), ಹನಸಿ, ಹಂಪಾಪಟ್ಟಣ, ತಂಬ್ರಹಳ್ಳಿ (ಹಗರಿಬೊಮ್ಮನಹಳ್ಳಿ ತಾಲೂಕು) ಗಳಲ್ಲಿ ಕೋಟೆಗಳು ಕಂಡುಬರುತ್ತವೆ. ಮತ್ತೆ ಕೆಲವು ಕಡೆ ಕೋಟೆಗಳಿಲ್ಲ. ಆದರೆ ಕೋಟೆಯ ಉಲ್ಲೇಖಗಳು ಶಾಸನಗಳಲ್ಲಿ ಹಾಗೂ ಸಾಹಿತ್ಯ ಕೃತಿಗಳಲ್ಲಿ ಕಂಡುಬರುತ್ತವೆ. ಇನ್ನು ಕೆಲವು ಕೋಟೆಗಳು ಕಾಲನ ತುಳಿತಕ್ಕೆ ಸಿಕ್ಕು ಅವನತಿಯನ್ನು ಹೊಂದಿವೆ. ಕೆಲವು ಕೋಟೆಗಳು ಮೂಲಸ್ವರೂಪದಲಿಲ್ಲ; ಜೀರ್ಣೋದ್ಧಾರಗೊಂಡಿವೆ. ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಮೇಲೆ ಹತ್ತಾರು ಅಧ್ಯಯನಗಳು ನಡೆದಿದ್ದರೂ ಕೋಟೆ - ಕೊತ್ತಳಗಳ ಕುರಿತಾಗಿ ಹೆಚ್ಚು ಅಧ್ಯಯನ ನಡೆದಿಲ್ಲ. ಈ ಕೊರತೆಯನ್ನು ತುಂಬಲು ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇದೆ. ಇಲ್ಲಿ ಆಳ್ವಿಕೆ ನಡೆಸಿದ ರಾಜರು,

ಸಾಮಂತರು ಮತ್ತು ಪಾಳೆಯಗಾರರು ನಿರ್ಮಿಸಿದ ಕೋಟೆಗಳು ಅವುಗಳ ವಾಸ್ತು, ವೈಶಿಷ್ಟ್ಯ, ಲಕ್ಷಣಗಳು ಮತ್ತು ಮಹತ್ವವನ್ನು ಚರ್ಚಿಸುತ್ತಾ ಗ್ರಾಮ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿ ನಡೆದಿದೆ.

ಕೋಟೆಗಳ ಚರಿತ್ರೆಯಾಗಲಿ ಅಥವಾ ಒಂದು ಅರಸು ಮನೆತನದ ಚರಿತ್ರೆಯಾಗಲಿ ಅದನ್ನರಿಯಲು ಸಾಧನ ಸಾಮಗ್ರಿಗಳ ಮೊರೆ ಹೋಗಬೇಕಾದುದು ಅನಿವಾರ್ಯ. ಹೀಗಾಗಿ ಚರಿತ್ರೆಯ ರಚನೆಗೆ ಸಂಬಂಧಪಟ್ಟ ಆಧಾರಗಳನ್ನು ಪ್ರಾಕ್ತನ ಹಾಗೂ ಸಾಹಿತ್ಯವೆಂಬೆರಡು ವಿಭಾಗಗಳಲ್ಲಿ ವಿಭಾಗಿಸಿ ನೋಡಲಾಗುತ್ತದೆ. ಪ್ರಾಕ್ತನ ಆಧಾರಗಳಲ್ಲಿ ಶಾಸನ, ನಾಣ್ಯ, ಭೂ - ಉತ್ಖನನ ಹಾಗೂ ಸ್ಮಾರಕಗಳು ಸೇರ್ಪಡೆಯಾದರೆ ಸಾಹಿತ್ಯದಲ್ಲಿ ದೇಶಿಯ - ವಿದೇಶಿಯವೆಂಬೆರಡು ವಿಭಾಗಗಳಿದ್ದು, ಇವು ದೇಶೀಯ ಹಾಗೂ ವಿದೇಶಿಯ ಬರಹಗಾರರ ಬರವಣಿಗೆಗಳನ್ನು ಹೊಂದಿರುತ್ತವೆ. ಪ್ರಸ್ತುತ ಈ ಅಧ್ಯಯನದಲ್ಲಿ ಎಲ್ಲಾ ಸಾಮಗ್ರಿಗಳ ನೆರವನ್ನು ಪಡೆದುಕೊಂಡಿದೆಯಾದರೂ ಶಾಸನಗಳನ್ನು ನಿಖರವಾದ ದಾಖಲೆ ಎಂದು ತಿಳಿದು ಅವುಗಳ ಆಧಾರದಿಂದ ರಚಿಸಲಾಗಿದೆ. ಚರಿತ್ರೆಯ ಪುನಃ ರಚನೆಯಲ್ಲಿ ಶಾಸನಗಳು ವಹಿಸಿದ ಮತ್ತು ವಹಿಸುತ್ತಿರುವ ಪಾತ್ರ ತುಂಬ ಮಹತ್ವದ್ದು. ಆದ್ದರಿಂದಲೇ ನಮ್ಮ ನಾಡಿನ ಚರಿತ್ರೆಯ ರಚನಾ ಸ್ವರೂಪಕ್ಕೆ ಶಾಸನ ಸಾಮಾಗ್ರಿಯೇ ಜೀವನಾಡಿಯಾಗಿದೆ. ಅವು ಪ್ರಾಚೀನ ಮತ್ತು ಮಧ್ಯಕಾಲೀನ ಜನರ ಬದುಕಿನ ಸಮಸ್ತ ಸಂವೇದನೆಗಳ ಪ್ರಾಮಾಣಿಕ ಧ್ವನಿಗಳಾದುದರಿಂದ ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತಗೊಂಡಿಲ್ಲ. ಅಂತೆಯೇ ಶಾಸನಗಳು ಐತಿಹಾಸಿಕ ಕೋಟೆಗಳ ಪ್ರತಿ ಅಧ್ಯಯನದಲ್ಲಿಯೂ ಅಧಿಕೃತ ಭೂಮಿಕೆಯಾಗಿ ನಿಲ್ಲುತ್ತವೆ. ಆದರೂ ಸಂದರ್ಭಕ್ಕನುಸಾರವಾಗಿ ಸಮಕಾಲೀನ ಸಾಹಿತ್ಯ, ಸ್ಥಳೀಯರ ಅಭಿಪ್ರಾಯಗಳು, ಪೌರಾಣಿಕ ಕಥೆಗಳನ್ನು ಇಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲೆಯನ್ನು ಕುರಿತಾಗಿ *ಕರ್ನಾಟಕ ದೇವಾಲಯ ಕೋಶ - ಬಳ್ಳಾರಿ ಜಿಲ್ಲೆ*[೧೦] ಕನ್ನಡ ವಿಶ್ವವಿದ್ಯಾಲಯ *ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) ೧.*[೧೧] *ಬಳ್ಳಾರಿ ಜಿಲ್ಲೆಯ ಜನಪದಕಥೆಗಳು,*[೧೨] *ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು,*[೧೩] *ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯ,*[೧೪] *ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು,*[೧೫] *ಬಳ್ಳಾರಿ ಜಿಲ್ಲೆಯ ಬಯಲಾಟಗಳು,*[೧೬] *ಬಳ್ಳಾರಿ ಜಿಲ್ಲೆಯ ಬರಹಗಾರರು,*[೧೭] *ಬಳ್ಳಾರಿ ಜಿಲ್ಲೆಯ ಶಾಸನಗಳು,*[೧೮] *ಬಳ್ಳಾರಿ ಜಿಲ್ಲೆಯ ಶಿವಶರಣರು,*[೧೯] *ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಸೌಲಭ್ಯಗಳು,*[೨೦] *ಬಳ್ಳಾರಿ ಜಿಲ್ಲೆಯ ಕೈಗಾರೀಕರಣ ಮತ್ತು ಜನಾಂದೋಲನ,*[೨೧] *ಬಳ್ಳಾರಿಯ ಬಳನಾಡ,*[೨೨] *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ*[೨೩] ಎಂಬ ಪುಸ್ತಕಗಳು ಪ್ರಕಟವಾಗಿವೆ. ಆದರೂ ಈ ಜಿಲ್ಲೆಯ ಕೋಟೆಗಳ ಬಗ್ಗೆ ಇಂತಹ ಪ್ರತ್ಯೇಕ ಅಧ್ಯಯನ ನಡೆಯದೇ ಹೋದರೂ ಚನ್ನಬಸಪ್ಪ ಎಸ್. ಪಾಟೀಲರ *ಕರ್ನಾಟಕದ ಕೋಟೆಗಳು,*[೨೪] ಕುಂ.ಬಾ. ಸದಾಶಿವಪ್ಪನವರ *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ,*[೨೫] ಎಸ್.ಕೆ. ಜೋಶಿಯವರ *ಕರ್ನಾಟಕದ ಪ್ರಾಚೀನ ಕೋಟೆಗಳು,*[೨೬] *ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್*[೨೭] ಎಂಬೀ ಗ್ರಂಥಗಳಲ್ಲಿ ಜಿಲ್ಲೆಯ ಕೆಲವು ಕೋಟೆಗಳ ಬಗ್ಗೆ ಚರ್ಚಿಮಾಡಿದ್ದಾರೆ. ಜಾರ್ಜ್ ಮಿಸೆಲ್,[೨೮] ಚನ್ನಬಸಪ್ಪ

ಎಸ್. ಪಾಟೀಲ್,[೩೯] ವಸುಂದರಾ ಫಿಲಿಯೋಜಾ,[೪೦] ಸೂರ್ಯನಾರಾಯಣ ರಾವ್[೪೧] ಮುಂತಾದವರು ತಮ್ಮ ಕೃತಿಗಳಲ್ಲಿ ಸಾಂದರ್ಭಿಕವಾಗಿ ಚರ್ಚಿಸಿದ್ದಾರೆ. ಬಸವರಾಜ ಎಚ್.ಎಂ. *ಗುಡೇಕೋಟೆ: ಒಂದು ಚಾರಿತ್ರಿಕ ಅಧ್ಯಯನ್*[೪೨] ಎಂಬ ಎಂ.ಫಿಲ್. ಪ್ರಬಂಧದಲ್ಲಿ ಗುಡೇಕೋಟೆ ಬಗ್ಗೆ ಅಧ್ಯಯನ ಮಾಡಿದ್ದಾರೆ. ಬಳ್ಳಾರಿ ಕೋಟೆಯ ಬಗ್ಗೆ ಎಸ್.ಚಂದ್ರಶೇಖರ್ [೪೩] ಹಾಗೂ ಶ್ಯಾಮಲ[೪೪] ಅವರು ಲೇಖನಗಳನ್ನು ಬರೆದಿರುವರು. ಜರಿಮಲೆ ಪಾಳೆಯಗಾರರ ಸಂಬಂಧವಾಗಿ ಲಕ್ಷ್ಮಣ್ ತೆಲಗಾವಿ,[೪೫] ಯೋಗೀಶ್ವರಪ್ಪನವರು[೪೬] ಕೆಲಸ ಮಾಡಿರುವರು. *ಹರಪನಹಳ್ಳಿ ಪಾಳೆಯಗಾರರು* ಎಂಬ ಕೃತಿಯಲ್ಲಿ ಕುಂ.ಬಾ. ಸದಾಶಿವಪ್ಪನವರು ಕೋಟೆಯ ಕೆಲವು ವಿವರಗಳನ್ನು ನೀಡಿದ್ದಾರೆ.[೫೦] ಕುರುಗೋಡು ಕೋಟೆ ಬಗ್ಗೆ ಚನ್ನಬಸಯ್ಯ ಹಿರೇಮಠರು ತಮ್ಮ *ಕುರುಗೋಡು ಸಿಂದರು* [೫೧] ಎಂಬ ಗ್ರಂಥದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕಾಣದ ಕೈಗಳೇಷ್ಟೋ? ಈ ಕ್ಷೇತ್ರದಲ್ಲಿ ಕೆಲಸ ಮಾಡಿರಬಹುದು. ಒಟ್ಟಿನಲ್ಲಿ ಈ ಜಿಲ್ಲೆಯ ಕೋಟೆ-ಕೊತ್ತಳಗಳ ಬಗ್ಗೆ ಅಧ್ಯಯನಿಸಲು ಈ ಮೇಲಿನ ಎಲ್ಲಾ ವಿಧಧ ಆಕರಗಳು ಸಹಾಯಕವಾಗಿವೆ. ಮೂಲ ಸಾಮಾಗ್ರಿಗಳು ಸಾಕಷ್ಟು ದೊರೆಯದಿದ್ದರೂ ಪುಸ್ತಕ ಮತ್ತು ಲೇಖನಗಳ ರೂಪದಲ್ಲಿ ತಕ್ಕಮಟ್ಟಿಗಾದರೂ ದೊರೆಯುತ್ತವೆ.

ವರದಿಗಳು, ಗೆಜೆಟಿಯರ್‌ಗಳನ್ನು ಆಧಾರವಾಗಿಟ್ಟುಕೊಂಡು ಈ ಜಿಲ್ಲೆಯೊಳಗಡೆ ಕಂಡುಬರುವ ಕೋಟೆ - ಕೊತ್ತಳಗಳ ಪಟ್ಟಿಯೊಂದನ್ನು ತಯಾರಿಸಿಕೊಳ್ಳಲಾಯಿತು. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಯಿಂದ ಕೋಟೆಗಳ ಬಗ್ಗೆ ಮಾಹಿತಿಯನ್ನು ಪಡೆದು ಕ್ಷೇತ್ರಕಾರ್ಯ ಮಾಡಬೇಕಾದ ಸ್ಥಳಗಳನ್ನು ಖಚಿತಪಡಿಸಿಕೊಳ್ಳಲಾಗಿದೆ. ಕೋಟೆಯ ಸ್ಥಳ, ದಿಕ್ಕು, ವಿಸ್ತೀರ್ಣ, ತಾಲೂಕು, ಸುತ್ತಲಿನ ಪರಿಸರ, ಕಾಲಮಾನ, ನಕ್ಷೆ, ಸ್ಮಾರಕಗಳು, ಕೊತ್ತಳಗಳು, ಕೋಟೆಗೆ ಸಂಬಂಧಿಸಿದ ಶಾಸನ ಇತರೆ ಎಲ್ಲಾ ಅಂಶಗಳನ್ನೊಳಗೊಂಡ ಪ್ರಪತ್ರವೊಂದನ್ನು ಸಿದ್ಧಪಡಿಸಿಕೊಂಡು ಕೋಟೆಯ ಸ್ಥಳಕ್ಕೆ ಹೋಗಿ ಅದನ್ನು ಭರ್ತಿಮಾಡಿಕೊಂಡು, ಸ್ಥಳೀಯರ ಹೇಳಿಕೆಗಳನ್ನು ಸಂಗ್ರಹಿಸಿ ಜೊತೆಗೆ ಛಾಯಾಚಿತ್ರಗಳನ್ನು ತೆಗೆದುಕೊಂಡು ಬರಲಾಯಿತು. ಇದಲ್ಲದೆ ಪರಿಣಿತರಿಂದ ಕೋಟೆಯ ರೇಖಾಚಿತ್ರಗಳನ್ನು ತಯಾರಿಸಿಕೊಂಡು ಈ ಮೊದಲು ಪ್ರಕಟಿತ ಗ್ರಂಥಗಳಿಂದ ಸಂಗ್ರಹಿಸಲಾದ ಟಿಪ್ಪಣಿ ಇತ್ಯಾದಿ ಮಾಹಿತಿಗಳನ್ನೆಲ್ಲಾ ಕಲೆಹಾಕಿ ತಾತ್ವಿಕವಾಗಿ ಚಿಂತಿಸಿ ಈ ಮಹಾಪ್ರಬಂಧ ಸಿದ್ಧಪಡಿಸಿದೆ. ಶಾಸನಗಳು ಮತ್ತು ಪ್ರಕಟಿತ ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಕೆಲವು ಸ್ಥಳಗಳಲ್ಲಿ ಕೋಟೆಗಳಿದ್ದ ಬಗ್ಗೆ ಯಾವುದೇ ಸ್ಪಷ್ಟ ಸುಳಿವುಗಳು ದೊರೆಯುವುದಿಲ್ಲ. ಆದರೂ ದೊರೆಯುವ ಇತರೆ ಶಾಸನಗಳ ಆಧಾರದ ಮೇಲೆ ಅನೇಕ ಕಡೆ ಅವುಗಳ ಕಾಲವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಕ್ಷೇತ್ರ ಪರಿವೀಕ್ಷಣಾ ಕಾಲದಲ್ಲಿ ತೆಗೆದ ಛಾಯಾಚಿತ್ರಗಳು ಈ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಹೀಗೆ ಸ್ಥಳೀಯರ ಹೇಳಿಕೆಗಳು, ಸಾಹಿತ್ಯ ಹಾಗೂ ಶಾಸನಗಳ ಆಧಾರದ ಮೇಲೆ ಕೋಟೆಯನ್ನು ಗುರುತಿಸಲು ಪ್ರಯತ್ನಿಸಿದಾಗ ಅವುಗಳ ಹರವು ವಿಸ್ತಾರವಾಗಿರುವುದು ಕಂಡುಬಂದಿದೆ. ಪ್ರಸ್ತುತ

ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪೂರಕ ಸಾಮಾಗ್ರಿಯೆಂದು ಪರಿಗಣಿಸಿ ರಾಜವಂಶಗಳ ಮೇಲೆ ಬರೆದಿರಬಹುದಾದ ಚಾರಿತ್ರಿಕ ಗ್ರಂಥಗಳಲ್ಲದೆ ರಕ್ಷಣಾ ಸ್ಮಾರಕಗಳನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಗ್ರಂಥಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ ಹಾಗೂ ನಿಯತಕಾಲಿಕೆಗಳಲ್ಲಿ ಬರೆದ ಬಿಡಿ ಬರಹಗಳನ್ನು ಗಮನಿಸಿ ವಿವರ ಪಡೆಯಲಾಗಿದೆ. ಈ ಕ್ಷೇತ್ರದ ಮೇಲೆ ರಚಿತವಾದ ಕೆಲವು ಅಪ್ರಕಟಿತ, ಲೇಖನ, ಪ್ರಬಂಧಗಳನ್ನು ಅಭ್ಯಸಿಸಲಾಗಿದೆ. ಈ ಮಹಾಪ್ರಬಂಧದಲ್ಲಿ ತಾಲೂಕುವಾರು ಕೋಟೆಗಳನ್ನು ವಿಂಗಡಿಸಿ ತಾಲೂಕುಗಳ ಇತಿಹಾಸವನ್ನು ತಿಳಿಸುವ ಜೊತೆಗೆ ಕೋಟೆ ಇರುವ ಗ್ರಾಮನಾಮವನ್ನು ಪರಿಚಯಿಸಿ ಪ್ರತಿಯೊಂದು ಕೋಟೆಯನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಇವುಗಳ ಕೊನೆಯಲ್ಲಿ ಟಿಪ್ಪಣಿಗಳನ್ನು ಕೊಡಲಾಗಿದೆ. ಪ್ರತಿ ತಾಲೂಕಿನ ಮುಂದೆ ತಾಲೂಕು ನಕ್ಷೆ ಹಾಗೂ ಹಿಂಭಾಗಕ್ಕೆ ಛಾಯಾಚಿತ್ರಗಳನ್ನು ಜೋಡಿಸಿದೆ. ಅನುಬಂಧದಲ್ಲಿ ಕೋಟೆ ಪದಕೋಶ ಕೊಟ್ಟಿದೆ.

೧.೩. ಜಿಲ್ಲೆಯ ಭೌಗೋಳಿಕ ಲಕ್ಷಣಗಳು

ನೈರುತ್ಯ ಮತ್ತು ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಂತಿರುವ ಬಳ್ಳಾರಿ ಜಿಲ್ಲೆಯ ಭೌಗೋಳಿಕ ನೆಲೆಯು ನೈರುತ್ಯ ದಿಕ್ಕಿಗೆ ಹರಪನಹಳ್ಳಿ ತಾಲೂಕಿನ 'ಹರವಿ' ಎಂಬ ಗ್ರಾಮದಿಂದ ಈಶಾನ್ಯ ದಿಕ್ಕಿಗೆ ಶಿರುಗುಪ್ಪ ತಾಲೂಕಿನ ಸಲ್ಲಕುದಲೂರು ಎಂಬ ಗ್ರಾಮದ ವರೆಗೆ ೧೮೭ ಕಿ.ಮೀ. ಉದ್ದವಾಗಿ ಹರಡಿಕೊಂಡಿದೆ. ಆದರೆ ಪೂರ್ವ - ಪಶ್ಚಿಮವಾಗಿ ಬಳ್ಳಾರಿ ತಾಲೂಕು ಕಾರೆಕಲ್ಲು ವೀರಾಪುರದಿಂದ ಹಡಗಲಿ ತಾಲೂಕಿನ ಹಿರೇಬನ್ನಿ ಹಟ್ಟಿಯವರೆಗೆ ೧೬೧ ಕಿ.ಮೀ. ಅಗಲವಾಗಿ ಹರಡಿಕೊಂಡಿದೆ. ಈ ಜಿಲ್ಲೆಯ ವಾಸ್ತವಿಕ ಭೌಗೋಳಿಕ ನೆಲೆಯು ಉತ್ತರ ೧೪೩°೩ ಮತ್ತು ೧೫°೫೦ ಹಾಗೂ ಪೂರ್ವ ೭೫°೪೦ ಮತ್ತು ೭೭°೧೧ ನಲ್ಲಿದೆ. ಇದರ ವಿಸ್ತೀರ್ಣ ೯೮೮೫ ಚದರ ಕಿ.ಮೀ. ಎಂದು ಅಂದಾಜು ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೬೨೮ ಗ್ರಾಮಗಳು, ೩೦ ಹೋಬಳಿಗಳು ಇವೆ.

ಬಳ್ಳಾರಿ ಜಿಲ್ಲೆಯ ಉತ್ತರಕ್ಕೆ ರಾಯಚೂರು ಜಿಲ್ಲೆಯಿದ್ದರೆ, ದಕ್ಷಿಣಕ್ಕೆ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಿವೆ. ಪೂರ್ವಕ್ಕೆ ಆಂಧ್ರ ಪ್ರದೇಶ, ಪಶ್ಚಿಮಕ್ಕೆ ಕೊಪ್ಪಳ, ಗದಗ, ಹಾವೇರಿ, ಜಿಲ್ಲೆಗಳು ಇವೆ. ರಾಜಕೀಯವಾಗಿ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಬಳ್ಳಾರಿ ಮದ್ರಾಸ್ ಪ್ರಾಂತ್ಯದ ಒಂದು ದೊಡ್ಡ ಜಿಲ್ಲೆಯಾಗಿತ್ತು.

ಜಿಲ್ಲೆಯ ಪೂರ್ವಭಾಗದಲ್ಲಿ ಶಿರುಗುಪ್ಪ ಮತ್ತು ಬಳ್ಳಾರಿ ತಾಲೂಕುಗಳಿವೆ. ಈ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದೆ. ಹವಾಮಾನದ ದೃಷ್ಟಿಯಿಂದ ಅತಿ ಉಷ್ಣವಲಯವಾಗಿದೆ. ಮಳೆಯ ಪ್ರಮಾಣ ತೀರ

ಕಡಿಮೆ. ಶುಷ್ಕ ವಾತಾವರಣದಿಂದ ಕೂಡಿದ ಪೂರ್ವಭಾಗದಲ್ಲಿ ಅರಣ್ಯವಿಲ್ಲ. ಪಶ್ಚಿಮಭಾಗವು ಸಂಡೂರು, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಹರಪನಹಳ್ಳಿ ಮತ್ತು ಹಡಗಲಿ ತಾಲೂಕುಗಳನ್ನು ಹೊಂದಿದೆ. ಈ ಭಾಗದಲ್ಲಿ ಸಾಮಾನ್ಯವೆನ್ನಬಹುದಾದಷ್ಟು ಮಳೆಯಾಗುತ್ತದೆ. ಪೂರ್ವಭಾಗಕ್ಕಿಂತ ಹೆಚ್ಚು ತಂಪಾದ ಹವಾಮಾನ ಪಡೆದಿದೆ. ಈ ಭಾಗದ ಸಂಡೂರು - ಕೂಡ್ಲಿಗಿ ಪ್ರದೇಶದಲ್ಲಿ ಅರಣ್ಯಗಳಿವೆ.

ತುಂಗಭದ್ರಾ ನದಿಯು, ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ಮೇರೆಯಾಗಿದೆ. ಈ ನದಿಯು ಜಿಲ್ಲೆಯಲ್ಲಿ ೩೨೦ ಕಿ.ಮೀ. ನಷ್ಟು ದೂರ ಹರಿಯುತ್ತದೆ. ಇದನ್ನು ಬಿಟ್ಟರೆ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕೆಲವು ಸಣ್ಣ - ಪುಟ್ಟ ನದಿಗಳು ಹರಿದಿವೆ. ಇವುಗಳಲ್ಲಿ ಹಗರಿ, ಚಿಕ್ಕಹಗರಿ ಮತ್ತು ಚಿನ್ನ ಹಗರಿ ಇವು ಮುಖ್ಯವಾದವು.

ಈ ಜಿಲ್ಲೆಯ ಮತ್ತೊಂದು ವಿಶೇಷ ಲಕ್ಷಣವೆಂದರೆ ಬೆಟ್ಟ - ಗುಡ್ಡಗಳ ತುಂಗಭದ್ರಾ ಆಣೆಕಟ್ಟೆಯ ಹತ್ತಿರದ ಮಲ್ಲಾಪುರ ಎಂಬ ಗ್ರಾಮದಿಂದ ಹಿಡಿದು ಬಳ್ಳಾರಿ ನಗರದವರೆಗೆ ಸುಮಾರು ೩೦ ಮೈಲಿ ಹಬ್ಬಿರುವ ಬೆಟ್ಟಶ್ರೇಣಿಯು ಅಮೂಲ್ಯ ಖನಿಜಗಳ ಭಂಡಾರಗಳಾಗಿವೆ. ಕುಮಾರಸ್ವಾಮಿ ದೇವಾಲಯದ ಮೇಲು ಭಾಗದಲ್ಲಿರುವ ಬೆಟ್ಟವು ಈ ಶ್ರೇಣಿಯ ಅತಿ ಉನ್ನತ ಗುಡ್ಡವಾಗಿದೆ. ಈ ಸಂಡೂರು ಬೆಟ್ಟ ಶ್ರೇಣಿಗಳಿಂದ ೬ ಕಿ.ಮೀ. ದೂರದಲ್ಲಿ ತಾಮ್ರದ ಬೆಟ್ಟಸಾಲು ಇದೆ. ಇದು ದರೋಜಿ ಕೆರೆಯಿಂದ ಹಗರಿ ನದಿಯವರೆಗೂ ೨೬ ಮೈಲು ಹಬ್ಬಿದೆ. ಸಂಡೂರಿನಿಂದ ದಕ್ಷಿಣಕ್ಕೆ ೩೦ ಮೈಲಿ ದೂರದಲ್ಲಿ ಮಲ್ಲಪ್ಪನಗುಡ್ಡ ಸಾಲು ಇದೆ. ಈ ಬೆಟ್ಟಸಾಲು ಹಡಗಲಿ - ಹರಪನಹಳ್ಳಿ ತಾಲೂಕುಗಳಲ್ಲಿ ೨೫ ಮೈಲು ಹಬ್ಬಿದೆ. ಮಲ್ಲಪ್ಪನಗುಡ್ಡದ ದಕ್ಷಿಣಕ್ಕೆ ಕಲ್ಲಹಳ್ಳಿ ಗುಡ್ಡಗಳ ಸಾಲು ಇದೆ. ಈ ಬೆಟ್ಟದ ಸಾಲಿನಲ್ಲಿ ಪ್ರಸಿದ್ಧ ಗುಡ್ಡಗಳೆಂದರೆ ನರಸಿಂಹದೇವರ ಗುಡ್ಡ ಮತ್ತು ಉಚ್ಚಂಗಿದುರ್ಗ. ಕೂಡ್ಲಿಗಿ ಬೆಟ್ಟಸಾಲು ಮತ್ತು ಗುಡೇಕೋಟೆ ಬೆಟ್ಟಸಾಲು ಇನ್ನೆರಡು ಈ ಜಿಲ್ಲೆಯ ಪ್ರಸಿದ್ಧ ಬೆಟ್ಟ ಸಾಲುಗಳು. ಈ ರೀತಿಯ ಬೆಟ್ಟಸಾಲುಗಳಿಂದ ಪ್ರತ್ಯೇಕವಾಗಿ ಏಕಾಂಗಿಯಾಗಿ ನಿಂತಿರುವ ಹಲವಾರು ಬೆಟ್ಟ-ಗುಡ್ಡಗಳಿವೆ. ಅವುಗಳಲ್ಲಿ ದರೋಜಿ, ಕಂಪ್ಲಿ, ಕುರುಗೋಡು ಬೆಟ್ಟಗಳು ಮುಖ್ಯವಾಗಿವೆ.

ಬಳ್ಳಾರಿ ಜಿಲ್ಲೆಯು ತನ್ನ ಉತ್ತಮ ಗುಣಮಟ್ಟದ ಕಬ್ಬಿಣ ಅದಿರಿನಿಂದ ವಿಶ್ವಮಾನ್ಯತೆ ಪಡೆದಿದೆ. ಇದು ಅಲ್ಲದೆ ಮ್ಯಾಂಗನೀಸ್, ತಾಮ್ರ, ಮ್ಯಾಗ್ನಸೈಟ್, ಜಿಪ್ಸಮ್, ಸತು ಮುಂತಾದವುಗಳು ಈ ಜಿಲ್ಲೆಯಲ್ಲಿ ಲಭ್ಯ. ತುಂಗಭದ್ರಾ ಆಣೆಕಟ್ಟೆಯ ಮಲ್ಲಾಪುರ ಎಂಬ ಸ್ಥಳದಿಂದ ಆಗ್ನೇಯದಿಕ್ಕಿಗೆ ಸುಮಾರು ೩೦ ಮೈಲಿಗಳ ಉದ್ದ ಹಬ್ಬಿರುವ ಹೊಸಪೇಟೆ, ಸಂಡೂರು ಬೆಟ್ಟ ಸಾಲು ಶ್ರೇಷ್ಠ ಗುಣಮಟ್ಟದ ಖನಿಜಗಳ ಆಗರವಾಗಿದೆ. ಗಣಿಗಾರಿಕೆಯು ಕೂಡ ಇಂಥಹ ಖನಿಜ ಸಂಪತ್ತು ಆಧರಿತ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಸಾವಿರಾರು ಕುಟುಂಬಗಳ ತುತ್ತಿನ ಚೀಲಗಳಿಗೆ ಆಧಾರವಾಗಿದೆ. ಗಣಿಗಾರಿಕೆಯಿಂದಾಗಿಯೇ ಬಳ್ಳಾರಿ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು

ಹಾಳಾಗುತ್ತಿವೆ ಎಂದು ಕೂಗು ಕೇಳಿಬರುತ್ತಿದೆ. ಇದಕ್ಕೆ ಉದಾಹರಣೆ ಎಂಬಂತೆ ಹೊಸಮಲೆದುರ್ಗ, ಬಂಡ್ರಿ ಕೋಟೆಗಳು ನಾಮಾವಶೇಷವಾಗಿದೆ. ನಮಗೆ ನಮ್ಮ ಬದುಕು ಮುಖ್ಯ ನಿಜ. ಆದರೆ ನಮ್ಮ ಹಿರಿಯರು ಬಿಟ್ಟುಹೋದ ಪಳಿಯುಳಿಕೆಗಳನ್ನು ಸಾಧ್ಯವಾದಷ್ಟು ರಕ್ಷಿಸುತ್ತ ನಮ್ಮ ಜೀವನವನ್ನು ರೂಪಿಸಿಕೊಂಡರೆ ನಮ್ಮ ಭವಿಷ್ಯದ ಜೀವನ ಸುಖಮಯವಾಗಿರುವುದು. ಹಂಪಿ, ಪಟ್ಟದಕಲ್ಲು, ಐಹೊಳೆಗಳಂತಹ ಐತಿಹಾಸಿಕ ಸ್ಮಾರಕಗಳಿಂದಾಗಿಯೇ ನಾವು ವಿಶ್ವಮಾನ್ಯತೆ ಗಳಿಸಿರುವುದು ಮಿಥ್ಯವಲ್ಲ.

ಟಿಪ್ಪಣಿಗಳು

೧. ತಿಪ್ಪೆಸ್ವಾಮಿ, ಎಚ್. ೨೦೦೧. *ದಾವಣಗೇರಿ ಜಿಲ್ಲೆಯ ದೇವಾಲಯಗಳು,* ಪಿಎಚ್.ಡಿ. ಮಹಾಪ್ರಬಂಧ, ಪು. ೧೦. ಹಂಪಿ: ಕನ್ನಡ ವಿಶ್ವವಿದ್ಯಾಲಯ

೨. ಸೂರ್ಯನಾಥ ಯು. ಕಾಮತ್(ಸಂ.), ೧೯೮೪. *ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ೩,* ಪು. ೪೮೬. ಬೆಂಗಳೂರು : ಸರ್ಕಾರಿ ಮುದ್ರಣಾಲಯ

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) ೧,* ಪು. ೧೨೪-೧೨೬. ಹಂಪಿ: ಕನ್ನಡ ವಿಶ್ವವಿದ್ಯಾಲಯ

೪. *ಅದೇ,* ಪು. ೩೭೦

೫. *ಅದೇ,* ಪು. ೩೫೬-೫೮

೬. ಗೋವಿಂದಚಾರ್ಯ ಚಿಕ್ಕೇರೂರು. ಅಪ್ರಕಟಿತ ಹಸ್ತಪ್ರತಿ

೭. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ, ಪು. ೧೯

೮. ಜೋಶಿ, ಎಸ್.ಕೆ. ೨೦೦೦. ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, *ಸೂರ್ಯಕೀರ್ತಿ* (ಸಂ : ಕೃಷ್ಣಮೂರ್ತಿ ಪಿ.ವಿ ಮತ್ತು ಕೆ. ವಸಂತಲಕ್ಷ್ಮಿ), ಪು.೧೪೮-೧೬೨. ಬೆಂಗಳೂರು: ಸೂರ್ಯನಾಥ ಕಾಮತ್‌ರ ಅಭಿನಂದನ ಸಮಿತಿ

೯. ಚನ್ನಬಸಪ್ಪ, ಎಸ್. ಪಾಟೀಲ್. ೧೯೯೯. *ಕರ್ನಾಟಕ ಕೋಟೆಗಳು,* ಪು. ೬. ಹಂಪಿ: ಕನ್ನಡ ವಿಶ್ವವಿದ್ಯಾಲಯ

೧೦. ಕೊಟ್ರೇಶ್, ಎಂ. ೧೯೯೮. ಗಿರಿದುರ್ಗ ಉಚ್ಚಂಗಿ ಪ್ರದೇಶ - ಒಂದು ಪರಿಶೀಲನೆ, *ಇತಿಹಾಸ ದರ್ಶನ* - ೧೩. ಪು. ೮೨.

೧೧. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ, ಪು. ೨೩೪

೧೨. ಚನ್ನಬಸವಯ್ಯ ಹಿರೇಮಠ. ೧೯೯೫. *ಕುರುಗೋಡು ಸಿಂದರು : ಒಂದು ಅಧ್ಯಯನ,* ಪು. ೧೦೪. ಕೊಪ್ಪಳ : ಸಂಗಣ್ಣನವರು ಅಗಡಿ ಪ್ರತಿಷ್ಠಾನ

೧೩. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ, ಪು. ೪

೧೪. *ಕರ್ನಾಟಕ ಕೋಟೆಗಳು,* ಪೂರ್ವೋಕ್ತ, ಪು. ೬೩

೧೫. *ಅದೇ,* ಪು. ೪೦

೧೬. *ಅದೇ,* ಪು. ೯೧-೯೨

೧೭. *SII* IX (pt. 1) No.380, ಹಲುವಾಗಿಲು

೧೮. *ಕರ್ನಾಟಕ ಕೋಟೆಗಳು,* ಪೂರ್ವೋಕ್ತ, ಪು. ೬೬, ೭೧

೧೯. *ಅದೇ,* ಪು. ೯೧

೨೦. ಸುರೇಶ್, ಕೆ.ಎಂ. ಮತ್ತು ಇತರರು, ೧೯೯೯. *ಕರ್ನಾಟಕ ದೇವಾಲಯಕೋಶ ಬಳ್ಳಾರಿ ಜಿಲ್ಲೆ.* ಹಂಪಿ: ಕನ್ನಡ ವಿಶ್ವವಿದ್ಯಾಲಯ

೨೧. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧,* ಪೂರ್ವೋಕ್ತ

೨೨. ಬಸವರಾಜ ಮಲಶೆಟ್ಟಿ. ೧೯೭೯. *ಬಳ್ಳಾರಿ ಜಿಲ್ಲೆಯ ಜಾನಪದ ಕಥೆಗಳು.* ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ

೨೩. ರಾಜಪ್ಪ, ಟಿ.ಎಸ್. ೧೯೮೬. *ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು.* ಮೈಸೂರು: ಮೈಸೂರು ವಿಶ್ವವಿದ್ಯಾಲಯ

೨೪. ರುದ್ರಪ್ಪ, ಕೆ. ೧೯೯೪. *ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯ.* ಪುರ: ಶ್ರೀ ಸಿದ್ಧವೀರ ಶಿವಚಾರ್ಯ ಜ್ಞಾನ ಪ್ರಕಾಶನ

೨೫. ಚಂದ್ರಶೇಖರ್, ಟಿ.ಆರ್. ೧೯೯೪. *ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು.* ಪುರ: ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ

೨೬. ದುರ್ಗಾದಾಸ್. ೧೯೯೬. *ಬಳ್ಳಾರಿ ಜಿಲ್ಲೆಯ ಬಯಲಾಟಗಳು.* ಬೆಳಗಾವಿ: ಸಮತಾ ಪ್ರಕಾಶನ

೨೭. ಮೃತ್ಯುಂಜಯ್ಯ ಹೊರಕೇರಿ. ೧೯೯೪. *ಬಳ್ಳಾರಿ ಜಿಲ್ಲೆಯ ಬರಹಗಾರರು.* ಪುರ: ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ

೨೮. ನಾಗಯ್ಯ, ಜೆ.ಎಂ. ೧೯೯೧. *ಬಳ್ಳಾರಿ ಜಿಲ್ಲೆಯ ಶಾಸನಗಳು.* ಗುಲ್ಬರ್ಗಾ: ಗುಲ್ಬರ್ಗಾ ವಿಶ್ವವಿದ್ಯಾಲಯ

೨೯. ಶಾಂತರಸ (ಸಂ.). ೧೯೭೫. *ಬಳ್ಳಾರಿ ಜಿಲ್ಲೆಯ ಶಿವಶರಣರು.* ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ

೩೦. ರಾಜಶೇಖರ್, ಪಿ.ಎಂ. ೧೯೯೪. *ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಸೌಲಭ್ಯಗಳು.* ಪುರ : ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ

೩೧. ಶೇಷಾದ್ರಿ, ಬಿ. ೧೯೯೮. *ಬಳ್ಳಾರಿ ಜಿಲ್ಲೆಯ ಕೈಗಾರಿಕಾರಣ ಮತ್ತು ಜನಾಂದೋಲನ.* ಹಂಪಿ: ಕನ್ನಡ ವಿಶ್ವವಿದ್ಯಾಲಯ

೩೨. ಪದ್ಮಾವಿಠ್ಠಲ. ೧೯೯೨. *ಬಳ್ಳಾರಿಯ ಬಳಿನಾದ.* ಹಗರಿಬೊಮ್ಮನಹಳ್ಳಿ: ಅಶ್ವಿನಿ ಪ್ರಕಾಶನ

೩೩. ನಾಗಯ್ಯ, ಜೆ.ಎಂ. ೨೦೦೧. *ಬಳ್ಳಾರಿ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಬಳ್ಳಾರಿ: ಲೋಹಿಯಾ ಪ್ರಕಾಶನ

೩೪. *ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ.* ಪೂರ್ವೋಕ್ತ

೩೫. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ.* ಕುಂಚೂರು: ಮಾಲತೇಶ ಪ್ರಕಾಶನ

೩೬. *ಕರ್ನಾಟಕದ ಪ್ರಾಚೀನ ಕೋಟೆಗಳು.* ಪೂರ್ವೋಕ್ತ

೩೭. ಸೂರ್ಯನಾಥ, ಯು. ಕಾಮತ್ (ಸಂ.), ೧೯೮೪. *ಕರ್ನಾಟಕ ರಾಜ್ಯ ಗ್ಯಾಸೆಟಿಯರ್- ೩.* ಬೆಂಗಳೂರು : ಸರ್ಕಾರಿ ಮುದ್ರಣಾಲಯ

೩೮. Michel George. 1990. *Vijayanagar : Architectural Inventory of the Urban Core, Vol. I & II.* Mysore: Directorate of Archaeology and Museums

೩೯. Channabasappa, S. Patil. 1991. Further Epigraphical References to City Gates and Watch Towers of Vijayanagara, *in Vijayanagara Progress of Research,* 1984-87, Pp. 191-194. Mysore : Directorate of Archaeology and Museums

೪೦. ವಸುಂಧರಾ ಫಿಲಿಯೋಜಾ. ೧೯೮೨. *ಅಳಿದುಳಿದ ಹಂಪೆ.* ಬೆಂಗಳೂರು: ಮಾನಸೋಲ್ಲಾಸ ಪ್ರಕಾಶನ

೪೧. Nagaraja Rao, M.S. 1985. Epigraphical References to City Gates and Watch Towers of Vijayanagara, *in Vijayanagara Progress of Research,* 1983-84, Pp. 96-100, Mysore : Directorate of Archaeology and Museums

೪೨. ಸೋಮಶೇಖರ್, ಎಸ್.ವೈ. ೧೯೯೭. *ಹಂಪೆಯ ಬಜಾರುಗಳು,* ಪು. ೩೦-೩೨, ಹಂಪಿ: ಕನ್ನಡ ವಿಶ್ವವಿದ್ಯಾಲಯ

೪೩. ಸಿವೆಲ್ ರಾಬರ್ಟ್. ೧೯೯೧ ಮರುಪ್ರಕಟಣೆ. *ಮರೆತು ಹೋದ ಸಾಮ್ರಾಜ್ಯ ವಿಜಯನಗರ* (ಅನುವಾದ: ಸದಾನಂದ ಕನವಳ್ಳಿ) ಹಂಪಿ: ಕನ್ನಡ ವಿಶ್ವವಿದ್ಯಾಲಯ.

೪೪. Suryanarain Row, B. 1993. *The Never to be Forgotten Empire.* New Delhi

೪೫. ಬಸವರಾಜ್ಪ ಎಚ್.ಎಂ. ೨೦೦೨. *ಗುಡೇಕೋಟೆ: ಒಂದು ಚಾರಿತ್ರಿಕ ಅಧ್ಯಯನ.* ಎಂ.ಫಿಲ್. ಮಹಾಪ್ರಬಂಧ. ಹಂಪಿ: ಕನ್ನಡ ವಿಶ್ವವಿದ್ಯಾಲಯ

೪೬. ಚಂದ್ರಶೇಖರ್, ಹೆಚ್. ೨೦೦೦. ಬಳ್ಳಾರಿ ಕೋಟೆಯ ರಚನೆಯಲ್ಲಿ ಭೂ ಸಾದೃಶ್ಯಗಳ ಪಾತ್ರ. *ಇತಿಹಾಸ ದರ್ಶನ - ೧೫.* ಪು. ೨೩-೨೬

೪೭. ಶ್ಯಾಮಲ, ಸಿ.ಆರ್. ೧೯೯೯. ಬಳ್ಳಾರಿ ಗುಡ್ಡದ ಮೇಲಿನ ದೇವಾಲಯಗಳು, *ಇತಿಹಾಸ ದರ್ಶನ - ೧೪.* ಪು. ೧೫೫

೪೮. ಲಕ್ಷ್ಮಣ್ ತೆಲಗಾವಿ. ೧೯೭೬. ಜರಿಮಲೆ ಸಂಸ್ಥಾನದ ವಂಶಾವಳಿ, *ಚಂದ್ರವಳ್ಳಿ.* ಚಿತ್ರದುರ್ಗ

೪೯. ಯೋಗೀಶ್ವರಪ್ಪ, ಡಿ.ಎನ್. ೨೦೦೨. ಜರಿಮಲೆ ನಾಯಕರು (ಕ್ರಿ.ಶ. ೧೫೦೦-೧೮೦೦). *ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ೨.* ಪು. ೩೧-೪೭. ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು

೫೦. ಕುಂಬಾಸ. ೧೯೯೬. *ಹರಪನಹಳ್ಳಿ ಪಾಳೆಯಗಾರರು.* ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು

೫೧. *ಕುರುಗೋಡು ಸಿಂದರು : ಒಂದು ಅಧ್ಯಯನ.* ಪೂರ್ವೋಕ್ತ

❑❑

೨

ಕೋಟೆ - ಕೊತ್ತಳಗಳು

Fort and Bastions

೨.೧ ಕೋಟೆಯ ಅರ್ಥವಿವರಣೆ

೨.೨ ಪ್ರಾಚೀನತೆ

೨.೩ ಮಹತ್ವ

೨.೪ ಲಕ್ಷಣಗಳು

೨.೫ ಪ್ರಕಾರಗಳು

೨.೬ ಕೊತ್ತಳಗಳು

೨

ಕೋಟೆ - ಕೊತ್ತಳಗಳು

Fort and Fortifications

೨.೧ ಕೋಟೆಯ ಅರ್ಥ ವಿವರಣೆ

ಕೋಟೆ ಎಂದರೆ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆ ಅಥವಾ ರಕ್ಷಾವರಣ ಇದನ್ನು ಸಂಸ್ಕೃತದಲ್ಲಿ ದುರ್ಗ ಎಂದು ಹೇಳುತ್ತಾರೆ. ದುರ್ಗ - ದುಗ್ಗ ಕಾವ್ಯದಲ್ಲಿ ಭಾಗಸಿಯುಗ್ಗಡದ ಘನವರ್ಗ ಮೂಲವನೆರೆದೊಡೀ ಭವದಾಹಗ ಹರೇ ದೇರುವನೆ ಮುಕ್ತಿಯ ದುಗ್ಗವನು ಎಂದಿದೆ. ಕೋಟೆಗೆ ಪುರ, ಪ್ರಾಕಾರ, ಕಿಲ್ಲೆ ಎಂಬ ಅರ್ಥಗಳು ಉಂಟು. "ಸೈನಿಕರುಗಳಿಂದ ಆವರಿಸಲ್ಪಟ್ಟ ರಕ್ಷಿತವಾದ ಮತ್ತು ರಕ್ಷಣೆಗೆ ಮುಡುಪಾಗಿರುವ ಗಟ್ಟಿಯಾದ ಸ್ಥಳವೇ ಕೋಟೆ ಎಂದೆನಿಸಿಕೊಳ್ಳುತ್ತದೆ." ಪ್ರಾಚೀನಗ್ರಂಥವಾದ ಋಗ್ವೇದದಲ್ಲಿ 'ಪುರ'ಗಳ ಉಲ್ಲೇಖವಿದೆ. ಪುರ ಅಂದರೆ ಭದ್ರವಾದಂತಹ ಕೋಟೆಯನ್ನು ಹೊಂದಿರುವ ಪಟ್ಟಣ ಎಂದರ್ಥ.

ಮಾನವನು ತನ್ನ ನಾಗರಿಕತೆಯು ಪ್ರಗತಿಯ ಪಥದಲ್ಲಿ ನಡೆದಂತೆ ತನ್ನ ಮತ್ತು ತನ್ನ ಸಮುದಾಯದ ಲೌಕಿಕ ಸಂಪತ್ತನ್ನು ಬೆಳೆಸುತ್ತಾ ನಡೆದನು. ಹಲವು ಕಿರು ಸಮುದಾಯಗಳು ಒಂದೆಡೆಯಲ್ಲಿ ನೆಲೆಗೊಂಡಾಗ ವಿವಿಧ ವಿಶಿಷ್ಟ ಹಿತಾಸಕ್ತಿಯ ಸಮಾಜಗಳು ನಿರ್ಮಾಣಗೊಂಡವು. ರಾಜ್ಯಗಳು - ಸಾಮ್ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಸಮಾಜದ ಜನರು ಸಣ್ಣ ಸಣ್ಣ ಗುಂಪುಗಳಾಗಿ ವಾಸಿಸುತ್ತಿದ್ದರು. ಕಾಲಕ್ರಮೇಣ ಈ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಅಥವಾ ಬೇರೆ ಗುಂಪುಗಳ ಜೊತೆಗೂಡಿ ಊರುಗಳಾದವು. ಈ ಪ್ರಕ್ರಿಯೆಗೆ ಮೂಲ ಕಾರಣ ಮನುಷ್ಯನ ಸಮಾಜ ಜೀವಿತ ಪ್ರಜ್ಞೆ. ಪ್ರಜ್ಞೆಯ ಪರಿಣಾಮವಾಗಿ ತನ್ನ ಸುತ್ತಲಿನ ಪರಿಸರದ

ಅಭದ್ರತೆ ಬಗ್ಗೆ ಯೋಚಿಸಿದ. ಅಂತೆಯೇ ನೆಲೆ ನಿಂತಿದ್ದ ಊರಿನ ರಕ್ಷಣೆಗಾಗಿ ಕೋಟೆ ಕಟ್ಟಿಕೊಳ್ಳುವ ಅವಶ್ಯಕತೆ ಕಂಡುಬಂದಿತು. ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಗಳಲ್ಲಿ ಹಾಗೂ ಗಡಿ ಪ್ರದೇಶಗಳಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಕಟ್ಟಿಸಿದರು. ಹೀಗಾಗಿ ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾರ್ಯದಲ್ಲಿ ಕೋಟೆ ಮಹತ್ತರ ಪಾತ್ರವಹಿಸಿದೆ. ಹಿಂದೆ ಯುದ್ಧಗಳು ನಡೆದಾಗ ಹೊರಗಿನ ಆಕ್ರಮಣ ತಡೆಯಲು ಕೋಟೆ ಕಟ್ಟಿಸಿಕೊಳ್ಳುವುದು ಅವಶ್ಯವಾಗಿತ್ತು. ಕೋಟೆಯು ರಾಜಕೀಯವೆಂಬ ದೇಹದ ಪ್ರಮುಖ ಹಾಗೂ ಅನಿವಾರ್ಯವಾದ ಅಂಗವಾಗಿದ್ದಿತು. ಯಾವುದೇ ರಾಜ್ಯದ ರಾಜಧಾನಿಯು ದೇಹದಲ್ಲಿನ ಹೃದಯವಿದ್ದಂತೆ ರಾಜಧಾನಿಯನ್ನು ವಶಪಡಿಸಿಕೊಂಡರೆ, ಸಾಮಾನ್ಯವಾಗಿ ಒಂದು ರಾಜ್ಯವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಿತು. ಆದುದರಿಂದ ಕೋಟೆ ಅಥವಾ ದುರ್ಗದ ನಿರ್ಮಾಣವು ರಕ್ಷಣೆಯ ದೃಷ್ಟಿಯಿಂದ ಅತ್ಯವಶ್ಯವಾಗಿತ್ತು. ಜಿ.ಟಿ.ಡಾಟೆ ಪ್ರಕಾರ (Times of yore the Fortress was a capital means of defence) "ಪ್ರಾಚೀನ ಕಾಲದಲ್ಲಿ ಈ ಕೋಟೆಗಳು ರಾಜಧಾನಿಯ ರಕ್ಷಣೆಯ ಸಲುವಾಗಿ ಇರುವಂತಹವು."[೧] ಯಕ್ಸ್ಪರ್ ಸ್ಟ್ರೇಟ್ ಪ್ರಕಾರ (Treatise on Fortification and Artillery observes Forts are equally usefull in offensive as defencive warfare) "ವಿರೋಧಿಗಳಿಂದ ಯುದ್ಧ ತಡೆಯುವುದಕ್ಕಾಗಿ ಮತ್ತು ರಕ್ಷಣೆಗಾಗಿ ಕೋಟೆಗಳು ತುಂಬಾ ಅನುಕೂಲಕರವಾಗಿದ್ದವು."[೨]

ಕೋಟೆ ರಚನೆಯ ಕುರಿತಾಗಿ ಪ್ರಸಿದ್ಧ ಕವಿಯಾದ ಹರಿಹರನು 'ಗಿರಿಜಾ ಕಲ್ಯಾಣ' ಎಂಬ ಕಾವ್ಯದಲ್ಲಿ ಕೊಟ್ಟಿರುವ ವಿವರ ಈ ಕೆಳಗಿನಂತಿದೆ.[೩]

ಪಳಕಿನ ಕೋಂಟೆ ಬಟ್ಟಿದನೆ ಬೇವಿನದಂಡೆ ನಭಕ್ಕೆ ಮೀರುವ
ಟ್ಟಳೆ ನಿರ್ಮಿರ್ದೇರು ಪಾರುವ ಪತಾಕೆ ವಿರಾಜಿತ ಗೊಂಟು ಗೊಂಟಿನೊಳ್
ಬಳಸಿದ ಕೊತ್ತಳಂ ಸೊಗಯಿ ಪಾಳ್ಸೆರಿ ಡೆಂಕಣಿ ಸಾರಮಾರಿಯ
ಗ್ಗಳಲಿಸುವ ಗೋಪುರಂ ಪುಲಿಮೊಗಂ ಮೆರುಗುಂ ಪುರದೊಳು ನಿರಂತರ ||

ಹಳೇಗನ್ನಡದ ಕೋಂಟೆಯೇ ಹೊಸಗನ್ನಡದ ಕೋಟೆ. ಪಳಕಿನ (ಸ್ಫಟಿಕದ) ಕೋಟೆ ಎಂಬುದು ಕವಿಯ ಕಲ್ಪನೆ.

ಕಂಪಿಲರಾಯನ ದಂಡನಾಯಕನಾದ ಬೈಚಪ್ಪನು ಕೋಟೆಯನ್ನು ಸಿದ್ದಮಾಡಿದ ಬಗೆಯನ್ನು ನಂಜುಂಡನು ರಾಮನಾಥ ಚರಿತೆಯಲ್ಲಿ ಈ ಕೆಳಗಿನಂತೆ ಹೇಳಿದ್ದಾನೆ.

ದಳವಾಡ ಸಹಿತ ಬೈಚಪ್ಪ ದುರ್ಗವ ಹೊಕ್ಕು

ತಳದವರ ಬಲಿಕೆಯನು

ಬಳಸಿ ಬಳಸಿ ನೋಡಿ ದುರ್ಗ ಸೌರಣೆಯನಂ

ದಲಸದೆ ಮಿಗೆ ಮೂಡಿಸಿದನು

ಅಗಳಾಳ್ವೇರಿ ಕೋಟೆ ಕೊತ್ತಳ ನೆಲದಿಡ್ಡಿ

ಮುಗಿಲಟ್ಟಣೆ ನೆಲಗಮ್ಮ

ಪುಗಿಸಿ ಕೊಯೊಳಗಾಗಿಸಿಕೊಂಬ ಪಲಪುಲಿ

ಮೊಗಗಳನನು ಮೂಡಿಸಿದನು[೪]

ರಾಜರ ಮತ್ತು ಚಿಕ್ಕ ಸಂಸ್ಥಾನದ ಮುಖ್ಯಸ್ಥರ ಅತಿ ಹೆಚ್ಚಿನ ಬಲ ಈ ಕೋಟೆಗಳೇ. ಕೋಟೆಯಿಂದ ರಕ್ಷಿತವಾಗಿಲ್ಲದ ಪಟ್ಟಣಗಳನ್ನು ಶತ್ರುಗಳು ಬಹು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಲ್ಲರು. ಆದ್ದರಿಂದ ಆಳುವವರು ಅತ್ಯವಶ್ಯಕವಾಗಿ ಕೋಟೆಯನ್ನು ಕಟ್ಟಬೇಕೆಂದು ಸಾಮ್ರಾಜ್ಯ ಲಕ್ಷ್ಮಿ ಪೀಠಿಕಾದಲ್ಲಿ ಪ್ರಸ್ತಾಪವಾಗಿದೆ.[೫]

೨.೨ ಕೋಟೆಯ ಪ್ರಾಚೀನತೆ (Antiquity of Fort Architecture)

ಜಗತ್ತಿನ ಚರಿತ್ರೆಯಲ್ಲಿ ಕೋಟೆಗಳ ರಚನೆಯ ಇತಿಹಾಸವು ಬಹುಸ್ವಾರಸ್ಯಕರವಾಗಿಯೇ ಮೂಡಿಬಂದಿದೆ. ಕ್ರಿ.ಪೂ. ೨೦೦ಕ್ಕೆ ಹಿಂದಿನದೆಂದು ಹೇಳಲಾದ ನಿನೆವ ಮತ್ತು ಬೆಬಿಲೋನಿಯ (ಗ್ರೀಸ್) ರಕ್ಷಣಾ ಗೋಡೆಗಳು ೫೦ ಮೈಲಿ ಸುತ್ತಳತೆ ೧೫೦ ಅಡಿ ಎತ್ತರ ೩೦ ಅಡಿ ದಪ್ಪವಿರುವವಂತೆ. ನಿನೆವಾದ ಕೋಟೆ ಗೋಡೆಯ ಮೇಲೆ ೧೫೦೦ ರಕ್ಷಣಾ ಗೋಡೆಗಳಿದ್ದವೆಂದು ತಿಳಿದುಬರುತ್ತದೆ. ಭೂಮಧ್ಯಜನರು ಕ್ರಿ.ಪೂ. ೬೦೦ರಲ್ಲೇ ಇಟ್ಟಿಗೆ ಮಣ್ಣು ಬೆರಸಿ ಕೋಟೆ ಕಟ್ಟುವ ವಿಧಾನ ತಿಳಿದಿದ್ದರಂತೆ. ಇನ್ನೊಂದು ಅಪೂರ್ವವಾದ ದಾಖಲೆ ಎಂದರೆ ವಿಶ್ವ ಅದ್ಭುತಗಳಲ್ಲಿ ಒಂದಾದ ಕ್ರಿ.ಪೂ. ೨೨೧ಕ್ಕೆ ಸೇರಿದ ಚೀನಾದ ಉದ್ದನೆಯ ರಕ್ಷಣಾ ಗೋಡೆಗಳು. ಮಂಗೋಲಿಯನ್ನರ ಆಕ್ರಮಣ ತಡೆದು, ರಕ್ಷಣೆ ಪಡಿಯಲೋಸುಗ ಕಟ್ಟಿದ ಈ ಗೋಡೆಯನ್ನು ನಿರ್ಮಿಸಲು ೧೦ ವರ್ಷ ಬೇಕಾಯಿತಂತೆ! ೨೫ ಅಡಿ ಅಗಲ, ೨೦ ಅಡಿ ಎತ್ತರವಿರುವ ಇದು ಪರ್ವತದ ಸಾಲಿನೊಂದಿಗೆ ಸಾಗಿ ಸುಮಾರು ೨೦೦೦ ಅಡಿ ಮೈಲು ಉದ್ದಕ್ಕೂ ವ್ಯಾಪಿಸಿದೆ. ರೋಮ್ ಸಾಮ್ರಾಜ್ಯದ ಅವಶೇಷಗಳಾಗಿರುವ ಬೃಹದಾಕಾರದ ೧೫-೨೦ ಅಡಿ ದಪ್ಪವಿರುವ ಕೋಟೆಗಳಿದ್ದವು. ಇಂತಾ ಸಾಮ್ರಾಜ್ಯದ ಬೃಹತ್ ಕೋಟೆ ಗೋಡೆಗಳು "ಸ್ವಚ್‌ಸುಹ್ಯಮಾನ್" ಎಂಬಲ್ಲಿ ನಿರ್ಮಿಸಿರುವ ಈ ದೈತ್ಯಾಕಾರದ ಕೋಟೆಯ ಒಂದೊಂದು ಕಲ್ಲು ೨೦ ಅಡಿ ಎತ್ತರವಿದ್ದು ಅದರ ತೂಕ ೧೦೦ ಟನ್‌ಗೂ ಮೀರಿತ್ತು ಎಂದು ಊಹಿಸಿದ್ದಾರೆ.

ಭಾರತೀಯ ಇತಿಹಾಸದಲ್ಲಿ ಕೋಟೆಯ ಪ್ರಾಚೀನತೆ ಪುರಾಣದ ಕಾಲಕ್ಕೆ ಹೋಗುತ್ತದೆ. ಇಂದ್ರಪ್ರಸ್ಥನಗರದ ಪಾಂಡವರ ಕೋಟೆಯ ಒಂದು ಭಾಗವನ್ನು ದೆಹಲಿಯ ಹುಮಾಯೂನನು ಸರಿಪಡಿಸಿದ ಪ್ರತೀತಿ ಇದೆ. ವಾಲ್ಮೀಕಿಯ ರಾಮಾಯಣದಲ್ಲಿ ಮತ್ತು ವ್ಯಾಸರ ಮಹಾಭಾರತದಲ್ಲಿಯೂ ಕೋಟೆಗಳ ಉಲ್ಲೇಖ ಬರುತ್ತದೆ. ಹರಪ್ಪಾ ಮತ್ತು ಮಹೆಂಜದಾರೋಗಳಲ್ಲಿ ಕೋಟೆಗಳಿದ್ದುದು ಉತ್ಖನನ ವರದಿಗಳಿಂದ ತಿಳಿಯುತ್ತದೆ. ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಗ್ರೀಕರ ರಾಯಭಾರಿಯಾಗಿ ಮೊದಲನೆ ಚಂದ್ರಗುಪ್ತನ ಆಸ್ಥಾನಕ್ಕೆ ಬಂದಿದ್ದ ಮೇಗಾಸ್ತನೀಸನು ಪಾಟಲಿಪುತ್ರ ನಗರದ ಕೋಟೆಯನ್ನು ವರ್ಣಿಸಿದ್ದಾನೆ.

ಶಾತವಾಹನರ ಅವಧಿಯ ಸನ್ನತಿ ಕೋಟೆ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನವಾದುದು. ೫೪x೨೮x೯ ಸೆಂ.ಮೀ. ಗಾತ್ರದ ಸುಟ್ಟ ಇಟ್ಟಿಗೆಗಳಿಂದ ಈ ಕೋಟೆಯನ್ನು ಕಟ್ಟಲಾಗಿದೆ. ೫ ರಿಂದ ೬ ಮೀಟರ್ ಎತ್ತರವಿರುವ ಈ ಕೋಟೆಯು ಕ್ರಿ.ಶ. ೧-೨ನೇ ಶತಮಾನದ್ದು.[೬] ೪೫ x ೨೪ x ೮ ಸೆಂ.ಮೀ.ಗಳ ಗಾತ್ರದ ಸುಟ್ಟ ಇಟ್ಟಿಗೆಯ ಇನ್ನೊಂದು ಕೋಟೆ ಬನವಾಸಿಯಲ್ಲಿ ಕಂಡುಬರುತ್ತದೆ.[೭]

ಕನ್ನಡ ನಾಡಿನ ಕೋಟೆಗಳಲ್ಲಿ ಪ್ರಾಚೀನವಾದುದು ಮತ್ತು ಶಿಲಾಶಾಸನಗಳ ಮೂಲಕ ಕಾಲವನ್ನು ನಿರ್ಧರಿಸಲ್ಪಟ್ಟ ಕೋಟೆಯೆಂದರೆ, ಬಾದಾಮಿ ಚಾಲುಕ್ಯರ ಮೊದಲ ಪುಲಿಕೇಶಿಯದು. ಇದರ ಕಾಲ ಕ್ರಿ.ಶ. ೫೪೩.

ಸ್ವಸ್ತಿ ಶಕವರ್ಷೇಷು ಚತುಶ್ಯತೇಷು ಪಂಚಷಷ್ಠಿಯುತೇಷು
ಅಶ್ವಮೇಧಾದಿ ಯಜ್ಞಾನಾಂ ಯಜ್ವಾ ಶ್ರೌತವಿಧಾನತಃ ಹಿರಣ್ಯಗರ್ಭ
ಸಂಭೂತಶ್ಚಲಿಕ್ಯೋವಲ್ಲಭೇಶ್ವರಃ || ಧರಾಧರೇಂಧ್ರ ವಾತಾಪಿ ಮಜೇಯಂ
ಭೂತಯೇ ಭುವಃ ಅಧಸ್ತಾದುಪರಿಷ್ಟಾಚ್ಚದುರ್ಗ ಮೇತದ ಚೀಕರತ್ ||[೮]

ಬಳ್ಳಾರಿ ಜಿಲ್ಲೆಯ ಪ್ರಾಚೀನ ಕೋಟೆ ಎಂದರೆ ಕಲ್ಯಾಣ ಚಾಳುಕ್ಯರಿಗಿಂತ ಮುಂಚಿನದೆಂದು ಹೇಳುವ ಶಾಸನ ಉಲ್ಲೇಖಿತ ಉಚ್ಚಂಗಿದುರ್ಗದ ಅಭೇಧ್ಯವಾದ ಕೋಟೆ. ಇದರ ಕಾಲ ಸುಮಾರು ಕ್ರಿ.ಶ. ೯ನೆಯ ಶತಮಾನ.

ಗಳಗೇಶ್ವರ ದೇವರಿಗೇಂ ಕೃತಾರ್ತ್ಥನೋ ಸಕವರ್ಷ ೯೮೬ನೆಯ
ಕ್ರೋಧಿ ಸಂವತ್ಸರದ ಚೈತ್ರದ ಪೌರ್ಣ್ನಮಾ
ಸೆಯಾದಿತ್ಯವಾರು ವಾದಪರ್ವ್ವ ನಿಮಿತ್ತಂ ಗಳಗೇಶ್ವರ ದೇವರ್ಗೆ "ಯುಚ್ಚಂಗಿಯ ಕೋಟೆಯಲು"
ತೆಂಕ ಬಣ್ಣ ಸಿಗೆರೆಯುಮಂ[೯]

ಕ್ರಿ.ಶ ೧೦೬೪ರ ಶಾಸನದಲ್ಲಿ ಉಚ್ಚಂಗಿ ಕೋಟೆಯ ಉಲ್ಲೇಖವಿದೆ ಎಂದಾಗ ಈ ಇದಕ್ಕೂ ಮೊದಲು ಅಲ್ಲೇ ಕೋಟೆ ನಿರ್ಮಾಣವಾಗಿರಬೇಕು.

೨.೩ ಕೋಟೆಯ ಮಹತ್ವ (Importance of Fort)

ಪ್ರಾಚೀನ ಸಾಹಿತ್ಯ ಕೃತಿಗಳಾದ ಕೌಟಿಲ್ಯನ ಅರ್ಥಶಾಸ್ತ್ರ, ಕಾಮಂದಕನ ನೀತಿಸಾರ, ಶುಕ್ರನ ಶುಕ್ರನೀತಿ, ಮೂರನೆಯ ಸೋಮೇಶ್ವರನ ಮಾನಸೋಲ್ಲಾಸಗಳಲ್ಲಿ ಈ ಕೋಟೆಗಳ ಮಹತ್ವವನ್ನು ವಿವರಿಸಲಾಗಿದೆ. ಅದೇರೀತಿ ಮಧ್ಯಕಾಲೀನ ಸಾಹಿತ್ಯ ಕೃತಿಗಳಾದ ಜನ್ನನ ಅನಂತನಾಥ ಪುರಾಣ, ನಂಜುಂಡನ ಕುಮಾರರಾಮಚರಿತೆ, ಬಸವರಾಜನ ಶಿವತತ್ವ ರತ್ನಾಕರ, ಮೋಹನ ತರಂಗಿಣಿ, ಲಿಂಗಣ್ಣ ಕವಿಯ ಕೆಳದಿನೃಪವಿಜಯ, ಚಂದ್ರಕವಿಯ ಪಂಪಾಕ್ಷೇತ್ರ ವರ್ಣನಂ, ಚಾಮರಸನ ಪ್ರಭುಲಿಂಗಲೀಲೆ, ಶೃತಿಕೀರ್ತಿಯ ವಿಜಯಾಂಬುದಿಚರಿತೆ, ಸಿಂಗಿರಾಜನ - ಅಮಲಬಸವ ಚರಿತೆ, ಭೀಮಕವಿಯ ಬಸವಪುರಾಣ, ಬಾಹುಬಲಿ ಪಂಡಿತನ ಧರ್ಮನಾಥ ಪುರಾಣ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಎರಡನೆಯ ಮಂಗರಸನ ಸಾಮ್ಯಕ್ತ್ವ ಕೌಮುದಿ ಹಾಗೂ ಕರ್ನಾಟಕದಾದ್ಯಂತ ದೊರೆತಿರುವ ಶಾಸನಗಳಲ್ಲಿ ಕೋಟೆಗಳ ಮತ್ತು ಅವುಗಳ ಮಹತ್ವವನ್ನು ರಸವತ್ತಾಗಿ ವರ್ಣಿಸಲಾಗಿದೆ.

ಪ್ರಾಚೀನ ರಾಜನೀತಿತಜ್ಞರಿಂದ ನಮೂದಿಸಲ್ಪಟ್ಟಿರುವ ರಾಜ್ಯದ ಏಳು ಮೂಲ ಅಂಶಗಳು ಅಥವಾ ಸಪ್ತಾಂಗಗಳು ಯಾವುವೆಂದರೆ ಸ್ವಾಮಿ (ಪ್ರಭು), ಅಮಾತ್ಯ (ಮಂತ್ರಿ), ರಾಷ್ಟ್ರ (ಸಂಸ್ಥಾನ), ದುರ್ಗ (ಕೋಟೆ), ಕೋಶ (ಖಜಾನೆ), ದಂಡ (ಸೈನ್ಯ) ಮತ್ತು ಮಿತ್ರರಾಜ್ಯ.[೧೦] ರಾಜ್ಯವನ್ನು ಸ್ಥಾಪಿಸಲು ತಿಳಿಸಲ್ಪಟ್ಟಿರುವ ಈ ಸಪ್ತ ಮೂಲತತ್ವಗಳಲ್ಲಿ ದುರ್ಗ ಕೋಟೆ ಬಹು ಮುಖ್ಯವೆಂದು ಪರಿಗಣಿಸಲಾಗಿದೆ. ಏಕೆಂದರೆ ಕೋಟೆ ರಾಜ್ಯ ರಕ್ಷಣಾ ವ್ಯವಸ್ಥೆಯಲ್ಲಿ ಮುಖ್ಯವಾದ ಸಂಬಂಧವನ್ನು ಸ್ಥಾಪಿಸುತ್ತದೆ.

ರಾಜನು ತನ್ನ ರಾಣಿಯ, ತನ್ನ ಜನರ ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಲೇಬೇಕೆಂದು ರಾಜನೀತಿ ಪ್ರಕಾರದಲ್ಲಿ ಬೃಹಸ್ಪತಿಯ ವಚನ ಉಲ್ಲೇಖಿಸುತ್ತದೆ.[೧೧] ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ರಾಜನು ತನ್ನ ರಾಜ್ಯದ ಗಡಿಯ ನಾಲ್ಕು ದಿಕ್ಕುಗಳಲ್ಲೂ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ಹೇಳಿದ್ದಾನೆ.[೧೨] ಒಬ್ಬ ಬಿಲ್ಲುಗಾರ ಕೋಟೆ ಗೋಡೆಯ ಮರೆ (ರಕ್ಷಣೆ)ಯಲ್ಲಿ ನೂರಾರು ಶತ್ರುಗಳೊಂದಿಗೆ ಹೋರಾಡಬಹುದು ಮತ್ತು ನೂರಾರು ಬಿಲ್ಗಾರರು ಹತ್ತು ಸಾವಿರ ಶತ್ರುಗಳೊಂದಿಗೆ ಹೋರಾಡಬಹುದು ಎಂದು ಹೇಳುತ್ತಾ ಮನು ಕೋಟೆಗಳನ್ನು ಕಟ್ಟುವುದನ್ನು ಸಮರ್ಥಿಸಿದ್ದಾನೆ.[೧೩] ಸಾವಿರಾರು ಆನೆಗಳಿಂದ ಮತ್ತು ಲಕ್ಷಾಂತರ ಕುದುರೆಗಳಿಂದ ಯುದ್ಧದಲ್ಲಿ ನಿರ್ವಹಿಸಲಾಗದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ಆಶ್ಚರ್ಯಕರವಾಗಿ ನಿರ್ವಹಿಸಬಲ್ಲನು ಎಂದು ಪಂಚತಂತ್ರದಲ್ಲಿ ದೃಢವಾಗಿ ಹೇಳಲ್ಪಟ್ಟಿದೆ.[೧೪]

ಜನ್ನಕವಿಯು *ಅನಂತನಾಥ ಪುರಾಣದಲ್ಲಿ* ಬರುವ ಚಂಡಶಾಸನ ವೃತ್ತಾಂತದ ಸಂದರ್ಭದಲ್ಲಿ ಕೋಟೆಯ ಬಗ್ಗೆ ಅನೇಕ ವಿವರ ನೀಡುತ್ತಾನೆ. "ಕೋಟೆ ಬೀಳುವ ಸ್ಥಿತಿ ಬಂದಿದೆ ಎಂದು ವಸ್ತ್ರ ಬೀಸುತ್ತಾ ಬೊಬ್ಬೆ ಹೊಡೆದರಂತೆ" ಇಲ್ಲಿ ವಸ್ತ್ರ ಬೀಸುತ್ತಿದ್ದುದು ಸೋಲನ್ನು ಒಪ್ಪಿದ ಚಿನ್ಹೆ ಆಗಿದ್ದಿರಬಹುದು.

ಶುಕ್ರನೀತಿಸಾರದಲ್ಲಿ ಅನೇಕ ರೀತಿಯ ಗಿಡಮರಗಳ ಪೊದರುಗಳಿಂದ ಕೂಡಿದ, ದನಕರುಗಳು, ಹಕ್ಕಿಗಳು ಮತ್ತಿತರ ಪ್ರಾಣಿಗಳಿಂದ ಸಮೃದ್ಧವಾಗಿರುವ, ಧಾನ್ಯ ಸಮೃದ್ಧಿ ಇರುವ, ಬೆಟ್ಟ ನೀರುಗಳಿಂದ ಆವೃತ್ತವಾಗಿರುವ ಪ್ರದೇಶಗಳಲ್ಲಿ ಕೋಟೆಗಳನ್ನು ನಿರ್ಮಿಸಬೇಕು[೧೫] ಎಂದಿದೆ. ಅಂದರೆ ಕೋಟೆಯನ್ನು ಕಟ್ಟುವ ಸ್ಥಳದ ಆಯ್ಕೆ ಬಗ್ಗೆ ಇಲ್ಲಿ ವಿವರವಿದೆ. ಕಾಮಂದಕನು ನೀತಿಸಾರದಲ್ಲಿ "ಭದ್ರವಾದ ಕೋಟೆ ಇಲ್ಲದ ರಾಜ ಬಿರುಗಾಳಿಗೆ ಸಿಕ್ಕಿದ ಮೋಡದ ತುಣುಕುಗಳಿಗೆ ಸಮಾನ ಎಂದಿದ್ದಾನೆ."[೧೬]

ವಿಷಹೀನೋ ಯಥನಾಗೋ ಮದಹೀನೋ ಯಥಾಗಜಃ |
ಸರ್ವೇಕ್ಷಾಂ ವಶ್ಯತಾಂ ಯಾತಿ ದುರ್ಗಹೀನಸ್ಥಥಾ ನೃಪಃ ||

ಅಂದರೆ ಕೋಟೆ ಇಲ್ಲದ ರಾಜನನ್ನು ವಿಷರಹಿತವಾದ ಹಾವಿನಂತೆ ಅಥವಾ ಮದರಹಿತವಾದ ಆನೆಯಂತೆ ಸುಲಭವಾಗಿ ವಶಪಡಿಸಿಕೊಳ್ಳಬಹುದು ಎಂದು ಶಿವತತ್ವ ರತ್ನಾಕರದಲ್ಲಿ ಹೇಳಿದೆ.[೧೭]

ಮದಹಸ್ತಿಗಳ ಕೈಯ ನೂಕಿ ಬಂದಿಸುವ ಪೆ
ರ್ಗದ ವಜ್ರಲಾಳವಿಂಡಿಗೆಯ
ಆದಟನ ದ್ವಾರಾಷ್ಟ್ರಕವ ವರ್ಣಿಸುವೊಡೆ ಪದಕವಿ
ಗಳಿ ಗೋಚರವ್ರ[೧೮]

"ಮದ್ದಾನೆಯ ಸೊಂಡೆಯ ಸಹಾಯದಿಂದ ನೂಕಿ ಬಂಧಿಸುವಷ್ಟು ಹಿರಿದಾದ ವಜ್ರದ ಅಗುಳಿಯ ಬಾಗಿಲವುಳ್ಳ ಕೋಟೆಯನ್ನು ವರ್ಣಿಸುವುದು ಖ್ಯಾತ ಕವಿಗಳಿಗೂ ಅಸಾಧ್ಯವಾದುದು" ಎಂದು *ಮೋಹನ ತರಂಗಿಣಿಯ* ಗದ್ಯವನ್ನು ಎಸ್.ಎಸ್.ಕೋತಿನ ಅನುವಾದಿಸಿದ್ದಾರೆ.

ರಾಜವಂಶಗಳ ಸಂಘಟನೆಯಲ್ಲಿ ಕೋಟೆಗಳು ಅತಿ ಮುಖ್ಯವಾದ ಪಾತ್ರವನ್ನು ವಹಿಸಿವೆ. ಅನೇಕ ಶ್ರೇಷ್ಠ ರಾಜವಂಶಗಳ ಉತ್ಥಾನ ಮತ್ತು ಪತನಗಳಿಗೆ ಮುಖ್ಯ ಕಾರಣ ಕೋಟೆಗಳನ್ನು ಸ್ವಾಧೀನಪಡಿಸಿಕೊಳ್ಳುವಿಕೆ. ಅನೇಕ ರಾಜವಂಶಸ್ಥರು ಕಾಲ ಕಾಲಕ್ಕೆ ತಕ್ಕಂತೆ ಬೆಟ್ಟ - ಭೂಮಿಗಳ ಮೇಲೆ ಮತ್ತು ಗ್ರಂಥಗಳ ಅಧ್ಯಯನದಿಂದ ಕೋಟೆಗಳ ಮಹತ್ವ ಹಾಗೂ ವರ್ಣನೆಗಳು ವಿಫುಲವಾಗಿ ಕಂಡುಬರುತ್ತವೆ. ಈ ಪ್ರಬಂಧದಲ್ಲಿ ಕೋಟೆಗಳ ಮಹತ್ವಗಳನ್ನು ಆಯಾಯ ಅಧ್ಯಾಯಗಳಲ್ಲೇ ಹೇಳಲಾಗಿದೆ.

೨.೪ ಕೋಟೆಯ ಲಕ್ಷಣಗಳು (Characterstic Features of Fort)

ಕೋಟೆಯೆಂದಾಕ್ಷಣ ಅದರ ಅನೇಕ ಭಾಗಗಳು ನೆನಪಿಗೆ ಬರುತ್ತವೆ. 'ಬಟ್ಟದನೆ' ಎಂಬ ಪದ ಕೋಟೆಯ ಗೋಡೆಗಳ ಮೇಲೆ ಒತ್ತಾಗಿ ಕಟ್ಟಿರುವ ವೃತ್ತಾಕಾರದ 'ತೆನೆ'ಯನ್ನು ಸೂಚಿಸುತ್ತದೆ. ಕೋಟೆಯ ಗೋಡೆಯ ಮೇಲೆ ಉದ್ದಕ್ಕೂ ಬತ್ತದ ತೆನೆಯಾಕಾರದ ರಚನೆ ಇರುತ್ತದೆ. ಇಂಥ ಸಾವಿರಾರು ತೆನೆಗಳ ಕಾಂಡ ರಚನೆ ಕೋಟೆ ಗೋಡೆಯನ್ನು ಪ್ರತ್ಯಕ್ಷವಾಗಿ ನೋಡಿದಾಗ ಮಾತ್ರ ತಿಳಿದುಬಂದೀತು. ಈ ರೀತಿಯ ತೆನೆಯಾಕಾರದ ರಚನೆ ಕೋಟೆಗೆ ಅಂದವನ್ನು ತಂದುಕೊಡುತ್ತದೆ. ಮೋಹನ ತರಂಗಿಣಿಯಲ್ಲಿ ಕೋಟೆ ತೆನೆಯನ್ನು ಈ ಕೆಳಗಿನಂತೆ ವರ್ಣಿಸಲಾಗಿದೆ.

ತಿಂಗಳ ಜೂಟಿಗೆ ಸುರಸತಿಯರು ತಂದ
ಮಂಗಳ ಜಲಕುಂಭದಂತೆ
ಕಂಗೊಳಿಸುವ ಕೋಟೆಯ ತೆನೆಗೊಂದೊಂದು
ಪೊಂಗಳ ಸಂಗಳೊಪ್ಪಿದವು[೧೯]

ವೀರಗಲ್ಲುಗಳಲ್ಲಿ ಕೋಟೆ ತೆನೆ ಚಿತ್ರಣಗಳನ್ನು ಚಿತ್ರಿಸಿದ್ದು ಅವುಗಳು ಬಂದಳಿಕೆ, ಹಾನಗಲ್ಲು, ತಿಳವಳ್ಳಿ, ಎಲೆಬೇತೂರು, ಆನವಟ್ಟಿ, ಬೆಳಗಾವಿ ಹಾಗೂ ಬಾವಡೆಗಳಲ್ಲಿ ಕಂಡುಬರುತ್ತವೆ.[೨೦]

ಶಿಕಾರಿಪುರ ತಾಲೂಕು ಬಂದಳಿಕೆಯಲ್ಲಿರುವ ವೀರಗಲ್ಲಿನಲ್ಲಿ ಹೋರಾಟ ಹಂತದ ಕೆಳಭಾಗದಲ್ಲಿ ಕೋಟೆಯ ತೆನೆಗಳ ಚಿತ್ರವನ್ನು ಬಿಡಿಸಲಾಗಿದೆ. ಇಲ್ಲಿ ಕೋಟೆಯ ಸಂರಕ್ಷಕರು ಅಟ್ಟಣೆಯ ಮೇಲೆ ನಿಂತು ಬಾಣ ಪ್ರಯೋಗಿಸುತ್ತಿರುವರು.[೨೧]

ಹಾನಗಲ್ಲಿನ ವೀರಗಲ್ಲಿನಲ್ಲಿ ಮೂರನೇ ಹಂತದ ಕೆಳಪಟ್ಟಿಯಲ್ಲಿ ಕೋಟೆಯ ತೆನೆಗಳನ್ನು ಚಿತ್ರಿಸಲಾಗಿದೆ. ಕೆಳಹಂತದಲ್ಲಿ ಗಜಯುದ್ಧ, ಎರಡನೆ ಹಂತದಲ್ಲಿ ಅಶ್ವಯುದ್ಧ, ಮೂರನೇ ಹಂತದಲ್ಲಿ ಕೋಟೆಯನ್ನು ಚಿತ್ರಿಸಿ, ಒಳಗಡೆ ಸೈನಿಕರು ಯುದ್ಧ ಸನ್ನದ್ಧರಾಗಿ ಕಾಳಗವನ್ನು ನೋಡುತ್ತಾ ನಿಂತಿದ್ದು, ಇವರಲ್ಲಿ ಕೆಲವರು ದುಂಡಾಗಿರುವ ಮತ್ತೆ ಕೆಲವರು ಚೌಕಾಕಾರವಾಗಿರುವ ಗುರಾಣಿಗಳೊಂದಿಗೆ ಸಿದ್ಧವಾಗಿದ್ದಾರೆ. ಯುದ್ಧದ ಮಧ್ಯೆ ಒಬ್ಬನು ಧ್ವಜವನ್ನು ಹಿಡಿದು ನಿಂತಿದ್ದಾನೆ. ಇವರೆಲ್ಲರೂ ಕೋಟೆಯ ಹೊರಗೆ ನಡೆಯುತ್ತಿರುವ ಯುದ್ಧವನ್ನು ಕೌತುಕದಿಂದ ವೀಕ್ಷಿಸುವಂತೆ ಚಿತ್ರಿಸಲಾಗಿದೆ. ಕೆಲವರು ತಮ್ಮ ಗುರಾಣಿಗಳನ್ನು ಕೋಟೆಯ ತೆನೆಗಳ ಮೇಲೆ ಇಟ್ಟುಕೊಂಡು ನಿಂತಿರುವರು.[೨೨]

ಹಾನಗಲ್ಲು ತಾಲೂಕಿನ ತಿಳುವಳ್ಳಿಯ ವೀರಗಲ್ಲಿನ ಮೂರನೆ ಹಂತದ ಕೆಳಭಾಗದ ಪಟ್ಟಿಯಲ್ಲಿ ಕೋಟೆ - ತೆನೆಗಳನ್ನು ಚಿತ್ರಿಸಲಾಗಿದೆ.[೨೩]

ಹಾವೇರಿ ತಾಲೂಕಿನ ಎಲೆಬೇತೂರಿನ ವೀರಗಲ್ಲಿನಲ್ಲಿ ಹೋರಾಟದ ಹಂತದಲ್ಲಿ ಪಕ್ಕ ಮತ್ತು ಮೇಲಿನ ಭಾಗದ ಪಟ್ಟಿಯಲ್ಲಿ ಕೋಟೆಯ ತೆನೆಗಳನ್ನು ಕೆತ್ತಲಾಗಿದೆ.[೨೪]

ಸೊರಬ ತಾಲೂಕಿನ ಆನವಟ್ಟಿಯ ವೀರಗಲ್ಲಿನಲ್ಲಿ ವೈರಿಯೊಬ್ಬ ಸತ್ತು ಬೋರಲಾಗಿ ಬಿದ್ದಿದ್ದು ಅವನ ಮುಂಭಾಗದಲ್ಲಿ ಕೋಟೆ ತೆನೆಯನ್ನು ಬಿಡಿಸಲಾಗಿದೆ.[೨೫]

ಶಿಕಾರಿಪುರ ತಾಲೂಕಿನ ಬಳ್ಳಿಗಾವಿಯ ವೀರಗಲ್ಲೊಂದರಲ್ಲಿಯೂ ಕೋಟೆಯ ತೆನೆಯನ್ನು ಕೆಳಭಾಗದಲ್ಲಿ ಚಿತ್ರಿಸಲಾಗಿದೆ.[೨೬] ಕೆಲವು ಸೈನಿಕರು ಕೋಟೆಯ ಮೂಲೆಯಿಂದ ಇಣುಕಿ ನೋಡುತ್ತಿದ್ದು, ಕೆಲವರು ಗುರಾಣಿಗಳ ಮೇಲೆ ವೃತ್ತಾಕಾರ ಹಾಗೂ ಎಲೆಗಳ ಉಬ್ಬು ಆಕಾರಗಳನ್ನು ಬಿಡಿಸಿ ಅಲಂಕರಿಸಲಾಗಿದೆ.

ಮಾಳಸಿರಸ ತಾಲೂಕಿನ ಬಾವಡೆಯ ವೀರಗಲ್ಲಿನ ಎರಡನೆಯ ಹಂತದಲ್ಲಿ ಮೇಲಿನ ಪಟ್ಟಿಯಿಂದ ಕೆಳಗಿನ ಪಟ್ಟಿಯವರೆಗೂ ಕಂಸದ ಆಕಾರದಲ್ಲಿ ಕೋಟೆಯ ತೆನೆಗಳನ್ನು ಬಿಡಿಸಲಾಗಿದೆ. ಒಳಗಿನ ಯೋಧರು ಮೂರು ಸಾಲಿನಲ್ಲಿ ಗುರಾಣಿಗಳನ್ನು ಹಿಡಿದು ನಿಂತಿದ್ದಾರೆ. ಕೋಟೆಯ ಹೊರಗೆ ಮೂವರು ಕುದುರೆಯಾಳುಗಳು ಹೋರಾಡುತ್ತಿರುವರು. ಕೋಟೆಯ ಯಾವ ಭಾಗದಲ್ಲೂ ದ್ವಾರವಿಲ್ಲ. ಇಲ್ಲಿ ಸೊಗಸಾದ ಕೋಟೆ ಚಿತ್ರಣ ಮೂಡಿಬಂದಿದೆ.[೨೭]

ಈ ಕೋಟೆ ತೆನೆಗಳ ನಡುವೆ ಮೆಲ್ಲಗೆ ತಲೆಹಾಕಿ ಕೆಳಕ್ಕೆ ಇಣುಕಿ ನೋಡಿ ಅವುಗಳ ಹಿಂದೆಯೇ ಕುಳಿತು 'ಅಂಬುಗಂಡಿ'ಯಿಂದ ಬಾಣಗಳನ್ನು ಪ್ರಯೋಗಿಸಲು ಅನುಕೂಲ ಆಗಿರುತ್ತಿತ್ತು. ಈ ರೀತಿಯ ಒಂದು ವಿಶ್ರಾಂತಿ ತಾಣವನ್ನು ಕೋಟೆ ಗೋಡೆಯ ಹಿಂದುಗಡೆ ಕಟ್ಟುತ್ತಿದ್ದರು. ಅದು ಪಹರೆಯವರಿಗೆ ಕಾವಲುಗಾರರಿಗೆ ಸರದಿ ಪ್ರಕಾರ ವಿಶ್ರಾಂತಿಯನ್ನು ಪಡೆಯಲು ಅನುಕೂಲವಾಗುತ್ತಿತ್ತು. 'ಅಟ್ಟಳೆ' ಎಂದರೆ ಕೋಟೆ ಗೋಡೆಯ ಮೇಲೆ ಎತ್ತರಕ್ಕೆ ಕಟ್ಟಿರುವ ವೇದಿಕೆ ಒಂದು ರೀತಿಯಲ್ಲಿ ಹೇಳುವುದಾದರೆ ಅಟ್ಟಳೆಗಳು ವಿಕ್ಷಣಾಕೇಂದ್ರಗಳಿದ್ದ ಹಾಗೆ ಅಟ್ಟಳೆಯ ಮೇಲೆ ರಾಜನ ಲಾಂಛನ ಇರುವ ರಾಜ್ಯಧ್ವಜ ಹಾರಾಡುತ್ತಿದ್ದವು. 'ಗೊಂಟು' ಇದು ಕೋಟೆ ಗೋಡೆಗಳು ಒಂದಕ್ಕೊಂದು ಸಂಧಿಸುವ ಸ್ಥಳ. ಅಂಥ ಸಂಧಿಸ್ಥಾನದಲ್ಲಿ ಅಟ್ಟಳೆಗಳಿಗಿಂತಲೂ ಎತ್ತರವಾಗಿ. ಚೆನ್ನಾಗಿ ವೀಕ್ಷಿಸಲು ಅನುಕೂಲ ಆಗುವಂತೆ ವೀಕ್ಷಣಾ ಕೇಂದ್ರಗಳೋಪಾದಿಯಲ್ಲಿ ವೇದಿಕೆ ಕಟ್ಟುತ್ತಿದ್ದರು. ಅವುಗಳೇ ಕೊತ್ತಳಗಳು (ಬುರುಜು-Bastion) ಎಂದು ಕರೆಯುತ್ತಾರೆ. ಪ್ರತಿ ಕೋಟೆಯ ನಾಲ್ಕು ಅಥವಾ ಎಂಟು ದಿಕ್ಕುಗಳಲ್ಲಿಯೂ

ಒಂದೊಂದು ಕೊತ್ತಳಗಳಿರುತ್ತಿದ್ದವು. ಕೋಟೆಯ ಆಳುವೇರಿ ಅಂದರೆ ಎತ್ತರವಾದ ಬಲಿಷ್ಟವಾದ ಗೋಡೆ ಎಂದರ್ಥ. ಡೆಂಕಣಿ ಎಂಬ ಆಯುಧ ವಿಶೇಷವನ್ನು ಪ್ರತಿ ಕೋಟೆಯಲ್ಲೂ ಬಳಸುತ್ತಿದ್ದರು ಅವುಗಳನ್ನು ಆಕಾಶದತ್ತ ಮುಖಮಾಡಿ ನಿಲ್ಲಿಸುತ್ತಿದ್ದರು. ಯುದ್ಧದ ಸಂದರ್ಭದಲ್ಲಿ ಡೆಂಕಣಿಗಳನ್ನು ನೆಲದ ಕಡೆ ಬಾಗಿಸಿ ಕಲ್ಲುಗುಂಡು ಸಿಡಿಸುವ ರೂಢಿ ಇತ್ತು. "ಸಾರಮಾರಿ" ಎಂಬುದೊಂದು ವಿಶೇಷ ಸಾಧನ. ಕೋಟೆಯನ್ನು ಲಗ್ಗೆ ಹತ್ತಲು ಶತ್ರು ಪಕ್ಷದವರು ಉಪಯೋಗಿಸುತ್ತಿದ್ದ ಸಾಧನ 'ಸಾರ' ಅದನ್ನು ನಾಶಪಡಿಸಲು ಕೋಟೆಯೊಳಗಣವರು ಬಳಸುತ್ತಿದ್ದ ವಿಶೇಷ ಸಾಧನವೇ "ಸಾರಮಾರಿ." "ಪುಲಿಯೋಗ" ಇದು ಕೋಟೆಗೆ ಇರುವ ದಿಡ್ಡಿಬಾಗಿಲು ಅಥವಾ ಹೆಬ್ಬಾಗಿಲನ್ನು ಸೂಚಿಸುತ್ತದೆ. ಹೆಬ್ಬಾಗಿಲನ್ನು ೫ ಕೈಗಳ ಉದ್ದ ೫ ಕೈಗಳ ಅಗಲ ಮಾಡಬೇಕು. ಕುದುರೆ ಹತ್ತಿ ಬರುವವನ ಮೇಲೆ ಎರಡು ಕೈಗಳ ಉದ್ದ ಪ್ರಮಾಣವಿರುವ ಹಾಗೆ ಕೋಟೆ ದ್ವಾರವನ್ನು ಮಾಡಬೇಕೆಂದು ಈ ಕೆಳಗಿನ ಶ್ಲೋಕ ಹೇಳುತ್ತದೆ.

ಅಶ್ವಾರೂಢೆ ಸಮಾಯಾತೇತಸೊ ಪರಿತಥೋಭಯಂ |
ಹಸ್ತ ಮಾತ್ರ ಪ್ರಮಾಣೇನದ್ವಾರಂ ಕುರ್ಯಾದ್ವಿ ಚಕ್ಷಣಃ ||

ಕೋಟೆಗೆ ಚೋರ ಕಿಂಡಿಗಳನ್ನು ಜೋಡಿಸಿರುತ್ತಿದ್ದರು. ಪೂರ್ವಾದಿ ದಿಕ್ಕುಗಳಾಗಲಿ ಆಗ್ನೇಯಾದಿ ಕೋಮಗಳಲ್ಲಾಗಲಿ ಕೆಳಗಾಗಲಿ ಲಕ್ಷಣವಿಲ್ಲದೆ ಇರಲಿ ಹೇಗಾದರೂ ರಹಸ್ಯವಾಗಿರುವ ಹಾಗೆ ಆಪತ್ತು ಸಂಭವಿಸಿದಾಗ ಪಲಾಯನವಾಗುವುದಕ್ಕೆ ಯೋಗ್ಯವಾಗಿ ಚೋರಕಿಂಡಿ ದ್ವಾರವಂ ಮಾಡಬೇಕೆಂದು ಈ ಕೆಳಗಿನ ಶ್ಲೋಕದಲ್ಲಿ ಹೇಳಿದೆ.

ಡಿಕ್ಷು ವಾಕೋಣ ದೇಶ ಶ್ಯಾಹ್ಯ ಪರಿಷ್ಯೆಥವಾದ್ಯಧಃ |
ಅಲಕ್ಷಣಂವಾಗುಟಪ್ತಂಚ ದ್ವಾರಂಸ್ಯಾಚ್ಛೋರ ಖಂಡಿತಃ ||

ಕೋಟೆಯ ಸುತ್ತಲೂ ಆಳವಾದ ಕಂದಕ ಅಥವಾ ಅಗಳು ತೋಡಿಸಿ ಅವುಗಳ ತುಂಬ ನೀರು ತುಂಬಿಸುತ್ತಿದ್ದರು. *ಮೋಹನ ತರಂಗಿಣಿಯ*ಲ್ಲಿ ಕಂದಕದ ವರ್ಣನೆಯನ್ನು ನೋಡಬಹುದು.

ನೆಗರು ನೀರಾನೆ ಪಾಠೀನ ಕಚ್ಛಪಕರ
ಯುಗಳ ಕರ್ಕಾಟಕ ನಿಚಯ
ಜಗಳಕ್ಕೆ ಬಪ್ಪ ಶತ್ರುಗಳ ಖಂಡಿಪೆ ವೆಂ
ದಗಳೊಳು ಘುಳಿ ಘುಳಿಸಿದವು [೨೦]

ಕೋಟೆಯ ಕಂದಕದಲ್ಲಿಯ ಮೊಸಳೆ, ನೀರಾನೆ ಮೀನ, ಆಮೆ, ಏಡಿಗಳು ಕದನಕ್ಕೆ ಬರುವ ಶತ್ರುಗಳನ್ನು ಬಂಧಿಸುವವೆಂದು ಘಳಿ ಘಳಿಸಿದವು. ಹೀಗೆ ಕಂದಕಗಳು ಶತ್ರುಗಳಿಗೆ ಯಮಪಾಶವಾಗಿದ್ದವು. ಈ ಮೇಲಿನ ಅಂಶಗಳು ಕೋಟೆಯಲ್ಲಿ ಕಂಡುಬರುವ ಪ್ರಮುಖ ಭಾಗಗಳಾಗಿವೆ.

೨.೫ ಕೋಟೆಯ ಪ್ರಕಾರಗಳು (Typology of Forts)

ಕೋಟೆಗಳು ಯಾವ ಯಾವ ರೀತಿ ರಚಿತವಾಗುತ್ತಿದ್ದವು ಹಾಗೂ ಅವುಗಳ ರಚನೆಯ ವಿನ್ಯಾಸವೇನೆಂಬುದನ್ನು ತಿಳಿಯಬೇಕಾದರೆ ನಾವು ಸಾಹಿತ್ಯ ಹಾಗೂ ಶಾಸನಗಳನ್ನೆ ಮೊರೆಹೋಗಬೇಕಾಗುತ್ತದೆ.

ಪ್ರಾಚೀನ ವಾಸ್ತುಗ್ರಂಥಗಳಾದ *ಮಾನಸಾರ, ಮಯಾಮತ, ವಿಶ್ವಕರ್ಮ* ವಾಸ್ತು ಹಾಗೂ ಶಿಲ್ಪರತ್ನ ಪುರಾಣಗಳಾದ *ಮತ್ಸ್ಯಪುರಾಣ, ಮಾರ್ಕಂಡೇಯ ಪುರಾಣ, ವಿಷ್ಣು ಪುರಾಣ,* ರಾಜನೀತಿ ಸಾಹಿತ್ಯ ಕೃತಿಗಳಾದ *ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರನೀತಿಸಾರ, ಬೃಹತ್ ಸಂಹಿತಾ* ಇತ್ಯಾದಿಗಳು ಕೋಟೆಗಳ ವರ್ಗೀಕರಣವನ್ನು ತಿಳಿಸುತ್ತವೆ. ಈ ವರ್ಗೀಕರಣದಲ್ಲಿ ಕೋಟೆಯ ಸ್ಥಳ, ಆಕಾರ ಮತ್ತು ರಚನೆಗೆ ಉಪಯೋಗಿಸುವ ವಸ್ತುಗಳನ್ನು ಆಧಾರವಾಗಿರಿಸಿಕೊಂಡಿದೆ. ಕೋಟೆಯಲ್ಲಿ ಎರಡು ವಿಧಗಳಿವೆ. ಒಂದು ಶಾಶ್ವತವಾದಂತಹ ಕೋಟೆಗಳು; ಇಲ್ಲಿ ಜನರ ರಕ್ಷಣೆಗೆ ಮುಖ್ಯ ಆದ್ಯತೆ. ಎರಡನೆಯದು ರಣರಂಗದ ಕೋಟೆ; ಇದು ಸೈನ್ಯವನ್ನು ವಶಪಡಿಸಿಕೊಳ್ಳುವುದು ಮತ್ತು ಯುದ್ಧ ಸ್ಥಳವನ್ನು ರಕ್ಷಿಸುವುದು.

ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಮೌರ್ಯ ಚಕ್ರವರ್ತಿ ಚಂದ್ರಗುಪ್ತನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಕೌಟಿಲ್ಯನು *ಅರ್ಥಶಾಸ್ತ್ರ* ಎಂಬ ರಾಜನೀತಿ ಗ್ರಂಥವನ್ನು ರಚಿಸಿದನು.[೨೦] ಈತನ ಅರ್ಥಶಾಸ್ತ್ರದ ಪ್ರಕಾರ ಒಂದು ರಾಜ್ಯಕ್ಕೆ ಪ್ರಮುಖವಾದ ಸಪ್ತಾಂಗಗಳಿವೆ. ಅವುಗಳೆಂದರೆ ರಾಜ, ಅಮಾತ್ಯ, ರಾಜಧಾನಿ, ಕೋಶ, ದುರ್ಗ, ಮಿತ್ರ ಮತ್ತು ಸೈನ್ಯ ಇವುಗಳಲ್ಲಿ ದುರ್ಗ (ಕೋಟೆ) ಮುಖ್ಯವಾದುದು. ರಾಜ್ಯದಲ್ಲಿ ಸೈನ್ಯ ಮತ್ತು ಕೋಶ ಭದ್ರತೆಯಿಂದ ಇರಬೇಕೆಂದರೆ ಅಲ್ಲಿ ಕೋಟೆ ಇರಬೇಕೆಂಬುದು ಕೌಟಿಲ್ಯನ ಅಭಿಪ್ರಾಯವಾಗಿದೆ. ಅಲ್ಲದೆ ಕೋಟೆಯು ರಾಜಧಾನಿ ಪಟ್ಟಣದಲ್ಲಿ ಇರದೆ, ಗಡಿ ಪ್ರದೇಶದಲ್ಲಿಯೂ ಇರಬೇಕೆಂದು ಸೂಚಿಸಿದ್ದಾನೆ. ಕೌಟಿಲ್ಯನು ಮುಂದುವರೆದು ಕೋಟೆಗೆ ಮೂರು ರೀತಿಯ ಕಂದಕಗಳಿರಬೇಕೆಂದು ತಿಳಿಸಿದ್ದಾನೆ. ಕೋಟೆಗೆ ಅಂಟಿಕೊಂಡು ಕೊತ್ತಳಗಳಿರಬೇಕು, ಅವುಗಳಿಗೆ ಮೆಟ್ಟಿಲುಗಳು ಇರಬೇಕು, ಎರಡು ಕೊತ್ತಳಗಳ ನಡುವಿನ ಅಂತರ ಮೂವತ್ತು ದಂಡಗಳು ಇರಬೇಕೆಂದು ತಿಳಿಸಿದ್ದಾನೆ. ಕೊತ್ತಳಕ್ಕೆ ಮೇಲ್ಚಾವಣಿ ಇರಬೇಕು. ಕೋಟೆಯೊಳಗೆ ರಥಬೀದಿ ಆನೆಬೀದಿ ದೇವಾಲಯಗಳು, ಉಗ್ರಾಣ ಮತ್ತು ಶಸ್ತ್ರಗಾರ ಮನೆ ಇರಬೇಕೆಂದು ಸೂಚಿಸಿದ್ದಾನೆ. ಕೌಟಿಲ್ಯನು ಈ ಕೆಳಗಿನಂತೆ ಸ್ಥಳದ ಆಧಾರದ ಮೇಲೆ ಕೋಟೆಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾನೆ.

೧. ಔದಕ : ನಡುಗಡ್ಡೆ ಅಥವಾ ಆಳವಾದ ಕಂದಕಗಳಂತೆ ಸುತ್ತಲೂ ಆಳವಾದ ನೀರಿನಿಂದ ಸುತ್ತುವರಿಯಲ್ಪಟ್ಟ ನೀರಿನ ಕೋಟೆ.

೨. ಪಾರ್ವತ : ಬೆಟ್ಟಗಳ ಮೇಲೆ ದೊಡ್ಡ ದೊಡ್ಡ ಕಲ್ಲು ಮತ್ತು ಬಂಡೆಗಳಿಂದ ಕಟ್ಟಿರುವುದು ಅಥವಾ ಭಯ ಹುಟ್ಟಿಸುವಂತೆ ಗುಹೆಯ ಮಾದರಿಯಲ್ಲಿರುವುದು.

೩. ಧಾನ್ವನ : ಮರಳು ಭೂಮಿಯಲ್ಲಿ ನೀರಿಲ್ಲದೆ ಒಣ ಮರಳು ಮತ್ತು ಒಣ ಮಣ್ಣನ್ನು ತುಂಬಿ ಕಟ್ಟಿದ ಕೋಟೆಗಳು.

೪. ವನ : ಅನೇಕ ಚಿಕ್ಕಪುಟ್ಟ ಪಕ್ಷಿಗಳಿಂದ ನೀರಿನಿಂದ ಕೂಡಿ ದಟ್ಟವಾಗಿರುವ ಅರಣ್ಯ ಕೋಟೆಗಳು.

ಈ ನಾಲ್ಕು ಪ್ರಕಾರದ ಕೋಟೆಗಳಲ್ಲಿ ಮೊದಲನೆ ಎರಡು ಅಂದರೆ ಔದಕ ಮತ್ತು ಪಾರ್ವತಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ಏಕೆಂದರೆ ಇವು ಅಧಿಕ ರಕ್ಷಣೆ ಕೊಡುತ್ತವೆ.[೩೨]

ಮತ್ತೆ ಕೌಟಿಲ್ಯನು ತಲವಿನ್ಯಾಸ ಅಥವಾ ಆಕಾರದಿಂದ ಕೋಟೆಯನ್ನು ಮೂರು ರೀತಿಯಲ್ಲಿ ವಿಭಜಿಸಿದ್ದಾನೆ.

ವೃತ್ತ : ವರ್ತುಲಾಕಾರ

ಧೀರ್ಘಾಚತುರಸ್ರ : ಆಯತಾಕಾರ

ಚತುರಸ್ರ : ಚೌಕಾಕಾರ

ಕಾಮಂದಕನು ತನ್ನ ನೀತಿಸಾರದಲ್ಲಿ ಸ್ಥಳದ ಆಧಾರದ ಮೇಲೆ ಕೋಟೆಗಳನ್ನು ವಿಂಗಡಿಸಿ ಚರ್ಚಿಸಿದ್ದಾನೆ.[೩೩]

ಔದಕ : ನೀರಿನಿಂದ ಆವೃತವಾಗಿರುವುದು

ಪಾರ್ವತ : ಗುಡ್ಡಗಳಿಂದ ಸುತ್ತುವರೆದಿದ್ದು

ಧಾನ್ವನ : ನೀರಿಲ್ಲದ ಒಣ ಭೂಮಿಯಿಂದ ಕೂಡಿದ್ದು

ವನ : ಅರಣ್ಯಗಳಿಂದ ಸುತ್ತುವರೆದಿದ್ದು

ಐರಿಣಿ ಹಳ್ಳ, ಮುಳ್ಳುಗಳು ಹಾಗೂ ಕಲ್ಲುಗಳಿಂದ ಸುತ್ತುವರೆಯಲ್ಪಟ್ಟಿದ್ದು, ಎಂಬುದಾಗಿ ಐದು ವಿಧಗಳಲ್ಲಿ ವಿಂಗಡಿಸಿದ್ದಾನೆ.

ಮನುಸ್ಮೃತಿಯಲ್ಲಿ ಕೋಟೆಗೆ ಉಪಯೋಗಿಸುವ ಸಾಮಗ್ರಿ ಹಾಗೂ ಸ್ಥಳದ ಆಧಾರದ ಮೇಲೆ ವಿಂಗಡಣೆಯಾದ ಆರು ವಿಧವಾದ ಕೋಟೆಗಳ ಬಗ್ಗೆ ಚರ್ಚಿಸಲಾಗಿದೆ.[೩೪]

ಧನದುರ್ಗಂ ಮಹಿದುರ್ಗಂ ಅಬ್‌ದುರ್ಗಂ ವಾಕ್ಷಮೇವ ವಾ |

ಗಿರಿದುರ್ಗಂ ನೃದುರ್ಗಂ ವಾಸಮಾಶ್ರಿತ್ಯ ವಸೇತ್ಪುರಮ್ || [೨೯]

ಧನು	:	ಕಾಡು ಹಾಗೂ ನೀರಿಲ್ಲದ ಪ್ರದೇಶದಿಂದ ಸುತ್ತುವರೆದ ಮರುಭೂಮಿ
ಮಹೀ	:	ಕಲ್ಲು ಅಥವಾ ಇಟ್ಟಿಗೆಯಿಂದ ನಿರ್ಮಿಸಿದ್ದು
ಜಲ	:	ಆಳವಾದ ನೀರಿನಿಂದ ಸುತ್ತುವರೆದಿರುವುದು
ವೃಕ್ಷ	:	ಎತ್ತರವಾದ ಮರಗಳು ಮುಳ್ಳುಗಿಡಗಳು ಬಳ್ಳಿಗಳು ಇತ್ಯಾದಿಗಳಿಂದ ಸುತ್ತುವರೆಯಲ್ಪಟ್ಟಿದ್ದು
ವರ	:	ಆನೆ, ಕುದುರೆ, ರಥ ಮತ್ತು ಕಾಲುದಳಗಳನ್ನೊಳಗೊಂಡ ಚತುರ್ಬಲಗಳಿಂದ ರಕ್ಷಿಸಲ್ಪಟ್ಟಿರುವುದು
ಗಿರಿ	:	ನೀರು ಮತ್ತು ಫಲ ನೀಡುವ ಮರಗಳಿಂದ ಕೂಡಿದ, ಹತ್ತಲು ಕಷ್ಟಕರವಾದ ಬೆಟ್ಟದ ಮೇಲಿನದು.

ಸರ್ವೇಣತು ಪ್ರಯತ್ನೇನ ಗಿರಿದುರ್ಗಂ ಸಮಾಶ್ರಯೇತ್ |

ಏಷ್ಣಾಂಹಿ ಬಾಹುಗುಣೇನ ಗಿರಿದುರ್ಗಂ ವಿಶೇಷತೆ || [೩೦]

ಮನು ಗಿರಿದುರ್ಗವನ್ನು ಅತ್ಯುತ್ತಮವೆಂದು ಪರಿಗಣಿಸಿದ್ದಾನೆ. ಏಕೆಂದರೆ ಅದನ್ನು ಬಹಳ ಶ್ರಮದಿಂದ ಮಾತ್ರ ವಶಪಡಿಸಿಕೊಳ್ಳಲು ಸಾಧ್ಯ.

ಸ್ಥಳದ ಆಧಾರದ ಮೇಲೆ ವಿಂಗಡಿಸಿದ ಒಂಬತ್ತು ವಿಧದ ಕೋಟೆಗಳನ್ನು ಶುಕ್ರ ನೀತಿಸಾರದಲ್ಲಿ ಚರ್ಚಿಸಲಾಗಿದೆ.[೩೧]

ಪರಿಖ	:	ಕೋಟೆಯ ಸುತ್ತಲೂ ಆಳವಾದ ಕಂದಕವಿರುವುದು
ಐರಿಣಿ	:	ಹಳ್ಳ, ಮುಳ್ಳು ಕಲ್ಲುಗಳಿಂದ ಸುತ್ತುವರೆಯಲ್ಪಟ್ಟಿದ್ದು
ಪರಿಘ	:	ಕಲ್ಲು ಇಟ್ಟಿಗೆ ಅಥವಾ ಮಣ್ಣಿನ ಎತ್ತರವಾದ ಗೋಡೆಗಳಿಂದ ಸಂರಕ್ಷಿಸಲ್ಪಟ್ಟಿರುವುದು
ವನ	:	ಸುತ್ತಲೂ ಮುಳ್ಳಿನಿಂದ, ಗುಂಪಾಗಿರುವ ಮರಗಳಿಂದ ಕೂಡಿರುವುದು
ಧನ್ವ	:	ನೀರಿಲ್ಲದ ಒಣಭೂಮಿ
ಜಲ	:	ಕೋಟೆ ಸುತ್ತಲೂ ನೀರಿನಿಂದ ಕೂಡಿರುವುದು
ಸೈನ್ಯ	:	ಶಾಸ್ತ್ರ ಸನ್ನದ್ಧವಾದ, ಸದೃಢರಾದ ಸೈನಿಕರಿಂದ ರಕ್ಷಿಸಲ್ಪಡುವ ಸ್ಥಳ
ಸಹಾಯ	:	ಬಂಧುಗಳು ಮತ್ತು ಸ್ನೇಹಿತರ ಮನೆಗಳಿಂದ ಆವೃತವಾಗಿರುವುದು

ಮೇಲೆ ಹೇಳಲಾದ ಪ್ರಕಾರಗಳಲ್ಲಿ ಯಾವ ಪ್ರಕಾರದ ಕೋಟೆ ಉತ್ತಮವೆಂದು ಈ ಕೆಳಗಿನಂತೆ ಪ್ರತಿಕ್ರಿಯಿಸುತ್ತಾನೆ.

ಪರಿಖಾ ದೈರಿಣಂ ಶ್ರೇಷ್ಟಂ ಪರಿಘಂತು ತತೋವನಮ್ |
ತತೋಧನಂ ಜನಂತಸ್ಮಾದ್ ಗಿರಿದುರ್ಗಂ ತತಃ ಸ್ಮೃತಮ್ ||

ಅಂದರೆ ಪರಿಖಗಿಂತ ಐರಿಣ ಉತ್ತಮವಾಗಿದೆ. ಇದಕ್ಕಿಂತ ಪರಿಘಾ ಉತ್ತಮವಾದ ಕೋಟೆ. ವನ ಪರಿಘಾಗಿಂತ ಹೆಚ್ಚು ರಕ್ಷಣೆಯನ್ನು ಕೊಡುತ್ತದೆ. ಸೈನಿಕ ಮತ್ತು ಸಹಾಯಕ ಕೋಟೆ ಬೇರೆ ಎಲ್ಲಾ ಕೋಟೆಗಳಿಗಿಂತಲೂ ಉತ್ತಮವಾದುದು.[೩೮]

ಸ್ಥಳದ ಆಧಾರದ ಮೇಲೆ ವಿಂಗಡಿಸಿದ ಮೂರು ವಿಧದ ಕೋಟೆಗಳನ್ನು *ಬೃಹತ್ ಸಂಹಿತೆಯ*ಲ್ಲಿ ಕಾಣಬಹುದು.[೩೯]

ಗಿರಿದುರ್ಗ	:	ಬೆಟ್ಟಗಳಿಂದ ಆವರಿಸಿದೆ
ಸಲಿಲದುರ್ಗ	:	ನೀರಿನಿಂದ ಸುತ್ತುವರಿಯಲ್ಪಟ್ಟಿದ್ದು
ಅತ್ರೀಕ್	:	ಅರಣ್ಯಗಳಿಂದ ಕೂಡಿದ್ದು

ಬೋಜನಯುಕ್ತಿ ಕಲ್ಪತರು ತಮ್ಮ ಗ್ರಂಥದಲ್ಲಿ ಕೋಟೆಯ ಎರಡು ಬಗೆಯನ್ನು ಚರ್ಚಿಸಿದ್ದಾರೆ.[೪೦]

ಕೃತ್ರಿಮ	:	ಅಸ್ವಾಭಾವಿಕ
ಅಕೃತ್ರಿಮ	:	ಸ್ವಾಭಾವಿಕ

ಸೋಮದೇವ ಸೂರಿಯು ತನ್ನ ನೀತಿವಾಕ್ಯಾಮೃತ ಗ್ರಂಥದಲ್ಲಿ ಎರಡು ವಿಧಗಳಲ್ಲಿ ವರ್ಗೀಕರಿಸಿದ್ದಾನೆ.[೪೧]

ಸ್ವಾಭಾವಿಕ	:	ಪ್ರಕೃತಿದತ್ತವಾದಂತಹ ಬೆಟ್ಟ, ನೀರಿನಿಂದ ಕೂಡಿರುವಂತಹದ್ದು
ಅಸ್ವಾಭಾವಿಕ	:	ಕೋಟೆಗೆ ಬೇಕಾದ ಎತ್ತರವಾದ ಗೋಡೆಗಳು ಆಯುಧಗಳು, ಸೈನಿಕರು ಬಾಗಿಲುಗಳಿಂದ ಕೂಡಿರುವುದು.

ದುರ್ಗಸಿಂಹನು ಹನ್ನೊಂದನೆ ಶತಮಾನದಲ್ಲಿ ಕಲ್ಯಾಣ ಚಾಳುಕ್ಯ ಅರಸ ಜಗದೇಕಮಲ್ಲ ಜಯಸಿಂಹನ ಸಂಧಿವಿಗ್ರಹಿಯಾಗಿದ್ದವನು. ಈತನು ಕನ್ನಡದಲ್ಲಿ ಪಂಚತಂತ್ರವನ್ನು ಬರೆದಿದ್ದಾನೆ. ಇದರಲ್ಲಿ ಸ್ಥಳಾಧಾರದ ಮೇಲೆ ವಿಂಗಡಿಸಿದ ಎಂಟು ಪ್ರಕಾರದ ಕೋಟೆಗಳ ವಿವರವಿದೆ.[೪೨]

ಜಲದುರ್ಗ

ಅಂತರ್ದ್ವೀಪ : ಎರಡು ನದಿಗಳ ಸಂಗಮದ ಮಧ್ಯದ ಕೋಟೆ. ದೊಡ್ಡ ಕೆರೆ, ಮುಳ್ಳುಗಳಿಂದ ತುಂಬಿದ ಸರೋವರಗಳಿಂದ ಸುತ್ತುವರೆದ ಕೋಟೆ

ಗಿರಿದುರ್ಗ

ಗುಹ್ಯ : ಬಹಳ ಎತ್ತರವಾದ ಬೆಟ್ಟದ ತುದಿಗಳು ನಾಲ್ಕು ಕಡೆಯಿದ್ದು, ಒಂದೇ ಬಾಗಿಲುಳ್ಳ ಕೋಟೆ.

ಪ್ರಸ್ತರ : ಎಲ್ಲಿಯೂ ಒಳ್ಳೆಯ ದಾರಿ ಇಲ್ಲದೆ, ಬೆಟ್ಟಗಳ ನಡುವೆ ನೀರು ಬೀಳುವ ಸ್ಥಳದಲ್ಲಿ ಮಾತ್ರ ಕಿರಿದಾದ ದಾರಿ ಇರುವುದು.

ಸ್ಥಲದುರ್ಗ

ಉದಕಸ್ತಂಭ : ಕೋಟೆಯ ಹೊರವಲಯದಲ್ಲಿ ನೀರು, ಗಿಡ, ಮರ, ಹುಲ್ಲು ಬಳ್ಳಿಗಳಿಲ್ಲದೆ, ಒಳಗೆ ಮಾತ್ರ ಹುಲ್ಲು ಕಡ್ಡಿ, ನೀರಿನಿಂದ ಸಮೃದ್ಧವಾಗಿರುವುದು.

ವೈರಿಣಿ : ದುರ್ಗದ ಹೊರಗೆ ಉಪ್ಪು ನೀರು ಕುಡಿಯಲು ಬಾರದ ನೀರು ಅಥವಾ ಸ್ವಲ್ಪ ನೀರು ಇರುವುದು.

ವನದುರ್ಗ

ಕರ್ದಮೋದಕ : ಸುತ್ತ ನೀರು ತುಂಬಿದ ಜಲಾಶಯವಿದ್ದು, ಹೆದರಿಸುವಷ್ಟು ಅತಿ ಶೀತಲವಾದ ಕೆಸರುಳ್ಳದ್ದು

ಸ್ತಂಬಗಹನ : ಅನೇಕ ಮರಗಳಿಂದ ಪರಿವೃತವಾಗಿ ಸುತ್ತಲೂ ಹುಲ್ಲು ಯಥೇಚ್ಛವಾಗಿ ಬೆಳೆದಿರುವುದು

ಹನ್ನೆರಡನೆಯ ಶತಮಾನದ ಮೂರನೆಯ ಚಾಳುಕ್ಯ ಸೋಮೇಶ್ವರನ ಮಾನಸೋಲ್ಲಾಸ ಅಥವಾ ಅಭಿಲಕ್ಷಿತಾರ್ಥ ಚಿಂತಾಮಣಿ ಮತ್ತು ಹದಿನೇಳನೆಯ ಶತಮಾನದ ಕೆಳದಿ ಬಸವರಾಜನ ಶಿವಾತತ್ವ ರತ್ನಾಕರದಲ್ಲಿ ಒಂಭತ್ತು ಪ್ರಕಾರದ ಕೋಟೆಗಳು ನಮೂದಿಸಲ್ಪಟ್ಟಿವೆ.[೪೩]

ಜಲದುರ್ಗ : ಆಳವಾದ ನೀರಿನಿಂದ ಆವರಿಸಲ್ಪಟ್ಟಿರುವುದು

ಗಿರಿದುರ್ಗ : ದುರ್ಗಮಯವಾದ ಬೆಟ್ಟದ ಮೇಲೆ ಕಟ್ಟಿರುವುದು

ಪಾಕ್ಷಣದುರ್ಗ : ಬಂಡೆಗಳಿಂದ ರಚಿಸಿರುವುದು

ಇಷ್ಟಕದುರ್ಗ : ಇಟ್ಟಿಗೆಗಳಿಂದ ಕಟ್ಟಿ ಸುಣ್ಣ ಬಣ್ಣ ಬಳಿದು ಅಗಲವಾದ ಮತ್ತು ಆಳವಾದ ಕಂದಕಗಳಿಂದ ಸುತ್ತುವರೆಯಲ್ಪಟ್ಟಿರುವುದು

ಮೃತ್ತಿಕಾಮಯಮ್	:	ಮಣ್ಣಿನಿಂದ ಕಟ್ಟಿರುವುದು
ವನದುರ್ಗ	:	ದಟ್ಟವಾದ ಮುಳ್ಳು ಮರಗಳಿಂದ ಆವರಿಸಿರುವುದು
ಮರದುರ್ಗ	:	ಕೋಟೆಯೊಳಗೆ ಸಾಕಷ್ಟು ನೀರನ್ನು ಸಂಗ್ರಹಿಸಿ ಮರುಭೂಮಿಯಲ್ಲಿ ಕಟ್ಟಿರುವುದು
ದಾರಮಯದುರ್ಗ	:	ಮರ ಮತ್ತು ಬಂಬುಗಳಿಂದ ತಯಾರಿಸಿರುವುದು
ನರದುರ್ಗ	:	ಸುತ್ತಲೂ ಶಸ್ತ್ರ ಸಜ್ಜಿತರಾದ ಯೋಧರನ್ನು ನಿಲ್ಲಿಸಿ ನಿರ್ಮಿಸಿರುವುದು. ಪುರಾಣಗಳಲ್ಲಿಯೂ ಸಹ ಅನೇಕ ಪ್ರಕಾರದ ಕೋಟೆಗಳ ಪ್ರಸ್ತಾಪ ಮಾಡಿದ್ದಾನೆ.

ವಾಯು ಪುರಾಣದಲ್ಲಿ ನಾಲ್ಕು ಪ್ರಕಾರದ ಕೋಟೆಗಳ ವಿಂಗಡಣೆ ಇದೆ.[೪೪] ಮತ್ಸ್ಯ ಪುರಾಣದಲ್ಲಿ ಆರು ಪ್ರಕಾರದ ಕೋಟೆಗಳ ಪ್ರಸ್ತಾಪವಿದೆ.[೪೫]

ಧನುದುರ್ಗ	:	ಕಾಡು ಮತ್ತು ನೀರಿಲ್ಲದ ಪ್ರದೇಶದಿಂದ ಸುತ್ತುವರೆದ ಮರಳುಭೂಮಿ
ಮಹಿದುರ್ಗ	:	ಕಲ್ಲು ಹಾಗೂ ಇಟ್ಟಿಗೆಯಿಂದ ಕಟ್ಟಿರುವುದು
ನರದುರ್ಗ	:	ಆನೆ, ಕುದುರೆ, ರಥ ಹಾಗೂ ಕಾಲುದಳಗಳನ್ನೊಳಗೊಂಡ ರಕ್ಷಣಾ ಸ್ಥಳ
ವೃಕ್ಷದುರ್ಗ	:	ಎತ್ತರವಾದ ಮರಗಳು, ಮರಗಿಡಗಳು ಇತ್ಯಾದಿ ಸುತ್ತುವರೆದಿದ್ದು
ಜಲದುರ್ಗ	:	ನೀರಿನಿಂದ ಆವರಿಸಿರುವುದು
ಗಿರಿದುರ್ಗ	:	ಬೆಟ್ಟಗಳಿಂದ ಆವರಿಸಿರುವುದು

ಮಹಾಭಾರತದ ಶಾಂತಿಪರ್ವ, ವಿಷ್ಣು ಧರ್ಮೋತ್ತರ ಪುರಾಣ ವಿಷ್ಣು ಧರ್ಮಸೂತ್ರ ಮುಂತಾದವುಗಳಲ್ಲಿ ಆರು ಬಗೆಯ ಕೋಟೆಗಳ ಉಲ್ಲೇಖಗಳಿವೆ.[೪೬] ಭಗವತ ಪುರಾಣ, ಶಸ್ತ್ರದುರ್ಗದ ಬಗ್ಗೆ ತಿಳಿಸುತ್ತದೆ. ಇದರೊಂದಿಗೆ ಜಲ ಅಗ್ನಿ ಮತ್ತು ಅನಿಲದುರ್ಗಗಳನ್ನು ಹೆಸರಿಸುತ್ತದೆ.[೪೭] ನರದುರ್ಗವೇ ಅತ್ಯುತ್ತಮವೆಂದು ಮಹಾಭಾರತ ತಿಳಿಸುತ್ತದೆ.[೪೮]

ಮಾನಸಾರ ಗ್ರಂಥದಲ್ಲಿ ಗ್ರಾಮ ಮತ್ತು ನಗರ ವಿನ್ಯಾಸಗಳನ್ನು ಎಂಟು ಮಾದರಿಯಲ್ಲಿ ವಿಂಗಡಿಸಲಾಗಿದೆ. ಪಟ್ಟಣ ಮತ್ತು ಕೋಟೆ ಎಂಬುದು ಇಲ್ಲಿ ಒಂದೇ ಆಗಿದೆ. ಎರಡರಲ್ಲೂ ವ್ಯತ್ಯಾಸ ಕಂಡುಬರುವುದಿಲ್ಲ.[೪೯]

ದಂಡಕ	:	ಪಟ್ಟಣದ ನಾಲ್ಕು ಮೂಲೆಗೆ ಗೋಡೆಗಳಿರಬೇಕು. ಈಶಾನ್ಯಕ್ಕೆ ಶಿವ ದೇವಾಲಯ ಉತ್ತರಕ್ಕೆ ಚಾಮುಂಡಿ ಇರಬೇಕು.
ಸರ್ವತೋಬದ್ರ	:	ಚತುರ್ಮುಖ ಆಕಾರದಲ್ಲಿದ್ದು ಸುತ್ತಲೂ ಕಂದಕ ಮತ್ತು ನಾಲ್ಕು ದೊಡ್ಡ ಹಾಗೂ ಚಿಕ್ಕ ಬಾಗಿಲುಗಳು ಮೂಲೆಯಲ್ಲಿರಬೇಕು.
ಸಂದ್ಯವರ್ತ	:	ದೀರ್ಘ ಚತುಷ್ಕೋಣವಾಗಿದ್ದು ಒಳಗೆ ನಾಲ್ಕು ಭಾಗಗಳನ್ನಾಗಿ ಮಾಡಿ ಪ್ರತಿಯೊಂದಕ್ಕೂ ಮೂರರಿಂದ ಏಳು ಬೀದಿಗಳು ಇರುತ್ತಿದ್ದವು.
ಪದ್ಮಕ	:	ಕೋಟೆಗೆ ಗೋಡೆ, ಕಂದಕ ಮತ್ತು ಇದಕ್ಕೆ ನಾಲ್ಕು ಮೂರ್ತಿಗಳು ಎಂಟು ಹನ್ನೆರಡು ಅಥವಾ ಹದಿನಾರು ಮುಖಗಳು ಇದ್ದು ನೋಡಿದರೆ ಚೌಕಾಕಾರ ವೃತ್ತಾಕಾರದಲ್ಲಿ ಕಾಣುವುದು.
ಸ್ವಸ್ತಿಕ	:	ಕಂದಕ, ಗೋಡೆ, ಎರಡೆರಡು ಬಾಗಿಲುಗಳನ್ನು ಒಳಗೊಂಡಿದೆ.
ಪ್ರಸ್ತರ	:	ಚೌಕ ಅಥವಾ ಆಯತಾಕಾರ ಇರಬೇಕು. ಬದಲಾಗಿ ವೃತ್ತಾಕಾರದಲ್ಲಿ ಇರಬಾರದು. ಇಲ್ಲಿ ನಾಲ್ಕು ಮಧ್ಯದ ಬಾಗಿಲುಗಳು ಇರುತ್ತವೆ.
ಕರಮುಖ	:	ಇದು ಅರ್ಧವೃತ್ತಾಕಾರದಲ್ಲಿರುವುದು
ಚತುರ್ಮುಖ	:	ನಾಲ್ಕು ಮುಖದ ಬಾಗಿಲುಗಳು ಅವು ಚೌಕ ಅಥವಾ ಆಯತಾಕಾರದಲ್ಲಿರಬಹುದು.

ಕಾರ್ಯ ಸ್ವರೂಪ ಅಥವಾ ಊರುಗಳನ್ನು ಆಧಾರವಾಗಿಟ್ಟುಕೊಂಡು ಮಾನಾಸಾರ ಗ್ರಂಥದಲ್ಲಿ ಪುನಃ ಎಂಟು ವಿಧದ ಕೋಟೆಗಳನ್ನು ಹೆಸರಿಸಿದೆ[೫೦] ಅವು ಕೆಳಗಿನಂತಿವೆ.

ಶಿರ	:	ರಾಜನಬೀಡು
ಸ್ಥಾನೀಯ	:	ರಾಜಧಾನಿ
ದ್ರೋಣಕ	:	ನೀರಿನ ಸಮೀಪ ಇರುವುದು
ವಾಹಿನೀ	:	ಮುಖ ಯುದ್ಧಭೂಮಿಯಿಂದ ದೂರ ಇರುವ ಸೈನ್ಯ ನೆಲೆ
ಸಂವಿದ್ದ	:	ಜಯವನ್ನು ಕೊಡುವುದು
ಕೋಲಕ	:	ಪರ್ವತಮಯ ಪ್ರದೇಶ, ದುರ್ಗಮವಾದುದು
ನಿಗಮ	:	ಕಾವಲುಗಾಗಿ ನಿರ್ಮಿಸಿರುವುದು
ಸ್ಕಂದಾವರ	:	ಸೈನ್ಯದ ಬೀಡು.

ಇದೇ ಗ್ರಂಥದಲ್ಲಿ ಮುಂದೆ ಸೈನಿಕ ವಾಸ್ತು ದೃಷ್ಟಿಯಿಂದ ಚರ್ಚಿಸಲ್ಪಟ್ಟ ಏಳು ಪ್ರಕಾರದ ಕೋಟೆಗಳ ಪ್ರಸ್ತಾಪವಿದೆ.[೩೧]

ಗಿರಿದುರ್ಗ	:	ಬೆಟ್ಟದ ಮೇಲಿರುವುದು
ವನದುರ್ಗ	:	ಅರಣ್ಯದಲ್ಲಿರುವುದು
ಜಲದುರ್ಗ	:	ನೀರಿನ ಮಧ್ಯದಲ್ಲಿರುವುದು
ಪಂಕದುರ್ಗ	:	ಮಣ್ಣಿನ ದುರ್ಗ
ರಥದುರ್ಗ	:	ಯುದ್ಧಭೂಮಿಯಲ್ಲಿ ರಥಗಳು ಸುತ್ತುವರೆದಿರುವುದು
ದೇವದುರ್ಗ	:	ಮಂತ್ರಗಳ ಮೂಲಕ ದೇವರು ರಕ್ಷಿಸುವ ದುರ್ಗ
ಮಿಶ್ರದುರ್ಗ	:	ಮೇಲಿನ ಒಂದಕ್ಕಿಂತ ಹೆಚ್ಚು ಅಂಶಗಳನ್ನು ಒಳಗೊಂಡ ಕೋಟೆ.

ಪಟ್ಟಣವನ್ನು ಆಧಾರವಾಗಿಟ್ಟುಕೊಂಡು ಹದಿನಾಲ್ಕು ಪ್ರಕಾರದ ಕೋಟೆಗಳನ್ನು ಮಯಾಮತ ಗ್ರಂಥವು ಹೆಸರಿಸುತ್ತದೆ.[೩೨] ಗ್ರಾಮ, ಖೇಟಕ, ಕರ್ವಕ, ದುರ್ಗ, ನಗರ, ರಾಜಧಾನಿ, ಪಟ್ಟಣ, ದ್ರೋಣಕ, ಶಿಖಿರ, ಸ್ಕಂದವರ ಸ್ಥಾನೀಯ, ವಿಹಂಬಿಕಾ ನಿಗಮ ಮತ್ತು ಸಕಾನಗರ. ಇದೇ ಗ್ರಂಥವು ಆಕಾರದ ಆಧಾರದ ಮೇಲೆ ಐದು ವಿಧ ಕೋಟೆಗಳನ್ನು ವಿಂಗಡಿಸಿದೆ.[೩೩] ಅವುಗಳೆಂದರೆ ಚತುರಸ್ರ, ದೀರ್ಘ ಚತುರಸ್ರ, ವೃತ್ತಾಯತ ಮತ್ತು ಗೋಲ ವೃತ್ತಗಳಾಗಿವೆ. ಮುಂದೆ ಗಾತ್ರದ ಆಧಾರದ ಮೇಲೆ ಮೂರು ವಿಧದ ಕೋಟೆಗಳನ್ನು ಹೆಸರಿಸಿದೆ. ಚಿಕ್ಕದು : ೬೦೪ (ದಂಡ ಅಳತೆಯಲ್ಲಿ) ಮಧ್ಯಮ : ೭೦೪ (ದಂಡ ಅಳತೆಯಲ್ಲಿ) ದೊಡ್ಡದು : ೭೬೮ (ದಂಡ ಅಳತೆಯಲ್ಲಿ)

ವಿಶ್ವಕರ್ಮ ವಾಸ್ತು ಶಾಸ್ತ್ರವು ಕೋಟೆಯ ಪ್ರಾದೇಶಿಕತೆ, ಅದರ ದ್ವಾರಗಳು ಹಾಗೂ ತಾಂತ್ರಿಕತೆಯ ಆಧಾರದ ಮೇಲೆ ಕೋಟೆಯನ್ನು ಹನ್ನೆರಡು ವಿಧಗಳಲ್ಲಿ ವಿಂಗಡಿಸುತ್ತದೆ.[೩೪]

ಪ್ರಾದೇಶಿಕತೆ ಆಧಾರ

ಗಿರಿದುರ್ಗ	:	ಬೆಟ್ಟದ ಮೇಲಿರುವುದು. ಇದರಲ್ಲಿ ಮೂರು ವಿಧಗಳಿವೆ. ಗಿರಿಸನು, ಗಿರಿಮರ್ಧ್ಯ ಮತ್ತು ಗಿರಿಮರ್ದನಿ
ವನದುರ್ಗ	:	ಅರಣ್ಯದಲ್ಲಿರುವುದು. ಇದರಲ್ಲಿ ಮೂರು ಬಗೆಗಳಿವೆ. ಊರ್ಧ್ವ, ಭೂದುರ್ಗ ಮತ್ತು ಅಂತಸ್ತ
ಜಲದುರ್ಗ	:	ಸುತ್ತಲೂ ನೀರಿನಿಂದ ಕೂಡಿರುವುದು
ಐರಣಿ	:	ಸುತ್ತಲೂ ಮರಳಿನಿಂದ ಕೂಡಿರುವುದು

ದೈವತ : ಪ್ರಕೃತಿದತ್ತವಾಗಿ ಕಣಿವೆ, ಕಂದಕಗಳಿಂದ ಕೂಡಿರುವುದು

ಪಾರ್ವತ : ಐದು ಗಿರಿದುರ್ಗದ ಶೈಲಿಯಲ್ಲಿರುವುದು

ದ್ವಾರದ ಆಧಾರ

ಏಕ ಮುಖ

ದ್ವಿಮುಖ

ಚತುರ್ಮುಖಗಳು

ತಾಂತ್ರಿಕತೆ ಆಧಾರ

ಪ್ರಭುದುರ್ಗ : ಬೆಟ್ಟದ ಇಳಿಜಾರಿನಲ್ಲಿ ಕಟ್ಟಬೇಕು. ಸುಲಭವಾಗಿ ಯಾರೂ ಹತ್ತಿರಕ್ಕೆ ಹೋಗಕೂಡದು. ಸುತ್ತಲೂ ಆಳವಾದ ಕಂದಕ ಇದ್ದು, ಇಲ್ಲಿ ಒಂದೇ ಒಂದು ಮುಖ್ಯಬಾಗಿಲು ಮತ್ತು ಹನ್ನೆರಡು ಗೋಡೆಗಳು ಇದ್ದು, ಒಳಗೆ ಕಾವಲು ಗೋಪುರ ಕೊತ್ತಳಗಳನ್ನು ಒಳಗೊಂಡಿರಬೇಕು. ಇದು ನಾಲ್ಕು ಮುಖಗಳನ್ನು ಹೊಂದಿರಬೇಕು.

ಯುದ್ಧಮಾರ್ಗ : ಸುರಕ್ಷಿತವಾದಂತ ಸ್ಥಳದಲ್ಲಿ ಶತ್ರುವಿನ ಮೇಲೆ ದಾಳಿ ಮಾಡುವುದು. ಈ ಸ್ಥಳವು ಆರು ಅಥವಾ ಎಂಟು ಮೂಲೆಯಲ್ಲಿರುವುದು ಸೂಕ್ತವಾಗಿರುವುದು.

ಶಿಲ್ಪರತ್ನ ವಾಸ್ತು ಗ್ರಂಥದಲ್ಲಿ ಆಕಾರ ಮತ್ತು ಸ್ಥಳದ ಆಧಾರದ ಮೇಲೆ ಕೋಟೆಗಳನ್ನು ವಿಂಗಡಿಸಿದೆ. ಇಂಥ ಹತ್ತು ಪ್ರಕಾರಗಳನ್ನು ನಾವಿಲ್ಲಿ ಕಾಣಬಹುದು.[೫೫] ಅವುಗಳೆಂದರೆ ಗಿರದುರ್ಗ, ಅರಣ್ಯದುರ್ಗ, ಜಲದುರ್ಗ, ದೈವಿಕದುರ್ಗ, ಧಾನ್ವ (ನೀರಿಲ್ಲದ ಪ್ರದೇಶ), ಕೃತ್ತಿಮದುರ್ಗ, ತ್ರಿಕೋನಾಕಾರ, ಚೌಕಾಕಾರ, ವೃತ್ತಾಕಾರ ಮತ್ತು ಆಯತಾಕಾರ ಎಂದಿದೆ.[೫೬]

*ಶೈವತಂತ್ರ*ದ ಭಾಗವಾದ "ಸಾಮ್ರಾಜ್ಯಲಕ್ಷ್ಮಿಪೀಠಿಕಾ"ದಲ್ಲಿ ಎಂಟು ಪ್ರಕಾರದ ಕೋಟೆಗಳು ನಮೂದಿಸಲ್ಪಟ್ಟಿವೆ.[೫೭] ಅವುಗಳೆಂದರೆ ಗಿರಿದುರ್ಗ, ವನದುರ್ಗ, ಗಹ್ವರದುರ್ಗ, ಜಲದುರ್ಗ, ಕರ್ದಮದುರ್ಗ, ಮಿಶ್ರದುರ್ಗ, ನರದುರ್ಗ ಮತ್ತು ಕಾಷ್ಟದುರ್ಗಗಳಾಗಿವೆ.

ಎತ್ತರವಾದ ಬೆಟ್ಟದ ಮೇಲೆ, ಅಗಲವಾದ ಅಗಮ್ಯವಾದ ಅವ್ಯಾಹತವಾಗಿ ನೀರಿನಿಂದ ಕೂಡಿದ, ಕಡಿದಾದ ಬಂಡೆಗಳನ್ನು ಹೊಂದಿದ ಮತ್ತು ಇಳಕಲಾದ, ಮೇಲೆ ಮತ್ತು ಕೆಳಗೆ ಅನೇಕ ಪ್ರಾಕಾರಗಳಿಂದ ಸುತ್ತುವರೆಯಲ್ಪಟ್ಟಿರುವ

ಸುಲಭವಾಗಿ ಹತ್ತಲು ಅಸಾಧ್ಯವಾಗಿರುವ ಪಟ್ಟಣವನ್ನು ಗಿರಿದುರ್ಗ ಎಂದು ಹೇಳುತ್ತಾರೆ. ಗಿರಿದುರ್ಗದಲ್ಲಿ ಎಂಟು ಪ್ರಕಾರಗಳಿವೆ. ಅವುಗಳೆಂದರೆ

ಭದ್ರಮ್ : ಎತ್ತರವಾದ ವೃತ್ತಾಕಾರದ ಹೊರ ಮೇಲ್ಮೈ ತಳಕಿನಿಂದ ಕೂಡಿದ ಸಾಕಷ್ಟು ಗುಹೆಗಳು ಮತ್ತು ಪಥಿಕಾಶ್ರಮಗಳನ್ನು ಹೊಂದಿದ್ದು ಸಂಪೂರ್ಣ ನೀರಿದ್ದು ಒಂದೇ ಒಂದು ಬಂಡೆಯ ಮೇಲೆ ಕಟ್ಟಲ್ಪಟ್ಟಿರುತ್ತದೆ.

ಅತಿಭದ್ರಮ್ : ನೆಲದಿಂದ ಮೇಲಿನವರೆಗೂ ವರ್ಗಾಕಾರದಲ್ಲಿದ್ದು, ಅತಿ ಎತ್ತರವಾದ ಅಗಲವಾದ ಗುಹೆಗಳು ಮತ್ತು ನೀರಿನಿಂದ ಆವರಿಸಲ್ಪಟ್ಟಿರುತ್ತದೆ.

ಚಂದ್ರ : ತಳದಲ್ಲಿ ದಂಡಾಕಾರದ ಅತಿ ಅಗಲವಾದ ತುದಿಚಂದ್ರನ ಆಕಾರದಲ್ಲಿದ್ದು, ಬಹಳವಾದ ನೀರಿನಿಂದ ಕೂಡಿದ್ದು, ದೇವತೆಗಳಿಗೂ ಸಹ ಅಗಮ್ಯವಾಗಿರುತ್ತದೆ.

ಅರ್ಧಚಂದ್ರ : ಅರ್ಧಚಂದ್ರಾಕಾರವಾಗಿದ್ದು, ಅತಿ ಹೆಚ್ಚು ಎತ್ತರವೂ ಅಲ್ಲದ ಅತಿ ಕಡಿಮೆಯೂ ಅಲ್ಲದ ಗುಹೆಗಳು ಪಥಿಕಾಶ್ರಮಗಳು ಮತ್ತು ನೀರಿನಿಂದ ಕೂಡಿರುತ್ತದೆ.

ನಾಭ : ತಳದಲ್ಲಿ ಸಂಕೀರ್ಣವಾಗಿದ್ದು, ತುದಿಯಲ್ಲಿ ಅಗಲವಾಗಿದ್ದು ಕ್ರಮವಾಗಿ ಹೆಚ್ಚುತ್ತಿದ್ದು ಕಮಲದ ಬೀಜದ ಸಿಂಬಿಯ ಆಕಾರದಲ್ಲಿರುತ್ತದೆ.

ಸುನಾಭ : ತಳದಲ್ಲಿ ಅಗಲವಾಗಿದ್ದು, ಮೇಲೆ ಹೋಗುತ್ತಾ ಚಿಕ್ಕದಾಗಿ ತುದಿಯಲ್ಲಿ ಕಿರಿದಾಗಿರುತ್ತದೆ.

ರುಚಿರಮ್ : ಸೋಪಾನ ಮಾರ್ಗದ ಮೆಟ್ಟಿಲುಗಳ ಉದ್ದ ಮತ್ತು ಅಗಲಗಳು ಕ್ರಮವಾಗಿ ಅಗಲವಾಗುತ್ತಿದ್ದು, ಉಪ್ಪರಿಗೆಯಂತಿರುತ್ತದೆ ಮತ್ತು ಹೆಚ್ಚು ನೀರಿನಿಂದ ಕೂಡಿರುತ್ತದೆ.

ವರ್ಧಮಾನಮ್ : ಮೃದಂಗ ಅಥವಾ ಮದ್ದಲೆಯ ಆಕಾರದಲ್ಲಿರುತ್ತದೆ.

ಇದೇ ರೀತಿ "ಸಾಮ್ರಾಜ್ಯಲಕ್ಷ್ಮಿ ಪೀಠಿಕಾ" ವನದುರ್ಗ ಹಾಗೂ ಗಹ್ವರ ದುರ್ಗಗಳನ್ನು ವರ್ಣಿಸಿದೆ. ವನದುರ್ಗವೆಂದರೆ ದಟ್ಟವಾದ ಮುಳ್ಳುಮರಗಳು ಪೊದೆಗಳು ಮತ್ತು ಬಳ್ಳಿಗಳಿಂದ ಅರಣ್ಯದಲ್ಲಿ ಕಟ್ಟಿರುವ ಕೋಟೆ. ರಹಸ್ಯ ಮಾರ್ಗಗಳು ಅಗಮ್ಯ ಪ್ರದೇಶಗಳು ಸೂರ್ಯನ ಕಿರಣಗಳೂ ಸಹ ಅಲ್ಲಿ ಪ್ರವೇಶಿಸಲಾರವು. ಸಿಂಹ ಮುಂತಾದ ವನ್ಯ ಪ್ರಾಣಿಗಳು ವಾಸಿಸುತ್ತಿದ್ದು ಭಯೋತ್ಪಾದಕವಾಗಿರುವಂತಹ ಕೋಟೆಗಳು. ಪುಲಿಂದ, ಪುಲ್ಕಸ, ಮ್ಲೇಚ್ಛ, ಶಬರ ಮುಂತಾದ ಪಂಗಡಗಳವರಿಂದ ಕಟ್ಟಲ್ಪಟ್ಟಿತ್ತು. ಸುತ್ತಲೂ ಅತಿ ಆಳವಾದ ಸಂಪೂರ್ಣ ನೀರಿನ ದೊಡ್ಡ ಸರೋವರಗಳು ಇರುತ್ತಿದ್ದವು.

ಗಹ್ವರದುರ್ಗ ನಗರವನ್ನು ರಕ್ಷಿಸುತ್ತದೆ. ಇದು ಸಮತಟ್ಟಲ್ಲದ; ಕೇವಲ ಕಲ್ಲು ಬಂಡೆಗಳೇ ಇರುವ ಭೂಮಿಯ ಮೇಲೆ ಕಟ್ಟಲ್ಪಟ್ಟಿರುತ್ತದೆ. ಗವಿ ಮತ್ತು ಗುಹೆಗಳಂತಿರುತ್ತದೆ. ಸುತ್ತಲೂ ಎಲ್ಲಾ ಕಡೆ ದೊಡ್ಡ ಮತ್ತು ಚಿಕ್ಕ ಕಲ್ಲುಗಳಿರುತ್ತವೆ. ಹತ್ತಿರದಲ್ಲಿ ವಾಸ ಮಾಡುವವರಿಗೆ ಅದು ಅಗೋಚರವಾಗಿರುತ್ತದೆ. ಸಾಕಷ್ಟು ಮರ, ಹುಲ್ಲು ಮತ್ತು ನೀರು ಇರುತ್ತದೆ. ನೀರಿನ ಮಧ್ಯೆ ದೀಪದಂತೆ ಜಲದುರ್ಗ ಕಟ್ಟಲ್ಪಟ್ಟಿರುತ್ತದೆ. ಸುತ್ತಲೂ ಕೆಸರು ತುಂಬಿದ್ದು, ಜಾರುವ ಕೆಸರಿನ ಮಧ್ಯೆ ಮುಚ್ಚಿ ಹೋಗಿರುವ ಕೋಟೆ ಪಂಕದುರ್ಗ. ಮಿಶ್ರದುರ್ಗ ಬೆಟ್ಟದ ಮೇಲೆ ಕಟ್ಟಲ್ಪಟ್ಟಿರುತ್ತದೆ; ಅಥವಾ ಕಾಡಿನಲ್ಲಿ ಮತ್ತು ಸುತ್ತಲೂ ಎಲ್ಲಾ ಕಡೆ ಜವಳು ಭೂಮಿಯಿದ್ದರೆ ಅದಕ್ಕ ಮಿಶ್ರದುರ್ಗ ಎಂದು ಕರೆಯುತ್ತಾರೆ. ನರದುರ್ಗವು ಸುತ್ತಲೂ ವಿವಿಧ ಪ್ರಕಾರದ ಶಸ್ತ್ರಗಳಿಂದ ಸುಸಜ್ಜಿತರಾದ ಸೈನಿಕ ಯೋಧರಿಂದ ರಕ್ಷಿಸಲ್ಪಡುತ್ತದೆ. ಕೋಷ್ಠದುರ್ಗ ಎತ್ತರವಾದ ಪ್ರಾಕಾರಗಳನ್ನು ಹೊಂದಿರುತ್ತದೆ. ಸುತ್ತಲೂ ಸುರಂಗಗಳು ಅನೇಕ ರೀತಿಯ ಪದಾರ್ಥಗಳು, ಆಯುಧಗಳು, ಕಟ್ಟಿಗೆಗಳು, ನೀರು ಮುಂತಾದವುಗಳಿರುತ್ತವೆ. ಆಕಾರ, ಪ್ರಕಾರಗಳ ಸಂಖ್ಯೆ ಮತ್ತು ಅವುಗಳ ಉದ್ದ ಅಗಲಗಳಿಗನುಗುಣವಾಗಿ ವೇದಸ್ರ, ವರ್ತುಲ, ದೀರ್ಘವರ್ತುಲ,ಪಂಚಕೋಣ, ಷಟ್‌ಕೋಣ, ಅಷ್ಟಾಶ್ರ ಪದ್ಮಸನ್ನಿಭ ಎಂದು ಕೋಷ್ಠದುರ್ಗದ ಎಂಟು ಪ್ರಕಾರಗಳು ಇವೆ.

ಕನ್ನಡ ಶಾಸನಗಳು ಮೂರು ಬಗೆಯ ದುರ್ಗಗಳನ್ನು ಉಲ್ಲೇಖಿಸಿವೆ. ಗಿರಿದುರ್ಗ, ವನದುರ್ಗ ಮತ್ತು ಜಲದುರ್ಗ[೨೮] ಐಹೊಳೆ ಶಾಸನವು ಸ್ಥಲದುರ್ಗವನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೬೩೪ರ ಶಾಸನವು ಪುಲಿಕೇಶಿಯ ಸೇನಾ ಸಮುದ್ರವು ಸುತ್ತುವರೆದುದರಿಂದ ಸ್ಥಲದುರ್ಗವಾದ ಬನವಾಸಿಯು ಜಲದುರ್ಗವಾಯಿತ್ತೆಂದು ವರ್ಣಿಸುತ್ತದೆ. ಸಿರಸಂಗಿಯ ಕ್ರಿ.ಶ. ೧೧೬೮ರ ಶಾಸನವು ದೇವದುರ್ಗದ ವಿವರಣೆಯನ್ನು ನೀಡುತ್ತದೆ. ಮೂರುಕಡೆ ಪರ್ವತಗಳಿದ್ದು, ಒಂದು ಕಡೆ ಮಾತ್ರ ಬಯಲಿದ್ದರೆ ಅಂತಹ ಊರನ್ನು ಖರ್ವಡವೆಂದು ಕರೆಯುತ್ತಾರೆಂದೂ ಅದರಲ್ಲಿ ಬುಗ್ಗೆಯಿದ್ದರೆ ಅದನ್ನು ದೇವದುರ್ಗವೆನ್ನುತ್ತಾರೆಂದೂ ಅದು ತಿಳಿಸುತ್ತದೆ. ಬಾಗಳಿಯ ಕ್ರಿ.ಶ. ೧೧೬೦ರ ಶಾಸನವು ವೀರಪಾಂಡ್ಯನು ಗಿರಿದುರ್ಗಕ್ಕೆ ಶನಿಸ್ವರೂಪನಾಗಿದ್ದನು. ಅಚಣ ಕಾನ್ತಾರ (ವನ)ದುರ್ಗಕ್ಕೆ ಭೀಕರವಾದ ದಾವಾನಲ (ಕಾಡ್ಗಿಚ್ಚು) ಆಗಿದ್ದನು ಮತ್ತು ಅತಿ ಉದಾತ್ತ ಜಲದುರ್ಗಕ್ಕೆ ಔರ್ವ (ಸಮುದ್ರದೊಳಗಿನ ಬೆಂಕಿ)ಯಾಗಿದ್ದನೆಂದು ವರ್ಣಿಸುತ್ತದೆ.[೨೯] ವನದುರ್ಗವನ್ನು ಇಲ್ಲಿ ಕಾಂತಾರ ದುರ್ಗವೆಂದು ಕರೆಯಲಾಗಿದೆ.

ಶಾಸನಗಳು ಕೋಟೆಯ ಕೆಲವು ಭಾಗಗಳನ್ನು ಸಹ ಉಲ್ಲೇಖಿಸುತ್ತವೆ. ವಿಜಯನಗರ ಕೋಟೆಯ ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳೆಂದು ವರ್ಗೀಕರಿಸಿರುವುದು ಶಾಸನಗಳಿಂದ ತಿಳಿಯುತ್ತದೆ. ಯುದ್ಧ ಸಮಯದಲ್ಲಿ ಗುರುತಿಸಲು ಅನುಕೂಲವಾಗುವಂತೆ ಈ ಬಾಗಿಲುಗಳಿಗೆ ಹೆಸರುಗಳನ್ನು ಇಡಲಾಗಿದೆ.

ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಕೋಟೆಗಳು ಸಹ ವಿವಿಧ ರೀತಿಯ ಆಕಾರ, ಗಾತ್ರ ಮತ್ತು ಆಯಕಟ್ಟಿನ ಸ್ಥಳಗಳನ್ನು ಹೊಂದಿರುವುದನ್ನು ನಾವು ನೋಡಬಹುದು. ಉಚ್ಚಂಗಿದುರ್ಗವು ಶ್ರೇಷ್ಠವಾದ ಗಿರಿದುರ್ಗವಾಗಿತ್ತೆಂದು

ಶಾಸನಗಳಿಂದ ತಿಳಿಯುತ್ತದೆ. ಹೊಯ್ಸಳ ಬಲ್ಲಾಳನು ಈ ಕೋಟೆಯನ್ನು ಜಯಿಸಿ ಗಿರಿದುರ್ಗ ಮಲ್ಲನೆಂಬ ಬಿರುದನ್ನು ಪಡೆದನೆಂದು ಇವು ತಿಳಿಸುತ್ತವೆ. ಗಡೇಕೋಟೆ, ಜರಿಮಲೆ, ವೀರನದುರ್ಗ, ಕರಡಿದುರ್ಗ, ಬಳ್ಳಾರಿ, ಕೆಂಚನಗುಡ್ಡ ಮತ್ತು ತಂಬ್ರಹಳ್ಳಿ ಕೋಟೆಗಳು ಗಿರಿದುರ್ಗಕ್ಕೆ ಉತ್ತಮ ನಿದರ್ಶನಗಳಾಗಿವೆ. ಹರಪನ ಹಳ್ಳಿ,ಕೃಷ್ಣಾನಗರ, ಕಂಪ್ಲಿ, ಸಿರುಗುಪ್ಪ ಮತ್ತು ಹಂಪಾಪಟ್ಟಣದ ಕೋಟೆಗಳು ಬಯಲು ದುರ್ಗಗಳಾಗಿವೆ. ಹಂಪಾಪಟ್ಟಣದ ಕೋಟೆಯನ್ನು ಪಂಕದುರ್ಗ (ಮಣ್ಣಿನ)ವೆಂತಲೂ ಕರೆಯಲಾಗಿದೆ. ಹೊಸಮಲೆದುರ್ಗವನ್ನು ಜಿ. ವರದರಾಜ್‌ರವರು 'ವನ'ದುರ್ಗವೆಂದು ಕರೆದಿದ್ದಾರೆ.[೬೦] ಹಂಪಿ ಕೋಟೆಯನ್ನು ಗಿರಿದುರ್ಗವೆಂದು ಎಸ್.ಕೆ.ಜೋಶಿಯವರು ಅಭಿಪ್ರಾಯಪಟ್ಟಿರುವುದು ಸರಿಯಾಗಿಯೇ ಇದೆ.[೬೧]

೨.೬ ಕೊತ್ತಳಗಳು (Bastions)

ಕೊತ್ತಳವೆಂದರೆ ಕೋಟೆಯ ಮೇಲ್ಭಾಗ ಕೋಟೆಯ ಮೇಲಿನ ಸೈನಿಕರು ನಿಂತು ಕಾದುವ ಎತ್ತರ ಪ್ರದೇಶವೆಂದು ಅರ್ಥಕೊಡುತ್ತದೆ. ಕೊತ್ತಳಕ್ಕೆ ಬುರುಜು, ಕೊತ್ತೆಲ, ಕೊತ್ತಲ ಮತ್ತು ಕಾವಲು ಗೋಪುರವೆಂತಲೂ ಕರೆಯುತ್ತಾರೆ. ಕೋಟೆ ಪದದೊಂದಿಗೆ ಕೊತ್ತಳವು ಸೇರಿಕೊಂಡಿದೆ. ಈ ಜಿಲ್ಲೆಯ ಪ್ರದೇಶದಲ್ಲಿ ಬಹುಪಾಲು ಗ್ರಾಮಗಳಲ್ಲಿ ಕೊತ್ತಳಗಳಿವೆ. ಈ ಕೊತ್ತಳಗಳನ್ನು ಗ್ರಾಮದ ರಕ್ಷಣೆಗಾಗಿ ನಿರ್ಮಿಸುತ್ತಿದ್ದರು. ಯುದ್ಧ ನಡೆಯುವ ಸನ್ನಿವೇಶ ಬಂದಾಗ ಇವು ಆಯಕಟ್ಟಿನ ರಚನೆಯಾಗಿದ್ದವು. ಎತ್ತರವಾದ ಸ್ಥಳದಲ್ಲಿ ನಿರ್ಮಿತವಾಗಿರುವುದರಿಂದ ಶತ್ರುವಿನ ವಿರುದ್ಧ ಸಹಜವಾಗಿಯೇ ಒದಗುವ ಪ್ರಕೃತಿ ರಕ್ಷಣೆ. ಸುತ್ತಲೂ ವ್ಯಾಪಿಸಿರುವ ತಗ್ಗು ಪ್ರದೇಶದ ಶತ್ರು ಸೇನೆಯ ಮೇಲೆ ಕೋಟೆಯೊಳಗಿನಿಂದಲೇ ಕಾದಾಡಬಹುದಾದ ಅನುಕೂಲಕರ ಪರಿಸ್ಥಿತಿ.

ಕೌಟಿಲ್ಯನು *ಅರ್ಥಶಾಸ್ತ್ರ*ದಲ್ಲಿ ಕೋಟೆಗೆ ಅಂಟಿಕೊಂಡು ಕೊತ್ತಳಗಳಿರಬೇಕು, ಅವುಗಳಿಗೆ ಮೆಟ್ಟಿಲುಗಳಿರ ಬೇಕು. ಎರಡು ಕೊತ್ತಳಗಳ ನಡುವಿನ ಅಂತರ ಮೂವತ್ತು ದಂಡಗಳು ಇರಬೇಕು, ಕೊತ್ತಳಕ್ಕೆ ಮೇಲೆ ಛಾವಣಿ ಹಾಕಿರಬೇಕೆಂದು ಹೇಳಿದ್ದಾನೆ.[೬೨]

ಕೃಷ್ಣದೇವರಾಯನ ದಿನಚರಿಯಲ್ಲಿ ಕೋಟೆಯ ಜೊತೆಗೆ ಕೊತ್ತಳಗಳನ್ನು ನಿರ್ಮಿಸಿ ಅದನ್ನು ನೋಡಿಕೊಳ್ಳಲು ಪಾರುಪತ್ಯಗಾರರೆಂಬ ಅಧಿಕಾರಿಗಳನ್ನು ನೇಮಕ ಮಾಡಿದುದು ಕಂಡುಬರುತ್ತದೆ.[೬೩] *ಬಸವ ಪುರಾಣ*ದಲ್ಲಿ ಭೀಮ ಕವಿಯು ಕೊತ್ತಳವನ್ನು ಉಲ್ಲೇಖಿಸುತ್ತಾನೆ.

ಇತ್ತರದೊಳುದ್ದಕ್ಕೂ ಕೋಂಟೆಯ
ಕೊತ್ತಳಂಗಳ ಸಂಧಿ ಸಂಧಿಯೊ

ಕೆತ್ತಿಸಿದ ನಟ್ಟಣೆಗಳಂ ಡೆಂಕಣೆಗಳಂತಹ

ಮುತ್ತಿಗೆಯೊಳಗಾಗದಂತಹ [೬೪]

ಮೋಹನ ತರಂಗಿಣಿಯುಲ್ಲಿ ಜಘನಗಳ ಕೊತ್ತಳ, ಕೊಬ್ಬಿದ ಕುಚಗಳ ಮುಗಿಲೆತ್ತರದ ಬುರುಜುಗಳನ್ನು ಸೂರ್ಯಕಾಂತ ಶಿಲೆಯಿಂದ ಮಾಡಿರುವುದಾಗಿ ಹಾಗೂ ಕೊತ್ತಳಗಳು ವಶಪಡಿಸಿಕೊಳ್ಳಲು ಹೊರಡುವ ವೈರಿಗಳ ಅಪ್ಪನಂತಿರುವವು[೬೫] ಎಂದು ವರ್ಣಿತವಾಗಿದೆ.

ಶಾಸನಗಳು ಸಹ ಕೊತ್ತಳಗಳನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೬೭೧ರ ಶಾಸನವು ಮಲಿಕ್ ಅಬ್ದುಲ್ ಮಹಮದನು ಹುಸೇನಿ ಬುರುಜನ್ನು ಕಟ್ಟಿಸಿದಂತೆ ಹೇಳುತ್ತದೆ.[೬೬] ಕ್ರಿ.ಶ. ೧೬೪೯ರ ಶಾಸನವು ಈ ಬುರುಜನ್ನು ಸಾಹೇಬ ಬುರುಜು ಎಂದು ಹೆಸರಿಸಿದೆ.[೬೭] ಹಂಪಿಯಲ್ಲಿ ಕಂಡುಬರುವ ಶಾಸನಗಳಲ್ಲಿ ಜಲಸೇನ ದೇವರ ಕೊತ್ತಳ,[೬೮] ಮತಂಗದೇವರ ಕೊತ್ತಳ,[೬೯] ಮಳಲ ವಿನಾಯಕ ಕೊತ್ತಳ,[೭೦] ಸ್ವಾಮಿ ದ್ರೋಹದ ಗಂಡನ ಕೊತ್ತಳ,[೭೧] ಪ್ರತಾಪ ಕೊತ್ತಳ,[೭೨] ಸಂಖರದೇವರ ಕೊತ್ತಳ[೭೩] ಮತ್ತು ಮೀಸರ ಗಂಡನ ಕೊತ್ತಳ[೭೪] ಇತ್ಯಾದಿಗಳ ಉಲ್ಲೇಖಗಳಿವೆ. ಕೋಟೆ ಗೋಡೆಯಿಂದ ಚೌಕಾಕಾರದಲ್ಲಿ ಮುಂದೆ ಚಾಚಿದ ಭಾಗವನ್ನು ಕೊತ್ತಳವೆಂದು ಕರೆದಿರುವುದಲ್ಲದೆ. ಕೋಟೆ ಗೋಡೆಯ ಪಕ್ಕದಲ್ಲಿಯೆ ನೈಸರ್ಗಿಕವಾಗಿ ಎತ್ತರವಾಗಿರುವ ಬೆಟ್ಟದ ಭಾಗವನ್ನು ಕೊತ್ತಳವೆಂದು ಉಲ್ಲೇಖಿಸಲಾಗಿದೆ. ಬಳ್ಳಾರಿ ಪ್ರದೇಶದಲ್ಲಿ ಕಂಡುಬರುವ ಎಲ್ಲಾ ಕೋಟೆಗಳಲ್ಲಿ ಹತ್ತಾರು ಕೊತ್ತಳಗಳನ್ನು ಆಯಾ ಅಧ್ಯಾಯಗಳಲ್ಲೇ ನೀಡಲಾಗಿದೆ. ಗ್ರಾಮಗಳಲ್ಲಿ ಪ್ರತ್ಯೇಕವಾಗಿ ಕಂಡುಬರುವ ಕೊತ್ತಳಗಳನ್ನು ಆಯಾ ತಾಲೂಕುಗಳಲ್ಲಿ ಕೊಡಲಾಗಿದೆ.

ಅಡಿ ಟಿಪ್ಪಣಿಗಳು

೧. Date, G.T. Art of War in Ancieent India, p. 487. London

೨. Straith, H. Treatise on Fortification and Artillery, p. 42

೩. ಬೆಟಗೇರಿ ಕೃಷ್ಣಶರ್ಮ. ೧೯೮೩. *ಕರ್ನಾಟಕ ಜನಜೀವನ,* ಪು. ೫೩. ಬೆಂಗಳೂರು : ವಿಶ್ವಕನ್ನಡ ಸಮ್ಮೇಳನ

೪. ದೇವೀರಪ್ಪ, ಎಚ್. (ಸಂ.), ೧೯೯೪. *ರಾಮಚರಿತ-೨,* ಪು. ೩೭ ಮತ್ತು ೫೨. ಮೈಸೂರು : ಮೈಸೂರು ವಿಶ್ವವಿದ್ಯಾಲಯ

೫. ರಾಧಾಕೃಷ್ಣಮೂರ್ತಿ. ೧೯೯೧. ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, *ಇತಿಹಾಸ ದರ್ಶನ-೬.* ಪು. ೧೫೭

೬. ಚನ್ನಬಸಪ್ಪ, ಎಸ್.ಪಾಟೀಲ. ೧೯೯೪. ಮಾತನಾಡುವ ಕೋಟೆಗಳು, *ದಿಕ್ಸೂಚಿ* (ಫೆಬ್ರುವರಿ), ಪು. ೩೦

೭. ಚನ್ನಬಸಪ್ಪ, ಎಸ್.ಪಾಟೀಲ. ೧೯೯೪. ಬನವಾಸಿ ಕೋಟೆ, *ದಿಕ್ಸೂಚಿ* (ಸೆಪ್ಟಂಬರ್), ಪು. ೩೪-೩೫

೮. ಜೋಶಿ, ಎಸ್.ಕೆ. ೨೦೦೦. ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, *ಸೂರ್ಯಕೀರ್ತಿ* (ಸಂ : ಕೃಷ್ಣಮೂರ್ತಿ ಪಿ.ವಿ ಮತ್ತು ಕೆ. ವಸಂತಲಕ್ಷ್ಮಿ), ಪು. ೧೪೮. ಬೆಂಗಳೂರು : ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ

೯. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧,* ಪು. ೪೬೩. ಹಂಪಿ : ಕನ್ನಡ ವಿಶ್ವವಿದ್ಯಾಲಯ

೧೦. *ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ,* ಪೂರ್ವೋಕ್ತ. ಪು. ೧೫೭-೧೬೦

೧೧. *ಆತ್ಮದಾರಾರ್ಥ ಲೋಕನಾಂ ಸಂಚಿತಾನಾಂತು ಗುಪ್ತಯೇ*
ನೃಪತಿಃ ಕಾರಯೇದ್ದುರ್ಗಂ ಪ್ರಕಾರದ್ವಾರ ಸಂಯುತಮ್,
(ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಪೂರ್ವೋಕ್ತ. ಪು. ೧೫೭)

೧೨. Rangarajan, L.N. (Ed.), 1987. *Kautilyas Arthashastra.* Pp. 3-4

೧೩. *ಏಕಂ ಶತಂ ಯೋದ್ಯಯಂತಿ ಪ್ರಕಾರ ಸ್ಥೋದ್ಯನುರ್ಧರಃ*
ಶತಂದಶ ಸಹಸ್ರಾಣಿ ತಸ್ಮಾದ್ದುರ್ಗಂ ವಿಧೀಯತೇಃ
(ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಪೂರ್ವೋಕ್ತ. ಪು. ೧೫೭)

೧೪. *ಪಂಚತಂತ್ರ ನಗಜಾನಂ ಸಹಸ್ರೇಣ ನಚ ಲಕ್ಷೇಣ ವಾಜಿನಾಮ್*
ತತ್ಕರ್ಮ ಸಾಧ್ಯತೇ ರಾಜಾಂ ದುರ್ಗೈಣ್ಯೆಕೇನ ಯದ್ರಣಿ
(ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಪೂರ್ವೋಕ್ತ. ಪು. ೧೫೮)

೧೫. *ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, ಪೂರ್ವೋಕ್ತ.* ಪು. ೧೪೬-೧೫೨

೧೬. ರಾಮಶೇಷನ್, ನೀ.ಕೃ. ೧೯೮೦. *ಕರ್ನಾಟಕದ ಕೋಟೆ-ಕೊತ್ತಳಗಳು,* ಪು. ೧೦. ಬೆಂಗಳೂರು : ಐ.ಬಿ.ಎಚ್. ಪ್ರಕಾಶನ

೧೭. ಮಲ್ಲೇಪುರಂ ಜಿ. ವೆಂಕಟೇಶ (ಸಂ.), ೧೯೯೮. *ಶಿವತತ್ವ ರತ್ನಾಕರ,* ಪುಟ. ೨೬೮-೬೯, ಹಂಪಿ : ಕನ್ನಡ ವಿಶ್ವವಿದ್ಯಾಲಯ

೧೮. ಕೋತಿನ ಎಸ್.ಎಸ್. (ಅನುವಾದ), ೧೯೮೪. *ಮೋಹನ ತರಂಗಿಣಿ,* ಪು. ೨೯೫, ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

೧೯. *ಅದೇ,* ಪು. ೩೫೦

೨೦. ಪರಮಶಿವಮೂರ್ತಿ, ಡಿ.ವಿ. ೧೯೯೯. *ಕನ್ನಡಶಾಸನ ಶಿಲ್ಪ,* ಪು. ೧೯೮. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨೧. *ಅದೇ,* ಪು. ೧೯೯

೨೨. *ಅದೇ,* ಪು. ೧೯೯

೨೩. *ಅದೇ,* ಪು. ೧೯೯

೨೪. *ಅದೇ,* ಪು. ೧೯೯

೨೫. ಅನವಟ್ಟಿ, ಸೊರಬ ತಾಲೂಕು. ಶಿವಮೊಗ್ಗ ಜಿಲ್ಲೆ

೨೬. ಬಳ್ಳಿಗಾವಿ, ಶಿಕಾರಿಪುರ ತಾಲೂಕು. ಶಿವಮೊಗ್ಗ ಜಿಲ್ಲೆ

೨೭. *ಕನ್ನಡ ಶಾಸನಶಿಲ್ಪ,* ಪೂರ್ವೋಕ್ತ. ಪು. ೨೦೦

೨೮. *ಗೃಹವಾಸ್ತು ದರ್ಪಣ,* ಪು. ೫೩. ಗದಗ : ಮೇ|| ಪಿ.ಸಿ. ಶಾಬಾದಿಮಠ ಬುಕ್ ಡಿಪೊ

೨೯. *ಅದೇ,* ಪು. ೫೩

೩೦. *ಅದೇ,* ಪು. ೨೯೫

೩೧. Kautilyas Arhtshastra, ಪೂರ್ವೋಕ್ತ. ಪು. ೧೮೪-೧೮೫

೩೨. *ಅದೇ,* ಪು. ೧೮೪-೧೮೫

೩೩. Ganapathi Shastri, T. (Ed.), *Nitisara of Kamandaka*

೩೪. Buhler, G. *Laws of Manu.* SBE Series, Pp.227-228

೩೫. *ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ,* ಪೂರ್ವೋಕ್ತ. ಪು. ೧೫೭-೧೬೦

೩೬. *ಅದೇ,* ಪು. ೧೬೧

೩೭. Sarkar, B.S. *Sukraniti Section IV*

೩೮. *ಅದೇ,* ಪು. ೧೭೪

೩೯. Subramanya Shastri, V. *Brihatsamhita,* p. 174

೪೦. ಸುಜಾತ ಮಲ್ಲನಗೌಡ. ೨೦೦೦. *ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳು : ಒಂದು ಅಧ್ಯಯನ,* ಪಿಎಚ್.ಡಿ. ಮಹಾಪ್ರಬಂಧ. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪೧. Somadeva Suri. *Nitivakyamritam,* Pp. 81-82

೪೨. ರಾಮಾನುಜ ಅಯ್ಯಂಗಾರ್. *ಪಂಚತಂತ್ರ.* ಪು. ೨೧೫-೧೬

೪೩. *ಶಿವತತ್ವ ರತ್ನಾಕರ - ೬,* ಪೂರ್ವೋಕ್ತ. ಪು. ೫೬-೬೦

೪೪. *ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ,* ಪೂರ್ವೋಕ್ತ. ಪು. ೧೫೭-೧೬೦

೪೫. *ಅದೇ,* ಪು. ೧೫೯

೪೬. *ಅದೇ,* ಪು. ೧೫೯

೪೭. *ಅದೇ,* ಪು. ೧೬೦

೪೮. *ಅದೇ,* ಪು. ೧೬೦

೪೯. Acharya, P.K. 1927. *Manasara - an Encyclopaedia of Hindu Architecture,* p. 53. Allahabad

೫೦. *ಅದೇ*, ಪು. ೭೩

೫೧. *ಅದೇ*, ಪು. ೭೫

೫೨. *ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು : ಒಂದು ಅಧ್ಯಯನ*, ಪೂರ್ವೋಕ್ತ. ಪು. ೪೩

೫೩. *ಅದೇ*, ಪು. ೪೯

೫೪. *ಅದೇ*, ಪು. ೪೩

೫೫. Rangachari, K. *Town Planning and House Building in Ancient India*, Pp. 813-23

೫೬. ಚಿದಾನಂದಮೂರ್ತಿ, ಎಂ. ೧೯೬೬. *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಪು. ೨೮೬-೮೭. ಮೈಸೂರು : ಮೈಸೂರು ವಿಶ್ವವಿದ್ಯಾಲಯ

೫೭. *ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ*, ಪೂರ್ವೋಕ್ತ. ಪು. ೧೬೦

೫೮. *EC. II.* 43

೫೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ಪೂರ್ವೋಕ್ತ. ಪು. ೬೨೬-೩೦

೬೦. ವರದರಾಜ್‌ರಾವ್, ಜಿ. ೧೯೮೫. *ಕಮ್ಮಟದುರ್ಗ*, ಪು. ೩೮. ಬೆಂಗಳೂರು : ಐಬಿಎಚ್ ಪ್ರಕಾಶನ

೬೧. *ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ*, ಪೂರ್ವೋಕ್ತ. ಪು. ೧೫೨

೬೨. Kautilyas Arthashastra, ಪೂರ್ವೋಕ್ತ. ಪು. ೧೮೪-೮೫

೬೩. ಸೀತಾರಾಮಯ್ಯ, ಎಂ.ವಿ. *ಕೃಷ್ಣದೇವರಾಯನ ದಿನಚರಿ*, ಪು. ೨೦-೨೧. ಬೆಂಗಳೂರು : ಬಿ.ಎಂ.ಶ್ರೀ. ಪ್ರತಿಷ್ಠಾನ

೬೪. *ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ*, ಪೂರ್ವೋಕ್ತ. ಪು. ೧೫-೨೦

೬೫. ಕೋತಿನ, ಎಸ್.ಎಸ್. (ಅನುವಾದ), ೧೯೮೪. *ಮೋಹನ ತರಂಗಿಣಿ*, ಪು. ೪೫. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

೬೬. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧*, ಪೂರ್ವೋಕ್ತ. ಪು. ೯೪

೬೭. *ಅದೇ*, ಪು. ೯೪

೬೮. *ಅದೇ*, ಪುಟ. ೮೬

೬೯. *ಅದೇ*, ಪುಟ. ೧೮೫

೭೦. *ಅದೇ*, ಪು. ೧೮೫

೭೧. *ಅದೇ*, ಪು. ೧೬೮

೭೨. *ಅದೇ*, ಪು. ೧೮೯

೭೩. *ಅದೇ*, ಪು. ೨೧೫

೭೪. *ಅದೇ*, ಪು. ೨೧೬

❑ ❑

೩

ಕೂಡ್ಲಿಗಿ ತಾಲೂಕಿನ ಕೋಟೆಗಳು

(Forts of Kudligi Taluk)

೩

ಕೂಡ್ಲಿಗಿ ತಾಲೂಕಿನ ಕೋಟೆಗಳು

(Forts of Kudligi Taluk)

ಕೂಡ್ಲಿಗಿಯು ಬಳ್ಳಾರಿಯ ಎಂಟು ತಾಲೂಕುಗಳಲ್ಲಿ ಒಂದು. ಇದು ಬಳ್ಳಾರಿಯಿಂದ ೮೦ ಕಿ.ಮೀ. ದೂರದಲ್ಲಿದೆ. ಗುಡೇಕೋಟೆ ಕೂಡಲಗಿ ಎಂದಾಯಿತು ಎನ್ನುವುದು ಇಲ್ಲಿಯ ಜನರ ನಂಬಿಕೆ. ಜನ ಬಂದು ಇಲ್ಲಿಗೆ ಕೂಡಿದ್ದರಿಂದ ಸ್ಥಳಕ್ಕೆ ಕೂಡಲಗಿ ಎಂದು ಈಗ ಕೂಡ್ಲಿಗಿ ಆಗಿದೆ ಎಂಬುದು ಕುಂಬಾಸ ಅವರ ಅಭಿಪ್ರಾಯವಾಗಿದೆ.[೧] ಕೂಡ+ಅ ಕೂಟ, ಕೂಡುವಿಕೆ, ಬೆರಕೆ ನಾಲ್ಕಾರು ಹಾದಿಗಳು ಕೂಡಿದ ಸ್ಥಳ = ಕೂಡಲ ಕೂಡಲಗಿ > ಕೂಡ್ಲಿಗಿ ಎಂದಾಯಿತು. ನದಿಗಳು ಕೂಡುವ ಸ್ಥಳಗಳಿಗೂ ಕೂಡಲ, ಕೂಡಲಗಿ, ಕೂಡಲ ಸಂಗಮ ಇತ್ಯಾದಿಯಾಗಿ ಕರೆದಿರುವರು. ಆದರೆ ಇಲ್ಲಿ ನದಿಗಳಿಲ್ಲ. ಜರಿಮಲೆ, ಗುಡೇಕೋಟೆ, ರಾಯದುರ್ಗ, ಮರಾಠರು, ಬಿಜಾಪುರ ಸುಲ್ತಾನರು, ಹರಪನಹಳ್ಳಿ ಪಾಳೆಯಗಾರರು. ಇವುಗಳಲ್ಲಿ ಯಾವುದೇ ರಾಜ್ಯಕ್ಕೆ ಹೋದರೂ ಈ ಪ್ರದೇಶವನ್ನು ಸಂಧಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ 'ಕೂಡ್ಲಿಗಿ' ಹೆಸರು ಬಂದಿದೆ. ಕ್ರಿ.ಶ. ೧೭೦೫ ರ ಚನ್ನೇನಹಳ್ಳಿ[೨] ಶಾಸನದಿಂದ ಕೂಡ್ಲಿಗಿಯ ೧೮ ನೆಯ ಶತಮಾನಕ್ಕಿಂತಲೂ ಮುಂಚಿನದೆಂದು ಸ್ಪಷ್ಟವಾಗುವುದು. ಆದರೆ ಈ ತಾಲೂಕು ಬಹುಪ್ರಾಚೀನ ಇತಿಹಾಸವನ್ನು ಹೊಂದಿದೆ. ಆದಿ ಹಳೆಯ ಶಿಲಾಯುಗದ ನೆಲೆಯು ಈ ತಾಲೂಕಿನ ಜುಮ್ಮೋಬನಹಳ್ಳಿಯಲ್ಲಿ ಕಂಡುಬಂದಿದೆ.[೩] ಇದರ ಜೊತೆಗೆ ಇತಿಹಾಸ ಕಾಲದ ಕುರುಹುಗಳು ಇಲ್ಲಿ ಹೇರಳವಾಗಿವೆ. ಕೂಡ್ಲಿಗಿಯಿಂದ ೨೯ ಕಿ.ಮೀ. ದೂರದಲ್ಲಿರುವ ಸಿಡೆಗಲ್ಲು ಗ್ರಾಮದ ಬಳಿ ಸೂಕ್ಷ್ಮ ಶಿಲಾಯುಗದ ನೆಲೆಯು ಕಂಡುಬರುತ್ತದೆ.[೪] ಸಿಡೆಗಲ್ಲು ಗ್ರಾಮದ ಸುತ್ತಲೂ ಇರುವ ಬೆಟ್ಟದ ಸಾಲು ಗುಡೇಕೋಟೆಯವರೆಗೆ ಹಬ್ಬಿದೆ. ಕೂಡ್ಲಿಗಿಯಿಂದ ಸುಮಾರು ೧೪ ಕಿ.ಮೀ. ದೂರದಲ್ಲಿರುವ ಜರಿಮಲೆಯ ಬಾಗೇಶ್ವರ ದೇವಾಲಯದ

ಹತ್ತಿರ ನವಶಿಲಾಯುಗ ಕಾಲಕ್ಕೆ ಸೇರಿದ ಆಯುಧಾವಶೇಷಗಳು ಕಂಡುಬಂದಿವೆ.[೫] ತಾಲೂಕು ಕೇಂದ್ರದಿಂದ ೪೦ ಕಿ.ಮೀ. ದೂರದಲ್ಲಿರುವ ಕುಮತಿ ಗ್ರಾಮದ ಬಳಿ ಹರಿದಿರುವ ಚಿನ್ನಹಗರಿ ನದಿಯ ದಂಡೆಯ ಮೇಲೆ ಬೃಹತ್ ಶಿಲಾಯುಗದ ನೆಲೆಯೂ ಇದೆ.[೬] ಹೀಗೆ ಈ ಪ್ರದೇಶದಲ್ಲಿ ಬಹು ಹಿಂದಿನಿಂದಲೂ ಪ್ರಾಚೀನ ಮಾನವನು ನೆಲೆಸಿದ್ದು ಕಂಡುಬರುತ್ತದೆ.

ಹನ್ನೆರಡನೆಯ ಶತಮಾನದ ಶಿಕಾರಿಪುರದ ಶಾಸನಗಳು ಈ ಪ್ರದೇಶದಲ್ಲಿ ನಂದರ ಆಳ್ವಿಕೆಯಿದ್ದಿತೆಂಬುದನ್ನು ಸೂಚಿಸುತ್ತದೆ.[೭] ಆದರೆ ಈ ಶಾಸನವು ಯಾವ ನಂದರು ಇಲ್ಲಿ ಆಳ್ವಿಕೆ ಮಾಡಿದರೆಂಬ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುವುದಿಲ್ಲ.

ಕಲ್ಯಾಣ ಚಾಳುಕ್ಯರ ಕಾಲದ ಕೋಟೆಯು ಕೊಟ್ಟೂರಿನಲ್ಲಿದ್ದುದನ್ನು ಕ್ರಿ.ಶ. ೧೧೧೨ ರ ಶಾಸನವು ತಿಳಿಸುತ್ತದೆ.[೮] ಕೊಟ್ಟೂರು ಹನ್ನೆರಡು ಗ್ರಾಮಗಳ ಚಿಕ್ಕವಿಭಾಗದ ಉಲ್ಲೇಖ ಕೂಡ್ಲಿಗಿ ತಾಲೂಕಿನ ಹಳ್ಯ ಶಾಸನದಲ್ಲಿದೆ.[೯] ಕದಂಬ ವಂಶದ ನಾಚಿದೇವರಸನು ಕೋಗಳಿ-೫೦೦ ರಲ್ಲಿ ಕೊಟ್ಟೂರು-೧೨ನ್ನು ಕೊಟ್ಟೂರಿನಿಂದ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಕೊಟ್ಟೂರಿನ ಕೋಟೆಯು ಬಹುಪ್ರಾಚೀನ ಮತ್ತು ಮಹತ್ವದ್ದಾಗಿತ್ತೆಂದು ಸ್ಪಷ್ಟವಾಗುತ್ತದೆ. ಆದರೆ ಕೋಟೆಯ ಯಾವುದೇ ಅವಶೇಷಗಳು ಇಂದು ಉಳಿದಿಲ್ಲ.

ಪಾಳೆಯಗಾರರ ಕಾಲದ ಉಜ್ಜನಿಯಲ್ಲಿ ಕೋಟೆ ಇದ್ದುದನ್ನು ಕೈಫಿಯತ್ತುಗಳು ತಿಳಿಸುತ್ತವೆ.[೧೦] ಉಜ್ಜಿನಿ ಕೋಗಳಿ-೫೦೦ ರಲ್ಲಿ ಬರುವ ಒಂದು ಉಪಗ್ರಾಮ. ಇಲ್ಲಿ ಕಲ್ಯಾಣ ಚಾಳುಕ್ಯ ವಿಜಯನಗರದರಸರ ದೇವಾಲಯಗಳು ಮತ್ತು ಶಾಸನಗಳು ಕಂಡುಬರುತ್ತವೆ. ಈ ಶಾಸನಗಳಲ್ಲಿ ಉಜ್ಜಿನಿ ಕೋಟೆಯ ಪ್ರಸ್ತಾಪಗಳಿಲ್ಲ. ಪ್ರಸ್ತುತ ಕೋಟೆಯ ಅವಶೇಷಗಳಾವುವು ಅಲ್ಲಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಉಜ್ಜಿನಿಯಲ್ಲಿ ಕೋಟೆ ಇದ್ದ ಬಗ್ಗೆ ಅನುಮಾನಗಳಿವೆ.

ಪಾಳೆಯಗಾರರ ಕೋಟೆಗಳು, ತಾಲೂಕಿನ ಗುಡೇಕೋಟೆ, ಜರಿಮಲೆ, ದೇವಲಾಪುರ, ಪಾಲಯ್ಯನ ಕೋಟೆ, ವೀರನದುರ್ಗಗಳಲ್ಲಿವೆ. ಇವುಗಳನ್ನು ಕುರಿತಾಗಿ ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಟಿಪ್ಪಣಿಗಳು

೧. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ದರ್ಶನ*, ಪು. ೪೭. ಕುಂಚೂರು : ಮಾಲತೇಶ ಪ್ರಕಾಶನ

೨. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೯. ಪು. ೨೪೩. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) ೧*, ಹಂಪಿ : ಕನ್ನಡ ವಿಶ್ವವಿದ್ಯಾಲಯ

೩. ತಿಪ್ಪೇಸ್ವಾಮಿ, ಹೆಚ್. ೨೦೦೧. ಕೂಡ್ಲಿಗಿ ತಾಲೂಕಿನಲ್ಲಿ ಪ್ರಾಗೈತಿಹಾಸಿಕ ನೆಲೆಗಳು, *ಇತಿಹಾಸದರ್ಶನ-೧೬*. ಪು. ೨

೪. *ಅದೇ*, ಪು. ೨

೫. *ಅದೇ*, ಪು. ೧

೬. *ಅದೇ*, ಪು. ೨

೭. ತಿಪ್ಪೇಸ್ವಾಮಿ, ಹೆಚ್. ೧೯೯೮. ಕೂಡ್ಲಿಗಿ ತಾಲೂಕಿನ ಅಪರೂಪದ ಮಾನವಾಕೃತಿಗಳು, *ಇತಿಹಾಸದರ್ಶನ-೧೨*. ಪು. ೧೯

೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) ೧*, ಪೂರ್ವೋಕ್ತ. ಪು. ೨೩೪

೯. *ಅದೇ*, ಪು. ೨೨೭

೧೦. ಕಲಬುರ್ಗಿ, ಎಂ.ಎಂ. (ಸಂ.), ೧೯೯೩. *ಕರ್ನಾಟಕದ ಕೈಫಿಯತ್ತುಗಳು*, ಪು.೪೦೫-೪೫೦. ಹಂಪಿ : ಕನ್ನಡ ವಿಶ್ವವಿದ್ಯಾಲಯ

❑❑

೩.೧ ಗುಡೇ ಕೋಟೆ

ಗುಡೇಕೋಟೆ ಕೂಡ್ಲಿಗಿಯಿಂದ ಪೂರ್ವದಿಕ್ಕಿಗೆ ೨೮ ಕಿ.ಮೀ. ದೂರದಲ್ಲಿರುವ ಒಂದು ಹೋಬಳಿ ಕೇಂದ್ರ. ಈ ಗ್ರಾಮದ ಸುತ್ತಲೂ ಬೆಟ್ಟ ಗುಡ್ಡಗಳು, ಕುರುಚಲ ಗಿಡ-ಕಾಡುಗಳು ಸುತ್ತುವರಿದಿವೆ. ಗುಡೇಕೋಟೆಯು ದೊರೆಗಳ ಗುಡ್ಡ, ಸೋಮೇಶ್ವರ ಗುಡ್ಡ (ಅಗಸರ), ಹರಿಜನ ಕೇರಿ ಗುಡ್ಡ, ಕರಡಿ ಗುಡ್ಡಗಳ ಮಧ್ಯದಲ್ಲಿದೆ. ಇಂದಿನ ಗುಡೇಕೋಟೆಗೆ ಹಿಂದೇ ಬಾಣಾಸುರ ಪಟ್ಟಣವೆಂದು ಕರೆಯುತ್ತಿದ್ದರೆಂದು ಸ್ಥಳೀಯರ ವಾಡಿಕೆ. ಸುಮಾರು ವರ್ಷಗಳ ಹಿಂದೆ ಬಾಣಾಸರು ಎಂಬ ಅರಸನು ಆಳುತ್ತಿದ್ದನಂತೆ. ಇವನು ಶಿವಪಾರ್ವತಿಯರ ಪರಮಭಕ್ತ. ಈತನ ಭಕ್ತಿಗೆ ಮೆಚ್ಚಿದ ಆ ದೇವ ದಂಪತಿಗಳು ಈ ಪಟ್ಟಣದ ಮಹಾದ್ವಾರವನ್ನು ಸದಾಕಾಲ ಕಾಯುತ್ತಿರುವುದಾಗಿ ಅಭಯ ನೀಡಿದ್ದರೆಂಬ ಪ್ರತೀತಿ. ಈ ಗ್ರಾಮವು ಅರಸನ ಕಾಲದಲ್ಲಿ ಪಟ್ಟಣದಷ್ಟು ದೊಡ್ಡದಾಗಿದ್ದು, ಅರಸನ ಹೆಸರನ್ನೇ ಈ ಗ್ರಾಮವು ಹೊಂದಿತು. ಸಿ.ಡಿ. ಮ್ಯಾಕಲಿನ್ ಅವರು ತಮ್ಮ ಕೃತಿಯಲ್ಲಿ Goodi cottah Gudikotatal from (Gudi tal, Temple + kota,tal fort), ಎಂದು ಉಲ್ಲೇಖಿಸಿದ್ದಾನೆ.[೧] ಚೋರನೂರು, ನಾರಾಯಣದೇವರ ಕೆರೆ ಶಾಸನಗಳಲ್ಲಿ ಗುಡೇಕೋಟೆಯನ್ನು ಗುಡಿಯ ಕೋಟೆ ಎಂದು ಉಲ್ಲೇಖಿಸಿದೆ.[೨] ಗುಡೇಕೋಟೆಯ ಹೆಸರು ಕೈಫಿಯತ್ತುಗಳಲ್ಲಿ ಗುಡಿಕೋಟೆ ಎಂಬುದಾಗಿದೆ.[೩] ಗಡಿಯಾಂಕ ಭೀಮನ ಪಟ್ಟಣವೆಂದು ಪೌರಾಣಿಕ ಪ್ರಸಂಗಗಳು ಹೇಳುತ್ತವೆ. ಕನ್ನಡ ನಿಘಂಟುಗಳಲ್ಲಿ ಬರುವ ಗುಡೇ ಎಂಬುದರ ಶಾಬ್ದಿಕ ಅರ್ಥವು ರಾಶಿ, ಸಮೂಹ, ಗುಂಪು ಎಂಬ ಪದಗಳನ್ನು ನಿರ್ದೇಶಿಸುತ್ತಿದ್ದು, ಈಗಲೂ ಗುಡೇಕೋಟೆ ಸುತ್ತಲೂ ಅನೇಕ ಗುಡ್ಡಗಳು ರಾಶಿ ರಾಶಿಯಾಗಿ ಹಬ್ಬಿರುವುದನ್ನು ನೋಡಲಾಗಿ ಅಲ್ಲಿಯ ಕೋಟೆಯನ್ನು ಸೂಚಿಸಲು ಅನ್ವರ್ಥಕವಾಗಿ ಗುಡೇ ಎಂಬ ವಿಶ್ಲೇಷಣೆಯನ್ನು ಸೇರಿಸಿಕೊಂಡಿರಬೇಕು. ಹಾಗಾಗಿ ಈ ಗ್ರಾಮಕ್ಕೆ ಗುಡೇಕೋಟೆ ಎಂಬ ಹೆಸರು ಪ್ರಾಪ್ತವಾಗಿರಬೇಕು.

ಇತಿಹಾಸ

ಗುಡೇಕೋಟೆಯ ಪ್ರಾಚೀನತೆಯನ್ನು ಪ್ರಾಗಿತಿಹಾಸ ಕಾಲದವರೆಗೆ ತಲುಪಿರುವ ಅವಶೇಷಗಳು ಈ ಗ್ರಾಮದ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುತ್ತವೆ. ಗುಡೇಕೋಟೆ ಗ್ರಾಮವು ಸೇರಿದಂತೆ ಇದರ ಸುತ್ತಮುತ್ತಲಿನ ಪರಿಸರವು ಭೌಗೋಳಿಕವಾಗಿ ಸಮೃದ್ಧವಾದುದು. ಈ ಪ್ರದೇಶದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟಗಳು, ನೈಸರ್ಗಿಕ ಗುಹೆಗಳು ಹಳ್ಳ-ತೊರೆಗಳಿಂದ ಕೂಡಿದ ನೆಲೆಗಳು ಇಲ್ಲಿಯ ಫಲವತ್ತಾದ ಭೂಭಾಗಗಳು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ತಾಣವಾಗಿ ಬೆಳೆದುಬರಲು ಸಾಧ್ಯವಾಗಿದೆ. ಗುಡೇಕೋಟೆ ಈ ಪ್ರದೇಶದ ಅಪ್ಪಯ್ಯನಹಳ್ಳಿ, ಪಂಚಲಿಂಗೇಶ್ವರ, ದೊರೆ ಗುಡ್ಡದಲ್ಲಿ ಬಂಡೆಯ ಬದಿಯಲ್ಲಿ, ಕಲ್ಲಾಸರೆ ಗವಿಗಳಲ್ಲಿ,

ಬಂಡೆಗಲ್ಲುಗಳ ಮೇಲೆ ಹಳೆಯ ಶಿಲಾಯುಗಕ್ಕೆ ಸೇರಿದ ಆಯುಧಗಳು, ಸೂಕ್ಷ್ಮ ಶಿಲಾಯುಗದ ಅವಶೇಷಗಳು ಈ ಪರಿಸರದಲ್ಲಿ ಸಾಕಷ್ಟು ದೊರೆಯುತ್ತವೆ. ಇವುಗಳಿಂದ ಈ ಪ್ರದೇಶದ ಪ್ರಾಚೀನತೆ ಅರಿವಾಗುತ್ತದೆ.

ಗುಡೇಕೋಟೆ ಪರಿಸರದ ಪ್ರದೇಶವು ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದು ಅವರ ಆಡಳಿತ ಪದ್ಧತಿಗೆ ಒಳಪಟ್ಟಿದ್ದಿತು. ಇಲ್ಲಿಯ ಬ್ರಹ್ಮಗಿರಿ, ಸಿದ್ಧಾಪುರ ಪ್ರದೇಶದಲ್ಲಿ ಸಿಕ್ಕಿರುವ ಶಾಸನಗಳಿಂದ ಮತ್ತು ಅವಶೇಷಗಳಿಂದ ಈ ಅಂಶ ದೃಢಪಡುತ್ತದೆ.

ಗುಡೇಕೋಟೆ ಗ್ರಾಮದ ಹತ್ತಿರದಲ್ಲಿರುವ ಕೊಟ್ಟೂರು, ಕೂಡ್ಲಿಗಿ, ಶಿವಪುರ, ಚೋರನೂರು ಮೊಳಕಾಲ್ಮೂರು, ಅಶೋಕ ಸಿದ್ಧಾಪುರ ಮುಂತಾದ ಊರುಗಳಲ್ಲಿ ಶಾತವಾಹನ ಕಾಲದ ಅವಶೇಷಗಳು ದೊರೆತಿವೆ.[೪] ಇದರಿಂದ ಗುಡೇಕೋಟೆ ಗ್ರಾಮ ಶಾತವಾಹನರ ಆಳ್ವಿಕೆಗೆ ಒಳ ಪಟ್ಟಿತ್ತೆಂದು ಹೇಳಬಹುದು. ಉಚ್ಚಂಗಿದುರ್ಗವನ್ನು ಪೂರ್ವಭಾಗದ ರಾಜಧಾನಿಯಾಗಿ ಮಾಡಿಕೊಂಡು ಆಳಿದ ಕದಂಬರಿಗೆ ಕೋಗಳಿ, ಕೊಟ್ಟೂರುಗಳಂತೆ ಗುಡೇಕೋಟೆಯ ಪ್ರದೇಶವು ಒಳಪಟ್ಟಿತ್ತು. ಮುಂದೆ ಬಾದಾಮಿ, ಕಲ್ಯಾಣ ಚಾಳುಕ್ಯರ ಆಡಳಿತಕ್ಕೂ ಒಳಪಟ್ಟು ಇದು ರಾಷ್ಟ್ರಕೂಟರಿಗೂ ಪ್ರಮುಖ ನೆಲೆಯಾಗಿದ್ದುದು ಅವರ ವಾಸ್ತು ಶೈಲಿಯ ದೇಗುಲದಿಂದ ದೃಢವಾಗುತ್ತದೆ. ಹೊಯ್ಸಳರು, ಹೊಸಮಲೆದುರ್ಗದ ಅರಸರ ನೇರ ಆಳ್ವಿಕೆಯಲ್ಲಿ ಈ ಪ್ರದೇಶ ಅಭಿವೃದ್ಧಿಗೆ ಬರುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ಕಿರು ಪ್ರಾಂತ್ಯವಾಗಿ ರೂಪುಗೊಂಡ ಗುಡೇಕೋಟೆ ಪಾಳೆಯಗಾರರ ಬಹುಮುಖ್ಯ ಆಡಳಿತ ಕೇಂದ್ರವಾಗಿ ಬೆಳೆದುದು ಈ ಅವಧಿಯಲ್ಲಿಯೇ ಎಂಬುದು ಕೈಫಿಯತ್ತುಗಳಿಂದ ತಿಳಿದುಬರುತ್ತದೆ.[೫] ಬಿಜಾಪುರ ಹಾಗೂ ಮರಾಠ ಶಿವಾಜಿಯರ ಕಾಲದಿಂದಾಚೆ ಈ ಪ್ರದೇಶದ ಪಾಳೆಯಗಾರರು ಹೆಚ್ಚು ಪ್ರಬಲರಾದರು. ಗುಡೇಕೋಟೆ ಪಾಳೆಯಗಾರರು ಸುಮಾರು ಕ್ರಿ.ಶ. ೧೫೦೬ ರಿಂದ ೧೭೫೨ ರ ವರೆಗೆ ಅಂದರೆ ಅಂದಾಜು ೨೫೦ ವರ್ಷಗಳ ಕಾಲ ಗುಡೇಕೋಟೆಯನ್ನು ಆಳಿದರು. ಗುಂಡಳನಾಯಕನು ಗುಡೇಕೋಟೆ ಪಾಳೆಯಗಾರರಲ್ಲಿ ಪ್ರಥಮಿಗ.[೬] ಬೊಮ್ಮಂತರಾಜ, ಚಿನ್ನಯರಾಜ, ಇಮ್ಮಡಿ ರಾಜಪ್ಪನಾಯಕ, ಜಟಂಗಿ ರಾಜರು, ರಾಮಪ್ಪನಾಯಕ, ಶಿವಪ್ಪನಾಯಕ ಇವರುಗಳು ಗುಡೇಕೋಟೆಯನ್ನಾಳಿದ ಪ್ರಮುಖರು. ಇವರ ಆಡಳಿತಕ್ಕೆ ಲಿಂಗಮಹಳ್ಳಿ ಜಾಜರಕಲ್ಲು, ಮಡೇನಹಳ್ಳಿ, ಲಕ್ಷ್ಮೀಪುರ, ಹಿರೇಹಾಳು ಗ್ರಾಮಗಳು ಒಳಪಟ್ಟಿದ್ದವು. ಹೀಗೆ ಪಾಳೆಯಗಾರರ ಪ್ರಮುಖ ಆಡಳಿತ ಕೇಂದ್ರವಾಗಿದ್ದ ಗುಡೇಕೋಟೆಯಲ್ಲಿ ಆಗಲೇ ಪ್ರಬಲತರ ಗಿರಿದುರ್ಗ ನಿರ್ಮಾಣವಾಯಿತು. ಈ ಮೇಲಿನ ರಾಜಕೀಯ ಇತಿಹಾಸವನ್ನು *ಶ್ರೀ ಕುಮಾರದೇವರ ಕೈಫಿಯತ್ತು,*[೭] *ಹಿರೇಹಾಳು ಕೈಫಿಯತ್ತು,*[೮] *ದರೋಜಿ ಗ್ರಾಮದ ಕೈಫಿಯತ್ತು,*[೯] *ಅಂತಾಪುರ ಕೈಫಿಯತ್ತು,*[೧೦] ಚೋರನೂರು,[೧೧] ಕುದಿರಡವು[೧೨] ಶಾಸನಾಧಾರಗಳು ದೃಢಪಡಿಸುತ್ತವೆ.

ಪಾಳೆಯಗಾರರ ನಂತರ ಗುಡೇಕೋಟೆಯು ಕ್ರಿ.ಶ. ೧೮ನೇ ಶತಮಾನದ ಕೊನೆಯಾರ್ಧದಲ್ಲಿ ಹೈದರಾಲಿ ಮತ್ತು ಟಿಪ್ಪುವಿನ ವಶದಲ್ಲಿತ್ತು. ಕ್ರಿ.ಶ. ೧೭೯೨ ರಲ್ಲಿ ಬ್ರಿಟಿಷರಿಂದ ಟಿಪ್ಪು ಪರಾಜಯಗೊಂಡಿದ್ದರಿಂದ ಗುಡೇಕೋಟೆ ಪಾಳೆಯಗಾರರಿಗೆ ಪುನಃ ಸೇರಿತು. ಕ್ರಿ.ಶ. ೧೭೯೯ ರಲ್ಲಿ ಟಿಪ್ಪುಸುಲ್ತಾನನ ಮೇಲೆ ಬ್ರಿಟಿಷರು ಆಕ್ರಮಣಮಾಡಿ ಗುಡೇಕೋಟೆಯನ್ನು ವಶಪಡಿಸಿಕೊಂಡರು. ಆಗ ಒಪ್ಪಂದದಂತೆ ಗುಡೇಕೋಟೆ ಹೈದರಾಬಾದಿನ ನಿಜಾಮನಿಗೆ ಸೇರಿತು. ಕ್ರಿ.ಶ. ೧೮೦೦ ರಲ್ಲಿ ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ನಿಜಾಮ ಬ್ರಿಟಿಷರಿಗೆ ಗುಡೇಕೋಟೆಯನ್ನು ಒಪ್ಪಿಸಿದನು. ಬ್ರಿಟಿಷರ ೧೫೦ ವರ್ಷಗಳ ಆಳ್ವಿಕೆಯ ನಂತರ ಅಂದರೆ ೧೯೪೭ ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾದ ಮೇಲೆ ಗುಡೇಕೋಟೆ ಮೈಸೂರು ರಾಜ್ಯಕ್ಕೆ ಸೇರಿತು.

ಕೋಟೆಯ ಲಕ್ಷಣಗಳು

ಗುಡೇಕೋಟೆ ಗ್ರಾಮವನ್ನು ಹಳೇ ಊರು ಹೊಸ ಊರುಗಳೆಂದು ವಿಂಗಡಿಸಲಾಗಿದೆ. ಹಳೇ ಊರಿನಲ್ಲಿ ಪಾಳು ಕಟ್ಟಡಾವಶೇಷಗಳು ಹಾಗೂ ದೊರೆಯ ಗುಡ್ಡವಿದೆ. ಈ ದೊರೆಗಳ ಗುಡ್ಡ ಇಂದಿನ ಗ್ರಾಮದ ಉತ್ತರಕ್ಕೆ ಕೂಡ್ಲಿಗಿ ರಸ್ತೆಯ ಪಕ್ಕದಲ್ಲಿದೆ. ಈ ಗುಡ್ಡದ ಮೇಲಿರುವುದೇ ಪಾಳೆಯಗಾರರ ಕೋಟೆ. ಹಳೇಗ್ರಾಮದ ಉತ್ತರಕ್ಕೆ ಕೋಟೆಯೊಳಗೆ ಹೋಗುವ ದಾರಿಯಿಂದ ಈ ಮಾರ್ಗದ ಪ್ರಾರಂಭದಲ್ಲಿ ಉಪ್ಪರಿಗೆ ಕಂಡುಬರುತ್ತದೆ. ಇದನ್ನು ಸ್ಥಳೀಯರು ತಂಗಾಳಿ ಮಹಲ್ ಎಂದು ಗುರುತಿಸುತ್ತಾರೆ. ಇದು ಎರಡು ಮಹಡಿಗಳನ್ನು ಹೊಂದಿದ್ದು, ಮೇಲ್ಭಾಗದ ಛಾವಣಿಯಲ್ಲಿ ಪಾಳೆಯಗಾರರು ಮತ್ತು ರಾಣಿಯರು ತಂಪಾದ ಗಾಳಿಗೆ ಮೈ ಒಡ್ಡಿ ಆಹ್ಲಾದತೆಯನ್ನು ಪಡೆಯುತ್ತಿದ್ದರಂತೆ.[೧೩] ಇಂದು ಬಾಗಶಃ ಹಾಳಾಗಿ ಅಂಗವಿಕಲ ಮಹಲ್ ಆಗಿದೆ. ಇದರ ಸುತ್ತಲೂ ಗೋಡೆಗಳಲ್ಲಿ ಕಮಾನಗಳು ಮತ್ತು ಕಿಟಕಿಗಳಿವೆ. ಮೇಲ್ಭಾಗದ ನಾಲ್ಕು ಮೂಲೆಗೂ ನಿರ್ಮಿಸಿರುವ ಕಾವಲು ಗೋಪುರಗಳಿಂದ ಸುಂದರವಾಗಿರುವ ಈ ಉಪ್ಪರಿಗಿಗೆ ಆಸರೆ ಆಗದಿರಲೆಂದೇ ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ.



ತಂಗಾಳಿ ಮಹಲ್




ಇದರ ಸುತ್ತಲೂ ಬೃಹದಾಕಾರದ ಬಂಡೆಗಳ ಗುಡ್ಡ ಇರುವುದರಿಂದ ಇಲ್ಲಿನ ಬಿಸಿಲಿನ ತಾಪ ಹೆಚ್ಚು ಹಾಗಾಗಿಯೇ ಬೇಸಿಗೆಯಲ್ಲಿ ವಿಶ್ರಾಂತಿ ಪಡೆಯುವುಕ್ಕಾಗಿ ಈ ಕಟ್ಟಡ ನಿರ್ಮಿಸಿರುವುದು. ಈಗಲೂ ಇದನ್ನು ಬೇಸಿಗೆಮನೆ ಎಂದು ಕರೆಯುತ್ತಾರೆ. ಕಲ್ಲು, ಇಟ್ಟಿಗೆ - ಗಾರೆಯನ್ನು ಬಳಸಿ, ಹಿಂದೂ - ಮುಸ್ಲಿಂ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈ ಉಪ್ಪರಿಗೆಯನ್ನು ಬಳಸಿ ಉತ್ತರಕ್ಕೆ ಸಾಗಿದರೆ ಕೋಟೆ ಇರುವ ದೊರೆಯ ಗುಡ್ಡಕ್ಕೆ ದಾರಿ ಇದೆ.



ಕೋಟೆಯನ್ನೊಳಗೊಂಡ ಬೆಟ್ಟ

ಕೋಟೆ ಇರುವ ದೊರೆಯ ಬೆಟ್ಟದ ಉತ್ತರಕ್ಕೆ ದಟ್ಟವಾಗಿ ಬೆಳೆದುನಿಂತ ಕಾಡು ಗಿರಿ - ಕಂದರಗಳಿವೆ. ಪೂರ್ವದಿಕ್ಕಿಗೆ ಗುಡೇಕೋಟೆಯಿಂದ ರಾಯದುರ್ಗಕ್ಕೆ ಹೋಗುವ ರಸ್ತೆ, ಪಶ್ಚಿಮದಿಕ್ಕಿಗೆ ಬೊಮ್ಮಲಿಂಗನ ಬಹುದೊಡ್ಡ ಕೆರೆ, ದಕ್ಷಿಣಕ್ಕೆ ಗುಡೇಕೋಟೆ ಗ್ರಾಮಗಳಿವೆ. ಎರಡು ಗುಡ್ಡಗಳನ್ನು ಬಳಸಿಕೊಂಡು ಹೊರಕೋಟೆಯನ್ನು ಕಟ್ಟಿದ್ದು, ಇದೊಂದು ಗಿರಿದುರ್ಗವಾಗಿದೆ. ಈ ಕೋಟೆಯು ಈ ಗುಡ್ಡಗಳ ಕೆಳಗೂ ವ್ಯಾಪಿಸಿರುವ ಸಾಧ್ಯತೆಗಳಿವೆ. ಹಾಸು ಬಂಡೆಗಳೇ ಈ ಕೋಟೆಗೆ ತಳಪಾಯವಾಗಿದೆ. ದೊಡ್ಡ ದೊಡ್ಡ ಬಂಡೆಗಳ ಸಂದುಗಳು ಹಾಗೂ ಅವುಗಳ ಮೇಲೆ ಕೋಟೆಯನ್ನು ಕಟ್ಟಲಾಗಿದೆ. ಇನ್ನು ಕೆಲವಡೆ ಪ್ರಕೃತಿ ನಿರ್ಮಿತ ಬಂಡೆಗಳೇ ಅಳ್ವೇರಿಗಳಾಗಿವೆ. ಬೆಟ್ಟದ ತುದಿಯನ್ನು ತಲುಪಲು ಶತ್ರುಗಳಿಗೆ ಸಾಧ್ಯವಾಗದಂತೆ ಕೆಲವು ಮರ್ಮಗಳನ್ನು ಬಳಸಿ ಕೋಟೆಯನ್ನು ಭದ್ರಪಡಿಸಿದ್ದಾದರೂ ಇಂದು ಶಿಥಿಲ ಸ್ಥಿತಿಯಲ್ಲಿದೆ. ಕೋಟೆಯ ಗೋಡೆಯೂ ಸರಾಸರಿ ೧೦ ಅಡಿ ಎತ್ತರವಾಗಿದ್ದರೂ, ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದರ ಅಗಲ ಸುಮಾರು ೨ ರಿಂದ ೩ ಅಡಿಗಳಾಗಿದ್ದು, ಇನ್ನು ಹಲವು ಕಡೆ ೫ ಅಡಿಯವರೆಗೂ ಅಗಲವಾಗಿದೆ. ಕೋಟೆಯ ಗೋಡೆಯ ಕೆಳಭಾಗದಲ್ಲಿ ಆಯಾತಾಕಾರದ ಕಲ್ಲುಗಳನ್ನು ಬಳಸಿದ್ದು, ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಕಲ್ಲುಗಳನ್ನು ಉಪಯೋಗಿಸಿ ಮೇಲ್ತುದಿಯಲ್ಲಿ ಗಾರೆಯನ್ನು ಬಳಸಲಾಗಿದೆ.






ಎರಡು ಬಂಡೆಗಳ ಮಧ್ಯೆಯಿರುವ ಕೊತ್ತಳ

ಈ ಕೋಟೆಯಲ್ಲಿ ಒಟ್ಟು ೧೦ ರಿಂದ ೨೫ ಕೊತ್ತಳಗಳಿದ್ದು, ಇವುಗಳನ್ನು ಆಯಾಕಟ್ಟಿನ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಶಸ್ತ್ರಾಸ್ತ್ರಗಳ ಸಹಿತ ಮೇಲೇರಲು ಅನುಕೂಲವಾಗುವಂತೆ ಚೌಕಾರದ ಮತ್ತು ವೃತ್ತಾಕಾರದಲ್ಲಿ ನಿರ್ಮಿಸಲ್ಪಟ್ಟಿವೆ. ಶತ್ರುಗಳ ಬರುವಿಕೆಯನ್ನು ಗ್ರಹಿಸಲು ಮತ್ತು ಕೋಟೆಯನ್ನು ರಕ್ಷಣೆ ಮಾಡುವ ಉದ್ದೇಶದಿಂದಾಗಿ ಕೊತ್ತಳಗಳನ್ನು ಕೋಟೆ ಗೋಡೆಗಿಂತ ತುಂಬಾ ಎತ್ತರವಾಗಿ ನಿರ್ಮಿಸಿರುವುದು ಇವುಗಳ ಸುತ್ತಲೂ ಕೋಟೆ ಗೋಡೆಗೆ ಇರುವಂತೆ ಬಂದೂಕು ಕಿಂಡಿಗಳನ್ನು ಅಳವಡಿಸಲಾಗಿದೆ. ಈ ಕೋಟೆಗೆ ಎರಡು ಪ್ರವೇಶ ದ್ವಾರಗಳಿವೆ. ಹೊರ ಕೋಟೆಯ ಪ್ರವೇಶದ್ವಾರವು, ದಕ್ಷಿಣಾಭಿಮುಖವಾಗಿದೆ. ಈ ಪ್ರವೇಶದ್ವಾರಕ್ಕೆ ಬರುವ ಪೂರ್ವದಲ್ಲಿ ಕಲ್ಲಾಸರೆಯಲ್ಲಿರುವ ಪ್ರಾಗಿತಿಹಾಸ ಕಾಲದ ರೇಖಾ ಚಿತ್ರಗಳು ಗೋಚರಿಸುತ್ತವೆ. ಒಳಗೆ ಎರಡು ವಿಶಾಲ ಪ್ರದೇಶಗಳಿವೆ. ಮೊದಲನೆಯ ಪ್ರದೇಶದಲ್ಲಿ ಆನೆ ಹೊಂಡ, ಅಥವಾ ಚಿಕ್ಕಹೊಂಡ, ಆಂಜನೇಯನ ಉಬ್ಬುಶಿಲ್ಪ, ಬಿಸಿಲುಕಾಣದ ಬಾವಿ, ಸೈನಿಕರ ವಸತಿಗಳು, ಇತರೆ ಬಿಡಿ ಶಿಲ್ಪಗಳು ಕಂಡುಬರುತ್ತವೆ. ಇವುಗಳ ವಿವರಣೆಯನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ. ಈ ಮೊದಲನೆಯ ಪ್ರದೇಶದಿಂದ ಪಶ್ಚಿಮಾಭಿಮುಖ ವಾಗಿರುವ ಪ್ರವೇಶದ್ವಾರದಲ್ಲಿ ಒಳಹೋದರೆ ಎರಡನೆಯ ಪ್ರವೇಶ ಕಂಡುಬರುತ್ತದೆ. ಈ ಪ್ರವೇಶದ್ವಾರವು ಸುಮಾರು ಆರು ಅಡಿ ಅಗಲ ಎಂಟು ಅಡಿ ಎತ್ತರವಾಗಿದೆ. ಒಳ ಬದಿಯ ಇಕ್ಕೆಲಗಳಲ್ಲಿ ವಿಶಾಲವಾದ ಕಟ್ಟೆಗಳಿವೆ. ಇವು ನ್ಯಾಯಾದಾನದ ಕಟ್ಟೆಗಳು ಆಗಿರುವ ಸಾಧ್ಯತೆಗಳಿವೆ. ಏಕೆಂದರೆ ಇದರ ಪಕ್ಕದಲ್ಲಿಯೇ ಅರಮನೆಯೂ ಇದೆ. ಇಂದು ಅರಮನೆಯ ಪಾಳು ಅವಶೇಷಗಳು ಮಾತ್ರ ನಮಗೆ ಲಭ್ಯ. ೨ ನೆಯ ಪ್ರದೇಶದಲ್ಲಿ ಓಕುಳಿ ಹೊಂಡ, ಆಂಜನೇಯನ ಗುಡಿ, ರಾಗಿ ಕಣಜ, ತುಪ್ಪದ ಕಣಜ ಹಾಗೂ ಅರಮನೆಗಳು ಇವೆ. ಇದು ಮುಖ್ಯವಾದ ಮತ್ತು ರಕ್ಷಿತ ಪ್ರದೇಶವಾಗಿದೆ. ಈ ಕೋಟೆಯ ಮುಖ್ಯ ಪ್ರವೇಶದ್ವಾರ ಮುಚ್ಚಿದಾಗ ಹಾಗೂ ಶತ್ರುಗಳು ಕೋಟೆಯನ್ನು



ಆಕ್ರಮಿಸಿದಾಗ ಕೋಟೆಯಿಂದ ತಪ್ಪಿಸಿಕೊಂಡು ಹೋಗಲು ಗುಪ್ತ ಮಾರ್ಗಗಳನ್ನು ರಚಿಸಲಾಗಿದೆ. ಇವುಗಳು ದೊಡ್ಡ ದೊಡ್ಡ ಬಂಡೆಗಳ ಸಂದುಗಳಲ್ಲಿವೆ.



ಕೋಟೆಯ ಒಳಬಾಗಿಲು

ಕೋಟೆಯಲ್ಲಿ ನೀರಿನ ವ್ಯವಸ್ಥೆ

ಜೀವ ಜಗತ್ತಿನ ಮೂಲಭೂತ ಅವಶ್ಯಕತೆಯಾದುದು ನೀರು. ಹಾಗಾಗಿ ಈ ಕುಡಿಯುವ ನೀರಿಗೆ ಪಾಳೆಯಗಾರರು ವಿಶೇಷ ಗಮನ ಹರಿಸಿರುವುದು ಕಂಡುಬರುತ್ತದೆ. ಬೆಟ್ಟ ಗುಡ್ಡಗಳು ಒಳಗೊಂಡಂತೆ ಕೋಟೆಯಲ್ಲೂ ಚಿಕ್ಕ ದೊಡ್ಡ ಬಂಡೆಯ ಸಂದುಗಳಿಗೆ ಅಡ್ಡಲಾಗಿ ಗೋಡೆಗಳನ್ನು ಕಟ್ಟಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಇಂತಹ ಮಳೆಯ ನೀರಿನ ಸಂಗ್ರಹದ ಬಾವಿ ಹೊಂಡಗಳನ್ನು ಈಗಲೂ ಎಲ್ಲಾ ಕೋಟೆಗಳಲ್ಲಿರುವಂತೆ ಇಲ್ಲಿಯೂ ಇವೆ. ಅವುಗಳೆಂದರೆ ತೊಟ್ಟಿಲುಬಾವಿ, ತಣ್ಣೀರಿನ, ಉಸುಕಿನ ಮತ್ತು ಅಕ್ಕಮ್ಮನ ಹೊಂಡಗಳು.

ತೊಟ್ಟಿಲು ಬಾವಿ : ತೊಟ್ಟಿಲು ಬಾವಿಯ ಇನ್ನೊಂದು ಹೆಸರು ಬಿಸಿಲುಬಾವಿ. ಈ ಬಾವಿಯ ಮೇಲ್ಭಾಗದಲ್ಲಿ ಸುತ್ತಲೂ ಹೆಬ್ಬಂಡೆಗಳು ಆವರಿಸಿರುವುದರಿಂದ ಸೂರ್ಯಕಿರಣಗಳು ಬಾವಿಯೊಳಗೆ ಬೀಳುವುದು ಕಷ್ಟಕರ. ಹಾಗಾಗಿಯೇ ಬಿಸಿಲು ಬೀಳದಿರುವ ಬಾವಿಯೇ ಬಿಸಿಲುಬಾವಿಯಾಯ್ತು. ತೊಟ್ಟಿಲಿನ ಆಕಾರದಲ್ಲಿರುವುದರಿಂದ ಇದಕ್ಕೆ ತೊಟ್ಟಿಲು ಬಾವಿಯೆಂತಲು ಸ್ಥಳೀಯರ ವಾಡಿಕೆ. ಇದು ಸೈನಿಕರ ವಸತಿಯ ಬಳಿ ಇದ್ದು, ಬೇಸಿಗೆಯಲ್ಲೂ ಸೈನಿಕರುಗಳಿಗೆ ತಣ್ಣೀರನ್ನು ಒದಗಿಸುತ್ತಿತ್ತು. ಇದರ ಮೇಲ್ಭಾಗದಲ್ಲಿರುವ ಹೆಬ್ಬಂಡೆಯ ಆಸರೆಯಲ್ಲಿ ಪ್ರಾಗಿತಿಹಾಸ ಕಾಲದ ರೇಖಾ ಚಿತ್ರಗಳಿವೆ. ಅಂದರೆ ಪ್ರಾಚೀನ ಮಾನವನ ವಾಸ ಸ್ಥಾನವೂ ಇದಾಗಿರುವುದು ಸ್ಪಷ್ಟವಾಗುತ್ತದೆ.





ತೊಟ್ಟಿಲುಬಾವಿ

ಓಕುಳಿ ಹೊಂಡ : ತಣ್ಣೀರಿನ ಹಾಗೂ ಉಸುಕಿನ ಹೊಂಡಗಳು ಓಕುಳಿ ಹೊಂಡಕ್ಕೆ ಹೊಂದಿಕೊಂಡಿವೆ. ಇದು ಅರಮನೆಯ ಬಳಿ ಇರುವ ಆಂಜನೇಯನ ಗುಡಿಯ ಮುಂಭಾಗದಲ್ಲಿದೆ. ಇದರ ಜೊತೆಯಲ್ಲಿರುವ ತಣ್ಣೀರಿನ ಮತ್ತು ಉಸುಕಿನ ಹೊಂಡಗಳು ಅರಮನೆಯ ನೀರಿನ ಪೂರೈಕೆಗಾಗಿ ಇದ್ದಿರಬಹುದು. ಓಕುಳಿ ಹೊಂಡವು ದೇವತಾಕಾರ್ಯಗಳಿಗಾಗಿ ಉಪಯೋಗವಾಗುತ್ತಿತ್ತು. ಇಲ್ಲಿ ಯುಗಾದಿ ಹಬ್ಬದ ಸಂದರ್ಭದಲ್ಲಿ ಮನರಂಜನಾ ಕ್ರೀಡೆಗಳು ನಡೆಯುತ್ತಿದ್ದವಂತೆ. ಓಕುಳಿ ಇಲ್ಲಿ ಆಡುವುದು ಪ್ರಮುಖವಾದ ಮನೋರಂಜನಾ ಕ್ರೀಡೆಯಾಗಿತ್ತೆಂಬುದಕ್ಕೆ ಇಂದಿಗೂ ಆ ಸಂಪ್ರದಾಯ ಉಳಿದುಬಂದಿದೆ. ಈ ಹೊಂಡಗಳು ಇಂದು ಪಾಳುಬಿದ್ದಿವೆ. ಹೊಂಡಗಳಲ್ಲಿ ನೀರು ಶಾಶ್ವತವಾಗಿರಲೆಂದು ಮತ್ತು ಅಂತರ್ಜಲದ ಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಇಲ್ಲಿನ ಪಾಳೆಯಗಾರರು ಕೋಟೆಯ ಹೊರಭಾಗದಲ್ಲಿ ಬೊಮ್ಮಲಿಂಗನ ಕೆರೆಯನ್ನು ನಿರ್ಮಾಣ ಮಾಡಿದ್ದರೆಂದು ಕಂಡುಬರುತ್ತದೆ. ಈ ಕೋಟೆಯಲ್ಲಿ ವಾಸ ಮಾಡುವವರಿಗಾಗಿ ಬೇಕಾಗುವಷ್ಟು ನೀರನ್ನು ಬಂಡೆಯ ಸಂದುಗಳಿಗೆ ಗೋಡೆಯನ್ನು ಅಡ್ಡಕಟ್ಟಿ ಅರಮನೆಯ ಆವರಣದಲ್ಲಿ ನೀರನ್ನು ಸಂಗ್ರಹಿಸುತ್ತಿದ್ದರು. ಈ ಸಂಗ್ರಹ ತಾಣಗಳು ಹೊಂಡಗಳಾಗಿ ಬದಲಾವಣೆಗೊಂಡಿವೆ. ಈ ಹೊಂಡಗಳಲ್ಲಿ ಅರಮನೆಯ ಹೊಂಡ ಮಾತ್ರ ಮೆಟ್ಟಿಲುಗಳಂತೆ ನಿರ್ಮಿಸಿದ್ದಾರೆ. ಇದನ್ನು ಪಾಳೆಯಗಾರರು ಜಲಕ್ರೀಡೆಗಾಗಿ ನಿರ್ಮಿಸಿರಬಹುದಾಗಿದೆ. ಪಾಳೆಯಗಾರರ ಕರ್ತವ್ಯ ಪ್ರಜ್ಞೆಯಿಂದಾಗಿಯೇ ಜನಸಾಮಾನ್ಯರಿಗಾಗಿ ನೀರಿನ ಹೊಂಡಗಳು ನಿರ್ಮಾಣವಾಗಿವೆ ಎನ್ನಬಹುದು.

ಕೋಟೆಯೊಳಗಿನ ಸ್ಮಾರಕಗಳು

ಕೋಟೆಯೊಳಗೆ ಪಾಳೆಯಗಾರರ ಕಾಲಾವಧಿಯ ಅರಮನೆ, ಸೈನಿಕರ ವಾಸದ ಮನೆಗಳು, ರಾಗಿ ಮತ್ತು ತುಪ್ಪದ ಕಣಜಗಳು, ದೇವಾಲಯಗಳನ್ನು ಕಾಣಬಹುದು. ಈ ಸ್ಮಾರಕಗಳ ವಿವರಣೆಯನ್ನು ಕೆಳಗೆ ಕೊಡಲಾಗಿದೆ.





ರಾಗಿ ಕಣಜ : ರಾಗಿಯನ್ನು ಸಂಗ್ರಹಿಸಿಡುವ ಉಗ್ರಾಣವಾದ್ದರಿಂದ ಇದಕ್ಕೆ 'ರಾಗಿ ಕಣಜ'ವೆಂದು ಕರೆದಿರಬಹುದು. ಇಲ್ಲಿಯ ಪರಿಸರ ರಾಗಿ ಬೆಳೆಗೆ ತುಂಬಾ ಯೋಗ್ಯವಾಗಿದೆ. ಸುಗ್ಗಿಯಲ್ಲಿ ಸಂಗ್ರಹವಾಗುವ ರಾಗಿಯನ್ನು ಈ ಕಣಜದಲ್ಲಿ ಸಂಗ್ರಹ ಮಾಡಿಟ್ಟು, ವರ್ಷವಿಡಿ ಉಪಯೋಗಿಸಲು ಪಾಳೆಯಗಾರರು ಉಗ್ರಾಣವನ್ನು ನಿರ್ಮಿಸಿದ್ದರು. ಇದು ಸುಮಾರು ೬೦ ಅಡಿ ಉದ್ದ ೨೫ ಅಡಿ ಅಗಲ ಹಾಗೂ ೧೦ ಅಡಿ ಎತ್ತರವಾಗಿದೆ. ಇದನ್ನು ಸುಟ್ಟ ಇಟ್ಟಿಗೆ ಗಾರೆಗಳಿಂದ ಕಟ್ಟಲಾಗಿದೆ. ಈ ಉಗ್ರಾಣದಲ್ಲಿ ಮೂರು ಕೋಣೆಗಳಿವೆ. ಇದರೊಳಗೆ ಹೋಗಲು ಮೇಲ್ಭಾಗದಲ್ಲಿ ಕಿಂಡಿಗಳನ್ನು ಬಿಡಲಾಗಿದೆ.



ರಾಗಿ ಕಣಜ

ತುಪ್ಪದ ಕಣಜ : ಇಂದು ತುಪ್ಪವನ್ನು ಹಾಕಿಡುವದಕ್ಕಾಗಿ ಗಿಂಡಿಗಳನ್ನು ಹಾಗೂ ಬಾಟಲ್ ಗಳನ್ನು ಬಳಸುವುದು ನಮಗೆ ಗೊತ್ತಿದೆ. ಪಾಳೆಯಗಾರರು ತುಪ್ಪ ಹಾಕಿಡುವದಕ್ಕಾಗಿ ಉಗ್ರಾಣವನ್ನೆ ನಿರ್ಮಿಸಿದ್ದರು. ತುಪ್ಪದ ಕಣಜವನ್ನು ಅರಮನೆಯ ಈಶಾನ್ಯ ದಿಕ್ಕಿಗೆ ಬೃಹದಾಕಾರದ ಬಂಡೆಯ ಮೇಲೆ ನಿರ್ಮಿಸಲಾಗಿದೆ. ತುಪ್ಪದ ಕೊಳಗಳು ಸಾಮಾನ್ಯವಾಗಿ ನೆಲಮಟ್ಟದಿಂದ ಕೆಳಗೆ ಇರುತ್ತವೆ. ಆದರೆ ಕಣಜವು ಬಂಡೆಯ ಮೇಲಿದೆ. ಇದು ಬಾವಿಯಂತೆ ವರ್ತುಲಾಕಾರವಾಗಿ ನಿರ್ಮಿತವಾಗಿದ್ದು, ಇದರ ಒಳಭಾಗದಲ್ಲಿ ಗಾರೆಯಿಂದ ಗಿಲಾವು ಮಾಡಲಾಗಿದೆ. ನೆಲಮಟ್ಟದಿಂದ ಬಂಡೆಗಳ ಮೇಲಕ್ಕೆ ಚೌಕಾಕಾರದ ಇಟ್ಟಿಗೆ ಗಾರೆಗಳಿಂದ ನಿರ್ಮಿತ ಗೋಡೆಗಳಿವೆ. ಇದಕ್ಕೆ ರಕ್ಷಣಾ ವ್ಯವಸ್ಥೆ ಇದ್ದು, ಇವುಗಳನ್ನು ತಲುಪುವ ದಾರಿ ಅಸಾಧ್ಯವಾಗಿರುತ್ತದೆ. ಇದರಲ್ಲಿ ಸಂಗ್ರಹಿಸಿದ ತುಪ್ಪವನ್ನು ಯುದ್ಧ ಸಮಯದಲ್ಲಿ ತುಪಾಕಿಗಳಿಗೆ, ಫಿರಂಗಗಳಿಗೆ, ಕೋವಿಗಳಿಗೆ ಸವರಲು ಹಾಗೂ ಗಾಯಗೊಂಡ ಸೈನಿಕರ ಶಸ್ತ್ರ ಚಿಕಿತ್ಸೆಯ ಸಮಯದಲ್ಲಿ ಉಪಯೋಗಿಸಲಾಗುತ್ತಿತ್ತು.





ತುಪ್ಪದ ಕಣಜ

ಇಂತಹ ಕಣಜಗಳನ್ನು ಬಳ್ಳಾರಿ ಜಿಲ್ಲೆಯ ಜರಿಮಲೆ, ಉಚ್ಚಂಗಿದುರ್ಗ, ಕರಡಿದುರ್ಗ ಮತ್ತು ಕೃಷ್ಣಾನಗರದ ಪಾಳೆಯಗಾರರ ಕೋಟೆಗಳಲ್ಲಿ ಕಾಣಬಹುದು. ಕರ್ನಾಟಕದ ಇತಿಹಾಸ ಪ್ರಸಿದ್ಧ ಕೋಟೆಗಳಲ್ಲಿ ತುಪ್ಪದ ಕಣಜಗಳು ಕೋಟೆಯ ಅವಿಭಾಜ್ಯ ಅಂಗವೆನಿಸಿದ್ದವು.[೧೪]

ಕೋಟೆಯ ಮಹತ್ವ

ಒಂದು ಪಾಳೆಯ ಪಟ್ಟಿನ ಅಳಿವು ಉಳಿವಿಗೆ ನಾಯಕನ ಪಾತ್ರ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಕೋಟೆಗಳ ಪಾತ್ರವು. ಕೋಟೆಯ ಮಹತ್ವ ಹೆಚ್ಚಾಗಲು ಕೋಟೆ ಕಟ್ಟಲು ಆಯ್ಕೆ ಮಾಡಿಕೊಳ್ಳುವ ಸ್ಥಳವೂ ಪ್ರಮುಖವಾಗಿರುತ್ತದೆ. ಗಿರಿದುರ್ಗವನ್ನು ಕಟ್ಟುವಲ್ಲಿ ಮನುಷ್ಯನ ಪಾತ್ರಕ್ಕಿಂತ ನಿಸರ್ಗದ ಪಾತ್ರ ಹಿರಿದು. ಭೌಗೋಳಿಕವಾಗಿ ಒಂದು ಪಟ್ಟಣದ ಸುತ್ತಲೂ ಬೆಟ್ಟ ಗುಡ್ಡಗಳಿದ್ದರೆ ಗಿರಿದುರ್ಗಕ್ಕೆ ಪ್ರಶಸ್ಥವಾದ ಸ್ಥಳವೆಂದು ಹೇಳಬಹುದು. ಈ ಮೇಲಿನ ಎಲ್ಲಾ ಅನುಕೂಲಗಳು ಗುಡೇಕೋಟೆ - ದುರ್ಗಕ್ಕೆ ಲಭ್ಯವಿವೆ. ಈ ಪ್ರದೇಶದಲ್ಲಿ ಕಂಡುಬರುವ ನಾಲ್ಕು ಬೆಟ್ಟಗಳಲ್ಲಿ ಈಗ ಕೋಟೆ ನಿರ್ಮಿಸಿರುವ ದೊರೆಗಳ ಬೆಟ್ಟ ಬಹು ಎತ್ತರವಾಗಿದ್ದು, ಶತ್ರುಗಳು ಸುಲಭವಾಗಿ ಮೇಲೇರಿ ಬರದಂತೆ ಕಡಿದಾಗಿದೆ. ಉಳಿದ ಬೆಟ್ಟಗಳಿಗಿಂತ ಇಲ್ಲಿ ನೀರಿನ ಸೌಲಭ್ಯ ಚೆನ್ನಾಗಿದೆ. ಈ ಕಾರಣವಾಗಿಯೇ ಇಲ್ಲಿ ಕೋಟೆ ನಿರ್ಮಿಸಲಾಗಿದೆ. ಕೋಟೆಯನ್ನು ಕಟ್ಟಲು ಉಪಯೋಗವಾಗುವಂತಹ ಬೃಹದಾಕಾರದ ಕಲ್ಲು ಬಂಡೆಗಳು ಇಲ್ಲಿ ದೊರೆಯುತ್ತವೆ. ಹಾಗಾಗಿಯೇ ಪ್ರಸಿದ್ಧ ಭೂವಿಜ್ಞಾನಿ ಬ್ರೂಸ್ ಫೂಟನು 'ದಕ್ಷಿಣ ಭಾರತದಲ್ಲಿಯೇ ಇನ್ನೆಲೆಯೂ ಇಷ್ಟು ಬೃಹತ್ ಗಾತ್ರದ ಕಲ್ಲುಗಳನ್ನೊಟ್ಟಿ ಕಟ್ಟಿದ ಕೋಟೆ ಇಲ್ಲ' ಎಂದು ಉದ್ಗಾರ ತೆಗೆದಿದ್ದಾನೆ.



ಗುಡೇಕೋಟೆಯ ಪೂರ್ವಕ್ಕೆ ರಾಯದುರ್ಗದವರು, ಪಶ್ಚಿಮಕ್ಕೆ ಹರಪನಹಳ್ಳಿಯವರು, ಉತ್ತರಕ್ಕೆ ಹೈದರಾಲಿ ಮತ್ತು ಟಿಪ್ಪು, ದಕ್ಷಿಣಕ್ಕೆ ಚಿತ್ರದುರ್ಗದ ನಾಯಕರು ಹೀಗೆ ಸುತ್ತಲೂ ನಾಲ್ಕೂ ಪಾಳೆಯಗಾರರಿಗೆ ಗಡಿ ಪ್ರದೇಶ ವೆಂದರೆ ಗುಡೇಕೋಟೆ. ಇನ್ನೊಂದು ರಾಜ್ಯದ ಮೇಲೆ ದಂಡೆತ್ತಿ ಹೋಗಬೇಕೆಂದರೆ ಗುಡೇಕೋಟೆಯನ್ನು ಹಾದುಕೊಂಡೇ ಹೋಗಬೇಕು. ಹೈದರಾಲಿಯಂತು ಎರಡು ಬಾರಿ ದಾಳಿ ಮಾಡಿದನು. ಪ್ರತಿ ಬಾರಿಯು ೨೦೦೦ ಕಾಲ್ದಳ, ೨೦೦ ಅಶ್ವದಳ ಇತ್ಯಾದಿಯಾಗಿ ತೆಗೆದುಕೊಂಡು ಬರುತ್ತಿದ್ದನೆಂದು ಹೇಳಲಾಗಿದೆ.[೧೬] ಹೈದರಾಲಿಯು ಹರಪನಹಳ್ಳಿಗೆ ಮುತ್ತಿಗೆ ಹಾಕಿದಾಗ ಹರಪನಹಳ್ಳಿಯು ಸಂಪೂರ್ಣ ನಾಶವಾಯಿತು. ಟಿಪ್ಪುವು ಕ್ರಿ.ಶ. ೧೭೮೯ ರ ಒಳಗೆ ಒಮ್ಮೆ ಇಲ್ಲಿ ದಾಳಿ ಮಾಡಿದ. ಚಿತ್ರದುರ್ಗ ಹಾಗೂ ಹರಪನಹಳ್ಳಿ ನಾಯಕರುಗಳು ಪದೇ ಪದೇ ದಾಳಿ ಮಾಡುತ್ತಿದ್ದರು. ಹರಪನಹಳ್ಳಿಯಂತಹ ದೊಡ್ಡ ಪಾಳೆಯಪಟ್ಟು ಹೈದರಾಲಿಯ ದಾಳಿಗೆ ಸಂಪೂರ್ಣ ನಾಶವಾದರೂ ಗುಡೇಕೋಟೆ ಪಾಳೆಯಪಟ್ಟು ಈ ಮೇಲಿನ ಎಲ್ಲರ ದಾಳಿಯನ್ನು ಎದುರಿಸಿ ತನ್ನ ಜೀವಂತಿಕೆಯನ್ನು ಇರಿಸಿಕೊಳ್ಳಲು ಕಾರಣ ಗುಡೇಕೋಟೆಯ - ಗಿರಿದುರ್ಗವೇ ಆಗಿದೆ.

ಟಿಪ್ಪಣಿಗಳು

೧. Maclean, C.D. (Ed.), 1987. *Manual of Administration presidency Vol-I*, p. 212. New Delhi : Arian Education Services

೨. ಚನ್ನಬಸಪ್ಪ, ಎಸ್. ಪಾಟೀಲ. ೧೯೯೭. *ಬಳ್ಳಾರಿ ಜಿಲ್ಲೆಯ ಶಾಸನಗಳು ಭಾಗ - ೨,* ಪು. ೧೬೪. ಮೈಸೂರು : ಪ್ರಾಚ್ಯವಸ್ತು ಮತ್ತು ಸಂಗ್ರಾಹಾಲಯಗಳ ನಿರ್ದೇಶನಾಲಯ

೩. ಕಲಬುರ್ಗಿ, ಎಂ.ಎಂ. (ಸಂ), ೧೯೯೪. *ಕರ್ನಾಟಕದ ಕೈಫಿಯತ್ತುಗಳು*, ಪು. ೪೦೬. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. ಬಸವರಾಜ, ಎಚ್.ಎಂ. ೨೦೦೨. *ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ*, ಅಪ್ರಕಟಿತ ಎಂ.ಫಿಲ್. ಪ್ರಬಂಧ. ಪು. ೨೨. ಹಂಪಿ : ಕನ್ನಡ ವಿಶ್ವವಿದ್ಯಾಲಯ

೫. *ಕರ್ನಾಟಕದ ಕೈಫಿಯತ್ತುಗಳು*, ಪೂರ್ವೋಕ್ತ. ಪು. ೪೦೮

೬. *ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ*, ಪೂರ್ವೋಕ್ತ. ಪು. ೪೮

೭. *ಕರ್ನಾಟಕದ ಕೈಫಿಯತ್ತುಗಳು*, ಪೂರ್ವೋಕ್ತ. ಪು. ೫೪೧

೮. *ಅದೇ*, ಪು. ೫೬೧

೯. *ಅದೇ*, ಪು. ೫೧೧

೧೦. *ಅದೇ*, ಪು. ೪೦೪

೧೧. *ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ*, ಪೂರ್ವೋಕ್ತ. ಪು. ೩೬

೧೨. *ಅದೇ*, ಪು. ೩೬

೧೩. ತೇಜೇಶ್ವರ, ಹೆಚ್. (ಸಂ), ೧೯೯೫. *ಸಾಧನೆಯ ಸಿರಿ*, ಪು. ೧೧. ಗದಗ : ವಿಕ್ರಮ ಪ್ರಿಂಟರ್ಸ್

೧೪. ನಾಗರತ್ನಮ್ಮ, ಎಸ್. ೨೦೦೧. ಪಾವಗಡದ ಪಾಳೆಯಗಾರರು, *ದಕ್ಷಿಣ ಕರ್ನಾಟಕದ ಅರಸು ಮನೆತನಗಳು*, (ಸಂ : ವಸು ಎಂ.ವಿ), ಪು. ೭೩. ಹಂಪಿ : ಕನ್ನಡ ವಿಶ್ವವಿದ್ಯಾಲಯ

೧೫. ಸೂರ್ಯನಾಥ, ಯು. ಕಾಮತ್. (ಸಂ), ೧೯೮೪. *ಕರ್ನಾಟಕ ರಾಜ್ಯ ಗ್ಯಾಸೆಟಿಯರ್.* ಪು. ೪೮೬

೧೬. Hayavadauna Rao, C. 1943. *A History of Mysore-3.* p. 250

೩.೨ ಜರಿಮಲೆ

ಜರಿಮಲೆ ಗ್ರಾಮವು ಕೂಡ್ಲಿಗಿ ತಾಲ್ಲೂಕಿನಲ್ಲಿದ್ದು, ಇದು ತಾಲೂಕು ಕೇಂದ್ರದಿಂದ ನೈರುತ್ಯಕ್ಕೆ ೧೫ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪೂರ್ವದಿಕ್ಕಿಗೆ ಕೋಟೆಯನ್ನು ಒಳಗೊಂಡ ಬೆಟ್ಟವಿದೆ. ಈ ಬೆಟ್ಟವು ಸಮುದ್ರಮಟ್ಟದಿಂದ ೨೭೫೦ ಅಡಿ ಎತ್ತರವಿದ್ದು, ಸುತ್ತಲಿನ ಪ್ರದೇಶಕ್ಕಿಂತ ೩೦೦ ಅಡಿ ಎತ್ತರವಾಗಿದೆ. ಬೆಟ್ಟದ ಸುತ್ತಲೂ ಹಾಗೂ ಬೆಟ್ಟದ ಮೇಲಿರುವ ಕೋಟೆಯು ಶಿಥಿಲವಾಗಿದ್ದು, ಅದರ ಅಳಿದುಳಿದ ಭಾಗಗಳ ಸಹಾಯದಿಂದ ಕೋಟೆಯ ಲಕ್ಷಣ ಹಾಗೂ ಮಹತ್ವವನ್ನು ಕೆಳಗೆ ಚರ್ಚಿಸಲಾಗಿದೆ. ಈ ಚರ್ಚೆಗೆ ಪರಿಕರಗಳೆಂದರೆ ಸ್ಥಳೀಯರ ಹೇಳಿಕೆಗಳು, ಕೈಫಿಯತ್ತುಗಳು,[೧] ಜರಿಮಲೆ ಪಾಳೆಯಗಾರರ ವಂಶಾವಳಿಗಳು,[೨] ಮೆಕಂಜಿ ಹಸ್ತಪ್ರತಿ,[೩] ಲೇಖನಗಳು,[೪] ಥಾಮಸ್ ಮನ್ರೋನ[೫] ವರದಿಗಳು ಮುಖ್ಯವಾಗಿವೆ. ದುರಾದೃಷ್ಟವೆಂದರೆ ಜರಿಮಲೆ ಪಾಳೆಯಗಾರರ ಶಾಸನಗಳಾವುವು ಲಭ್ಯವಾಗದಿರುವುದು.

ಇತಿಹಾಸ ಮತ್ತು ಕೋಟೆಯ ಕಾಲ

ಪ್ರಾಗಿತಿಹಾಸಕಾಲ ಮಾನವನ ನೆಲೆಯಾಗಿದ್ದ ಜರಿಮಲೆಯು ಪ್ರಸಿದ್ಧಿಗೆ ಬಂದದ್ದು, ಪಾಳೆಯಗಾರರಿಂದ. ಆಂಧ್ರದ ಕದ್ರಿಯ[೬] ಮೂಲದವರಾದ ಇವರು ಕಾರಣಾಂತರಗಳಿಂದ ವಿಜಯನಗರಕ್ಕೆ ಬಂದು ನೆಲೆಸಿದ್ದರು. ವಿಜಯನಗರದ ಅರಸರ ಸೇವೆಯನ್ನು ಮಾಡಿಕೊಂಡಿದ್ದ ಇವರಲ್ಲಿ ಮೊದಲಿಗ ಪಾಪಣ್ಣನಾಯಕ.[೭] ಇವನು ವೀರನರಸಿಂಹನ (ಕ್ರಿ.ಶ. ೧೫೦೫ - ೧೫೦೯) ಸೇವಕರಲ್ಲಿ ಒಬ್ಬನಾಗಿ ಸೇವೆಸಲ್ಲಿಸುತ್ತಿದ್ದನು. ವೀರನರಸಿಂಹನ ಪ್ರೀತಿಗೆ ಪಾತ್ರನಾಗಿದ್ದರಿಂದ ಪಾಪಣ್ಣನಿಗೆ ವಡ್ಡು - ದರೋಜಿ ಗ್ರಾಮಗಳು ಬಳುವಳಿಯಾಗಿ ಬಂದವು.[೮] ಮುಂದೆ ಈ ಬಳುವಳಿ ಗ್ರಾಮಕ್ಕೆ ಒಡೆಯನಾಗಿ ಆಳ್ವಿಕೆ ಮಾಡಿದವನು ಪಾಪಣ್ಣನಾಯಕನ ಮಗ ಪೆನ್ನಪ್ಪನಾಯಕ. ಪುನಃ ವೀರನರಸಿಂಹನು ಗುಡೇಕೋಟೆ, ಭೂಪಸಮುದ್ರ ಗ್ರಾಮಗಳನ್ನು ಪೆನ್ನಪ್ಪನಾಯಕನಿಗೆ ಉಡುಗೊರೆಯಾಗಿ ಕೊಟ್ಟನೆಂದು ತಿಳಿದುಬರುತ್ತದೆ.[೯] ಹೀಗೆ ಬಲಿಷ್ಠನಾದ ಪೆನ್ನಪ್ಪನು ಉಜ್ಜನಿಯಲ್ಲಿ ಕೋಟೆ ಕಟ್ಟಿಸಿದನೆಂದು ಹೇಳಿದ್ದರು. ಈಗ ಅಲ್ಲಿ ಕೋಟೆಯ ಯಾವ ಅವಶೇಷಗಳು ಕಂಡುಬರುವುದಿಲ್ಲ.

ವಿಜಯನಗರದ ಅಚ್ಯುತರಾಯನು ಜರಿಮಲೆ ನಾಯಕರಿಗೆ ೧೫,೩೦೦ ಮಹಮದ್ ಷಾಯಿ ಪಗೋಡ ಆದಾಯವಿರುವ ನಾಲ್ಕು ಮಾರ್ಗಗಳನ್ನು ಹಾಗೂ ೫೦೦ ಅಶ್ವದಳ ೩೦೦೦ ಕಾಲಾಳು ಪಡೆ ಇಟ್ಟುಕೊಳ್ಳಲು ಅನುಮತಿ ನೀಡಿದನು.[೧೦] ಈ ಅನುಮತಿಯನ್ನು ಯುದ್ಧಕಾಲದಲ್ಲಿ ವಿಜಯನಗರದ ಅರಸರಿಗೆ ಸಹಾಯ ಮಾಡಲಿಕ್ಕಾಗಿ ಸದಾ ಸೈನ್ಯವನ್ನು ಸಿದ್ಧವಾಗಿಡಬೇಕೆಂಬ ಷರತ್ತಿನ ಮೇಲೆ ನೀಡಲಾಗಿತ್ತು. ಈ ಪದ್ಧತಿ ವಿಜಯನಗರ

(ನಾಯಂಕರ ಪದ್ಧತಿ) ದರಸರ ವೈಶಿಷ್ಟ್ಯ. ಆಗ ಜರಿಮಲೆಯಲ್ಲಿ ಭೂಮಿರಾಜ (ಪೆನ್ನಪ್ಪನಾಯಕನ ಮಗ) ಆಳ್ವಿಕೆ ಮಾಡುತ್ತಿದ್ದನು ನಂತರ ಅಧಿಕಾರಕ್ಕೆ ಬಂದವನು ಇಮ್ಮಡಿನಾಯಕ (ಭೂಮಿರಾಜನ ತಮ್ಮನ ಮಗ). ಆಗ ಉಜ್ಜನಿಯನ್ನು ಹರಪನಹಳ್ಳಿ ಪಾಳೆಯಗಾರರು ಹಿಡಿದುಕೊಂಡರೆಂದು ತಿಳಿದುಬರುತ್ತದೆ.[೧೧] ಇದಕ್ಕೆ ಪೂರಕವೆಂಬಂತೆ ಹರಪನಹಳ್ಳಿ ಪಾಳೆಯಗಾರರು ವಿಜಯದ ಸಂಕೇತವಾಗಿ ಮರಳುಸಿದ್ದೇಶ್ವರ ದೇವಾಲಯಕ್ಕೆ ಗಂಟೆಯನ್ನು ಸಮರ್ಪಿಸಿದಂತೆ ಅಲ್ಲಿಯ ಶಾಸನವು ತಿಳಿಸುತ್ತದೆ.[೧೨] ಇದರಿಂದ ವಿಜಯನಗರ ಅರಸರಿಂದ ಬಂದ ಎಲ್ಲಾ ಬಳುವಳಿಗಳನ್ನು ಹಂತಹಂತವಾಗಿ ಕಳೆದುಕೊಂಡು ಇಮ್ಮಡಿನಾಯಕನು ನೆಲೆ ಇಲ್ಲದೆ ಅಲೆದಾಡುವಂತಾಯಿತು. ತನ್ನ ಸುರಕ್ಷತೆಗೋಸ್ಕರ ಭದ್ರವಾದ ಸ್ಥಳವನ್ನು ಹುಡುಕತೊಡಗಿದನು. ಆಗ ಇವನು ಈಗಿನ ಜರಿಮಲೆ ಎಂಬ ಸ್ಥಳಕ್ಕೆ ಬಂದು ಚಿತ್ರದುರ್ಗ ನಾಯಕರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುವ ಮೂಲಕ ಸ್ನೇಹ ಸಂಪಾದಿಸಿ ಇಲ್ಲಿಯೇ ಕೋಟೆ ಕಟ್ಟಿಸಿ ರಾಜ್ಯವಾಳಿದನೆಂದು ತಿಳಿದುಬರುತ್ತದೆ.[೧೩] ಮುಂದೆ ಈ ಜರಿಮಲೆ ಸಂಸ್ಥಾನವನ್ನು ಕಿರಿ ಇಮ್ಮಡಿನಾಯಕ ಬೊಮ್ಮಣ್ಣನಾಯಕ, ಇಮ್ಮಡಿನಾಯಕ, ಈತನ ಮಕ್ಕಳಾದ ಬೊಮ್ಮಣ್ಣನಾಯಕ ಮತ್ತು ಮಲ್ಲಿಕಾರ್ಜುನ ನಾಯಕರು ಆಳಿದರೆಂದು ಜರಿಮಲೆ ವಂಶಾವಳಿಯಿಂದ ತಿಳಿದುಬರುತ್ತದೆ.[೧೪] ಜರಿಮಲೆಯವರು ಕಾರಣಾಂತರದಿಂದ ಚಿತ್ರದುರ್ಗದವರ ವಿರುದ್ಧ ಹೈದಾರಾಲಿಯೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಆದರೆ ಹೈದರಾಲಿಯ ಮಗ ಟಿಪ್ಪು ಪಾಳೆಯಗಾರರ ಕಡು ವಿರೋಧಿಯಾಗಿದ್ದನು. ಹಾಗಾಗಿ ಕ್ರಿ.ಶ. ೧೭೮೨ ರಲ್ಲಿ ಜರಿಮಲೆಯನ್ನು ಟಿಪ್ಪು ವಶಪಡಿಸಿಕೊಂಡು,[೧೫] ಜರಿಮಲೆ ನಾಯಕರನ್ನು ಸೆರೆಹಿಡಿದು, ಅವರಿಗೆ ಇಸ್ಲಾಂ ಮತಕ್ಕೆ ಪರಿವರ್ತನೆಯಾಗುವಂತೆ ಬಲವಂತ ಮಾಡಿದ್ದರಿಂದ ಜರಿಮಲೆಯವರು ಉಪಾಯದಿಂದ ಟಿಪ್ಪುವಿನ ಸೆರೆಯಿಂದ ತಪ್ಪಿಸಿಕೊಂಡು ಸುರಪುರಕ್ಕೆ ಪಲಾಯನ ಮಾಡದರೆಂದು ತಿಳಿದುಬರುತ್ತದೆ.[೧೬] ನಾಲ್ಕನೆ ಆಂಗ್ಲೋ ಮೈಸೂರು ಯುದ್ಧದ ನಂತರ ಬ್ರಿಟಿಷರು ಮತ್ತು ನಿಜಾಮನಿಗೆ ಆದ ಒಪ್ಪಂದದಂತೆ ಜರಿಮಲೆ ಹೈದ್ರಾಬಾದ್ ನಿಜಾಮನಿಗೆ ಸೇರಿತು. ಜರಿಮಲೆಯವರು ಒಪ್ಪಂದದ ಮೇರೆಗೆ ಪುನಃ ಹೈದ್ರಾಬಾದ್ ನಿಜಾಮನಿಂದ ಪಡೆದರೆಂದು ಕಾಣುತ್ತದೆ. ಒಟ್ಟಿನಲ್ಲಿ ಸುಮಾರು ಕ್ರಿ.ಶ. ೧೫೦೦ ರಿಂದ ಕ್ರಿ.ಶ. ೧೮೦೦ರ ವರೆಗೆ ಈ ಪಾಳೆಯಗಾರರು ಅಸ್ತಿತ್ವದಲ್ಲಿದ್ದರೆಂದು ಈ ಮೇಲಿನ ಚರ್ಚೆಯಿಂದ ತಿಳಿಯುತ್ತದೆ.

ಕೋಟೆಯ ಲಕ್ಷಣಗಳು

ಬೆಟ್ಟವನ್ನು ಬಳಸಿಕೊಂಡು ಕಟ್ಟಿರುವ ಈ ಕೋಟೆಯು ಗಿರಿದುರ್ಗಗಳ ಸಾಲಿಗೆ ಸೇರುತ್ತದೆ. ಹಾಸುಬಂಡೆಗಳೇ ಕೋಟೆಗೆ ತಳಪಾಯವಾಗಿವೆ. ದೊಡ್ಡ ದೊಡ್ಡ ಬಂಡೆಗಳ ಸಂದುಗಳನ್ನನುಸರಿಸಿ ಹಾಗೂ ಅವುಗಳ ಮೇಲೆ ಕೋಟೆಯನ್ನು ಕಟ್ಟಲಾಗಿದೆ. ಇನ್ನು ಕೆಲವೆಡೆ ಪ್ರಕೃತಿ ನಿರ್ಮಿತ ಬಂಡೆಗಳೇ ಕೋಟೆ ಗೋಡೆಯಾಗಿವೆ. ಬೆಟ್ಟದ ತುದಿಯನ್ನು ತಲುಪಲು ಶತ್ರುಗಳಿಗೆ ಸಾಧ್ಯವಾಗದಂತೆ ಕೋಟೆಯ ಪ್ರವೇಶದ್ವಾರಗಳನ್ನು ನಿರ್ಮಿಸಲಾಗಿದೆ. ಕೋಟೆ

ಗೋಡೆಯು ಸರಾಸರಿ ೧೦ ಅಡಿ ಎತ್ತರವಾಗಿದ್ದರೂ ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದರ ಅಗಲ ಸುಮಾರು ೨ ರಿಂದ ೩ ಅಡಿಗಳಾಗಿದ್ದು, ಹಲವೆಡೆ ತಾರತಮ್ಯವಿದೆ. ಕೋಟೆ ಗೋಡೆಯ ಕೆಳಭಾಗದಲ್ಲಿ ಆಯಾತಾಕಾರದ ಕಲ್ಲುಗಳನ್ನು ಬಳಸಿದ್ದು, ಮೇಲ್ಭಾಗದಲ್ಲಿ ಮಧ್ಯಮಗಾತ್ರದ ಕಲ್ಲುಗಳನ್ನು ಉಪಯೋಗಿಸಿ ಮೇಲ್ತುದಿಯಲ್ಲಿ ಗಾರೆ ಲೇಪನ ಮಾಡಲಾಗಿದೆ. ಈ ಕೋಟೆಯಲ್ಲಿ ಒಟ್ಟು ೩೦ ಕೊತ್ತಳಗಳಿದ್ದು, ಇವುಗಳನ್ನು ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಶಸ್ತ್ರಾಸ್ತ್ರಗಳ ಸಹಿತ ಮೇಲೇರಲು ಅನುಕೂಲವಾಗುವಂತೆ ಚೌಕಾಕಾರದ ಮತ್ತು ವೃತ್ತಾಕಾರದಲ್ಲಿ ನಿರ್ಮಿಸಲ್ಪಟ್ಟಿವೆ. ಶತ್ರುಗಳ ಬರುವಿಕೆಯನ್ನು ಗ್ರಹಿಸಲು ಮತ್ತು ಕೋಟೆಯನ್ನು ರಕ್ಷಣೆ ಮಾಡುವ ಉದ್ದೇಶದಿಂದಾಗಿ ಕೋಟೆ ಗೋಡೆಗಿಂತ ಎತ್ತರವಾಗಿ ನಿರ್ಮಿಸಿರುವ ಈ ಕೊತ್ತಳಗಳ ಸುತ್ತಲೂ ಕೋಟೆ ಗೋಡೆಗೆ ಇರುವಂತೆಯೇ ಬಂದೂಕು ಕಿಂಡಿಗಳನ್ನು ಅಳವಡಿಸಲಾಗಿದೆ.



ಜರಿಮಲೆ ಕೋಟೆ

ಈ ಕೋಟೆಯ ಹಲವು ಸುತ್ತುಗಳನ್ನು ಹೊಂದಿತ್ತಾದರೂ ಈಗ ಅಳಿದುಳಿದ ಒಂದೇ ಸುತ್ತು ಗೋಚರಿಸುತ್ತದೆ. ಕೋಟೆಗೆ ಮೂರು ಪ್ರವೇಶ ದ್ವಾರಗಳಿವೆ. ಹೊರಕೋಟೆಯ ಪ್ರವೇಶದ್ವಾರವು ಕೋಟೆಯ ಪಶ್ಚಿಮದಿಕ್ಕಿನ ಗೋಡೆಯಲ್ಲಿದೆ. ಬಾಗಿಲುವಾಡಗಳು ನಾಶವಾಗಿವೆ. ಈ ಪ್ರವೇಶ ದ್ವಾರಕ್ಕೆ ಬರುವ ಮೊದಲು ಬಸವೇಶ್ವರ ದೇವಾಲಯ ಸಿಗುವುದು. ಇಲ್ಲಿಂದ ಪ್ರವೇಶದ್ವಾರದ ಮೂಲಕ ಒಳಸಾಗಿದಾಗ ಮೊದಲು ಸಿಗುವುದೇ ಅರಮನೆ. ಈಗ ಅರಮನೆಯ ತಳಪಾಯ, ಗೋಡೆಗಳು ಮಾತ್ರ ಉಳಿದುಕೊಂಡಿವೆ. ಇಲ್ಲಿಂದ ಈಶಾನ್ಯಕ್ಕೆ ಸ್ವಲ್ಪ ದೂರದಲ್ಲಿ ಬೃಹದಾಕಾರದ ಬಂಡೆಯಿದೆ. ಇದರಲ್ಲಿ ಸುಮಾರು ೬ ಅಡಿ ಎತ್ತರದ ಆಂಜನೇಯ ಶಿಲ್ಪವನ್ನು ಕಡೆಯಲಾಗಿದೆ. ಇಲ್ಲಿಯೇ ನೀರಿನ ಹೊಂಡ, ಬಾವಿಗಳು ಹಾಗೂ ಗರಡಿಮನೆಗಳಿವೆ. ಇವುಗಳನ್ನು ದಾಟಿಕೊಂಡು ಪಶ್ಚಿಮದಿಕ್ಕಿನಿಂದ ಈಶಾನ್ಯದೆಡೆಗೆ ಪ್ರವೇಶಿಸಲು ಬಾಗಿಲನ್ನು ಜೋಡಿಸಲಾಗಿದೆ. ಈ ಬಾಗಿಲು ಜರಿಮಲೆ ಗ್ರಾಮದಿಂದ ಕೋಟೆಗೆ ನೇರ ಪ್ರವೇಶವನ್ನು ಕೊಡುತ್ತದೆ. ಈ ಬಾಗಿಲಿಗೆ ಕಂಚಿನ ಕದಗಳನ್ನು ಜೋಡಿಸಿದ್ದರು, ಇವುಗಳನ್ನು ಮುಚ್ಚಿದಾಗ



ಇದರ ಸದ್ದು ಚಿತ್ರದುರ್ಗಕ್ಕೆ ಕೇಳಿಸುತ್ತಿತ್ತೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಈ ಬಾಗಿಲು ಸುಮಾರು ೨೦ ಅಡಿ ಎತ್ತರ, ೧೦ ಅಡಿ ಅಗಲವಿದೆ. ಒಳ (ಹಿಂಬದಿ) ಭಾಗಕ್ಕೆ ಇಕ್ಕೆಲಗಳಲ್ಲಿ ಮಂಟಪಗಳಿವೆ. ಲಲಾಟ ಬಿಂಬದಲ್ಲಿ ಗಣೇಶನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಬಾಗಿಲು ತೊಳುಗಳ ಮೇಲ್ತುದಿಗಳಲ್ಲಿ ಇಳಿಬಿದ್ದ ಪದ್ಮದ ಮೊಗ್ಗುಗಳಿವೆ. ಈ ಬಾಗಿಲನ್ನು ಮುಚ್ಚಿದಾಗ ಉಪಯೋಗಿಸಲು ಬಲಭಾಗದಲ್ಲಿ ಚಿಕ್ಕ (ಉಪ) ಬಾಗಿಲನ್ನು ಜೋಡಿಸಲಾಗಿದೆ.



ಕೋಟೆಯ ಬಾಗಿಲು

ಈ ಬಾಗಿಲು ಮೂಲಕ ಒಳ ಪ್ರವೇಶಿಸಿದಾಗ ಕಾಣುವುದೇ ಆನೆಹೊಂಡ ಪಾಳೆಯಗಾರರು ಇಲ್ಲಿ ಆನೆಗಳ ಸ್ನಾನ ಮಾಡಿಸುತ್ತಿದ್ದರೆಂದು ಈಗಲೂ ವಾಡಿಕೆ ಇದೆ. ಈ ಹೊಂಡದಿಂದ ಪೂರ್ವಕ್ಕೆ ರಾಗಿಕಣಜವಿದೆ. ಇಲ್ಲಿಂದ ಬೆಟ್ಟದ ಮೇಲೆ ಹೋಗಲು ಕಲ್ಲುಹಾಸಿನ ದಾರಿಯಿದೆ. ಈ ದಾರಿಯ ಮಧ್ಯದಲ್ಲಿ ಬಂಡೆಯಮೇಲೆ ಆಂಜನೇಯನ ಸುಂದರ ಉಬ್ಬುಶಿಲ್ಪವಿದೆ.



ಆಂಜನೇಯನ ಉಬ್ಬುಶಿಲ್ಪ

ಬೆಟ್ಟದ ತುದಿಯಲ್ಲಿ ವಾಸದ ಮನೆಗಳು, ಕಣಜಗಳು, ನೀರಿನ ಹೊಂಡಗಳು ಇವೆ. ಪ್ರಾಯಶಃ ಶತ್ರುಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ಕೆಳಗಿನಂತೆಯೇ ಇಲ್ಲಿಯು ಅರಮನೆ, ಪ್ರಮುಖ ಅಧಿಕಾರಿಗಳ ವಾಸದ ಮನೆಗಳಿದ್ದಿರಬಹುದು.





ಕೋಟೆ ಇರುವ ಬೆಟ್ಟದ ಸುತ್ತಲೂ ದಟ್ಟವಾದ ಕಾಡು ಉತ್ತರ, ದಕ್ಷಿಣ, ಪಶ್ಚಿಮದಲ್ಲಿ ಆವರಿಸಿದ್ದರೆ ಪೂರ್ವದಲ್ಲಿ ಬೆಟ್ಟಗಳ ಸಾಲುಗಳಿವೆ. ಈ ಕಾರಣವಾಗಿಯೇ ಜರಿಮಲೆ ಪಾಳೆಯಗಾರರು ಕೋಟೆಕಟ್ಟಲು ಈ ಸ್ಥಳವನ್ನು ಆಯ್ಕೆಮಾಡಿಕೊಂಡಿರಬೇಕು. ಇವರು ಎಷ್ಟೇ ನೈಸರ್ಗಿಕ ರಕ್ಷಣೆ ಪಡೆದು ಕೋಟೆ ಕಟ್ಟಿಕೊಂಡರು ಇವರ ರಾಜಕೀಯ ಅಸ್ಥಿರತೆಯಿಂದಾಗಿ ಇವರ ಮೇಲೆ ಬಲಾಢ್ಯ ರಾಜ್ಯಗಳಾದ ನಿಜಾಮ, ಮರಾಠರು, ಮೈಸೂರು ಅರಸರು, ಚಿತ್ರದುರ್ಗದ ನಾಯಕರು, ಹರಪನಹಳ್ಳಿ ಪಾಳೆಯಗಾರರು ಪದೇ ಪದೇ ಆಕ್ರಮಣ ಮಾಡುತ್ತಿದ್ದರು. ಇವರುಗಳ ರಾಜಕೀಯ ಮಹತ್ವಾಕಾಂಕ್ಷೆಯ ನಡುವೆ ಈ ಸಣ್ಣ ರಾಜ್ಯ ಉಳಿದುಕೊಳ್ಳುವುದೇ ಕಷ್ಟಸಾಧ್ಯವಾಗಿತ್ತು. ಇಂತಹ ಕ್ಲಿಷ್ಟ ಸಮಯದಲ್ಲಿಯೂ ತಮ್ಮ ಅಸ್ತಿತ್ವದ ಕುರುಹುಗಳಾಗಿ ಅರಮನೆ, ಕೋಟೆ, ಕಣಜಗಳಂತ ರಕ್ಷಣಾಸ್ಮಾರಕಗಳನ್ನು ಕಟ್ಟಿಕೊಂಡಿದ್ದು ಅವರ ಸಾಹಸವೇ ಸರಿ.



ರಾಗಿ ಕಣಜ

ಕೋಟೆಯೊಳಗಿರುವ ದೇವಾಲಯಗಳು

ಕೋಟೆಯ ನೈರುತ್ಯಭಾಗದಲ್ಲಿ ಬಾಗೀಶ್ವರ ದೇವಾಲಯವಿದೆ. ಉತ್ತರಾಭಿಮುಖವಾಗಿರುವ ಈ ದೇಗುಲದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಸಭಾಮಂಟಪದಲ್ಲಿ ಮೂರು ಪ್ರವೇಶ ಬಾಗಿಲುಗಳಿವೆ. ಗರ್ಭಗೃಹದಲ್ಲಿ ಪ್ರತಿಷ್ಠಾಪನ ಶಿವಲಿಂಗವಿದ್ದು, ಕಪ್ಪುಶಿಲೆಯಲ್ಲಿ ಕೆತ್ತಲಾಗಿದೆ. ಇದು ಎರಡೂವರೆ ಅಡಿಗಳಷ್ಟು ಎತ್ತರವಿದೆ. ಶಿವಲಿಂಗಕ್ಕೆ ನೇರವಾಗಿ ಸಭಾಮಂಟಪದಲ್ಲಿ ನಂದಿಯಿದೆ. ದೇವಾಲಯದ ಕಂಬಗಳ ದಿಂಡು ನಾಲ್ಕು ಹಂತಗಳಲ್ಲಿದೆ. ಎರಡು ಹಂತಗಳನ್ನು ಚಚ್ಚೌಕವಾಗಿ, ಮಧ್ಯದ ಭಾಗವನ್ನು ಬಹುಮುಖಗಳಲ್ಲಿ ಹಾಗೂ ಮೇಲ್ಭಾಗದ ಬೋದಿಗೆಯನ್ನು ದಿಂಬಿನಾಕಾರದಲ್ಲಿ ಕೆತ್ತಿದ್ದಾರೆ. ಚಾಚು ಪೀಠಗಳು ಮೊಗ್ಗಿನಾಕಾರದಲ್ಲಿವೆ. ಈ ದೇಗುಲದ ಗರ್ಭಗೃಹದ ಮೇಲೆ ಪಾಳೆಯಗಾರ ಶೈಲಿಯ ಏಕತಲದ ಶಿಖರವಿದೆ. ಇದರಲ್ಲಿ ಕೀರ್ತಿಮುಖ, ನಂದಿ ಅಲಂಕರಣೆಗಳಿವೆ. ಜರಿಮಲೆ ಪಾಳೆಯಗಾರರು ಕ್ರಿ.ಶ. ೧೭ನೇ ಶತಮಾನದಲ್ಲಿ ಈ ದೇವಾಲಯವನ್ನು ನಿರ್ಮಿಸಿರಬಹುದೆಂದು ಇದರ ಲಕ್ಷಣಗಳಿಂದ ಹೇಳಬಹುದು.



ಕೋಟೆಯ ಪಶ್ಚಿಮಭಾಗದಲ್ಲಿರುವ ಮುರುಘಸ್ವಾಮಿ ಮಠವು ಪೂರ್ವಾಭಿಮುಖವಾಗಿದೆ. ಇದು ಜರಿಮಲೆ ಪಾಳೆಯಗಾರರ ಕಾಲದಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಸ್ವಾಮಿಗಳ ಮಠದ ಒಂದು ಶಾಖೆಯಾಗಿದ್ದಿರಬಹುದು. ವಿಶಾಲವಾದ ಗರ್ಭಗೃಹ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ವಿಗ್ರಹವಿಲ್ಲ. ಗರ್ಭಗೃಹವು ಸಭಾಮಂಟಪದಷ್ಟೇ ಅಗಲವಾಗಿದ್ದು, ಶ್ರೀಗಳು ವಾಸಿಸಲು ಅನುವಾಗುವಷ್ಟು ಸ್ಥಳಾವಕಾಶವಿದೆ. ಇದರಲ್ಲಿ ನಾಲ್ಕು ಕಂಬಗಳಿದ್ದು, ಕಟಾಂಜನವಿದೆ. ಕಂಬಗಳು ಚಚ್ಚೌಕ ಹಾಗೂ ಬಹುಮುಖಗಳಲ್ಲಿವೆ. ಇವುಗಳ ಮೇಲೆ ದಿಂಬಿನಾಕಾರದ ಬೋದಿಗೆ ಹಾಗೂ ಮೊಗ್ಗಿನಂತಿರುವ ಚಾಚು ಪೀಠಗಳಿವೆ. ಉಳಿದ ಕಂಬಗಳು ಗೋಡೆಯಲ್ಲಿ ಸೇರಿವೆ. ದೇವಾಲಯಗಳನ್ನು ಕಣಶಿಲೆ ಮತ್ತು ಗಾರೆಯನ್ನು ಬಳಸಿ ಕಟ್ಟಲಾಗಿದ್ದು, ಇದು ಜರಿಮಲೆ ಪಾಳೆಯಗಾರರು ನಿರ್ಮಿತಿಯೇ ಆಗಿದೆ.

ಟಿಪ್ಪಣಿಗಳು

೧. ಕಲಬುರ್ಗಿ, ಎಂ.ಎಂ. (ಸಂ.), ೧೯೯೪. *ಕರ್ನಾಟಕದ ಕೈಫಿಯತ್ತುಗಳು.* ಹಂಪಿ: ಕನ್ನಡ ವಿಶ್ವವಿದ್ಯಾಲಯ

೨. ಲಕ್ಷ್ಮಣ ತೆಲಗಾವಿ. ೧೯೭೬. ಜರಿಮಲೆ ಸಂಸ್ಥಾನದ ವಂಶಾವಳಿ, *ಚಂದ್ರವಳ್ಳಿ,* ಪು. ೩೭-೫೦. ಚಿತ್ರದುರ್ಗ

೩. ಮೆಕಂಜಿ. *The Vamshavallee of Jeremale Samsthan Family*

೪. ಯೋಗಿಶ್ವರಪ್ಪ, ಡಿ.ಎನ್. ೨೦೦೨. ಜರಿಮಲೆ ನಾಯಕರು, *ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ-೨,* ಪು. ೩೧ - ೪೭. ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು

೫. *Memorandum of Paligars of the Ceded Districts Dated 1802.* Munro Report.

೬. ಯೋಗೀಶ್ವರಪ್ಪ, ಡಿ.ಎನ್. ೨೦೦೨. ಪೂರ್ವೋಕ್ತ. ಪು. ೩೭

೭. *ಅದೇ,* ಪು. ೩೧-೪೭

೮. *ಅದೇ,* ಪು. ೩೪

೯. ಮೆಕಂಜಿ. *The Vamshavallee of Jeremale Samsthan Family*

೧೦. *Memorandum of Paligars of the Ceded Districts Dated 1802.* Munro Report

೧೧. ಪುಟ್ಟಣ್ಣ, ಎಂ.ಎಸ್. ೧೯೨೩. *ಚಿತ್ರದುರ್ಗದ ಪಾಳೆಯಗಾರರು,* ಪು. ೩೧-೩೨. ಬೆಂಗಳೂರು

೧೨. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೨೨೯. ಹಂಪಿ: ಕನ್ನಡ ವಿಶ್ವವಿದ್ಯಾಲಯ

೧೩. ಯೋಗೀಶ್ವರಪ್ಪ, ಡಿ.ಎನ್. ೨೦೦೨. ಪೂರ್ವೋಕ್ತ. ಪು. ೩೮

೧೪. *ಅದೇ,* ಪು. ೩೯

೧೫. *ಅದೇ,* ಪು. ೪೧

೧೬. Aruni, S.K. 1998. *History and Culture of Surapura Samsthana 1857-1958,* A Ph.D. Thesis. pune: University of Puna

೩.೩ ದೇವಲಾಪುರ


ದೇವಲಾಪುರವು ಕೂಡ್ಲಿಗಿ ತಾಲೂಕಿನಲ್ಲಿರುವ ಒಂದು ಪಾಳು ಗ್ರಾಮ. ಇದು ಕೂಡ್ಲಿಗಿಯಿಂದ ನೈರುತ್ಯದಿಕ್ಕಿನಲ್ಲಿ ೯ ಕಿ.ಮೀ. ದೂರದಲ್ಲಿದೆ. ಕೊಟ್ಟೂರು ಮತ್ತು ಕೂಡ್ಲಿಗಿ ರಸ್ತೆಯಲ್ಲಿ ಬರುವ ಗಜಾಪುರದಿಂದ ಆಗ್ನೇಯಕ್ಕೆ ಹೋಗುವ ಬಂಡಿಜಾಡಿನಲ್ಲಿ ಸುಮಾರು ೩ ಕಿ.ಮೀ. ಗದ್ದೆಗಳ ಮಧ್ಯೆ ನಡೆದುಕೊಂಡು ಹೋಗಬೇಕು. ಅಲ್ಲಿ ಕುರುಚಲ ಗಿಡ - ಮರ, ಬಳ್ಳಿಗಳು ಹಾಗೂ ಬೆಟ್ಟಗಳ ಮಧ್ಯದಲ್ಲಿ ಶಿಲಾಮಂಟಪಗಳಿವೆ. ಇವುಗಳ ಹಿಂಭಾಗಕ್ಕೆ ಇರುವುದೇ ಕೋಟೆ.

ಇಲ್ಲಿರುವ ಪಾಳುಗ್ರಾಮವನ್ನು ಸ್ಥಳೀಕರು ಹಾಳು ಗಜಾಪುರ ಎಂದು ಕರೆಯುವುದುಂಟು. ಆದರೆ ಶಾಸನದಲ್ಲಿ ದೇವಲಾಪುರವೆಂದು ಉಲ್ಲೇಖಿಸಿದೆ.[೧] ಸ್ಥಳನಾಮ "ದೇವಲಾಪುರ" ದೇವರಿಗೆ ಬಿಟ್ಟಪುರ > ದೇವಪುರ. ದೇವಲಾಪುರ ಆಗಿರಬೇಕು ಅಥವಾ ದೇವಾಂಗದವರ[೨] ಪುರ > ದೇವಾಂಗಪುರ > ದೇವಲಾಪುರವಾಗಿರಲೂಬಹುದು.

ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯವು ತನ್ನ ಪರಕಾಷ್ಠತೆಯನ್ನು ತಲುಪಿ ಇಳಿಮುಖಗೊಂಡ ಅವಧಿಯಲ್ಲಿ ಅನೇಕ ಸ್ವತಂತ್ರ ನಾಯಕರುಗಳು ತಲೆ ಎತ್ತಿದ್ದರು. ಅಂತವರಲ್ಲಿ ಜರಿಮಲೆ, ಗುಡೇಕೋಟೆ, ಚಿತ್ರದುರ್ಗ ಮತ್ತು ಹರಪನಹಳ್ಳಿಯವರು ಪ್ರಮುಖರು. ಹರಪನಹಳ್ಳಿ ಪಾಳೆಯಗಾರರು ತಮ್ಮ ವಿಶಾಲ ರಾಜ್ಯದ ರಕ್ಷಣೆಗಾಗಿ ಹಲವೆಡೆ ಸೈನಿಕ ನೆಲೆಗಳನ್ನು ಸ್ಥಾಪಿಸಿದರು. ಅವುಗಳೆಂದರೆ ವೀರನದುರ್ಗ, ಕರಡಿದುರ್ಗ, ಬಂಡ್ರಿ, ಚಿಕ್ಕಹಳ್ಳಿ, ಚಿಗಟೇರಿ ಮುಂತಾದವು. ಅವುಗಳಲ್ಲಿ ಈ ದೇವಲಾಪುರವು ಒಂದಾಗಿರಬಹುದು. ಏಕೆಂದರೆ ಇದು ಹರಪನಹಳ್ಳಿ ರಾಜ್ಯದ ವ್ಯಾಪ್ತಿಯಲ್ಲೇ ಬರುತ್ತಿತ್ತು. ವೀರನದುರ್ಗವು ಹರಪನಹಳ್ಳಿ ಪಾಳೆಯಗಾರರ ಪ್ರಮುಖ ರಕ್ಷಣೆಯ ಗಡಿಭಾಗವಾಗಿದ್ದು ಇದರೊಳಗೆ ಈ ದೇವಲಾಪುರದ ಚಿಕ್ಕ ಕೋಟೆ ಇದೆ.



ಕೋಟೆ ಬಾಗಿಲು



ಆಯಾತಾಕಾರದ ಕೋಟೆಯ ಮಧ್ಯಭಾಗದಲ್ಲಿ ವೃತ್ತಾಕಾರದ ಕೊತ್ತಳವಿದೆ. ಇದನ್ನು ಸುತ್ತಲೂ ಕಲ್ಲು ಮಧ್ಯದಲ್ಲಿ ಮಣ್ಣನ್ನು ತುಂಬಿ ಕಟ್ಟಲಾಗಿದೆ. ಈಗ ಮಧ್ಯದ ಮಣ್ಣುಗುಡ್ಡೆ ಮಾತ್ರ ಉಳಿದುಕೊಂಡಿದೆ. ಕೋಟೆ ಗೋಡೆಯು ಪಶ್ಚಿಮದಲ್ಲಿ ಸ್ವಲ್ಪಭಾಗ ಕಂಡುಬರುತ್ತದೆ. ಉಳಿದ ಮೂರು ಕಡೆ ಗೋಡೆ ನಾಶವಾಗಿರುವುದರಿಂದ ರಚನೆಯ ವಿವರಗಳು ತಿಳಿಯುವುದಿಲ್ಲ. ಉತ್ತರಗೋಡೆಯ ಮಧ್ಯದಲ್ಲಿ ತೆರೆದ ಬಾಗಿಲಿದೆ. ಇದರ ಎರಡು ಬದಿಗೆ ಕೊತ್ತಳಗಳಿದ್ದ ಗುರುತುಗಳಿವೆ. ಈ ಕೊತ್ತಳಗಳ ಬಳಿಯಲ್ಲಿಯೇ ವಸಂತ ಮಲ್ಲಿಕಾರ್ಜುನ ಹಾಗೂ ವೀರಭದ್ರ ದೇವಸ್ಥಾನಗಳಿವೆ. ಕೋಟೆಯನ್ನು ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಿದೆ.



ಕೋಟೆ ಮಧ್ಯದಲ್ಲಿರುವ ಕೊತ್ತಳ

ಕೋಟೆಯೊಳಗಿರುವ ದೇವಾಲಯಗಳು

ದೇವಲಾಪುರದ ಕೋಟೆಯ ಬಲಭಾಗಕ್ಕೆ ಮುಂಭಾಗದಲ್ಲಿರುವುದೇ ಕುರ್ಕಿ ಲಿಂಗ (ವಸಂತ ಮಲ್ಲಿಕಾರ್ಜುನ) ದೇವಾಲಯ. ಕ್ರಿ.ಶ. ೧೫೫೨ರ[೩] ಸದಾಶಿವರಾಯನ ಅಲ್ಲಿಯ ಶಾಸನದಲ್ಲಿ. ಈ ದೇವಾಲಯವು ವಸಂತ ಮಲ್ಲಿಕಾರ್ಜುನನದೆಂದು ಹೇಳಿದೆ. ಇದು ಉತ್ತರಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಸುಮಾರು ೮ ಅಡಿ ಚೌಕಾಕಾರದಲ್ಲಿದ್ದು, ಇದರ ಮಧ್ಯದಲ್ಲಿ ಉದ್ಭವ ಲಿಂಗವಿದೆ. ಸುಮಾರು ನಾಲ್ಕೂವರೆ ಅಡಿ ಎತ್ತರವಾಗಿರುವ ಗರ್ಭಗೃಹದ ಬಾಗಿಲವಾಡವು ಹಲವಾರು ಪಟ್ಟಿಕೆಗಳಿಂದ ಕೂಡಿದೆ. ಈ ಬಾಗಿಲಿನ ಎರಡೂ ಬದಿಗಳಲ್ಲಿ ಶೈವ ದ್ವಾರಪಾಲಕರ ಉಬ್ಬುಗೆತ್ತನೆಗಳಿವೆ. ಅಂತರಾಳವು ಗರ್ಭಗೃಹದಷ್ಟು ವಿಸ್ತಾರವಾಗಿದ್ದು, ಸರಳವಾದ ಬಾಗಿಲವಾಡವನ್ನು ಹೊಂದಿ. ಇಲ್ಲಿಯೂ ಎರಡೂ ಬದಿಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ. ನವರಂಗದ ಮಧ್ಯದ ಅಂಕಣದ ವೇದಿಕೆ ಒಂದು ಅಡಿಯಷ್ಟು ಎತ್ತರವಾಗಿದ್ದು, ಮೇಲಿನ ಛತ್ತು ಚೌರಸಗಳಿಂದ ಕೂಡಿದೆ. ನವರಂಗಕ್ಕೆ ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳಿಗೆ ಪ್ರವೇಶದ್ವಾರಗಳಿವೆ.



ಇಲ್ಲಿರುವ ಕಂಬಗಳು ಕಾಂಡಭಾಗದಲ್ಲಿ ಆಯಾತಾಕಾರವಾಗಿದ್ದು, ಎರಡನೇ ಹಂತದಲ್ಲಿ ಹದಿನಾರು, ಮೂರನೇ ಹಂತದಲ್ಲಿ ಅಷ್ಟಕೋನಾಕೃತಿ ಹೊಂದಿವೆ. ಇವುಗಳಲ್ಲಿ ನಂದಿ, ಭೈರವ, ಆದಿಶಕ್ತಿ, ಗಣಪತಿ ಮತ್ತು ನೃತ್ಯ ಸ್ತ್ರೀಯರ ಉಬ್ಬುಗೆತ್ತನೆಗಳಿವೆ. ನವರಂಗದ ಹೊರಬದಿಗೆ ಎರಡು ಭಾಗದಲ್ಲಿ ಸಣ್ಣ ಗರ್ಭಗೃಹಗಳಿವೆ. ಇವುಗಳನ್ನು ಗೌರಿ ಮತ್ತು ಗಣೇಶನ ಗುಡಿಗಳೆಂದು ಕರೆಯುತ್ತಾರೆ. ವಿಶಾಲವಾದ ಮುಖಮಂಟಪವು ಹದಿನಾರು ಕಂಬಗಳನ್ನು ಒಳಗೊಂಡಿದೆ. ಇವು ನವರಂಗದಲ್ಲಿರುವ ಕಂಬಗಳ ಲಕ್ಷಣಗಳನ್ನೆ ಹೋಲುತ್ತವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಗೋಪುರವಿದೆ. ಇದನ್ನು ಕಣಶಿಲೆ - ಇಟ್ಟಿಗೆಯಿಂದ ಕಟ್ಟಲಾಗಿದೆ. ಈ ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಕಾರ ಗೋಡೆಯಿದೆ. ಈ ಗೋಡೆಯೇ ಹಿಂದಿನ ಕೋಟೆ ಗೋಡೆಗೆ ಹೊಂದಿಕೊಂಡಿದೆ.

ವಸಂತ ಮಲ್ಲಿಕಾರ್ಜುನ ದೇವಾಲಯದ ಪೂರ್ವಕ್ಕೆ ಉತ್ತರಾಭಿಮುಖವಾಗಿರುವ ವೀರಭದ್ರನ ದೇಗುಲವಿದೆ. ಇದು ಗರ್ಭಗೃಹ ಹಾಗೂ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿದ್ದ ವೀರಭದ್ರನ ಮೂರ್ತಿಯನ್ನು, ಗ್ರಾಮವನ್ನು ಸ್ಥಳಾಂತರಿಸುವಾಗ ಆ ಗ್ರಾಮಸ್ಥರು ತೆಗೆದುಕೊಂಡುಹೋಗಿದ್ದಾರೆ. ಕೋಟೆಯೊಳಗೆ ವಸತಿ ಮನೆಗಳು ಮತ್ತು ಕಣಜಗಳ ಅವಶೇಷಗಳು ಕಂಡುಬರುತ್ತವೆ.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧*, ಪು. ೨೨೫-೨೨೬. ಹಂಪಿ: ಕನ್ನಡ ವಿಶ್ವವಿದ್ಯಾಲಯ

೨. ನಾಗಭೂಷಣ, ಎಸ್.ಎಂ. ೧೯೯೩. ದೇವಲಾಪುರ ವಾಸ್ತುಶಿಲ್ಪ ವ್ಯಾಸಂಗ, *ಇತಿಹಾಸ ದರ್ಶನ - ೮*. ಪು. ೫೭-೬೦

೩. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧*, ಪೂರ್ವೋಕ್ತ. ಪು. ೨೨೫-೨೬

೩.೪ ಪಾಲಯ್ಯನ ಕೋಟೆ

ಪಾಲಯ್ಯನ ಕೋಟೆ ಗ್ರಾಮವು ಕೂಡ್ಲಿಗಿಯಿಂದ ದಕ್ಷಿಣಕ್ಕೆ ೧೮ ಕಿ.ಮೀ. ದೂರದಲ್ಲಿದಲ್ಲಿರುವುದು. ಇದನ್ನು ಅಡವಿಪೂಜಾರಳ್ಳಿ ಎಂತಲೂ ಕರೆಯುತ್ತಾರೆ. ಗ್ರಾಮದ ಉತ್ತರಕ್ಕಿರುವ ಬೆಟ್ಟದ ಮೇಲೆ ಕೋಟೆ ಇದೆ.



ಪಾಲಯ್ಯನ ಕೋಟೆ

ಕೋಟೆ ಇರುವ ಬೆಟ್ಟವು ತುಂಬಾ ಕಡಿದಾಗಿದೆ. ಪಶ್ಚಿಮಕ್ಕೆ ದೊಡ್ಡ ಹಳ್ಳವಿದೆ. ಬೆಟ್ಟದ ಸುತ್ತಲೂ ದಟ್ಟವಾದ ಕಾಡು ಇದೆ. ಬೆಟ್ಟದ ಮೇಲೆ ನಿಂತು ನೋಡಿದರೆ ಸುಮಾರು ೨ ಕಿ.ಮೀ. ದೂರದ ವರೆಗಿನ ದೃಶ್ಯಗಳು ಕಾಣುತ್ತವೆ. ಈ ಕಾರಣವಾಗಿಯೇ ಬೆಟ್ಟವನ್ನು ಕೋಟೆ ಕಟ್ಟಲು ಆಯ್ಕೆಮಾಡಿಕೊಂಡಿರಬೇಕು.



ಕೋಟೆ ಗೋಡೆ ಮತ್ತು ಕೊತ್ತಳ

ಕೋಟೆಯ ಪೂರ್ವಕ್ಕೆ ಸುಮಾರು ೧೨ ಕಿ.ಮೀ. ದೂರದಲ್ಲಿ ಜರಿಮಲೆ ಪಾಳೆಯಗಾರರ ಸಂಸ್ಥಾನವಿತ್ತು. ಪಶ್ಚಿಮಕ್ಕೆ ಸುಮಾರು ೩೫ ಕಿ.ಮೀ. ಅಂತರದಲ್ಲಿ ಹರಪನಹಳ್ಳಿ ಪಾಳೆಯಗಾರರು, ಆಗ್ನೇಯಕ್ಕೆ ಸುಮಾರು ೬೦






ಕಿ.ಮೀ. ದೂರದಲ್ಲಿ ಚಿತ್ರದುರ್ಗದ ಪಾಳೆಯಗಾರರ ರಾಜ್ಯ ಹಾಗೂ ಉತ್ತರಕ್ಕೆ ೩೬ ಕಿ.ಮೀ. ನಲ್ಲಿ ಮರಾಠರ ಘೋರ್ಪಡೆಯ ಸಂಸ್ಥಾನಗಳಿದ್ದವು. ಇವುಗಳ ಕೇಂದ್ರಸ್ಥಾನದಲ್ಲಿ ಪಾಲಯ್ಯನ ಕೋಟೆ ಇದೆ. ಆದರೆ ಈ ಕೋಟೆಯನ್ನು ಯಾರು ಕಟ್ಟಿಸಿದರು ಯಾವಾಗ ಕಟ್ಟಿಸಿದರು ಏಕೆ ಕಟ್ಟಿಸಿದರೆಂಬ ಮಾಹಿತಿಗಳು ಮಾತ್ರ ಅಲಭ್ಯ. ಕೋಟೆ ಮಾತ್ರ ಸುಸ್ಥಿತಿಯಲ್ಲಿದೆ.

ಕೋಟೆಯ ಲಕ್ಷಣಗಳು

ಗ್ರಾಮದ ಉತ್ತರ ದಿಕ್ಕಿಗೆ ೧ ಕಿ.ಮೀ. ದೂರದಲ್ಲಿ ಎರಡು ಬೆಟ್ಟಗಳಿವೆ. ಇವುಗಳಿಗೆ ದುರುಗವ್ವ ಮತ್ತು ಬಸವನ ಬೆಟ್ಟಗಳೆಂದು ಹೆಸರು. ದುರುಗವ್ವನ ಬೆಟ್ಟ ಬಸವನ ಬೆಟ್ಟಕ್ಕಿಂತ ಗಾತ್ರದಲ್ಲಿ ದೊಡ್ಡದು. ಬಸವನ ಬೆಟ್ಟದಲ್ಲಿ ಕುದುರೆ ಹೆಜ್ಜೆಗಳನ್ನು ಕಡೆಯಲಾಗಿದೆ. ಇವು ಇಲ್ಲಿ ಆಳ್ವಿಕೆಮಾಡಿದ ಪಾಳೆಯಗಾರರ ಕುದುರೆಯವು ಎಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಕೋಟೆ ಇರುವುದು ದುರಗವ್ವನ ಬೆಟ್ಟದಲ್ಲಿ.

ವಜ್ರಾಕಾರದ ಕೋಟೆಯಿದು. ಕೋಟೆಯನ್ನು ಚಿಕ್ಕಗಾತ್ರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಮಧ್ಯದಲ್ಲಿ ಸಂಧಿ ಉಂಟಾಗದಂತೆ ಮಣ್ಣನ್ನು ತುಂಬಲಾಗಿದೆ. ಸುಮಾರು ೧೫ ರಿಂದ ೨೦ ಅಡಿಗಳಷ್ಟು ಗೋಡೆಗಳು ಎತ್ತರವಾಗಿವೆ. ಕೋಟೆ ಗೋಡೆಯ ಅಗಲ ಸುಮಾರು ೩ ಅಡಿಗಳು. ಇದರ ಮೇಲಿದ್ದ ಮಣ್ಣಿನ ಕುಂಬೆಯ ಅವಶೇಷಗಳು ಕಾಣುತ್ತವೆ. ಕೋಟೆ ಗೋಡೆಯು ಸುಸ್ಥಿತಿಯಲ್ಲಿದೆ. ಗೋಡೆಯ ಮಧ್ಯಭಾಗದಲ್ಲಿ ಉದ್ದವಾದ ಬಂದೂಕು ಕಿಂಡಿಗಳಿವೆ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ವೃತ್ತಾಕಾರದ ಆರು ಕೊತ್ತಳಗಳಿವೆ. ಇವು ಕೋಟೆಗೋಡೆಗಿಂತ ಎತ್ತರವಾಗಿವೆ. ಕೋಟೆಯೊಳಗೆ ಇರುವ ಗೋಡೆಗೆ ಹೊಂದಿಕೊಂಡು ಬೃಹದಾಕಾರದ ಕಾವಲು ಗೋಪುರವಿದೆ. ಕೋಟೆಯ ಪಶ್ಚಿಮದ ಗೋಡೆಯಲ್ಲಿ ಬಾಗಿಲನ್ನು ಜೋಡಿಸಲಾಗಿದೆ. ಕೋಟೆಯೊಳಗೆ ೨ ಭಾಗಗಳಿದ್ದು, ಒಂದರಲ್ಲಿ ಮನೆ ಹಾಗೂ ಕಣಜಗಳ ಅವಶೇಷಗಳಿವೆ. ಇನ್ನೊಂದು ಭಾಗ ಖಾಲಿ ಇದೆ.

ಕೋಟೆಯ ಪೂರ್ವಕ್ಕೆ ಗೋಡೆಗೆ ಹೊಂದಿಕೊಂಡು ಬಾವಿಯಿದೆ. ಪಶ್ಚಿಮಕ್ಕೆ ಹಳೆಯ ಗ್ರಾಮದ ಕಟ್ಟಾಡವಶೇಷಗಳಿವೆ. ಇಲ್ಲಿಯೇ ಮೊದಲು ಗ್ರಾಮವಿದ್ದುದು ಸುಮಾರು ೯೦ ವರ್ಷಗಳ ಹಿಂದೆ ಪ್ಲೇಗ್ ಹಾವಳಿಗೆ ನೂರಾರು ಜನ ಬಲಿಯಾದುದರಿಂದ ಗ್ರಾಮವನ್ನು ಸ್ಥಳಾಂತರಿಸಲಾಗಿದೆ ಎಂದು ಸ್ಥಳೀಯರು ಪ್ರತಿಕ್ರಿಯಿಸುತ್ತಾರೆ. ಇದಕ್ಕೆ ಪೂರಕವೆಂಬಂತೆ ದುರುಗಮ್ಮ ದೇವಿಗೆ ಪ್ರತಿವರ್ಷವೂ ಜಾತ್ರೆ ಹಾಗೂ ನಿತ್ಯವು ಪೂಜೆ ಪುನಸ್ಕಾರಗಳು ನಡೆಯುತ್ತವೆ.




ಪಾಲಯ್ಯನ ಕೋಟೆಯ ನಕ್ಷೆ

೧. ಕೋಟೆಯ ಬಾಗಿಲು ೨. ಕೋಟೆಯ ಮಧ್ಯದ ಗೋಡೆ ೩. ಗ್ರಾಮದಿಂದ ಕೋಟೆಗೆ ಪ್ರವೇಶ ೪. ಕೊತ್ತಳ

೩.೫ ವೀರನದುರ್ಗ

ಕೂಡ್ಲಿಗಿಯಿಂದ ದಕ್ಷಿಣ ದಿಕ್ಕಿಗೆ ೭ ಕಿ.ಮೀ. ದೂರದಲ್ಲಿ ಈ ವೀರನದುರ್ಗವಿದೆ. ಸ್ಥಳೀಯರು ಕೋಟೆಯನ್ನು ಒಳಗೊಂಡ ಬೆಟ್ಟವನ್ನು ಬೀರಲಗುಡ್ಡವೆಂದು ಹೆಸರಿಸುತ್ತಿರುವುದು ವಾಡಿಕೆ. ಪೀರಲನಿಗೂ (ಪಕೀರಸ್ವಾಮಿ) ಬೀರಲಗುಡ್ಡಕ್ಕೂ ಸಂಬಂಧ ಕಲ್ಪಿಸುವುದು ಕಷ್ಟವೆನಿಸುವುದಿಲ್ಲ. ಕೆಲವರು ಪೀರಲನ ಹೆಸರಿನಿಂದ ಈ ಗುಡ್ಡಕ್ಕೆ ಬೀರಲಗುಡ್ಡವೆಂದು ಕರೆದಿರುವಂತೆ ನಂಬುತ್ತಾರೆ. ಇದಕ್ಕೆ ಕಟ್ಟಿಕೊಂಡಿರುವ ಕಥೆಗಳೇ ಆಧಾರವಾಗಿವೆ.

ಬೀರಲಗುಡ್ಡವೆಂಬುದು ವೀರನಗುಡ್ಡ ಎಂಬುದರ ಅಪಭ್ರಂಶ ರೂಪ. ವೀರನಗುಡ್ಡವು ಕೋಟೆಯನ್ನು ಒಳಗೊಂಡು ವಸತಿ ನೆಲೆಯನ್ನು ಹೊಂದಿರುವದರಿಂದ ವೀರನದುರ್ಗವೆಂಬುದಾಗಿ ಕರೆಯಲ್ಪಟ್ಟಿದೆ. ವೀರನದುರ್ಗ ಎಂಬ ಹೆಸರ ಇಲ್ಲಿ ಆಳ್ವಿಕೆ ನಡೆಸಿದ ವೀರನಾಯಕ ಎಂಬುವವನಿಂದ ಬಂದಿದೆ. ಇಲ್ಲಿರುವ ಶಾಸನದಲ್ಲಿ "ಅಕ್ಷರ ಸಂವತ್ಸರ.....ರಾಮಯ್ಯನಾಯಕ ಎಂದಿಷ್ಟೇ ಇದೆ.[೧] ಹಾಗಾದರೆ ವೀರನಾಯಕ ಯಾರು? ಹರಪನಹಳ್ಳಿಯ ವೀರಮುಮ್ಮಡಿ ನಾಯಕನೇ ಈ ವೀರನಾಯಕ. ಜರಿಮಲೆ ಪಾಳೆಯಗಾರರಿಂದ ಈ ಪ್ರದೇಶವನ್ನು ವಶಪಡಿಸಿಕೊಂಡು ಈತನೇ ಇಲ್ಲಿ ಕೋಟೆಯನ್ನು ನಿರ್ಮಿಸಿದನೆಂಬುದು ಸ್ಥಳೀಯ ಮೂಲಗಳಿಂದ ತಿಳಿದುಬರುವ ಅಂಶ.



ವೀರನದುರ್ಗದ ಕೋಟೆ

ವೀರಮುಮ್ಮಡಿ ನಾಯಕನೇ ಈ ವೀರನಾಯಕ ಎಂಬುದಕ್ಕೆ ಯಾವುದೇ ಶಾಸನ ಸಾಹಿತ್ಯಾಧಾರಗಳು ಲಭ್ಯವಿಲ್ಲ. ಹರಪನಹಳ್ಳಿಯನ್ನು ಆಳಿದ ಯಾವುದೇ ಪಾಳೆಯಗಾರರು ವೀರನದುರ್ಗವನ್ನು ಕಟ್ಟಿಸಿದ ಬಗ್ಗೆ ಎಲ್ಲೂ ಉಲ್ಲೇಖವಾಗಿಲ್ಲ. ಈ ವೀರ ಮುಮ್ಮಡಿನಾಯಕನು. ಕ್ರಿ.ಶ. ೧೬೫೫ ರಿಂದ ೧೬೬೭ ರ ಅವಧಿಯಲ್ಲಿ[೨] ಒಮ್ಮೆ



(ಕೂಡ್ಲಿಗಿ ತಾಲೂಕಿನಲ್ಲಿ ಬರುವ) ಬೆಳ್ಳಾಡು ಕೋಟೆಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡ. ಆಗ ಬೆಳ್ಳಾಡು ಕೋಟೆ ಸಂಪೂರ್ಣ ನಾಶವಾಯಿತಂತೆ. ಆಗ ಬೆಳ್ಳಾಡು ಗ್ರಾಮದ ಜನರು ಶಿವಪುರದಲ್ಲಿ ಬಂದು ವಾಸಿಸಿದ ವಿಚಾರವನ್ನು ಆ ಗ್ರಾಮಸ್ಥರು ಇಂದಿಗೂ ಹೇಳುತ್ತಾರೆ. ಈ ಶಿವಪುರ ಗ್ರಾಮವು ವೀರನದುರ್ಗದಿಂದ ೧೦ ಕಿ.ಮೀ. ದೂರದಲ್ಲಿದೆ.

ಕ್ರಿ.ಶ. ೧೫೭೦ ರಿಂದ ೧೬೦೮ ರ ವರೆಗೆ ಹರಪನಹಳ್ಳಿಯನ್ನು ಆಳಿದ ಭರಮಣ್ಣ ನಾಯಕನೆಂಬ ಪಾಳೆಯಗಾರನು ಒಮ್ಮೆ ಹನಸಿ ಕೋಟೆಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡ ವಿಚಾರವು ತಿಳಿದುಬರುತ್ತದೆ.[೨] ಈ ಹನಸಿ ಗ್ರಾಮವು ವೀರದುರ್ಗದಿಂದ ೧೫ ಕಿ.ಮೀ. ದೂರದಲ್ಲಿದೆ. ಮೊದಲ ಸೋಮಶೇಖರ ನಾಯಕನು (ಕ್ರಿ.ಶ. ೧೭೪೨ ರಿಂದ ೧೭೬೬ ರ ಕಾಲಾವಧಿಯಲ್ಲಿ) ಚಿತ್ರದುರ್ಗದ ಮದಕರಿ ನಾಯಕನನ್ನು ಕೊಟ್ಟೂರಿನಲ್ಲಿ ಸೋಲಿಸುವ ಮೂಲಕ ಆ ಕೋಟೆಯನ್ನು ಭದ್ರಪಡಿಸಿದಂತೆ ಕಂಡುಬರುತ್ತದೆ.[೩] ಈ ಕೊಟ್ಟೂರು ವೀರನದುರ್ಗದಿಂದ ಸುಮಾರು ೨೦ ಕಿ.ಮೀ. ದೂರದಲ್ಲಿದೆ. ಟಿಪ್ಪುಸುಲ್ತಾನನು ಕ್ರಿ.ಶ. ೧೭೮೭ - ೮೮ ರಲ್ಲಿ ವೀರನದುರ್ಗದ ಮೇಲೆ ದಂಡೆತ್ತಿ ಬಂದಾಗ ಅಲ್ಲಿ ರಾಮಯ್ಯನಾಯಕನು ಅಧಿಕಾರಿಯಾಗಿದ್ದನು.[೫] ಇವನೇ ಸ್ವತಃ ಟಿಪ್ಪುವಿನ ವಿರುದ್ಧ ಹೋರಾಡಿ ಹರಪನಹಳ್ಳಿ ಪಾಳೆಯಗಾರರಿಗೆ ಜಯ ತಂದುಕೊಟ್ಟನು. ಹರಪನಹಳ್ಳಿಯ ಆರಂಭಿಕ ಪಾಳೆಯಗಾರರಾದ ದಾದನಾಯಕ ಹಾಗೂ ರಂಗಣ್ಣ ನಾಯಕರುಗಳ ಜರಿಮಲೆ ಪಾಳೆಯಗಾರರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದರು.[೬]

ಈ ಮೇಲಿನ ರಾಜಕೀಯ ಇತಿಹಾಸವನ್ನು ಆಧಾರವಾಗಿಟ್ಟುಕೊಂಡು ಚರ್ಚಿಸಿದಲ್ಲಿ ಆರಂಭದಲ್ಲಿ ಜರಿಮಲೆ ಮತ್ತು ಹರಪನಹಳ್ಳಿ ಪಾಳೆಯಗಾರರು ಉತ್ತಮ ಸಂಬಂಧಗಳನ್ನು ಹೊಂದಿದ್ದರು ಈ ಪಾಳೇ ಪಟ್ಟುಗಳು. ವಿಜಯನಗರ ಸಾಮ್ರಾಜ್ಯ ಪತನಾನಂತರ ಸ್ವತಂತ್ರ ಹಾಗೂ ಅಧೀನವಾಗಿ ತಮ್ಮ ಶಕ್ತ್ಯಾನುಸಾರ ರಾಜ್ಯ ವಿಸ್ತರಣೆ ಮಾಡುತ್ತಾ ಬಂದವು. ಕಾಲಕ್ರಮ ರಾಜ್ಯ ವಿಸ್ತರಿಸುವಲ್ಲಿ ಇವರಿಬ್ಬರ ಮಧ್ಯೆ ಸ್ಪರ್ಧೆಗಳು ಏರ್ಪಟ್ಟಿರಬೇಕು. ಆಗಲೇ ಹರಪನಹಳ್ಳಿ ಪಾಳೆಯಗಾರರು ತಮ್ಮ ಸೈನಿಕ ನೆಲೆಗಳನ್ನು ಕೆಲವೆಡೆ ಸ್ಥಾಪಿಸಿದರು. ಅವುಗಳೆಂದರೆ ಬಾಗಳಿ, ಚಿಗಟೇರಿ, ಬಂಡ್ರಿ, ಚಿಕ್ಕಹಳ್ಳಿ, ಹ್ಯಾರಡ, ಹೊಳಲು, ಬೂದನೂರು, ತಂಬ್ರಹಳ್ಳಿ, ಕುರದಗಡ್ಡೆ, ಕರಡಿದುರ್ಗ ಮುಖ್ಯವಾಗಿದ್ದವು. ಇವುಗಳಂತೆಯೇ ಪೂರ್ವ ರಾಜ್ಯದ ಗಡಿಗಳ ರಕ್ಷಣೆಗಾಗಿ ಈ ವೀರನದುರ್ಗದ ಕೋಟೆಯನ್ನು ಸ್ಥಳೀಯರು ಹೇಳುವ ವೀರ ಮುಮ್ಮಡಿ ನಾಯಕನೇ ಕಟ್ಟಿಸಿರಬೇಕು. ಏಕೆಂದರೆ ವೀರನದುರ್ಗಕ್ಕೆ ಅನತಿ ದೂರದಲ್ಲಿರುವ ಬೆಳ್ಳಾಡು ಕೋಟೆ (ಕೂಡ್ಲಿಗಿ ತಾಲೂಕು) ಯನ್ನು ಈತನೇ ಜಯಸಿದ್ದನು. ಇನ್ನುಳಿದ ಹರಪನಹಳ್ಳಿಯ ಯಾವ ಪಾಳೆಯಗಾರರು ಈ ಪ್ರದೇಶಗಳ ಕಡೆ ಬಂದಿರುವುದಿಲ್ಲ. ಹಾಗಾಗಿ ಸ್ಥಳೀಯರು ಗುರುತಿಸುವ ಈ ವೀರನಾಯಕ ಈತನೇ ಆಗಿದ್ದಾನೆ.

ಕೋಟೆಯ ಲಕ್ಷಣಗಳು

ವೀರನದುರ್ಗವು ಪ್ರಕೃತಿದತ್ತವಾದ ಬೆಟ್ಟವನ್ನು ಬಳಸಿ ನಿರ್ಮಿಸಿದ ಗಿರಿದುರ್ಗ, ವಸತಿಯ ಅವಶೇಷಗಳು ಇಲ್ಲಿರುವುದರಿಂದ ಸ್ಥಳೀಯರು ಈ ಕೋಟೆಯನ್ನು ಏಳುಬಾಗಿಲು ಊರು ಎಂದು ಕರೆಯುತ್ತಾರೆ. ಇದಕ್ಕೆ ಆಧಾರಗಳೆಂಬಂತೆ ಐದು ಬಾಗಿಲುಗಳಿದ್ದು, ಉಳಿದ ಎರಡು ಬಾಗಿಲುಗಳು ಗೋಚರಿಸುವುದಿಲ್ಲ. ಪ್ರಸ್ತುತ ಐದು ಸುತ್ತುಗಳನ್ನು ನಾವಿಲ್ಲಿ ಕಾಣಬಹುದು. ಇವು ಉತ್ತರದಿಕ್ಕಿನಿಂದ ದಕ್ಷಿಣದಿಕ್ಕಿಗೆ ಮೇಲ್ಮುಖವಾಗಿ ವಿಸ್ತರಿಸಿವೆ. ಶತ್ರುಗಳಿಂದ ಅಂತಿಮ ಕ್ಷಣಗಳವರೆಗೂ ರಕ್ಷಣೆ ಪಡೆಯುವುದಕ್ಕಾಗಿ ಕೋಟೆಯನ್ನು ಹಲವಾರು ಸುತ್ತುಗಳಲ್ಲಿ ನಿರ್ಮಿಸುತ್ತಿದ್ದರು. ಶತ್ರುಗಳ ಹಾವಳಿ, ಅವಶ್ಯಕತೆಗಳ ಹೆಚ್ಚಳ ಮತ್ತು ರಾಜ್ಯವು ವಿಸ್ತಾರವಾಗುತ್ತಾ ಹೋದಂತೆ ಕೋಟೆಯ ಸುತ್ತುಗಳು ಹೆಚ್ಚಿವೆ. ಶತ್ರುಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಪ್ರತಿ ಸುತ್ತಿನಲ್ಲೂ ಗುಪ್ತ ಮಾರ್ಗಗಳನ್ನು ರಚಿಸಿದ್ದರು.

ಕೋಟೆಯ ಹೊರ ಗೋಡೆಯ ಮೊದಲ ಹಾಗೂ ಎರಡನೆಯ ಸುತ್ತುಗಳು ಸಮತಟ್ಟಾದ ಪ್ರದೇಶದ ಮೇಲಿವೆ. ಇವುಗಳ ಮಧ್ಯಭಾಗದಲ್ಲಿ ವಸತಿ ತಾಣಗಳಿದ್ದ ಅವಶೇಷಗಳಿವೆ. ಇಲ್ಲಿಯೇ ಶೈವ ದೇವಾಲಯ, ರುದ್ರಯ್ಯನ ಬಾವಿ, ಹೊನ್ನೂರುಸ್ವಾಮಿ ಮಠ ಇತ್ಯಾದಿಗಳಿವೆ. ಇಲ್ಲಿಂದ ಕೋಟೆಯನ್ನು ಹತ್ತಲು ಆರಂಭಿಸಿದರೆ ಮೊದಲು ಸಿಗುವುದೇ ಒನಕೆಕಿಂಡಿ. ವೀರನದುರ್ಗದ ಪ್ರಮುಖ ದ್ವಾರವಿದು.



ಕೋಟೆಯ ಪ್ರಮುಖದ್ವಾರ

ಈ ಬಾಗಿಲನ್ನು ಎರಡು ಬೃಹತ್ ಬಂಡೆಗಳ ಸಂಧಿಯನ್ನು ಬಳಸಿ ಕಟ್ಟಲಾಗಿದೆ. ಕರ್ನಾಟಕದ ಚಿತ್ರದುರ್ಗ, ಹಂಪೆ ಮೊದಲಾದ ಕೋಟೆಗಳಲ್ಲಿ ಒನಕೆ ಕಿಂಡಿಗಳಿವೆ.[೬] ಈ ಒನಕೆ ಕಿಂಡಿಗೆ ಕಂಚಿನ ಕದಗಳನ್ನು ಹೊಂದಿಸಲಾಗಿದ್ದಿತ್ತೆಂಬುದು ಸ್ಥಳೀಯರಿಂದ ತಿಳಿದುಬರುವ ಸಂಗತಿ. ಇಲ್ಲಿಂದ ಪಶ್ಚಿಮದಿಕ್ಕಿಗೆ ೨೦ ಕಿ.ಮೀ.




ದೂರದ ಕೊಟ್ಟೂರಿಗೆ ವಿವಾಹ ಮಾಡಿ ಕೊಟ್ಟ ಹೆಂಗಸೊಬ್ಬಳು ರಾತ್ರಿ ವೇಳೆ ಈ ಕಂಚಿನ ಕದಗಳನ್ನು ಮುಚ್ಚಿದ ಶಬ್ದ ಕೇಳಿ ಮಲಗುವ ಹೊತ್ತಾಯಿತ್ತೆಂದು ತಿಳಿದು ಹಾಲಿಗೆ ಹೆಪ್ಪು ಹಾಕುತ್ತಿದ್ದಳೆಂಬುದು ಇಲ್ಲಿಯ ಜನರು ಪ್ರತಿಕ್ರಿಯಿಸುತ್ತಾರೆ. ಈ ರೀತಿಯ ಕಥೆಗಳು ಚಿತ್ರದುರ್ಗ ಹಾಗೂ ಉಚ್ಚಂಗಿದುರ್ಗದ ವಿಷಯಗಳಲ್ಲಿಯೂ ಕಾಣಬಹುದು.[೮] ಒನಕೆ ಕಿಂಡಿಯ ಬಾಗಿಲು ಮೂಲಕ ಪೂರ್ವಕ್ಕೆ ಸಾಗಿದರೆ ಅಲ್ಲಿ ಜನವಸತಿಗಳ ಅವಶೇಷಗಳಿವೆ. ವೀರನದುರ್ಗದ ಗ್ರಾಮದ ವೃದ್ಧರು ಹೇಳುವಂತೆ ಬಹಳ ವರ್ಷಗಳ ಹಿಂದೆ ಬೀರಲಗುಡ್ಡದ ಜನರು ಇಲ್ಲಿ ವಾಸವಾಗಿದ್ದರು, ಪ್ಲೇಗಿನ ಹಾವಳಿಯಿಂದ ಈಗಿರುವ ಗ್ರಾಮಕ್ಕೆ ಬದಲಾಯಿಸಬೇಕಾಯಿತು. ಇದರೊಳಗೆ ತಮ್ಮ ಮನೆಗಳಿದ್ದ ಬಗ್ಗೆ ಅವರು ನೆನಪು ಮಾಡಿಕೊಳ್ಳುತ್ತಾರೆ.

ಮುಖ್ಯ ಪ್ರವೇಶ (ಒನಕೆ ಕಿಂಡಿ) ದ್ವಾರದ ಮೂಲಕ ಕೋಟೆಯ ಮೇಲೇರಲು ಕಲ್ಲುಹಾಸಿನ ದಾರಿಯನ್ನು ನಿರ್ಮಿಸಲಾಗಿದೆ. ಈ ಮೆಟ್ಟಿಲುಗಳಿಗೆ ಹಾಕಿರುವ ಕಲ್ಲುಗಳ ಸವಕಳಿಯನ್ನು ಗಮನಿಸಿದರೆ ನೂರಾರು ವರ್ಷಗಳ ಕಾಲ ಈ ದಾರಿಯನ್ನು ಬಳಸಿರುವುದು ಸ್ಪಷ್ಟವಾಗುವುದು. ಈ ದಾರಿಯ ಮೂಲಕ ಮುಂದೆ ಸಾಗಲು ದುರ್ಗದ ಮಧ್ಯಬಾಗಿಲು ಸಿಗುವುದು. ಇದನ್ನು 'ನಡುವಲ ಕೇರಿ' ಬಾಗಿಲೆಂದು ಕರೆಯುವರು. ಇದು ಕೋಟೆಯ ಮುಖ್ಯಭಾಗ, ಇಲ್ಲಿ ಆಡಳಿತಾಧಿಕಾರಿಗಳು, ಸೈನಿಕ ಮುಖಂಡರು ಶ್ಯಾನಬೋಗರ ಮನೆಗಳು ಇಲ್ಲಿದ್ದವೆನ್ನುವುದು ಸ್ಥಳಿಯರ ನಂಬಿಕೆ. ಇದಕ್ಕೆ ಪೂರಕ ಅಂಶಗಳೆನ್ನುವಂತೆ ಮನೆಯ ತಳಪಾಯಾವಶೇಷಗಳು ಇಲ್ಲಿ ಗೋಚರಿಸುತ್ತವೆ. ಈ ಸ್ಥಳದಲ್ಲಿ ವಾಸವಾಗಿದ್ದ ಅಧಿಕಾರಿಗಳು ಈಗಲೂ ಹೊಸಪೇಟೆಯಲಿದ್ದಾರಂತೆ. ಇಲ್ಲಿಂದ ದಕ್ಷಿಣಕ್ಕೆ ಮೇಲೇರಲು ಕೋಟೆಯ ನಾಲ್ಕನೆಯ ಸುತ್ತು ಸಿಗುವುದು. ಇದರೊಳಗಿರುವ ಪ್ರದೇಶವು ವಿಶಾಲ ಹಾಗೂ ಸಮತಟ್ಟಾಗಿದೆ. ಇಲ್ಲಿ ಕೋಟೆ ಗೋಡೆ ವ್ಯವಸ್ಥಿತವಾಗಿದ್ದು, ಇದು ಸುಮಾರು ೧೫ ರಿಂದ ೨೦ ಅಡಿಗಳ ವರೆಗೆ ಎತ್ತರವಿರುವುದಲ್ಲದೆ ತುಂಬಾ ಉದ್ದವಾಗಿದೆ. ಕೋಟೆಯ ಹೊರಭಾಗದ ಶತ್ರುಗಳನ್ನು ಕೋಟೆಯೊಳಗಿನಿಂದಲೇ ಬಂದೂಕುಗಳನ್ನಿಟ್ಟು ಗುಂಡು ಹಾರಿಸುವಂತೆ ಗೋಡೆಯಲ್ಲಿ ರಂಧ್ರಗಳನ್ನು ರಚಿಸಲಾಗಿದೆ.



ಕೋಟೆ ಗೋಡೆಯಲ್ಲಿರುವ ರಂಧ್ರಗಳು



ಕೋಟೆಯ ಅಂತಿಮ ಸುತ್ತು ಬೆಟ್ಟದ ತುಟ್ಟ - ತುದಿಯಲ್ಲಿದೆ. ಇಲ್ಲಿ ಮಲಿಯಮ್ಮ ದೇವಾಲಯ, ಸುಮಾರು ೪೦ ಅಡಿ ಆಳದ ಹೊಂಡಗಳು,ಧಾನ್ಯ ಸಂಗ್ರಹಿಸುವ ಅಗೇವುಗಳು, ಬೃಹದಾಕಾರದ ಕಲ್ಲು ಗುಂಡುಗಳ ಮೇಲೆ ಕಟ್ಟಿಸಿರುವ ಕೊತ್ತಳಗಳನ್ನು ಕಾಣಬಹುದು.



ಕೋಟೆ ಗೋಡೆ ಮತ್ತು ಕೊತ್ತಳ

ಈ ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಸುಮಾರು ೨೦ಕ್ಕೂ ಹೆಚ್ಚು ಕೊತ್ತಳಗಳಿವೆ. ಕೊತ್ತಳಗಳು ಕೋಟೆಯನ್ನು ರಕ್ಷಣೆ ಮಾಡುವುದಲ್ಲದೆ, ಶತ್ರುಗಳ ಬರುವಿಕೆಯನ್ನು ಗ್ರಹಿಸಲು ತುಂಬಾ ಅನುಕೂಲವಾಗಿದ್ದವು. ವೃತ್ತಾಕಾರವಾಗಿರುವ ಇವುಗಳನ್ನು ಮಧ್ಯಮಗಾತ್ರ ಶಿಲೆ, ಹಾಗೂ ಗಾರೆಯಿಂದ ನಿರ್ಮಿಸಲಾಗಿದೆ. ಒಳಗೆ ಹೋಗಲು ಪ್ರವೇಶ ದ್ವಾರಗಳು ಮತ್ತು ಕೊತ್ತಳಗಳ ಗೋಡೆಗಳಲ್ಲಿ ಸುತ್ತಲೂ ಬಂದೂಕು ಕಿಂಡಿಗಳಿವೆ.



ಕೊತ್ತಳ

ಬೃಹದಾಕಾರದ ಈ ಕೊತ್ತಳಗಳು ಕೋಟೆಯ ಅಂದವನ್ನು ಹಿಮ್ಮಡಿಗೊಳಿಸಿವೆ. ಕೆಲವು ಕೊತ್ತಳಗಳನ್ನು ನಿಸರ್ಗದತ್ತ ಬೃಹದಾಕಾರದ ಬಂಡೆಗಳ ಸಂದುಗಳಿಗೆ ಕಲ್ಲುಗಳನ್ನೊಟ್ಟಿ ನಿರ್ಮಿಸಲಾಗಿದೆ. ಇವು ಕೋಟೆ ನಿರ್ಮಾಪಕನ





ತಂತ್ರಗಾರಿಕೆಯ ಪ್ರತಿಫಲವಾಗಿವೆ. ಈ ರೀತಿಯ ಕೊತ್ತಳಗಳನ್ನು ಗುಡೇಕೋಟೆ, ಜರಿಮಲೆ ಮತ್ತು ಹಂಪೆ ಕೋಟೆಗಳಲ್ಲಿ ಕಾಣಬಹುದು. ವೀರನದುರ್ಗದ ಕೋಟೆಗೆ ಬಳಸಿರುವ ಶಿಲೆ ಸ್ಥಳೀಯವಾಗಿ ದೊರೆಯುವ ಕಣಶಿಲೆಯಾಗಿದೆ. ಇಲ್ಲಿ ಹಂಪೆ, ಉಚ್ಚಂಗಿದುರ್ಗ, ಚಿತ್ರದುರ್ಗದ ಕೋಟೆಗೆ ಬಳಸಿದಂತೆ ಬೃಹತ್ ಗಾತ್ರದ ಕಲ್ಲುಗಳನ್ನು ತುಂಡರಿಸಿ ಬಳಸಲಾಗಿದೆ. ಈ ಕೋಟೆಗೆ ನಿಸರ್ಗದತ್ತ ಬಂಡೆಗಳೇ ತಳಪಾಯವಾಗಿವೆ.

ಕೋಟೆಯಲ್ಲಿ ನೀರು ಪೂರೈಕೆ

ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ನೀರು ಒಂದು. ಮನುಷ್ಯ ನೀರಿನ ಸೌಲಭ್ಯವಿದ್ದ ಕಡೆ ವಾಸಿಸುತ್ತಾನೆ. ಇಲ್ಲವೆ ತಾನಿದ್ದ ಕಡೆ ನೀರಿನ ವ್ಯವಸ್ಥೆ ಮಾಡಿಕೊಳ್ಳುತ್ತಾನೆ. ಇಲ್ಲಿ ತಾವಿದ್ದ ಕಡೆ ನೀರಿನ ವ್ಯವಸ್ಥೆ ಮಾಡಿಕೊಂಡಿದ್ದರು. ಕೋಟೆಯ ಕೆಳಭಾಗದ ಸುತ್ತಿನಲ್ಲಿ ರುದ್ರಯ್ಯನ ಬಾವಿ ಇದೆ. ಇದು ರುದ್ರಯ್ಯನ ಮಠದ ಆವರಣದಲ್ಲಿರುವದರಿಂದ ಈ ಹೆಸರು ಬಂದಿದೆ. ಇದಕ್ಕೆ ಹೊಂಡವೆಂತಲೂ ಕರೆಯುವರು. ಇದರಲ್ಲಿ ಸದಾ ಕಾಲವು ನೀರು ತುಂಬಿರುತ್ತದೆ. ಇದರ ಅಂತರ್‌ಜಲ ಬತ್ತದಂತೆ ಬೆಟ್ಟದ ಇಳಿಜಾರುಗಳಿಗೆ ಅಡ್ಡ ಗೋಡೆಗಳನ್ನು ಕಟ್ಟಿ, ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಕೋಟೆಯ ಮೇಲ್ಭಾಗದ ಜನರಿಗಾಗಿ ಪ್ರತ್ಯೇಕ ಹೊಂಡಗಳಿವೆ ಇವುಗಳು ಮಳೆಗಾಲದಲ್ಲಿ ಮಾತ್ರ ತುಂಬಿರುತ್ತಿದ್ದವು. ಇಂತಹ ಹೊಂಡಗಳನ್ನು ಬಹುತೇಕ ಎಲ್ಲಾ ಗಿರಿದುರ್ಗಗಳಲ್ಲೂ ಕಾಣಬಹುದು.

ಕೋಟೆಯಲ್ಲಿರುವ ಸ್ಮಾರಕಗಳು

ರುದ್ಯಯ್ಯನಮಠ, ಹೊನ್ನೂರುಸ್ವಾಮಿ ಮಠ, ಮಲಿಯಮ್ಮನ ದೇವಾಲಯ, ಆಂಜನೇಯನ ದೇವಾಲಯ ಹಾಗೂ ವೀರಗಲ್ಲುಗಳು ಈ ಕೋಟೆಯಲ್ಲಿವೆ.

ರುದ್ರಯ್ಯನ ಮಠ : ಇದನ್ನು ಕೆಲವರು ಕೊಟ್ಟೂರೇಶ್ವರ ಮಠವೆಂತಲೂ ಕರೆಯುವರು. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಸಭಾಮಂಟಪದಲ್ಲಿ ಒಟ್ಟು ಆರು ಕಂಬಗಳಿವೆ. ಇವು ವಿಜಯನಗರೋತ್ತರ ಶೈಲಿಯವು. ಇಲ್ಲಿ ವೀರಗಲ್ಲು ಇದೆ. ಎರಡು ಹಂತಗಳಲ್ಲಿರುವ ಇದರಲ್ಲಿ ವೀರನು ಕದನದಲ್ಲಿ ಶತ್ರುಗಳೊಂದಿಗೆ ಹೋರಾಡುವ ಹಾಗೂ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಚಿತ್ರಣಗಳಿವೆ. ಇದರಲ್ಲಿ ಶಾಸನವನ್ನು ಕಡೆಯಲಾಗಿದೆ. ಈ ದೇಗುಲವು ಪೂರ್ವಕ್ಕೆ ಮುಖ ಮಾಡಿದ್ದರೆ, ಇದರ ಮುಂಭಾಗದಲ್ಲಿ ದಕ್ಷಿಣಕ್ಕೆ ಅಭಿಮುಖವಾಗಿರುವ ಹೊನ್ನೂರುಸ್ವಾಮಿ ಮಠವಿದೆ. ಇದು ಇತ್ತೀಚಿನ ವಾಸ್ತು ಕೃತಿ. ಇದರಲ್ಲಿ ಯಾವುದೇ ಮೂರ್ತಿಗಳಿಲ್ಲ.

ಆಂಜನೇಯನ ಗುಡಿ : ಕೋಟೆಯ ಕೆಳಸುತ್ತಿನ ಅಂಗಳದಲ್ಲಿ ಈ ದೇಗುಲವಿದ್ದು, ಪೂರ್ವಾಭಿಮುಖವಾಗಿದೆ. ಇದರಲ್ಲಿ ಗಭಗೃಹ ಮಾತ್ರ ಇದ್ದು ಆಂಜನೇಯನ ಉಬ್ಬುಶಿಲ್ಪವಿದೆ.

ಮಲಿಯಮ್ಮ ದೇವಾಲಯ : ಇದು ಬೆಟ್ಟದ ತುಟ್ಟ ತುದಿಗೆ ಇದೆ. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಪೂರ್ವಾಭಿಮುಖ ವಾಗಿರುವ ಇದರ ಗರ್ಭಗೃಹದಲ್ಲಿ ಕಲ್ಲುಗಂಡುನಿಟ್ಟು, ಪೂಜಿಸುತ್ತಾರೆ. ಮಲಿಯಮ್ಮ ಇಲ್ಲಿನ ಜನರ ಅಧಿದೇವತೆಯಾಗಿದ್ದು, ಇಲ್ಲಿ ಶ್ರಾವಣಮಾಸದ ಮಧ್ಯ ಮಂಗಳವಾರದಂದು ವಿಶೇಷ ಪೂಜೆ ನಡೆಯುತ್ತದೆ. ಈ ದೇಗುಲದ ಹಿಂಭಾಗದಲ್ಲಿರುವ ಬೃಹತ್ ಬಂಡೆಯನ್ನು ಮಲಿಯಮ್ಮನ ಬಂಡೆ ಎಂದೇ ಕರೆಯುತ್ತಾರೆ. ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿದ್ದ ಸ್ಥಳವಿದು. ಕೈದಿಗಳು ಮತ್ತಿತರರನ್ನು ಇಲ್ಲಿಂದ ನೂಕಿ ಕೊಲ್ಲುತ್ತಿದ್ದರು. ಕೋಟೆಯಲ್ಲಿ ವಾಸವಾಗಿದ್ದ ಗುರಿಕಾರರ ಮನೆತನಗಳು ಈಗಿನ ಬೀರಲಗುಡ್ಡ ಗ್ರಾಮದಲ್ಲಿದೆ. ಇವು ಹರಪನಹಳ್ಳಿ ಪಾಳೆಯಗಾರರ ಸೈನ್ಯದಲ್ಲಿ ಗುರಿಕಾರರ ಪ್ರಮುಖ ತಂಡವೇ ಇದ್ದುದಕ್ಕೆ ಪುಷ್ಟಿ ನೀಡುತ್ತದೆ. ಈ ಮನೆತನಗಳಲ್ಲಿ ಇಂದಿಗೂ ಬಂದೂಕು, ಕತ್ತಿ, ಗುರಾಣಿಗಳಿರುವವು.[೯]

ಕೋಟೆಯ ಮಹತ್ವ

ಬಳ್ಳಾರಿ ಜಿಲ್ಲೆಯಲ್ಲಿರುವ ಪ್ರಬಲತರ ಗಿರಿದುರ್ಗಗಳಲ್ಲಿ ವೀರನದುರ್ಗವು ಒಂದು. ಉಚ್ಚಂಗಿದುರ್ಗದ ಕೋಟೆಯಷ್ಟೇ ಇದು ಭದ್ರವಾಗಿದ್ದು, ಶತ್ರುಗಳಿಗೆ ಸಿಂಹಸ್ವಪ್ನವಾಗಿತ್ತು. ಹರಪನಹಳ್ಳಿ ಬಸಪ್ಪನಾಯಕನ ಅವಧಿಯಲ್ಲಿ ಟಿಪ್ಪುಸುಲ್ತಾನನು ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡು ಒಂದು ಯೋಜನೆಯನ್ನು ರೂಪಿಸಿದನು. ಈ ಗುಪ್ತ ಯೋಜನೆಯಂತೆ ನಾಯಕರಸ ಬಸಪ್ಪನಾಯಕನನ್ನು ಸೆರೆಹಿಡಿದು ಕಬ್ಬಾಳದುರ್ಗಕ್ಕೆ ಕಳುಹಿಸಿಕೊಟ್ಟರು. ನಾರಾಯಣದೇವರ ಕೆರೆ, ತಂಬ್ರಹಳ್ಳಿ, ಕರಡಿದುರ್ಗ, ಉಚ್ಚಂಗಿದುರ್ಗ ಮತ್ತು ಹರಪನಹಳ್ಳಿಗಳಿಗೆ ಒಂದೇ ವೇಳೆಗೆ ಮುತ್ತಿಗೆ ಹಾಕಿ ನಾಯಕನನ್ನು ದಂಗು ಬಡಿಸಿದ್ದನು.[೧೦] ಈ ಕೋಟೆಗಳನ್ನು ವಶಪಡಿಸಿಕೊಂಡು ವೀರನದುರ್ಗದ ಮೇಲೂ ದಾಳಿಮಾಡಿದನು. ಆಗ ಈ ಕೋಟೆಯಲ್ಲಿ ರಾಮಯ್ಯನಾಯಕನೆಂಬ ಅಧಿಕಾರಿಯು ಟಿಪ್ಪುಸುಲ್ತಾನನ ವಿರುದ್ಧ ವೀರಾವೇಶದಿಂದ ಹೋರಾಡಿದನು.[೧೧] ನಿರಂತರವಾಗಿ ಒಂದುವಾರದ ಕಾಲ ಕದನ ನಡೆದರೂ ವೀರನದುರ್ಗದ ಕೋಟೆ ಟಿಪ್ಪುವಿನ ವಶವಾಗಲಿಲ್ಲ. ತಾನು ಖಡ್ಗ ಇಟ್ಟಲ್ಲೆಲ್ಲ ಜಯ ಸಂಪಾದಿಸಿದ್ದ ಟಿಪ್ಪು ಗತ್ಯಂತರವಿಲ್ಲದೆ ಇಲ್ಲಿಂದ ಹೊರಡಬೇಕಾಯಿತು. ಮರಳಿ ಈ ಕಡೆ ಸುಳಿಯಲೇ ಇಲ್ಲ. ಟಿಪ್ಪುವಿನೊಂದಿಗೆ ನಡೆದ ಕದನವನ್ನು ನೆನಪಿಸುವ ರಕ್ತ ಬಾಳಯ್ಯನ ಕಟ್ಟೆಯು ಕಾಳಗ ನಡೆದ ಆವರಣದಲ್ಲಿದೆ. ಈ ಕಾಳಗದಲ್ಲಿ ಮಡಿದ ಸೈನಿಕ ರಕ್ತವು ಕಟ್ಟೆಯಲ್ಲಿ ಸಂಗ್ರಹವಾಯಿತೆಂಬುದು ಸ್ಥಳೀಯರ ನಂಬಿಕೆ.

ಸಮೀಕ್ಷೆ

ಹರಪನಹಳ್ಳಿ ಪಾಳೆಯಗಾರರು ಸುಮಾರು ೨೫೦ ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಈ ಅವಧಿಯಲ್ಲಿ ತಮ್ಮ ವಿಸ್ತಾರವಾದ ರಾಜ್ಯದ ಸಂರಕ್ಷಣೆಗಾಗಿ ಹಲವೆಡೆ ಸೈನಿಕ ನೆಲೆಗಳನ್ನು ಸ್ಥಾಪಿಸಿ, ಅದಕ್ಕೊಬ್ಬೊಬ್ಬ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಅವುಗಳಲ್ಲಿ ವೀರನದುರ್ಗವು ಒಂದು. ಹರಪನಹಳ್ಳಿ ಹಾಗೂ ಜರಿಮಲೆ ಗುಡೇ ಕೋಟೆಗಳ ಗಡಿಭಾಗವಾಗಿ ವೀರನದುರ್ಗ ಮಹತ್ವದ ಪಾತ್ರ ನಿರ್ವಹಿಸಿದೆ. ಹರಪನಹಳ್ಳಿ ಪಾಳೆಯಗಾರರ ಉಚ್ಚಂಗಿದುರ್ಗದ ಕೋಟೆಯನ್ನು ಹೊರತು ಪಡಿಸಿದರೆ ಇದೇ ಬಲಿಷ್ಠವಾದ ಗಿರಿದುರ್ಗ. ಇಲ್ಲಿಯ ಭೌಗೋಳಿಕ ಲಕ್ಷಣಗಳೇ ಪಾಳೆಯಗಾರರಿಗೆ ಕೋಟೆ ನಿರ್ಮಿಸಲು ಆಸಕ್ತಿ ಹುಟ್ಟಿಸಿರಬೇಕು. ಇಂಥಹ ಹಲವು ಕೋಟೆಗಳು ಹರಪನಹಳ್ಳಿ ರಾಜ್ಯದ ಗಡಿಭಾಗಗಳಲ್ಲಿದ್ದುದರಿಂದ ಸುತ್ತಲೂ ಶತ್ರುಗಳಿದ್ದರೂ ಹರಪನಹಳ್ಳಿಯವರು ನಿರಾತಂಕವಾಗಿ ಉಸಿರಾಡಲು ಸಾಧ್ಯವಾಯಿತು. ಹೀಗೆ ಹರಪನಹಳ್ಳಿ ಪಾಳೆಯಗಾರರು ಇಂಥಹ ಗಿರಿದುರ್ಗಗಳ ರಕ್ಷಣೆಯಲ್ಲಿದ್ದು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡಿದ್ದರೆಂಬುದರಲ್ಲಿ ಅನುಮಾನವಿಲ್ಲ.

ಟಿಪ್ಪಣಿಗಳು

೧. ಗೋವಿಂದಚಾರ್ಯ ಚಿಕ್ಕೇರೂರು. ಅಪ್ರಕಟಿತ ಹಸ್ತಪ್ರತಿ
೨. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು,* ಪು. ೨೦. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು
೩. *ಅದೇ,* ಪು. ೧೬
೪. *ಅದೇ,* ಪು. ೨೮
೫. ಸೋಮಶೇಖರ್, ಎಸ್.ವೈ. ೧೯೯೯. ಕೂಡ್ಲಿಗಿ ತಾಲೂಕಿನ ವೀರನದುರ್ಗದ ಕೋಟೆ, *ಇತಿಹಾಸ ದರ್ಶನ* - ೧೪. ಪು. ೧೯೧
೬. *ಹರಪನಹಳ್ಳಿ ಪಾಳೆಯಗಾರರು,* ಪೂರ್ವೋಕ್ತ. ಪು. ೧೫
೭. ಸೋಮಶೇಖರ್, ಎಸ್.ವೈ. ೧೯೯೯. ಪೂರ್ವೋಕ್ತ. ಪು. ೧೯೦
೮. *ಹರಪನಹಳ್ಳಿ ಪಾಳೆಯಗಾರರು,* ಪೂರ್ವೋಕ್ತ. ಪು. ೪೦
೯. ಸೋಮಶೇಖರ್, ಎಸ್.ವೈ. ೧೯೯೯. ಪೂರ್ವೋಕ್ತ. ಪು. ೧೯೧
೧೦. *ಹರಪನಹಳ್ಳಿ ಪಾಳೆಯಗಾರರು,* ಪೂರ್ವೋಕ್ತ. ಪು. ೩೬
೧೧. *ಅದೇ, ಪು. ೫೦*

❑❑

೪

ಬಳ್ಳಾರಿ ತಾಲೂಕಿನ ಕೋಟೆಗಳು

(Forts of Bellary Taluk)

೪.೧ ಕುರುಗೋಡು

೪.೨ ಬಳ್ಳಾರಿ

೪

ಬಳ್ಳಾರಿ ತಾಲೂಕಿನ ಕೋಟೆಗಳು

(Forts of Bellary Taluk)

ಬಳ್ಳಾರಿ ನಗರವೂ ಬೆಂಗಳೂರಿನಿಂದ ಉತ್ತರ ದಿಕ್ಕಿಗೆ ಸುಮಾರು ೩೦೬ ಕಿ.ಮೀ. ದೂರದಲ್ಲಿದೆ. ಬಳ್ಳಾರಿಯು ತಾಲೂಕು ಕೇಂದ್ರವಾದಂತೆ ಜಿಲ್ಲಾ ಕೇಂದ್ರವೂ ಆಗಿದೆ. ಈ ತಾಲೂಕಿನ ಕೋಟೆ ಕೊತ್ತಳಗಳ ಅಧ್ಯಯನವು ಇಲ್ಲಿಯ ಮುಖ್ಯ ವಿಷಯ. ಈ ಹಿನ್ನೆಲೆಯಲ್ಲಿ ತಾಲೂಕಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಇತಿಹಾಸ ಪೂರ್ವಕಾಲ ಹಾಗೂ ಪುರಾಣಗಳ ಕಾಲದಿಂದಲೂ ಬಳ್ಳಾರಿಯ ಸುತ್ತಲಿನ ಪ್ರದೇಶ ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ.

ಬಳ್ಳಾರಿ ತಾಲೂಕು ಪ್ರದೇಶದ ಪ್ರಾಕ್ತನ ಶೋಧದಲ್ಲಿ ಹಳೆ ಶಿಲಾಯುಗ, ನವಶಿಲಾಯುಗ ಹಾಗೂ ಸೂಕ್ಷ್ಮ ಶಿಲಾಯುಗದ ಅವಶೇಷಗಳು ದೊರಕಿವೆ. ಇದುವರೆಗೆ ನಡೆದ ಅನ್ವೇಷಣೆ ಮತ್ತು ಉತ್ಖನನಗಳಿಂದ ಹಳೆಯ ಶಿಲಾಯುಗದ ಮಾನವ ಸಂಸ್ಕೃತಿಯಲ್ಲಿ ಆದಿ, ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗ ಎಂದು ಮೂರು ಮುಖ್ಯ ಹಂತಗಳನ್ನು ಗುರುತಿಸಲಾಗಿದೆ.

ನವಶಿಲಾಯುಗ ಸಂಸ್ಕೃತಿಯ ನೆಲೆಗಳು ಬಳ್ಳಾರಿ ತಾಲೂಕಿನ ಕಪ್ಪಗಲ್ಲು, ಸಂಗನಕಲ್ಲು ಗ್ರಾಮಗಳಲ್ಲಿ ದೊರೆತಿವೆ.[1] ಈ ಕಾಲದ ನೆಲೆಗಳು ಎರಡು ವಿಧಗಳಾಗಿವೆ. ಒಂದು ಬೂದಿದಿಬ್ಬಗಳು ಮತ್ತೊಂದು ಗ್ರಾಮದ ನೆಲೆಗಳು. ಬೂದಿದಿಬ್ಬಗಳು ಕುಡತಿನಿ ಕಪ್ಪಗಲ್ಲುಗಳಲ್ಲೂ, ಗ್ರಾಮ ನೆಲೆಗಳನ್ನು ಸಂಗನಕಲ್ಲುಗಳಲ್ಲಿ ಕಾಣಬಹುದು. ಬೂದಿದಿಬ್ಬಗಳು ದನದ ಕೊಟ್ಟಿಗೆಗಳಿಂದ ಸಂಗ್ರಹಿಸಿದ ಸೆಗಣಿಯ ಸುಟ್ಟ ದೊಡ್ಡ ದಿಬ್ಬಗಳಾಗಿವೆ. ಗ್ರಾಮನೆಲೆಗಳು

ಗುಡ್ಡಗಳ ಮೇಲೆ ವಿವಿಧ ಎತ್ತರಗಳಲ್ಲಿ ಕಂಡುಬರುವ ಮಟ್ಟಸ ಪ್ರದೇಶಗಳಾಗಿವೆ. ಈ ಕಾಲದ ಕುಟ್ಟುವ, ಅರೆಯುವ ಸಾಧನಗಳು, ಕಲ್ಲಿನ ಕೊಡಲಿ, ಸುತ್ತಿಗೆ ಕಲ್ಲುಗಳು ಸಂಗನಕಲ್ಲಿನಲ್ಲಿ ದೊರೆತಿವೆ. ಇಂಗಾಲ ೧೪ (Carbon 14) ಎಂಬ ಕಾಲ ನಿಷ್ಕರ್ಷೆಯ ವೈಜ್ಞಾನಿಕ ಪದ್ಧತಿಯ ಆಧಾರದ ಮೇಲೆ ಈ ಸಂಸ್ಕೃತಿಯ ಕಾಲ ಕ್ರಿ.ಪೂ. ೨೪೦೦ ರಿಂದ ಕ್ರಿ.ಪೂ. ೧೦೦೦ವರೆಗೆ ಎಂದು ಗುರುತಿಸಲಾಗಿದೆ.[೨] ಸಂಗನಕಲ್ಲು ಮತ್ತು ಕಪ್ಪಗಲ್ಲುಗಳಲ್ಲಿ ಬೃಹತ್ ಶಿಲಾಯುಗದ ಅವಶೇಷಗಳೂ ದೊರಕಿವೆ.[೩] ತಾಮ್ರ ಶಿಲಾಯುಗದ ನೆಲೆಗಳು ಸಂಗನಕಲ್ಲು ಮತ್ತು ಕುರುಗೋಡುಗಳಲ್ಲಿ ಕಂಡುಬಂದಿವೆ.[೪] ಇಲ್ಲಿಯ ಬೆಟ್ಟಗಳ ಕಲ್ಲಾಸರೆಯಲ್ಲಿ ಮನುಷ್ಯರ ಪ್ರಾಣಿಗಳು, ಪಕ್ಷಿಗಳ ವಿಚಿತ್ರ ರೇಖಾಚಿತ್ರಗಳು ಬಿಡಿಬಿಡಿಯಾಗಿಯೂ ಗುಂಪುಗುಂಪಾಗಿಯೂ ಇವೆ. ಬಿಡಿ ಚಿತ್ರಗಳಲ್ಲಿ ನಗ್ನಪುರುಷ, ಗರ್ಭಧರಿಸಿದ ಜಿಂಕೆ, ಚಿಗರೆ, ಎತ್ತು, ಆಕಳು, ಆನೆ, ಚಿರತೆ, ಹುಲಿ, ಮೊಸಳೆ, ನವಿಲುಗಳು, ಗುಂಪುಚಿತ್ರಗಳಲ್ಲಿ ಸಮೂಹ ನೃತ್ಯ ಬೇಟೆಯಾಡುವ ದೃಶ್ಯಗಳಿವೆ. ಶೈಲಿ ಪ್ರಮಾಣ ಬದ್ಧತೆಗಳಲ್ಲಿ ವೈಪರೀತ್ಯವನ್ನು ಹೊಂದಿರುವ ಇವು ಕರ್ನಾಟಕದ ಅತಿ ಪ್ರಾಚೀನ ಗವಿವರ್ಣ ಚಿತ್ರಗಳಾಗಿವೆ. ಸಂಗನಕಲ್ಲಿನಲ್ಲಿ ಸೂಕ್ಷ್ಮ ಶಿಲಾಯುಗದ ಅವಶೇಷಗಳನ್ನು ಮತ್ತು ಕಬ್ಬಿಣ ಯುಗದ ಬೃಹತ್ ಶಿಲಾಗೋರಿಗಳನ್ನು ಎಂ.ಎಸ್. ನಾಗರಾಜರಾವ್ ಮತ್ತು ಅನ್ಸಾರಿ ಅವರು ಪತ್ತೆಹಚ್ಚಿದ್ದಾರೆ. ಇಂಗಾಲ ೧೪ ಪ್ರಕಾರ ಕಬ್ಬಿಣಯುಗದ ಕಾಲ ಕ್ರಿ.ಪೂ. ೧೧೦೦ - ೧೨೦೦ ಎಂದು ಊಹಿಸಲಾಗಿದೆ.[೫]

ಇತಿಹಾಸ ಕಾಲದಲ್ಲಿ ಲಿಖಿತ ದಾಖಲೆಗಳು ತುಂಬ ನೆರವನ್ನೊದಗಿಸುತ್ತವೆ. ಕ್ರಿ.ಶ. ೧ನೆಯ ಶತಮಾನದಿಂದ ೪ನೆಯ ಶತಮಾನದ ನಡುವೆ ದಕ್ಷಿಣ ಬ್ರಾಹ್ಮಿಯ ವೈಶಿಷ್ಟ್ಯ ಹೊಂದಿದ ಕೆಲವು ಪ್ರಾಕೃತ ಶಾಸನಗಳು ದೊರೆತಿವೆ. ಅಶೋಕನ ತರುವಾಯದ ಪ್ರಾಕೃತ ಶಾಸನಗಳೆನ್ನಬಹುದಾದ ಅವುಗಳು ಬಳ್ಳಾರಿ ತಾಲೂಕಿಗೆ ಸೇರಿವೆ.[೬] ಬಳ್ಳಾರಿಯ ಬಹುತೇಕ ಪ್ರದೇಶ ಶಾತವಾಹನರ ಆಳ್ವಿಕೆಗೆ ಒಳಗಾಗಿತ್ತು.

ಉತ್ತರ ಕರ್ನಾಟಕದ ಪ್ರಾಚೀನ ಅರಸು ಮನೆತನಗಳಲ್ಲಿ ಬಾದಾಮಿ ಚಾಲುಕ್ಯ ವಂಶವು ಪ್ರಮುಖವಾದುದು. ಈ ಮನೆತನದ ಚಕ್ರವರ್ತಿಗಳು ಇಲ್ಲಿ ಆಳ್ವಿಕೆ ಮಾಡಿದ್ದರೆಂಬುದಕ್ಕೆ ಕುರುಗೋಡು ಶಾಸನವು ಸ್ಪಷ್ಟ ದಾಖಲೆಯನ್ನು ಒದಗಿಸಿದೆ.[೭]

ಕ್ರಿ.ಶ. ೭ನೆಯ ಶತಮಾನದ ಆದಿಯಲ್ಲಿ ಶಾಸನಗಳ ಪ್ರಾಕರ ಕುರುಗೋಡು ಕೋಟೆ ಬಾದಾಮಿಯ ಚಾಲುಕ್ಯರ ವಶದಲ್ಲಿತ್ತೆಂದು ಕುಂಬಾಸ ರವರು ಅಭಿಪ್ರಾಯಪಟ್ಟಿರುವರು.[೮] ಕುರುಗೋಡು ಕೋಟೆಯ ಉಲ್ಲೇಖಗಳು ನಮಗೆ ಕ್ರಿ.ಶ. ೧೧೭೬ ಶಾಸನಗಳಿಂದೀಚೆಗೆ ಕಂಡುಬರುತ್ತವೆ.[೯] ಹಾಗಾಗಿ ಈ ತಾಲೂಕಿನಲ್ಲಿಯೇ ಅತ್ಯಂತ ಪ್ರಾಚೀನ ಕೋಟೆಯೆಂದರೆ ಕುರುಗೋಡಿನದು.

ಕುಡತಿನಿಯನ್ನು ಕೊಟ್ಟಿತೊಣಿ ಎಂದು ಕರೆದಿರುವ ರಾಷ್ಟ್ರಕೂಟರ ಶಾಸನಗಳು ಕುಡತಿನಿಯಲ್ಲಿವೆ.[೧೦] ಇದು ಪ್ರಾಚೀನ ಮಾನವನ ನೆಲೆಯಾಗಿದ್ದು ಕಾರ್ತಿಕೇಯನ ತಪೋವನವಾಗಿದೆ. ಕಲ್ಯಾಣ ಚಾಳುಕ್ಯರ ಹತ್ತಾರು ಶಾಸನಗಳು ಹಾಗೂ ವಾಸ್ತು ಕೃತಿಗಳು ಇಲ್ಲಿವೆ. ವಿಜಯನಗರ ಕಾಲಾವಧಿಯಲ್ಲಿ ನಾಣ್ಯಗಳನ್ನು ಮುದ್ರಿಸುವ ಟಂಕಶಾಲೆ ಇದಾಗಿತ್ತು.

ಕೊಳಗಲ್ಲನ್ನು ರಾಷ್ಟ್ರಕೂಟರ ಶಾಸನಗಳು ಕೊಳ್ಗಲ್ಲ ಎಂದು ಕರೆದಿವೆ.[೧೧] ಇದೂ ಕೂಡ ಕಾರ್ತಿಕೇಯನ ಪ್ರಾಚೀನ ತಪೋವನವಾಗಿದೆ. ಇಲ್ಲಿಯೂ ಕಲ್ಯಾಣ ಚಾಳುಕ್ಯರ ಶಾಸನಗಳು ಹಾಗೂ ವಾಸ್ತು ಕೃತಿಗಳಿವೆ.

ಕೋಳೂರಿನ ಕ್ರಿ.ಶ. ೧೧೪೭ರ ಚಾಳುಕ್ಯ ಜಗದೇಕ ಮಲ್ಲದೇವನ ಶಾಸನವು ನಂದರು ಮತ್ತು ಮೌರ್ಯರನ್ನು ಉಲ್ಲೇಖಿಸುತ್ತದೆ.[೧೨] ಬಲ್ಲಕುಂದೆ ೩೦೦ರ ಪ್ರಮುಖ ಪಟ್ಟಣಗಳಲ್ಲಿ ಕೋಳೂರು ಒಂದು. ಇಲ್ಲಿ ಪಟ್ಟಣದ ರಕ್ಷಣೆಗಾಗಿ ಕೋಟೆಯೊಂದನ್ನು ನಿರ್ಮಿಸಲಾಗಿತ್ತು.[೧೩] ಈಗ ಕೋಟೆಯ ಯಾವ ಅವಶೇಷಗಳು ಉಳಿದಿಲ್ಲ. ಪ್ರಾಯಶಃ ಕುರುಗೋಡಿನ ಸಮಕಾಲೀನ ಕೋಟೆ ಇಲ್ಲಿದ್ದಿರಬಹುದು. ಕುರುಗೋಡು ಗಿರಿದುರ್ಗವಾಗಿದ್ದರಿಂದ ಇಂದಿನ ತನಕ ಕೋಟೆಯ ಅವಶೇಷಗಳು ಉಳಿದಿವೆ.

ಓರುವಾಯಿ ಬಲ್ಲುಕುಂದೆ ನಾಡಿನಲ್ಲಿ ಬರುವ ಕೆಲವೇ ಪ್ರಮುಖ ನೆಲೆಗಳಲ್ಲಿ ಇದೂ ಒಂದು. ಕಲ್ಯಾಣ ಚಾಳುಕ್ಯ[೧೪] ಮತ್ತು ಅವರ ಸಾಮಂತ ದೊರೆಗಳಾದ ಸಿಂದವಂಶದ, ಹೊಯ್ಸಳರ ಶಾಸನಗಳು ಇಲ್ಲಿ ಕಂಡುಬರುತ್ತವೆ.[೧೫]

ಹಾವಿನಾಳು ವೀರಾಪುರ[೧೬], ಕಲ್ಕಂಭ[೧೭], ಸಿಂದಿಗೇರಿ[೧೮], ದಮ್ಮೂರು[೧೯] ಗಳಲ್ಲಿ ಕಲ್ಯಾಣ ಚಾಳುಕ್ಯರ ಶಾಸನಗಳು ಕಂಡುಬರುತ್ತವೆ. ಮೋಕ[೨೦], ಸೋಮಸಮುದ್ರ[೨೧], ಯಾಲ್ಪಿ[೨೨], ಯಾಲ್ಪಿ ಕಗ್ಗಲ್ಲು[೨೩]ಗಳಲ್ಲಿ ವಿಜಯನಗರ ಕಾಲದ ಶಾಸನಗಳು ಕಂಡುಬರುತ್ತವೆ. ಇದಿಷ್ಟು ಈ ತಾಲೂಕಿನ ಪ್ರಾಚೀನ ಇತಿಹಾಸ. ಹಂತಹಂತವಾಗಿ ನಿರ್ಮಾಣವಾಗಿರುವ ಎರಡು ಪ್ರಮುಖ ಕೋಟೆಗಳು ಮಾತ್ರ ಉಳಿದುಕೊಂಡಿವೆ. ಅವುಗಳನ್ನು ಈ ಮುಂದೆ ಚರ್ಚಿಸಲಾಗಿದೆ.

ಟಿಪ್ಪಣಿಗಳು

೧. ಸುಂದರ, ಅ. ಮತ್ತು ಮುಧೋಳ, ಎಂ.ಎಸ್. ೧೯೯೭. ಪೂರ್ವಭಾವಿ ಇತಿಹಾಸ ಹಂತದ ಸಂಸ್ಕೃತಿಗಳು, *ಕರ್ನಾಟಕ ಚರಿತ್ರೆ ಸಂ - ೧* (ಸಂ : ಪ್ರೊ. ಶೇಕ್ ಅಲಿ ಬಿ ಮತ್ತು ಅ. ಸುಂದರ), ಪು. ೧೮೯-೧೯೫. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. ಗೋಪಾಲ, ಬಾ.ರಾ. ೧೯೮೭. *ನವಶಿಲಾಯುಗ* - ಉಪನ್ಯಾಸ ಗ್ರಂಥಮಾಲೆ, ಪು. ೫೬. ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ

೩. Sundara, A. 1975. *The Early Chambers Tombs of South India. Delhi : University Publishers*

೪. ಚನ್ನಬಸವಯ್ಯ ಹಿರೇಮಠ. ೧೯೯೫. *ಕುರುಗೋಡು ಸಿಂದರು : ಒಂದು ಅಧ್ಯಯನ, ಪು. ೯೦.* ಕೊಪ್ಪಳ : ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ

೫. *ಅದೇ,* ಪು. ೯೦

೬. ಕೊಪ್ಪಾ, ಎಸ್.ಕೆ. ಕರ್ನಾಟಕದಲ್ಲಿಯ ಪ್ರಾಕೃತ ಭಾಷಾ ಶಾಸನಗಳು, *ಕನ್ನಡ ಭಾರತಿ-೧೧,* ಪು. ೭. ಬೆಂಗಳೂರು

೭. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) ೧,* ಪು. ೧೯. ಹಂಪಿ: ಕನ್ನಡ ವಿಶ್ವವಿದ್ಯಾಲಯ

೮. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ,* ಪು. ೩೬-೩೭. ಕುಂಚೂರು : ಮಾಲತೇಶ ಪ್ರಕಾಶನ

೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೯-೧೦

೧೦. *ಅದೇ,* ಪು. ೫೩

೧೧. A.R. No. 234 of 1913, SII IX No. 67. ಕೊಳಗಲ್ಲ

೧೨. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೨

೧೩. *ಅದೇ,* ಪು. ೭

೧೪. *ಅದೇ,* ಪು. ೫೮-೬೦

೧೫. *ಅದೇ,* ಪು. ೫೫

೧೬. *ಅದೇ,* ಪು. ೫೫

೧೭. *ಅದೇ,* ಪು. ೫೫

೧೮. *ಅದೇ,* ಪು. ೫೫

೧೯. *ಅದೇ,* ಪು. ೫೬

೨೦. *ಅದೇ,* ಪು. ೫೫

೨೧. *ಅದೇ,* ಪು. ೫೫

೨೨. *ಅದೇ,* ಪು. ೫೬

೨೩. *ಅದೇ,* ಪು. ೫೭

೪.೧ ಕುರುಗೋಡು


ಕುರುಗೋಡು ಬಳ್ಳಾರಿ ತಾಲೂಕಿಗೆ ಸೇರಿದ ಪಟ್ಟಣಪ್ರದೇಶ. ಇದು ಬಳ್ಳಾರಿ ಜಿಲ್ಲಾ ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ೨೮ ಕಿ.ಮೀ. ದೂರದಲ್ಲಿದೆ. ನೇಯ್ಗೆ ಕೆಲಸಕ್ಕೆ ಪ್ರಸಿದ್ಧಿ ಪಡೆದಿದೆ. ಈ ಪಟ್ಟಣದ ಉತ್ತರದ ಬೆಟ್ಟದಲ್ಲಿ ಕೋಟೆಯ ಕೆಲವು ಸುತ್ತಗಳು ಉಳಿದುಕೊಂಡಿವೆ.

ಕುರುಗೋಡನ್ನು ಕ್ರಿ.ಶ. ಸುಮಾರು ೭ನೆಯ ಶತಮಾನದ ಶಾಸನವು[೧] ಕುರುಂಗೋಡ ಎಂದು ಕರೆದರೆ, ಕ್ರಿ.ಶ. ೧೧೭೭ರ ಶಾಸನವು[೨] ಕುರುಗೋಡು ಎಂದಿದೆ. ನಂತರದ ಶಾಸನಗಳು ಕುರುಗಾಡು, ಎಂದು ಕರೆದಿವೆ. ಕುರುಂಗೋಡ > ಕುರುಗೋಡು (ಕುರು (ಚಿಕ್ಕ) + ಕೋಡು) (ಶಿಖರ > ಕುರುಂಗೋಡು > ಕುರುಂಗೋಡು > ಕುರುಗೋಡು ಎಂದಾಗಿದೆ.

ಈ ಗ್ರಾಮದ ಸುತ್ತಲೂ ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟಸಾಲುಗಳಿವೆ. ಇವುಗಳ ಆಶ್ರಯದಲ್ಲಿ ಆದಿಮಾನವನ ಸಂಸ್ಕೃತಿ ಬೆಳೆದುಬಂತು. ಅವನು ಬಳಸಿದ ಉಜ್ಜಿ ನಯಗೊಳಿಸಿದ ಕೈಗೊಡಲಿಗಳು ಕಪ್ಪು - ಕೆಂಪು ಮಡಿಕೆ ಚೂರುಗಳು ಮುಂತಾದ ಅವಶೇಷಗಳು ಕಂಡುಬರುತ್ತವೆ. ಕುರುಗೋಡು ಗ್ರಾಮದ ವರ್ಣಚಿತ್ರಗಳನ್ನು ಶೋಧಿಸಿದ ಅ. ಸುಂದರರವರು[೩] ಇದು ತಾಮ್ರ ಶಿಲಾಯುಗದ ಕಾಲಕ್ಕೆ ಸೇರಿದೆ ಎಂದಿದ್ದಾರೆ. ಅಲ್ಲದೇ ಬೆಟ್ಟಗಳ ಕಲ್ಲಾಶ್ರಯಗಳಲ್ಲಿ ಪ್ರಾಣಿ ಮತ್ತು ಮನುಷ್ಯರ ಪ್ರಾಗಿತಿಹಾಸ ಕಾಲದ ರೇಖಾಚಿತ್ರಗಳಿವೆ. ಇತಿಹಾಸ ಯುಗದಲ್ಲಿ ಕ್ರಿ.ಶ. ೨-೩ನೆಯ ಶತಮಾನಕ್ಕೆ ಸೇರಬಹುದಾದ ಕುರುಗೋಡು ಮತ್ತು ಹಂಪೆ ಶಾಸನಗಳು ಹೆಚ್ಚು ತೃಟಿತಗೊಂಡಿರುವುದರಿಂದ ಹೆಚ್ಚಿನ ಅಂಶಗಳು ತಿಳಿಯದಿದ್ದರೂ ಇಲ್ಲಿಯ ಬಹುಭಾಗವೂ ಶಾತವಾಹನ ಆಳ್ವಿಕೆಗೆ ಒಳಪಟ್ಟಿದ್ದು, ಅದು ಶಾತವಾಹನಿಹಾರ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದ್ದಿತು. ಈ ಪ್ರದೇಶ ಬಾದಾಮಿ ಚಾಲುಕ್ಯರ ವ್ಯಾಪ್ತಿಯಲ್ಲಿದ್ದು, ಇತ್ತೀಚಿನವರೆಗೂ ಪ್ರಸಿದ್ಧಿಯಲ್ಲಿರುವ ಕುರುಗೋಡು ಸಿಂದರ ಆಳ್ವಿಕೆಯಲ್ಲಿ ಪ್ರಮುಖ ಆಡಳಿತಕೇಂದ್ರವಾಗಿತ್ತು. ಆಗ ನೊಳಂಬವಾಡಿ - ೩೨೦೦೦, ಕದಂಬಳಿಗೆ - ೧೦೦೦, ಕೋಗಳಿ - ೫೦೦, ಬಲ್ಲಕುಂದೆ - ೩೦೦ ಇವು ಆಡಳಿತ ಕೇಂದ್ರಭಾಗಗಳು. ಇವುಗಳಲ್ಲಿ ಈ ಬಲ್ಲಕುಂದೆ ನಾಡಿಗೆ ರಾಜಧಾನಿಯಾದುದು ಕರುಗೋಡು ಆಗ ಈ ಪಟ್ಟಣ ವಿಸ್ತೃತವಾಗಿ ಬೆಳೆಯಿತು ಬೆಳೆದ ಪಟ್ಟಣದ ರಕ್ಷಣೆಗಾಗಿ ಸುತ್ತಲೂ ಕೋಟೆಯನ್ನು ಕಟ್ಟಿಕೊಂಡರು. ವಿಜಯನಗರದ ಅರಸರು ಈ ಕೋಟೆಯನ್ನು ಭದ್ರಪಡಿಸಿಕೊಂಡಿರಬಹುದು. ಏಕೆಂದರೆ ಅವರ ಆಡಳಿತ ಅವಧಿಯಲ್ಲಿ ಕುರುಗೋಡು ಹಲವು ಗ್ರಾಮಗಳನ್ನೊಳಗೊಂಡ ಸೀಮೆಯಾಗಿತ್ತು.[೪] ಹಂಡೆಯ ಪಾಳೆಯಗಾರರು ಈ ಆಯಾಕಟ್ಟಿನ ಕುರುಗೋಡು ಕೋಟೆಯಲ್ಲಿಯೇ ಆಶ್ರಯಪಡೆದು ಕೆಲವು ಕಾಲ ಇಲ್ಲಿ ಆಳ್ವಿಕೆ ಮಾಡಿದರು. ನಂತರ ಕ್ರಮವಾಗಿ ಹೈದರಾಲಿ, ಟಿಪ್ಪು ಮತ್ತು ಬ್ರಿಟಿಷರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತು.

ಕೋಟೆಯ ಲಕ್ಷಣಗಳು

ಈ ಕೋಟೆಯು ಬಳ್ಳಾರಿ ಜಿಲ್ಲೆಯ ಪ್ರಾಚೀನ ಗಿರಿದುರ್ಗಗಳಲ್ಲಿ ಎರಡನೆಯದು. ಪ್ರಕೃತಿದತ್ತವಾದ ಬೆಟ್ಟ - ಗುಪ್ಪಗಳಿಂದ ಸುತ್ತುವರೆದಿದ್ದ ಈ ಪಟ್ಟಣದಲ್ಲಿ ಗುಡ್ಡದ ಮೇಲೆ ತುಂಬ ಎತ್ತರದ ಕೋಟೆ ಇತ್ತು. ಇದನ್ನು ಕುರುಗೋಡಿನ ಶಾಸನವು[೫] ''ಮುಗಿಲುದ್ದವಾಗಿ ಮೂವಳಿಸಿದ ಕೋಟೆ'' ಎಂದು ಕರೆದಿದೆ. ಆದರೆ ಈ ಶಾಸನದಲ್ಲಿ ಈ ಕೋಟೆಯಲ್ಲಿ ಎಷ್ಟು ಸುತ್ತುಗಳಿವೆ. ಅದರ ವ್ಯಾಪ್ತಿ ಎಷ್ಟು ಎಂಬ ಬಗ್ಗೆ ಮಾಹಿತಿಗಳಿಲ್ಲ. ''ನಾಲ್ಕು ಸುತ್ತಿನ ಕೋಟೆಯೊಳಗೆ ಕಂಗೊಳಿಸುತ್ತಿದ್ದ ಪ್ರಾಚೀನ ಕುರುಗೋಡು'' ಎಂದು ಕೈಫಿಯತ್ತಿನಲ್ಲಿ[೬] ವರ್ಣಿಸಲಾಗಿರುವದರಿಂದ ಇದು ನಾಲ್ಕು ಸುತ್ತಿನ ಕೋಟೆ ಎಂಬುದು ಸ್ಪಷ್ಟ. ಕಂಪ್ಲಿ ಕಡೆಯಿಂದ ಕುರುಗೋಡನ್ನು ಪ್ರವೇಶಿಸುವಾಗ ಸಿಗುವ ಮೊದಲನೇ ಕೋಟೆ ಅಥವಾ ಹೊರಕೋಟೆ ಬಹಳ ವಿಶಾಲವಾದದ್ದು. ಇದು ಇಡೀ ಊರನ್ನಲ್ಲದೆ ಕಿಲ್ಲೆದುರ್ಗ, ಬೂದಿಕೊಳ್ಳದ ಗುಡ್ಡ, ಬಾಳೆಕೊಳ್ಳದ ಗುಡ್ಡ, ಬಾಲೆಕಿಲ್ಲೆ, ಜಿಂಕಲ ಹರವಿನ ಗುಡ್ಡ, ಕೋಳಿಗುಡ್ಡ, ರಾಮಲಿಂಗನ ಗುಡ್ಡ, ದಿಡ್ಡಿ ಹನುಮಂತನ ಕಣಿವೆ ಮತ್ತು ಹಾಲಭಾವಿ ಕಣಿವೆಯನ್ನು ಸುತ್ತುವರೆದಿರುವುದು ತಿಳಿದುಬರುವ ಅಂಶ.[೭]




ಬೆಟ್ಟದ ಮೇಲಿರುವ ಕೋಟೆ

ಬಳ್ಳಾರಿಯಿಂದ ಕುರುಗೋಡಿಗೆ ಬರುವಾಗ ಕೋಟೆಯ ಎರಡನೆ ಸುತ್ತಿನ ಅವಶೇಷಗಳು ಕಂಡುಬರುವವು. ಇದನ್ನು ಪ್ರಾಯಶಃ ಹನುಮಂತನ ಗುಡ್ಡದ ದಕ್ಷಿಣ ತುದಿಯಿಂದ ಪ್ರಾರಂಭಮಾಡಿ ದೊಡ್ಡ ಬಸವೇಶ್ವರ ಗುಡಿಯನ್ನು ಬಳಸಿಕೊಂಡು ಕಟ್ಟಿರಬೇಕು. ಕುರುಗೋಡಿನಿಂದ ಸಿರಿಗೇರಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ಕೋಟೆಯ ಮೂರನೆಯ ಸುತ್ತಿನ ಬಾಗಿಲಿದೆ. ಇದು ಪಶ್ಚಿಮ ಬೆಟ್ಟವನ್ನು ಸುತ್ತುವರೆದು ಹಿಂಡುಲಿ ಸಂಗಮೇಶ್ವರ ದೇವಾಲಯದ ಪಶ್ಚಿಮಕ್ಕೆ ಸಂಪೂರ್ಣ ಹಾಳಾಗಿಹೋದ ಗೋಡೆಯೇ ಶಾಸನೋಕ್ತ ಕೋಟೆಯ ಮೂರನೆಯ ಸುತ್ತು. ಇದನ್ನು ಜಿಂಕಲ ಹರವಿನ ಗುಡ್ಡಕ್ಕೆ ಹೊಂದಿಕೊಂಡಿರುವ ಪ್ರಾಚೀನ ಕೋಟೆಯೆಂದು ಕೈಫಿಯತ್ತು ಕರೆದಿದೆ. ಹನುಮಂತನ



ಗುಡ್ಡದ ತುದಿಯಲ್ಲಿರುವುದೇ ಕೋಟೆಯ ನಾಲ್ಕನೇ ಸುತ್ತು ಇದನ್ನು ಹಂಡೆ ಪಾಳೆಯಗಾರರು ಕಟ್ಟಿಸಿರುವರೆಂದು ಕುರುಗೋಡು ಕೈಫಿಯತ್ತು ಹೇಳುತ್ತದೆ.[೮] ಇದರೊಳಗೆ ವಸತಿಯ ಅವಶೇಷಗಳು, ಆಂಜನೇಯ ಗುಡಿ, ಬಾವಿ ಹಾಗೂ ಖಾಲಿ ಮಂಟಪಗಳಿವೆ. ಇದು ಸುರಕ್ಷಿತ ಹಾಗು ಭದ್ರವಾಗಿರುವುದರಿಂದ ಇಲ್ಲಿಯೇ ಹಂಡೆ ಪಾಳೆಯಗಾರರು ನೆಲೆಸಿರಬಹುದು.




ಕೋಟೆಯ ಪೂರ್ವದಿಕ್ಕಿನ ಪ್ರವೇಶದ್ವಾರ

ಈ ಮೇಲೆ ಉಲ್ಲೇಖಿಸಿದ ಕೋಟೆಯ ನಾಲ್ಕು ಸುತ್ತುಗಳಲ್ಲಿ ಮೊದಲ ಹಾಗೂ ಎರಡನೆಯ ಸುತ್ತಿನ ಕೋಟೆಗಳು ನಾಮಾವಶೇಷವಾಗಿವೆ. ಈಗ ಉಳಿದಿರುವುದು ಕೋಟೆಯ ಮೂರು ಮತ್ತು ನಾಲ್ಕನೆ ಸುತ್ತುಗಳು ಮಾತ್ರ. ಈ ಗೋಡೆಗಳ ಪೂರ್ವಭಾಗಕ್ಕೆ ಪ್ರವೇಶ ದ್ವಾರಗಳಿವೆ. ಮೂರನೆಯ ಸುತ್ತಿನ ಗೋಡೆಯಲ್ಲಿರುವ ಬಾಗಿಲು ಸುಮಾರು ೨೦ ಅಡಿ ಎತ್ತರ ಮತ್ತು ೮ ಅಡಿ ಅಗಲವಾಗಿದೆ. ಮೇಲಿನ ಛತ್ತು ಹಾಳಾಗಿದೆ. ಇದರ ಬಲಭಾಗದ ಕೋಟೆಗೋಡೆಯಲ್ಲಿ ನಂದಿಯ ಉಬ್ಬುಶಿಲ್ಪವಿದೆ. ಮುಂಭಾಗದಲ್ಲಿ ಆಂಜನೇಯನ ದೇವಾಲಯವಿದೆ. ಇದನ್ನು ಕೋಟೆ ಆಂಜನೇಯನೆಂದು ಕರೆಯುವರು. ನಾಲ್ಕನೇ ಸುತ್ತಿನ ಕೋಟೆಯ ಬಾಗಿಲು ಕೋಟೆಯೊಳಗೆ ನೇರವಾದ ಪ್ರವೇಶವನ್ನು ನೀಡುವುದಿಲ್ಲ. ದೂರದಿಂದ ನೋಡಿದಾಗ ಈ ಬಾಗಿಲು ಕಾಣುವುದಿಲ್ಲ. ಬಾಗಿಲು ಎರಡು ಪಾರ್ಶ್ವಗಳಲ್ಲಿ ಮತ್ತು ಮುಂಭಾಗದಲ್ಲಿ ಅದೇ ರೀತಿಯ ಗೋಡೆಗಳನ್ನು ಕಟ್ಟಿ ಅದನ್ನು ಮರೆಮಾಡಿ ಗೋಡೆಯಲ್ಲಿ ಪ್ರವೇಶ ಕಲ್ಪಿಸಲಾಗಿದೆ. ಹೀಗಾಗಿ ಒಳಗೆ ಬರುವ ದಾರಿಯು ಅಂಕು ಡೊಂಕಾಗುವುದು. ಇದರ ಎರಡೂಬದಿಗೆ ಕೊತ್ತಳಗಳಿವೆ. ಬಾಗಿಲಿನ ಮೂಲಕ ಅಂಕುಡೊಂಕಾದ ದಾರಿಯಲ್ಲಿ ಒಳ ಪ್ರವೇಶಿಸಲು ಪ್ರಯತ್ನಿಸುವ ವೈರಿಸೈನ್ಯವನ್ನು ಕೋಟೆಗೋಡೆಯ ಮತ್ತು ಕೊತ್ತಳಗಳ ಮೇಲೆ ಸಂರಕ್ಷಣೆಗಾಗಿ ನಿಂತ ಸೈನಿಕರು ಸುಲಭವಾಗಿ ಸದೆಬಡಿಯಲು ಅನುಕೂಲವಾಗುತ್ತಿತ್ತು.

ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಇವು ವೃತ್ತಾಕಾರವಾಗಿದ್ದು, ಕೋಟೆ ಗೋಡೆಗಿಂತ ಎತ್ತರವಾಗಿವೆ. ಬೆಟ್ಟದ ಮೇಲಿನ ಕೋಟೆಯಲ್ಲಿ ಕೆಲವು ಕೊತ್ತಳಗಳನ್ನು ಹಾಸುಬಂಡೆಗಳ ಮೇಲೆ ನಿರ್ಮಿಸಲಾಗಿದೆ. ಈಗ ಸುಮಾರು ೧೫ ಕೊತ್ತಳಗಳು ಮಾತ್ರ ಗೋಚರಿಸುತ್ತವೆ.





ಕೊತ್ತಳ

ಈ ಕೋಟೆಯನ್ನು ಕೆತ್ತಿ ನಯಮಾಡಿದ ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಮಧ್ಯದಲ್ಲಿ ಸಂಧಿ ಇಲ್ಲದಂತೆ ಒಂದುಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಕೆತ್ತಿ ಜೋಡಿಸಲಾಗಿದೆ. ಕಲ್ಲುಗಳ ಮಧ್ಯದಲ್ಲಿ ಯಾವುದೇ ಗಾರೆ ಇಲ್ಲ. ಸುಮಾರು ೧೫ ಅಡಿ ಎತ್ತರವಿರುವ ಕೋಟೆಯ ಮೇಲಿನ ಕಲ್ಲಿನ ಸಾಲು ಸ್ವಲ್ಪ ಮುಂದೆ ಚಾಚಿಗೊಂಡಿದೆ. ಕೋಟೆಯ ಅಗಲ ಸುಮಾರು ೩ ಅಡಿ. ಮೇಲಿದ್ದ ಮಣ್ಣಿನ ಕುಂಬೆಯ ಅವಶೇಷಗಳು ಕಾಣುತ್ತವೆ. ಕೋಟೆಯ ಹೊರಮೈಯನ್ನು ಮಧ್ಯಮಗಾತ್ರದ ಕಲ್ಲುಗಳಿಂದ ಮತ್ತು ಒಳಮೈಯನ್ನು ಚಿಕ್ಕ ಕಲ್ಲುಗಳಿಂದ ಮಧ್ಯದಲ್ಲಿ ಮಣ್ಣುತುಂಬಿ ಕಟ್ಟಿದೆ. ಬೆಟ್ಟದ ಮೇಲಿರುವ ಕೋಟೆಗೋಡೆಗಳು ಮಾತ್ರ ಉಳಿದುಕೊಂಡಿವೆ. ಕೆಲವೆಡೆ ಕಲ್ಲಿನಭಾಗ ಬಿದ್ದುಹೋಗಿ ಮಧ್ಯದಲ್ಲಿನ ಮಣ್ಣಿನ ಭಾಗ ಮಾತ್ರ ಉಳಿದಿದೆ.

ಕೋಟೆಯ ನಿರ್ಮಾಣ

ಕುರುಗೋಡು ಕೋಟೆಯ ನಿರ್ಮಾಪಕರು ಮತ್ತದರ ಕಾಲವನ್ನು ನಿಖರವಾಗಿ ಹೇಳುವುದು ಕಷ್ಟವಾದರೂ ಶಾಸನಾಧಾರಗಳಿಂದ ಈ ಕೆಳಗಿನಂತೆ ಚರ್ಚಿಸಿದೆ. ಇಲ್ಲಿ ದೊರೆತಿರುವ ಬಾದಾಮಿ ಚಾಳುಕ್ಯ ಸತ್ಯಾಶ್ರಯನ ಶಾಸನದಲ್ಲಾಗಲಿ ಅಥವಾ ಈ ಮುಂಚಿನ ಯಾವುದೇ ದಾಖಲೆಗಳಲ್ಲಿ ಕುರುಗೋಡು ಕೋಟೆಯ ಪ್ರಸ್ತಾಪಗಳಿರುವುದಿಲ್ಲ. ಕಲಚೂರಿಗಳ ಕ್ರಿ.ಶ. ೧೧೭೩[೧೦] ರ ಶಾಸನವನ್ನು ಸೇರಿದಂತೆ ಇತ್ತೀಚಿನ ಶಾಸನಗಳಲ್ಲಿ ಕುರುಗೋಡು ಕೋಟೆಯ ಉಲ್ಲೇಖಗಳಿವೆ. ಕುಮಾರರಾಮನಿಗಿಂತ ಮೊದಲು ಮಲ್ಲರಾಯರ ವಂಶದವರು ಕೋಟೆ ಕಟ್ಟಿಸಿದರೆಂದು ಕೈಫಿಯತ್ತಿನಲ್ಲಿ ಹೇಳಿದೆ.[೧೧] ಕ್ರಿ.ಶ. ೧೧೪೧ರಲ್ಲಿ [೧೨] ಹೊಯ್ಸಳ ವಿಷ್ಣುವರ್ಧನನು ಸಿಂದರ ಆಳ್ವಿಕೆಗೊಳಪಟ್ಟ ಕುರುಗೋಡು ಕೋಟೆಯ ಮೇಲೆ ದಾಳಿ ಮಾಡಿರಬೇಕೆಂದು ಚನ್ನಬಸವ ಹಿರೇಮಠರು ಹೇಳುವರು.[೧೩]



ಈ ಮೇಲಿನ ಶಾಸನಾಧಾರಗಳು ಕೈಫಿಯತ್ತಿನ ಆಧಾರಗಳೊಂದಿಗೆ ಸರಿಹೊಂದುವುದರಿಂದ ಕೈಫಿಯತ್ತಿನಲ್ಲಿ ಉಲ್ಲೇಖವಾಗುವ ಮಲ್ಲರಾಯರ ವಂಶದವರೆಂದರೆ ಸಿಂದವಂಶದ ರಾಚಮಲ್ಲನೇ ಇರಬೇಕು. ಒಟ್ಟಿನಲ್ಲಿ ಸಿಂದರ ಆಳ್ವಿಕೆಯ ಅವಧಿಯಲ್ಲಿಯೇ ಕುರುಗೋಡಿನಲ್ಲಿ ಕೋಟೆ ನಿರ್ಮಾಣವಾಗಿದೆ. ಮುಂದೆ ಈ ಕೋಟೆಯನ್ನು ವಿಜಯನಗರದ ಅರಸರು ಆಳಿದರು. ಹಂಡೆಯ ಪಾಳೆಯಗಾರರು ಈ ಕೋಟೆಯನ್ನು ಭದ್ರಪಡಿಸಿಕೊಂಡು ಕೋಟೆಯ ಕೆಲವು ಸುತ್ತಗಳನ್ನು ಕಟ್ಟಿಸಿದರೆಂದು ತಿಳಿದುಬರುತ್ತದೆ.[೧೪] ನಂತರ ಹೈದರಾಲಿ-ಟಿಪ್ಪು ಇವರು ಕುರುಗೋಡು ಕೋಟೆಯನ್ನು ಜೀರ್ಣೋದ್ಧಾರ ಮಾಡಿಕೊಂಡಿದ್ದಾರೆ. ಹೈದರಾಲಿ ಕೋಟೆಯ ಒಳಗೆ ಆಂಜನೇಯನ ದೇವಾಲಯವನ್ನು ಕಟ್ಟಿಸಿದ್ದಾನೆಂಬುದು ಶಾಸನದಿಂದ ತಿಳಿದುಬರುತ್ತದೆ.[೧೫]

ಕೋಟೆಯ ಮಹತ್ವ

ಬೆಟ್ಟ - ಗುಡ್ಡಗಳ ಮಧ್ಯದಲ್ಲಿ ನಾಲ್ಕು ಸುತ್ತಿನಲ್ಲಿ ನಿರ್ಮಾಣವಾದ ಕುರುಗೋಡು ಕೋಟೆ ಅಬೇಧ್ಯ ದುರ್ಗವೆನಿಸಿತ್ತು. ಇದನ್ನೆ ಶಾನಸಗಳು *"ಕುಲಗಿರಿಗಳ್ಗೆ ಮೇರು ಗಿರಿಯಿರ್ಪ್ಪ ವೊಲಿದ್ದುದುತಾಂ ನದೀನದಾವಳಿಗೆ ಪಯಃ ಪಯೋಧಿನೆಗಳ್ದಿರ್ಪ ವೊಲಿದ್ದುದು ತಾರಕಾಸ ಮಾಕುಳಕೆ ಹಿಮಾಂಶುಬಿಂಬ ಮೆಸೆದಿರ್ಪ್ಪ ವೊಲಿದ್ದುದಾ ವಸುನ್ದರಾಲಲನೆಗೆ ವಕ್ತ್ರ ಪಂಕರುಹಮಿರ್ಪ್ಪವೊಲಿ"ದಿತ್ತು*[೧೬] ಎಂದೂ, *"ರಾಜರಾಜನಗರ ರಮಣೀಯ ಮಣಿದರ್ಪಣಾಯನ ಮೆನಿಸೆ ಭಗ್ನಾದ್ರಿ ಯಂತಾಗ್ರವರಿದ ದುರ್ಗಮವಾದ"*[೧೭] ಕೋಟೆಯಾಗಿತ್ತೆಂದು ಬಣ್ಣಿಸಿವೆ.

ಕೋಟೆಯ ಸುತ್ತಲೂ ಕಂದಕಗಳಿದ್ದು ಅದರಲ್ಲಿ ನೀರನ್ನು ತುಂಬಲಾಗಿತ್ತು. ಹೀಗೆ ಒಂದೆಡೆ ಗಿರಿದುರ್ಗ ಮತ್ತೊಂದೆಡೆ ಜಲದುರ್ಗಗಳಿಂದ ಕೂಡಿದ ಅದು[೧೮]

|| ಕಂ || ಕೆಲಬಲದ ಜಲದ ದುರ್ಗಗಳ
ನೆಲೆವುದು ನೆರೆಯ ಹೊರೆಯ ತುರುಗಿರಿದುರ್ಗಂ
ಗಳ ನಿಳಿಸಿ ತನ್ನ ಮೆರೆವುದು
ಕುಲಗಿರಿ ಕುರುಗೋಡು ದುರ್ಗ್ಗ ವಾಗ್ದುರ್ಗ್ಗಂದುರ್ಗ್ಗಂ ಎನಿಸಿತ್ತು[೧೯]

ಚೋಳ, ಗುರ್ಜರ, ಪಾಳ, ಪಾಂಡ್ಯ, ತೆಲುಗ ಭೂಪಾಲರು ಕುರುಗೋಡು ಕೋಟೆಯನ್ನು ಗೆಲ್ಲಲು ಆಗಾಗ ಪ್ರಯತ್ನಿಸುತ್ತಿದ್ದರು. ಚಾಳುಕ್ಯರ ಆಡಳಿತಾವಧಿಯಲ್ಲಿ ಈ ಕೋಟೆಯನ್ನು ಜಯಿಸಲು ನಡೆಸಿದ ಹೋರಾಟಗಳು ವಿಫಲ ಹೊಂದಿದ ಮೇಲೆ ಕಲಚೂರಿಗಳ ಕಾಲದಲ್ಲಿ ಇಂಥ ಪ್ರಯತ್ನವನ್ನು ಮುಂದುವರೆಸಿದರು. ಆದರೆ ಸಮರ್ಥ ಸಾಮಂತ ಅರಸರಾದ ಸಿಂದರಿಂದಾಗಿ ಬಲಿಷ್ಠವಾದ ಈ ಕೋಟೆಯನ್ನು ಪಡೆಯಲೇಬೇಕೆಂಬ ಇವರ ಕನಸು ನನಸಾಗಲಿಲ್ಲ.[೨೦] ಬದಲಾಗಿ ಅದು.

"ಚೋಳನನಾಳು ಮಾಡುವುದು ಗೂರ್ಜರರಂಸೆಲೆ ತದ್ದಿರ್ಕುಂಕರಂ
ಲಾಳನ ನಾಳಿಮಾಡುವುದು ಪಾಂಡ್ಯನ ನಂಡಲೆಗುಂ ತೆಲುಂಗ ಭೂ
ಪಾಲನ ನೇಳಿ ದಿಕ್ಕೆಯನೆ ಮಾಡುವದೀ ಕುರುಗೋಡು ಕೋಟೆ ತಾಂ
ಕಾಳಗ ಮೆಂದಡೇಳುಮಡಿ ಪೆಚ್ಚುರ್ವುದಚ್ಚರಿ ಯಾರೊ ಕಾದುವರ್ ||

ಎನ್ನುವಂತೆ ಶಕ್ತಿಯುತವಾಗಿತ್ತು.[೨೧] ಹೊಯ್ಸಳ ಬಲ್ಲಾಳನು ಕ್ರಿ.ಶ. ೧೧೯೯ರಲ್ಲಿ ಕುರುಗೋಡು ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂದು ನಡೆಸಿದ ಯತ್ನವು ವಿಫಲವಾಯಿತು.[೨೨] ಒಟ್ಟಿನಲ್ಲಿ ಬಲ್ಲಕುಂದೆನಾಡಿನ ರಾಜಧಾನಿಯಾಗಿದ್ದ ಕುರುಗೋಡು ಕೋಟೆಯು ವಿರೋಧಿ ಅರಸರಿಗೆ ಸುಲಭವಾಗಿ ವಶವಾಗಲಿಲ್ಲ. ಸಮರ್ಥ ನಾಯಕರಾಗಿದ್ದ ಸಿಂದರಸರು ಈ ಕೋಟೆಯನ್ನು ರಕ್ಷಿಸಿದ್ದರು. ಎರಡನೇ ಬಲ್ಲಾಳನು ಈ ಕೋಟೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿ ಅಪಾರ ಸಂಖ್ಯೆಯ ಸೈನಿಕರನ್ನು ಕಳೆದುಕೊಳ್ಳಬೇಕಾಯಿತು.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* ೧. ಪು. ೧೯. ಹಂಪಿ: ಕನ್ನಡ ವಿಶ್ವವಿದ್ಯಾಲಯ

೨. ಚನ್ನಬಸವಯ್ಯ ಹಿರೇಮಠ. ೧೯೯೫. *ಕುರುಗೋಡು ಸಿಂದರು : ಒಂದು ಅಧ್ಯಯನ*, ಪು. ೧೦೮. ಕೊಪ್ಪಳ: ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ

೩. ಸುಂದರ, ಅ. ೧೯೯೪. *ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ*, ಪು. ೬೭-೬೯. ಬೆಂಗಳೂರು : ಐ.ಬಿ.ಎಚ್. ಪ್ರಕಾಶನ

೪. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೩೯

೫. *ಅದೇ*, ಪು. ೧೩

೬. ಕಲಬುರ್ಗಿ, ಎಂ.ಎಂ. (ಸಂ.), ೧೯೯೪. *ಕರ್ನಾಟಕದ ಕೈಫಿಯತ್ತುಗಳು*, ಪು. ೪೫೫. ಹಂಪಿ: ಕನ್ನಡ ವಿಶ್ವವಿದ್ಯಾಲಯ

೭. *ಅದೇ*, ಪು. ೪೫೫

೮. *ಅದೇ*, ಪು. ೫೨೭

೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೧೯

೧೦. *ಅದೇ*, ಪು. ೨೩

೧೧. *ಕರ್ನಾಟಕದ ಕೈಫಿಯತ್ತುಗಳು*, ಪೂರ್ವೋಕ್ತ. ಪು. ೪೫೬

೧೨. *ಕುರುಗೋಡು ಸಿಂದರು : ಒಂದು ಅಧ್ಯಯನ*, ಪೂರ್ವೋಕ್ತ. ಪು. ೭೩-೭೪

೧೩. ಚನ್ನಬಸವಯ್ಯ ಹಿರೇಮಠ. ೨೦೦೦. ಕುರುಗೋಡು ಕೋಟೆಗೆ ಮತ್ತಿಗೆ, *ಸೂರ್ಯಕೀರ್ತಿ* (ಸಂ : ಡಾ. ಕೃಷ್ಣಮೂರ್ತಿ ಪಿ.ವಿ. ಮತ್ತು ಕೆ. ವಸಂತಲಕ್ಷ್ಮಿ), ಪು. ೨೭೪. ಬೆಂಗಳೂರು: ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ

೧೪. *ಕರ್ನಾಟಕದ ಕೈಫಿಯತ್ತುಗಳು*, ಪೂರ್ವೋಕ್ತ. ಪು. ೪೫೫

೧೫. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೧೯

೧೬. *ಅದೇ*, ಪು. ೧೪

೧೭. *ಅದೇ*, ಪು. ೨೭

೧೮. *ಕುರುಗೋಡು ಸಿಂದರು : ಒಂದು ಅಧ್ಯಯನ*, ಪೂರ್ವೋಕ್ತ. ಪು. ೧೦೪

೧೯. EI XIV p.265. ಕುರುಗೋಡು

೨೦. *ಕುರುಗೋಡು ಸಿಂದರು : ಒಂದು ಅಧ್ಯಯನ*, ಪೂರ್ವೋಕ್ತ. ಪು. ೧೦೫

೨೧. SII IX (I) p. 296. ಕುರುಗೋಡು

೨೨. ಚನ್ನಬಸವಯ್ಯ ಹಿರೇಮಠ. ೨೦೦೨. ಪೂರ್ವೋಕ್ತ. ಪು. ೨೭೫

೪.೨ ಬಳ್ಳಾರಿ

ಬಳ್ಳಾರಿ ಪಟ್ಟಣ ಜಿಲ್ಲೆಯ ಕೇಂದ್ರ ಸ್ಥಳವಾಗಿದೆ. ಇದು ಬೆಂಗಳೂರಿನಿಂದ ಉತ್ತರ ದಿಕ್ಕಿಗೆ ೩೦೬ ಕಿ.ಮೀ. ದೂರದಲ್ಲಿದೆ. ಈ ನಗರದ ಪಕ್ಕದ ಬೆಟ್ಟವು ಸಮುದ್ರಮಟ್ಟದಿಂದ ೧೯೭೬ ಅಡಿಗಳಷ್ಟು ಎತ್ತರವಿದೆ. ಈ ಬೆಟ್ಟವನ್ನು ಸುತ್ತುವರೆದು ಕೋಟೆಯನ್ನು ಕಟ್ಟಲಾಗಿದೆ. ಬಳ್ಳಾರಿ ಪಟ್ಟಣದ ಮೊದಲ ಹೆಸರು ಬಳ್ಳಾರೆ ಎಂಬುದು. ಕ್ರಿ.ಶ. ೧೨ನೆಯ ಶತಮಾನದ ಕೋಳೂರು, ಸಿಂದಿಗೇರಿ, ಬೈಲೂರು ಮತ್ತು ಕುರುಗೋಡು ಶಾಸನಗಳಿಂದ ತಿಳಿದುಬರುತ್ತದೆ. ರಾಚಮಲ್ಲ[೧], ಭೀಮರಸ[೨], ಅಜ್ಜರಸ[೩] ಮೊದಲಾದ ಸಿಂದವಂಶದ ಅರಸರಿಗೆ ಈ ಪಟ್ಟಣ ರಾಜಧಾನಿಯಾಗಿತ್ತು. ಬಳ್ಳೇಶ ಮಲ್ಲಾರ್ಯ ಎಂಬ ಶರಣನು ಬಳ್ಳವನ್ನೆ ಶಿವಲಿಂಗವೆಂದು ಪೂಜಿಸಿದ್ದರ ಫಲವಾಗಿ ಬಳ್ಳಾ - ಅರಿ = ಬಳ್ಳಾರಿ ಎಂದಾಯಿತು.[೪] ಈ ಊರಿನ ಗ್ರಾಮದೇವತೆ ಬಲಾರಿ ಹೆಸರಿನಿಂದ ಪ್ರಖ್ಯಾತಗಳಾಗಿದ್ದರಿಂದ ಈ ಬಲಾರಿ, ಬಳ್ಳಾರಿ ಆಯಿತೆಂದು ಸ್ಥಳೀಯ ಪ್ರತೀತಿ.

ಬಳ್ಳಾರಿ ಗುಡ್ಡದ ಮೇಲೆ ಬಳಸುದನೆಂಬ ರಾಕ್ಷಸನು ಆಶ್ರಯ ಮಾಡಿಕೊಂಡು ಇಲ್ಲಿ ಜನರಿಗೆ ಉಪದ್ರವ ಕೊಡುತ್ತಿದ್ದನು. ಸ್ವರ್ಗಲೋಕದಿಂದ ದೇವಕನ್ಯೆಗಳು ಇಚ್ಛಾವಿಹಾರದಲ್ಲಿ ವಿಹರಿಸುತ್ತ ಈ ಪರ್ವತದ ಮೇಲೆ ಖೇಚರ ಮಾರ್ಗದಲ್ಲಿ ಹೋಗುತ್ತಿರುವಾಗ ರಾಕ್ಷಸನು ಕಾಮಾತುರನಾಗಿ ಅವರಿಗೆ ಉಪದ್ರವ ಕೊಟ್ಟದ್ದರಿಂದ ಅವರು ದೇವೇಂದ್ರನಲ್ಲಿ ಮೊರೆ ಇಟ್ಟರು. ಆಗ ದೇವೇಂದ್ರ ಬಳಾಸುರನನ್ನು ವಜ್ರಾಯುಧದಿಂದ ಸಂಹಾರ ಮಾಡಿದ್ದರಿಂದ ಈ ಗುಡ್ಡಕ್ಕೆ ಬಳ್ಳಾರಿ (ಬಳಾರಿ)ಯೆಂಬ ನಾಮ ಪ್ರಸಿದ್ಧಿ ಹೊಂದಿತೆಂದು ಸಂಸ್ಕೃತ ಮೂಲ ಹೇಳುತ್ತದೆ.

ಕಲಿಯುಗದಲ್ಲಿ ಬಳ್ಳರಾಯನ ವಂಶಸ್ಥನಾದ ಸಿಂದು ಬಳ್ಳಾಳರಾಯನು ಇಲ್ಲಿ ರಾಜ್ಯಕಟ್ಟಿದ್ದರಿಂದ ಅವನ ಹೆಸರಿನಿಂದಲೇ ಬಳ್ಳಾರಿ ಆಯಿತೆಂದು ಬಳ್ಳಾರಿ ಕೈಫಿಯತ್ತು ಹೇಳುತ್ತದೆ.[೫]



ಕೋಟೆಯನ್ನೊಳಗೊಂಡ ಬೆಟ್ಟ



ಸಿಂದು ವಂಶದ ಎರಡನೆಯ ರಾಚಮಲ್ಲನ ಮಗನಾದ ಚಾಲುಕ್ಯರ ಕೊನೆಯ ಮಹಾಮಂಡಳೇಶ್ವರನಾದ ವೀರಕಲಿದೇವರಸನನ್ನು ಹೊಯ್ಸಳ ವೀರ ಎರಡನೆಯ ಬಲ್ಲಾಳನು (ಕ್ರಿ.ಶ.೧೧೭೩-೧೨೨೦) ಸೋಲಿಸಿ ಆ ರಾಜ್ಯಗಳನ್ನೆಲ್ಲಾ ಆಕ್ರಮಿಸಿಕೊಂಡನು. ಅವನಿಗೆ "ಸಿಂದು ಬಲ್ಲಾಳ"ನೆಂಬ ಬಿರುದು ಬಂದಿತ್ತು. ಈತನೂ ಚಾಳುಕ್ಯರ ಸಾಮಂತನಾಗಿದ್ದವನೇ ಈ ಗುಡ್ಡದ ಸೌಂದರ್ಯ ಹಾಗೂ ಕೋಟೆಯ ಭದ್ರತೆಯನ್ನು ವೀಕ್ಷಿಸಿ, ಮಾರುಹೋಗಿ ಈ ಗುಡ್ಡಕ್ಕೆ ತನ್ನ ಹೆಸರನ್ನೆ ಇಟ್ಟು "ಬಲ್ಲಾಳಗುಡ್ಡ"ವೆಂದು ಕರೆದಿರಬಹುದು. ಈಗಲೂ ಬಲ್ಲಾಳ ಗುಡ್ಡವೆಂದು ಇನ್ನೊಂದು ಹೆಸರಿದೆ ಎಂಬ ಸಿ.ಆರ್. ಶ್ಯಾಮಲರವರ ವಾದವು ಸ್ವಲ್ಪ ವಸ್ತುನಿಷ್ಟವಾಗಿದೆ.[೬]

ಇತಿಹಾಸ

ಕ್ರಮವಾಗಿ ಬಳ್ಳಾರಿಯ ಮೌರ್ಯ, ಶಾತವಾಹನ ಮತ್ತು ಬಾದಾಮಿ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿತ್ತು. ನಂತರ ಬಲ್ಲಕುಂದೆ - ೩೦೦ರ ಪ್ರಮುಖ ವಿಭಾಗವಾಗಿ ಬಳ್ಳಾರಿ - ೩೦ ರೂಪುಗೊಂಡಿತು. ಸಬಾಲ - ೭೦ರಲ್ಲಿ ಬಳ್ಳಾರಿ ಸೇರಿತ್ತೆಂದು ಚನ್ನಬಸವಯ್ಯ ಹಿರೇಮಠರು ಹೇಳಿದ್ದಾರೆ.[೭] ಅವರು ಕೋಳೂರಿನಲ್ಲಿ ಇತ್ತೀಚೆಗೆ ದೊರೆತ ಶಾಸನವನ್ನು ಗಮನಿಸಿಲ್ಲ. ಈ ಶಾಸನದಲ್ಲಿ ಪಲ್ಲವ ವಂಶದ ಮಜ್ಗಪರಸನು "ಬಳ್ಳಾರೆ ಮೂವತ್ತರ" ಪೊಲೆಯರಿಗೆ ತೆರಿಗೆ ಬಿಟ್ಟಿದ್ದನ್ನು ತಿಳಿಸುತ್ತದೆ.[೮]

ಬಲ್ಲಕುಂದೆ ನಾಡಿನ ಮೂರುನೂರು ಹಳ್ಳಿಗಳಲ್ಲಿ ದೊರವಡಿ - ೭೦, ಸಬಾಲ - ೭೦, ನಲ್ವಡಿ - ೧೨ ಮತ್ತು ತೆಕ್ಕೆಕಲ್ಲು - ೧೨ (೭೦+೭೦+೧೨+೧೨=೧೬೪)ಗಳು ಸೇರಿ ಒಂದು ನೂರ ಅರವತ್ತು ನಾಲ್ಕು ಹಳ್ಳಿಗಳ ಲೆಕ್ಕ ಸಿಗುತ್ತದೆ. ಇನ್ನುಳಿದ ೧೩೬ ಹಳ್ಳಿಗಳನ್ನು ಹುಡುಕಬೇಕಾಗಿದೆ ಎಂದಿದ್ದಾರೆ.[೯] ಆದ್ದರಿಂದ ೧೩೬ ಹಳ್ಳಿಗಳಲ್ಲಿ ಬಳ್ಳಾರಿ - ೩೦ನ್ನು ತೆಗೆದರೆ ಇನ್ನುಳಿದ ೧೦೬ ಹಳ್ಳಿಗಳನ್ನು ಮಾತ್ರ ಪತ್ತೆಹಚ್ಚಬೇಕಿದೆ.

ಬಳ್ಳಾರಿ - ೩೦ ಮೂವತ್ತು ಹಳ್ಳಿಗಳ ಮುಖ್ಯ ಕೇಂದ್ರವಾಗಿತ್ತು. ನಿಡುದೋಳು ಸಿಂದನ ನಾಲ್ಕು ಜನ ಮಕ್ಕಳಲ್ಲಿ ಬುಧ ಸೇದ್ಯನು ಬಳ್ಳರೆ ನಾಡಿಗೆ ಅಧಿಪತಿಯಾಗಿದ್ದ ವಿಷಯವನ್ನು ಚನ್ನಬಸವಯ್ಯ ಹಿರೇಮಠರೇ ಹೇಳಿದ್ದಾರೆ.[೧೦] ಸಿಂದವಂಶದ ರಾಚಮಲ್ಲ, ಭೀಮರಸ ಮತ್ತು ಅಜ್ಜರಸರನ್ನು ಬಳ್ಳಾರೆ ಮುಂದೆ (ಶಾಸನಗಳಲ್ಲಿ) ಗುರುತಿಸಲಾಗಿದೆ. ಕಲಿದೇವರಸ ಮರಣದೊಂದಿಗೆ ಬಳ್ಳಾರಿಯು ಹೊಯ್ಸಳರ ಆದಿಪತ್ಯಕ್ಕೆ ಸೇರಿತ್ತು. ಹೊಯ್ಸಳ ವಿಷ್ಣುವರ್ಧನ ಗೆದ್ದ ಕೋಟೆಗಳ ಪಟ್ಟಿಯಲ್ಲಿ ಬಳ್ಳಾರಿಯೂ ಸೇರಿರುವುದರಿಂದ ೧೨ನೆಯ ಶತಮಾನದಲ್ಲಿ ಇಲ್ಲಿ ಕೋಟೆ ಇದ್ದುದು ಖಚಿತವಾಗುತ್ತದೆ.[೧೧] ಸಿಂದುವಂಶದ ಆಳ್ವಿಕೆಯ ಭದ್ರತೆಗಾಗಿಯೇ ಇವರು ಕೋಟೆಯನ್ನು ಕಟ್ಟಿಕೊಂಡಿದ್ದರು. ನಂತರ ವಿಜಯನಗರ ಅರಸ ಕೃಷ್ಣದೇವರಾಯನ ಕಾಲದಲ್ಲಿ ಈ ಭಾಗವನ್ನು ತಮ್ಮಣ್ಣನಾಯಕನು ಆಳುತ್ತಿದ್ದ ವಿಷಯವನ್ನು ಬಳ್ಳಾರಿ ಕೈಫಿಯತ್ತು ತಿಳಿಸುತ್ತದೆ.[೧೨] ಈತನೇ ಇಲ್ಲಿ ಕೋಟೆ ಕಟ್ಟಿಸಿರಬೇಕೆಂದು

ಸಿ.ಎಸ್.ಪಾಟೀಲರು ಹೇಳಿದ್ದಾರೆ.[೧೩] ಕೃಷ್ಣದೇವರಾಯನ ಆಳ್ವಿಕೆಯ ಮುಂಚೆಯೇ ಬಳ್ಳಾರಿಯಲ್ಲಿ ಕೋಟೆ ಇದ್ದುದು ಈಗಾಗಲೇ ಸ್ಪಷ್ಟವಾಗಿರುವುದರಿಂದ ತಮ್ಮಣ್ಣನಾಯಕನು ಕೋಟೆಯ ಕೆಲಭಾಗಗಳನ್ನು ಜೀರ್ಣೋದ್ಧಾರ ಮಾಡಿದನೆಂದು ಹೇಳಬಹುದು. ಮುಂದೆ ಅಚ್ಯುತರಾಯನು ಈ ಕೋಟೆಯ ಪೂರ್ವಭಾಗದಲ್ಲಿ ಪೇಟೆಯೊಂದನ್ನು ಕಟ್ಟಿಸಿದಂತೆ ಕೈಫಿಯತ್ತು ಹೇಳುತ್ತದೆ.[೧೪]

ವಿಜಯನಗರದ ಪತನದ ನಂತರ ಸುಲ್ತಾನರ ಪ್ರಾಬಲ್ಯ ಹೆಚ್ಚಾಯಿತು. ಇವರಲ್ಲಿ ಮಂತ್ರಿಯಾಗಿದ್ದ ಹಂಡೆ ಕುರುಬ ಜಾತಿಯ ಬಾಲದ ಹನುಮಪ್ಪ ನಾಯಕನನ್ನು ದಕ್ಷಿಣ ಪ್ರಾಂತ್ಯದ ಬಳ್ಳಾರಿ, ತೆಕ್ಕಲಕೋಟೆ, ಕುರುಗೋಡುಗಳ ಮುಖಂಡನನ್ನಾಗಿ ನೇಮಿಸಲಾಯಿತು. ಈತನು ಪ್ರಬಲನಾಗುತ್ತಾ ಬಳ್ಳಾರಿಯಲ್ಲಿ ಸ್ವತಂತ್ರ್ಯ ಪಾಳೆಪಟ್ಟನ್ನು ಸ್ಥಾಪಿಸಿದ. ಬಳ್ಳಾರಿ ಕೋಟೆಯನ್ನು ವ್ಯವಸ್ಥಿತವಾಗಿ ಈತನ ಕಾಲದಲ್ಲೇ ಕಟ್ಟಲಾಯಿತೆಂದು ಆಧಾರಗಳು ದೃಢಪಡಿಸುತ್ತವೆ.

ಹಂಡೆ ಪಾಳೆಯಗಾರರು ಮೊದಲು ಕ್ರಿ.ಶ. ೧೬೩೧ರವರೆಗೆ ಬಳ್ಳಾರಿ ಕೋಟೆಯನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದರು. ನಂತರ ಮುಸ್ಲಿಂರ ವಶವಾದ ಕೋಟೆ ಸುಮಾರು ಕ್ರಿ.ಶ. ೧೬೭೮ರಲ್ಲಿ ಶಿವಾಜಿಯ ವಶವಾಯಿತು. ಮುಂದೆ ಔರಂಗಜೇಬನ ಆಡಳಿತಕ್ಕೊಳಪಟ್ಟು ಕ್ರಿ.ಶ. ೧೬೯೨ರಲ್ಲಿ ಪುನಃ ಹಂಡೆ ಪಾಳೆಯಗಾರರ ವಶವಾಯಿತು. ಮುಂದೆ ದ್ಯಾವಪ್ಪನಾಯಕನ ಮಕ್ಕಳು ಹನುಮಪ್ಪನಾಯಕ, ಹಿರಿಯ ರಾಮಪ್ಪ ನಾಯಕ, ಚಿಕ್ಕರಾಮಪ್ಪನಾಯಕ ಈ ಮೂರು ಮಂದಿ ಮಕ್ಕಳು ಕ್ರಿ.ಶ. ೧೭೦೯ ರಿಂದ ೧೭೧೯ರವರೆಗೆ ಆಳಿದರೆಂದು ತಿಳಿದುಬರುತ್ತದೆ.[೧೫] ಚಿಕ್ಕರಾಮಪ್ಪನಾಯಕನು ಕ್ರಿ.ಶ. ೧೭೨೬ ರಿಂದ ೧೭೩೦ ರವರೆಗೆ ಆಳ್ವಿಕೆ ಮಾಡಿದನು. ಇವನ ಅವಧಿಯಲ್ಲಿ ಬಳ್ಳಾರಿಯ ಕೆಳಗಿನ ಕೋಟೆಯನ್ನು ಕಟ್ಟಲಾಯಿತು.[೧೬]

ನೀಲಮ್ಮ ಬಳ್ಳಾರಿಯಲ್ಲಿ ರಾಮಪ್ಪನಾಯಕನನ್ನು ಅಧಿಕಾರಕ್ಕೆ ತಂದಳು. ಇವನೇ ಬಳ್ಳಾರಿ ಕೋಟೆಯನ್ನು ದುರಸ್ಥಿ ಮಾಡಿಸಿ ಕೋಟೆ ಸುತ್ತಲೂ ಕಂದಕವನ್ನು ತೆಗೆಸಿದಂತೆ ಕೈಫಿಯತ್ತುಗಳು ಹೇಳುತ್ತವೆ.[೧೭] ಕ್ರಿ.ಶ. ೧೭೬೪ರಲ್ಲಿ ಅದವಾನಿ ಸಂಸ್ಥಾನದ ಬಸಾಲತ್ ಜಂಗನ ಆಧೀನದಲ್ಲಿದ್ದಾಗ ರಾಮಪ್ಪನು ಬಳ್ಳಾರಿಯನ್ನು ಆಳುತ್ತಿದ್ದನು. ದೊಡ್ಡಪ್ಪನಾಯಕನು ಇಲ್ಲಿ ಆಳ್ವಿಕೆ ಮಾಡುತ್ತಿರುವಾಗ[೧೮] ಕ್ರಿ.ಶ.೧೭೭೫ರಲ್ಲಿ ಹೈದರಾಲಿಯು ಈ ಕೋಟೆಯನ್ನು ವಶಪಡಿಸಿಕೊಂಡನು.[೧೯] ಆಗ ದೊಡ್ಡಪ್ಪನಾಯಕನು ಇಲ್ಲಿಂದ ಕುರುಗೋಡಿಗೆ ಪತ್ನಿಯರ ಸಹಿತವಾಗಿ ಪಲಾಯನ ಮಾಡಿದನು. ಆಗ ಹೈದರಾಲಿಯು ಮೊದಲಿನ ಪಾಳೆಯಗಾರರು ಕಟ್ಟಿಸಿದ್ದ ಕೋಟೆಯನ್ನು ಕೆಡವಿ ಹೊಸದಾಗಿ ಬುನಾದಿ ಹಾಕಿ ಈಗಿನಂತೆ ಕಟ್ಟಿಸಿದನು. ನಂತರ ಕ್ರಿ.ಶ. ೧೭೯೨ರಲ್ಲಿ ಟಿಪ್ಪುವಿನ ವಶದಲ್ಲಿದ್ದಾಗ, ಈ ಕೋಟೆಯ ಕೊತ್ತಳ ಮತ್ತು ಕಂದಕಗಳಿಗೆ ಗಚ್ಚಿನ ಕಾಮಗಾರಿ ಮಾಡಿಸುವ ಮೂಲಕ ದುರಸ್ಥಿ ಮಾಡಿಸಿದನು. ಈ ಕಾರ್ಯಕ್ಕಾಗಿ ಫ್ರೆಂಚ್ ಇಂಜಿನಿಯರ್‌ನ್ನು ನೇಮಿಸಲಾಗಿತ್ತೆಂದು ತಿಳಿದುಬರುತ್ತದೆ. ಬಳ್ಳಾರಿ ಕೋಟೆಯು ಹೈದ್ರಾಬಾದಿನ ನಿಜಾಮನ ವಶದಲ್ಲಿ ಸ್ವಲ್ಪ ಕಾಲ ಇತ್ತು. ನಂತರ ಕ್ರಿ.ಶ. ೧೮೦೦ರಲ್ಲಿ ಈಸ್ಟ್ ಇಂಡಿಯಾ ಕಂಪನಿಗೆ ಹಸ್ತಾಂತರವಾಯಿತು.

ಆಗ ಬ್ರಿಟಿಷರು ಕೆಳಕೋಟೆಯಲ್ಲಿ ಅನೇಕ ಕಟ್ಟಡಗಳನ್ನು ನಿರ್ಮಿಸಿದರು. ಇಂದಿನ ಲೋಕೋಪಯೋಗಿ ಇಲಾಖೆಯ ಕಟ್ಟಡದ ಕಲ್ಲಿನ ಮೇಲೆ ಬ್ರಿಟಿಷರ ಶಾಸನವಿದೆ. ಅದರಲ್ಲಿ ಕಂಪನಿ ಸರಕಾರವು ಈ ಕಟ್ಟಡವನ್ನು ಕಟ್ಟಿಸಿದ ಬಗ್ಗೆ ಹೇಳಿದೆ. ಬ್ರಿಟಿಷರು ಕರ್ನೂಲಿನ ನವಾಬು ಮುಝುಫರ್‌ಖಾನ್ ಎಂಬುವವನನ್ನು ಕ್ರಿ.ಶ. ೧೮೨೩ ರಿಂದ ೧೮೬೪ರವರೆಗೆ ಈ ಕೋಟೆಯಲ್ಲಿ ಬಂಧನದಲ್ಲಿಟ್ಟಿದ್ದರು.

ಕೋಟೆಯ ಲಕ್ಷಣಗಳು

ಬಳ್ಳಾರಿ ಕೋಟೆಯು ನಗರದ ಪಶ್ಚಿಮ ದಿಕ್ಕಿನಲ್ಲಿದೆ. ಈ ಕೋಟೆಯನ್ನು ಬಳಸಿಕೊಂಡು ಗುಂತಕಲ್ಲು - ಹೊಸಪೇಟೆ ರೈಲು ಮಾರ್ಗ ದಕ್ಷಿಣ ದಿಕ್ಕಿನಲ್ಲಿ ಸಾಗುತ್ತದೆ. ಉತ್ತರದಲ್ಲಿ ಈ ಕೋಟೆ ಮತ್ತು ಮುಖಬೆಟ್ಟ ಇವುಗಳ ಮಧ್ಯದಲ್ಲಿ ಬಳ್ಳಾರಿ - ಹೊಸಪೇಟೆ ರಸ್ತೆ ಸಾಗುತ್ತದೆ. ನಾಲ್ಕೂ ಸುತ್ತಿನ ಕೋಟೆಯ ಹೊಸಕೋಟೆ ಅಥವಾ ಮೊದಲನೆಯ ಕೋಟೆ ಬೆಟ್ಟದ ಪೂರ್ವಕ್ಕಿರುವ ಸಮತಟ್ಟಾದ ಪ್ರದೇಶವನ್ನು ಸುತ್ತುವರೆದು ಬೆಟ್ಟವನ್ನು ಆವರಿಸಿದೆ. ಉಳಿದ ಮೂರು ಸುತ್ತುಗಳು ಬೆಟ್ಟದ ಮೇಲಿವೆ. ಇದರ ಎತ್ತರ ಸಮುದ್ರ ಪಾತಳಿಯಿಂದ ಸುಮಾರು ೧೪೮೬ ಅಡಿ ಇದೆ. ಹೊರ ಕೋಟೆಯ ಸುತ್ತಲೂ ಸುಮಾರು ೨೫ ಅಡಿ ಅಗಲ ಹಾಗೂ ಅಷ್ಟೇ ಆಳವಾದ ಕಂದಕವಿದೆ. ಈ ಕಂದಕಕ್ಕೆ ಆಗ್ನೇಯದ ಕೆರೆಯಿಂದ ನೀರನ್ನು ತುಂಬಿಸುವ ವ್ಯವಸ್ಥೆ ಮಾಡಲಾಗಿತ್ತು. ಈ ಕಂದಕವನ್ನು ದಾಟಿ ಬರಲು ಶತ್ರುಗಳಿಗೆ ಅಸಾಧ್ಯ. ಈ ಜಿಲ್ಲೆಯ ಯಾವ ಕೋಟೆಯಲ್ಲಿಯೂ ಇಂಥಹ ಕಂದಕಗಳು ಕಂಡುಬರುವುದಿಲ್ಲ. ಹೊರಕೋಟೆಯ ಮಧ್ಯಭಾಗದಲ್ಲಿ ಕಣಶಿಲೆಯ ಗುಡ್ಡ ಇದೆ. ಈ ಗುಡ್ಡವನ್ನು ದಾಖಲೆಗಳಲ್ಲಿ ಕೋಟೆ ಗುಡ್ಡ ಎಂದೇ ದಾಖಲಿಸಲಾಗಿದೆ. ಈ ಗುಡ್ಡದ ಶಿಖರದ ಎತ್ತರ ೧೯೬೬ ಅಡಿ ಅಂದರೆ ನೆಲಮಟ್ಟದಿಂದ ೪೮೦ ಅಡಿ ಎತ್ತರವಿರುವ ಈ ಗುಡ್ಡ ಅತಿ ಕಡಿದಾದ ಇಳುಕಲ್ಲನ್ನು ಹೊಂದಿದೆ.



ಕೋಟೆಯ ಪಶ್ಚಿಮ ಭಾಗ




ಈ ಕಡಿದಾದ ಇಳುಕಲ್ಲೇ ಕೋಟೆಯನ್ನು ಈ ಗುಡ್ಡದ ಮೇಲೆ ಕಟ್ಟಲು ನಿರ್ಧರಿಸಿರುವುದಕ್ಕೆ ಮೊಟ್ಟಮೊದಲ ಕಾರಣ. ಮೇಲೇರಿ ಬರುವ ವೈರಿಗಳ ಸೈನಿಕರನ್ನು ಮೇಲೆ ಇರುವ ಕೋಟೆಯೊಳಗಿನಿಂದಲೇ ಸುಲಭವಾಗಿ ಘಾಸಿಗೊಳಿಸಬಹುದು. ಆದ್ದರಿಂದ ಈ ನಿವೇಶನದ ಆಯ್ಕೆ ಸೈನಿಕ ಕಾರ್ಯಾಚರಣೆಯ ದೃಷ್ಟಿಯಿಂದ ಸಮರ್ಪಕವಾಗಿದೆ.


ಈ ನಾಲ್ಕು ಸುತ್ತಿನ ಕೋಟೆಯ ಮೊದಲನೆ ಸುತ್ತಿಗೆ ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಬಾಗಿಲುಗಳಿವೆ. ಪೂರ್ವದ ಬಾಗಿಲು ಸುಮಾರು ೧೫ ಅಡಿ ಉತ್ತರಂಗದ ಮೇಲೆ ಸೂರ್ಯ ಚಂದ್ರ ಹಾಗೂ ಇಳಿಬಿದ್ದ ಪದ್ಮಗಳ ಶಿಲ್ಪಗಳಿವೆ. ಬಾಗಿಲುವಾಡದ ಮೇಲೆ ಎರಡು ಕಮಾನಿನ ಅಲಂಕರಣೆಗಳಿದ್ದು, ಇದರ ಮೇಲೆ ಉದ್ದಕ್ಕೂ ಕೋಟೆ ತೆನೆಗಳಿವೆ. ಬಾಗಿಲಿಗೆ ಸುಮಾರು ೬ ಅಡಿ ಅಗಲ ಮತ್ತು ೧೫ ಉದ್ದದ ಕಟ್ಟಿಗೆಯ ಕದಗಳನ್ನು ಜೋಡಿಸಲಾಗಿದೆ. ಪ್ರವೇಶದ ಎರಡು ಬದಿಗೆ ಮಂಟಪಗಳಿವೆ. ಈ ಮಂಟಪಗಳಲ್ಲಿ ಎರಡೆರಡು ಅಷ್ಟಭುಜಾಕೃತಿಯ ಕಂಬಗಳಿವೆ. ಮಂಟಪಗಳ ಹಿಂಭಾಗದಿಂದ ಕೋಟೆಯ ಮೇಲೇರಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಪ್ರವೇಶದ್ವಾರ ಮುಂಭಾಗದ ಎರಡು ಬದಿಗೆ ವೃತ್ತಾಕಾರದ ಸುಮಾರು ೨೦ ಅಡಿ ಎತ್ತರದ ಮರೆಗೋಡೆಯನ್ನು ನಿರ್ಮಿಸಲಾಗಿದೆ.



ಕೋಟೆಯ ಮೊದಲ ಸುತ್ತಿನ ಪೂರ್ವದ ಬಾಗಿಲು

ದಕ್ಷಿಣದ ಪ್ರವೇಶದ್ವಾರವು ಇದೇ ಲಕ್ಷಣಗಳನ್ನು ಹೋಲುತ್ತದೆ. ಇದಕ್ಕೆ ಪ್ರತ್ಯೇಕ ಉಪಬಾಗಿಲನ್ನು ಮಾತ್ರ ಜೋಡಿಸಲಾಗಿದೆ. ಮುಖ್ಯದ್ವಾರವನ್ನು ಮುಚ್ಚಿದಾಗ ಈ ಉಪಬಾಗಿಲನ್ನು ಬಳಸುತ್ತಿದ್ದರು. ಪ್ರಾಯಶಃ ವಿಜಯನಗರದ ಕಡೆಯಿಂದ ಹೋಗುವವರಿಗಾಗಿ ಈ ದ್ವಾರವನ್ನು ರಚಿಸಿರಬಹುದು. ಈ ಮೊದಲನೆ ಸುತ್ತಿನ ಕೋಟೆಯಲ್ಲಿ ಪಾಳೆಯಗಾರರ ಅವಧಿಯ ಜೀವಾಂಜನೇಯ, ಕೋಟೆ ಆಂಜನೇಯ ದೇವಾಲಯಗಳಿವೆ.






ಕೋಟೆಯ ಎರಡನೆ ಸುತ್ತಿನ ಬಾಗಿಲು

ಬೆಟ್ಟದ ಮೇಲೆ ಹತ್ತಲು ಇದರ ಆಗ್ನೇಯ ದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಮೆಟ್ಟಿಲುದಾರಿಯ ಪಕ್ಕದಲ್ಲಿ ವಿಜಯನಗರ ಕಾಲದ ಬಸವಣ್ಣ ದೇವಾಲಯವಿದೆ. ಇದರ ವಿವರಣೆಯನ್ನು ನಂತರ ಕೊಡಲಾಗುವುದು. ಮೆಟ್ಟಿಲುಗಳನ್ನು ಮೇಲೆ ಹತ್ತಿ ಹೋದಾಗ ಕೋಟೆಯ ಎರಡನೆಯ ಸುತ್ತಿನ ಬಾಗಿಲು ಎದುರಾಗುತ್ತದೆ. ಮೊದಲು ಎದುರಾಗುವ ಗೋಡೆಯಲ್ಲಿ ದಕ್ಷಿಣಾಭಿಮುಖವಾದ ಕಮಾನಿನ ಬಾಗಿಲಿದೆ. ಇದನ್ನು ದಾಟಿ ಬಲಕ್ಕೆ ತಿರುಗಿದಾಗ ಪಶ್ಚಿಮಾಭಿಮುಖವಾದ ದೊಡ್ಡ ಬಾಗಿಲಿದೆ. ಕಂಬ ತೊಲೆಗಳ ಬಾಗಿಲಿನಲ್ಲಿ ಅಲಂಕಾರಕ್ಕಾಗಿ ಕಮಾನನ್ನು ಬಳಸಿದೆ. ಬಾಗಿಲು ತೋಳುಗಳ ಮೇಲೆ ಪುಷ್ಪಬೋದಿಗೆಗಳಿವೆ. ಪ್ರವೇಶದ ಎರಡು ಬದಿಯಲ್ಲಿರುವ ಕಟ್ಟೆಯ ಮೇಲೆ ಎರಡೆರಡು ಅಷ್ಟ ಭುಜಾಕೃತಿಯ ಕಂಬಗಳಿವೆ. ದಕ್ಷಿಣ ಕಟ್ಟೆಯ ಹೊರಗೋಡೆಯಲ್ಲಿ ಮುಂದೆ ಚಾಚಿದ ಬಾಲ್ಕನಿಯಿದೆ. ಇದರ ಒಳಗೆ ಕುಳಿತು ಕಿಂಡಿಗಳ ಮೂಲಕ ಹೊರಗೆ ನೋಡಿದರೆ ಶತ್ರುಗಳ ಬರುವಿಕೆಯನ್ನು ಗುರುತಿಸಬಹುದು. ಉತ್ತರ ದಿಕ್ಕಿಗೆ ಒಂದು ಚಿಕ್ಕ ಬಾಗಿಲನ್ನು ಜೋಡಿಸಲಾಗಿದೆ. ಮೆಟ್ಟಿಲುಗಳನ್ನು ಹತ್ತಿ ಮುಂದೆ ಹೋದಾಗ ಎರಡನೆಯ ಕೋಟೆಯಲ್ಲಿ ಒಂದು ವಿಶಿಷ್ಟ ರಚನೆಯ ಕೊತ್ತಳವಿದೆ. ವೃತ್ತಾಕಾರದ ಈ ಕೊತ್ತಳದ ಮಧ್ಯದಲ್ಲಿ ಎರಡು ಚೌಕ ಮತ್ತು ಎರಡು ಅಷ್ಟಭುಜಾಕೃತಿಯ ಭಾಗಗಳನ್ನುಳ್ಳ ದಪ್ಪನೆಯ ಕಂಬವಿದೆ. ಈ ಕಂಬದ ಮೇಲೆ ವೃತ್ತಾಕಾರದ ತಲೆಭಾಗವಿದೆ. ಇದರ ಮೇಲೆ ಎಂಟು ದಿಕ್ಕಿಗೆ ಚಾಚಿದ ಎಂಟು ತೊಲೆಗಳಿವೆ. ತೊಲೆಗಳ ಮತ್ತೊಂದು ತುದಿಯನ್ನು ವೃತ್ತಾಕಾರದ ಗೋಡೆಯಲ್ಲಿಯ ಅರೆಗಂಬಗಳು ಹೊತ್ತಿವೆ. ಈ ಕೊತ್ತಳದ ಒಳಗೆ ಪ್ರವೇಶಿಸಲು ಬಾಗಿಲು ಹಾಗೂ ಸುತ್ತಲೂ ಅಂಬುಗಂಡಿಗಳಿವೆ.



ಮುಂದೆ ಪಶ್ಚಿಮಕ್ಕೆ ಮೆಟ್ಟಿಲುಗಳ ಮೂಲಕ ಮೇಲೆ ಹೋಗುವಾಗ ನಿಸರ್ಗ ನಿರ್ಮಿತವಾದ ದೊಡ್ಡ ದೊಡ್ಡ ಬಂಡೆಗಳ ಆಶ್ರಯದಲ್ಲಿ ವಿಶ್ರಾಂತಿ ತಾಣಗಳಿವೆ. ಸೈನಿಕರು ಬೇಸಿಗೆಯಲ್ಲಿ ಇಲ್ಲಿ ಕುಳಿತು ವಿಶ್ರಮಿಸುತ್ತಿರಬಹುದು. ಹಾಗಾಗಿ ಈ ಬಂಡೆಗಳು ಸವೆದಿವೆ. ಇಲ್ಲಿಂದ ನಂತರ ಬರುವುದೇ ಮೂರನೇ ಸುತ್ತಿನ ಕೋಟೆ ಬಾಗಿಲು.



ಕೋಟೆಯ ಮೂರನೆ ಸುತ್ತಿನ ಬಾಗಿಲು

ಇದು ಪೂರ್ವಾಭಿಮುಖವಾಗಿದ್ದು ಸುಮಾರು ೨೫ ಅಡಿ ಎತ್ತರ ೧೫ ಅಡಿ ಅಗಲವಾಗಿದೆ. ಈ ಬಾಗಿಲಿಗೆ ನಾಲ್ಕು ಹಂತದ ತೋಳುಗಳನ್ನು ಬಳಸಲಾಗಿದೆ. ಇವುಗಳ ಮೇಲ್ತುದಿಯಲ್ಲಿ ಇಳಿಬಿದ್ದ ಪದ್ಮಗಳಿವೆ. ಉತ್ತರಂಗದ ಮೇಲೆ ಸೂರ್ಯ ಚಂದ್ರ ಮತ್ತು ಪುಷ್ಪಗಳ ಶಿಲ್ಪಗಳಿವೆ. ಈ ಬಾಗಿಲಿಗೆ ಕಮಾನಿನ ಅಲಂಕಾರವಿದೆ. ಇದರ ಬಲಭಾಗದ ಗೋಡೆಯಲ್ಲಿ ಮಿಥುನಶಿಲ್ಪ ಹಾಗೂ ಹಂಸಗಳ ಉಬ್ಬುಗೆತ್ತನೆಗಳಿವೆ. ಸುಂದರವಾದ ಈ ಬಾಗಿಲಿಗೆ ಅಸರೆ ಆಗದಿರಲೆಂದೇ ಪ್ರಾಯಶಃ ಗೋಡೆಯಲ್ಲಿ ಮಿಥುನಶಿಲ್ಪ ಕೆತ್ತಿರಬಹುದು. ಈ ಶಿಲ್ಪದ ಕೆಳ ಭಾಗದಲ್ಲಿ ಉದ್ದನೆಯ ಬಂದೂಕು ಕಿಂಡಿಗಳಿವೆ. ಪ್ರವೇಶದ ಎರಡು ಬದಿಗೆ ಮಂಟಪಗಳಿವೆ. ಇದರಲ್ಲಿ ಅಷ್ಟಭುಜಾಕೃತಿಯ ಎರಡೆರಡು ಕಂಬಗಳಿವೆ. ಹಿಂಭಾಗದಿಂದ ಈ ಬಾಗಿಲನ್ನು ನೋಡಿದರೆ ಕಮಾನಿನಾಕಾರದಲ್ಲಿದೆ. ಇದರ ವಾಯುವ್ಯ ದಿಕ್ಕಿಗೆ ಸುಮಾರು ಒಂದು ಕಿ.ಮೀ. ದೂರದಲ್ಲಿ ಇನ್ನೊಂದು ದೊಡ್ಡ ಬಾಗಿಲಿದ್ದು ಪಶ್ಚಿಮಾಭಿಮುಖವಾಗಿದೆ. ಕಂಬ ತೊಲೆಗಳ ಈ ಬಾಗಿಲ ಎತ್ತರಂಗದ ಮೇಲೆ ಪುಷ್ಪ, ಸೂರ್ಯ ಚಂದ್ರರ ಉಬ್ಬುಶಿಲ್ಪಗಳಿವೆ. ಬಾಗಿಲ ಮುಂದಿರುವ ದೊಡ್ಡ ವರ್ತುಲಾಕಾರದ ಕೊತ್ತಳವು ಬಾಗಿಲನ್ನು ಮರೆಮಾಡಿದೆ. ಪ್ರವೇಶದ ಬಲಕಟ್ಟೆಯ ಮೇಲೆ ಎರಡು ಮತ್ತು



ಎಡಬದಿಯ ಕಟ್ಟೆಯ ಮೇಲೆ ನಾಲ್ಕು ಚೌಕ ಮತ್ತು ಒಂದು ಅಷ್ಟ ಭುಜಾಕೃತಿಯ ಕಂಬಗಳಿವೆ. ಇದೇ ಮೂರನೇ ಸುತ್ತಿನ ಕೋಟೆ ಗೋಡೆಯ ಮಧ್ಯದಲ್ಲಿಯ ಕೊತ್ತಳಕ್ಕೆ ಒಳಕ್ಕೆ ಪ್ರವೇಶಿಸಲು ಬಾಗಿಲಿದೆ. ಕೋಟೆಯ ಪಶ್ಚಿಮ ಭಾಗದಲ್ಲಿ ಮಾತ್ರ ಮೂರನೆಯ ಕೋಟೆಯ ನಂತರ ಮತ್ತೊಂದು ಕೋಟೆ ಗೋಡೆ ಇದೆ. ಈ ಎರಡು ಕೋಟೆ ಗೋಡೆ ಮಧ್ಯದಲ್ಲಿ ಒಂದು ದೊಡ್ಡ ಬಂಡೆಯ ಆಸರೆಯಡಿಯಲ್ಲಿ ಆಂಜನೇಯ ಮತ್ತು ನಾಗಗಳನ್ನು ಬಂಡೆಯ ಮೇಲೆ ಕೆತ್ತಿದೆ.



ಕೋಟೆಯ ಒಳಭಾಗ

ಇದರ ಪೂರ್ವದ ಕೋಟೆ ಗೋಡೆಯ ನಂತರ ಒಂದು ದೊಡ್ಡ ನೀರಿನ ಕೊಳವಿದೆ. ಇದು ೨೯ ಅಡಿ ಆಳವಾಗಿದೆ. ಈ ಕೊಳದ ದಂಡೆಯ ಮೇಲೆ ಕಂಬಗಳುಳ್ಳ ಎರಡು ದೊಡ್ಡ ಮಂಟಪಗಳಿವೆ. ಮುಂದೆ ಉತ್ತರಕ್ಕೆ ಸಾಗಿದರೆ ಮತ್ತೊಂದು ಮಂಟಪ ಕಂಡುಬರುತ್ತದೆ.

ಕೋಟೆಯ ಉತ್ತರಭಾಗದಲ್ಲಿ ಮೂರನೆಯ ನಾಲ್ಕನೆಯ ಕೋಟೆಗಳ ಮಧ್ಯದಲ್ಲಿ ನೀರಿನ ಕೊಳಗಳಿವೆ. ಎರಡು ದೇವಾಲಯಗಳು ಮತ್ತು ಹನ್ನೊಂದು ಇಟ್ಟಿಗೆ ಗಾರೆ ಕಟ್ಟಡಗಳಿವೆ. ನೈಸರ್ಗಿಕವಾದ ಕೊಳಗಳಲ್ಲಿ ಕೆಲವು ಬಹಳ ಉದ್ದ ಮತ್ತು ಆಳವಾಗಿವೆ. ಎರಡು ಚಿಕ್ಕ ದೇವಾಲಯಗಳು ಅಕ್ಕಪಕ್ಕದಲ್ಲಿವೆ. ಇವು ಕುರುಗೋಡು ಸಿಂದರ ಕಾಲದವು. ಇವುಗಳ ವಿವರಗಳನ್ನು ಮುಂದೆ ನೀಡಲಾಗಿದೆ.

ನಾಲ್ಕನೆಯ ಅಥವಾ ಕೊನೆಯ ಕೋಟೆಯಲ್ಲಿ ದಕ್ಷಿಣ ಮತ್ತು ಪೂರ್ವದಿಕ್ಕಿಗೆ ಒಂದೊಂದು ಬಾಗಿಲುಗಳಿವೆ. ದಕ್ಷಿಣದ ಪ್ರವೇಶದ ಮುಂಭಾಗದಲ್ಲಿ ಇಳಿಜಾರಾದ ಸುಮಾರು ೧೦೦ ಅಡಿ ಉದ್ದ ಮತ್ತು ೩೦ ಅಡಿ ಅಗಲದ ಕಲ್ಲು ಹಾಸಿನ ದಾರಿಯಿದೆ. ಇದರ ಎರಡು ಬದಿಗೆ ಮೆಟ್ಟಿಲುಗಳಿವೆ. ಈ ಬಾಗಿಲು ಕಮಾನಿನ ಅಲಂಕರಣೆಯನ್ನು ಹೊಂದಿದೆ. ಉತ್ತರಂಗದ ಕೆಳಗೆ ಇಳಿಬಿದ್ದ ಪದ್ಮಗಳಿವೆ. ಅದರ ಇಕ್ಕೆಲಗಳ ಗೋಡೆಗಳಲ್ಲಿ ಬಂದೂಕು ಕಿಂಡಿಗಳು



ಹಾಗೂ ಮೇಲ್ಭಾಗದಲ್ಲಿ ಕೋಟೆ ತೆನೆಗಳಿವೆ. ಪ್ರವೇಶದ ಎರಡು ಬದಿಗೆ ಕಟ್ಟೆಯ ಮೇಲೆ ಕಂಬ ತೋಲೆಯ ಬಾಗಿಲುಗಳನ್ನು ಕಮಾನಿನಿಂದ ಅಲಂಕರಿಸಿದೆ.



ಕೋಟೆಯ ಒಳಸುತ್ತಿನ ಬಾಗಿಲು

ದಕ್ಷಿಣ ಬಾಗಿಲಿಂದ ಶತ್ರುಗಳು ಈ ಕೋಟೆಯನ್ನು ಆಕ್ರಮಿಸಿದರೆ ಪೂರ್ವಬಾಗಿಲಿಂದ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆ ಪೂರ್ವದ ಬಾಗಿಲನ್ನು ನಿರ್ಮಿಸಲಾಗಿದೆ. ನಾಲ್ಕನೆಯ ಈ ಒಳಕೋಟೆ ತುಂಬ ಚಿಕ್ಕದಿದ್ದು ಇದರ ಸುತ್ತಲೂ ಎತ್ತರವಾದ ಆರು ಕೊತ್ತಳಗಳಿವೆ. ಶತ್ರುಗಳು ಕೆಳಕೋಟೆಯನ್ನು ವಶಪಡಿಸಿಕೊಳ್ಳುತ್ತಾ ಮೇಲೆ ಬಂದಂತೆ ಈ ಕೋಟೆಯಲ್ಲಿ ಅಡಗಿಕೊಳ್ಳಲು ಅಥವಾ ತಪ್ಪಿಸಿಕೊಳ್ಳಲು ಅನುಕೂಲವಾಗಿದೆ. ಇದರ ಆಗ್ನೇಯ ದಿಕ್ಕಿನಲ್ಲಿ ಮದ್ದುಗುಂಡುಗಳನ್ನು ಹಾಗೂ ಕುದುರೆಗಳನ್ನು ರಕ್ಷಿಸಿಡಲು ಅನುಕೂಲವಾಗುವಂತೆ ಮನೆಗಳನ್ನು ಕಟ್ಟಲಾಗಿದೆ. ಕೋಟೆಯೊಳಗೆ ಬೃಹತ್ ಆಕಾರದ ಕಟ್ಟಡಗಳಿವೆ. ಈ ಕಟ್ಟಡಗಳನ್ನೇ ಅರಮನೆಗಳೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಸಿ.ಎಸ್.ಪಾಟೀಲರು ಈ ಕಟ್ಟಡಗಳನ್ನು ಕಣಜಗಳೆಂದು ಕರೆದಿದ್ದಾರೆ.[20] ರಕ್ಷಿತವಾದ ಈ ಪ್ರದೇಶ ಹಾಗೂ ಇದರೊಳಗೆ ಇರುವ ನೀರಿನ ಕೊಳ, ದೇವಸ್ಥಾನಗಳನ್ನು ನೋಡಿದರೆ ಇದು ಅರಮನೆ ಪ್ರದೇಶವಾಗಿರಬಹುದೆಂದು ಖಚಿತವಾಗುತ್ತದೆ.

ಹೊರಕೋಟೆಯನ್ನು ದಪ್ಪಕಲ್ಲಿನಿಂದ ಕಟ್ಟಿದೆ. ಅನೇಕ ಕಡೆಗಳಲ್ಲಿ ಚಿಕ್ಕ ಸೈಜು ಕಲ್ಲಿನಿಂದ ದುರಸ್ಥಿಗೊಳಿಸಿದೆ. ಕೋಟೆಯಲ್ಲಿ ಚೌಕಾಕಾರ ಮತ್ತು ವರ್ತುಲಾಕಾರದ ಕೊತ್ತಳಗಳಿವೆ. ಗೋಡೆಯಲ್ಲಿ ಬಂದೂಕು ಕಿಂಡಿಗಳಿವೆ. ಕೊತ್ತಳಗಳ ಮೇಲಿನ ಇಟ್ಟಿಗೆ ಮತ್ತು ಗಾರೆಯ ದಪ್ಪವಾದ ಕೈಪಿಡಿ ಗೋಡೆಯಲ್ಲಿ ತೋಪುಗಳಿಗಾಗಿ ಬಿಟ್ಟ ಸಂದಿಗಳಿವೆ. ರೈಲ್ವೆ ಹಳಿಯ ಮೇಲಿನ ಸೇತುವೆಯ ಹತ್ತಿರದ ಚೌಕಾಕಾರದ ಕೊತ್ತಳದ ಕಲ್ಲಿನ ಮೇಲೆ ನಾಗರಹಾವಿನ ಬಾಲವನ್ನು ಹಿಡಿದಿರುವ ಮಂಗದ ಶಿಲ್ಪವಿದೆ. ಈ ಕೊತ್ತಳದ ಹತ್ತಿರ ಕೋಟೆ ಗೋಡೆಯ ಮೇಲೆ ಕಾಳಿಂಗಮರ್ದನ ಕೃಷ್ಣ ಮತ್ತು ಎರಡು ಹುಲಿಗಳ ಶಿಲ್ಪಗಳಿವೆ.



ಬೆಟ್ಟದ ಮೇಲಿನ ಕೋಟೆಯ ಕೈಪಿಡಿ ಗೋಡೆಯನ್ನು ಇಟ್ಟಿಗೆ ಗಾರೆಯಿಂದ ಕಟ್ಟಿದೆ. ಅಗಲವಾದ ಕೈಪಿಡಿ ಗೋಡೆ ಹೊರಭಾಗದಲ್ಲಿ ಇಳಿಜಾರಾಗಿದೆ. ಇದರಲ್ಲಿ ಬಂದೂಕು ಕಿಂಡಿಗಳಿವೆ. ಕೊತ್ತಳಗಳ ಕೈಪಿಡಿ ಗೋಡೆಯಲ್ಲಿ ತೋಪುಗಳಿಗಾಗಿ ಬಿಟ್ಟ ಅಗಲವಾದ ಸಂದಿಗಳಿವೆ. ಕೆಲವು ಕೊತ್ತಳಗಳ ಮೇಲೆ ಗಾರೆಯಿಂದ ನಿರ್ಮಿಸಿದ ನೀರಿನ ಚಿಕ್ಕ ತೊಟ್ಟಿ ಮತ್ತು ಗೋಡೆಯಲ್ಲಿ ಕಾವಲುಗಾರರ ಕೊಠಡಿ ಮತ್ತು ಗೂಡುಗಳಿವೆ. ಕೆಲವು ನೀರಿನ ತೊಟ್ಟಿಗಳು ಸುಂದರವಾದ ಜ್ಯಾಮಿತಿ ವಿನ್ಯಾಸದಿಂದ ಕೂಡಿವೆ.

ಕೋಟೆಯ ಮಹತ್ವ

ಈ ಕೋಟೆಯು ೧.೫ ಕಿ.ಮೀ. ಸುತ್ತಳತೆಯಿಂದ ಕೂಡಿದ್ದು, ಇದರ ಪಶ್ಚಿಮದಲ್ಲಿ ಅತಿ ಕಡಿದಾದ ಇಳುಕಲ್ಲನ್ನು ಹೊಂದಿದೆ. ಈ ಕಡಿದಾದ ಇಳುಕಲ್ಲೇ ಈ ಕೋಟೆಯನ್ನು ನಿರ್ಮಿಸಲು ಕಾರಣವಾಗಿದೆ. ದೂರದಿಂದ ಏಕಶಿಲಾ ಬೆಟ್ಟದಂತೆ ಕಾಣುವ ಈ ಕಣಶಿಲೆಯ ಬೆಟ್ಟವನ್ನು ಭೂವೈಜ್ಞಾನಿಕ ನಿಯೋಗಿಗಳು ಹಲವಾರು ಕಡೆಗಳಲ್ಲಿ ಕೆಲವು ದಿಕ್ಕುಗಳಲ್ಲಿ ಛೇದಿಸಿವೆ. ಈ ಬೆಟ್ಟದ ಪೂರ್ವಭಾಗವು ಛೇದಿತವಾಗಿ ಕಡಿದಾದ ದೊಡ್ಡ ದೊಡ್ಡ ಗುಂಡುಗಳಿಂದ ಕೂಡಿದೆ. ಎಂಥ ಬಲವಾದ ತೋಪು ಗುಂಡುಗಳನ್ನು ಹಾರಿಸಿದರೂ ಈ ಕಲ್ಲಿನ ಗುಂಡುಗಳು ಅಲುಗಾಡಲಾರವು. ಇಂಥ ಗುಂಡುಗಳ ಮಧ್ಯದಲ್ಲಿ ಇರುವ ಖಾಲಿಜಾಗದಲ್ಲಿ ಬಲವಾದ ಕೋಟೆ ಗೋಡೆಯನ್ನು ಕಟ್ಟಲಾಗಿದೆ.

ಈ ಕೋಟೆಯೊಳಗೆ ಹೋಗಬೇಕಾದರೆ ಕಟ್ಟಲಾಗಿರುವ ಮೆಟ್ಟಿಲುಗಳನ್ನು ಮೇಲೇರಿಯೇ ಹೋಗಬೇಕು. ಈ ಮೆಟ್ಟಿಲುಗಳ ದಾರಿಯನ್ನು ಮುಚ್ಚಿದರೆ ಒಳಗೆ ಪ್ರವೇಶವಿಲ್ಲ. ಇದು ರಕ್ಷಣೆಯ ಬಹುಮುಖ್ಯವಾದ ಅಂಶ. ಬೆಟ್ಟದ ಹಲವು ಕಡೆ ಬಹುದೊಡ್ಡ ಗುಂಡುಗಳು ಒಂದಕ್ಕೊಂದು ಮೇಲೆ ಸೇರಿ ಕೆಳಗಡೆ ಪೊಳ್ಳನ್ನು ನಿರ್ಮಿಸಿವೆ. ಇದೊಂದು ಈ ವಿಶಿಷ್ಟತೆಗಳನ್ನು ಈ ಕೋಟೆಯನ್ನು ಯೋಜಿಸಿದ ರೂವಾರಿಗಳು ಅತ್ಯಂತ ಬುದ್ಧಿವಂತಿಕೆಯಿಂದ ತಮ್ಮ ರಕ್ಷಣಾ ವ್ಯವಸ್ಥೆಗಾಗಿ ಉಪಯೋಗಿಸಿದ್ದಾರೆ. ಅಂತೆಯೇ ಹೈದರಾಲಿಯು "ಮೂಗಿನ ಮೇಲೆ ಬಚ್ಚಿಟ್ಟು ಬೆರಳುಕಚ್ಚಿ" ಮುತ್ತಿಗೆಗೆ ಮಂದಿ ಸಾಲದೆಂದು ಉದ್ಗಾರ ತೆಗೆದಿದ್ದಾನೆ.[೨೧]

ಹೈದರಾಲಿಯು ಬಳ್ಳಾರಿ ಕೋಟೆಗೆ ಮುತ್ತಿಗೆ ಹಾಕಿದ್ದಾಗ ಗುಡ್ಡದ ದಕ್ಷಿಣಕ್ಕೆ ರಾಯದುರ್ಗದ ದಂಡನ್ನು ನೇಮಿಸಿದ. ಬಾಕಿ ಉಳಿದ ಮೂರೂ ದಿಕ್ಕುಗಳಿಗೆ ಒಂದು ಲಕ್ಷ ಕಾಲುದಳ, ನಲವತ್ತು ಸಾವಿರ ಅಶ್ವದಳ, ಐದು ನೂರು ಒಂಟೆ ದಳ, ಒಂದು ನೂರು ಗಜ ದಳ, ನೇಮಕ ಮಾಡಿದ್ದು, ಯುದ್ಧದಲ್ಲಿ ಒಂದು ನೂರು ಫಿರಂಗಿಗಳನ್ನು ಬಳಸಿದ. ಆನೆಯ ಮೇಲೇರಿ ಸ್ವತಃ ತಾನೇ ಯುದ್ಧ ಮಾಡಿದರೂ ಕೋಟೆ ಇವನಿಗೆ ಸುಲಭವಾಗಿ ದಕ್ಕಲಿಲ್ಲ.[೨೨] ಹೀಗೆ ಇದೊಂದು ಅಭೇದ್ಯವಾದ ಗಿರಿದುರ್ಗವಾಗಿದೆ.

ಈ ಕೋಟೆಯ ಮಹತ್ವ ಹೆಚ್ಚಾಗಲು ಅಲ್ಲಿಯ ನೀರಿನ ವ್ಯವಸ್ಥೆಯು ಒಂದು ಕಾರಣ. ಇಲ್ಲಿ ನೀರಿನ ಸಂಗ್ರಹದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ಮಳೆ ನೀರನ್ನೂ ಹರಿದು ಬರುವ ಮೇಲು ಜಲವನ್ನೂ ಬಹು ಜಾಣ್ಮೆಯಿಂದ ಕೋಟೆಯ ಭದ್ರತೆಗಾಗಿ ಹಾಗೂ ಜಲ ಪೂರೈಕೆಗಾಗಿ ಉಪಯೋಗಿಸಿದ್ದಾರೆ. ಈ ಬೆಟ್ಟದ ಮೇಲೆ ಅಲ್ಲಲ್ಲಿ ಗುಂಡುಗಳಿದ್ದರೂ ಇದು ಹಾಸು ಬಂಡೆಯ ಪ್ರಸ್ತಭೂಮಿಯೇ ಆಗಿದೆ.

ಪ್ರಾಕೃತಿಕ ಕ್ರಿಯೆಗಳಿಂದಾಗಿ ಕಣಶಿಲೆಯಲ್ಲಿ ಬೋಗಣಿಗಳು ಮತ್ತು ಹೊಂಡಗಳು ನಿರ್ಮಾಣವಾಗಿವೆ. ಹಲವು ಬೋಗಣಿಗಳು ಒಂದೆರಡು ಅಡಿಗಳಷ್ಟು ಅಗಲವಾಗಿದ್ದರೆ ಮತ್ತೆ ಕೆಲವು ೨೦ ರಿಂದ ೩೦ ಅಡಿಗಳಷ್ಟು ಅಗಲವಾಗಿವೆ. ಇವುಗಳ ಆಳಗಳು ಕೂಡ ಒಂದೆರಡು ಅಡಿಗಳಿಂದ ೫ - ೧೦ ಅಡಿಗಳವರೆಗೆ ಇವೆ. ಇವುಗಳಲ್ಲಿ ಮಳೆ ನೀರು ಸಂಗ್ರಹವಾಗುತ್ತದೆ. ಕೆಲವು ಕಡೆ ಅವಶ್ಯಕತೆ ಇದ್ದಲ್ಲಿ ಅಡ್ಡ ಕಟ್ಟೆಗಳನ್ನು ನಿರ್ಮಿಸಿ ನೀರು ಹರಿದುಹೋಗ ದಂತೆ ವ್ಯವಸ್ಥೆ ಮಾಡಲಾಗಿದೆ. ಈ ಬೋಗಣಿಗಳನ್ನು ಮತ್ತು ಹೊಂಡಗಳನ್ನು ನೀರಿನ ಸಂಗ್ರಹಣೆಗಾಗಿ ಟ್ಯಾಂಕುಗಳಂತೆ ಬಳಸಲಾಗಿದೆ.[೨೩]

ಕೋಟೆಯಲ್ಲಿನ ಸ್ಮಾರಕಗಳು

ಕೋಟೆಯ ಉತ್ತರಭಾಗದಲ್ಲಿ ಮೂರನೆಯ ಮತ್ತು ನಾಲ್ಕನೆಯ ಕೋಟೆಯ ಮಧ್ಯದಲ್ಲಿ ಎರಡು ಚಿಕ್ಕದೇವಾಲಯಗಳು ಅಕ್ಕಪಕ್ಕದಲ್ಲಿವೆ. ಇವು ಕುರುಗೋಡು ಸಿಂದರ ಕಾಲದವು. ದೇವಾಲಯಗಳ ಅಧಿಷ್ಠಾನದಲ್ಲಿ ಪದ್ಮೋಪಾನ, ತ್ರಿಪಟ್ಟ ಕುಮುದ ಮತ್ತು ಕೂಡು ಉಬ್ಬುಗಳುಳ್ಳ ಕಪೋತ ಇವೆ. ಗೋಡೆಯ ಮೇಲೆ ಅರೆಗಂಬಗಳ ಅಲಂಕಾರವಿದೆ. ಗೋಡೆಯ ಮೇಲಿನ ಕಪೋತದ ಕೆಳಗೆ ಹಂಸಗಳ ಸಾಲಿನ ಉಬ್ಬುಶಿಲ್ಪಗಳಿವೆ. ಮೇಲೆ ಮೆಟ್ಟಿಲುಗಳ ಆಕಾರದಲ್ಲಿ ಕಟ್ಟಿದ ಇಟ್ಟಿಗೆಯ ಗೋಪುರವಿದೆ. ಈ ದೇವಾಲಯಗಳು ಗರ್ಭಗೃಹ ಮತ್ತು ಅಂತರಾಳವನ್ನು ಮಾತ್ರ ಹೊಂದಿವೆ. ಇವುಗಳ ಪೈಕಿ ಒಂದರಲ್ಲಿ ವರ್ತುಲಾಕಾರದ ಪೀಠವೂ ಮತ್ತೊಂದರಲ್ಲಿ ಚೌಕಾಕಾರದ ಪೀಠವೂ ಬಿದ್ದಿವೆ. ಅಂತರಾಳದ ಬಾಗಿಲಿನಲ್ಲಿ ಆರು ಶಾಖೆಗಳಿವೆ. ಅವುಗಳಲ್ಲಿ ಒಂದರಲ್ಲಿ ಚಿಕ್ಕ ಉಬ್ಬುಶಿಲ್ಪಗಳಿವೆ. ಬಾಗಿಲ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ದಕ್ಷಿಣಕ್ಕಿರುವ ದೇವಾಲಯದ ಬಾಗಿಲ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದ್ವಾರದ ಇಕ್ಕೆಲದ ಗೋಡೆಗಳಲ್ಲಿ ಅರೆಗಂಬಗಳಿವೆ. ಇವುಗಳ ಮಧ್ಯದಲ್ಲಿ ಆಯತಾಕಾರದ ಮೂರು ಅಂಕಣಗಳಲ್ಲಿ ಶಿಲ್ಪಗಳು ಕಂಡುಬರುತ್ತವೆ. ದಕ್ಷಿಣ ದೇವಾಲಯದ ಮುಂದೆ ಎತ್ತರವಾದ ದೀಪಸ್ತಂಭವಿದೆ. ಚೌಕ ಮತ್ತು ಅಷ್ಟಭುಜಾಕೃತಿಯ ಭಾಗಗಳುಳ್ಳ ಈ ಕಂಬದ ಮೇಲೆ ವೃತ್ತಾಕಾರದ ತಲೆಭಾಗವಿದೆ. ಕಂಬದ ಕೆಳಭಾಗದ ಪಶ್ಚಿಮ ಬದಿಯಲ್ಲಿ ಒಬ್ಬ ಭಕ್ತನು ಕೈ ಮುಗಿದು ನಿಂತಿದ್ದಾನೆ. ಉತ್ತರ ಬದಿಯಲ್ಲಿ ಕೈ ಮುಗಿದು ನಿಂತ ದಂಪತಿಯರು, ದಕ್ಷಿಣ ಬದಿಯಲ್ಲಿ ಆಂಜನೇಯ ಮತ್ತು ಪೂರ್ವ ಬದಿಯಲ್ಲಿ ಕನ್ನಡ ಶಾಸನ ಇವೆ. ಈ

ದೇವಾಲಯದ ಶೈಲಿಯನ್ನೆ ಹೋಲುವ ನಾಲ್ಕಾರು ದೇವಾಲಯಗಳು ಕುರುಗೋಡಿನಲ್ಲಿ ಕಂಡುಬರುತ್ತವೆ. ಕುರುಗೋಡಿನಲ್ಲಿ ದೇವಾಲಯಗಳನ್ನು ನಿರ್ಮಿಸಿದ ಅವಧಿಯಲ್ಲಿಯೇ ಬಳ್ಳಾರಿ ಹುಟ್ಟಿದ ಮೇಲೆ ಈ ಜೋಡಿ ದೇವಾಲಯಗಳನ್ನು ನಿರ್ಮಿಸಿರಬೇಕು. ಚಾಲುಕ್ಯ ಮಂಡಳೇಶ್ವರ ಒಂದನೆಯ ರಾಚಮಲ್ಲನೇ ಈ ದೇವಾಲಯಗಳನ್ನು ನಿರ್ಮಿಸಿದ್ದಾನೆಂದು ಸಿ.ಆರ್.ಶ್ಯಾಮಲ ಅವರು ಅಭಿಪ್ರಾಯಪಟ್ಟಿದ್ದಾರೆ.[೨೪] ನಂತರ ಇವು ಜೀರ್ಣೋದ್ಧಾರಗೊಂಡಿವೆ.



ಜೋಡಿ ದೇವಾಲಯಗಳು

ಈ ಜೋಡಿ ದೇವಾಲಯದ ಸುತ್ತಲಿನ ಪ್ರದೇಶದಲ್ಲಿ ಹನ್ನೊಂದು ಗಾರೆ ಕಟ್ಟಡಗಳಿವೆ. ಇವು ಇಟ್ಟಿಗೆ ಗಾರೆಯಿಂದ ನಿರ್ಮಿಸಿರುವ ಬಹಳ ಚಿಕ್ಕ ಕಟ್ಟಡಗಳು. ಪ್ರತಿಯೊಂದರಲ್ಲಿ ಮುಂದೆ ಪ್ರವೇಶ ಅಂಕಣಭಾಗ ಮತ್ತು ಒಳಗೆ ಒಂದು ಕೊಠಡಿ ಇದೆ. ಇವುಗಳನ್ನು ಎರಡನೆಯ ಬಲ್ಲಾಳನು ಕಟ್ಟಿಸಿದ ಜೈನ ದೇವಾಲಯಗಳಾಗಿರಬೇಕೆಂದು ಸಿ.ಆರ್.ಶ್ಯಾಮಲರವರು ಅಭಿಪ್ರಾಯಪಡುತ್ತಾರೆ.[೨೫] ಈ ಊಹೆಗೆ ಯಾವುದೇ ಆಧಾರಗಳಿಲ್ಲ. ಕೈಫಿಯತ್ತಿನಲ್ಲಿ ಸಿಂಧೂ ಬಲ್ಲಾಳನು ಈ ಪರ್ವತಕ್ಕೆ ಪೂರ್ವಭಾಗದಲ್ಲಿ ಜೈನ ಬಸದಿಗಳನ್ನು ಕಟ್ಟಿಸಿದಂತೆ ಹೇಳಿದೆ.[೨೬] ಈ ಪ್ರದೇಶ ಅಲ್ಲದೆ ಇದರ ವಾಯುವ್ಯ ಭಾಗಕ್ಕೆ ನಾಲ್ಕನೇ ಸುತ್ತಿನ ಕೋಟೆಯಲ್ಲಿ ಅರಮನೆಯಂತಹ ಕಟ್ಟಡಗಳಿರುವುದರಿಂದ ರಾಜಪರಿವಾರದವರ ರಕ್ಷಣೆ ಮಾಡುವ ಕಾವಲುಗಾರರ ಅಥವಾ ಸೈನಿಕರ ವಾಸದ ಮನೆಗಳ ಇವಾಗಿರಬೇಕು. ಈ ಕಟ್ಟಡಗಳಿಗೆ ಇಟ್ಟಿಗೆ - ಗಾರೆಯನ್ನು ಮಾತ್ರ ಬಳಸಿದ್ದು ಇವು ಇತ್ತೀಚಿನ ಅಂದರೆ ಸುಮಾರು ೩೦೦ ವರ್ಷ ಹಿಂದಿನವುಗಳಾಗಿವೆ. ಅಲ್ಲದೆ ಇಲ್ಲಿ ಹತ್ತಿರದಲ್ಲೇ ಈ ಕಟ್ಟಡಗಳ ಶೈಲಿಯನ್ನು ಹೋಲುವ ಒಂದು ಕಣಜವಿದೆ. ಇವು ಸಂಡೂರು ಕೃಷ್ಣಾನಗರ ಕೋಟೆಯೊಳಗಿನ ಕಣಜಗಳನ್ನು ಹೋಲುತ್ತವೆ. ಆದ್ದರಿಂದ ಹೈದರಾಲಿ ಅಥವಾ ಟಿಪ್ಪುವಿನ ಕಾಲದಲ್ಲಿ ಈ ಕಣಜವು ನಿರ್ಮಾಣವಾಗಿರಬೇಕು. ನಾಲ್ಕನೆ ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಒಂದು



ಚಿಕ್ಕ ದೇವಾಲಯವಿದೆ. ದಕ್ಷಿಣಾಭಿಮುಖವಾಗಿರುವ ಇದು ಗರ್ಭಗೃಹ ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಗಳಿಲ್ಲ. ಈ ದೇಗುಲದ ಹತ್ತಿರದಲ್ಲಿ ಬಿದ್ದಿರುವ ದೀಪಸ್ತಂಭದ ಕೆಳಭಾಗದಲ್ಲಿ ಆಂಜನೇಯ ಶಿಲ್ಪವಿದೆ. ಸಾಮಾನ್ಯವಾಗಿ ಆಂಜನೇಯ ದೇವಾಲಯಗಳು ದಕ್ಷಿಣಾಭಿಮುಖವಾಗಿರುವುದರಿಂದ ಇದು ಆಂಜನೇಯ ದೇವಾಲಯವಾಗಿರಬೇಕು. ಕ್ರಿ.ಶ. ೧೭೮೦ರ ಕುರುಗೋಡು ಶಾಸನವು ನವಾಬ ಹೈದರಾಲಿಖಾನನು ಹನುಮಂತ ದೇವರ ಗುಡಿ ಕಟ್ಟಿಸಿದಂತೆ ಹೇಳುತ್ತದೆ.[೨೭] ಈ ದೇವಾಲಯದ ಪೂರ್ವಕ್ಕೆ ಕಣಜವಿದೆ. ಇದರಲ್ಲಿ ಕುದುರೆಗಳನ್ನು ಕಟ್ಟುತ್ತಿದ್ದರೆಂದು ಪ್ರತೀತಿ. ಪಶ್ಚಿಮಾಭಿಮುಖವಾಗಿರುವ ಇದಕ್ಕೆ ಎರಡು ಪ್ರವೇಶದ್ವಾರಗಳಿವೆ. ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಒಳಗಿನ ಕತ್ತಲನ್ನು ಹೋಗಲಾಡಿಸುವುದಕ್ಕಾಗಿ ಬೆಳಕಿಂಡಿಗಳನ್ನು ಇಡಲಾಗಿದೆ.

ಹೊರಕೋಟೆಯ ಆವರಣದ ವಾಯುವ್ಯಭಾಗದಲ್ಲಿ ವಿಜಯನಗರ ಕಾಲದಲ್ಲಿ ಕೋಟೆ ಮಲ್ಲೇಶ್ವರ ದೇವಾಲಯವಿದೆ. ದೇವಾಲಯದ ಪ್ರಕಾರದ ಒಳಬದಿಯಲ್ಲಿ ಅರವತ್ತುಮೂರು ಪುರಾತನ ಶಿವಶರಣರ ಮತ್ತು ಶಿವಲೀಲೆಯ ಉಬ್ಬುಶಿಲ್ಪಗಳಿವೆ. ಇದರಲ್ಲಿ ಮಲ್ಲಶೆಟ್ಟಿ ಬಳ್ಳವನ್ನು ಪೂಜಿಸುತ್ತಿರುವ ಚಿತ್ರವನ್ನು ಕಟೆಯಲಾಗಿದೆ.ಬೆಟ್ಟದ ಆಗ್ನೇಯ ದಿಕ್ಕಿನಲ್ಲಿ ಪೂರ್ವಾಭಿಮುಖವಾದ ಬಸವಣ್ಣ ದೇವಾಲಯವಿದೆ. ಇದು ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ನಂದಿಶಿಲ್ಪವಿದ್ದು, ಇದರ ಪ್ರವೇಶದ ಎರಡುಬದಿಗೆ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಸಭಾಮಂಟಪದಲ್ಲಿ ಚೌಕಾಕಾರದ ನಾಲ್ಕು ಕಂಬಗಳಿವೆ. ಒಂದು ಕಂಬದಲ್ಲಿ ಕೈ ಮುಗಿದು ನಿಂತಿರುವ ಭಕ್ತನ ಉಬ್ಬುಶಿಲ್ಪವಿದೆ. ಸಭಾಮಂಟಪದ ಉತ್ತರಕ್ಕೆ ಇನ್ನೊಂದು ಖಾಲಿ ಗರ್ಭಗೃಹವಿದೆ. ಇದರ ಎದುರಿನ ಗೋಡೆಯಲ್ಲಿ ಚಿಕ್ಕ ಪ್ರವೇಶ ದ್ವಾರವಿದೆ. ಸಭಾಮಂಟಪದ ಪ್ರವೇಶದ್ವಾರದ ಎರಡುಬದಿಗೂ ಶೈವದ್ವಾರಪಾಲಕರ ಉಬ್ಬುಶಿಲ್ಪಗಳಿವೆ.

ಇದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಕೈಪಿಡಿ ಗೋಡೆಯನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಿದ್ದು ಕೋಟೆ ತೆನೆಗಳನ್ನು ಹೊಂದಿದೆ. ಇದರ ನಾಲ್ಕೂ ಮೂಲೆಗೆ ನಂದಿಯ ಮೂರ್ತಿಗಳಿವೆ. ಮುಂಭಾಗದಲ್ಲಿ ದೀಪಸ್ತಂಭವಿದ್ದು ಇದರ ಕೆಳಭಾಗದ ಮೇಲೆ ಕೈ ಮುಗಿದು ನಿಂತ ಭಕ್ತನ ಉಬ್ಬುಶಿಲ್ಪವಿದೆ. ಇದೇ ರೀತಿಯ ದೀಪಸ್ತಂಭವನ್ನು ಕುರುಗೋಡು ಬೆಟ್ಟದ ಮೇಲಿರುವ ಕೋಟೆಯೊಳಗಿನ ಆಂಜನೇಯನ ಗುಡಿಯ ಮುಂದೆ ಕಾಣಬಹುದು. ಅಲ್ಲಿಯೂ ಕೈ ಮುಗಿದು ನಿಂತ ಭಕ್ತನ ಶಿಲ್ಪವಿದೆ. ಈ ಎರಡು ದೇವಾಲಯಗಳು ಪಾಳೆಯಗಾರರ ಅವಧಿಯವು. ದೀಪಸ್ತಂಭದಲ್ಲಿ ಕೈ ಮುಗಿದು ನಿಂತ ಭಕ್ತ ಹಂಡೆ ಪಾಳೇಗಾರ ನಾಯಕರಲ್ಲಿ ಒಬ್ಬರಿರಬೇಕು.

ಹೊರಕೋಟೆಯ ಪೂರ್ವ ಪ್ರದೇಶದಲ್ಲಿ ವಿಜಯನಗರೋತ್ತರ ಕಾಲದ ಕೋಟೆ ಆಂಜನೇಯನ ಗುಡಿ ಇದೆ. ಇಲ್ಲಿಂದ ಪಶ್ಚಿಮಕ್ಕೆ ಒಂದು ಫರ್ಲಾಂಗ ದೂರದಲ್ಲಿ ಜೀವಾಂಜನೇಯ ದೇಗುಲವಿದೆ. ದಕ್ಷಿಣಾಭಿಮುಖವಾದ

ಇದು ಗರ್ಭಗೃಹ ತೆರೆದ ಸಭಾಮಂಟಪ, ಪ್ರದಕ್ಷಿಣಾಪಥ ಹಾಗೂ ಪ್ರಾಕಾರಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಕಲ್ಲು ಬಂಡೆಯಲ್ಲಿ ಕೊರೆದ ಆಂಜನೇಯನ ಉಬ್ಬುಶಿಲ್ಪವಿದೆ. ಬಿಜಾಪುರ ಸುಲ್ತಾನರು ತಾಳಿಕೋಟೆ ಯುದ್ಧನಂತರ ವಿಜಯನಗರಕ್ಕೆ ಬಂದಾಗ ಅನೇಕರು ತಮ್ಮ ಪ್ರಾಣ ರಕ್ಷಣೆಗಾಗಿ ಇಲ್ಲಿ ಬಂದರೆಂದು ಪ್ರತೀತಿ ಇದೆ. ದೇವಾಲಯದ ಹಿಂಭಾಗದ ಬಂಡೆಯ ಮೇಲೆ ಬ್ರಿಟಿಷ್ ಲಾಂಛನವುಳ್ಳ ೧೮೪೧ ಇಸ್ವಿ ಮತ್ತು ಮಾರ್ಚ್ ತಿಂಗಳನ್ನು ಉಲ್ಲೇಖಿಸುವ ಶಾಸನವಿದೆ.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೫೬. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. *ಅದೇ,* ಪು. ೫೬

೩. *ಅದೇ,* ಪು. ೫೬

೪. ಶಿವಮೂರ್ತಿಶಾಸ್ತ್ರಿ, ವಿ. ೧೯೯೮. *ಕರ್ನಾಟಕ ಸಂದರ್ಶನ* - ೧, ಪು. ೫೧. ಬೆಂಗಳೂರು

೫. ಕಲಬುರ್ಗಿ, ಎಂ.ಎಂ. (ಸಂ.), ೧೯೯೪. *ಕರ್ನಾಟಕದ ಕೈಫಿಯತ್ತುಗಳು,* ಪು. ೫೨೪. ಹಂಪಿ : ಕನ್ನಡ ವಿಶ್ವವಿದ್ಯಾಲಯ

೬. ಶ್ಯಾಮಲ, ಸಿ.ಆರ್. ೧೯೯೯. ಬಳ್ಳಾರಿ ಗುಡ್ಡದ ಮೇಲಿನ ದೇವಾಲಯಗಳು, *ಇತಿಹಾಸ ದರ್ಶನ* - ೧೪. ಪು. ೧೫೫

೭. ಚನ್ನಬಸವಯ್ಯ ಹಿರೇಮಠ. ೧೯೯೫. *ಕುರುಗೋಡು ಸಿಂದರು : ಒಂದು ಅಧ್ಯಯನ,* ಪು. ೧೫೫. ಕೊಪ್ಪಳ : ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ

೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪೂರ್ವೋಕ್ತ. ಪು. ೭

೯. *ಕುರುಗೋಡು ಸಿಂದರು : ಒಂದು ಅಧ್ಯಯನ,* ಪೂರ್ವೋಕ್ತ. ಪು. ೬೮

೧೦. *ಅದೇ,* ಪು. ೬೯

೧೧. ಚನ್ನಬಸಪ್ಪ, ಎಸ್.ಪಾಟೀಲ. ೧೯೯೯. *ಕರ್ನಾಟಕದ ಕೋಟೆಗಳು* - ೧, ಪು. ೧೦೦. ಹಂಪಿ : ಕನ್ನಡ ವಿಶ್ವವಿದ್ಯಾಲಯ

೧೨. *ಕರ್ನಾಟಕದ ಕೈಫಿಯತ್ತುಗಳು,* ಪೂರ್ವೋಕ್ತ. ಪು. ೫೨೫

೧೩. *ಕರ್ನಾಟಕದ ಕೋಟೆಗಳು,* ಪೂವೋಕ್ತ. ಪು. ೧೦೦

೧೪. *ಕರ್ನಾಟಕದ ಕೈಫಿಯತ್ತುಗಳು,* ಪೂರ್ವೋಕ್ತ, ಪು. ೫೨೫

೧೫. *ಅದೇ,* ಪು. ೫೨೮

೧೬. *ಅದೇ,* ಪು. ೫೨೮

೧೭. *ಅದೇ,* ಪು. ೫೨೮

೧೮. *ಅದೇ,* ಪು. ೫೩೨

೧೯. *ಕರ್ನಾಟಕದ ಕೋಟೆಗಳು,* ಪೂವೋಕ್ತ. ಪು. ೧೦೦

೨೦. *ಅದೇ,* ಪು. ೧೦೪

೨೧. *ಕರ್ನಾಟಕದ ಕೈಫಿಯತ್ತುಗಳು,* ಪೂವೋಕ್ತ. ಪು. ೫೩೫

೨೨. *ಅದೇ,* ಪು. ೫೩೩

೨೩. ಚಂದ್ರಶೇಖರ, ಹೆಚ್. ೨೦೦೦. ಬಳ್ಳಾರಿ ಕೋಟೆಯ ರಚನೆಯಲ್ಲಿ ಭೂಸದೃಶ್ಯಗಳ ಪಾತ್ರ, *ಇತಿಹಾಸ ದರ್ಶನ* - ೧೫. ಪು. ೨೩-೨೬

೨೪. ಶ್ಯಾಮಲ, ಸಿ.ಆರ್. ೧೯೯೯. ಪೂರ್ವೋಕ್ತ. ಪು. ೧೫೫-೧೫೬

೨೫. *ಅದೇ,* ಪು. ೧೫೮

೨೬. *ಕರ್ನಾಟಕದ ಕೈಫಿಯತ್ತುಗಳು,* ಪೂವೋಕ್ತ. ಪು. ೫೩೫

೨೭. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೧೧

❑❑

ಬಳ್ಳಾರಿ ಕೋಟೆ ಮತ್ತು ಅದರ ಪರಿಸರ



ಕೃಪೆ ಎಚ್.ಚಂದ್ರಶೇಖರ್

೫

ಸಂಡೂರು ತಾಲೂಕಿನ ಕೋಟೆಗಳು

(Forts of Sandur Taluk)

೫

ಸಂಡೂರು ತಾಲೂಕಿನ ಕೋಟೆಗಳು

(Forts of Sandur Taluk)

ಸಂಡೂರು ನಗರವು ಬಳ್ಳಾರಿಯಿಂದ ನೈರುತ್ಯದಲ್ಲಿ ೪೮ ಕಿ.ಮೀ. ಹಾಗೂ ಬೆಂಗಳೂರಿನಿಂದ ವಾಯುವ್ಯ ದಿಕ್ಕಿನಲ್ಲಿ ೩೫೪ ಕಿ.ಮೀ. ದೂರದಲ್ಲಿದೆ. ಇದು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಕ್ರಿ.ಶ. ೧೭೨೮ ರಿಂದ ೧೯೫೬ ರ ವರೆಗೆ ಘೋರ್ಪಡೆ ವಂಶದವರು ಸಂಡೂರು ರಾಜ್ಯವನ್ನು ಆಳಿದರು.[೧] ಘೋರ್ಪಡೆ ವಂಶದವರ ಆಳ್ವಿಕೆ ಅವಧಿಯಲ್ಲಿ ಸಂಡೂರು ೨೦ ಹಳ್ಳಿಗಳ ೧೧,೦೦೦ ಜನಸಂಖ್ಯೆಯ ೧೬೦ ಚದುರ ಕಿ.ಮೀ. ಭೂವಿಸ್ತಾರದ ಒಂದು ಸ್ವತಂತ್ರ ಪುಟ್ಟ ರಾಜ್ಯವಾಗಿತ್ತು. ಕರ್ನಾಟಕ ಏಕೀಕರಣದ ಕಾಲಕ್ಕೆ ೧೯೫೬ರಲ್ಲಿ ಈ ರಾಜ್ಯ ಮೈಸೂರು ರಾಜ್ಯಕ್ಕೆ ಸೇರಿ, ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿ ರೂಪುಗೊಂಡಿತು. ಇತಿಹಾಸ ಪೂರ್ವಕಾಲ ಹಾಗೂ ಪುರಾಣಗಳ ಕಾಲದಿಂದ ಸಂಡೂರು ತನ್ನದೇ ಆದ ಸಾಂಸ್ಕೃತಿಕ ಇತಿಹಾಸ ಪರಂಪರೆಯನ್ನು ಹೊಂದಿದೆಯಲ್ಲದೆ ವಿಶೇಷ ಭೌಗೋಳಿಕ ಖನಿಜ ಸಂಪತ್ತು ಪ್ರಾಕೃತಿಕ ಸೌಂದರ್ಯ ಹಿತಕರ ಹವಾಗುಣವನ್ನು ಹೊಂದಿ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಅಳವಡಿಸಿಕೊಂಡಿದೆ.

ಪುರಾಣಗಳ ಕಾಲದಲ್ಲಿ ಈ ಪಟ್ಟಣವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಸ್ಕಂದಪುರಾಣದಲ್ಲಿ ಈ ಪಟ್ಟಣವನ್ನು ಸ್ಕಂದಪುರವೆಂದು ವರ್ಣಿಸಲಾಗಿದೆ. ಇಲ್ಲಿ ಸ್ಕಂದ ಅಥವಾ ಕುಮಾರಸ್ವಾಮಿ ವಾಸವಾಗಿದ್ದರಿಂದ ಸ್ಕಂದಪುರವೆಂದು ಕರೆಯಲಾಗಿದೆ. ಕೃತ ಯುಗದಲ್ಲಿ ದೇವಗಿರಿ ಎಂದೂ, ತ್ರೇತಾಯುಗದಲ್ಲಿ ಸುವರ್ಣಗಿರಿ ಎಂದೂ, ದ್ವಾಪರಯುಗದಲ್ಲಿ ದಿವ್ಯಾಚಲ ಎಂದೂ, ಕಲಿಯುಗದಲ್ಲಿ ಲೋಹಗಿರಿ ಎಂದೂ ಪೌರಾಣಿಕ ಪುರಾವೆಗಳಿವೆ. ಸಂಡೂರು ಪ್ರದೇಶದ ಕ್ಷೇತ್ರಗಳಿಗೆ ತನ್ನದೇ ಆದ ಪೌರಾಣಿಕ ಹಿನ್ನೆಲೆಗಳಿವೆ.

ಇಲ್ಲಿನ ಕುಮಾರಸ್ವಾಮಿ ಬೆಟ್ಟದಲ್ಲಿನ ಕ್ರಿ.ಶ. ೧೨೦೬ ರ ಹೊಯ್ಸಳ ಎರಡನೆಯ ವೀರಬಲ್ಲಾಳನ ಶಿಲಾಶಾಸನದಲ್ಲಿ ಮೊಟ್ಟಮೊದಲು ಸಂಡೂರು ಎಂಬ ಉಲ್ಲೇಖವಿರುವುದು ಕಂಡುಬರುತ್ತದೆ.[೨] ನಂತರದ ವಿಜಯನಗರದ ಅನೇಕ ಶಾಸನಗಳಲ್ಲಿ ಸಂಡೂರು ಸ್ಥಳನಾಮದ ಉಲ್ಲೇಖಗಳು ಕಾಣಬರುತ್ತಿವೆ. ಇದರಿಂದ ಕ್ರಿ.ಶ. ೧೨೦೬ ಕ್ಕಿಂತ ಹಿಂದಿನಿಂದಲೇ ಸಂಡೂರು ಹೆಸರಿನ ಪಟ್ಟಣ ಇತ್ತೆಂದು ತಿಳಿದುಬರುತ್ತದೆ.

ಸಂಡೂರು ಅಥವಾ ಸಂಡೂರು ಸ್ಥಳನಾಮ ಶಬ್ದದ ಮೂಲರೂಪ ಭೂಗೋಳ ಶಾಸ್ತ್ರಜ್ಞ ಮೆಕಾಲೆ ಹೇಳುವಂತೆ ಈ ಪಟ್ಟಣ ಪರ್ವತಗಳ ಸಂದಿಯಲ್ಲಿ ಇರುವುದರಿಂದ ಸಂದಿಯಲ್ಲಿ ಇರುವ ಊರು ಸಂದು ಊರು ಸಂದೂರು. ಸಂಡೂರು, ಸ್ವಂಡೂರು, ಸೊಂಡೂರು ಎಂದು ತಲತಲಾಂತರಗಳ ಜನಾಂಗಗಳ ಬಾಯಲ್ಲಿ ಶಬ್ದ ಸವೆದು ಈಗ ಸಂಡೂರು ಎಂದು ಪ್ರಚಲಿತದಲ್ಲಿದೆ. ಇತಿಹಾಸ ಪೂರ್ವಕಾಲದಲ್ಲಿ ಸಂಡೂರು ಸುತ್ತಮುತ್ತ ಆದಿಮಾನವನ ನಿವಾಸ ಇದ್ದಿರಬಹುದೆಂದು ಊಹಿಸಲಾಗಿದೆ. ಇಲ್ಲಿಯ ಸಿಡೇಗಲ್ಲು, ವಿಭೂತಿಗುಡ್ಡ, ತೋರಣಗಲ್ಲುಗಳು ಕಬ್ಬಿಣಯುಗದ ತಾಣಗಳಾಗಿವೆ. ಮೌರ್ಯರ ಮತ್ತು ಶಾತವಾಹನರ ಆಡಳಿತಕ್ಕೆ ಸಂಡೂರು ಒಳಪಟ್ಟಿತ್ತು. ದೇವಗಿರಿ, ಚೋರನೂರು, ಅಗ್ರಹಾರ, ಕೂಡ್ಲಿಗಿ, ಹಾಳು ದೇವಲಾಪುರ, ಕೊಟ್ಟೂರು, ಹೆಗ್ಗಡಾಳು, ಶಿವಪುರ, ಹಂಪಿ, ಕುರುಗೋಡು, ಎಮ್ಮಿಗನೂರು, ಕಂಪ್ಲಿ, ಕುಡಿತಿನಿ, ಬಳ್ಳಾರಿ, ಅಶೋಕ ಸಿದ್ಧಾಪುರ, ಮೊಳಕಾಲ್ಮೂರು, ಹಿರೇಹಡಗಲಿ ಮುಂತಾದ ಗ್ರಾಮಗಳಲ್ಲಿ ಶಾತವಾಹನರ ಕಾಲದ ಅವಶೇಷಗಳು ದೊರೆಯುತ್ತವೆ. ಸಂಡೂರು ಸಹ ಶಾತವಾಹನರ ಕಾಲದಲ್ಲಿ ಒಳನಾಡಿನ ಮುಖ್ಯ ಕೇಂದ್ರವಾಗಿತ್ತು. ಬನವಾಸಿ ಕದಂಬರ ಕಾಲದಲ್ಲಿ ಕುಮಾರಸ್ವಾಮಿ ಬೆಟ್ಟದಲ್ಲಿ ಕೆಲ ದೇವಾಲಯಗಳನ್ನು ನಿರ್ಮಿಸಲಾಗಿದೆ ಮತ್ತು ಕೆಲವು ಮೂರ್ತಿ ಶಿಲ್ಪಾವಶೇಷಗಳು ಇಲ್ಲಿ ಕಂಡುಬರುವುದರಿಂದ ಬನವಾಸಿ ಕದಂಬರ ಸಾಮಂತರಾದ ಉಚ್ಚಂಗಿ ನೊಳಂಬರ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿರಬಹುದಾಗಿದೆ.

ಕುಮಾರಸ್ವಾಮಿ ಬೆಟ್ಟದಲ್ಲಿರುವ ಪಾರ್ವತಿ ದೇವಾಲಯವು ಬಾದಾಮಿ ಚಾಲುಕ್ಯರ ಶೈಲಿಯ ವಾಸ್ತುಶಿಲ್ಪ ವಿಮಾನ ಶೈಲಿಯಲ್ಲಿದೆ. ಇದನ್ನು ಬಾದಾಮಿ ಚಾಲುಕ್ಯರ ಕೊನೆಯ ಕಾಲದಲ್ಲಿ ಕಟ್ಟಿರಬಹುದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರಾಚೀನವಾದ ಸುಂದರ ವಾಸ್ತುಶಿಲ್ಪವುಳ್ಳ ದೇವಾಲಯ ಇದಾಗಿದೆ.

ರಾಷ್ಟ್ರಕೂಟರು ಈ ಪ್ರದೇಶದ ಮೇಲೆ ವಿಶೇಷ ಗಮನಹರಿಸಿ ಇಲ್ಲಿನ ಪಾರ್ವತಿ ದೇವಸ್ಥಾನಕ್ಕೆ ಹಾಗೂ ಪಕ್ಕದ ಕುಮಾರಸ್ವಾಮಿ ದೇವಾಲಯಗಳಿಗೆ ಹಳ್ಳಿಯೊಂದನ್ನು ದತ್ತಿ ಬಿಟ್ಟು ಹಾಗೂ ದೇವ ಕಾರ್ಯಗಳಿಗೆ ದತ್ತಿ ದಾನಗಳನ್ನು ನೀಡಿದರೆಂದು ಶಾಸನಗಳಿಂದ ತಿಳಿದುಬರುತ್ತದೆ.[೩] ಇದರಿಂದ ರಾಷ್ಟ್ರಕೂಟರು ಈ ಪ್ರದೇಶವನ್ನು ಆಳಿದುದಲ್ಲದೆ ಧರ್ಮಕಾರ್ಯಗಳಿಗೆ ಸಾಹಿತ್ಯ ಕಲೆಗೆ ವಿಶೇಷ ಗಮನ ಕೊಟ್ಟಿದ್ದಾರೆ.

ಕಲ್ಯಾಣ ಚಾಲುಕ್ಯರ ಸಾಮಂತರಾದ ಪಾಂಡ್ಯರು ಮಹಾಮಂಡಳೇಶ್ವರಾಗಿ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗದಿಂದ ಆಳುತ್ತಿದ್ದರು. ಈ ರಾಜ್ಯ ನೊಳಂಬವಾಡಿ ೩೨೦೦೦ ದಲ್ಲಿ ಸೇರಲಾಗಿತ್ತು. ತುಂಗಭದ್ರ ನದಿಯ ಉತ್ತರಕ್ಕೆ ಕುರುಗೋಡು ಸಿಂಧರು ಆಡಳಿತ ಮಾಡುತ್ತಿದ್ದರು. ಇವರ ಕಾಲದಲ್ಲಿ ಕುಮಾರಸ್ವಾಮಿ ದೇವಾಲಯವನ್ನು ವೇಸರ ಶೈಲಿಯಲ್ಲಿ ಕಟ್ಟಲಾಗಿದೆ. ಕ್ರಿ.ಶ. ೧೦೪೭ರ ಕಲ್ಯಾಣ ಚಾಲುಕ್ಯರ ನಾರಿಹಳ್ಳ ತಾರಾನಗರ ಶಾಸನದಲ್ಲಿ ಚಾಲುಕ್ಯರ ವಂಶಾವಳಿ ಇರುವುದೂ ಕಂಡುಬರುತ್ತದೆ.

ರಾಷ್ಟ್ರಕೂಟರ ಕೃಷ್ಣನ ಕಾಲದಲ್ಲಿ ಕುಮಾರಸ್ವಾಮಿ ಹಾಗೂ ಪಾರ್ವತಿ ದೇವಸ್ಥಾನಗಳಿಗೆ ಬಿಟ್ಟ ದಾನದತ್ತಿಗಳು ಕಾಲಾಂತರದಲ್ಲಿ ನಿಂತುಹೋಗಿದ್ದ ವಿಷಯವನ್ನು ಹೊಯ್ಸಳರ ೧೨೦೬ರ ಶಾಸನವೊಂದು ಸೂಚಿಸುತ್ತದೆ. ಸಂಡೂರು ಸಮೀಪದ ತಾಳೂರಿನಲ್ಲಿ ಎರಡನೇ ವೀರಬಲ್ಲಾಳನ ಇನ್ನೊಂದು ಕ್ರಿ.ಶ. ೧೨೧೮ರ ಶಾಸನವು ಇವನ ಆಡಳಿತಾಧಿಕಾರಿ ಬೊಮ್ಮಗಾವುಂಡನು ಈಶ್ವರ ದೇವಾಲಯವನ್ನು ಕಟ್ಟಿಸಿ ದಾನದತ್ತಿಗಳನ್ನು ಬಿಟ್ಟಂತೆ ಉಲ್ಲೇಖಿಸುತ್ತದೆ.[೪] ರಾಮಘಡದಲ್ಲಿಯೂ ಕ್ರಿ.ಶ. ೧೩೨೩ರ ಶಾಸನವೊಂದು ಬಲ್ಲಾಳರಾಯನು ವೀರಕಂಪಿಲರಾಯನ ಮೇಲೆ ದಂಡೆತ್ತಿ ಬಂದಾಗ ಯುದ್ಧರಂಗದಲ್ಲಿ ಬಲಿಚಬೋವನು ಹೋರಾಡಿ ಸತ್ತ ವಿಷಯವಿದೆ. ಪ್ರಾಯಶಃ ಹೊಸಮಲೈಯಲ್ಲಿ ಇಷ್ಟೊತ್ತಿಗಾಗಲೇ ಕೋಟೆ ನಿರ್ಮಾಣವಾಗಿದ್ದಿರಬೇಕು.

ವಿಜಯನಗರ ಕಾಲದಲ್ಲಿ ಸಂಡೂರು ಪ್ರಮುಖ ಪಾತ್ರವಹಿಸಿತ್ತು. ಸಂಡೂರು ತಾಲ್ಲೂಕಿನ ಸುಬ್ಬರಾಯನಹಳ್ಳಿ ಬಳಿಯ ನವಿಲು ತೀರ್ಥದಲ್ಲಿ ವಿಜಯನಗರದ ಬುಕ್ಕರಾಯನಿಗೆ ಸಂಬಂಧಿಸಿದ ೨ ಶಾಸನಗಳು ಕಂಡುಬರುತ್ತವೆ. ಸಂಡೂರು ಪಟ್ಟಣದ ಮಧ್ಯದಲ್ಲಿ ತಾರಕೇಶ್ವರ ದೇವಸ್ಥಾನದ ಸಮೀಪದಲ್ಲಿ, ಹೊಸಮಲೈದುರ್ಗದ ರಾಮನ ಗುಡಿಯ ಮುಂದೆ ಮತ್ತು ಕುರೆಕುಪ್ಪೆಯ ಈಶ್ವರ ದೇವಾಲಯದಲ್ಲಿ ಕೃಷ್ಣದೇವರಾಯನ ಕಾಲದ ಶಾಸನಗಳು ಕಂಡುಬಂದಿವೆ.[೫] ಚಿಕ್ಕಕೆರೆಯಾಗಿನ ಹಳ್ಳಿಯ ಕೆರೆಕಟ್ಟೆಯ ಬಳಿಯಲ್ಲಿ ವಿಜಯನಗರದ ಅಚ್ಯುತದೇವರಾಯನ ಶಾಸನವೊಂದು ೧೬ ಕೆರೆಗಳನ್ನು ಬಯಕಾರ ರಾಮಪ್ಪ ನಿರ್ಮಿಸಿದಂತೆ ತಿಳಿಸುತ್ತದೆ.[೬] ಹೀಗೆ ಈ ಸಂಡೂರು ಪ್ರದೇಶವೂ ಶಾತವಾಹನರಿಂದ ವಿಜಯನಗರದ ಅರಸರವರೆಗಿನ ಆಡಳಿತಾವಧಿಯಲ್ಲಿ ಪ್ರಮುಖ ಪಾತ್ರವಹಿಸಿರುವುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೫೬೫ ತಾಳೀಕೋಟೆ ಯುದ್ಧದ ನಂತರ ವಿಜಯನಗರ ಪತನವಾಯಿತು. ಆಗ ಸೇನಾನಿಗಳ ಸಾಮಂತರು ಬೇರೆ ಬೇರೆ ಭಾಗಗಳನ್ನು ಸ್ವತಂತ್ರವಾಗಿ ಆಳಲು ಪ್ರಾರಭಿಸಿದರು. ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ಪ್ರದೇಶದಲ್ಲಿ ಹಂಡೆ ಪಾಳೆಯಗಾರರು, ಹರಪನಹಳ್ಳಿ, ಹಡಗಲಿ ಭಾಗದಲ್ಲಿ ಹರಪನಹಳ್ಳಿ ಪಾಳೇಗಾರರು, ಗುಡೇಗೋಟೆ ಚೋರನೂರು ಭಾಗವನ್ನು, ಗುಡೇಕೋಟೆ ಪಾಳೆಯಗಾರರು, ಕೂಡ್ಲಿಗಿ, ಉಜ್ಜನಿ, ಸಂಡೂರುಗಳನ್ನು

ಜರಿಮಲೆ ಪಾಳೆಯಗಾರರು ಆಳುತ್ತಿದ್ದರು. ಸಂಡೂರು ಜರಿಮಲೆ ಪಾಳೆಯಗಾರರ ಆಡಳಿತಕ್ಕೆ ಸೇರಿತ್ತು. ಜರಿಮಲೆ ಪಾಳೆಯಗಾರರು ಕೂಡ್ಲಿಗಿ ತಾಲೂಕು ಜರಿಮಲೆಯಿಂದ ಆಡಳಿತ ಮಾಡುತ್ತಿದ್ದರು. ಕ್ರಿ.ಶ. ೧೬೫೬ರಿಂದ ಬಿಜಾಪುರ ಸುಲ್ತಾನರೊಡನೆ ಮತ್ತು ಮರಾಠರೊಡನೆ ಹೋರಾಡುತ್ತಾ ಆಡಳಿತ ಮಾಡಿದರು. ಕ್ರಿ.ಶ. ೧೬೭೮ರಲ್ಲಿ ಬಳ್ಳಾರಿ ಸುತ್ತಮುತ್ತ ಪ್ರದೇಶ ಬಿಜಾಪುರ ಸುಲ್ತಾನನಿಂದ ಶಿವಾಜಿ ವಶಪಡಿಸಿಕೊಂಡ. ಮರಾಠ ಬೋಸ್ಲೆ ಮನೆತನದ ದಾಯಾದಿಗಳಾದ ಘೋರ್ಪಡೆಯವರು ಕ್ರಿ.ಶ. ೧೭೨೮ರಲ್ಲಿ ಜರಿಮಲೆ ಪಾಳೆಯಗಾರರಿಂದ ಸಂಡೂರನ್ನು ವಶಪಡಿಸಿಕೊಂಡು ಸಂಡೂರಿನಿಂದ ಆಡಳಿತ ಪ್ರಾರಂಭಿಸಿದರು. ಕ್ರಿ.ಶ. ೧೭೯೦ರಲ್ಲಿ ಬ್ರಿಟೀಷರೊಡನೆ ಒಪ್ಪಂದ ಮಾಡಿಕೊಂಡು ಘೋರ್ಪಡೆ ವಂಶದವರು ಕ್ರಿ.ಶ. ೧೯೫೬ರ ವರೆಗೆ ಸಂಡೂರಿನಲ್ಲಿ ಆಡಳಿತ ಮಾಡಿದರು. ಕ್ರಿ.ಶ. ೧೭೨೮ರಲ್ಲಿ ಮುರಾರಿರಾವ್ ಘೋರ್ಪಡೆ ಅಧಿಕಾರಕ್ಕೆ ಬಂದನು. ಇವನ ಆಡಳಿತ ಕಾಲದಲ್ಲಿ ಕ್ರಿ.ಶ. ೧೭೭೬ರಲ್ಲಿ ಹೈದರನು ಸಂಡೂರನ್ನು ಮುತ್ತಿ ವಶಪಡಿಸಿಕೊಂಡು ಆಗ ಹೈದರನು ಕೃಷ್ಣಾನಗರದಲ್ಲಿ ಕೋಟೆಯೊಂದನ್ನು ಕಟ್ಟಿಸಲು ಪ್ರಾರಂಭಿಸಿದ ಈ ಕೋಟೆಯನ್ನು ಟಿಪ್ಪು ಪೂರ್ಣಗೊಳಿಸಿದಂತೆ ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಈ ಸಂಡೂರು ಪ್ರದೇಶದಲ್ಲಿ ಅನೇಕ ಕೋಟೆ ಕೊತ್ತಲಗಳು ನಿರ್ಮಾಣವಾದವು. ಅಂಥವುಗಳಲ್ಲಿ ದರೋಜಿ, ಹೊಸಮಲೆದುರ್ಗ ಮತ್ತು ಕೃಷ್ಣಾನಗರ ಮುಖ್ಯವಾಗಿವೆ. ಅವುಗಳ ವಿಸ್ತೃತ ರೂಪವನ್ನು ಮುಂದೆ ನೀಡಲಾಗಿದೆ.

ಟಿಪ್ಪಣಿಗಳು

೧. ನಾಗಭೂಷಣ, ಎಸ್.ಎಂ. ೧೯೯೫. ಸೊಂಡೂರು ಇತಿಹಾಸ ಮತ್ತು ಸಂಸ್ಕೃತಿ, *ಇತಿಹಾಸ ದರ್ಶನ - ೧೫.* ಪು. ೧೭೬-೧೮೨

೨. SII IX (pt. 1) No. 326. ಸಂಡೂರು

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧,* ಪು. ೧೯೭. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. *ಅದೇ,* ಪು. ೧೯೭-೧೯೮

೫. *ಅದೇ,* ಪು. ೨೧೩

೬. *ಅದೇ,* ಪು. ೨೦೧, ೨೦೩ ಮತ್ತು ೨೧೩

೭. *ಅದೇ,* ಪು. ೨೧೬

೫.೧ ಕೃಷ್ಣಾನಗರ

ಕೃಷ್ಣಾನಗರ ಸಂಡೂರಿಗೆ ಹೊಂದಿಕೊಂಡಿದೆ. ಸಂಡೂರಿನಿಂದ ಬಳ್ಳಾರಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮವಿದೆ. ಇದರ ಆಗ್ನೇಯಕ್ಕೆ ದೋಣಿಮಲೈ (ಎನ್.ಎಂ.ಡಿ.ಸಿ) ಇದೆ. ಇಲ್ಲಿ ಖನಿಜಸಂಪತ್ತು ಹೇರಳವಾಗಿ ದೊರೆಯುತ್ತಿದೆ. ಇಲ್ಲಿಂದ ಪ್ರತಿದಿನ ಸಾವಿರಾರು ಟನ್ನುಗಳಷ್ಟು ಕಬ್ಬಿಣದ ಅದಿರು ವಿದೇಶಗಳಿಗೆ ರಫ್ತಾಗುತ್ತದೆ. ಈ ಗ್ರಾಮದ ದಕ್ಷಿಣಕ್ಕೆ ಬರುವುದೇ ಕುಮಾರಸ್ವಾಮಿಯ ಬೆಟ್ಟ. ಇದು ಸಮುದ್ರ ಮಟ್ಟದಿಂದ ೨೪೦೦ ಅಡಿ ಎತ್ತರವಾಗಿದೆ. ಇಲ್ಲಿ ದಟ್ಟವಾದ ಕಾಡು ಆವರಿಸಿದೆ. ಕೃಷ್ಣಾನಗರದ ಪಶ್ಚಿಮಕ್ಕೆ ೧೪ನೇ ಶತಮಾನದಲ್ಲಿ ನಿರ್ಮಾಣವಾದ ದಟ್ಟವಾದ ಕಾಡಿನ ಮಧ್ಯ ದೌಲತ್‌ಬಾದ್ ಇದೆ. ಇದರ ಪೂರ್ವಕ್ಕೆ ಇರುವುದೇ ಕೃಷ್ಣಾನಗರ.


ಕೋಟೆ ನಿರ್ಮಾಣದ ಕಾಲ

ಹೈದರನು ಕ್ರಿ.ಶ. ೧೭೬೭-೬೯ರಲ್ಲಿ ನಡೆದ ಮೊದಲ ಆಂಗ್ಲೋ ಮೈಸೂರು ಯುದ್ಧದನಂತರ ಕ್ರಿ.ಶ. ೧೭೬೯ರಲ್ಲಿ ಹೈದರನು ಬ್ರಿಟಿಷರ ಪ್ರದೇಶಗಳನ್ನು ಗೆದ್ದುಕೊಳ್ಳುತ್ತಾ ಮದ್ರಾಸಿನವರೆಗೆ ರಾಜ್ಯವನ್ನು ವಿಸ್ತರಿಸಿದ್ದನು.[೧] ಕ್ರಿ.ಶ. ೧೭೭೧ರಲ್ಲಿ ಮರಾಠರು ಹೈದರಾಲಿಯ ಮೇಲೆ ಯುದ್ಧ ಮಾಡಿದರು. ಆಗ ಹೈದರಾಲಿಯು ಕಪ್ಪಕಾಣಿಕೆ ಕೊಡುವ ಮೂಲಕ ರಾಜಿಮಾಡಿಕೊಂಡಿದ್ದನು. ಅದರಂತೆ ತುಂಗಭದ್ರೆಯ ಉತ್ತರಕ್ಕೆ ತಾನು ಗೆದ್ದಿದ್ದ ಪ್ರದೇಶಗಳನ್ನು ಬಿಟ್ಟುಕೊಡಲು ಒಪ್ಪಿದನು. ಆದರೆ ಮಾಧವರಾವ್ ಪೇಶ್ವೆ ಮರಣ ಹೊಂದಿದನಂತರ ಮರಾಠರಲ್ಲಿ ಅರಾಜಕತೆಯುಂಟಾಯಿತು. ಈ ಸಮಯವನ್ನು ಸಾಧಿಸಿ ಹೈದರನು ಸವಣೂರು, ಕಡಪ, ಕರ್ನೂಲ ಮತ್ತು ಸಂಡೂರನ್ನು ಗೆದ್ದುಕೊಂಡನು. ಮುಂದೆ ಕ್ರಿ.ಶ. ೧೭೮೦ರ ವರೆಗೆ ಇಂಗ್ಲೀಷರು ತಟಸ್ಥರಾಗಿದ್ದರು. ರಾಜ್ಯದಲ್ಲಿ ಶಾಂತಿ ನೆಲೆಸಿತ್ತು. ಈ ಸಮಯದಲ್ಲಿ ಅಂದರೆ ಕ್ರಿ.ಶ. ೧೭೭೬ರಲ್ಲಿ ಕೃಷ್ಣಾನಗರದ ಕೋಟೆ ನಿರ್ಮಾಣದ ಕಾರ್ಯವನ್ನು ಆರಂಭಿಸಿದ.[೨] ಕ್ರಿ.ಶ. ೧೭೭೯ರಲ್ಲಿ ಚಿತ್ರದುರ್ಗದ ಮದಕರಿನಾಯಕನನ್ನು ಸೋಲಿಸಿ ಚಿತ್ರದುರ್ಗವನ್ನು ಮೈಸೂರಿಗೆ ಸೇರಿಸಿಕೊಂಡನು.[೩] ಹೀಗೆ ಈ ದಂಡಯಾತ್ರೆಗಳಿಂದ ಉತ್ತರದಲ್ಲಿ ಧಾರವಾಡ ಮತ್ತು ಬಳ್ಳಾರಿಗಳವರೆಗೂ ಮೈಸೂರು ರಾಜ್ಯ ವಿಸ್ತರಿಸಲ್ಪಟ್ಟಿತ್ತು. ಗೆದ್ದ ರಾಜ್ಯಗಳ ಸಂರಕ್ಷಣೆಗಾಗಿ ಅಪಾರ ಮದ್ದುಗುಂಡುಗಳನ್ನು ಸಂಗ್ರಹಿಸಿದ ಇವುಗಳನ್ನು ಇಡುವುದಕ್ಕಾಗಿಯೇ ಕೃಷ್ಣಾನಗರ ಕೋಟೆಯಲ್ಲಿ ಪ್ರತ್ಯೇಕವಾದ ಐದು ಮದ್ದುಗುಂಡಿನ ಉಗ್ರಾಣಗಳನ್ನು ನಿರ್ಮಿಸಿದ್ದಾನೆ. ಹೀಗೆ ಕ್ರಿ.ಶ. ೧೭೭೬ರಲ್ಲಿ ಈ ಕೋಟೆ ನಿರ್ಮಾಣದ ಕಾರ್ಯ ಆರಂಭಿಸಿದ. ಮುಕ್ತಾಯದ ಹಂತ ತಂದನಾದರೂ ಮುಂದೆ ಕ್ರಿ.ಶ. ೧೭೮೦ರಿಂದ ಎರಡನೇ ಆಂಗ್ಲೋ ಮೈಸೂರು ಯುದ್ಧ ಆರಂಭವಾದ್ದರಿಂದ ಈ ಕೋಟೆ ಕಟ್ಟಡದ ಕಾರ್ಯ ನಿಲ್ಲಿಸಿರಬೇಕು. ಎರಡನೇ ಆಂಗ್ಲೋ ಮೈಸೂರು ಯುದ್ಧದ ಮಧ್ಯದಲ್ಲಿಯೇ ಹೈದರನು ತೀರಿಹೋದನು.[೪]

ಹೈದರನು ಕೃಷ್ಣಾನದಿ ದಕ್ಷಿಣಕ್ಕಿದ್ದ ಮರಾಠರ ಪ್ರದೇಶಗಳನ್ನು ಗೆದ್ದುಕೊಂಡಿದ್ದನು. ಸಾಲ್‌ಬಾಯ್ ಒಪ್ಪಂದದ ಪ್ರಕಾರ ಹೈದರನು ಈ ಪ್ರದೇಶಗಳನ್ನು ಮರಾಠರಿಗೆ ವಾಪಾಸ್ ಕೊಡಲು ಒಪ್ಪಿದ್ದನು. ಈ ಮಧ್ಯ ಹೈದರನು ಮರಣ ಹೊಂದಿದನು. ಮರಾಠರಿಗೆ ಈ ಪ್ರದೇಶಗಳನ್ನು ಹಿಂದಿರುಗಿಸಬೇಕೆಂದು ಟಿಪ್ಪುವನ್ನು ಪೇಶ್ವೆಯು ಕೇಳಿಕೊಂಡನು. ಟಿಪ್ಪುವು ಇದಕ್ಕೆ ಒಪ್ಪಲಿಲ್ಲ. ಆಗ ಟಿಪ್ಪುವಿಗೂ ಮರಾಠರಿಗೂ ಯುದ್ಧವಾಯಿತು. ಆಗ ಮರಾಠರು ಸೋಲಿನ ಅಂಚಿನಲ್ಲಿದ್ದರು. ಆಗ ಟಿಪ್ಪುವಿಗೂ ಮರಾಠರಿಗೂ ಒಪ್ಪಂದವಾಯಿತು. ಈ ಒಪ್ಪಂದದ ಪ್ರಕಾರ ಟಿಪ್ಪುವು ಮರಾಠರಿಗೆ ಕಪ್ಪವನ್ನು ಕೊಡಬೇಕೆಂದೂ ಅದಕ್ಕೆ ಬದಲಾಗಿ ಟಿಪ್ಪುವು ಮರಾಠರ ಕೆಲವು ಪ್ರದೇಶಗಳನ್ನು ಪಡೆಯಬೇಕೆಂದೂ ತೀರ್ಮಾನವಾಯಿತು. ಆ ಸಮಯದಲ್ಲಿಯೇ ಈ ಬಳ್ಳಾರಿ ಪ್ರದೇಶದ ಅನೇಕ ಸ್ಥಳಗಳು ಟಿಪ್ಪುವಿನ ಕೈ ಸೇರಿದವು.ಕ್ರಿ.ಶ. ೧೭೮೬ರಲ್ಲಿ ಟಿಪ್ಪು ಆನೆಗೊಂದಿಯನ್ನು ರೂ. ೧೨೦೦೦ ಗಳಿಗೆ ಕೊಂಡುಕೊಂಡನು.[೫] ಈ ಸಮಯದಲ್ಲಿಯೇ ಅಂದರೆ ಕ್ರಿ.ಶ. ೧೭೯೦ ಕ್ಕಿಂತ ಮುಂಚೆಯೇ ಕೃಷ್ಣಾನಗರ ಕೋಟೆಯನ್ನು ಪೂರ್ಣಗೊಳಿಸಿದ್ದ. ಏಕೆಂದರೆ ಕ್ರಿ.ಶ. ೧೭೯೦-೯೨ರ ವರೆಗೂ ಮೂರನೇ ಆಂಗ್ಲೋ ಮೈಸೂರು ಯುದ್ಧವಾಯಿತು.[೬] ಈ ಯುದ್ಧದಲ್ಲಿ ಟಿಪ್ಪು ಅರ್ಧ ರಾಜ್ಯ ಧನ ಕನಕಾದಿಗಳನ್ನು ಕಳೆದುಕೊಂಡು ಆರ್ಥಿಕವಾಗಿ ಹೀನಾಯ ಸ್ಥಿತಿಯನ್ನು ತಲುಪಿದ. ಆದ್ದರಿಂದ ಕ್ರಿ.ಶ. ೧೭೭೨ರ ನಂತರ ೧೭೯೦ ಕ್ಕಿಂತ ಮೊದಲೇ ಈ ಕಾಲಘಟ್ಟದಲ್ಲಿ ಕೃಷ್ಣಾನಗರದ ಕೋಟೆ ನಿರ್ಮಾಣವಾಗಿದೆ.

ಕೋಟೆಯ ಲಕ್ಷಣಗಳು

ಸಂಡೂರಿನಿಂದ ಬಳ್ಳಾರಿಗೆ ಹೋಗುವಾಗ ಎಡಭಾಗದಲ್ಲಿ ಕೃಷ್ಣಾನಗರದ ಕೋಟೆ ಇದೆ. ಪೂರ್ವ ದಿಕ್ಕಿನ ಬಾಗಿಲನ ಹಿಂದೆ ಎರಡು ಆವರಣಗಳನ್ನು ರಚಿಸಿ ಈ ಆವರಣಗಳಿಗೆ ಒಂದೊಂದು ಬಾಗಿಲನ್ನು ಜೋಡಿಸಲಾಗಿದೆ. ಕೋಟೆಯೊಳಗೆ ಪ್ರವೇಶಿಸಲು ಒಟ್ಟು ಮೂರು ಪ್ರವೇಶ ದ್ವಾರಗಳನ್ನು ದಾಟಿಕೊಂಡು ಹೋಗಬೇಕಾಗುತ್ತದೆ.




ಕೃಷ್ಣಾನಗರ ಕೋಟೆ

ಪೂರ್ವ ದಿಕ್ಕಿಗಿರುವ ಮುಖ್ಯಬಾಗಿಲು ಕಮಾನಾಕೃತಿಯಲ್ಲಿದೆ. ಇದು ಸುಮಾರು ಹದಿನೈದು ಅಡಿ ಅಗಲ ಸುಮಾರು ಇಪ್ಪತ್ತು ಅಡಿ ಎತ್ತರವಾಗಿದೆ. ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಿಸಿದ, ಇದರ ಕೈಪಿಡಿ ಗೋಡೆಯಲ್ಲಿ ಚಿಕ್ಕ ಕಮಾನುಗಳು ಮತ್ತು ಕೋಟೆ ತೆನೆಗಳಿವೆ. ಇವುಗಳ ಮಧ್ಯದಲ್ಲಿ ಅಂಬು ಗಂಡಿಗಳು ಕಂಡುಬರುತ್ತವೆ.ಮುಖ್ಯ ಬಾಗಿಲಿನ ಈಶಾನ್ಯ ಮತ್ತು ಆಗ್ನೇಯಕ್ಕೆ ಸುಮಾರು ನೂರು ಮೀಟರ್ ಮುಚಾಚಿದ ಕೋಟೆ ಗೋಡೆ ಇವೆ. ಆಗ್ನೇಯದ ಕೋಟೆ ಗೋಡೆ ಮುಂದೆ ಪಶ್ಚಿಮಕ್ಕೆ ತಿರುಗಿ ಒಳಬಾಗಿಲು ಕೋಟೆ ಗೋಡೆಯನ್ನು ಸ್ವಲ್ಪ ಅಂತರದಲ್ಲಿ ಸಂಧಿಸುತ್ತದೆ. ಇದೇರೀತಿಯ ಈಶಾನ್ಯದ ಕೋಟೆ ಗೋಡೆಯು ಪಶ್ಚಿಮಕ್ಕೆ ತಿರುಗಿ ಒಳಬಾಗಿಲ ಕೋಟೆ ಗೋಡೆಯನ್ನು ಸ್ವಲ್ಪ ಅಂತರದಲ್ಲಿ ಸಂಧಿಸುತ್ತದೆ. ಇದೇ ರೀತಿಯ ಈಶಾನ್ಯರ ಕೋಟೆ ಗೋಡೆಯು ಪಶ್ಚಿಮಕ್ಕೆ ತಿರುಗಿ ಒಳಬಾಗಿಲ ಕೋಟೆ ಗೋಡೆಯನ್ನು ಸ್ವಲ್ಪ ಅಂತರದಲ್ಲಿ ಸಂಧಿಸುತ್ತದೆ. ಮುಖ್ಯ ಬಾಗಿಲಿನ ಈಶಾನ್ಯ ಹಾಗೂ ಆಗ್ನೇಯ ದಿಕ್ಕುಗಳಲ್ಲಿ ಕೊತ್ತಳಗಳಿವೆ. ಈಶಾನ್ಯಕ್ಕಿರುವ ಕೊತ್ತಳದ ಮೇಲೆ ಮೂರು ಅಂಬುಗಂಡಿಗಳಿವೆ. ಆಗ್ನೇಯಕ್ಕಿರುವ ಕೊತ್ತಳ ಶಿಥಿಲವಾಗಿದೆ.



ಮುಖ್ಯ ಪ್ರವೇಶದ್ವಾರ

ಉತ್ತರಕ್ಕಿರುವ ಒಳಬಾಗಿಲು ಸುಮಾರು ಹತ್ತು ಅಡಿ ಅಗಲ ಮತ್ತು ಸುಮಾರು ಇಪ್ಪತ್ತೈದು ಅಡಿ ಎತ್ತರವಾಗಿದೆ. ದೊಡ್ಡದಾಗಿರುವ ಬಾಗಿಲಿನ ತೋಳಿನ ಮಧ್ಯಭಾಗದಲ್ಲಿ ಉಬ್ಬಿದ ಪಟ್ಟಿ ಮತ್ತು ಕೆಳ ಮೂಲೆಯಲ್ಲಿ ಮುಂದೆ ಚಾಚಿದ ಪುಷ್ಪದಳ ಇವೆ. ಮೇಲೆ ಎರಡು ಬೋದುಗೆ ಭಾಗಗಳಿವೆ. ಕೆಳಗಿನ ಬೋದುಗೆ ಬಾಳೆಯ ಮೊಗ್ಗಿನ ಆಕಾರದಲ್ಲಿದೆ. ಮೇಲಿನದು ಚೌಕಾಕಾರದ ಪುಷ್ಪ ಮತ್ತು ಆನೆಯ ಸೊಂಡಿಲಿನಿಂದ ಹೊರಬಂದ ಬಾಳೆಯ ಮೊಗ್ಗಿನ ಆಕಾರದಲ್ಲಿದೆ. ತೋಳುಗಳಂತೆಯೇ ಇರುವ ಬಾಗಿಲ ಉತ್ತರಂಗದ ತುದಿಗಳಲ್ಲಿ ಚೌಕಾಕಾರದ ಪುಷ್ಪಗಳಿವೆ. ಈ ಒಳಬಾಗಿಲ ಪಶ್ಚಿಮಕ್ಕೆ ಪಕ್ಕದಲ್ಲಿಯೇ ಒಂದು ಚಿಕ್ಕ ಉಪಬಾಗಿಲಿದೆ. ಈ ಉಪಬಾಗಿಲಿನ ಚೌಕಟ್ಟು, ಮುಖ್ಯ



ಬಾಗಿಲಿನ ಚೌಕಟ್ಟಿನಂತೆಯೇ ಇದೆ. ಆದರೆ ಇದರಲ್ಲಿ ಬೋದುಗೆಗಳಿಲ್ಲ. ಈ ಮಧ್ಯವಾದ ಬಾಗಿಲಿನ ಪ್ರವೇಶದ ಹಿಂಬದಿ ಇಕ್ಕೆಲಗಳಲ್ಲಿ ಮೂರು ಹಂತಗಳಲ್ಲಿ ಕಟ್ಟಲಾದ ಕಟ್ಟೆ ಇದೆ. ಈ ಕಟ್ಟೆಯ ಮೇಲೆ ಮೂರು ಚೌಕ ಮತ್ತು ಎರಡು ಅಷ್ಟ ಭುಜಾಕೃತಿಯ ನಾಲ್ಕು ಕಂಬಗಳಿವೆ. ಕಂಬಗಳ ಮೇಲೆ ಸುರುಳಿಯಾಕಾರದ ಬೋದುಗೆಗಳಿವೆ. ಈ ಬಾಗಿಲಿನ ಪಾರ್ಶ್ವದ ಗೋಡೆಗಳು ಕೊನೆಯಾಗುವ ಅಂಚಿನಲ್ಲಿ ಕೊತ್ತಳಗಳಿವೆ. ಒಳಗಿನ ಬಾಗಿಲು ಪ್ರಧಾನ ಕೋಟೆ ಗೋಡೆಯಲ್ಲಿ ಪೂರ್ವಾಭಿಮುಖವಾಗಿದೆ. ಈ ಹಿಂದಿನ ಬಾಗಿಲುಗಳಿಗಿಂತಲೂ ಇದು ಬಹು ದೊಡ್ಡದಾಗಿದೆ ಮತ್ತು ಪ್ರಧಾನವಾಗಿದೆ. ಬೃಹದಾಕಾರವಾಗಿರುವ ಈ ಬಾಗಿಲಿಗೆ ಎರಡು ಬಾಗಿಲು ಚೌಕಟ್ಟುಗಳಿವೆ. ಒಳ ಚೌಕಟ್ಟಿನ ತೋಳಿನ ಒಳ ಬದಿಯನ್ನು ಆನೆಯ ಹೊಂಡಿಲಿನಿಂದ ಹೊರಬಂದ ತೋರಣದಿಂದ, ಮೂರ್ತಿಯನ್ನು ಪುಷ್ಪದಳಗಳಿಂದ ಮತ್ತು ಹೊರ ಬದಿಯನ್ನು ವ್ಯಾಳದಿಂದ ಹೊರಬಂದು ಬಳ್ಳಿ ಸುರಳಿಗಳಿಂದ ಅಲಂಕರಿಸಲಾಗಿದೆ. ಹೊರ ಚೌಕಟ್ಟಿನ ತೋಳನ್ನು ವಜ್ರಾಕೃತಿಯ ವಿನ್ಯಾಸದಿಂದ ಮತ್ತು ಕುಂಭದಿಂದ ಹೊರಬಂದ ಬಳ್ಳಿ ಸುರಳಿಗಳಿಂದ ಅಲಂಕರಿಸಿದೆ. ಬಾಗಿಲ ಒಳಬದಿಗೆ ಬಾಳೆಯ ಮೊಗ್ಗಿನ ಆಕಾರದ ಬೋದುಗೆ ಮತ್ತು ಮುಂಭಾಗದಲ್ಲಿ ವ್ಯಾಳದ ಬಾಯಿಂದ ಹೊರಬಂದ ಉಪಬಾಗಿಲಿದೆ. ಈ ಉಪಬಾಗಿಲನ್ನು ನಾಲ್ಕು ಭಾಗಗಳಲ್ಲಿ ವಿಭಜಿಸಿದ ವಜ್ರಾಕೃತಿಯ ವಿನ್ಯಾಸಗಳಿಂದ ಅಲಂಕರಿಸಿದೆ. ಎರಡು ಬಾಗಿಲುಗಳ ಮಧ್ಯದಲ್ಲಿ ಗೋಡೆಯ ಮೇಲೆ ಕಾಮನಿರತ ಮಾನವ ಮತ್ತು ಪ್ರಾಣಿ. ಶಿಲ್ಪವಿದೆ. ಬಾಗಿಲ ಮೇಲಿನ ಕೈಪಿಡಿ ಗೋಡೆಯನ್ನು ಇಟ್ಟಿಗೆ ಗಾರೆಯ ಜಾಂಧ್ರದಿಂದ ತೆನೆಗಳಿಂದ ಅಲಂಕರಿಸಿದೆ. ಬಾಗಿಲಿನ ಒಂದು ಭಾಗವು ಮಾತ್ರ ಕದ ಉಳಿದಿದೆ. ಕಟ್ಟಿಗೆ ಕದದ ಮೇಲೆ ಅಲಂಕಾರಿಕ ಉದ್ದ ಮತ್ತು ಅಡ್ಡ ಪಟ್ಟಿಗಳು ಮತ್ತು ಕಬ್ಬಿಣದ ಮೊಳೆಗಳ ಚೂಪಾದ ತಲೆಗಳಿವೆ. ಪ್ರವೇಶದ ಹಿಂಬದಿಗಿರುವ ಕಟ್ಟೆಯ ಕೆಳಭಾಗವನ್ನು ಅಲಂಕೃತ ಪಟ್ಟಿಗಳಿಂದ ನಿರ್ಮಿಸಿದೆ. ಕಂಠಭಾಗದಲ್ಲಿ ಮೀನುಗಳನ್ನು ಕಂಡರಿಸಲಾಗಿದೆ. ಈ ಕಟ್ಟೆಯ ಮೇಲೆ ಆರು ಕಂಬಗಳು ನಾಲ್ಕು ಮೂಲೆಗಂಬಗಳು ಆರು ಅರ್ಧಗಂಬಗಳನ್ನು ಅಳವಡಿಸಲಾಗಿದೆ. ಈ ಕಂಬಗಳು ಕೆಳಭಾಗ ಚೌಕಾಕಾರವಾಗಿ, ಮೇಲ್ಬಾಗ ಅಷ್ಟಭುಜಾಕೃತಿಯನ್ನು ಹೊಂದಿವೆ. ಕಂಬದ ಗಾತ್ರ ಮೇಲೆ ಕೈ ಮುಗಿದು ನಿಂತಿರುವ ಪುರುಷನ ಉಬ್ಬು ಶಿಲ್ಪವಿದೆ. ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ಕಮಾನಾಕೃತಿಯ ಗೂಡುಗಳಿವೆ. ಬಾಗಿಲ ಒಲ ಬದಿಯ ಕಲ್ಲಿನ ಕೈಪಿಡಿ ಗೋಡೆಯನ್ನು ಕಮಾನುಗಳಿಂದ ಉಬ್ಬು ಚಿತ್ರಗಳಿಂದ ಅಲಂಕರಿಸಿದೆ. ಕೋಟೆಯ ಒಳಭಾಗದಲ್ಲಿ ಬಾಗಿಲ ಎರಡು ಇಕ್ಕೆಲಗಳಲ್ಲಿರುವ ಮೆಟ್ಟಿಲುಗಳ ಮೂಲಕ ಕೋಟೆಯ ಮೇಲೆ ಹತ್ತಲು ಅನುಕೂಲವಿದೆ.

ಈ ಕೋಟೆಯ ದಕ್ಷಿಣದ ಗೋಡೆ ಮಧ್ಯದಲ್ಲಿ ದಿಡ್ಡಿ ಇದೆ. ತುಂಬಾ ಕಿರಿದಾದ ಈ ದಿಡ್ಡಿಯು ಸುಮಾರು ಐದು ಅಡಿ ಅಗಲ ಎಂಟು ಅಡಿ ಎತ್ತರವಾಗಿದೆ. ಈ ದಿಡ್ಡಿಯ ಚೌಕಟ್ಟಿನ ಕೆಳಗೆ ಉತ್ತರಂಗದ ಮಧ್ಯದಲ್ಲಿ ಮತ್ತು ತುದಿಗಳಲ್ಲಿ ಚೌಕಾಕಾರದ ಪುಷ್ಪ ವಿನ್ಯಾಸವಿದೆ. ಬಾಗಿಲ ಮೇಲ್ಭಾಗದಲ್ಲಿಯ ಮತ್ತೊಂದು ಉತ್ತರಂಗದ ಮಧ್ಯದಲ್ಲಿ

ವೃತ್ತಾಕಾರದ ಪುಷ್ಪ ಮತ್ತು ಅದರ ಬದಿಗಳಲ್ಲಿ ನವಿಲು ಮತ್ತು ಪಾರಿವಾಳದ ಉಬ್ಬುಶಿಲ್ಪಗಳಿವೆ. ಇದರ ಬಲಭಾಗದ ಗೋಡೆಯಲ್ಲಿ ಸ್ತ್ರೀಯೊಬ್ಬಳಿಂದ ಹೆರಿಗೆ ಮಾಡಿಸಿಕೊಳ್ಳುವಂತೆ ಭಾಸವಾಗುವ ಉಬ್ಬುಶಿಲ್ಪವಿದೆ. ಸ್ತ್ರೀ ಕಾಲು ಅಗಲಿಸಿ ವೀರಾಸನದಲ್ಲಿ ಕುಳಿತುಕೊಳ್ಳುವ ದೃಶ್ಯ, ಇದರ ಇಕ್ಕೆಲಗಳಲ್ಲಿ ಸ್ತ್ರೀಯರು ಮಧ್ಯದವಳ ಕೈಗಳನ್ನು ಹಿಡಿದುಕೊಂಡಿದ್ದಾರೆ. ಕೆಳಭಾಗದಲ್ಲಿ ಮಗುವೊಂದರ ಉಬ್ಬುಶಿಲ್ಪವಿದೆ.



ದಿಡ್ಡಿ ಬಾಗಿಲು

ಕೋಟೆಯೊಳಗಿನ ಕೃಷ್ಣಾನಗರದ ಜನತೆ ಸಂಡೂರು ನಗರಕ್ಕೆ ದಿನನಿತ್ಯದ ಕೆಲಸಕ್ಕೆ ಓಡಾಡಲು ಈ ದಾರಿಯನ್ನು ಹೆಚ್ಚಾಗಿ ಬಳಸುತ್ತಾರೆ. ಪ್ರಾಯಶಃ ಅಂದು ಇದೇ ಉದ್ದೇಶಕ್ಕಾಗಿ ಈ ದಿಡ್ಡಿಯನ್ನು ಕಟ್ಟಿಸಿರಬಹುದಲ್ಲದೆ ಶತ್ರುಗಳು ಮುಖ್ಯ ಬಾಗಿಲನ್ನು ಮುತ್ತಿದಾಗ ಈ ದಿಡ್ಡಿ ಬಾಗಿಲಿನ ಮೂಲಕ ಹೊರಬರುವ ವ್ಯವಸ್ಥೆಯನ್ನು ಕಲ್ಪಿಸಿರಬಹುದು.

ಕೋಟೆಯ ಗೋಡೆಯ ಮೇಲೆ ಸುತ್ತಲೂ ನಿರ್ಮಿಸಿರುವ ಒಟ್ಟು ಹತ್ತೊಂಬತ್ತು ಕೊತ್ತಳಗಳಿವೆ. ಈಶಾನ್ಯ ದಿಕ್ಕಿನ ಕೊತ್ತಳದ ಹೊರ ಗೋಡೆಯ ಕಲ್ಲಿನಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಈ ಕೊತ್ತಳಗಳ ಕೈಪಿಡಿ ಗೋಡೆಗಳಲ್ಲಿ ಬಂದುಕು ಕಿಂಡಿಗಳು ಮತ್ತು ತೋಪಿಗಾಗಿ ಬಿಟ್ಟ ಸಂದಿಗಳಿವೆ. ಕೈಪಿಡಿ ಗೋಡೆಯು ಸುಮಾರು ಐದು ಅಡಿ ಎತ್ತರ ಮೂರು ಅಡಿ ಅಗಲವಾಗಿದ್ದು ಹೊರಬದಿಗೆ ಇಳಿಜಾರಾಗಿದೆ. ಕೊತ್ತಳಗಳಲ್ಲಿ ಕಾವಲುಗಿರರಿಗಾಗಿ ಮಾಡಿದ U ಆಕಾರದ ಚಿಕ್ಕ ಚಿಕ್ಕ ಕೋಷ್ಟಕಗಳಿವೆ. ಕೆಲವು L ಆಕಾರದಲ್ಲಿವೆ. ಬೃಹದಾಕಾರದ ಈ ಕೊತ್ತಳಗಳು ತುಂಬಾ ವಿಶಾಲವಾಗಿವೆ. ಪಶ್ಚಿಮ ದಿಕ್ಕಿನ ಕೋಟೆಯ ಗೋಡೆ ಮಧ್ಯದಲ್ಲಿಯ ಕೊತ್ತಳ ಬಹಳ ದೊಡ್ಡದಾಗಿದೆ. ಇದರ ಮೇಲೆ ಇನ್ನೊಂದು ಕೊತ್ತಳ ಇದೆ. ಈ ಕೊತ್ತಳದಿಂದಕೆಳಗೆ ಇಳಿಯಲು ಒಂದು ಬದಿಗೆ ಮೆಟ್ಟಿಲುಗಳಿವೆ. ಈ ಕೊತ್ತಳದ ಮೇಲಿಂದ ಕೋಟೆಯ ದೃಶ್ಯ ಪರಿಪೂರ್ಣವಾಗಿ ಕಂಡುಬರುತ್ತದೆ. ಭೂ ಮಟ್ಟದಿಂದ ಸುಮಾರು



ಎಪ್ಪತ್ತು ಅಡಿ ಎತ್ತರವಾಗಿದೆ. ಈ ಕೊತ್ತಳದ ಕೆಳಮಟ್ಟದ ತಗ್ಗಿನಲ್ಲಿ ಒಂದು ಆಯತಾಕಾರದ ಕಟ್ಟಡವಿದೆ. ಕೆಳಗೆ ಇಳಿಯಲು ಎರಡೂ ಬದಿಗೆ ಮೆಟ್ಟಿಲುಗಳಿವೆ. ಎಂಟು ಕಂಬಗಳ ಕಟ್ಟಡದ ಮುಂಭಾಗದಲ್ಲಿ ಕಮಾನುಗಳಿವೆ. ಇದು ಹಿಂದೂಮುಸ್ಲಿಂ ಶೈಲಿಯಲ್ಲಿದೆ. ಮದ್ದು ಗುಂಡುಗಳನ್ನು ಸಂಗ್ರಹಿಸಿಡುವ ಕಟ್ಟಡವೆಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಆಳ್ವೇರಿಯ ಮೇಲೆ ಓಡಾಡಲು ವಿಸ್ತೃತವಾದ ದಾರಿಯಿದೆ. ಆಳ್ವೇರಿಯನ್ನು ಫಿರಂಗಿಗಳು ಮೇಲೇರಲು ಸಹಾಯವಾಗುವಂತೆ ಕೋಟೆಯ ನೈಋತ್ಯಕ್ಕೆ ಮೂಲೆಯಲ್ಲಿ ಇಳಿಜಾರಾದ ದಾರಿಯನ್ನು ನಿರ್ಮಿಸಲಾಗಿದೆ. ಆಳ್ವೇರಿ ಮೇಲೆ ಕೈಪಿಡಿ ಗೋಡೆಯಲ್ಲಿ ಅಂಬುಗಂಡಿಗಳು ಹಾಗೂ ತೋಪು ಸಂದಿಗಳಿವೆ.

ಕೋಟೆಯ ಹೊರಮೈಗೆ ಮಧ್ಯಮ ಗಾತ್ರದ ಕಲ್ಲುಗಳನ್ನು ಬಳಸಲಾಗಿದೆ. ಕಲ್ಲುಗಳ ಮಧ್ಯದಲ್ಲಿ ಅಗಲವಾದ ಸಂದಿಗಳುಂಟಾಗದಂತೆ ಕಲ್ಲುಗಳ ಅಂಚುಗಳನ್ನು ಕೆತ್ತಿ ಜೋಡಿಸಲಾಗಿದೆಯಾದರೂ ಸಂದಿಗಳಲ್ಲಿ ಸುಣ್ಣದ ಗಾರೆಯನ್ನು ಉಪಯೋಗಿಸಲಾಗಿದೆ. ಬಹಳ ಅಗಲವಾದ ಕೋಟೆಯ ಒಳ ಮೈಗೆ ಚಿಕ್ಕ ಕಲ್ಲುಗಳನ್ನು ಬಳಸಲಾಗಿದೆ. ಕೋಟೆಯ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಅಗಲವಾದ ಕೈಪಿಡಿ ಗೋಡೆಯಿದೆ. ಎತ್ತರವಾದ ಈ ಕೈಪಿಡಿ ಗೋಡೆಯ ಮೇಲ್ಭಾಗ ಇಳಿಜಾರಾಗಿದೆ. ಹೊರಗಿನಿಂದ ಬಂದ ಗುಂಡುಗಳನ್ನು ಹಿಂದಕ್ಕೆ ಬೀಳುವಂತೆ ಮಾಡುವುದಕ್ಕಾಗಿ ಹೊರಭಾಗವನ್ನು ಇಳಿಜಾರಾಗಿ ಮಾಡಲಾಗಿದೆ. ಈ ಕೈಪಿಡಿ ಗೋಡೆಯಲ್ಲಿರುವ ಕೆಲವು ಗಿಂಡಿಗಳು ಕಮಾನಿನಾಕಾರದಲ್ಲಿವೆ. ಒಳಭಾಗದಲ್ಲಿರುವ ಕಿಂಡಿ ಮೂರು ದಿಕ್ಕುಗಳಿಗೆ ಹೋಗಿ ಹೊರಭಾಗದಲ್ಲಿ ಮೂರು ಕಿಂಡಿಗಳಾಗುತ್ತವೆ. ಕೋಟೆಗೆ ಬಳಸಿದ ಇಟ್ಟಿಗೆ ಮತ್ತು ಗಾರೆ ಉತ್ತಮ ಗುಣಮಟ್ಟದ್ದಾಗಿರುವುದರಿಂದ ಗಾಳಿ, ಮಳೆ, ಬಿಸಿಲಿಗೆ ನಲುಗದೆ ಹೊಸದಾಗಿ ಕಟ್ಟಿದ ಕೋಟೆಯಂತೆಯೇ ಉಳಿದುಬಂದಿದೆ. ಈ ಕೋಟೆಯ ಸುತ್ತಲೂ ಸುಮಾರು ೩೫ ಅಡಿ ಅಗಲ ಮತ್ತು ೧೫ ಅಡಿ ಆಳವಾದ ಅಗಳು ಇದೆ. ಸುಮಾರು ೨ ಕಿ.ಮೀ. ಸುತ್ತಳತೆಯ ಈ ಕೋಟೆಯ ಗೋಡೆ ಸುಮಾರು ೨೦ ರಿಂದ ೩೦ ಅಡಿ ಎತ್ತರವಾಗಿದೆ.



ಕೋಟೆಯ ಗೋಡೆ



ಕೋಟೆಯ ಒಳಗೆ ವಿವಿಧ ಭಾಗಗಳಲ್ಲಿ ನಾಲ್ಕು ಮದ್ದಿನ ಮನೆಗಳಿವೆ. ಇವುಗಳನ್ನು ಸ್ಥಳೀಯರು ಲದಾವಿಗಳೆಂದೇ ಸಂಭೋಧಿಸುತ್ತಾರೆ. ಆಕಸ್ಮಿಕವಾಗಿ ಮದ್ದಿನ ಮನೆಗೆ ಬೆಂಕಿ ಬಿದ್ದರೂ ಹೆಚ್ಚು ಹಾನಿಯಾಗದಂತೆ ಎಚ್ಚರವಹಿಸಿ ಇವುಗಳ ವಾಸ್ತುವನ್ನು ವಿನ್ಯಾಸಗೊಳಿಸಿದೆ. ಈ ಮದ್ದಿನ ಮನೆಗಳಿಗೆ ಚಿಕ್ಕ ಚಿಕ್ಕ ಕಮಾನಿನಾಕಾರದ ಬಾಗಿಲುಗಳನ್ನು ಹಾಗೂ ಕಿರಿದಾದ ಕಿಡಕಿಗಳನ್ನ ಜೋಡಿಸಲಾಗಿದೆ. ಮೇಲಿನ ಛಾವಣಿಯ ನಾಲ್ಕು ಬದಿಗೂ ಇಳಿಜಾರಾಗಿದೆ. ಇವುಗಳ ಮಾಳಿಗೆಗಳು ಗುಡಸಲಿನಾಕಾರದಲ್ಲಿವೆ.



ಮದ್ದಿನ ಮನೆ

ಆಗ್ನೇಯ ಮೂಲೆಯಲ್ಲಿರುವ ಮದ್ದಿನ ಮನೆಯು ಉತ್ತರಾಭಿಮುಖವಾಗಿದೆ. ಇದು ಪೂರ್ವ ಪಶ್ಚಿಮವಾಗಿ ೭೦ ಅಡಿ ಉದ್ದ ಹಾಗೂ ಉತ್ತರ ದಕ್ಷಿಣವಾಗಿ ಸುಮಾರು ೩೦ ಅಡಿ ಅಗಲವಾಗಿದೆ. ಉತ್ತರದ ಗೋಡೆಯ ಮಧ್ಯದಲ್ಲಿ ಕಿರಿದಾದ ಕಮಾನಿನಾಕಾರದ ೩ ಬಾಗಿಲುಗಳಿವೆ. ಒಳಭಾಗದಲ್ಲಿ ಒಟ್ಟು ೧೨ ಕಂಬಗಳಿವೆ. ಇವುಗಳು ಕಮಾನಿನಾಕಾರದಲ್ಲಿದ್ದು ಇವುಗಳ ಮೇಲೆ ಒಳಮಾಳಿಗೆ ನಿಂತಿದೆ.

ನೈಋತ್ಯ ಮೂಲೆಯಲ್ಲಿಯ ಮದ್ದಿನ ಮನೆಯು ಉತ್ತರಾಭಿಮುಖವಾಗಿದೆ. ಇದಕ್ಕೆ ಎರಡು ಬಾಗಿಲುಗಳಿವೆ. ಕಟ್ಟಡದ ಒಳಗೆ ಹೋಗಲು ಇನ್ನೆರಡು ಬಾಗಿಲುಗಳಿವೆ. ಇದರೊಳಗೆ ಎಂಟು ಕಂಬಗಳಿವೆ. ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಎರಡು ಚಿಕ್ಕ ಕಿಟಕಿಗಳಿವೆ. ಇದು ಆಗ್ನೇಯಕ್ಕಿರುವ ಮದ್ದಿನ ಮನೆಗಿಂತ ಚಿಕ್ಕದಾಗಿದೆ. ವಾಯುವ್ಯ ದಿಕ್ಕಿನಲ್ಲಿರುವ ಮದ್ದಿನ ಮನೆಯು ಪೂರ್ವಾಭಿಮುಖವಾಗಿದೆ. ಇದು ಉತ್ತರ ದಕ್ಷಿಣವಾಗಿ ಸುಮಾರು ೬೦ ಅಡಿ ಉದ್ದ ಹಾಗೂ ಪೂರ್ವ ಪಶ್ಚಿಮವಾಗಿ ೨೦ ಅಡಿ ಅಗಲವಾಗಿದೆ. ಇದರ ಪೂರ್ವದ ಗೋಡೆಯಲ್ಲಿ ಕಿರಿದಾದ ಕಮಾನಿನಾಕಾರದ ಮೂರು ಬಾಗಿಲುಗಳಿವೆ. ನಾಲ್ಕು ದಿಕ್ಕಿಗೂ ಚಿಕ್ಕ ಚಿಕ್ಕ ಕಿಟಕಿಗಳಿವೆ. ಒಳಗೆ ಒಂದೇ ಸಾಲಿನಲ್ಲಿ ಒಂಭತ್ತು ಕಂಬಗಳಿವೆ. ಈಶಾನ್ಯ ದಿಕ್ಕಿಗಿರುವ ಮದ್ದಿನ ಮನೆಯು ದಕ್ಷಿಣಾಭಿಮುಖವಾಗಿ ಸುಮಾರು ೨೦ ಅಡಿ ಅಗಲವಾಗಿದೆ. ಮುಂಭಾಗದಲ್ಲಿ ಕಮಾನಿನಾಕಾರದ ಐದು ಬಾಗಿಲುಗಳಿವೆ. ಒಳಭಾಗದಲ್ಲಿ ಎರಡು ಸಾಲುಗಳಲ್ಲಿರುವ




ಒಟ್ಟು ೧೨ ಕಂಬಗಳಿವೆ. ಈ ಕಟ್ಟಡಗಳನ್ನು ಬಾಡಿಗೆ ಆಧಾರದ ಮೇಲೆ ಸಾರ್ವಜನಿಕರಿಗೆ ನೀಡಲಾಗುತ್ತಿದೆ. ಇದರಲ್ಲಿ ದವಸಧಾನ್ಯಗಳನ್ನು ಹಾಕುವುದಕ್ಕಾಗಿ, ದನಕರುಗಳನ್ನು ಕಟ್ಟುವುದಕ್ಕಾಗಿ ಮತ್ತು ಮೇವುಗಳನ್ನು ಇಡುವುದಕ್ಕಾಗಿ ಬಳಸಲಾಗುತ್ತಿದೆ. ಕೋಟೆಯೊಳಗೆ ಕೃಷ್ಣಾನಗರವಿದೆ. ಈ ನಗರದಲ್ಲಿ ರಾಮಸ್ವಾಮಿ, ಈಶ್ವರ, ಊರಮ್ಮ, ತಾಯಮ್ಮನ ದೇವಾಲಯಗಳು, ದರ್ಗಾಗಳು ಹಾಗೂ ಮಸೀದಿಗಳಿವೆ. ಕೋಟೆಯ ಪೂರ್ವ ದಿಕ್ಕಿನ ಬಾಗಿಲಿನ ಹತ್ತಿರ ಆಯತಾಕಾರದ ಬಾವಿ ಇದೆ. ಇದಕ್ಕೆ ಉತ್ತರ ದಿಕ್ಕಿನಲ್ಲಿ ಪ್ರವೇಶ ಮಾಡಲು ಮೆಟ್ಟಿಲುಗಳಿವೆ. ಪೂರ್ವ ಮತ್ತು ಪಶ್ಚಿಮದ ಗೋಡೆಯಲ್ಲಿ ಗೂಡುಗಳಿವೆ.

ಇದರ ಸಮಕಾಲೀನ ಕೋಟೆಗಳಾದ ಶ್ರೀರಂಗಪಟ್ಟಣ, ಮಂಜರಾಬಾದ್, ಚನ್ನರಾಯ ದುರ್ಗ, ದೇವನಹಳ್ಳಿ ಮುಖ್ಯವಾಗಿವೆ. ಇವುಗಳ ಬಹುತೇಕ ಲಕ್ಷಣಗಳನ್ನು ಕೃಷ್ಣಾನಗರದ ಕೋಟೆಯಲ್ಲಿ ಕಾಣಬಹುದಾಗಿದೆ.

ಟಿಪ್ಪಣಿಗಳು

೧. Desai, P.B. 1970. *A History of Karnataka,* Pp. 433-434. Dharawada : Kannada Research Institute Karnataka University
೨. ಚನ್ನಬಸಪ್ಪ, ಎಸ್. ಪಾಟೀಲ. ೧೯೯೯. *ಕರ್ನಾಟಕ ಕೋಟೆಗಳು,* ಪು. ೨೬೫. ಹಂಪಿ : ಕನ್ನಡ ವಿಶ್ವವಿದ್ಯಾಲಯ.
೩. ಅದೇ, ಪು. ೨೬೬
೪. ಷೇಕ್ ಅಲಿ, ಬಿ. ೧೯೯೭. *ಕರ್ನಾಟಕ ಚರಿತ್ರೆ-೫,* ಪು. ೨೧೯. ಹಂಪಿ : ಕನ್ನಡ ವಿಶ್ವವಿದ್ಯಾಲಯ
೫. *5th Report of the Madras Presidencey.* p. 449
೬. ಶಿವರುದ್ರಸ್ವಾಮಿ, ಎಸ್.ಎನ್. ೨೦೦೦. *ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ,* ಪು. ೩೮೦-೩೯೮. ತಿಪಟೂರು : ಪೌರಸ್ತ್ಯ ಪ್ರಕಾಶನ



ಕೃಷ್ಣಾನಗರ ಕೋಟೆಯ ನಕ್ಷೆ

೧. ಆವರಣದ ಪ್ರವೇಶದ್ವಾರ ೨. ಎರಡನೇ ಪ್ರವೇಶದ್ವಾರ ೩. ಮುಖ್ಯ ಪ್ರವೇಶದ್ವಾರ ೪. ಕೊತ್ತಳ
೫. ಮದ್ದಿನ ಮನೆ ೬. ದಿಡ್ಡಿ ಬಾಗಿಲು ೭. ಕೃಷ್ಣಾನಗರ ಗ್ರಾಮ

೫.೨. ದರೋಜಿ

ದರೋಜಿಯು ಸಂಡೂರು ತಾಲೂಕಿನಲ್ಲಿ ಬಳ್ಳಾರಿಯಿಂದ ೩೨ ಕಿ.ಮೀ. ಮತ್ತು ಕಂಪ್ಲಿಯಿಂದ ೨೦ ಕಿ.ಮೀ. ದೂರದಲ್ಲಿರುವ ಒಂದು ಚಿಕ್ಕ ಗ್ರಾಮ. ಇದನ್ನು ಶಾಸನಗಳು ದೊರವದಿ ಎಂದು ಕರೆದಿವೆ.[೧] ಇದು ಬಲ್ಲಕುಂದೆ ನಾಡಿನ ದೊಡ್ಡ ಉಪ ವಿಭಾಗಗಳಲ್ಲಿ ಒಂದೆಂಬ ಅಂಶವು ಓರಾವಾಯಿ ಮತ್ತು ಹಂಪೆ ಶಾಸನಗಳಿಂದ ತಿಳಿಯುತ್ತದೆ.[೨] ಕ್ರಿ.ಶ. ೧೨ನೇ ಶತಮಾನದಲ್ಲಿ ದೊರವಡಿನಾಡು ಅಥವಾ ದೊರವದಿ - ೭೦ರ ರಾಜಧಾನಿಯಾಗಿದ್ದಿತು.[೩] ದೊರವದಿಯು ಹಲವು ಇತಿಹಾಸಕಾರರ ಚರ್ಚೆಗೊಳಗಾದ ಪ್ರದೇಶ. ಈ ಊರಿಗೆ ದರೋಜಿ ಹೆಸರು ಬರಲು ಅಲ್ಲಿಯ ಒಂದು ದೊಡ್ಡ ಕೆರೆ ಅಂದರೆ ದರಿಯತಲಾಬ (Dariya Talab) ಕಾರಣವಾಗಿದೆ ಎಂದು ಊಹಿಸಲಾಗಿದೆ. ಇನ್ನು ಗ್ರಾಮದ ಹೆಸರು "ದ್ವಾರವತಿ" ಎಂದೂ ಮುಂದೆ ಅದು ದೊರವಡಿಯಾಗಿ[೪] ಬದಲಾವಣೆ ಹೊಂದಿತೆಂದು ಹೇಳಲಾಗುವುದು. ಆದರೆ ಇವೆಲ್ಲ ಕೇವಲ ಊಹೆಗಳನ್ನಾಧರಿಸಿದ್ದು, ಅವಕ್ಕೆ ಭಾವಶಾಸ್ತ್ರೀಯ ಆಧಾರಗಳಿಲ್ಲವೆಂದು ಮೇಲುನೋಟಕ್ಕೆ ಸ್ಪಷ್ಟವಾಗಿದೆ. ದೊರವಡಿ (ಕ್ರಿ.ಶ. ೧೯೯) > ದರೋಜಿ (ದೊರೆಯರ (ಅರಸ) + ವಾಡಿ > ದೊರೆಯವಾಡಿ > ದೊರೆವಾಡಿ > ದೊರೆವಡಿ > ದೊರವದಿ > ದರೋಜಿ) ಯಾಗಿದೆ. ಇಲ್ಲಿ ಕ್ರಿ.ಶ. ೧೨ನೇ ಶತಮಾನದ ಪ್ರಾರಂಭದಲ್ಲಿ ಕೋಟೆಯಿದ್ದುದು ಕ್ರಿ.ಶ. ೧೧೪೦ - ೦೫ರ ಶಾಸನದಿಂದ ತಿಳಿಯುತ್ತದೆ.[೫]

ಇಲ್ಲಿ ಆದಿ ಹಳೆಯ ಶಿಲಾಯುಗ, ನೂತನ ಶಿಲಾಯುಗ, ಶಿಲಾ-ತಾಮ್ರಯುಗ ಸಂಸ್ಕೃತಿಗಳ ಅವಶೇಷಗಳು ಕಂಡುಬಂದಿವೆ.[೬] ಹೀಗೆ ಪ್ರಾಚೀನ ನೆಲೆಯಾದ ದರೋಜಿಯು ಕಲ್ಯಾಣ ಚಾಳುಕ್ಯ, ಹೊಯ್ಸಳ, ಕುಮ್ಮಟದುರ್ಗದರಸರ, ಸ್ವಲ್ಪಕಾಲ ಯಾದವರ, ಹಾಗೂ ವಿಜಯನಗರದವರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು. ಕ್ರಿ.ಶ. ೧೨ನೆಯ ಶತಮಾನಕ್ಕೂ ಮೊದಲೆ ನಿರ್ಮಾಣವಾಗಿರುವ ಈ ಕೋಟೆಯನ್ನು ೧೨ನೆಯ ಶತಮಾನದ ಕೊನೆಯಲ್ಲಿ ಹೊಯ್ಸಳ ಎರಡನೇ ಬಲ್ಲಾಳ ಜಯಸಿದ್ದನು. ಕ್ರಿ.ಶ. ೧೨೮೦ರ ಅಸುಪಾಸಿನಲ್ಲಿ ಮುಮ್ಮಡಿಸಿಂಗೆ ನಾಯಕ ದರೋಜಿಯನ್ನು ಆಳುತ್ತಿದ್ದಾಗ ಯಾದವ ರಾಯದೇವನ ಸೈನ್ಯವು ಈ ಕೋಟೆಯ ಮೇಲೆ ಆಕ್ರಮಣ ಮಾಡಿತು. ಆಗಲೇ ಕನ್ನರದೇವನು ಮುಮ್ಮಡಿಸಿಂಗೆನಾಯಕನ ಮೇಲೆ ಯುದ್ಧ ಮಾಡುತ್ತಾನೆ. ಇದು ನಡೆದದ್ದು ದೊರವಡಿ (ದರೋಜಿ) ಕೋಟೆಯಲ್ಲಿ, ಇದರಲ್ಲಿ ವಣಿದೇವರಸ ಹೋರಾಡಿ ಹಲವು ಆಳು, ಕುದುರೆಗಳನ್ನು ಕೊಂದು ಸುರಲೋಕ ಪ್ರಾಪ್ತನಾಗುತ್ತಾನೆಂಬ ವಿಷಯದಲ್ಲಿ ದೊರವದಿ ಕೋಟೆಯ ಮಹತ್ವ ಅಡಗಿದೆ.[೭] ಕ್ರಿ.ಶ. ೧೩೨೦ರಲ್ಲಿ ಮುಮ್ಮಡಿಸಿಂಗೆಯ ನಾಯಕನ ಮಗ ಕಂಪಿಲರಾಯ ದರೋಜಿ (ದೊರವದಿ)ಯನ್ನು ಆಳುತ್ತಿದ್ದಾಗ ಹೊಯ್ಸಳ ೩ನೇ ಬಲ್ಲಾಳ ದಂಡೆತ್ತಿ ಬಂದನು. ಕ್ರಿ.ಶ. ೧೬ನೆಯ ಶತಮಾನದಲ್ಲಿ ವಿಜಯನಗರ ಅರಸರ ಕಾಲದಲ್ಲಿ ದರೋಜಿಯ ಸುತ್ತಲಿನ ಪ್ರದೇಶವನ್ನು ದೊರವಡಿ ವೇಠೆ ಎಂದು ಕರೆದಿರುವರು.

ಕೋಟೆಯ ಲಕ್ಷಣಗಳು

ದೊರವಡಿ ಪಟ್ಟಣವಿದ್ದ ಸ್ಥಳವನ್ನು ಹಳೆ ದರೋಜಿ ಎಂದು ಕರೆಯುತ್ತಾರೆ. ಇದರ ಪಶ್ಚಿಮಕ್ಕೆ ದರೋಜಿ ಬೆಟ್ಟವಿದೆ. ಬೆಟ್ಟದ ಮೇಲೆ ಕೋಟೆ ಮತ್ತು ಇತರ ಕಟ್ಟಡಗಳ ಅವಶೇಷಗಳಿವೆ. ದೊರವಡಿ ಪಟ್ಟಣ ಅಥವಾ ಹಳೆ ದರೋಜಿಯ ಸುತ್ತ ಹಿಂದೆ ಕೋಟೆಯಿದ್ದ ಬಗ್ಗೆ ಈಗ ಆಧಾರಗಳಿಲ್ಲ. ಒಂದು ವೇಳೆ ಕೋಟೆ ಇದ್ದಿದ್ದರೂ ಅದನ್ನು ವ್ಯವಸಾಯ ಮಾಡಲು ಹಾಳು ಮಾಡಿರಬಹುದು. ಏಕೆಂದರೆ ಹಾಳು ಪಟ್ಟಣದ ಪ್ರದೇಶವು ವ್ಯವಸಾಯಕ್ಕೆ ಒಳಪಟ್ಟಿದೆ. ಆದರೆ ಬೆಟ್ಟದ ಮೇಲೆ ೧೨ನೇ ಶತಮಾನದಲ್ಲಿಯೇ ಕೋಟೆ ಇದ್ದುದಕ್ಕೆ ಅಲ್ಲಿನ ರಾಮಲಿಂಗೇಶ್ವರ ದೇವಾಲಯದಲ್ಲಿಯ ಶಾಸನವು ಆಧಾರವಾಗಿದೆ. ಶಾಸನದ ಪ್ರಕಾರ ಈ ದೇವಾಲಯವು ದೊರವಡಿ ಕೋಟೆಯ ಒಳಗಿತ್ತು.




ಕೋಟೆಯನ್ನೊಳಗೊಂಡ ಬೆಟ್ಟ

ದರೋಜಿ ಬೆಟ್ಟದ ಸಾಲಿನಲ್ಲಿ ಮೂರು ಬೆಟ್ಟಗಳಿವೆ. ಇವುಗಳನ್ನು ಉತ್ತರ ಬೆಟ್ಟ ಮಧ್ಯ ಬೆಟ್ಟ ಮತ್ತು ದಕ್ಷಿಣ ಬೆಟ್ಟಗಳೆಂದು ಕರೆಯಬಹುದು. ಇವುಗಳಲ್ಲಿ ಮಧ್ಯ ಮತ್ತು ದಕ್ಷಿಣ ಬೆಟ್ಟಗಳ ಮೇಲೆ ಕೋಟೆ ವಿಸ್ತರಿಸಿದೆ. ದಕ್ಷಿಣ ಬೆಟ್ಟದ ಬುಡದಲ್ಲಿ ವೀರಭದ್ರ ದೇವಾಲಯವಿದೆ. ಬೆಟ್ಟಗಳ ಮೇಲೆ ಹತ್ತಲು ಮಧ್ಯ ಮತ್ತು ದಕ್ಷಿಣ ಬೆಟ್ಟಗಳ ಮಧ್ಯದ ಕಿರಿದಾದ ಕೊಳ್ಳದಲ್ಲಿ ಮೆಟ್ಟಿಲುಗಳಿವೆ. ಕೊಳ್ಳದ ದಾರಿಯಲ್ಲಿ ಆಗ್ನೇಯಕ್ಕೆ ಎರಡು ಮತ್ತು ವಾಯುವ್ಯಕ್ಕೆ ಎರಡು ಕೋಟೆಗೋಡೆಗಳನ್ನು ಎರಡು ಬೆಟ್ಟಗಳ ನಡುವೆ ಕಟ್ಟಲಾಗಿದೆ. ಈ ಕೋಟೆಗಳಲ್ಲಿ ತೆರೆದ ದ್ವಾರಗಳಿವೆ. ಆದರೆ ಬಾಗಿಲಿನಂತಹ ಯಾವುದೇ ಕಟ್ಟಡಗಳಿಲ್ಲ. ಚಿಕ್ಕ ಕಲ್ಲುಗಳಿಂದ ಕಟ್ಟಿದ ಆಗ್ನೇಯ ಕೋಟೆಗೋಡೆಗಳು ೧೭ - ೧೮ನೇ ಶತಮಾನಗಳವು. ಆದರೆ ವಾಯುವ್ಯ ಕೋಟೆ ಗೋಡೆಗಳನ್ನು ಭಾಗಶಃ ಕತ್ತರಿಸಿದ ದೊಡ್ಡ ಕಲ್ಲುಗಳಿಂದ ಕಟ್ಟಿದ್ದು ಇವು ೧೩ನೆಯ ಶತಮಾನ ಅಥವಾ ಅದಕ್ಕಿಂತ ಹಿಂದಿನ ಕಾಲದವು. ಈ ಕೊಳ್ಳದಲ್ಲಿ ಬೆಟ್ಟದ ಮೇಲಿನಿಂದ ಹರಿದು ಬಂದ ನೀರಿನ್ನು ಸಂಗ್ರಹಿಸಲು ಎರಡು ಚಿಕ್ಕ ಕೆರೆಗಳಿವೆ.



ಆಗ್ನೇಯದಿಂದ ಮೊದಲನೆಯ ಕೋಟೆಗೋಡೆಯನ್ನು ದಾಟಿ ಎರಡನೆಯ ಕೋಟೆಯ ಹತ್ತಿರ ಹೋದಾಗ ಒಂದು ದಾರಿ ದಕ್ಷಿಣ ಬೆಟ್ಟದ ಮೇಲೆ ಹೋಗುತ್ತದೆ. ಈ ದಾರಿಯಲ್ಲಿ ಕೆಲವು ಮೆಟ್ಟಿಲುಗಳನ್ನು ಹತ್ತಿ ಮುಂದೆ ಹೋದಾಗ ರಾಮಲಿಂಗೇಶ್ವರ ದೇವಾಲಯ ಕಾಣುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಗರ್ಭಗೃಹದ ಬಾಗಿಲಿನ ಮೇಲೆ ಗಜಲಕ್ಷ್ಮಿಯಲ್ಲದೆ ಬೇರೆ ಅಲಂಕಾರವಿಲ್ಲ. ಅಂತರಾಳದ ಮುಂದೆ ಬಾಗಿಲವಾಡವಿಲ್ಲ. ನಂತರ ಸೇರಿಸಲಾದ ಸಭಾಮಂಟಪ ಭಾಗಶಃ ಬಿದ್ದುಹೋಗಿದೆ. ಹೊರಗೋಡೆಯ ಮೇಲೆ ಅರೆಗಂಬಗಳ ಅಲಂಕಾರವಿದೆ. ಸಭಾಮಂಟಪದ ಉತ್ತರ ಗೋಡೆಯ ಮೇಲೆ ಆನೆಯ ಎರಡು ಉಬ್ಬುಶಿಲ್ಪಗಳಿವೆ. ಅಂತರಾಳದ ಅರೆಗಂಬಗಳ ಮೇಲಿನ ಶಾಸನವು ಕ್ರಿ.ಶ. ೧೧೦೪-೦೫ ರಲ್ಲಿ ದೊರವಡಿ ಕೋಟೆಯೊಳಗಿನ ರಾಮೇಶ್ವರ ದೇವರಿಗೆ ದಾನ ಕೊಟ್ಟುದುದನ್ನು ದಾಖಲಿಸುತ್ತದೆ. ಈ ದೇವಾಲಯವು ಶಾಸನದ ಕಾಲಕ್ಕಿಂತ ಕೆಲವು ವರ್ಷ ಹಿಂದಿನದಾಗಿದೆ.



ರಾಮಲಿಂಗೇಶ್ವರ ದೇವಾಲಯ

ದೇವಾಲಯದ ಮುಂದೆ ಚಿಕ್ಕ ನೀರಿನ ದೊಣೆಯಿದೆ. ದೇವಾಲಯದ ಸುತ್ತಲಿನ ಸಮತಟ್ಟಾದ ಪ್ರದೇಶದ ಸುತ್ತಲೂ ಕೋಟೆಯಿದೆ. ಈ ಕೋಟೆಗೆ ದಕ್ಷಿಣಕ್ಕೆ ಬಾಗಿಲಿದೆ. ಇಲ್ಲಿಂದ ಮೇಲೆ ಮೊದಲು ಪಶ್ಚಿಮಕ್ಕೆ ನಂತರ ವಾಯುವ್ಯಕ್ಕೆ ಮೂರು ಬಾಗಿಲುಗಳ ಮೂಲಕ ಹೋದಾಗ ಬೆಟ್ಟದ ತುದಿಯಲ್ಲಿರುವ ಸಮತಟ್ಟಾದ ಪ್ರದೇಶವನ್ನು ತಲುಪುತ್ತೇವೆ. ಈ ಪ್ರದೇಶದ ಸುತ್ತಲಿನ ಕೋಟೆಯನ್ನು ಚಿಕ್ಕ ಕಲ್ಲುಗಳಿಂದ ಕಟ್ಟಲಾಗಿದೆ. ಈ ಕೋಟೆಯಲ್ಲಿ ವೃತ್ತಾಕಾರದ ಕೊತ್ತಳಗಳಿವೆ. ಇಲ್ಲಿ ಕೆಲವು ಕಟ್ಟಡಗಳ ಅವಶೇಷಗಳು ಮತ್ತು ಒಂದು ನೀರಿನ ದೊಣೆ ಇದೆ. ಇಲ್ಲಿಯ ಒಂದು ಗುಂಡಿನ ಮೇಲೆ ಹುಲಿಯನ್ನು ಬಂದೂಕಿನಿಂದ ಬೇಟೆಯಾಡುತ್ತಿರುವ ಮನುಷ್ಯನ, ಬಂಡೆಯ ಮೇಲೆ ಕುಳಿತು ನಗಾರಿ ಬಾರಿಸುವವನ, ಖಡ್ಗ ಹಿಡಿದು ಕುದುರೆಯ ಮೇಲೆ ಕುಳಿತವನ ಮತ್ತು ಧ್ವಜದೊಂದಿಗೆ ಅಂಬಾರಿಯನ್ನು ಹೊತ್ತ ಆನೆಯ ರೇಖಾಚಿತ್ರಗಳಿವೆ. ಮತ್ತೊಂದು ಗುಂಡಿನ ಮೇಲೆ ಆನೆಯನ್ನು ಕೊಲ್ಲುತ್ತಿರುವ ಸಿಂಹದ ರೇಖಾಚಿತ್ರವಿದೆ. ಮನುಷ್ಯರ ಭಂಗಿ ಮತ್ತು ಪ್ರಾಣಿಗಳ ಚಲನವಲನಗಳನ್ನು ನೈಜವಾಗಿ ಚಿತ್ರಿಸಲಾಗಿದೆ.



ರಾಮಲಿಂಗೇಶ್ವರ ದೇವಾಲಯದ ಮುಂದಿರುವ ಬಾವಿ

ಮಧ್ಯ ಬೆಟ್ಟದ ಸುತ್ತಲು ಎರಡು ಕೋಟೆಗೋಡೆಗಳಿವೆ. ಚಿಕ್ಕ ಕಲ್ಲುಗಳಿಂದ ಕಟ್ಟಿದ ಈ ಗೋಡೆಗಳಲ್ಲಿ ವೃತ್ತಾಕಾರದ ಕೊತ್ತಳಗಳಿವೆ. ಬೆಟ್ಟದ ತುದಿಯಲ್ಲಿನ ಸಮತಟ್ಟಾದ ಪ್ರದೇಶದಲ್ಲಿ ಕೆಲವು ಕಟ್ಟಡಗಳ ಅವಶೇಷಗಳು ಮತ್ತು ಒಂದು ನೀರಿನ ದೊಣೆ ಇದೆ. ಈ ಬೆಟ್ಟದ ಉತ್ತರಕ್ಕಿರುವ ಕೋಟೆಗೋಡೆಯನ್ನು ದೊಡ್ಡ ಕಲ್ಲುಗಳಿಂದ ಕಟ್ಟಲಾಗಿದ್ದು, ಇದು ೧೩-೧೪ನೇ ಶತಮಾನದ್ದು. ಈ ಬೆಟ್ಟದ ಮೇಲಿನ ಉಳಿದ ಕೋಟೆ ಮತ್ತು ದಕ್ಷಿಣ ಬೆಟ್ಟದ ಮೇಲಿನ ಕೋಟೆ ೧೭-೧೮ನೇ ಶತಮಾನದವು.

ಟಿಪ್ಪಣಿಗಳು

೧. SII IX (pt.1) No.166. ಕುಡುತಿನಿ

೨. SII IX (pt.1) No.253. ಓರುವಾಯಿ


೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧. ಪು. ೫೪ - ೫೫. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. ಲಕ್ಷ್ಮಣ ತೆಲಗಾವಿ ಮತ್ತು ಶ್ರೀನಿವಾಸ ರಿತ್ತಿ, ಎಂ.ವಿ. (ಅನುವಾದ), ಹುಲ್ಲೂರು ಶ್ರೀನಿವಾಸ ಜೋಯಿಸರ ಇತಿಹಾಸ ಲೇಖನಗಳು

೫. ಚನ್ನಬಸಪ್ಪ, ಎಸ್. ಪಾಟೀಲ. ೧೯೯೯. *ಕರ್ನಾಟಕ ಕೋಟೆಗಳು*, ಪು. ೬೩. ಹಂಪಿ : ಕನ್ನಡ ವಿಶ್ವವಿದ್ಯಾಲಯ

೬. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕ ಪುರಾತತ್ವ ನೆಲೆಗಳು*, ಪು. ೩೬೩. ಹಂಪಿ : ಕನ್ನಡ ವಿಶ್ವವಿದ್ಯಾಲಯ

೭. ನಾಗಯ್ಯ, ಜೆ.ಎಂ. ೨೦೦೦. *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ*, ಪು. ೨೧. ಬಳ್ಳಾರಿ : ಲೋಹಿಯಾ ಪ್ರಕಾಶನ



೫.೩ ಹೊಸಮಲೆದುರ್ಗ

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಸುಶೀಲನಗರದ ಪಶ್ಚಿಮಕ್ಕೆ ೩೨೨೦ ಅಡಿ ಎತ್ತರದ ಬೆಟ್ಟದ ಮೇಲಿರುವುದೇ ಹೊಸಮಲೆದುರ್ಗ. ಇದು ಸಂಡೂರಿನಿಂದ ವಾಯುವ್ಯದಿಕ್ಕಿಗೆ ಹತ್ತು ಕಿ.ಮೀ. ದೂರದಲ್ಲಿದೆ. ಇದನ್ನು ರಾಮನಮಲೆ ರಾಮಘಡವೆಂತಲೂ ಕರೆಯುತ್ತಾರೆ. ಇಲ್ಲಿ ಸುಮಾರು ಇಪ್ಪತ್ತು ಮನೆಗಳಿವೆ. ಸಂಡೂರು ಕೈಫಿಯತ್ತು ಇದನ್ನು ರಾಮನದುರ್ಗ ಮತ್ತು ಹೊಸಮಲೆದುರ್ಗವೆಂದು ಕರೆದಿದೆ.[1] ಕ್ರಿ.ಶ. ೧೨ ನೇ ಶತಮಾನದಲ್ಲಿ ದಕ್ಷಿಣ ಭಾರತದ ರಾಜಕೀಯ ಸ್ಥಿತಿ - ಗತಿಗಳು ಸ್ಪರ್ಧಾತ್ಮಕವಾಗಿದ್ದವು. ಸೇವುಣ, ಕಾಕತೀಯ, ಹಾಗೂ ಹೊಯ್ಸಳರ ಮಧ್ಯೆ ತ್ರಿಕೋಣ ಸ್ಪರ್ಧೆ ಏರ್ಪಟ್ಟಿತ್ತು. ಸೇವಣರು, ಕಾಕತೀಯರು, ಪಾಂಡ್ಯರು ಮತ್ತು ಹೊಯ್ಸಳರನ್ನು ಬಗ್ಗುಬಡಿದು ರಾಜ್ಯಕಟ್ಟಿದ ಶ್ರೇಯಸ್ಸು ಕಂಪಿಲರಾಯ ಮತ್ತು ಕುಮಾರ ರಾಮನಿಗೆ ಸಲ್ಲುತ್ತದೆ. ದೆಹಲಿಯ ಮಹಮದ್ ಬಿನ್ ತುಘಲಕ್‌ನ ಅಧಿಕಾರಿಗಳಿಗೆ ಕಪ್ಪಕಾಣಿಕೆಗಳನ್ನು ಕೊಡಲು ನಿರಾಕರಿಸಿದರಲ್ಲದೆ ಅವನ ವಿರುದ್ಧ ಅನೇಕ ಬಾರಿ ಯುದ್ಧಗಳನ್ನು ಮಾಡಲಾಯಿತು. ಕ್ರಿ.ಶ. ೧೩೩೬ ರಲ್ಲಿ ಸುಲ್ತಾನನ ಭಯಂಕರ ಸೈನ್ಯ ತಿಂಗಳು ಗಟ್ಟಲೆ ಕೋಟೆಯನ್ನು ಸುತ್ತುವರೆದು ನಿಂತಾಗ ಕೋಟೆಯೊಳಗಿರುವ ಆಹಾರ ಸಾಮಾಗ್ರಿ ಮುಗಿದಾಗ ವೈರಿಗೆ ಶರಣಾಗದೆ ಕೋಟೆ ಬಾಗಿಲನ್ನು ತೆರೆದು ವೈರಿಪಡೆಯ ಮೇಲೆ ಬಿದ್ದು ವೀರಸ್ವರ್ಗವನ್ನು ಪಡೆದ ವಿಷಯ ನಮ್ಮ ಇತಿಹಾಸದಲ್ಲೇ ಮರೆಯಲಾಗದ ಘಟನೆ. ಅರ್ಧಶತಕದಷ್ಟೇ ಕಾಲ ಬಾಳಿ ಬೆಳಗಿದ ಇವರು ತಮ್ಮದೆ ಸ್ವಂತಿಕೆಯನ್ನು ಪ್ರತ್ಯೇಕತೆಯನ್ನು ಉಳಿಸಿ ಬೆಳಸಿಕೊಳ್ಳಲು ಸಮರ್ಥವಾಗಿ ಹೋರಾಟ ನಡೆಸಿದ್ದು ಒಂದು ಅಸಮಾನ್ಯ ಸಂಗತಿಯಾಗಿದೆ.

ಇಬ್ನ್ ಬಟುಟಾ, ಇಸಾಮಿ, ಫರ್ನಾವೊನ್ಯೂನಿಜ್ ಮುಂತಾದ ವಿದೇಶಿಯರು, ದೇಶಿಯ ಜಾನಪದರು ಕಾವ್ಯಕಾರರು ಈ ಅತ್ಯಂತ ಅಸಾಧಾರಣ ಘಟನೆಗಳನ್ನು ಚಿತ್ತವತ್ತಾಗಿ ವಿವರಿಸಿದ್ದಾರೆ. ಪರದಾರ ಸೋದರ ಕುಮಾರರಾಮನ ಶುದ್ಧ ಚಾರಿತ್ರ್ಯ, ಶೀಲ, ಶೌರ್ಯ, ಸಾಹಸದ ವ್ಯಕ್ತಿತ್ವ, ವರ್ಚಸ್ಸು ಕರ್ನಾಟಕದ ತುಂಬಾ ಜನಜನಿತವಾಗಿ ಕಾವ್ಯಗಳಿಗೆ, ಜನಪದ ಹಾಡುಗಳಿಗೆ, ಯಕ್ಷಗಾನಗಳಿಗೆ, ನಾಟಕಗಳಿಗೆ ಕಥಾ ವಸ್ತುಗಳನ್ನು ಒದಗಿಸಿವೆ. ಹೀಗೆ ಜನಪ್ರಿಯವಾದ ಕಂಪಿಲ, ಕುಮಾರರಾಮನ ಕೋಟೆ ಸ್ಮಾರಕಗಳು ಹೊಸಮಲೆದುರ್ಗದಲ್ಲಿ ಕಂಡುಬರುತ್ತವೆ. ಇವುಗಳ ಅಧ್ಯಯನವನ್ನು ಒಳಗೊಂಡ ಭಾಗವಿದು.

ಇತಿಹಾಸ ಮತ್ತು ಕೋಟೆ ನಿರ್ಮಾಣ ಕಾಲ

ಮುಮ್ಮಡಿಸಿಂಗ ಈ ಅರಸರಲ್ಲಿ ಹಿರಿಯ. ಈತನ ಕಾಲದಿಂದಲೆ ಈ ವಂಶೀಯರಿಗೆ ಹೊಯ್ಸಳರೊಂದಿಗೆ ದ್ವೇಷವಿದ್ದಂತೆ ಕಂಡುಬರುತ್ತದೆ. ಏಕೆಂದರೆ ಕ್ರಿ.ಶ. ೧೨೮೧ ರಲ್ಲಿ ಮುಮ್ಮಡಿಸಿಂಗನು ಹೊಯ್ಸಳರ ಅಧಿಪತ್ಯಕ್ಕೆ

ಸೇರಿದ್ದ ಬೆಮ್ಮಲೂರು ಕಲ್ಲಿಂಗೆ, ಎಂದರೆ ಇಂದಿನ ಚಿತ್ರದುರ್ಗದ ಮೇಲೆ ದಂಡೆತ್ತಿ ಬಂದಂತೆ ತಿಳಿದುಬರುತ್ತದೆ.[೨] ಇದೇ ಮುಮ್ಮಡಿಸಿಂಗನು ಲೇಪಂಡುಕಲ್ಲು ಎಂಬಲ್ಲಿ ಸಂಗಯ್ಯನಾಯಕನೊಂದಿಗೆ ಯುದ್ಧಮಾಡಿದವೆಂಬುದಾಗಿ ಹೊಳಲ್ಕೆರೆ ತಾಲೂಕು ಲೋಕದವೊಳಲ ಗ್ರಾಮವೊಂದರಲ್ಲಿರುವ ಶಾಸನದಲ್ಲಿ ತಿಳಿದುಬರುತ್ತದೆ.[೩] ಈ ಎಡೆಯೂ ಹೊಯ್ಸಳರ ಅಧಿಪತ್ಯಕ್ಕೆ ಸೇರಿತ್ತು. ಕಂಪಿಲನ ಕಾಲಕ್ಕೆ ಈ ದ್ವೇಷವು ಮತ್ತಷ್ಟೂ ಪುಟವಿಕ್ಕಿದಂತಾಯಿತು.

ಮೊದಮೊದಲು ಕಂಪಿಲನು ದೇವಗಿರಿಯ ರಾಮದೇವರಾಯನ ರಣನಾಯಕನಾಗಿದ್ದುಕೊಂಡು ಅವನ ಪರವಾಗಿ ಹೊಯ್ಸಳರ ಮೇಲೆ ಯುದ್ಧ ಮಾಡಿರುವಂತೆ ವಿದಿತವಾಗುತ್ತದೆ. ಕ್ರಿ.ಶ. ೧೩೦೩ ರಲ್ಲಿ ಸೇವುಣರ ರಣನಾಯಕನಾದ ಕಂಪಿಲನಿಗೂ ಹೊಯ್ಸಳ ಮುಮ್ಮಡಿ ಬಲ್ಲಾಳನ ಮೈದುನನೂ ಚಿತ್ರದುರ್ಗದ ಮಾಂಡಳಿಕನೂ ಆದ ಸೋಮೆಯ ಡಣ್ಣಾಯಕನಿಗೂ ಹೊಳಲ್ಕೆರೆಯ ಬಳಿ ಯುದ್ಧ ನಡೆದುದಾಗಿ ಒಂದು ವೀರಗಲ್ಲಿನಲ್ಲಿ ವ್ಯಕ್ತವಾಗಿದೆ.[೪] ಕ್ರಿ.ಶ. ೧೩೨೦ ರಲ್ಲಿ ಹೊಯ್ಸಳ ವೀರಬಲ್ಲಾಳನು ಕಂಪಿಲನ ನೆಲೆಯಾದ ದೊರವರಿಯ ಮೇಲೆ ದಂಡೆತ್ತಿ ಬಂದಂತೆಯೂ ಆ ಕದನದಲ್ಲಿ ಬಲ್ಲಾಳನ ಸೇನಾಧಿಪತಿಯಾದ ಕೂರುಕನಾಯಕನು ಹತನಾದಂತೆಯೂ ಗೊತ್ತಾಗುತ್ತದೆ.[೫] ಕ್ರಿ.ಶ. ೧೩೨೩ ರ ರಾಮಘಡದ ಶಾಸನದಲ್ಲಿ ಬಲ್ಲಾಳನಿಗೂ ಕಂಪಿಲನಿಗೂ ಹೊಸಮಲೆಯಲ್ಲಿ ಯುದ್ಧ ಸಂಭವಿಸಿದಂತೆ ತಿಳಿಸುತ್ತದೆ.[೬] ಈ ಮೇಲೆ ಹೇಳಿದಂತೆ ಎಲ್ಲಾ ಯುದ್ಧಗಳು ಹೊಯ್ಸಳರ ವಿರುದ್ಧವೇ ನಡೆದಿದೆ. ಹಾಗಾಗಿ ಕಂಪಿಲನಿಗೂ ಹೊಯ್ಸಳರಿಗೂ ಬದ್ಧ ವೈರತ್ವವಿರುವುದು ಸ್ಪಷ್ಟವಾಗುತ್ತದೆ. ಮುಮ್ಮಡಿಸಿಂಗನ ಮಗನಾದ ಕಂಪಿಲದೇವನನ್ನು ಕ್ರಿ.ಶ. ೧೩೦೩ ರಲ್ಲಿಯೇ ಸೇವುಣ (ರಣ?) ನಾಯ್ಕನೆಂಬುದಾಗಿ ಕರೆದಿರುವುದನ್ನು ನೋಡುತ್ತೇವೆ.[೭] ಪ್ರಾಯಶಃ ಈ ವೇಳೆಗಾಗಲೇ ಈ ಮನೆತನದವರು ಯಾದವರ ಆಶ್ರಯವನ್ನು ಗಳಿಸಿ ಅವರ ಪತನಾನಂತರ ಸ್ವತಂತ್ರ ರಾಜ್ಯ ನಿರ್ಮಿಸಿಕೊಂಡಿರಬೇಕೆಂಬ ಅಭಿಪ್ರಾಯವನ್ನು ಜಿ. ವರದರಾಜ್‌ರಾವ್ ರವರು ವ್ಯಕ್ತಪಡಿಸುತ್ತಾರೆ.[೮] ಕ್ರಿ.ಶ. ೧೨೭೬ ರಲ್ಲಿ ಸೇವುಣ ಮತ್ತು ಹೊಯ್ಸಳರ ನಡುವೆ ನಡೆದ ಕದನದಲ್ಲಿ ಕಂಪಿಲರಾಯ ಮುಖ್ಯಪಾತ್ರ ವಹಿಸಿದನೆಂದು ಅಭಿಶಂಕರವರ ಅಭಿಮತ.[೯] ಕ್ರಿ.ಶ. ೧೨೮೦ ರಲ್ಲಿ ಮುಮ್ಮಡಿಸಿಂಗ ನಾಯಕನ ಮೇಲೆ ಸೇವುಣರು ದಾಳಿ ಮಾಡಿದರು. ಕಮ್ಮಟರನ್ನು ಮುರಿಯಲು ಸೇವುಣರು ತದನಂತರವೂ ಎರಡುಬಾರಿ ಪ್ರಯಾಸ ಮಾಡಿ ವಿಫಲರಾದರು. ಮುಮ್ಮಡಿ ಬಲ್ಲಾಳ ಕ್ರಿ.ಶ. ೧೩೨೦ ರಲ್ಲಿ ದೊರವಡಿಯಲ್ಲಿ ಕಂಪಿಲರಾಯನನ್ನು ದಂಡಿಸಲು ಯತ್ನಿಸಿದರು. ಈ ಕದನ ನಿರ್ಣಾಯಕವಾದಂತೆ ಕಂಡುಬರುವುದಿಲ್ಲ. ಇದು ಕಾಲ್ಪನಿಕವಾದುದು ಎಂದು ಅಭಿಶಂಕರವರೇ ಅಭಿಮತಿಸಿದ್ದಾರೆ.[೧೦] ಶ್ರೀ ವೀರ ಕಂಪಿಲ ದೇವನ ಮೇಲೆ ಬಲ್ಲಾಳನು ಬಂದಲ್ಲಿ ಇಬ್ಬರು ದಾಯದ ದಂಡಿನೊಳಗೆ ದಂಡಿನ ಬಯಿಚಯ್ಯನು ಎಂಬ ಉಲ್ಲೇಖ ಬಂದಿದೆ. ಇವು ಎರಡನ್ನೂ ಒಟ್ಟಿಗೆ ಸೇರಿಸಿದರೆ ಅವು ಪರಸ್ಪರ ಪೂರಕವಾಗಿ ಮುಮ್ಮಡಿಸಿಂಗೆ ನಾಯಕನ ಮೂಲವು ಹೊಯ್ಸಳ ವಂಶದ ಒಂದು ಶಾಖೆಯಲ್ಲಿ ಇದ್ದಿರಬಹುದೆಂದು ಕೆ. ಅಭಿಶಂಕರ್ ರವರು ತರ್ಕಿಸಿದ್ದಾರೆ.[೧೧] ಅಭಿಶಂಕರರವರ ತರ್ಕಕ್ಕಿಂತ ಜಿ. ವರದರಾಜ್‌ರಾವ್ ರವರು ನೀಡುವ ವಿವರಣೆಗಳು ಸ್ಪಷ್ಟವಾಗಿರುವುದರಿಂದ ಸದ್ಯಕ್ಕೆ ಸೇವುಣರ ಮೂಲವನ್ನೆ ಒಪ್ಪಲಾಗಿದೆ.

ಹೀಗೆ ಸೇವುಣ (ಯಾದವರ) ರ ಮೂಲದಿಂದ ಬಂದವರಾದ ಇವರ ವಂಶಾವಳಿಯ ಭಿನ್ನವಾಗಿದೆ. ಆರ್.ಎಸ್. ಪಂಚಮುಖಿಯವರು ಪೆರುನಾಯಕ ಈ ವಂಶದ ಹಿರಿಯನಿರಬಹುದೆಂದು ಶಂಕಿಸಿದ್ದಾರೆ.[೧೨] ಕ್ರಿ.ಶ. ೧೩೨೮ ರ ಹೊಸಮಲೆದುರ್ಗದ ಶಾಸನದಲ್ಲಿ ವಂಶಾವಳಿ ಈ ಕೆಳಗಿನಂತಿದೆ.[೧೩]

ಮುಮ್ಮಡಿಸಿಂಗ

|

ಖಂಡೆರಾಯ ಕಂಪಿಲರಾಯ

ವೀರಗುಜ್ಜಲ ಹರಿಹರದೇವಿ

|

ಹೊಸಮಲೆ ರಾಮನಾಥ ಒಡೆಯ

ಅಂತೆಯೆ ಪ್ರಸನ್ನ ವಿರೂಪಾಕ್ಷಿ ದೇವಾಲಯದ ಬಳಿ ಇರುವ ಕಂಪಿಲನ ಶಾಸನದಲ್ಲಿ ಈ ಮೇಲಿನಂತೆಯೇ ವಂಶಾವಳಿ ಇದ್ದು ಮುಮ್ಮಡಿಸಿಂಗನ ಹೆಂಡತಿಯ ಹೆಸರನ್ನು ಪ್ರತ್ಯೇಕವಾಗಿ ಹೆಸರಿಸುತ್ತದೆ.[೧೪] ಅದರಲ್ಲಿ ಮಾದನಾಯಕಿತಿ ಕಂಪಿಲರಾಯನ ತಾಯಿ ಆಗಿದ್ದಾಳೆ.

ಈ ವಂಶಾವಳಿ ಪ್ರಕಾರ ಮುಮ್ಮಡಿ ಸಿಂಗನಾಯಕ, ಹಾಗೂ ಕಂಪಿಲರಾಯ ದೊರವಡಿಯಿಂದ ಆಳುತ್ತಿದ್ದನು. ದೇವಗಿರಿ ಯಾದವರ ಸಾಮಂತರಾದ ಇವರ ಆಡಳಿತಕ್ಕೆ ಬಳ್ಳಾರಿ, ರಾಯಚೂರು, ಧಾರವಾಡ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗಳು ಒಳಗೊಂಡಿದ್ದವು.[೧೫] ನಂತರ ಇವರ ರಾಜಧಾನಿಯನ್ನು ದೊರವಡಿಯಿಂದ ಹೊಸಮಲೆ ದುರ್ಗಕ್ಕೆ ಸ್ಥಳಾಂತರಸಲಾಗಿರುವ ವಿಷಯ ಈ ಕೆಳಗಿನಂತೆ ಪ್ರಸ್ತಾಪಿಸಲ್ಪಟ್ಟಿವೆ. ಹೊಸಮಲೆದುರ್ಗ ಎಲ್ಲಿದೆ ಎಂಬುದಕ್ಕೆ ನಂಜುಂಡನು ತನ್ನ ರಾಮನಾಥ ಚರಿತ್ರೆಯಲ್ಲಿ ಕಂಪಿಲನ ನೆಲೆಯಾದ ಹೊಸಮಲೆದುರ್ಗ ಆ ವಿರೂಪಾಕ್ಷನ ನಿಳೆಯದ ದಕ್ಷಿಣ ಭೂಮಳದೊಳು ಮೃಗಗಳ ಆವಾಸ ದಂತಿರ್ಪುದು ಎಂದಿದ್ದಾನೆ.[೧೬] ಡಬ್ಲ್ಯು ಫ್ರಾನ್ಸಿಸ್ ಎಂಬುವರು ಹೊಸಮಲೆ ಪ್ರದೇಶವನ್ನು ಪರಿಚಯ ಮಾಡಿಕೊಳ್ಳುತ್ತಾ ಇಲ್ಲಿ ಪಾಳು ಕೋಟೆಯ ಚಿನ್ಹೆಗಳಿವೆ ಎಂದೂ ಇದನ್ನು ಕುಮಾರರಾಮನೆಂಬ ಪಾಳೆಯಗಾರನು ಕಟ್ಟಿಸಿದನೆಂದೂ ಪ್ರತೀತಿ ಇರುವುದಾಗಿ ಹೇಳಿದ್ದಾನೆ.[೧೭] ಜೆ.ಡಿ.ಎಂ. ಡೆರೆಂಟ್‌ರವರು ಹೊಸಮಲೆದುರ್ಗವು ತುಂಗಾಭದ್ರ ನದಿಯಿಂದ ೨೦ ಕಿ.ಮೀ. ದಕ್ಷಿಣಕ್ಕೆ ಇದೆ ಎಂದಿದ್ದಾರೆ.[೧೮] ಕಂಪಿಲನು ಹೊಸಮಲೆದುರ್ಗವನ್ನು ಕಟ್ಟಿಸಿದ ವಿವರವು ಚೆನ್ನರಾಮನ ಸಾಂಗತ್ಯದ ೨, ೪೫ - ೪೫ ರಲ್ಲಿ ಬರುತ್ತದೆ.[೧೯] ಕಂಪಿಲನು ಹೊಸಮಲೆಯಲ್ಲಿ ಸುಪ್ರತಿಷ್ಟತನಾದ ಮೇಲೆ, ಮಂತ್ರಿಯಾದ ಬೈಚಪ್ಪನೇ ನೆರೆಹೊರೆಯ ರಾಜ್ಯಗಳ ಮೇಲೆ ದಂಡೆತ್ತಿ ಹೋಗಿ ಗೆದ್ದು ಬರುತ್ತಾನೆ.[೨೦] ಮುಮ್ಮಡಿಸಿಂಗನ ಮರಣಾನಂತರ ಕಂಪಿಲರಾಯನು ರಾಯದುರ್ಗದಿಂದ ಬೇಟೆಯಾಡುತ್ತಾ ಬರುತ್ತಿರುವಾಗ ಸಂಡೂರಿನ ಬಳಿ ಪ್ರಶಸ್ತವಾದ ಒಂದು ಎಡೆಯಲ್ಲಿ ನೆಲೆಸಿ ಹೊಸಮಲೆದುರ್ಗವನ್ನು ನಿರ್ಮಿಸಿದನೆಂದು ಕೈಫಿಯತ್ತುಗಳು ಹೇಳುತ್ತವೆ.[೨೧] ಕಂಪಿಲನು ಹೊಸಮಲೆದುರ್ಗವನ್ನು ಕಟ್ಟಿಸಿ ಅಲ್ಲಿಂದ ಆಳಲು ಪ್ರಾರಂಭಿಸಿದನೆಂದು ಚನ್ನಬಸಪ್ಪ ಪಾಟೀಲರು ಅಭಿಪ್ರಾಯ

ಪಡುತ್ತಾರೆ.[೨೨] ಕ್ರಿ.ಶ. ೧೩೨೦ ರ ಕಂಪಿಲನ ಶಾಸನವೂ ದೊರೆವದಿಯಲ್ಲಿ ದೊರೆತಿದೆ. ಕ್ರಿ.ಶ. ೧೩೨೩ ರ ಕಂಪಿಲನ ಶಾಸನವೂ ಹೊಸಮಲೆದುರ್ಗದಲ್ಲಿ ಕಂಡುಬರುತ್ತದೆ. ಪ್ರಾಯಶಃ ಇವರು ೧೩೨೦-೨೩ರ ಮಧ್ಯದಲ್ಲಿಯೇ ಹೊಸಮಲೆದುರ್ಗಕ್ಕೆ ಬಂದಿರುತ್ತಾರೆ. ಇದೇ ಅವಧಿಯಲ್ಲಿ ಹೊಸಮಲೆದುರ್ಗದಲ್ಲಿ ಕೋಟೆ ನಿರ್ಮಾಣವಾಗಿದ್ದಿರಬಹುದು. ಕ್ರಿ.ಶ. ೧೩೨೭ [೨೩] ಅಥವಾ ೧೩೩೩ ರಲ್ಲಿ[೨೪] ಈ ಕುಮಾರರಾಮ ಹಾಗೂ ಕಂಪಿಲನು ವೀರಸ್ವರ್ಗ ಸೇರಿದರು.


ಕೋಟೆಯ ಲಕ್ಷಣಗಳು

ಹೊಸಮಲೆ ಗುಡ್ಡವು ಸಮುದ್ರ ಮಟ್ಟದಿಂದ ೩೨೨೦ ಅಡಿ ಎತ್ತರವಾಗಿದೆ. ಈ ಗುಡ್ಡದ ಮೇಲೆ ಸಮತಟ್ಟಾದ ಪ್ರದೇಶವಿದೆ. ಇಲ್ಲಿಯೇ ಹೊಸಮಲೆ ಕೋಟೆ ಇರುವುದು. ಈ ಕೋಟೆಯ ಸುತ್ತಲೂ ಆಳವಾದ ಮತ್ತು ಕಡಿದಾದ ಬೆಟ್ಟದ ಕಣಿವೆಗಳಿವೆ. ಸುಮಾರು ೨ ಕಿ.ಮೀ. ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಕೋಟೆಯನ್ನು ದೊಡ್ಡ ಹಾಗೂ ಮಧ್ಯಮ ಗಾತ್ರದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಪ್ರಕೃತಿಯ ಸಹಜ ವೈಪರೀತ್ಯ ಹಾಗೂ ಗಣಿಗಾರಿಕೆಯ ಕಾರಣದಿಂದಾಗಿ ಕೋಟೆಯ ಬಹುತೇಕ ಭಾಗಗಳು ಶಿಥಿಲಗೊಂಡಿವೆ. ಅಳಿದುಳಿದ ಕೋಟೆ ಗೋಡೆ ಮಾತ್ರ ಅಲ್ಲಲ್ಲಿ ಕಂಡುಬರುತ್ತದೆ.



ಕೋಟೆಯ ಗೋಡೆ

ಈ ಕೋಟೆಯನ್ನು ವರದರಾಜ್‌ರವರು ವನದುರ್ಗವೆಂದು ಕರೆದಿದ್ದಾರೆ.[೨೫] ಈ ಕೋಟೆಗೆ ಮೂರು ಬಾಗಿಲುಗಳು ಇದ್ದುದಾಗಿ ರಾಮಶರ್ಮರ ಅಭಿಪ್ರಾಯವನ್ನು ವರದರಾಜ್ ರವರು ಸಮರ್ಥಿಸಿದ್ದಾರೆ.[೨೬] ಡಾ. ಚನ್ನಬಸಪ್ಪ ಪಾಟೀಲರು ಹೊಸಮಲೆದುರ್ಗದ ಕೋಟೆಗೆ ನಾಲ್ಕು ಬಾಗಿಲುಗಳಿರುವುದನ್ನು ಗುರುತಿಸಿದ್ದಾರೆ.[೨೭] ಕೋಟೆಯ ಆಗ್ನೇಯ ಭಾಗಕ್ಕೆ ಒಂದು ಬಾಗಿಲಿದೆ. L ಆಕಾರದಲ್ಲಿರುವ ಈ ಬಾಗಿಲಿನ ಪ್ರವೇಶದ್ವಾರವು ದಕ್ಷಿಣದಿಂದ



ಉತ್ತರಕ್ಕೆ ಸಾಗಿ ಮುಂದೆ ಪಶ್ಚಿಮದೆಡೆಗೆ ತಿರುಗುತ್ತದೆ. ಇದನ್ನೆ ಹುಣಚೂಟಿ ಬಾಗಿಲು ಎಂಬುದಾಗಿ ಜಿ. ವರದರಾಜ್‌ರಾವ್ ರವರು ಗುರುತಿಸಿರಬಹುದು.[೨೮] ಕೋಟೆಯ ಪೂರ್ವದಿಕ್ಕಿಗೆ ಎರಡನೆಯ ಬಾಗಿಲಿದೆ. ಇದನ್ನು ಚನ್ನಬಸಪ್ಪ ಪಾಟೀಲರು ಕವಣೆಕಲ್ಲು ಬಾಗಿಲೆಂದು ಕರೆದಿರುವರು.[೨೯] ಜಿ.ವರದರಾಜ್‌ರವರು ಗುರುತಿಸಿರುವ ಕವಣೆಕಲ್ಲು ಬಾಗಿಲು ಇದೇ ಆಗಿದೆ.[೩೦] ಈ ಬಾಗಿಲ ಬಳಿಯಲ್ಲಿ ಕವಣೆಕಲ್ಲುಗಳ ರಾಶಿಗಳೇ ಬಿದ್ದಿವೆ. ಈ ಕಾರಣಕ್ಕಾಗಿ ಈ ಮೇಲಿನ ಹೆಸರು ಬಂದಿರಬಹುದು. ಪ್ರಾಯಶಃ ಯುದ್ಧದ ಸಮಯದಲ್ಲಿ ಶತ್ರು ಪಡೆಯ ಮೇಲೆ ಕವಣೆಯಿಂದ ಎಸೆಯಲಾಗುತ್ತಿದ್ದ ಕಲ್ಲುಗಳಿವು. ಈ ಬಾಗಿಲಿನ ಹೊರಭಾಗದಲ್ಲಿ ಕವಣೆಕಲ್ಲುಗಳು ಚದುರಿಕೊಂಡು ಬಿದ್ದಿರುವುದನ್ನು ಇಂದಿಗೂ ಕಾಣಬಹುದು. ಇದನ್ನೂ ಪಾಟೀಲರು ಗುರುತಿಸಿದ್ದಾರೆ.[೩೧] ಈ ಕೋಟೆಯ ಉತ್ತರ ದಿಕ್ಕಿಗಿರುವುದೇ ಮೂರನೆಯ ಬಾಗಿಲು. ಇದನ್ನೆ ಜಿ. ವರದರಾಜ್‌ರಾವ್ ರವರು ಹೊಸಪೇಟೆ ಬಾಗಿಲೆಂದು ಗುರುತಿಸಿರಬಹುದು.[೩೨] ಕೋಟೆಯ ದಕ್ಷಿಣಕ್ಕೆ ನಾಲ್ಕನೆಯ ಬಾಗಿಲಿದೆ. ಇದು ಶಿಥಿಲವಾಗಿದೆ. ಉತ್ತರ ಮತ್ತು ಪೂರ್ವದಿಕ್ಕಿಗಿರುವ ಬಾಗಿಲುಗಳು ಬಹಳ ಮುಖ್ಯವಾಗಿವೆ. ಇವುಗಳೇ ಮುಖ್ಯ ಪ್ರವೇಶದ್ವಾರಗಳಂತೆ ಕಂಡುಬರುತ್ತವೆ. ಪೂರ್ವದ ಪ್ರವೇಶದ್ವಾರವನ್ನು ತಲುಪಲು ಸುತ್ತು ಬಳಸಿ ಬರಬೇಕಾಗುತ್ತದೆ. ಕೆಳಗೆ ದಟ್ಟವಾದ ಕಾಡು ಆಳವಾದ ಕಣಿವೆಗಳ ಪ್ರಕೃತಿ ಸಹಜವಾಗಿವೆ. ಉತ್ತರದ ಬಾಗಿಲನ್ನು ದಿನನಿತ್ಯದ ಓಡಾಟಕ್ಕಾಗಿ ಬಳಸಿರಬಹುದು. ಶಿಥಿಲಾವಸ್ಥೆಯಲ್ಲಿರುವ ಕೋಟೆಯು ೪ - ೫ ಅಡಿ ಎತ್ತರದ ಕಾಡುಗಲ್ಲಿನ ಗೋಡೆಗಳನ್ನು ಮಾತ್ರ ಇಲ್ಲಿ ಉಳಿಸಿಕೊಂಡಿದೆ.

ಕೋಟೆಯ ಮಹತ್ವ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕುವಲ್ಲಿಯೇ ಈ ಕೋಟೆಯ ಮಹತ್ವವನ್ನು ಅರಿಯಲಾಗಿದೆ. ಒಂದನೆಯದಾಗಿ ಮುಮ್ಮಡಿ ಸಿಂಗೆನಾಯಕ ಹಾಗೂ ಕಂಪಿಲರಾಯ ದೊರೆವದಿಯಿಂದ ಆಳುತ್ತಿದ್ದರು. ದೊರೆವದಿಯಿಂದ ತಮ್ಮ ರಾಜಧಾನಿಯನ್ನು ಹೊಸಮಲೆದುರ್ಗಕ್ಕೆ ಸ್ಥಳಾಂತರಿಸಿದರೇಕೆ? ಎರಡನೆಯದಾಗಿ ಕೊನೆಯವರೆಗೂ ಈ ದುರ್ಗದಲ್ಲೇಕೆ? ಆಶ್ರಯ ಪಡೆದರೆಂಬುದಕ್ಕೆ ಈ ಕೆಳಗಿನಂತೆ ಉತ್ತರ ಕಂಡುಕೊಂಡಿದೆ.

ಪಾಂಚಾಳಗಂಗನ ಒಂದು ಪ್ರತಿಯಲ್ಲಿ ಹೊಸಮಲೆಯನ್ನು ಕುರಿತು ಹೀಗೆ ಹೇಳಿದೆ. ಅದ್ವಿಪಾಂತರ ದಕ್ಷಿಣಭಾಗದೊಳಗೆ ತಾನೆಸೆದುದು ಹೊಸಮಲೆಯು ಎಂದು ಮೊದಲಾಗಿ ದೇಶದೊಳಧಿಕ ವೆಂದಿನಿಸುವ ಹೊಸಮಲೆ ಶೇಷ ಮಂಡಳಿಸಿದಂದದಲಿ ವಾಸವಾದ್ಯರಿಗೆ ಅಸಾಧ್ಯವೆಂಬಂತೆ ವಿಶೇಷ ವಲ್ಲಿಯ ಪರ್ವತವು ಎಂದು ಮುಂದುವರೆಯುತ್ತದೆ. ಅನಂತರ ಜೆಂಬುನೇರಲೆ, ದಾಳಿಂಬೆ, ಖರ್ಜೂರ, ದ್ರಾಕ್ಷಿ, ಅಂಬಟೆ, ಅರನೆಲ್ಲಿ, ಮಾವುಯಿಂಬ ಪಲಸು ತಂಗಕೇಡಿಯ ಮರಗಳು ಸಂಭ್ರಮದೊಳು ರಾಜಿಸುವವು ನಾಗ ಚಿತ್ರವು ರುದ್ರಾಕ್ಷಿಯು ಮತ್ತಿಯ ಮರ ಬಿಲ್ವಪತ್ರಗಳು ಅತ್ತಿ ಕಲ್ಹತ್ತಿ ಹೆಬ್ಬದಿರು ಕಿರು ಬಿದಿರಿನಿಂದ ಮೊತ್ತದಿಂದಲಿ ಪಸರಿಪುದು ಎಂಬುದಾಗಿ ಆ

ಎಡೆಯ ಗಿಡಮರಗಳ ಪ್ರಸ್ತಾಪವು ಬರುತ್ತದೆ.[೩೩] ಆಗ ಕವಿ ಬತ್ತಿ ನಡೆದನತಿ ಬೇಗದಿ ಕಂಪಿಲ ಮುತ್ತಿದನಾ ಹೊಸಮಲೆಯ ಎತ್ತ ನೋಡಿದರತ್ತಾ ದಟ್ಟಡವಿ ಎಂದಿದ್ದಾನೆ. ಕೆಲವರು ಈ ವರ್ಣನೆ ಹಂಪಿಯ ಬಳಿಯ ಕಮ್ಮಟದುರ್ಗದ್ದು ಎಂದಿದ್ದಾರೆ. ಪ್ರಾಯಶಃ ಈ ವರ್ಣನೆಗೆ ಪೂರಕವಾದ ಪರಸರವೂ ಹೊಸಮಲೆದುರ್ಗದಲ್ಲಿದೆ. ಹಾಗಾಗಿ ಹೆಚ್ಚಾಗಿ ಇದಕ್ಕೆ ಅನ್ವಯಿಸುವುದು.

ದೂರವದಿಯು ಬಯಲು ಪ್ರದೇಶವಾಗಿದ್ದು, ರಕ್ಷಣೆಗೆ ಅಷ್ಟೊಂದು ಪ್ರಶಸ್ತವಾಗಿರಲಿಲ್ಲ. ಮುಮ್ಮಡಿಸಿಂಗ ಹಾಗೂ ಕಂಪಿಲರಾಯರು ದೇವಗಿರಿಯ ಯಾದವ ರಾಮದೇವನ ಸಾಮಂತರಾಗಿದ್ದರು. ರಾಮದೇವನ ಮರಣಾನಂತರ ಸ್ವತಂತ್ರ್ಯ ರಾಜ್ಯವನ್ನು ನಿಭಾಯಿಸಲು ದೂರವದಿಗಿಂತ ಹೊಸಮಲೆ ಆಯಾಕಟ್ಟಿನ ಸ್ಥಳವೆಂದು ಅರಿತ ಕಂಪಿಲ, ಮುಮ್ಮಡಿ ಸಿಂಗನ ನಂತರ ರಾಜಧಾನಿಯನ್ನು ಹೊಸಮಲೆಗೆ ಸ್ಥಳಾಂತರಿಸಿ, ಇಲ್ಲಿಯೇ ಭದ್ರವಾದ ಕೋಟೆ ಯೊಂದನ್ನು ನಿರ್ಮಿಸಿದ. ಈ ಪ್ರದೇಶ ಆಭೇದ್ಯವಾದ ಕಾಡು, ಗಿರಿ-ಕಂದರಗಳಿಂದ ಸುತ್ತುವರೆದಿದೆ. ಶತ್ರುಪಡೆಯು ಅಷ್ಟು ಬೇಗನೆ ಈ ಪ್ರದೇಶವನ್ನು ಪತ್ತೆ ಹಚ್ಚುವ ಹಾಗಿರಲಿಲ್ಲ. ಹೀಗಾಗಿ ಹೊಸಮಲೆಗೆ ರಾಜಧಾನಿಯನ್ನು ಸ್ಥಳಾಂತರಿಸಲಾಗಿದೆ.

ಕುಮಾರರಾಮನ ಮೇಲೆ ಮೋಹಗೊಂಡ ರತ್ನಾಜಿ ನನ್ನ ಗಂಡ ವೃದ್ಧ, ಆತನಿಂದ ನನ್ನ ಬಯಕೆ ತೃಪ್ತಿಯಾಗಲಿಲ್ಲ. ನೀನು ನನ್ನೊಂದಿಗೆ ಸಮ್ಮಿಳನಗೊಂಡಲ್ಲಿ ಕಂಪಿಲರಾಯನಿಗೆ ವಿಷ ಪ್ರಯೋಗ ಮಾಡಿ ಕೊಂದು ನಿನಗೆ ಪಟ್ಟಾಭಿಷೇಕ ಮಾಡಿ "ಹೊಸಮಲೆದುರ್ಗ" ವನ್ನೂ ಸಹ ಕೊಡುತ್ತೇನೆಂದು ಹೇಳಿರುವ ವಿಷಯವು ಭಟರಹಳ್ಳಿ ಕೈಫಿಯತ್ತಿನಲ್ಲಿ ಬರುತ್ತದೆ.[೩೪] ಇಲ್ಲಿ ಹೊಸಮಲೆದುರ್ಗವು ಕುಮ್ಮಟದುರ್ಗದಷ್ಟೇ ಮಹತ್ವವನ್ನು ಪಡೆದುಕೊಂಡಿರು ವುದು ವ್ಯಕ್ತವಾಗುತ್ತದೆ.


ಎರಡನೆಯ ಪ್ರಶ್ನೆಗೆ ಉತ್ತರವಾಗಿ ಕುಮ್ಮಟದುರ್ಗಕ್ಕೆ ಶತ್ರುಗಳು ಆಕ್ರಮಿಸಿದರೆ ರಕ್ಷಣೆ ಪಡೆಯಲು ಹೊಸಮಲೆದುರ್ಗ ಯೋಗ್ಯ ಸ್ಥಳವಾಗಿತ್ತು. ನೇಮಿಯು ಕ್ರಿ.ಶ. ೧೩೨೭ ರಲ್ಲಿ ಕುಮ್ಮಟದುರ್ಗದ ಮೇಲೆ ಯುದ್ಧಕ್ಕೆ ಬಂದಾಗ ಕಂಪಿಲರಾಯನು ಕುಮಾರರಾಮನನ್ನು ಹೊಸಮಲೆದುರ್ಗಕ್ಕೆ ಹೋಗಲು ಸೂಚಿಸುತ್ತಾನೆ.[೩೫] ಆದರೆ ಕುಮಾರರಾಮ ತನ್ನ ತಂದೆ, ತಾಯಿ ಹರಿಯಾಲದೇವಿ ಈತನ ಆಶ್ರಿತ ಬಾಹದರಖಾನ್ ಇವರೆಲ್ಲರನ್ನೂ ಹೊಸಮಲೆದುರ್ಗಕ್ಕೆ ಕಳಿಸಿ ತಾನೊಬ್ಬನೆ ಯುದ್ಧಕ್ಕೆ ನಿಲ್ಲುತ್ತಾನೆ.[೩೬]

ಹೊಸಮಲೆದುರ್ಗ ಕುಮ್ಮಟದುರ್ಗದಂತೆ ನಿರ್ಜನವಾದ ಪ್ರದೇಶವಾಗಿರಲಿಲ್ಲ. ಆದ್ದರಿಂದ ಇತ್ತೀಚೆಗೆ ನಿರ್ಮಿಸಿದ ಪಾದ್ರಿ, ಬಂಗಲೆ, ಛತ್ರ, ಹಲಕೆಲವು ವಾಸದ ಮನೆಗಳು ಇಲ್ಲಿವೆ. ಈ ದುರ್ಗವೂ ತುಂಬಾ ಎತ್ತರದಲ್ಲಿರುವುದರಿಂದ ಬ್ರಿಟಿಷರ ಆಳ್ವಿಕೆಯಲ್ಲಿ ಬಳ್ಳಾರಿಯಲ್ಲಿದ್ದ ಮಿಲಟರಿಯವರು ಬಂದು ಇಲ್ಲಿ ತಂಗುತ್ತಿದ್ದ

ರೆಂದು ತಿಳಿದುಬರುತ್ತದೆ. ಇಂದಿಗೂ ಪಾದ್ರಿ ಬಂಗಲೆಗೆ ಕ್ರೈಸ್ತ ಸನ್ಯಾಸಿಯರು ಬೇಸಿಗೆಯ ಶಿಬಿರಕ್ಕಾಗಿ ಬಂದುಹೋಗುತ್ತಾರೆ. ಉತ್ತಮವಾದ ಹವಾಗುಣ ಇಲ್ಲಿರುವುದರಿಂದ ಮತ್ತು ರಕ್ಷಣೆಗೆ ಯೋಗ್ಯವಾಗಿರುವುದ ರಿಂದಲೇ ಕುಮ್ಮಟದ ಅರಸರು ಕೊನೆಯವರೆಗೂ ಈ ದುರ್ಗವನ್ನು ನೆಚ್ಚಿಕೊಂಡಿದ್ದರು.

ಕೋಟೆಯಲ್ಲಿರುವ ದೇವಾಲಯಗಳು

ಇಲ್ಲಿ ರಾಮನಾಥ, ಆಂಜನೇಯ, ತಾಯಮ್ಮನ ದೇವಾಲಯಗಳು ಹಾಗೂ ಹುಲಿಯಪ್ಪಯ್ಯನ ಮಠವೂ ಇದೆ. ಇವುಗಳಲ್ಲಿ ರಾಮನಾಥನ ದೇವಾಲಯವು ಮುಖ್ಯವಾಗಿದೆ. ಇದರಲ್ಲಿ ಗರ್ಭಗೃಹ ಮತ್ತು ತೆರೆದ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಲಿಂಗವಿದೆ. ಕುಮಾರರಾಮನ ಕತ್ತರಿಸಿದ ರುಂಡವು ಈ ಲಿಂಗದ ರೂಪ ಪಡೆಯಿತ್ತೆಂದು ನಂಬಿಕೆ. ಲಿಂಗದ ಹಿಂಭಾಗದಲ್ಲಿ ಕೇಶವನ ಶಿಲ್ಪವಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ಕಂಬಗಳಿವೆ. ಹಾಗೂ ಬಿಲ್ಲು ಬಾಣ ಹಿಡಿದ ವೀರರ ಶಿಲ್ಪವಿದೆ. ದೇವಾಲಯದ ಬಲಭಾಗದ ಮುಂದಿರುವ ಶಾಸನ ಕಲ್ಲಿನ ಮೇಲ್ಭಾಗದಲ್ಲಿ ಲಿಂಗ, ನಂದಿ ಮತ್ತು ವೀರನ ಶಿಲ್ಪಗಳಿವೆ. ವೀರನು ಲಿಂಗದ ಮುಂದೆ ಕೈಮುಗಿದು ನಿಂತಿದ್ದಾನೆ. ಈ ವೀರನೇ ಕುಮಾರರಾಮ.[೩೭] ಶಾಸನ ಕಲ್ಲಿನ ಕೆಳಭಾಗದಲ್ಲಿ ಕಮಾನಿನಾಕಾರದ ಗೂಡಿನಲ್ಲಿ ಕೈಮುಗಿದು ನಿಂತ ಮಹಿಳೆಯ ಶಿಲ್ಪವಿದೆ. ಈಕೆ ಗೋಪಾಯಿ. ಗೋಪಾಯಿಯೇ ಈ ಗುಡಿಯನ್ನು ಕ್ರಿ.ಶ. ೧೫೨೭ ರಲ್ಲಿ ಕಟ್ಟಿಸಿದಂತೆ ಈ ಶಾಸನದಲ್ಲಿ ವ್ಯಕ್ತವಾಗಿದೆ.[೩೮]



ರಾಮಸ್ವಾಮಿ ದೇವಾಲಯ

೧೬ ನೆಯ ಶತಮಾನದಲ್ಲಿ ನಿರ್ಮಾಣವಾದ ದೇವಾಲಯವು ಇತ್ತೀಚೆಗೆ ಪೂರ್ಣ ಜೀರ್ಣೋದ್ಧಾರಗೊಂಡು ಹಳೇ ರೂಪವನ್ನು ಕಳೆದುಕೊಂಡಿದೆ. ಇದರ ಮುಂದೆ ಗರುಡ ಗಂಬವಿದೆ. ಆಗ್ನೇಯಕ್ಕೆ ಹತ್ತಿರದಲ್ಲಿ ಗಣೇಶ, ಕಾಳಿ, ತ್ರಿಶೂಲ ಹಾಗೂ ಡಮರು ಹಿಡಿದ ಶೈವದೇವತೆ. ಭೈರವ ವಿಷ್ಣು, ತೀರ್ಥಕರನ ಪ್ರಭಾವಳಿ, ನಾಗರಕಲ್ಲು



ಮತ್ತು ವೀರಗಲ್ಲುಗಳಿವೆ. ಈ ವೀರಗಲ್ಲಿನಲ್ಲಿ ಕ್ರಿ.ಶ. ೧೩೨೩ ರ ಶಾಸನವಿದೆ. ಹೊಯ್ಸಳ ಮೂರನೆಯ ಬಲ್ಲಾಳನು ಕಂಪಿಲನ ಮೇಲೆ ದಂಡೆತ್ತಿ ಬಂದಾಗ ಬಯಿಚ ಚೋವನು ಯುದ್ಧದಲ್ಲಿ ಹೋರಾಡಿ ವೀರಸ್ವರ್ಗವನ್ನು ಪಡೆದನೆಂದು ಈ ಶಾಸನ ತಿಳಿಸುವುದು.[೩೯]

ಇತ್ತೀಚೆಗೆ ನಿರ್ಮಿಸಲಾದ ಆಂಜನೇಯ ದೇವಾಲಯದಲ್ಲಿ ಪ್ರಾಚೀನವೆನ್ನಬಹುದಾದ ಎರಡು ಆಂಜನೇಯ ಶಿಲ್ಪಗಳು ಹಾಗೂ ಶಿವಲಿಂಗವಿದೆ. ಇಲ್ಲಿಯ ತಾಯಮ್ಮ ದೇವಾಲಯ ಹೊಸದು. ಇದರ ಬಳಿ ದಂಪತಿಗಳು ಕೈಮುಗಿದು ನಿಂತ ವೀರಗಲ್ಲಿದೆ. ಹುಲಿಮಾನಪ್ಪ ಹಾಗೂ ವೀರಭದ್ರ ಶಿಲ್ಪಗಳನ್ನೊಳಗೊಂಡ ಶಿಥಿಲಾವಸ್ಥೆಯ ದೇವಾಲಯವೊಂದಿದೆ. ಹುಲಿಯ ಮೇಲೆ ಸವಾರನಾಗಿರುವ ಮಾನಪ್ಪನು ಎರಡು ಕೈಗಳಲ್ಲಿ ಹಾವುಗಳನ್ನು ಹಿಡಿದಿದ್ದಾನೆ. ಕೆಳಗೆ ಕೋಲು ಹಿಡಿದು ನಿಂತ ಇಬ್ಬರು ಗಡ್ಡದಾರಿ ಪುರುಷರಿದ್ದಾರೆ. ಈ ಗುಡಿಯ ಮುಂದೆ ಭೈರವ, ವೀರಗಲ್ಲು ಹಾಗೂ ಸ್ತ್ರೀ ಶಿಲ್ಪಗಳಿವೆ. ರಾಮನಾಥನ ದೇವಾಲಯದ ನೈರುತ್ಯಕ್ಕೆ ಉದ್ದ-ದಪ್ಪನೆಯ ಗೋಡೆಗಳು, ಬಾಗಿಲಾವಶೇಷಗಳು, ವಿಶಾಲ ಸ್ಥಳವಿದೆ. ಇವುಗಳಿಂದ ಇವು ಅರಮನೆ ಕಟ್ಟಡಕ್ಕೆ ಸಂಬಂಧಿಸಿದವೆಂದು ಊಹಿಸಬಹುದು. ಇದೇ ಕಂಪಿಲನ ಅರಮನೆಯೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಕ್ರಿ.ಶ. ೧೫೨೫ ರ ಶಾಸನದಲ್ಲಿ ಹರಿಯಾಳ ದೇವಿ ನಿವಾಸವೆಂದು ಗುರುತಿಸಿದೆ.[೪೦]

ಟಿಪ್ಪಣಿಗಳು

೧. ಕಲಬುರ್ಗಿ, ಎಂ.ಎಂ. (ಸಂ.), ೧೯೯೪. *ಕರ್ನಾಟಕದ ಕೈಫಿಯತ್ತುಗಳು.* ಹಂಪಿ : ಕನ್ನಡ ವಿಶ್ವವಿದ್ಯಾಲಯ.
೨. *Ec, XI,* p.86. Hiriyur
೩. *Ec, XI,* p.37. Holalkere
೪. *Ec, XV,* p-83. Holenarasipur
೫. *Ec, VIII (Part II),* p. 19. Nagar
೬. *ARSIE,* 1943-45. No.75 of 1943-44
೭. *Ec, XV,* p.83. Holenarasipur
೮. ವರದರಾಜ್‌ರಾವ್, ಜಿ. ೧೯೬೬. *ಕುಮಾರರಾಮನ ಸಾಂಗತ್ಯಗಳು,* ಪು. ೨೭೫. ಮೈಸೂರು : ಮೈಸೂರು ವಿಶ್ವವಿದ್ಯಾಲಯ
೯. ಅಭಿಶಂಕರ. ೧೯೯೦. 'ಕಂಪಲಿ/ಕುಮ್ಮಟ, ಚಿಕ್ಕರಾಜ್ಯದ ದೊಡ್ಡ ಮಾರ್ಮಿಕ ಪಾತ್ರ' *ಇತಿಹಾಸ ದರ್ಶನ - ೫.* ಪು. ೧೩೮
೧೦. *ಅದೇ,* ಪು. ೧೩೯
೧೧. *ಅದೇ,* ಪು. ೧೪೦
೧೨. *Ec, XXIII,* p. 185
೧೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧,* ಪು. ೨೦೩. ಹಂಪಿ : ಕನ್ನಡ ವಿಶ್ವವಿದ್ಯಾಲಯ
೧೪. *ಕುಮಾರರಾಮನ ಸಾಂಗತ್ಯಗಳು,* ಪೂರ್ವೋಕ್ತ. ಪು. ೨೮೭
೧೫. ಚನ್ನಬಸಪ್ಪ, ಎಸ್. ಪಾಟೀಲ. ೧೯೯೯. *ಕರ್ನಾಟಕದ ಕೋಟೆಗಳು,* ಪು. ೬೬. ಹಂಪಿ : ಕನ್ನಡ ವಿಶ್ವವಿದ್ಯಾಲಯ
೧೬. ವರದರಾಜ್‌ರಾವ್, ಜಿ. ೧೯೮೫. *ಕುಮ್ಮಟ ದುರ್ಗ.* ಬೆಂಗಳೂರು : ಐ.ಬಿ.ಎಚ್. ಪ್ರಕಾಶನ
೧೭. Francis, W. 1972. *Bellary Gazetteer,* p. 323

೧೮. Derrett, J.D.M. *The Hoysals* - ಊಹೆಗಳು

೧೯. *ಕುಮಾರರಾಮನ ಸಾಂಗತ್ಯಗಳು*, ಪೂರ್ವೋಕ್ತ. ಪು. ೧೦೦

೨೦. *ಅದೇ*, ಪು. ೧೦೦

೨೧. *ಅದೇ*, ಪು. ೨೬೪

೨೨. *ಕರ್ನಾಟಕದ ಕೋಟೆಗಳು*, ಪೂರ್ವೋಕ್ತ. ಪು. ೬೬

೨೩. *ಅದೇ*, ಪು. ೬೬

೨೪. *ಕುಮ್ಮಟ ದುರ್ಗ*, ಪೂರ್ವೋಕ್ತ. ಪು. ೨೮

೨೫. *ಅದೇ*, ಪು. ೨೯.

೨೬. *ಅದೇ*, ಪು. ೩೯.

೨೭. *ಕರ್ನಾಟಕದ ಕೋಟೆಗಳು*, ಪೂರ್ವೋಕ್ತ. ಪು. ೬೬

೨೮. *ಕುಮ್ಮಟ ದುರ್ಗ*, ಪೂರ್ವೋಕ್ತ. ಪು. ೩೯

೨೯. *ಕರ್ನಾಟಕದ ಕೋಟೆಗಳು*, ಪೂರ್ವೋಕ್ತ. ಪು. ೬೬

೩೦. *ಕುಮ್ಮಟ ದುರ್ಗ*, ಪೂರ್ವೋಕ್ತ. ಪು. ೩೯

೩೧. *ಕರ್ನಾಟಕದ ಕೋಟೆಗಳು*, ಪೂರ್ವೋಕ್ತ. ಪು. ೬೬

೩೨. *ಕುಮ್ಮಟ ದುರ್ಗ*, ಪೂರ್ವೋಕ್ತ. ಪು. ೩೯

೩೩. *ಕುಮಾರರಾಮನ ಸಾಂಗತ್ಯಗಳು*, ಪೂರ್ವೋಕ್ತ. ಪು. ೩೬೨

೩೪. *ಕರ್ನಾಟಕದ ಕೈಫಿಯತ್ತುಗಳು*, ಪೂರ್ವೋಕ್ತ. ಪು. ೪೭೨

೩೫. *ಅದೇ*, ಪು. ೪೮೩

೩೬. *ಅದೇ*, ಪು. ೪೮೪

೩೭. *ಕರ್ನಾಟಕದ ಕೋಟೆಗಳು*, ಪೂರ್ವೋಕ್ತ. ಪು. ೭೦

೩೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೨೦೩

೩೯. *ಅದೇ*, ಪು. ೨೦೩

೪೦. *ಅದೇ*, ಪು. ೨೦೩

❑❑

೬

ಶಿರುಗುಪ್ಪ ತಾಲೂಕಿನ ಕೋಟೆಗಳು

(Forts of Siruguppa Taluk)

೬

ಶಿರುಗುಪ್ಪ ತಾಲೂಕಿನ ಕೋಟೆಗಳು

(Forts of Siruguppa Taluk)

ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವಾದ ಶಿರುಗುಪ್ಪ ಬಳ್ಳಾರಿಯಿಂದ ಸುಮಾರು ೫೬ ಕಿ.ಮೀ. ದೂರದಲ್ಲಿದೆ. ದಕ್ಷಿಣದಲ್ಲಿ ಬಳ್ಳಾರಿ, ನೈರುತ್ಯದಲ್ಲಿ ಹೊಸಪೇಟೆ ತಾಲೂಕುಗಳು, ಪಶ್ಚಿಮದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ರಾಯಚೂರು ಜಿಲ್ಲೆಯ ಸಿಂಧನೂರು, ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶವೂ ಈ ತಾಲೂಕನ್ನು ಸುತ್ತುವರೆದಿದೆ. ಈ ತಾಲೂಕಿನಲ್ಲಿ ಹಚ್ಚೊಳ್ಳಿ, ಶಿರುಗುಪ್ಪ, ತೆಕ್ಕಲಕೋಟೆ ಮತ್ತು ಕರೂರುಗಳು ಹೋಬಳಿ ಕೇಂದ್ರಗಳು.

ತಾಲೂಕಿನ ಪಶ್ಚಿಮ ಮತ್ತು ವಾಯುವ್ಯ ಭಾಗದ ಉದ್ದಕ್ಕೂ ಈಶಾನ್ಯಾಭಿಮುಖವಾಗಿ ಈ ತಾಲೂಕನ್ನು ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಂದ ವಿಂಗಡಿಸಿಕೊಂಡು ತುಂಗಭದ್ರಾ ನದಿ ಹರಿಯುತ್ತದೆ. ತುಂಗಭದ್ರಾ ನದಿಯಿಂದಾಗಿಯೇ ಈ ಪ್ರದೇಶ ಸಂಪದ್ಭರಿತವಾಗಿರುವುದು. ಹಾಗಾಗಿಯೇ ಈ ಪಟ್ಟಣಕ್ಕೆ ಶಿರುಗುಪ್ಪ ಎಂಬ ಹೆಸರು ಬಂದಿದೆ. ಸಿರಿ ಎಂದರೆ ಐಶ್ವರ್ಯ, ಗುಪ್ಪೆ ಎಂದರೆ ಗುಂಪು, ರಾಶಿ ಎಂದರ್ಥ. ಈ ಹಿನ್ನೆಲೆಯಲ್ಲಿ ಶಿರುಗುಪ್ಪ ಎಂದರೆ ಐಶ್ವರ್ಯದ ರಾಶಿ ಎಂಬರ್ಥ ನೀಡುತ್ತದೆ. ಕ್ರಿ.ಶ. ೧೯೧೧ರ ಶಾಸನದಲ್ಲಿ[1] ಶಿರುಗುಪ್ಪ ತೆಕ್ಕೆಕಲ್ಲು ೧೨ಕ್ಕೆ ಸೇರಿದಂತೆ ಹೇಳಿದೆ. ಸಿಂಧು ಕುಳಾನ್ವಯಂ ಎಂಬುದರಿಂದ ಶಿರುಗುಪ್ಪ ಹೆಸರು ಉಂಟಾಗಿರಬೇಕು[2] ಎನ್ನುವ ಕುಂ.ಬಾ.ಸದಾಶಿವಪ್ಪನವರ ಅಭಿಪ್ರಾಯವು ಸ್ಪಷ್ಟವಾಗಿರುವುದಿಲ್ಲ.

ನೈಸರ್ಗಿಕವಾಗಿ ಸಂಪದ್ಭರಿತವಾಗಿರುವಂತೆಯೇ ಈ ತಾಲೂಕು ಐತಿಹಾಸಿಕವಾಗಿಯೂ ಸಂಮೃದ್ಧವಾಗಿದೆ. ಈ ತಾಲೂಕಿನ ನಿಟ್ಟೂರಿನಲ್ಲಿ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ಉಪಕರಣಗಳು ಬಾಸೆ ನೊಮಿಡಕಸ್

(ಪ್ರಾಣಿಯ ಅಸ್ಥಿ ಅವಶೇಷ) ದೊರೆತಿವೆ.[೩] ನಿಟ್ಟೂರು ಹಾಗೂ ಹತ್ತಿರದ ಸುಕ್ರದಪ್ಪ ಬೆಟ್ಟಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿಗಳು ಪತ್ತೆಯಾಗಿವೆ.[೪] ಕೊಂಚಗೇರಿ, ಕೋಟೆಕಲ್ಲು, ದುರ್ಗಹಳ್ಳಿ, ತೆಕ್ಕಲಕೋಟೆ, ನಿಟ್ಟೂರು, ಸನವಾಸಪುರಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಉಜ್ಜಿ ನಯಗೊಳಿಸಿದ ಕೊಡಲಿಗಳು, ಮಡಿಕೆಗಳು ಮತ್ತು ನೀಳಗೆರೆಗಳುಳ್ಳ ಮೂಲ ಶಿಲಾಗಚ್ಚಿಗಳು ಕಂಡುಬಂದಿವೆ.[೫] ಇನ್ನು ಇತಿಹಾಸ ಆರಂಭ ಯುಗದ ಅವಶೇಷಗಳು ನಡಿವಿ, ಉದೇಗೊಳಂ, ಬಾಗೇವಾಡಿ, ಹಚ್ಚೊಳ್ಳಿ ಮತ್ತು ಹಿರೇಕಲ್ಲುಗಳಲ್ಲಿವೆ.[೬] ಹೀಗೆ ಪ್ರಾಗಿತಿಹಾಸ ಕಾಲದ ಮಾನವನ ಬದುಕು ಈ ಪ್ರದೇಶದುದ್ದಕ್ಕೂ ಸಾಗಿ ಪ್ರಾಚೀನತೆಯ ಮಹತ್ವವನ್ನು ಹೆಚ್ಚಿಸಿದೆ.

ಈ ತಾಲೂಕಿನಲ್ಲಿ ಇತಿಹಾಸ ಪೂರ್ವಕಾಲದ ಅವಶೇಷಗಳು ವ್ಯಾಪಕವಾಗಿ ಕಂಡುಬಂದರೂ ಇತಿಹಾಸ ಕಾಲದ ಶಾಸನಗಳು ದೊರೆತಿದ್ದುದು ಮೌರ್ಯರ ಕಾಲದಿಂದೀಚೆಗೆ. ೧೯೭೭ ರಲ್ಲಿ ಉದೇಗೊಳ್[೭] ಮತ್ತು ನಿಟ್ಟೂರು[೮] ಸ್ಥಳಗಳಲ್ಲಿ ಬಂಡೆಗಳ ಮೇಲೆ ಬರೆದ ಅಶೋಕನ ಎರಡೆರಡು ಶಾಸನಗಳು ಬೆಳಕಿಗೆ ಬಂದವು. ಇದರೊಂದಿಗೆ ಮೌರ್ಯರ ನೇರ ಆಡಳಿತಕ್ಕೆ ಈ ಪ್ರದೇಶ ಸೇರಿತೆಂಬ ಅಂಶ ಬೆಳಕಿಗೆ ಬರುವುದು. ಈ ಪ್ರದೇಶದ ರಕ್ಷಣೆಗಾಗಿ ಅವರು ಈ ಭಾಗದಲ್ಲಿ ಆ ವೇಳೆಗಾಗಲೇ ಕೋಟೆ ಕಟ್ಟಿಕೊಂಡಿರಬೇಕು. ಬಹು ದೀರ್ಘಾವಧಿ ಕಾಲದ ಅಂತರದಿಂದ ಅವರ ಕೋಟೆಗಳಾವುವು ಈಗ ಉಳಿದುಕೊಂಡಿಲ್ಲ.

ಶಾತವಾಹನರು ಮತ್ತು ಪಲ್ಲವರ ಆಡಳಿತ ವ್ಯಾಪ್ತಿಗೆ ಈ ಪ್ರದೇಶವು ಸೇರಿತ್ತು. ಆದರೆ ಅವರು ಇಲ್ಲಿ ಆಳ್ವಿಕೆ ಮಾಡಿದಂತೆ ಯಾವ ದಾಖಲೆಗಳು ಹೇಳುವುದಿಲ್ಲ. ಬಾದಾಮಿ ಚಾಳುಕ್ಯರ ಯಾವುದೇ ಶಾಸನಗಳಾಗಲಿ ಅಥವಾ ಸ್ಮಾರಕಗಳಾಗಲಿ ಇಲ್ಲಿ ಕಂಡುಬರುವುದಿಲ್ಲವಾದರೂ ಹತ್ತಿರದ ಕುರುಗೋಡಿನಲ್ಲಿ ಸತ್ಯಾಶ್ರಯನ ಉಲ್ಲೇಖವಿರುವ ಬಾದಾಮಿ ಚಾಳುಕ್ಯರ ಶಾಸನವು ಕಂಡು ಬಂದಿರುವುದರಿಂದ,[೯] ಈ ಪ್ರದೇಶವು ಬಾದಾಮಿ ಚಾಳುಕ್ಯರಿಗೆ ಸೇರಿರುವ ಅಂಶ ತಿಳಿಯುವುದು.

ರಾಷ್ಟ್ರಕೂಟರ ಶಾಸನಗಳು ಹಾಗೂ ಸ್ಮಾರಕವಶೇಷಗಳು ನೆರೆಯ ಬಳ್ಳಾರಿ ತಾಲೂಕಿನ ಕುಡುತಿನಿ[೧೦] ಹಾಗೂ ಕೋಳಕಲ್ಲುಗಳಲ್ಲಿ ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಶಿರುಗುಪ್ಪ ಪ್ರದೇಶವು ಅವರ ಆಳ್ವಿಕೆಯ ವ್ಯಾಪ್ತಿಗೆ ಒಳಪಟ್ಟಿರುವುದರಲ್ಲಿ ಸಂದೇಹವಿಲ್ಲ.

ರಾಷ್ಟ್ರಕೂಟರ ಪತನಾನಂತರ ಈ ಪ್ರದೇಶವು ಕಲ್ಯಾಣ ಚಾಳುಕ್ಯರ ನೇರ ಆಡಳಿತ ವ್ಯಾಪ್ತಿಗೆ ಸೇರಿರುವುದು ಶಾಸನಾಧಾರಗಳಿಂದ ದೃಢವಾಗುತ್ತದೆ. ಇವರ ಶಾಸನಗಳು ತಾಲೂಕಿನ ಕಂಚುಗಾರ ಬೆಳಗಲ್ಲು, ಮಲ್ಲಯ್ಯನ ಗುಡ್ಡ, ಬಲಕುಂದೆಗಳಲ್ಲಿದ್ದು,[೧೧] ದೇವಾಲಯಗಳು ಅಲಬನೂರು, ಕುರುವಳ್ಳಿ, ಕೊಂಚಗೇರಿ, ತೆಕ್ಕಲಕೋಟೆ, ನಾಗಲಾಪುರ, ಬಾಗೇವಾಡಿ, ರಾರಾವಿ, ರಾವಿಹಾಳ್, ಸಿರಿಗೇರಿ, ಶಿರುಗುಪ್ಪ, ಆಲೂರುಗಳಲ್ಲಿ ಕಂಡುಬಂದಿವೆ.[೧೨] ಹಾಗಾಗಿ ಕಲ್ಯಾಣ ಚಾಳುಕ್ಯರ ಬಹು ಮುಖ್ಯ ಕೇಂದ್ರ ಈ ತಾಲೂಕಾಗಿತ್ತು.

ಕಲ್ಯಾಣ ಚಾಳುಕ್ಯರ ಆಧೀನವಾಗಿ ಆಳ್ವಿಕೆ ಮಾಡಿದ ನೊಳಂಬರು ನೊಳಂಬವಾಡಿ ೩೨೦೦೦ ಕ್ಕೆ ಅಧಿಪತಿಗಳಾಗಿದ್ದರು. ನೊಳಂಬವಾಡಿ ಪ್ರಾಂತದ ಕೇಂದ್ರ ಭಾಗವೇ ಶಿರುಗುಪ್ಪ ತಾಲೂಕು. ನೊಳಂಬವಾಡಿ ಪ್ರಾಂತದಲ್ಲಿ ದೊರವದಿ - ೭೦, ಕುದಿಪರವಿ - ೭೦, ಬಲಕುಂದೆ - ೩೦೦, ತೆಕ್ಕೆಕಲ್ಲು - ೧೨, ಕರವಿಡಿ - ೭೦ ಗಳು ಸೇರಿದ್ದವು.[೧೩] ಬಲಕುಂದೆ ಮತ್ತು ತೆಕ್ಕೆಕಲ್ಲು ಈ ತಾಲೂಕಿನಲ್ಲಿವೆ.[೧೪] ಈ ಕಾಲಾವಧಿಯಲ್ಲಿ ಇಲ್ಲಿ ಕೋಟೆಗಳು ಇದ್ದಿರಬಹುದಾದರೂ ಅವುಗಳ ಅವಶೇಷಗಳಾಗಲಿ, ದಾಖಲೆಗಳಾಗಲಿ ಉಳಿದಿರುವುದಿಲ್ಲ.

ಈ ತಾಲೂಕಿನ ರಾವಿಹಾಳ್,[೧೫] ಅಗಸನೂರು,[೧೬] ಗುಂಡಿಗನೂರು,[೧೭] ಮಲ್ಲಯ್ಯನ ಗುಡ್ಡ[೧೮]ಗಳಲ್ಲಿ ವಿಜಯನಗರ ಶಾಸನಗಳು ಕಂಡುಬಂದಿರುವುದರಿಂದ ಈ ತಾಲೂಕು ಮಲ್ಲಯ್ಯನ ಗುಡ್ಡ, ತೆಕ್ಕಲಕೋಟೆ, ಶಿರುಗುಪ್ಪ, ಹಳೇಕೋಟೆಗಳಲ್ಲಿ ಕೋಟೆ ಇದ್ದುದು ತಿಳಿದುಬಂದರು ಈಗ ಉಳಿದಿರುವುದು ತೆಕ್ಕಲಕೋಟೆ ಮತ್ತು ಶಿರುಗುಪ್ಪಗಳಲ್ಲಿ ಮಾತ್ರ.

ಶಿರುಗುಪ್ಪ ಪ್ರದೇಶವನ್ನು ಹಂಪೆ ಪಾಳೆಯಗಾರರು, ಸ್ಥಳೀಯ ಪ್ರತಿನಿಧಿಗಳು, ಗೌಡರು ಆಳ್ವಿಕೆ ಮಾಡಿ ಕೋಟೆಗಳನ್ನು ಕಟ್ಟಿಸಿದಂತೆ ಇಲ್ಲಿಯ ಶಾಸನಗಳು ಹೇಳುತ್ತವೆ. ಅಂಥವುಗಳಲ್ಲಿ ಕೆಂಚನಗುಡ್ಡ, ನಡಿವಿ ಕೋಟೆಗಳು ಮುಖ್ಯವಾಗಿವೆ. ಹಾವಿನಾಳು, ಶಿರಗೇರಿ, ಕರೂರುಗಳಲ್ಲಿ ಕೋಟೆಗಳಿದ್ದವೆಂದು ಕೈಫಿಯತ್ತಿನಲ್ಲಿ[೧೯] ಹೇಳಲಾಗಿದೆ. ಈಗಲೂ ಕಂಡುಬರುವುದಿಲ್ಲ.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು, ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧,* ಪು. ೯೨-೯೩. ಹಂಪಿ : ಕನ್ನಡ ವಿಶ್ವವಿದ್ಯಾಲಯ
೨. ಕುಂಬಾಸ. ೧೯೯೪. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ.* ಕುಂಚೂರು : ಮಾಲತೇಶ ಪ್ರಕಾಶನ
೩. Sankalia, H.D. 1974. *Prehistory and Protohistory of India and Pakistan.* Pune : Deccan College
೪. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕದ ಪುರಾತತ್ವ ನೆಲೆಗಳು,* ಪು. ೩೫೯. ಹಂಪಿ : ಕನ್ನಡ ವಿಶ್ವವಿದ್ಯಾಲಯ
೫. *ಅದೇ,* ಪು. ೫೫೮, ೫೬೦
೬. *ಅದೇ,* ಪು. ೫೫೮, ೫೫೯
೭. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೧೨೪
೮. *ಅದೇ,* ಪು. ೧೨೫
೯. *SII IX* (Pt.1) No. 53
೧೦. *SII IX* (Pt.1) No. 70
೧೧. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪುಟ ೯೧, ೧೩೩
೧೨. ಸುರೇಶ್, ಕೆ.ಎಂ. ಮತ್ತು ಇತರರು. ೨೦೦೨. *ಕರ್ನಾಟಕ ದೇವಾಲಯ ಕೋಶ : ಬಳ್ಳಾರಿ ಜಿಲ್ಲೆ,* ಪು. ೧೬೦, ೨೦೨. ಹಂಪಿ : ಕನ್ನಡ ವಿಶ್ವವಿದ್ಯಾಲಯ
೧೩. ನಾಗಯ್ಯ, ಜೆ.ಎಂ. ೨೦೦೨. *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ,* ಪು. ೨೨. ಬಳ್ಳಾರಿ : ಲೋಹಿಯಾ ಪ್ರಕಾಶನ
೧೪. *ಅದೇ,* ಪು. ೨೧
೧೫. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೧೦೬, ೧೦೭
೧೬. *ಅದೇ,* ಪು. ೧೦೮
೧೭. *ಅದೇ,* ಪು. ೧೨೧
೧೮. *ಅದೇ,* ಪು. ೧೩೪
೧೯. ಕಲಬುರ್ಗಿ, ಎಂ.ಎಂ. ೧೯೯೪. *ಕರ್ನಾಟಕದ ಕೈಫಿಯತ್ತುಗಳು,* ಪು. ೪೫೭. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೬.೧ ಕೆಂಚನಗುಡ್ಡ

ಕೆಂಚನಗುಡ್ಡ ಶಿರುಗುಪ್ಪ ತಾಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ. ಶಿರುಗುಪ್ಪದಿಂದ ನೈರುತ್ಯ ದಿಕ್ಕಿಗೆ ೬ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯ ಬಲದಂಡೆಯ ಮೇಲಿದೆ. ಕೆಂಚನಗುಡ್ಡದ ಪರ್ವತ ಶ್ರೇಣಿಯು ದಕ್ಷಿಣಕ್ಕೆ ನಿಟ್ಟೂರು ಉದೇಗೋಳಂ ಮೂಲಕ ತೆಕ್ಕಲಕೋಟೆ ಪರ್ವತ ಶ್ರೇಣಿಗೆ ಸೇರುತ್ತದೆ. ನಿಟ್ಟೂರು, ಉದೇಗೊಳಂದಂತೆಯೇ ಬಹು ಪ್ರಾಚೀನವಾದ ನೆಲೆ. ಇದು ಪ್ರಸಿದ್ಧಿಗೆ ಬಂದಿದ್ದು ವಿಜಯನಗರೋತ್ತರದಲ್ಲಿ ಕ್ರಿ.ಶ. ೧೪೬೬ರ ದೇವರಾಯನ ಶಾಸನವು ಕೆಂಚನಗುಡ್ಡದ ಬಳಿಯ ತುಂಗಭದ್ರಾ ನದಿಗೆ ಆಣೆಕಟ್ಟನ್ನು ಕಟ್ಟಿದಂತೆ ಹೇಳುತ್ತದೆ.[೧] ಹಾಗಾಗಿ ವಿಜಯನಗರ ಅರಸರ ನೇರ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿರುವುದು ಸ್ಪಷ್ಟವಾಗುತ್ತದೆ.

ಕನ್ನಡ ನಿಘಂಟುಗಳಲ್ಲಿ ಬರುವ ಕಾಂಚನ ಎಂಬುದರ ಶಾಬ್ದಿಕ ಅರ್ಥವು ಬಂಗಾರ, ಪ್ರಕಾಶ, ಕಾಂತಿ ಎಂಬ ಪದಗಳನ್ನು ನಿರ್ದೇಶಿಸುತ್ತಿದ್ದು ಈಗಲೂ ಕೆಂಚನಗುಡ್ಡದ ಸುತ್ತಲೂ ಕಲ್ಲುಗಳು ಪ್ರಕಾಶಮಾನವಾಗಿ ಹೊಳೆಯುವವು. ಹಾಗಾಗಿ ಇಲ್ಲಿರುವ ಬೆಟ್ಟಕ್ಕೆ ಕಾಂಚನಗುಡ್ಡ ಎಂದು ಕರೆದಿರಬಹುದೇ?

ಈ ಸ್ಥಳವನ್ನಾಳುತ್ತಿದ್ದ ಕೆಂಚನಗೌಡನಿಂದಾಗಿ ಈ ಮೇಲಿನ ಕೋಟೆಗೆ ಕೆಂಚನಗುಡ್ಡ ಎಂಬ ಹೆಸರು ಬಂದಿದೆ ಎಂಬ ಅಂಶವು ಗ್ಯಾಸಿಟಿಯರ್‌ನಲ್ಲಿದೆ.[೨] ಈ ವಿಷಯವನ್ನು ಒಪ್ಪಬಹುದಾದುದಕ್ಕೆ ಈ ಕೆಳಗಿನಂತೆ ಸ್ಪಷ್ಟನೆ ನೀಡಲಾಗಿದೆ.

ಕೆಂಚನಗೌಡ ಎಂಬಾತನು ಮಂಗಾಪುರದ ಭೂಮಿಯೊಳಗೆ ಗುಡ ಹೊಸೂರು ದುರ್ಗವನ್ನು ನಿರ್ಮಿಸಿದಂತೆ ಕ್ರಿ.ಶ. ೧೭೦೮ರ ಶಾಸನವು ಹೇಳುತ್ತದೆ.[೩] ಮುದುಕಣ ಗೌಡನು ಶಿರುಗುಪ್ಪ ಸೀಮೆಯ ನಾಡ ಗೌಡಿಕೆಯನ್ನು ಪಡೆದು ಅಲ್ಲಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಆಗ ಈತನ ಮಗನಾದ ಕೆಂಚನಗೌಡ ಎಂಬಾತನಿಗೆ ಮಂಗಾಪುರ ಗ್ರಾಮವನ್ನು ಉಮ್ಮಳಿಯಾಗಿ ನೀಡಲಾಗಿತ್ತು. ಆಗ ಉಮ್ಮಳಿಯಾಗಿ ದೊರೆತ ಮಂಗಾಪುರ ಮತ್ತದರ ಬೆಟ್ಟದಲ್ಲಿ ಕೆಂಚನಗೌಡನು ಕೋಟೆಯನ್ನು ಕಟ್ಟಿಕೊಂಡು ಆಳ್ವಿಕೆ ಮಾಡಿದನು. ಹಾಗಾಗಿ ಕೆಂಚನಗೌಡನ ಹೆಸರೇ ಆ ಬೆಟ್ಟಕ್ಕೂ ಹಾಗೂ ಗ್ರಾಮಕ್ಕೆ ಬಂದಿದೆಂಬ ಅಂಶ ಗಂಗಾಧರೇಶ್ವರ ದೇವಾಲಯದ ಆರವರಣದಲ್ಲಿರುವ ಶಾಸನದಿಂದ ತಿಳಿದುಬರುತ್ತದೆ.[೪] ಹಾಗಾಗಿ ಕೆಂಚನಗೌಡನೆಂಬ ಪಾಳೆಯಗಾರನಿಂದಾಗಿಯೇ ಈ ಗ್ರಾಮಕ್ಕೆ ಕೆಂಚನಗುಡ್ಡ ಎಂಬ ಹೆಸರು ಬಂದಿರುವುದು ಸರಿಯಾಗಿಯೇ ಇದೆ.

ಹೈದರಾಲಿ, ಟಿಪ್ಪುವಿನ ಗಡಿಪ್ರದೇಶವಾಗಿ ಮುಂದೆ ಸ್ವಾತಂತ್ರ್ಯ ಬರುವವರೆಗೂ ಬ್ರಿಟಿಷರ ಆಡಳಿತ ವ್ಯಾಪ್ತಿಗೆ ಈ ಗ್ರಾಮವು ಸೇರುತ್ತದೆ.

ಕೋಟೆಯ ಲಕ್ಷಣಗಳು

ನಿಸರ್ಗದತ್ತವಾದ ಎರಡು ಬೆಟ್ಟಗಳನ್ನು ಬಳಸಿ ಸುತ್ತಲೂ ಕೋಟೆಯನ್ನು ಕಟ್ಟಲಾಗಿದೆ. ಈ ಎರಡು ಬೆಟ್ಟಗಳ ಮಧ್ಯೆ ವಿಶಾಲವಾದ ವಸತಿ ಪ್ರದೇಶವಿರುವುದು. ಇದರ ಸುತ್ತಲೂ ಕೋಟೆ ಗೋಡೆ ಇದೆ. ಹಾಗಾಗಿ ಕೆಳಗೆ ಮತ್ತು ಗುಡ್ಡದ ಮೇಲೆ ಒಟ್ಟು ಎರಡು ಕೋಟೆಗಳಿವೆ ಎಂದು ಗ್ಯಾಸಿಟಿಯರ್‌ನಲ್ಲಿ ಹೇಳಲಾಗಿದೆ.[೫] ಬೆಟ್ಟದ ತುದಿಯನ್ನು ತಲುಪಲು ಒಂದೇ ಒಂದು ದಾರಿಯಿದೆ. ಈ ದಾರಿ ಇಂದಿನ ಊರಿನಿಂದ ಪಶ್ಚಿಮಕ್ಕೆ ಸಾಗಿ ಕೋಟೆಯ ಮುಖ್ಯ ಬಾಗಿಲನ್ನು ದಾಟಿ ಬೆಟ್ಟಗಳ ಮಧ್ಯದ ಬಯಲನ್ನು ಸೇರುತ್ತದೆ. ಇಲ್ಲಿಂದ ಮುಂದೆ ದಕ್ಷಿಣದಿಕ್ಕಿಗೆ ಸಾಗಿ ಎರಡು ಬಾಗಿಲುಗಳನ್ನು ದಾಟಿ ಬೆಟ್ಟದ ತುದಿಯನ್ನು ತಲುಪುತ್ತದೆ. ಈ ದಾರಿಯೂ ಹಿಂದಿನಿಂದಲೂ ಬಳಕೆಯಲ್ಲಿದೆ.



ಕೋಟೆಯ ಮುಖ್ಯ ಪ್ರವೇಶದ್ವಾರ


ಈ ಗಿರಿದುರ್ಗವು ಮೂರು ಸುತ್ತುಗಳನ್ನು ಒಳಗೊಂಡಿದ್ದು, ಮೊದಲ ಸುತ್ತು ಎರಡು ಬೆಟ್ಟಗಳು ಹಾಗೂ ವಸತಿ ನೆಲೆಯನ್ನು ಆವರಿಸಿದೆ. ಕೋಟೆಯ ಎರಡನೇ ಸುತ್ತದಲ್ಲಿ ಗಂಗಾಧರೇಶ್ವರ ದೇವಾಲಯ ಹಾಗೂ ಅರ್ಧ ಬೆಟ್ಟವು ಸೇರಿದೆ. ಗಂಗಾಧರೇಶ್ವರ ದೇವಾಲಯವಿರುವ ಬೆಟ್ಟದ ತುದಿಯಲ್ಲಿರುವ ಪಾಳು ಗ್ರಾಮವನ್ನು ಸುತ್ತುವರೆದಿರುವುದೇ ಅಂತಿಮ ಸುತ್ತು. ಕೋಟೆಯ ಹೊರಸುತ್ತಿನ ಗೋಡೆಯ ಆಗ್ನೇಯ ಭಾಗಕ್ಕೆ ಮುಖ್ಯ ಬಾಗಿಲಿದೆ. ಇದು ಸುಮಾರು ೨೦ ಅಡಿ ಎತ್ತರ, ೮ ಅಡಿ ಅಗಲವಾಗಿದೆ. ಬಾಗಿಲು ತೋಳುಗಳು ಸಾದಾ ಕೆತ್ತನೆಯಿಂದ ಕೂಡಿವೆ. ಇದರ ಲಲಾಟ ಬಿಂಬದ ಕೆಳಗಿನ ಎರಡೂ ಬದಿಗೆ ಇಳಿಬಿದ್ದ ಮೊಗ್ಗುಗಳಿವೆ. ಮುಖ್ಯಬಾಗಿಲಿನ ಬಲಭಾಗಕ್ಕೆ ಚಿಕ್ಕಬಾಗಿಲನ್ನು ರಚಿಸಲಾಗಿದೆ. ಮುಖ್ಯ ಬಾಗಿಲನ್ನು ಮುಚ್ಚಿದಾಗ ಉಪಯೋಗಿಸುವುದಕ್ಕಾಗಿಯೇ ಚಿಕ್ಕ ಬಾಗಿಲಿರುವುದು. ಈ ಎರಡು ಬಾಗಿಲುಗಳ ಮೇಲೆ ಬಂದೂಕು ಕಿಂಡಿಗಳಿವೆ.






ಕೋಟೆಯ ಒಳನೋಟ

ಮುಖ್ಯಬಾಗಿಲಿನ ಮುಂದೆ ಸುಂದರ ಕೆತ್ತನೆಯ ಎರಡು ಶಿಲ್ಪಗಳಿವೆ. ಈ ಶಿಲ್ಪಗಳು ವೀರಮಹಾಸತಿ ಕಲ್ಲು ಮತ್ತು ವೀರಗಲ್ಲು. ವೀರಮಹಾಸತಿ ಕಲ್ಲು ೬ ಅಡಿ ಅಗಲ, ೪ ಅಡಿ ಎತ್ತರವಿದೆ. ಇದರಲ್ಲಿ ವೀರನು ಯುದ್ಧದಲ್ಲಿ ಹೋರಾಡಿ ಮಡಿದ ಸಂಕೇತವಾಗಿ ಕುದುರೆಯ ಮೇಲೆ ಆಯುಧಗಳನ್ನು ಹಿಡಿದು ಕುಳಿತ್ತಿದ್ದಾನೆ. ಹಿಂಭಾಗದಲ್ಲಿ ವೀರನ ಹೆಂಡತಿ ಸಹ ಗಮನ ಹೊಂದಿದಂತೆ ಸೂಚಿಸುವ ಸ್ತ್ರೀ ಶಿಲ್ಪವನ್ನು ಕೆತ್ತಲಾಗಿದೆ. ಕೆಂಚನಗುಡ್ಡದ ಪಾಳೆಯಗಾರನ ಶಿಲ್ಪವೇ ಇದಾಗಿರಬಹುದು. ಪಾಳೆಯಗಾರರ ಅವಧಿಯಲ್ಲಿ ಸತಿ ಸಹಗಮನ ಪದ್ಧತಿಯು ಜಾರಿಯಲ್ಲಿದ್ದುದು ಈ ಶಿಲ್ಪದಿಂದ ತಿಳಿಯುವುದು. ವೀರಗಲ್ಲು ೩ ಅಡಿ ಎತ್ತರ ೪ ಅಡಿ ಅಗಲವಾಗಿದೆ. ಇದರಲ್ಲಿ ರಾಜನ ಹೆಂಡತಿ ಕುದುರೆಯ ಮೇಲೆ ಒಂದು ಕೈಯಲ್ಲಿ ಖಡ್ಗ ಹಾಗೂ ಇನ್ನೊಂದು ಕೈಯಿಂದ ಮಗುವನ್ನು ಹಿಡಿದು ಕುಳಿತ್ತಿದ್ದಾಳೆ. ಮುಂದೆ ರಕ್ಷಕ ರಾಜನ ಹೆಂಡತಿ ಹಾಗೂ ಮಗುವನ್ನು ಯುದ್ಧಭೂಮಿಯಿಂದ ಕರೆದುಕೊಂಡು ಹೋಗುವಂತೆ ಚಿತ್ರಿಸಲಾಗಿರಬಹುದು.



ವೀರಗಲ್ಲುಗಳು





ಆಗ್ನೇಯದ ಬಾಗಿಲಿಂದ ಒಂದು ದಾರಿ ಗಂಗಾಧರೇಶ್ವರ ದೇವಾಲಯಕ್ಕೆ ಹೋಗುತ್ತದೆ. ಎತ್ತರಕ್ಕೆ ಹೋಗುವ ದಾರಿ ಪೂರ್ವಕ್ಕಿರುವ ಬೆಟ್ಟದ ಮೇಲೆ ಹೋಗುತ್ತದೆ. ಈ ದಾರಿ ಕವಲೊಡೆಯುವ ಮುಂಭಾಗದಲ್ಲಿಯೇ ಪಾಳುಗ್ರಾಮದ ಅವಶೇಷಗಳು, ಕಣಜಗಳು, ಬಾವಿಗಳು, ಸಮಾಧಿಗಳು ಇತ್ಯಾದಿಗಳು ಕಂಡುಬರುತ್ತವೆ.

ಈ ಪಾಳು ಗ್ರಾಮದಿಂದ ದಕ್ಷಿಣಕ್ಕೆ ಗಂಗಾಧರೇಶ್ವರ ದೇವಾಲಯವಿದೆ. ಈ ದೇವಾಲಯದ ದಕ್ಷಿಣಕ್ಕೆ ಕೋಟೆ ಗೋಡೆಯಲ್ಲಿ ಮೂರನೆಯ ಬಾಗಿಲಿದೆ. ಇದು ಚಿಕ್ಕಬಾಗಿಲು. ಒಳಭಾಗದಲ್ಲಿ ಕಣಜಗಳು, ವೃತ್ತಾಕಾರದ ಕೊತ್ತಳಗಳು, ಮನೆಗಳು ಅವಶೇಷಗಳು ಕಂಡುಬರುತ್ತವೆ. ಇದು ಬಹುರಕ್ಷಿತ ಪ್ರದೇಶವಾದ್ದರಿಂದ ಪ್ರಾಯಶಃ ರಾಜಪರಿವಾದವರು ಇಲ್ಲಿದ್ದಿರಬಹುದು. ಇದರ ಪಶ್ಚಿಮಕ್ಕೆ ಚೌಕಾಕಾರದ ಕಡೆಗಾಪ್ಪ (citadel) ಇದೆ. ದಕ್ಷಿಣದ ಕೋಟೆಗೋಡೆಯಲ್ಲಿ ಬಾಗಿಲೊಂದಿದೆ. ಇದು ನೇರವಾಗಿ ನದಿಗೆ ಪ್ರವೇಶವನ್ನು ಕೊಡುತ್ತದೆ.

ಈ ಬೆಟ್ಟದ ತುದಿಯನ್ನು ತಲುಪಲು ಸಾಧ್ಯವಾಗದಂತೆ ಪಶ್ಚಿಮ, ದಕ್ಷಿಣ ದಿಕ್ಕುಗಳಿಗೆ ತುಂಗಭದ್ರಾ ನದಿ, ಉತ್ತರ ಮತ್ತು ಪೂರ್ವ ದಿಕ್ಕುಗಳಿಗೆ ಕೋಟೆಯ ಭದ್ರವಾದ ಅನೇಕ ಸುತ್ತುಗಳಿವೆ.

ಕೋಟೆಯನ್ನು ಮಧ್ಯಮಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ಕೆಲವುಕಡೆ ಗಾರೆಯನ್ನು ಬಳಸದೆ ಮಣ್ಣಿನಿಂದಲೇ ಕಟ್ಟಿರುವರು. ಕೋಟೆಗೋಡೆದುದ್ದಕ್ಕೂ ಬಂದೂಕು ಕಿಂಡಿಗಳಿವೆ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ವೃತ್ತಾಕಾರ ಹಾಗೂ ಚೌಕಾಕಾರದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಕೆಲವು ನಿಸರ್ಗ ನಿರ್ಮಿತ ಬಂಡೆಗಳನ್ನೆ ಕೊತ್ತಳಗಳನ್ನಾಗಿ ಮಾಡಿಕೊಳ್ಳಲಾಗಿದೆ. ಇವು ಕೋಟೆಗೋಡೆ ಭದ್ರತೆ ಜೊತೆ ಶತ್ರುಗಳೊಡನೆ ಹೋರಾಡಲು ಅನುಕೂಲವಾಗಿದ್ದವು.

ಕೋಟೆಯ ಕೆಳಭಾಗದ ಮುಂದಕ್ಕೆ ಸಮಾಧಿ ಕಟ್ಟಡಗಳು ತುಲಾಭಾರ ಕಂಬಗಳಿವೆ. ಅಲ್ಲಿರುವ ಸಮಾಧಿ ಕಟ್ಟಡಗಳು ಕೆಂಚನಗೌಡ ಮತ್ತು ಅವರ ಪರಿವಾರದವರವು ಎಂದು ಸ್ಥಳೀಯ ಮೂಲಗಳಿಂದ ತಿಳಿದು ಬರುವ ಅಂಶ.[೬]

ಕೋಟೆಯೊಳಗಿರುವ ದೇವಾಲಯಗಳು

ಕೆಂಚನುಗುಡ್ಡದ ಕೋಟೆಯೊಳಗೆ ಗಂಗಾಧರೇಶ್ವರ, ಆಂಜನೇಯ ದೇವಾಲಯಗಳು, ಮಸೀದಿ ಹಾಗೂ ಮನೆಯ ಕಟ್ಟಡಾವಶೇಷಗಳಿವೆ.

ಗಂಗಾಧರೇಶ್ವರ ದೇವಾಲಯ : ಕೋಟೆಯ ಎರಡನೇ ಸುತ್ತಿನ ಮಧ್ಯಭಾಗದಲ್ಲಿದ್ದು, ಪೂರ್ವಾಭಿಮುಖಿ ವಾಗಿರುವ ಪಂಚಕೂಟ ದೇವಾಲಯವಿದು. ಇದು ಐದು ಗರ್ಭಗೃಹಗಳು, ಸಭಾಮಂಟಪವನ್ನು ಹೊಂದಿದೆ.

ಮುಖ್ಯ ಗರ್ಭಗೃಹವು ಮಾತ್ರ ಅಂತರಾಳವನ್ನು ಹೊಂದಿದೆ. ಪ್ರಧಾನ ಗರ್ಭಗೃಹದ ಎಡಬದಿಗಳಲ್ಲಿರುವ ಗರ್ಭಗೃಹಗಳಲ್ಲಿ ಒಂದು ಪೂರ್ವಕ್ಕೆ, ಇನ್ನೊಂದು ದಕ್ಷಿಣಕ್ಕೆ ಮುಖ ಮಾಡಿವೆ. ಪ್ರಮುಖ ಗರ್ಭಗೃಹದಲ್ಲಿ ಮಾತ್ರ ಶಿವಲಿಂಗವಿದೆ. ಉಳಿದ ಗರ್ಭಗೃಹಗಳಲ್ಲಿ ಯಾವುದೇ ವಿಗ್ರಹಗಳಿಲ್ಲ. ಈ ಗರ್ಭಗೃಹದ ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರು, ಅರೆ ಗಂಬಗಳಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯನ್ನು ಕೆತ್ತಲಾಗಿದೆ.

ಈ ದೇವಾಲಯ ಹದಿನಾರು ಕಂಬಗಳುಳ್ಳ ವಿಶಾಲ ತೆರೆದ ಸಭಾಮಂಟಪವನ್ನು ಹೊಂದಿದೆ. ಈ ಕಂಬಗಳು ಚಚ್ಚೌಕ ಹಾಗೂ ಅಷ್ಟಮುಖಗಳನ್ನು ಹೊಂದಿವೆ. ಮಧ್ಯಭಾಗದ ಗರ್ಭಗೃಹದ ಮುಂಬದಿಯ ಎರಡು ಕಂಬಗಳು ಕೆಳಗೆ ಚಚ್ಚೌಕ ಹಾಗೂ ಮೇಲೆ ವೃತ್ತಾಕಾರದಲ್ಲಿವೆ. ದೇಗುಲದ ಐದು ಗರ್ಭಗೃಹಗಳ ಮೇಲೆಯೂ ದ್ರಾವಿಡ ಶೈಲಿಯ ಶಿಖರಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವರು. ದೇಗುಲದ ಮಧ್ಯದ ಗರ್ಭಗೃಹಕ್ಕೆ ಪ್ರದಕ್ಷಿಣೆಯ ಸಲುವಾಗಿ ವಿಶಾಲ ಸ್ಥಳವನ್ನು ಬಿಟ್ಟು ಮತ್ತೊಂದು ಗೋಡೆಯನ್ನು ಸುತ್ತಲೂ ಕಟ್ಟಲಾಗಿದೆ.



ಗಂಗಾಧರೇಶ್ವರ ದೇವಾಲಯ

ದೇವಾಲಯಕ್ಕೆ ವಿಶಾಲವಾದ ಪ್ರಾಕಾರ ಗೋಡೆಯಿದ್ದು, ಎತ್ತರಕ್ಕೆ ದ್ವಾರಬಾಗಿಲು ಇದೆ. ಈ ಪ್ರಾಕಾರ ಗೋಡೆಯಲ್ಲಿಯೇ ಕ್ರಿ.ಶ. ೧೭೦೮ರ ಕೆಂಚನಗೌಡನ ಶಾಸನವಿರುವುದು. ಈ ದೇವಾಲಯದ ಲಕ್ಷಣಗಳು ಸಹ ಸರಿಸುಮಾರು ಇದೆ ಅವಧಿಯನ್ನು ಹೋಲುತ್ತವೆ.

ಆಂಜನೇಯ ದೇವಾಲಯ : ಇದು ಕೋಟೆಯ ಮುಂಭಾಗದಲ್ಲಿದ್ದು ಪೂರ್ವಾಭಿಮುಖವಾಗಿದೆ. ಕಣಶಿಲೆಯನ್ನು ಬಳಸಿ ಕಟ್ಟಲಾದ ಈ ದೇಗುಲವು ಗರ್ಭಗೃಹ, ಸಭಾಮಂಟಪ, ದೀಪಸ್ತಂಭವನ್ನು ಹೊಂದಿದೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣೆ ಹಾಕಲು ಅನುಕೂಲವಾಗುವಂತೆ ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ.



ದೇವಾಲಯದ ಮುಂಭಾಗದಲ್ಲಿ ಹದಿನೈದು ಅಡಿ ಎತ್ತರದ ದೀಪಸ್ತಂಭವಿದೆ. ಗರ್ಭಗೃಹದಲ್ಲಿ ಎರಡುವರೆ ಅಡಿ ಎತ್ತರದ ಆಂಜನೇಯನ ಉಬ್ಬುಕೆತ್ತನೆಯಿದೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳನ್ನು ಆಯಾಕಾರದ ಕಲ್ಲುಗಳಿಂದ ಕಟ್ಟಲಾಗಿರುವುದರಿಂದ ಯಾವುದೇ ಆಲಂಕರಣೆ ಇರುವುದಿಲ್ಲ. ಈ ದೇವಾಲಯವು ಪಾಳೆಯಗಾರರ ಅವಧಿಯಲ್ಲಿಯೇ ನಿರ್ಮಾಣಗೊಂಡಿರುವ ಎಲ್ಲಾ ಲಕ್ಷಣಗಳಿವೆ.

ಟಿಪ್ಪಣಿಗಳು

೧. ಶೇಷಗಿರಿ ಆಚಾರ್, ಜೆ. ೧೯೯೭. *ಶಿರುಗುಪ್ಪೆಯ ಸಿರಿ,* ಪು. ೭. ಅಗಸನೂರು : ಉದಯ ಸರಸ್ವತಿ ಪ್ರಕಾಶನ

೨. ಸೂರ್ಯನಾಥ್, ಯು. ಕಾಮತ್. (ಸಂ.), ೧೯೮೬. *ಕರ್ನಾಟಕ ಗ್ಯಾಸಿಟಿಯರ್ ೩,* ಪು. ೬೧೫. ಬೆಂಗಳೂರು : ಕರ್ನಾಟಕ ಗ್ಯಾಸಿಟಿಯರ್ ಇಲಾಖೆ

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪು. ೧೨೬-೧೨೭. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. *ಅದೇ,* ಪು. ೧೨೬, ೧೨೭

೫. *ಕರ್ನಾಟಕ ಗ್ಯಾಸಿಟಿಯರ್ ೩,* ಪೂರ್ವೋಕ್ತ. ಪು. ೬೧೬

೬. *ಶಿರುಗುಪ್ಪೆಯ ಸಿರಿ,* ಪೂರ್ವೋಕ್ತ. ಪು. ೯

೬.೨ ತೆಕ್ಕಲಕೋಟೆ


ತೆಕ್ಕಲಕೋಟೆಯು ಬಳ್ಳಾರಿಯಿಂದ ಶಿರುಗುಪ್ಪ ರಸ್ತೆಯಲ್ಲಿ ಉತ್ತರ ದಿಕ್ಕಿಗೆ ಸುಮಾರು ೪೩ ಕಿ.ಮೀ. ದೂರದಲ್ಲಿದೆ. ಈ ಪ್ರದೇಶ ತುಂಬಾ ಪ್ರಾಚೀನವಾದುದು. ಇಲ್ಲಿ ನೂತನ ಹಾಗೂ ತಾಮ್ರ ಶಿಲಾಯುಗ ಸಂಸ್ಕೃತಿಗಳ ವಾಸ್ತವ್ಯದ ನೆಲೆಗಳು ವಿವಿಧ ಬಗೆಯ ಉಪಕರಣಗಳು ಮತ್ತು ವರ್ಣಚಿತ್ರಗಳು ಕಂಡುಬಂದಿವೆ.[೧] ಈ ಗ್ರಾಮವನ್ನು ಪ್ರಾಚೀನ ಶಾಸನಗಳು ತೆಕ್ಕೆಕಲ್ಲು[೨] ಎಂದು ಕರೆದಿವೆ. ತೆಕ್ಕಕಲ್ಲು ಇದು ನಿಸರ್ಗವಾಚಿ ತೆಕ್ಕೆ ಎಂದರೆ ಅಧಿಕ, ಸುರಳಿ + ಕಲ್ಲು ತೆಕ್ಕೆಕಲ್ಲು ತೆಕ್ಕಲ್ಲು ತೆಕ್ಕಲಕೋಟೆ ಆಗಿದೆ. ಈ ಗ್ರಾಮಕ್ಕೆ ಹೊಂದಿಕೊಂಡಿರುವ ಬೆಟ್ಟದಲ್ಲಿ ಸುರಳಿಯಾಕಾರದ ಅಧಿಕ ಸಂಖ್ಯೆಯ ಕಲ್ಲುಗಳು ಪರಸ್ಪರ ತಬ್ಬಿಕೊಂಡಂತಿವೆ.

ಈ ಹಿನ್ನೆಲೆಯಲ್ಲಿ ಇಲ್ಲಿನ ಪ್ರದೇಶಕ್ಕೆ ತೆಕ್ಕೆಕಲ್ಲು ಎಂದಿರಬಹುದು. ಕ್ರಿ.ಶ. ೧೭೦೧ರ ಶಾಸನದಲ್ಲಿ[೩] ತೆಕಲಕೋಟೆ ಎಂದಿದೆ. ತೆಕ್ಕಲಕೋಟೆಯು ಹಿಂದೇ ತೆಕ್ಕೆಕಲ್ಲು ಹನ್ನೆರಡರ ಮುಖ್ಯ ಪಟ್ಟಣವಾಗಿತ್ತು. ನೊಳಂಬವಾಡಿ ಮೂವತ್ತೆರಡು ಸಾವಿರವೆನ್ನುವುದು ಬಹುದೊಡ್ಡ ಪ್ರಾಂತ. ಇದರಲ್ಲಿ ಬಲಕುಂದೆ ಮೂರುನೂರು ಒಂದು ವಿಭಾಗವಾದರೆ ತೆಕ್ಕೆಕಲ್ಲು ಉಪವಿಭಾಗಕೇಂದ್ರ. ಇದರ ಉಲ್ಲೇಖಗಳು ಶಿರುಗುಪ್ಪ[೪] ಮತ್ತು ಸಾಲಗುಂದೆ[೫] ಶಾಸನಗಳಲ್ಲಿ ಬರುತ್ತವೆ. ಶಿರುಗುಪ್ಪ ಶಾಸನವು ಬಲಕುಂದೆ ಮುನ್ನೂರರ ಬಳಿಯ ತೆಕ್ಕೆಕಲ್ಲು ಪನ್ನೆರಡರೊಳಗನ ಭತ್ರಗ್ರಾಮ ಶಿರುಗುಪ್ಪೆ ....ರಕೊಳ ನೂರಂಟು ಮೂರೂರುಗಳನ್ನು ಉಲ್ಲೇಖಿಸಿದೆ. ಇವುಗಳೊಂದಿಗೆ ಸಿನ್ದವೂರು, ಬಾಗೇವಾಡಿ, ರಾರಾವಿ, ಬಗ್ನೂರು, ಕೊತ್ತಲಚಿಂತೆ, ಅಗ್ರಹಾರ, ಕಂಚಗಾರ ಬೆಳಗಲ್ಲು, ಕಲ್ಲುಕುಂಟೆ ಮತ್ತು ಬಲಕುಂದೆ ಗ್ರಾಮಗಳು ಸೇರಿ ಹನ್ನೆರಡು ಹಳ್ಳಿಗಳಾಗುತ್ತವೆ.[೬] ತೆಕ್ಕಲಕೋಟೆಯು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಮಹತ್ವ ಪಡೆದುಕೊಂಡು ಇಂದಿಗೂ ತನ್ನ ಇರುವಿಕೆಯನ್ನು ಗುರುತಿಸಿಕೊಂಡಿದೆ. ಇದಕ್ಕೆ ಉದಾರಣೆಗಳಾಗಿ ಪ್ರಾಚೀನ ದೇವಮಂದಿರಗಳು, ಕೋಟೆ - ಕೊತ್ತಳಗಳು ಉಳಿದುಕೊಂಡಿವೆ.

ಕೋಟೆಯ ಲಕ್ಷಣಗಳು


ತೆಕ್ಕಲಕೋಟೆ ಗ್ರಾಮದ ಮಧ್ಯದಲ್ಲಿ ಕೋಟೆಯಿದೆ. ಇದು ಸುಮಾರು ನಾಲ್ಕು ಎಕರೆ ಪ್ರದೇಶವನ್ನು ಆವರಿಸಿದ್ದು, ಚೌಕಾಕಾರವಾಗಿದೆ. *ಮಾನಸಾರ ಗ್ರಂಥ*ದಲ್ಲಿ ಚೌಕಾಕಾರದ ವಿನ್ಯಾಸದ ಕೋಟೆಗೆ 'ಪದ್ಮಕ' ಎನ್ನಲಾಗಿದ್ದರೆ[೭] ಕೌಟಿಲ್ಯನ *ಅರ್ಥಶಾಸ್ತ್ರ*ದಲ್ಲಿ ಧೀರ್ಘಾಚತುರಸ್ರ ಎಂದಿರುವುದು.[೮] ನೆಲದ ಮೇಲೆ ಕಟ್ಟಿರುವ ಈ ಕೋಟೆಯ ಸುತ್ತಲೂ ಆಳವಾದ ಕಂದಕವಿದ್ದ ಬಗ್ಗೆ ಗುರುತುಗಳಿವೆ. ಕೋಟೆಯ ನಾಲ್ಕೂ ಮೂಲೆಗೂ ವೃತ್ತಾಕಾರದ

ಕೊತ್ತಳಗಳಿವೆ. ಇವು ಕೋಟೆ ಗೋಡೆಗಿಂತ ಎತ್ತರವಾಗಿದ್ದು, ಸಶ್ತ್ರಗಳ ಸಹಿತ ಮೇಲೇರಲು ಮೆಟ್ಟಿಲುಗಳನ್ನು ರಚಿಸಲಾಗಿದೆ. ಪ್ರತಿ ಕೊತ್ತಳಕ್ಕೂ ಸುಮಾರು ನೂರು ಮೀಟರ್ ಅಂತರವಿದೆ. ಕೋಟೆ ಗೋಡೆಯು ಸುತ್ತಲೂ ಸುಸ್ಥಿತಿಯಲ್ಲಿದೆ. ಎತ್ತರದ ಗೋಡೆಯ ಮಧ್ಯದಲ್ಲಿ ಆಯಾತಾಕಾರದ ಮುಂಚಾಚಿದ ಮತ್ತೊಂದು ಗೋಡೆಯಿದೆ. ಇದರ ಮಧ್ಯದಲ್ಲಿ ಮುಖ್ಯಬಾಗಿಲನ್ನು ನಿರ್ಮಿಸಲಾಗಿದೆ. ಈ ಬಾಗಿಲು ೨೦ ಅಡಿ ಎತ್ತರ, ೬ ಅಡಿ ಅಗಲವಾಗಿದೆ. ಮೇಲ್ಭಾಗದಲ್ಲಿ ಕಮಾನಿನಾಕೃತಿ. ಇದರ ಕೆಳ ಇಕ್ಕೆಲಗಳಲ್ಲಿ ಇಳಿ ಬಿದ್ದ ಮೊಗ್ಗುಗಳಿವೆ. ಬಾಗಿಲು ಬಲಭಾಗಕ್ಕೆ ಉಪಬಾಗಿಲನ್ನು ಜೋಡಿಸಲಾಗಿದೆ. ಬಾಗಿಲು ಮತ್ತು ಉಪಬಾಗಿಲುಗಳಿರುವ ಮುಂಚಾಚಿದ ಗೋಡೆಯ ಮಧ್ಯದಲ್ಲಿ ಬಂದೂಕು ಕಿಂಡಿಗಳು, ಮೇಲ್ತುದಿಯಲ್ಲಿ ಕೋಟೆ ತೆನೆಗಳನ್ನು ರಚಿಸಲಾಗಿದೆ. ಕೋಟೆಯೊಳಗೆ ನೈರುತ್ಯ ದಿಕ್ಕಿನಲ್ಲಿ ಚಿಕ್ಕ ದೇಗುಲವಿದೆ. ಇದರಲ್ಲಿ ಯಾವುದೇ ಮೂರ್ತಿಗಳಿಲ್ಲ. ಮಧ್ಯದಲ್ಲಿ ನಾಲ್ಕಾರು ಬಾವಿಗಳಿದ್ದವೆಂದು ಸ್ಥಳೀಯರು ಹೇಳುತ್ತಾರೆ. ಪ್ರಸ್ತುತ ಎರಡು ಬಾವಿಗಳು ಮಾತ್ರ ಉಳಿದಿವೆ. ಇತ್ತೀಚಿಗೆ ಸರಕಾರವು ಬಾಲಕೀಯರ ಪ್ರೌಢಶಾಲೆಯೊಂದನ್ನು ಕೋಟೆಯ ಮಧ್ಯದಲ್ಲಿ ನಿರ್ಮಿಸಿರುವುದರಿಂದ ಕೋಟೆಯ ಅವಶೇಷಗಳಿಗೆ ರಕ್ಷಣೆ ಸಿಕ್ಕಂತಾಗಿದೆ. ಇಲ್ಲಿ ಶಾಲೆ ಇಲ್ಲದಿದ್ದರೆ ಸಾರ್ವಜನಿಕ ಶೌಚಾಲಯವೋ ಮತ್ತು ದನ - ಕರುಗಳ ತಂಗುದಾಣವೋ ಆಗಿರುತ್ತಿತ್ತು. ಇಂತಹ ಉದಾರಣೆಗಳು ನಮ್ಮಲ್ಲಿ ಸಾಕಷ್ಟಿವೆ.



ಕೋಟೆ

ಕೋಟೆಯನ್ನು ಕೆತ್ತನೆಯ ಮಾಡಿದ ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಮಧ್ಯದಲ್ಲಿ ಸಂಧಿ ಇಲ್ಲದಂತೆ ಒಂದುಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಕೆತ್ತಿ ಜೋಡಿಸಿದೆ. ಕಲ್ಲುಗಳ ಮಧ್ಯದಲ್ಲಿ ಯಾವುದೇ ಲೇಪನವಿಲ್ಲ. ಸುಮಾರು ೨ ಮೀಟರ್ ಎತ್ತರವಿರುವ ಕೋಟೆಯ ಮೇಲಿನ ಕಲ್ಲಿನ ಸಾಲು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಕೋಟೆಯ ಅಗಲ ಸುಮಾರು ೫ ಅಡಿಗಳು. ಇದರ ಮೇಲಿದ್ದ ಗಾರೆ -



ಮಣ್ಣಿನ ಕುಂಬೆಯ ಅವಶೇಷಗಳು ಕಾಣುತ್ತವೆ. ಕೋಟೆಯ ಹೊರಮೈಯನ್ನು ದಪ್ಪ ಮತ್ತು ಮಧ್ಯಮ ಕಲ್ಲುಗಳಿಂದ ಹಾಗೂ ಒಳಮೈಯನ್ನು ಚಿಕ್ಕ ಕಲ್ಲುಗಳಿಂದ ಮಧ್ಯದಲ್ಲಿ ಮಣ್ಣು ತುಂಬಿ ಕಟ್ಟಿದೆ. ಕೋಟೆಯ ಒಳಗೆ ಅರಮನೆ, ಸೈನ್ಯಾಧಿಕಾರಿಗಳ ವಸತಿಗಳಿದ್ದ ಬಗ್ಗೆ ಜನರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಕೋಟೆಯ ನಿರ್ಮಾಣ

ಈ ಗ್ರಾಮಕ್ಕೆ ಕೋಟೆ ನಿರ್ಮಾಣ ಪೂರ್ವದಲ್ಲಿ ತೆಕ್ಕೆಕಲ್ಲು ಎಂದಿದ್ದು, ಕೋಟೆಯ ನಿರ್ಮಾಣದ ನಂತರ ತೆಕ್ಕಲಕೋಟೆ ಎಂದು ಕರೆಯುತ್ತಿರುವುದು ಶಾಸನಾಧಾರಗಳಿಂದ ಸ್ಪಷ್ಟವಾಗುತ್ತಿದೆ. ಹಾಗಾದರೆ ತೆಕ್ಕಲಕೋಟೆ ಎಂದು ನಿರ್ಮಾಣವಾಯಿತು? ಯಾರು ನಿರ್ಮಿಸಿದರು? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ನಿಕರವಾದ ಕಾಲ ಹಾಗೂ ನಿರ್ಮಾಪಕರನ್ನು ಗುರುತಿಸುವುದು ಕಠಿಣತರವಾದ ಕೆಲಸ. ಆದರೂ ಕೂಡ ಕೆಲವಾರು ಶಾಸನಾಧಾರಗಳಿಂದ ಈ ಕೆಳಗಿನಂತೆ ಹೇಳಬಹುದು.

ಒಂದನೆಯದಾಗಿ ಇಲ್ಲಿ ದೊರೆತಿರುವ ಎಲ್ಲಾ ಕಲ್ಯಾಣ ಚಾಳುಕ್ಯರ ಶಾಸನಗಳನ್ನು ಗಮನಿಸಲಾಗಿ, ಕ್ರಿ.ಶ. ೧೧೦೨ರ ವರೆಗಿನ ಶಾಸನಗಳಲ್ಲಿ[೯] ತೆಕ್ಕೆಕಲ್ಲು ಎಂದು ಉಲ್ಲೇಖಿತವಾಗಿದ್ದು, ಕ್ರಿ.ಶ. ೧೫೩೯ರ ಮಲ್ಲಯ್ಯನಗುಡ್ಡದ[೧೦] ಶಾಸನಗಳಿಂದ ಈಚೆಗೆ ಹೈದರಾಲಿ, ಟಿಪ್ಪುವಿನ ಶಾಸನಗಳವರೆಗೂ ತೆಕ್ಕಲಕೋಟೆ ಎಂಬ ಹೆಸರು ಉಕ್ತವಾಗಿದೆ.

ಎರಡನೆಯದಾಗಿ ಬಿಜಾಪುರ ಸುಲ್ತಾನರ ಪ್ರತಿನಿಧಿಗಳಾಗಿ ಇಲ್ಲಿ ಆಳ್ವಿಕೆ ಮಾಡಿದ ಹಂಡೆ ಪಾಳೆಯಗಾರ ಬಾಲದ ಹನುಮಪ್ಪನಾಯಕನೇ ಕ್ರಿ.ಶ. ೧೫೬೭ರ ನಂತರ ತೆಕ್ಕಲಕೋಟೆ ಕೋಟೆಯನ್ನು ಕಟ್ಟಿಸಿದನೆಂದು ಕೈಫಿಯತ್ತು ಹೇಳುತ್ತದೆ.[೧೧] ಇದೇ ಅಂಶವನ್ನು ಗ್ಯಾಸೆಟಿಯರ್‌ನಲ್ಲಿಯೂ ವ್ಯಕ್ತಪಡಿಸಲಾಗಿದೆ.[೧೨]

ಈ ಮೇಲಿನ ಅಂಶಗಳನ್ನು ಗಮನಿಸಿಕೊಂಡಲ್ಲಿ, ತೆಕ್ಕೆಕಲ್ಲು ಬಲ್ಲಕುನ್ದೆ ನಾಡಿನಲ್ಲಿ ಬರುವ ಮುಖ್ಯ ಉಪವಿಭಾಗವಾಗಿದ್ದರಿಂದ ಆಗಲೇ ಅಲ್ಲಿ ಕೋಟೆ ಇದ್ದಿರಬಹುದು. ಕ್ರಿ.ಶ. ೧೧೦೨ರ ನಂತರ ಹಾಗೂ ಕ್ರಿ.ಶ. ೧೫೩೯ರ ಮಧ್ಯದ ಅವಧಿಯಲ್ಲಿ ಮತ್ತೊಮ್ಮೆ ಕೋಟೆಯನ್ನು ಕಟ್ಟಿಕೊಂಡಿರಬೇಕು. ನಂತರ ಬಂದ ಹಂಡೆ ಪಾಳೆಯಗಾರರು ಈ ಕೋಟೆಯನ್ನು ಜಿರ್ಣೋದ್ಧಾರ ಮಾಡಿರುವ ಸಾಧ್ಯತೆಗಳಿವೆ. ಒಟ್ಟಿನಲ್ಲಿ ೧೬ನೆಯ ಶತಮಾನದಲ್ಲಿ ಆ ಕೋಟೆ ನಿರ್ಮಾಣವಾದಂತೆ ಅದರ ಲಕ್ಷಣಗಳು ತಿಳಿಸುತ್ತವೆ.

ಈ ಕೋಟೆಯನ್ನು ಕ್ರಮವಾಗಿ ಹಂಡೆ ಪಾಳೆಯಗಾರರು, ಆದೋನಿಯ ಹಸನುಲ್ಲಾ ಖಾನ್,[೧೩] ಕ್ರಿ.ಶ. ೧೭೬೯ ರಲ್ಲಿ ಪೀರ್ ಮೋಹಿದ್ದಿನ್, ಕ್ರಿ.ಶ. ೧೭೭೫ ರಲ್ಲಿ ಹೈದರಾಲಿ, ಕ್ರಿ.ಶ. ೧೮೦೦ರ ನಂತರ ಬ್ರಿಟಿಷರು ಆಳಿದರೆಂದು ತಿಳಿದುಬರುತ್ತದೆ.[೧೪]

ಟಿಪ್ಪಣಿಗಳು

೧. ಸುಂದರ, ಅ. ೧೯೯೪. *ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ,* ಪು. ೭೭-೭೮. ಬೆಂಗಳೂರು

೨. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧,* ಪು. ೯೧. ಹಂಪಿ : ಕನ್ನಡ ವಿಶ್ವವಿದ್ಯಾಲಯ

೩. *ಅದೇ,* ಪು. ೧೩೨

೪. *ಅದೇ,* ಪು. ೯೧

೫. *ಅದೇ,* ಪು. ೨೪

೬. ಚನ್ನಬಸವಯ್ಯ ಹಿರೇಮಠ. ೧೯೯೯. ಬಲ್ಲಕುನ್ನೆನಾಡು, *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು,* (ಸಂ: ಕಲಬುರ್ಗಿ ಎಂ.ಎಂ), ಪು. ೧೨೦. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೭. Acharya, P.K. *Manasara- an Encyclopaedia of Hindu Architecture*, p. 53

೮. Rangarajan, L.N. *Kautilys Artha Shastra.* Pp. 184-185

೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೯೩


೧೦. *ಅದೇ,* ಪು. ೧೩೪

೧೧. ಕಲಬುರ್ಗಿ, ಎಂ.ಎಂ. ೧೯೯೪. *ಕರ್ನಾಟಕದ ಕೈಫಿಯತ್ತುಗಳು,* ಪು. ೫೨೬. ಹಂಪಿ : ಕನ್ನಡ ವಿಶ್ವವಿದ್ಯಾಲಯ

೧೨. ಸೂರ್ಯನಾಥ, ಯು. ಕಾಮತ್. ೧೯೮೬. *ಕರ್ನಾಟಕದ ಗ್ಯಾಸೆಟಿಯರ್ ೩,* ಪು. ೬೧೫. ಬೆಂಗಳೂರು : ಕರ್ನಾಟಕ ಗ್ಯಾಸೆಟಿಯರ್ ಇಲಾಖೆ

೧೩. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ,* ಪು. ೮೦. ಕುಂಚೂರು : ಮಾಲತೇಶ ಪ್ರಕಾಶನ

೧೪. *ಅದೇ,* ಪು. ೮೦



ತೆಕ್ಕಲಕೋಟೆಯ ನಕ್ಷೆ

೧. ಬಾಗಿಲು ೨. ಕೊತ್ತಳ ೩.ಬಾವಿ ೪. ದೇವಾಲಯ



೬.೩ ನಡಿವಿ

ನಡಿವಿ ಶಿರುಗುಪ್ಪ ತಾಲೂಕಿನಲ್ಲಿರುವ ಒಂದು ಚಿಕ್ಕ ಗ್ರಾಮ. ಶಿರುಗುಪ್ಪದಿಂದ ನೈರುತ್ಯ ದಿಕ್ಕಿಗೆ ೧೮ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯ ಬಲದಂಡೆಯ ಮೇಲಿದೆ. ಈ ಗ್ರಾಮದ ಬಳಿ ಇತಿಹಾಸ ಆರಂಭಯುಗದ ಹಂತದ ಅವಶೇಷಗಳು ಕಂಡುಬಂದಿವೆ.[೧] ತುಂಗಭದ್ರಾ ನದಿಯು U ಆಕಾರದಲ್ಲಿ ಹರಿದು ನಡಿವಿ ಪ್ರದೇಶವನ್ನು ಮೂರು ಕಡೆಯಿಂದ ಸುತ್ತುವರಿದಿದೆ. ನದಿಯ ನಡು (ಮಧ್ಯ) ಭಾಗದಲ್ಲಿರುವುದರಿಂದ ಈ ಗ್ರಾಮಕ್ಕೆ "ನಡಿವಿ" ಎಂಬ ಹೆಸರು ಬಂದಿರಬಹುದು. ನಡಿವಿ ಗ್ರಾಮ ಈಗ ಎರಡು ಭಾಗವಾಗಿದೆ. ಮೂಲನೆಲೆಯಲ್ಲಿರುವುದು ಹಳೇಗ್ರಾಮ. ಅಲ್ಲಿಂದ ಆಗ್ನೇಯ ದಿಕ್ಕಿಗೆ ೧ ಕಿ.ಮೀ. ದೂರದಲ್ಲಿ ಹೊಸ ಗ್ರಾಮವಿದೆ. ತುಂಗಭದ್ರಾ ನದಿಯ ಪ್ರವಾಹಕ್ಕೆ ತುತ್ತಾದವರು ತಮ್ಮ ಮನೆಗಳನ್ನು ಹಳೆಯ ಗ್ರಾಮದಿಂದ ಹೊಸ ಗ್ರಾಮಕ್ಕೆ ವರ್ಗಾಯಿಸಿಕೊಂಡಿರುವರೆಂದು ಸ್ಥಳೀಯರು ಹೇಳುತ್ತಾರೆ.

ಕೋಟೆಯ ಸುತ್ತಲೂ ತುಂಗಭದ್ರಾ ನದಿ ಸುತ್ತುವರಿದಿರುವುದರಿಂದ ಇದು ಜಲದುರ್ಗವಾಗಿತ್ತೆಂದು ಹೇಳುವರು. ಹಾಗಿದ್ದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಮೊದಲ ಜಲದುರ್ಗವಿದು ಎಂದು ಹೇಳಬಹುದು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇಂಥಹ ಜಲದುರ್ಗಗಳನ್ನು ಔದಕಗಳೆಂದು ಕರೆದಿದ್ದಾನೆ.[೨] ವ್ಯವಸ್ಥಿತವಾಗಿ ನಿರ್ಮಾಣಗೊಂಡು ಸುಸ್ಥಿತಿಯಲ್ಲಿರುವ ಇಲ್ಲಿನ ಕೋಟೆ ಅವಶೇಷಗಳು ಬೆಳಕಿಗೆ ಬಾರದ ಕೋಟೆಗಳ ಸಾಲಿಗೆ ಸೇರಿವೆ ಎಂದೇ ಹೇಳಬೇಕು.

ಇತಿಹಾಸ ಆರಂಭಯುಗದಿಂದ ಹೊಯ್ಸಳರ ಆಳ್ವಿಕೆಯವರೆಗೂ ಈ ಗ್ರಾಮ ಅಸ್ತಿತ್ವದಲ್ಲಿದ್ದಿರಬಹುದಾದರೂ ಇದು ಬೆಳಕಿಗೆ ಬಂದದ್ದು ವಿಜಯನಗರೋತ್ತರದಲ್ಲಿ ಎಂಬುದು ಅಲ್ಲಿಯ ಕೋಟೆ ಕೊತ್ತಳಗಳಿಂದ ತಿಳಿದುಬರುವುದು.

ಕೋಟೆಯ ಲಕ್ಷಣಗಳು

ತುಂಗಭದ್ರಾ ನದಿಯು U ಆಕಾರದಲ್ಲಿ ಹರಿಯುವ ಸ್ವಭಾವಿಕ ರಕ್ಷಣಾತ್ಮಕ ರಚನೆಯನ್ನು ಪರಿಗಣಿಸಿ ಇಲ್ಲಿ ಊರನ್ನು ಕಟ್ಟಲಾಗಿದೆ. ನಂತರ ಈ ಊರಿನ ಆಯಕಟ್ಟಿನ ಸ್ಥಳದಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ. ಇಲ್ಲಿ ನದಿಯು ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಅರ್ಧ ವರ್ತುಲಾಕಾರದಲ್ಲಿ ಸುತ್ತುವರೆದು ಕೋಟೆಯನ್ನು ರಕ್ಷಿಸುತ್ತದೆ.



ತುಂಗಭದ್ರಾ ನದಿ ಕೋಟೆಯನ್ನು ಸುತ್ತುವರಿದಿದೆ (ಜಲದುರ್ಗ)

ನಡಿವಿ ಕೋಟೆ ಚೌಕಾಕಾರವಾಗಿ ಮುಂಚಾಚಿದ ಚಿಕ್ಕಕೋಟೆ. ಇದನ್ನು ಕೆತ್ತಿ ನಯಮಾಡಿದ ಮಧ್ಯಮ ಮತ್ತು ಚಿಕ್ಕಗಾತ್ರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಮಧ್ಯದಲ್ಲಿ ಸಂದಿ ಇಲ್ಲದಂತೆ ಒಂದು ಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಕೆತ್ತಿ ಜೋಡಿಸಿದೆ. ಕಲ್ಲುಗಳ ಮಧ್ಯದಲ್ಲಿ ಯಾವುದೇ ಗಾರೆಯ ಲೇಪನವಿಲ್ಲ. ಸುಮಾರು ೨೫ ಅಡಿ ಎತ್ತರವಿರುವ ಕೋಟೆಯ ಮೇಲಿನ ಕಲ್ಲಿನ ಸಾಲು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಕೋಟೆಯ ಅಗಲ ಸುಮಾರು ೫ ಅಡಿಗಳು. ಇದರ ಮೇಲಿದ್ದ ಮಣ್ಣಿನ ಕುಂಬೆಯ ಅವಶೇಷಗಳು ಕಾಣುತ್ತವೆ. ಕೋಟೆಯ ಹೊರ ಮತ್ತು ಒಳಮೈಗಳನ್ನು ಒಂದೇ ಬಗೆಯ ಕಲ್ಲುಗಳಿಂದ ಮಧ್ಯದಲ್ಲಿ ಮಣ್ಣು ತುಂಬಿ ಕಟ್ಟಿದೆ. ಕೋಟೆ ಗೋಡೆಯು ಈಗಲೂ ಸುಸ್ಥಿತಿಯಲ್ಲಿದೆ. ಇದರ ಆಯಕಟ್ಟಿನ ಸ್ಥಳಗಳಲ್ಲಿ ಏಳು ಕೊತ್ತಳಗಳನ್ನು ರಚಿಸಲಾಗಿದೆ. ಕೋಟೆ ಗೋಡೆಯ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಕೊತ್ತಳಗಳನ್ನು ಚೌಕಾಕಾರ ಹಾಗೂ ವೃತ್ತಾಕಾರದಲ್ಲಿ ಕಟ್ಟಲಾಗಿದೆ. ಇವು ಕೋಟೆ ಗೋಡೆಯಲ್ಲಿ ಮುಂಚಾಚಿಕೊಂಡಿವೆ. ಯುದ್ಧದ ಸಮಯದಲ್ಲಿ ಹೆಚ್ಚು ಸೈನಿಕರು ನಿಲ್ಲಲು ಸಹ ಕೊತ್ತಳಗಳು ಉಪಯೋಗವಾಗುತ್ತಿದ್ದವು. ಇವುಗಳ ಮೇಲೆ ಕಾವಲಿನವರು ನಿಂತು ಕೋಟೆಯನ್ನು ಸಂರಕ್ಷಿಸುತ್ತಿದ್ದರು.

ಕೋಟೆಯ ಮಧ್ಯದಲ್ಲಿ ಹಿಂದಿನ ಗೋಡೆಗೆ ಹೊಂದಿಕೊಂಡು ಬಹುದೊಡ್ಡ ಚೌಕಾಕಾರದ ಕೊತ್ತಳವಿದೆ. ಇದು ಇತರೆ ಕೊತ್ತಳಗಳಿಗಿಂತ ಅಗಲ ಹಾಗೂ ಎತ್ತರವಾಗಿದೆ. ಮೇಲ್ಭಾಗದಲ್ಲಿ ವಿಶಾಲವಾದ ಸ್ಥಳವಿರುವುದರಿಂದ ರಾಮಲಿಂಗೇಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ. ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿರುವುದು. ಈ ಗುಡಿ ಕ್ರಿ.ಶ. ೧೯೮೯ ರಲ್ಲಿ ಜೀರ್ಣೋದ್ಧಾರವಾಗಿದೆ.






ಕೋಟೆ

ರಾಮಲಿಂಗೇಶ್ವರ ದೇವಾಲಯದ ಬಲಭಾಗದಲ್ಲಿ ೬ ಅಡಿ ಎತ್ತರ, ೩ ಅಡಿ ಅಗಲವಿರುವ ವೀರಗಲ್ಲೊಂದಿದೆ. ಇದು ೩ ಹಂತದಲ್ಲಿದ್ದು, ಕೆಳಗಿನ ಮೊದಲ ಹಂತದಲ್ಲಿ ವೀರ ಶತ್ರುಗಳೊಡನೆ ಹೋರಾಡುವ ದೃಶ್ಯ, ಎರಡನೆಯ ಹಂತದಲ್ಲಿ ಕನ್ಯೆಯರು ವೀರನನ್ನು ಕೈಲಾಸಕ್ಕೆ ಕರೆದೊಯ್ಯುವ ಚಿತ್ರಣ, ಅಂತಿಮ ಘಟ್ಟದಲ್ಲಿ ವೀರನು ಶಿವಲಿಂಗದ ಮುಂದೆ ನಿಂತಿದ್ದಾನೆ. ಈ ವೀರಗಲ್ಲಿನ ಪಟ್ಟಿಗಳಲ್ಲಿ ಶಾಸನಪಾಠವಿದ್ದು, ಅದು ಸವೆದಿದೆ.

ಪಶ್ಚಿಮ ದಿಕ್ಕಿನ ಗೋಡೆಯ ಮಧ್ಯದಲ್ಲಿ ವೃತ್ತಾಕಾರದಲ್ಲಿ ಮುಂದಕ್ಕೆ ಚಾಚಿಕೊಂಡ ಕೊತ್ತಳವಿದೆ. ಇದರ ಪಕ್ಕದಲ್ಲಿ ಕೋಟೆಬಾಗಿಲು ಇದೆ. ಇದು ಸುಮಾರು ೨೫ ಅಡಿ ಎತ್ತರ, ೮ ಅಡಿ ಅಗಲವಾಗಿದೆ. ಬಾಗಿಲು ತೋಳುಗಳು ಸಾದಾ ಕೆತ್ತನೆಯಿಂದ ಕೂಡಿರುವವು. ಬಾಗಿಲಿನ ಮೇಲೆ ಗೋಡೆಯಲ್ಲಿ ಕಮಾನನ್ನು ರಚಿಸಲಾಗಿದೆ.



ಕೋಟೆಯ ಮುಖ್ಯ ಪ್ರವೇಶದ್ವಾರ





ಕೋಟೆಯ ಒಳಗೆ ಗಿಡ-ಗಂಟೆಗಳು ಬೆಳೆದಿವೆ. ಪಶ್ಚಿಮಕ್ಕೆ ಗೋಡೆಯಲ್ಲಿ ಚಿಕ್ಕಬಾಗಿಲನ್ನು ಜೋಡಿಸಲಾಗಿದೆ. ಶತ್ರುಗಳು ಮುಖ್ಯ ಬಾಗಿಲಿನಿಂದ ಕೋಟೆಯೊಳಗೆ ನುಗ್ಗಿದಾಗ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆ ಚಿಕ್ಕ ಬಾಗಿಲನ್ನು ರಚಿಸಲಾಗಿದೆ. ಮತ್ತು ಮುಖ್ಯ ಬಾಗಿಲನ್ನು ಮುಚ್ಚಿದಾಗ, ನದಿಯಿಂದ ಕೋಟೆಯೊಳಗೆ ನೀರು ತರಲು ಈ ಬಾಗಿಲು ಉಪಯೋಗಕ್ಕೆ ಬರುತ್ತಿತ್ತು.



ಕೋಟೆಯಿಂದ ನದಿಗೆ ಹೋಗುವ ಬಾಗಿಲು

ಕೋಟೆ ಗೋಡೆಗೆ ಹೊಂದಿಕೊಂಡೆ ನಡಿವಿ ಗ್ರಾಮವು ಪೂರ್ವ ದಿಕ್ಕಿಗೆ ವಿಸ್ತರಿಸಿದೆ. ನದಿಯ ಪ್ರವಾಹದಿಂದ ರಕ್ಷಣೆ ಪಡೆಯುವುದಕ್ಕಾಗಿ ಗ್ರಾಮದ ಸುತ್ತಲೂ ಸುಮಾರು ೨೦ ಅಡಿ ಎತ್ತರದ ಗೋಡೆಯನ್ನು ಕಟ್ಟಲಾಗಿದೆ. ಪೂರ್ವದ ಗೋಡೆಯಲ್ಲಿ ಗ್ರಾಮದ ಮುಖ್ಯ ಪ್ರವೇಶದ್ವಾರವಿದ್ದು, ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಇದರ ಮುಂಭಾಗದಲ್ಲಿ ಆಂಜನೇಯನ ಗುಡಿ, ಗ್ರಾಮದ ಭಾವಡಿ ಕಟ್ಟೆಗಳಿವೆ.

ಆಂಜನೇಯ ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಆಂಜನೇಯನ ವಿಗ್ರಹವನ್ನು ಇತ್ತೀಚೆಗೆ ಪ್ರತಿಷ್ಠಾಪಿಸಲಾಗಿದೆ. ಇದರ ಮೂಲ ವಿಗ್ರಹ ಭಿನ್ನವಾಗಿರುವುದರಿಂದ ದೇವಾಲಯದ ಹೊರಭಾಗದಲ್ಲಿಡಲಾಗಿದೆ. ದೇವಾಲಯವು ಜೀರ್ಣೋದ್ಧಾರವಾಗಿದ್ದು, ಅಲ್ಲಿ ಕಂಡುಬರುವ ಸಪ್ತಮಾತೃಕಾ, ವೀರಗಲ್ಲು, ನಂದಿಶಿಲ್ಪಗಳು ಪ್ರಾಚೀನವಾಗಿವೆ.


ದೇವಾಲಯದ ಮುಂದಿನ ಕಟ್ಟೆಗೆ ಹೊಂದಿಕೊಂಡಿರುವ ವೀರಗಲ್ಲು ಸುಮಾರು ೪ ಅಡಿ ಎತ್ತರ, ೩ ಅಡಿ ಅಗಲವಾಗಿದೆ. ಇದರಲ್ಲಿ ವೀರನು ಖಡ್ಗ, ಗುರಾಣಿಗಳನ್ನು ಹಿಡಿದು ನಿಂತಿದ್ದಾನೆ. ಈತನ ಪಕ್ಕದಲ್ಲಿ ಒಬ್ಬ ಸೇವಕನಿದ್ದಂತೆ ಕಂಡುಬರುತ್ತದೆ. ಪ್ರಾಯಶಃ ಈತನೇ ನಡಿವಿ ಕೋಟೆಯನ್ನು ಆಳಿದ ಪಾಳೆಯಗಾರನಿರಬೇಕು. ಇದಕ್ಕೆ ಯಾವುದೇ ಆಧಾರಗಳು ಈತನಕ ದೊರೆತಿಲ್ಲ.

ಟಿಪ್ಪಣಿಗಳು

೧. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕದ ಪುರಾತತ್ತ್ವ ನೆಲೆಗಳು*, ಪು. ೩೪೯. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. Rangarajan, L.N. 1987. *Kautilyas Arthashastra.* Pp. 184-185





ನಡಿವಿ ಕೋಟೆಯ ನಕ್ಷೆ

೧. ಕೋಟೆಯ ಬಾಗಿಲು ೨. ಕೊತ್ತಳ ೩. ನದಿಕಡೆಯ ಬಾಗಿಲು ೪. ರಾಮಲಿಂಗೇಶ್ವರ ದೇವಾಲಯ ೫. ಚೌಕಾಕಾರದ ಕೊತ್ತಳ

೬.೪ ಶಿರುಗುಪ್ಪ

ಶಿರುಗುಪ್ಪ ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇದು ಬಳ್ಳಾರಿಯಿಂದ ಉತ್ತರ ದಿಕ್ಕಿಗೆ ೫೬ ಕಿ.ಮೀ. ದೂರದಲ್ಲಿದೆ. ಶಿರುಗುಪ್ಪದಿಂದ ೨ ಕಿ.ಮೀ. ಪಶ್ಚಿಮಕ್ಕೆ ದೇಶನೂರಿಗೆ ಹೋಗುವ ರಸ್ತೆಯಲ್ಲಿ ತುಂಗಭದ್ರಾ ನದಿಗೆ ಸೇತುವೆಯನ್ನು ನಿರ್ಮಿಸಲಾಗಿದೆ. ಈ ಸೇತುವೆಯ ಪಕ್ಕದ ನದಿಯ ಬಲದಂಡೆಯ ಮೇಲೆ ಶಿರುಗುಪ್ಪೆಯ ಹಳೇ ಗ್ರಾಮವಿತ್ತು. ಈ ವಿಷಯವನ್ನು ಅಲ್ಲಿಯ ಶಂಭುಲಿಂಗೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೧೯೯ರ ಶಾಸನದಲ್ಲಿ ಹೇಳಿದೆ.[೧] ಈ ಶಾಸನವು ಹಳೇ ಶಿರುಗುಪ್ಪ ಗ್ರಾಮದ ದಕ್ಷಿಣ ದಿಕ್ಕಿಗೆ ಶಂಭುಲಿಂಗೇಶ್ವರ ದೇವಾಲಯವಿರುವುದನ್ನು ಉಲ್ಲೇಖಿಸುವುದು.

ಶಿರುಗುಪ್ಪವು ತೆಕ್ಕೆಕಲ್ಲೂ-೧೦ಕ್ಕೆ ಸೇರಿದ ಒಂದು ಗ್ರಾಮ. ಇದು ಕ್ರಿ.ಶ. ೧೦ನೆಯ ಶತಮಾನಕ್ಕೂ ಮುಂಚಿನ ಸ್ಥಿತಿ. ಇಲ್ಲಿ ಹರಿದಿರುವ ತುಂಗಭದ್ರಾ ನದಿಯಿಂದಾಗಿ ಹಲವು ರಾಜ್ಯಗಳಿಗೆ ಗಡಿಪ್ರದೇಶವಾಗಿ ಶಿರುಗುಪ್ಪವು ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ಪ್ರಾಯಶಃ ಆಗಲೇ ಇಲ್ಲಿ ಕೋಟೆಯನ್ನು ಕಟ್ಟಿಕೊಂಡಿರಬೇಕು. ಏಕೆಂದರೆ ಕಂಪಿಲರಾಯನಿಗೂ ವೀರಬಲ್ಲಾಳನು ಸೇನೆಯೊಂದಿಗೆ ಶಿರುಗುಪ್ಪೆಯಲ್ಲಿ ಬೀಡು ಬಿಡುತ್ತಾನೆ. ಇಲ್ಲಿ ಘೋರವಾದ ಯುದ್ಧ ನಡೆದು ಅದರಲ್ಲಿ ಬಲ್ಲಾಳನ ಬಂಟ ಚಂಬೆದಂಡನಾಯಕನು ವೀರಾವೇಶದಿಂದ ಹೋರಾಡಿದ ಚಿತ್ರಣವಿದ್ದು ಅದು ಹೀಗಿದೆ :

ಭರದಿಂದಂ ಶಿರುಗುಪ್ಪೆಗಯ್ದಿ ಬೀಡಲನ್ತಾ ವಾರ್ತೆ
ಯಂ ಕಂಪಿಲಂ ನಿರುತಂ ಕೇಳಿರ (ದ) ಲ್ಲಿ
ಬನ್ದುಯೋಳ್ ಸೊಂಪಾಗೆ ಮಾರ್ಕೊಣ್ಣು ಭೂದರ ಬಲ್ಲಾಳ
ನೃಪಾಳನಿಕ್ಕಲನ ನೋಡಲ್ ಚಂಬೆ ದಂಡಾಧೀಪಂ ಧುರದೊಳ್
ಪೊಕ್ಕಿರೆ ದೊಕ್ಕಲಿಕ್ಕಿ ಕಡಿದಂ ಸಬ್ಬೋರ್ಬ್ಬಿ ಬಾರ್ಪೆ ವಿನಂ ಎಂದು

ಕೊಡಲಾಗಿದೆ. ಕಂಪಿಲರಾಯನಿಗೂ ವೀರಬಲ್ಲಾಳನಿಗೂ ಶಿರುಗುಪ್ಪದಲ್ಲಿ ಯುದ್ಧ ನಡೆದಾಗ ವೀರಬಲ್ಲಾಳನು ಇಲ್ಲಿ ಬಂದು ಬೀಡು ಬಿಡಲು ಇದು ರಕ್ಷಣೆಗೆ ಯೋಗ್ಯಸ್ಥಳವಾಗಿರಲೇಬೇಕು.

ಮುಂದೆ ವಿಜಯನಗರ ಕಾಲಕ್ಕೆ ಶಿರುಗುಪ್ಪವನ್ನು ಸೀಮೆ ಎಂದು ಕರೆದಿರುವಂತೆ ಶಾಸನಗಳಿಂದ ತಿಳಿಯುವ ಅಂಶ. ಸೀಮೆ ಎನ್ನುವುದು ವಿಜಯನಗರ ಅರಸರ ಆಡಳಿತ ವಿಭಾಗ. ಇಲ್ಲಿ ವಿಜಯನಗರ ಅರಸರ ನಂತರ ಹಂಡೆ ಪಾಳೆಯಗಾರರು, ಆದೋನಿ ನವಾಬರು ಇಲ್ಲಿ ಆಳ್ವಿಕೆಯನ್ನು ಮಾಡಿದಂತೆ ಶಾಸನಗಳು[೨] ಹಾಗೂ

ಕೈಫಿಯತ್ತುಗಳು ಹೇಳುತ್ತವೆ.[೪] ಇವರುಗಳು ಶಿರುಗುಪ್ಪ ಕೋಟೆಯನ್ನು ಜಿರ್ಣೋದ್ಧಾರ ಮಾಡಿಕೊಂಡಂತೆ ತಿಳಿದುಬರುತ್ತದೆ.[೫]


ಕೋಟೆಯ ಲಕ್ಷಣಗಳು

ಹಳೆಯ ಶಿರುಗುಪ್ಪ ಪ್ರದೇಶದಲ್ಲಿ ಕೋಟೆಗೋಡೆ, ಕೊತ್ತಳಗಳ ಅವಶೇಷಗಳಿರುವುದರಿಂದ ಇವುಗಳ ಆಧಾರದ ಮೇಲೆ ಅಲ್ಲಿಯ ಕೋಟೆಯ ರೂಪುರೇಷೆಗಳನ್ನು ತಿಳಿಯಲು ಯತ್ನಿಸಿದೆ. ಕೋಟೆಗೆ ಆಗ್ನೇಯ ಭಾಗದಿಂದ ಪ್ರವೇಶದ್ವಾರವಿದ್ದಂತೆ ಗುರುತುಗಳಿವೆ. ಇದರ ಬಲಭಾಗಕ್ಕೆ ಆಂಜನೇಯನ ಗುಡಿ ಇದೆ. ಸಾಮಾನ್ಯವಾಗಿ ಆಂಜನೇಯನ ದೇವಾಲಯಗಳಿರುವುದು ಕೋಟೆಯ ಪ್ರವೇಶದ್ವಾರದ ಬಳಿ ಎನ್ನುವುದನ್ನು ಗಮನಿಸಬೇಕು. ಇಲ್ಲಿಂದ ಪಶ್ಚಿಮಕ್ಕೆ ಕೋಟೆಯೊಳಗೆ ಶಂಭುಲಿಂಗೇಶ್ವರ ದೇವಾಲಯವಿದೆ. ಈ ಗುಡಿ ಹಿಂಭಾಗದ ನದಿಯ ದಂಡೆಗೆ ಕೋಟೆಗೋಡೆ ಇದೆ. ಇದು ಇಲ್ಲಿಂದ ದಕ್ಷಿಣ ದಿಕ್ಕಿಗೆ ಸುಮಾರು ೨೦೦ ಮೀಟರ್‌ನಷ್ಟು ಉದ್ದವಿದೆ. ಈ ಕೋಟೆಗೋಡೆ ಅಂಚಿಗು ಒಂದು ಆಂಜನೇಯ ಗುಡಿ ಇದೆ. ಈ ಕೋಟೆಗೋಡೆಯಲ್ಲಿ ಚೌಕ ಮತ್ತು ವೃತ್ತಾಕಾರದ ನಾಲ್ಕು ಕೊತ್ತಳಗಳಿವೆ.



ನದಿಯ ದಂಡೆಯ ಮೇಲಿರುವ ಕೋಟೆಯ ಗೋಡೆ

ಶಂಭುಲಿಂಗೇಶ್ವರ ದೇವಾಲಯದ ಉತ್ತರಕ್ಕೆ ಕೋಟೆ ಬಾಗಿಲಿದೆ. ಇದನ್ನು ಹೊಳೆಯ ಕಡೆಯ ಬಾಗಿಲೆಂದು ಶಾಸನವು ಕರೆದಿದೆ.[೬] ಈ ಬಾಗಿಲಿನ ದಕ್ಷಿಣದ ಕೋಟೆಗೋಡೆಯಲ್ಲಿ ಮುಂಚಾಚಿದ ವೃತ್ತಾಕಾರದ ಕೊತ್ತಳವಿದೆ. ಇದನ್ನು ಕ್ರಿ.ಶ. ೧೬೪೯ ರಲ್ಲಿ ರುದ್ರು ಲಿಂಗೋಜಿ ಕಟ್ಟಿಸಿ ಈ ಕೊತ್ತಳಕ್ಕೆ "ಸಾಹೇಬ ಬುರ್ಜಿ" ಎಂದು ಕರೆದಿರುವಂತೆ ಶಾಸನದಲ್ಲಿ ಉಲ್ಲೇಖವಾಗಿದೆ.[೭] ಕೋಟೆಯ ಆಗ್ನೇಯ ದಿಕ್ಕಿಗೆ ಬಹುಭುಜಾಕೃತಿಯ ಬೃಹದಾಕಾರದ ಕೊತ್ತಳವಿದೆ. ಇದನ್ನು ಕ್ರಿ.ಶ. ೧೬೨೭ರ ಮಹಮ್ಮದನ ಕಾಲದ ಶಾಸನದಲ್ಲಿ[೮] "ಹುಸೇನಿ ಬುರ್ಜ" ಎಂದು ಕರೆದು ದಳಪತ್ ರಾಯನು ಇದನ್ನು ಕಟ್ಟಿಸಿದನೆಂದು ಹೇಳುವುದು.





ಹುಸೇನಿ ಬುರುಜು

ಕೋಟೆಯನ್ನು ಕೆತ್ತಿ ನಯಮಾಡಿದ ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಮಧ್ಯದಲ್ಲಿ ಸಂದಿ ಇಲ್ಲದಂತೆ ಒಂದುಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಕೆತ್ತಿ ಜೋಡಿಸಿದೆ. ಕಲ್ಲುಗಳ ಮಧ್ಯದಲ್ಲಿ ಯಾವುದೇ ಗಾರೆಯ ಲೇಪನವಿಲ್ಲ. ಸುಮಾರು ೨೫ ಅಡಿ ಎತ್ತರವಿರುವ ಕೋಟೆಯ ಮೇಲಿನ ಅಗಲ ಸುಮಾರು ೫ ಅಡಿ. ಇದರ ಮೇಲಿದ್ದ ಗಾರೆಯ ಕುಂಬೆಯ ಅವಶೇಷಗಳು ಕಾಣುತ್ತವೆ.

ಕೋಟೆಯೊಳಗೆ ಇನ್ನೂ ಅನೇಕ ಶಿಥಿಲವಾದ ಕಟ್ಟಡಗಳಿವೆ. ಅಲ್ಲಿ ಜನವಾಸವಿಲ್ಲ. ಇಲ್ಲಿಯ ಭೂಮಿಯಲ್ಲಿ ಉಳುಮೆ ಮಾಡಲಾಗುತ್ತಿದೆ.

ಕೋಟೆಯೊಳಗಿರುವ ಸ್ಮಾರಕಗಳು

ಕೋಟೆಯೊಳಗೆ ಶಂಭುಲಿಂಗೇಶ್ವರ ದೇವಾಲಯ, ಎರಡು ಆಂಜನೇಯನ ಗುಡಿಗಳು, ಬಾವಿ, ಮಸೀದಿ ಇತ್ಯಾದಿಗಳಿವೆ.

ಶಂಭುಲಿಂಗೇಶ್ವರ ದೇವಾಲಯ : ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮೂಲತಃ ತ್ರಿಕೂಟ. ಮುಖ್ಯ ಗರ್ಭಗೃಹದಲ್ಲಿ ಶಂಭುಲಿಂಗವಿದ್ದು, ಅದರ ಮುಂಭಾಗದಲ್ಲಿ ನಂದಿ ಶಿಲ್ಪವಿದೆ. ಇದರ ಎಡಬದಿಯ ಗರ್ಭಗೃಹದಲ್ಲಿ ಕಾಶಿವಿಶ್ವನಾಥ ಲಿಂಗವಿದ್ದರೆ, ಬಲಬದಿಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನನೆಂದು ಕರೆಯುವ ಲಿಂಗವಿದೆ. ಈ ಗರ್ಭಗೃಹಗಳ ಮಧ್ಯಭಾಗದಲ್ಲಿ ವಿಶಾಲವಾದ ಸಭಾಮಂಟಪ ಹಾಗೂ ಮುಖಮಂಟಪವನ್ನು ಹೊಂದಿದೆ. ಕಂಬಗಳಲ್ಲಿ ಚಚ್ಚೌಕ, ಬಹುಮುಖ, ವೃತ್ತಕಗಳನ್ನು ಹಂತ ಹಂತವಾಗಿ ಕಡಿದು ಅಲಂಕರಿಸಲಾಗಿದೆ. ದೇವಾಲಯದ ಆವರಣದಲ್ಲಿ ಗಣೇಶ, ನಂದಿ, ಷಣ್ಮುಖ ಶಿಲ್ಪಗಳಿದ್ದು, ಕಲ್ಯಾಣಿ ಚಾಳುಕ್ಯರ ಶಾಸನಗಳೂ ಇವೆ.



ಈ ದೇವಾಲಯದ ಆವರಣದಲ್ಲಿ ಎರಡು ಶಾಸನಗಳಿವೆ. ಒಂದು ಕಲ್ಯಾಣ ಚಾಳುಕ್ಯ ಅರಸ ತ್ರಿಭುವನ ಮಲ್ಲದೇವನ ಪತ್ನಿಯಾದ ಪಿರಿಯಕೇತಲ ದೇವಿಯು ಶಿರುಗುಪ್ಪ, ಕೊಳನೂರು ಮೊದಲಾದ ಗ್ರಾಮಗಳನ್ನು ದತ್ತಿಬಿಟ್ಟ ವಿವರ ಹೊಂದಿದೆ.[೯] ಇನ್ನೊಂದು ಮಲ್ಲಿಕ್ ಅಬ್ದುಲ್ ಮಹಮದ್‌ನ ಶಾಸನ.[೧೦] ಕಲ್ಯಾಣ ಚಾಳುಕ್ಯ ಶೈಲಿಯನ್ನು ಸಂಪೂರ್ಣವಾಗಿ ತನ್ನಲ್ಲಿ ಅಡಗಿಸಿಕೊಂಡ ಈ ದೇವಾಲಯವು ಕಲ್ಯಾಣ ಚಾಳುಕ್ಯರೆಂದು ಮೇಲಿನ ಶಾಸನಗಳು ದೃಢಪಡಿಸುತ್ತವೆ.

ಬಾವಿ : ಶಂಭುಲಿಂಗೇಶ್ವರ ದೇವಾಲಯದ ಬಲಭಾಗಕ್ಕೆ ಹಳೆಯ ಬಾವಿ ಇದೆ. ಇದನ್ನು ಕ್ರಿ.ಶ. ೧೬೨೭ ರಲ್ಲಿ ಮಲ್ಲಿಕ್ ಅಬ್ದುಲ್ ಮಹಮದ್‌ನ ದಳಪತಿರಾಯ್ ನೆಂಬುವನು ಕಟ್ಟಿಸಿದನೆಂದು ಶಾಸನವಿದೆ.[೧೧] ಇದು ವೃತ್ತಾಕಾರವಾಗಿದ್ದು, ಸುಮಾರು ೧೦೦ ಅಡಿಗಳಷ್ಟು ಆಳವಿದೆ ಎಂದು ತಿಳಿದುಬರುತ್ತದೆ. ಈ ಬಾವಿಯು ಕೋಟೆಯೊಳಗಿನ ಜನತೆಗೆ ನೀರನ್ನು ಪೂರೈಸಿದೆ.

ಮಸೀದಿ : ಇದು ಹುಸೇನಿ ಬುರ್ಜದ ಪಕ್ಕದಲ್ಲಿಯೇ ಇದೆ. ಈ ಮಸೀದಿಗೆ ಶೈಯದ್ ನೂರ್ ಮಹಮದ್ ಷಾ ಖಾದ್ರಿ ದರ್ಗಾ ಎಂದು ಕರೆಯುವರು. ಇತ್ತೀಚಿಗೆ ನಿರ್ಮಿಸಿರುವುದಾಗಿ ಅದರ ಲಕ್ಷಣಗಳು ಹೇಳುತ್ತವೆ.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧,* ಪು. ೯೧. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. ನಾಗಯ್ಯ, ಜೆ.ಎಂ. ೨೦೦೨. *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ,* ಪು. ೧೨೬. ಬಳ್ಳಾರಿ : ಲೋಹಿಯಾ ಪ್ರಕಾಶನ

೩. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೧೨೬

೪. ಕಲಬುರ್ಗಿ, ಎಂ.ಎಂ. ೧೯೯೪. *ಕರ್ನಾಟಕದ ಕೈಫಿಯತ್ತುಗಳು,* ಪು. ೪೬೩. ಹಂಪಿ : ಕನ್ನಡ ವಿಶ್ವವಿದ್ಯಾಲಯ

೫. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೯೧-೯೨

೬. *ಅದೇ,* ಪು. ೯೪

೭. *ಅದೇ,* ಪುಟ ೯೪

೮. *ಅದೇ,* ಪುಟ ೯೪-೯೫

೯. *ಅದೇ,* ಪುಟ ೯೧-೯೨

೧೦. A.R. No. 106 of 1977. p.78

೧೧. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೯೨

❑❑

೭

ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಟೆಗಳು

(Forts of Hagaribommanahalli Taluk)

೭

ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಟೆಗಳು

(Forts of Hagaribommanahalli Taluk)

ಹಗರಿಬೊಮ್ಮನಹಳ್ಳಿಯು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇದು ಬಳ್ಳಾರಿಯಿಂದ ಸುಮಾರು ೧೦೨ ಕಿ.ಮೀ. ದೂರದಲ್ಲಿದೆ. ಈ ತಾಲೂಕನ್ನು ಉತ್ತರದಲ್ಲಿ ರಾಯಚೂರು ಜಿಲ್ಲೆ, ಪೂರ್ವದಲ್ಲಿ ಹೊಸಪೇಟೆ ಕೂಡ್ಲಿಗಿ, ದಕ್ಷಿಣದಲ್ಲಿ ಹರಪನಹಳ್ಳಿ, ಪಶ್ಚಿಮದಲ್ಲಿ ಹಡಗಲಿ ತಾಲೂಕುಗಳು ಸುತ್ತುವರಿದಿವೆ. ಈ ತಾಲೂಕಿನಲ್ಲಿ ಹಂಪಾಪಟ್ಟಣ, ಮಾಲವಿ, ಹಗರಿಬೊಮ್ಮನಹಳ್ಳಿ, ತಂಬ್ರಹಳ್ಳಿಗಳು ಪ್ರಮುಖ ಹೋಬಳಿ ಕೇಂದ್ರಗಳಾಗಿವೆ. ತಾಲೂಕಿನ ಉತ್ತರದಲ್ಲಿ ತುಂಗಭದ್ರಾ ನದಿ ಮತ್ತು ತುಂಗಭದ್ರಾ ಜಲಾಶಯದ ಹಿನ್ನೀರು ಹರಡಿದ್ದು ತಾಲೂಕು ಗಡಿಯಾಗಿ ರಾಯಚೂರು ಜಿಲ್ಲೆಯನ್ನು ಇಲ್ಲಿಂದ ಬೇರ್ಪಡಿಸಿದೆ. ಚಿಕ್ಕಹಗರಿ ಈ ತಾಲೂಕಿನ ಮುಖ್ಯನದಿ. ಇದು ದಕ್ಷಿಣದಿಂದ ಉತ್ತರಾಭಿಮುಖವಾಗಿ ಹರಿದು ತುಂಗಭದ್ರಾನದಿಯನ್ನು ಸೇರಿಕೊಳ್ಳುತ್ತದೆ. ಸಾಮಾನ್ಯ ಮಳೆಯಾಗುವ ಈ ತಾಲೂಕಿನ ವ್ಯವಸಾಯಕ್ಕೆ ಅನುಕೂಲವಾಗಲು ಚಿಕ್ಕಹಗರಿ ನದಿಗೆ ಹಗರಿಬೊಮ್ಮನಹಳ್ಳಿಯ ದಕ್ಷಿಣಕ್ಕೆ ೪ ಕಿ.ಮೀ. ದೂರದಲ್ಲಿ ಮಾಲವಿಯ ನೈರುತ್ಯಕ್ಕೆ ಸುಮಾರು ೧ ಕಿ.ಮೀ. ದೂರದಲ್ಲೂ ಕಟ್ಟೆಕಟ್ಟಿ ಹಗರಿಬೊಮ್ಮನಹಳ್ಳಿ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಜಲಾಶಯದ ಎರಡು ನಾಲೆಗಳಿಂದ ಈ ಭಾಗದ ಒಣಭೂಮಿಗೆ ನೀರನ್ನು ಒದಗಿಸಿದೆ. ಹಗರಿಬೊಮ್ಮನಹಳ್ಳಿಯಲ್ಲಿ ಅನೇಕ ಎಣ್ಣೆ ಕಾರ್ಖಾನೆಗಳಿದ್ದು, ತೈಲೋತ್ಪತ್ತಿ ಒಂದು ಮುಖ್ಯ ಕೇಂದ್ರವಾಗಿದೆ. ಇದು ಇಂದಿನ ನೋಟ. ಆದರೆ ಈ ಪ್ರದೇಶದ ಇತಿಹಾಸ ಬಹು ಪ್ರಾಚೀನಕ್ಕೆ ಹೋಗುತ್ತದೆ.

ತಾಲೂಕಿನ ಹಂಪಾಸಾಗರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳು[1] ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಸುಟ್ಟಮಣ್ಣಿನ ಶವಪೆಟ್ಟಿಗೆ ದೊರೆತಿವೆ.[2] ಗದ್ದಿಕೇರಿಯಲ್ಲಿ ಶಿಲಾಯುಗ ಹಾಗೂ ಇತಿಹಾಸ

ಆರಂಭಯುಗದ ಅವಶೇಷಗಳು ಕಂಡುಬಂದಿವೆ.[೩] ಶಾತವಾಹನರ, ಪಲ್ಲವರ, ಬಾದಾಮಿಯ ಚಾಳುಕ್ಯರ ಕೋಟೆಯ ಯಾವುದೇ ಅವಶೇಷಗಳು ಇಲ್ಲಿಲ್ಲ. ರಾಷ್ಟ್ರಕೂಟರ ಕುರುಹುಗಳು ಕೋಗಳಿಯಲ್ಲಿವೆ. ಕೋಗಳಿ, ಅಂಬಳಿ, ಹೊಳಗುಂದಿ, ಮೋರಿಗೇರಿಗಳಲ್ಲಿ ಕಲ್ಯಾಣ ಚಾಳುಕ್ಯರ ಕೋಟೆಗಳಿರುವವೆಂದು ಎಸ್.ಕೆ. ಜೋಶಿಯವರು ಸೂಚಿಸಿರುವರು.[೪] ಪ್ರಸ್ತುತ ಕೋಟೆಯ ಯಾವ ಲಕ್ಷಣಗಳು ಅಲ್ಲಿ ಗೋಚರಿಸುವುದಿಲ್ಲ. ವಿಜಯನಗರೋತ್ತರ ಕಾಲದ ಕೋಟೆಯ ಕೆಲವು ಪಳಿಯುಳಿಕೆಗಳು ತಂಬ್ರಹಳ್ಳಿ, ಹಂಪಾಪಟ್ಟಣ, ಹನಸಿಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ಕುರಿತಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕೋಟೆಯ ಭಾಗವಾಗಿದ್ದ ಕೊತ್ತಳಗಳು ಚಿಂತ್ರಪಳ್ಳಿ, ಹಗರಿಬೊಮ್ಮನಹಳ್ಳಿ, ಉಪ್ಪಾರಗಟ್ಟಿ, ಇತ್ಯಾದಿ ಹಳ್ಳಿಗಳಲ್ಲಿವೆ.

ಟಿಪ್ಪಣಿಗಳು

೧. ವೀಣಾ, ಎಂ.ಪಿ. ೧೯೯೮. ಕೊಟ್ನಕಲ್ಲು ಪರಿಸರದ ಪ್ರಾಗೈತಿಹಾಸಿಕ ನೆಲೆಗಳು, *ಇತಿಹಾಸ ದರ್ಶನ* - ೧೩. ಪು. ೧೬

೨. Foote, R.B. 1916. *The Foote collection of Prehistoric and Protohistoric Antiquities Notes on their ages and Distribution,* p. 80. Madras : Government Museum

೩. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕದ ಪುರಾತತ್ವ ನೆಲೆಗಳು,* ಪು. ೩೬೫. ಹಂಪಿ: ಕನ್ನಡ ವಿಶ್ವವಿದ್ಯಾಲಯ

೪. ಜೋಶಿ, ಎಸ್.ಕೆ. ೨೦೦೦. ಕರ್ನಾಟಕದ ಪ್ರಾಚೀನ ಕೋಟೆಗಳು, *ಸೂರ್ಯಕೀರ್ತಿ* (ಸಂ : ಕೃಷ್ಣಮೂರ್ತಿ ಪಿ.ವಿ. ಮತ್ತು ಕೆ. ವಸಂತಲಕ್ಷ್ಮಿ), ಪು. ೧೪೯. ಬೆಂಗಳೂರು : ಸೂರ್ಯನಾಥ ಕಾಮತ್‌ರ ಅಭಿನಂದನಾ ಸಮಿತಿ

೭.೧ ತಂಬ್ರಹಳ್ಳಿ

ತಂಬ್ರಹಳ್ಳಿಯು ಹಗರಿಬೊಮ್ಮನಹಳ್ಳಿಯಿಂದ ಪಶ್ಚಿಮಕ್ಕೆ ಸುಮಾರು ೨೦ ಕಿ.ಮೀ. ದೂರದಲ್ಲಿರುವ ಹೋಬಳಿಕೇಂದ್ರ. ಇಲ್ಲಿಂದ ಈಶಾನ್ಯಕ್ಕೆ ಸುಮಾರು ೩ ಕಿ.ಮೀ. ಅಂತರದಲ್ಲಿ ಬಂಡಿಕ್ಯಾಂಪ್ ಇದೆ. ಇದರ ಪೂರ್ವ ಬೆಟ್ಟದ ಮೇಲಿರುವುದೇ ತಂಬ್ರಹಳ್ಳಿ ಕೋಟೆ. ತಂಬ್ರಹಳ್ಳಿ ಕೋಟೆ ಇರುವ ಬೆಟ್ಟವನ್ನು ಜನ ಹೆಸರಿಸುತ್ತಿರುವುದು ರಂಗನಾಥನ ಬೆಟ್ಟವೆಂದು. ಬೆಟ್ಟದ ಮೇಲಿರುವ ರಂಗನಾಥನ ಗುಡಿಯಿಂದಾಗಿಯೇ ರಂಗನಾಥನ ಬೆಟ್ಟವೆಂದು ಹೆಸರು ಬಂದಿದೆ.

ಕೋಟೆಯಿರುವ ರಂಗನಾಥನ ಬೆಟ್ಟವನ್ನು ಪೂರ್ವ, ದಕ್ಷಿಣ, ಉತ್ತರ ದಿಕ್ಕುಗಳಲ್ಲಿ ತುಂಗಭದ್ರಾ ಆಣೆಕಟ್ಟಿನ ಹಿನ್ನೀರು ಸುತ್ತುವರೆದಿದೆ. ಹಾಗಾಗಿ ಗಿರಿದುರ್ಗವಾಗಿದ್ದ ಈ ಕೋಟೆ ಈಗೀಗ ಜಲದುರ್ಗದಂತೆ ಗೋಚರಿಸುತ್ತದೆ.

ಓಬರನಾಯಕನೆಂಬ ಸೇನಾಪತಿಯು ಕ್ರಿ.ಶ. ೧೬೧೬ ರಿಂದ ೧೭೫೦ರ ದೀರ್ಘಾವಧಿವರೆಗೆ ಆಳ್ವಿಕೆ ಮಾಡಿದ ಹರಪನಹಳ್ಳಿ ಪಾಳೆಯಗಾರ ಭರಮಣ್ಣನಾಯಕನ ಸೈನ್ಯದಲ್ಲಿ ಕೆಲಕಾಲ ಇದ್ದು, ಅನೇಕ ಯುದ್ಧಗಳಲ್ಲಿ ಅರಸರಿಗೆ ಜಯವನ್ನು ತಂದುಕೊಟ್ಟು ಹರಪನಹಳ್ಳಿ ರಾಜ್ಯ ವಿಸ್ತರಣೆಗೆ ಸಹಾಯಕನಾಗಿದ್ದನಂತೆ. ಹಾಗಾಗಿ ಹರಪನಹಳ್ಳಿ ಪಾಳೆಯಗಾರರಿಗೆ ಇವನ ಮೇಲೆ ಹೆಚ್ಚು ಪ್ರೀತಿ, ವಿಶ್ವಾಸಗಳಿದ್ದವು. ಹೀಗಾಗಿ ರಾಜ್ಯದ ವಾಯುವ್ಯ ಗಡಿ ರಕ್ಷಣೆಗಾಗಿ ತಂಬ್ರಹಳ್ಳಿಯಲ್ಲಿ ಸೈನಿಕ ನೆಲೆಯ ಮುಖ್ಯಸ್ಥನನ್ನಾಗಿ ಓಬರಾನಾಯಕನನ್ನು ನೇಮಿಸಿದರೆಂದು ತಿಳಿದುಬರುತ್ತದೆ.[೧] ಮುಂದೆ ಇಲ್ಲಿ ಕೋಟೆ ಕಟ್ಟಿಕೊಂಡು ಸಾಮಂತ ಅರಸನಾಗಿ ರಾಜ್ಯವಾಳುತ್ತಾ ಹರಪನಹಳ್ಳಿ ರಾಜ್ಯದ ಮೇಲೆ ಅನ್ಯ ಅರಸರು ಯುದ್ಧಸಾರಿದಾಗ ತಮ್ಮ ಒಡೆಯರಾದ ಹರಪನಹಳ್ಳಿ ಪಾಳೆಯಗಾರರಿಗೆ ನಿಷ್ಠೆ ತೋರಿಸಿ, ಅವರಿಗೆ ಎಲ್ಲಾ ರೀತಿಯ ನೆರವನ್ನು ಕೊಡುತ್ತಿದ್ದನೆಂದು ಸ್ಥಳೀಯರು ಅಭಿಪ್ರಾಯ ಪಡುವರು.

ಕೋಟೆಯೊಳಗೆ ನಾಲ್ಕಾರು ತುಂಡು ಶಾಸನಗಳಿವೆ.[೨] ಅವು ತ್ರುಟಿತವಾಗಿರುವದರಿಂದ ಕೋಟೆಯ ಬಗ್ಗೆ ಯಾವುದೇ ಅಧಿಕೃತ ದಾಖಲೆಗಳು ಲಭ್ಯವಾಗಿಲ್ಲ. ಈ ಶಾಸನಗಳು ವಿಜಯನಗರೋತ್ತರ ಕಾಲದವೆಂದು ಮಾತ್ರ ಹೇಳಬಹುದು. ಒಂದು ಶಾಸನವು ಇಟ್ಟಿಗೆ ಶಾನಭೋಗವ ಬರಸೈಯನ ಮಗ ಸುರೇರಾಯ ಆನೆಹೊಂಡವನ್ನು ಕಟ್ಟಿಸಿದಂತೆ ಸೂಚಿಸುತ್ತದೆ.[೩]

ಹರಪನಹಳ್ಳಿ ಪಾಳೆಯಗಾರರು ತಮ್ಮ ರಾಜ್ಯ ವಿಸ್ತರಣೆಯಲ್ಲಿ ರಾಜ್ಯದ ಹಲವೆಡೆ ತಮ್ಮ ಸೈನಿಕ ನೆಲೆಗಳನ್ನು ಸ್ಥಾಪಿಸಿ, ಅಲ್ಲಿ ರಕ್ಷಣೆಗಾಗಿ ಕೋಟೆಗಳನ್ನು ಕಟ್ಟಿಕೊಂಡಿದ್ದರು. ಉದಾಹರಣೆಗಾಗಿ ಕರಡಿದುರ್ಗ, ಬಂಡ್ರಿ, ಚಿಗಟೇರಿ, ವೀರನದುರ್ಗ ಮುಂತಾದವು. ವಾಯುವ್ಯ ಭಾಗದ ಗಡಿ ರಕ್ಷಣೆಗಾಗಿ ತಂಬ್ರಹಳ್ಳಿಯಲ್ಲಿಯೂ ಇವರೇ ಕೋಟೆ

ಕಟ್ಟಿಸಿರಬಹುದು. ಸ್ಥಳೀಯರು ಗುರುತಿಸುವ ಓಬರನಾಯಕ ಅಲ್ಲಿಯ ಶಾಸನದಲ್ಲಿ ಬರುವ[೪] ಇಟ್ಟಿಗೆ ಶಾನಭೋಗರ ಮಗನಾಗಿದ್ದು, ಈತನೇ ತಂಬ್ರಹಳ್ಳಿ ಕೋಟೆಯನ್ನು ಆಳಿರಬಹುದು.

ಕೋಟೆಯ ಲಕ್ಷಣಗಳು

ಬೆಟ್ಟವನ್ನು ಬಳಸಿ ಸುತ್ತಲೂ ಕೋಟೆ ನಿರ್ಮಿಸಿದ್ದರೂ ಪ್ರಸ್ತುತ ಇರುವುದು ಅರಕಲು ಮುರುಕಲು ಕೋಟೆ - ಗೋಡೆಗಳು ಮಾತ್ರ. ಕೋಟೆಯ ದಕ್ಷಿಣ ಹಾಗೂ ಪೂರ್ವ ಭಾಗಗಳಲ್ಲಿ ಗೋಡೆಯ ಅವಶೇಷಗಳಿವೆ. ಕೋಟೆಯನ್ನು ತಳಪಾಯದ ಆಸರೆ ಇಲ್ಲದೆ ಹಾಸು ಬಂಡೆಯ ಮೇಲೆ ಕಟ್ಟಲಾಗಿದೆ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳು ಇದ್ದವಾದರೂ ಈಗ ಗೋಚರಿಸುವುದಿಲ್ಲ. ಇಲ್ಲಿಯ ಭೌಗೋಳಿಕ ಲಕ್ಷಣಗಳಿಂದಾಗಿ ಕೋಟೆಯ ಮುಖ್ಯಬಾಗಿಲು ದಕ್ಷಿಣದ ಕೋಟೆ ಗೋಡೆಯಲ್ಲಿದ್ದಂತೆ ಕಾಣುತ್ತದೆ. ಈ ಭಾಗದಲ್ಲಿ ಕೋಟೆಯ ಒಳಹೋಗಲು ಸವೆದ ಮೆಟ್ಟಿಲುಗಳ ದಾರಿ ಇದೆ.



ಬೆಟ್ಟದ ಮೇಲಿರುವ ಕೋಟೆ

ಕೋಟೆಯೊಳಗಿರುವ ನಿಸರ್ಗದತ್ತ ಬಂಡೆಗಳನ್ನು ಕಡೆದು ನೀರಿನ ವ್ಯವಸ್ಥೆಗಾಗಿ ಹೊಂಡಗಳನ್ನು ನಿರ್ಮಿಸಿ ಕೊಂಡಿದ್ದರು. ಇಂತಹ ನಾಲ್ಕಾರು ಹೊಂಡಗಳು ಕೋಟೆಯ ನೈರುತ್ಯ ಭಾಗದಲ್ಲಿವೆ. ಇವುಗಳಿಗೆ ಹೆಸರುಗಳಿದ್ದವು. ಒಂದಕ್ಕೆ ಆನೆಹೊಂಡವೆಂದು ಕರೆದಿರುವುದು ಶಾಸನದಿಂದ ತಿಳಿಯುತ್ತದೆ.[೫]

ಕೋಟೆಯ ದಕ್ಷಿಣದಿಕ್ಕಿಗೆ ಪಾಳೆಯಗಾರರ ಬಾವಿ ಇದೆ. ಇದನ್ನು ತಂಬ್ರಹಳ್ಳಿ ಓಬರನಾಯಕ ಕಟ್ಟಿಸಿದನೆಂದು ತಿಳಿದುಬರುತ್ತದೆ.[೬] ಇದು ಪೂರ್ವಾಭಿಮುಖವಾಗಿದ್ದು, ಸುಮಾರು ೧೦೦ ಅಡಿ ಉದ್ದ, ೧೫ ರಿಂದ ೨೦ ಅಡಿ ಅಗಲವಾಗಿದೆ. ಪ್ರವೇಶದಲ್ಲಿ ಬಹಳ ಉದ್ದವಾದ ಮೆಟ್ಟಿಲುಗಳಿವೆ. ಪ್ರವೇಶದ ಪ್ರಾರಂಭದಲ್ಲಿ ಭೂಮಿಯ ಮಟ್ಟದ ಮೇಲೆ ಕಟ್ಟಿದ ಮುಖಮಂಟಪವಿದೆ. ಬಾವಿಯ ಮುಖ ಪಾತ್ರಕ್ಕೆ ಹೋಗುವಾಗ ಎರಡೂ ಬದಿಗೆ ಕುಳಿತು ವಿಶ್ರಮಿಸಲು ಅನುಕೂಲವಾಗುವಂತೆ ಗೂಡುಗಳನ್ನು ನಿರ್ಮಿಸಲಾಗಿದೆ. ಮೆಟ್ಟಿಲುಗಳು ನೀರಿರುವ ಭಾಗವನ್ನು ಸಂಧಿಸುವ ಸ್ಥಳದಲ್ಲಿ



ಸೇತುವೆ ಇದೆ. ಸೇತುವೆಯ ಮೇಲೆ ಮಾಳಿಗೆ ಇದ್ದು, ಇಲ್ಲಿ ವಿಶ್ರಾಂತಿ ಪಡೆಯಲು ಸ್ಥಳಾವಕಾಶವಿದೆ. ಬಾವಿಯನ್ನು ಅಲ್ಲಲ್ಲಿ ಶಿಲ್ಪಗಳಿಂದ ಅಲಂಕರಿಸಲಾಗಿದೆ. ನಾಲ್ಕು ದಿಕ್ಕಿನಿಂದ ನೀರನ್ನು ಮೇಲೆತ್ತುವಂತೆ ವ್ಯವಸ್ಥೆ ಮಾಡಲಾಗಿದೆ. ಗೋಡೆಗಳಲ್ಲಿ ಚಿಕ್ಕ ಹಾಗೂ ದೊಡ್ಡ ಗೂಡುಗಳಿವೆ. ಇವುಗಳಲ್ಲಿ ಗಣೇಶ, ಆಂಜನೇಯ, ಗರುಡ, ಕಾಳಿಂಗಮರ್ದನ ಶಿಲ್ಪಗಳನ್ನು ಕೆತ್ತಲಾಗಿದೆ. ಕೋಟೆಯೊಳಗೆ ವಾಸಮಾಡುತ್ತಿದ್ದವರಿಗೆ ಈ ಬಾವಿಯಿಂದ ನೀರಿನ ಪೂರೈಕೆಯಾಗುತ್ತಿತ್ತೆಂದು ಸ್ಥಳೀಯರು ಅಭಿಪ್ರಾಯಪಡುವರು.



ಪಾಳೆಯಗಾರರ ಬಾವಿ

ಕೋಟೆಯ ಮಧ್ಯದಲ್ಲಿ ಬಂಡಿರಂಗನಾಥ, ಲಕ್ಷ್ಮಿ ಹಾಗೂ ಕನಕರಾಯನ ದೇವಾಲಯಗಳಿವೆ. ರಂಗನಾಥ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕಲ್ಲುಬಂಡೆಯ ಮೇಲೆ ಕೊರೆದಿರುವ ರಂಗನಾಥನ ಶಿಲ್ಪವಿದೆ. ಸಾದಾ ಕೆತ್ತನೆಯಿಂದ ಕೂಡಿದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದು ನಿಂತಿರುವ ದ್ವಾರಪಾಲಕರ ಶಿಲ್ಪಗಳಿವೆ. ಅಂತರಾಳದ ಪ್ರವೇಶದ್ವಾರವು ಇದೇ ಮಾದರಿಯದ್ದಾಗಿದೆ. ಸಭಾಮಂಟಪದಲ್ಲಿ ನಾಲ್ಕು ಚೌಕಾಕಾರದ ಕಂಬಗಳಿವೆ. ಅವುಗಳಲ್ಲಿ ಆಳ್ವಾರ್, ಲಜ್ಜೆಗೌರಿ ಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಮೇಲೆ ಐದು ತಲಗಳಿಂದ ಕೂಡಿದ ದ್ರಾವಿಡ ಶೈಲಿಯ ಶಿಖರವಿದೆ. ಇದರಲ್ಲಿರುವ ದೇವ ಕೋಷ್ಠಕಗಳಲ್ಲಿ ಗಾರೆ ಶಿಲ್ಪಗಳನ್ನು ಅಳವಡಿಸಲಾಗಿದೆ.

ಲಕ್ಷ್ಮೀ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಲಕ್ಷ್ಮಿದೇವಿಯ ವಿಗ್ರಹವಿದೆ. ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಈ ದೇವಾಲಯವನ್ನು ಕಣಶಿಲೆ ಹಾಗೂ ಗಾರೆಯಿಂದ ನಿರ್ಮಿಸಲಾಗಿದೆ.



ಕನಕರಾಯನ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಕನಕರಾಯನ ಶಿಲ್ಪವಿದೆ.

ಟಿಪ್ಪಣಿಗಳು

೧. ಕುಂಬಾಸ, ೧೯೯೬. *ಹರಪನಹಳ್ಳಿ ಪಾಳೆಯಗಾರರು,* ಪು. ೧೬. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

೨. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೨೯೩ - ೨೯೫. ಹಂಪಿ: ಕನ್ನಡ ವಿಶ್ವವಿದ್ಯಾಲಯ

೩. *ಅದೇ,* ಪು. ೨೯೪ - ೨೯೫

೪. *ಅದೇ,* ಪು. ೨೯೫

೫. *ಅದೇ,* ಪು. ೨೯೪ - ೨೯೫

೬. *ಹರಪನಹಳ್ಳಿ ಪಾಳೆಯಗಾರರು,* ಪೂರ್ವೋಕ್ತ. ಪು. ೧೬

೭.೨ ಹಂಪಾಪಟ್ಟಣ

ಹಂಪಾಪಟ್ಟಣವು ಹಗರಿಬೊಮ್ಮನಹಳ್ಳಿ ತಾಲೂಕು ಕೇಂದ್ರದಿಂದ ಈಶಾನ್ಯದಿಕ್ಕಿಗೆ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಒಂದು ಹೋಬಳಿ ಕೇಂದ್ರ. ಪಾಳೆಯಗಾರರ ಅವಧಿಯಲ್ಲಿ ಕಟ್ಟಿರುವ ಕೋಟೆಯ ಅವಶೇಷಗಳು ಇಲ್ಲಿವೆ.

ಈ ಕೋಟೆಯ ಕಾಲ ಮತ್ತು ನಿರ್ಮಾಪಕರನ್ನು ಹುಡುಕುವುದು ತುಂಬಾ ಕಷ್ಟದ ಕೆಲಸ. ಕಾರಣ ಆಧಾರಗಳ ಕೊರತೆ. ಸ್ಥಳೀಯರು ಹಂಪಾಪಟ್ಟಣ ಹಂಪಾದೇವಿಯ ತವರೂರು ಹಾಗಾಗಿ ಹಂಪಿಗೂ ನಮ್ಮೂರಿಗೂ ನಿಕಟವಾದ ಸಂಬಂಧಗಳಿವೆ ಎಂದಿಷ್ಟೆ ಹೇಳುತ್ತಾರೆ.

ಹರಪನಹಳ್ಳಿಯ ಪಾಳೆಯಗಾರ ಸೋಮಶೇಖರ ನಾಯಕನು ಆಳ್ವಿಕೆ ಮಾಡುವಾಗ ಅವನಿಗೆ ಮಂತ್ರಿಯಾಗಿದ್ದವನು ಹಂಪರಸ. ರಾಜನ ವಿರುದ್ಧ ಬ್ರಿಟಿಷರ ಪರ ಹಂಪರಸ ಪಿತೂರಿ ಮಾಡಿದನಂತೆ. ಅದಕ್ಕಾಗಿ ಸೋಮಶೇಖರ ನಾಯಕನು ಹಂಪರಸನನ್ನು ಸಂಹರಿಸುವ ಒಳಸಂಚು ಮಾಡಿದ. ಇದನ್ನರಿತ ಹಂಪರಸ ಬ್ರಿಟಿಷ್ ಅಧಿಕಾರಿ ಹ್ಯಾರಿಸನ ಸಹಾಯ ಕೇಳಿದನು. ಆಗ ಹ್ಯಾರಿಸನು ಹೊಸಪೇಟೆ ತಾಲೂಕಿನ ನಂದಿಬಂಡಿ, ಕಲ್ಲಹಳ್ಳಿ, ಬೆನಕನಗುಡಿ ಎಂಬ ಗ್ರಾಮಗಳನ್ನು ಹಂಪರಸನಿಗೆ ಜಹಗೀರಾಗಿ ಕೊಟ್ಟನು.[೧] ಈ ಗ್ರಾಮಗಳು ಇಂದಿನ ಹಂಪಾಪಟ್ಟಣದ ಸುತ್ತಮುತ್ತಲೂ ಇವೆ. ಈ ಹಿನ್ನಲೆಯಲ್ಲಿ ಹಂಪರಸನೇ ಇಲ್ಲಿ ರಾಜ್ಯಭಾರ ಮಾಡಿ ಕೋಟೆ ಕಟ್ಟಿಕೊಂಡನೇ ಎಂಬ ಅನುಮಾನವಿದೆ.

ಕೋಟೆಯ ಲಕ್ಷಣಗಳು

ಕೋಟೆಯು ಗ್ರಾಮದ ಹೊರಭಾಗದಲ್ಲಿದ್ದು, ಇಲ್ಲಿ ಜನವಾಸವಿಲ್ಲ. ಚೌಕಾರದಲ್ಲಿರುವ ಇದು ಸುಮಾರು ೪ ಎಕರೆ ವಿಸ್ತೀರ್ಣವುಳ್ಳದ್ದಾಗಿದೆ. ಇಲ್ಲಿ ಹಾಳು ಮನೆಗಳು ಮತ್ತು ಕಟ್ಟಡಾವಶೇಷಗಳು ಕಂಡುಬರುತ್ತವೆ. ಕೋಟೆಗೆ ಉತ್ತರ ದಿಕ್ಕಿನಲ್ಲಿ ಅಗಸಿಯಿದೆ. ಕೋಟೆ ಗೋಡೆಯಲ್ಲಿ ವೃತ್ತಾಕಾರದ ನಾಲ್ಕು ಕೊತ್ತಳಗಳಿರುವಂತೆ ಗೋಚರಿಸುತ್ತವೆ. ಕೋಟೆ ಗೋಡೆಯನ್ನು ಚಿಕ್ಕ ಚಿಕ್ಕ ಕಲ್ಲುಗಳು, ಇಟ್ಟಿಗೆ ಇವುಗಳ ಮಧ್ಯೆ ಮಣ್ಣನ್ನು ತುಂಬಿ ಕಟ್ಟಲಾಗಿದೆ. ನೆಲಮಟ್ಟದಿಂದ ಗೋಡೆ ಎಷ್ಟು ಎತ್ತರ ಇತ್ತು ಎಂಬುದಕ್ಕೆ ಪೂರ್ಣ ಪ್ರಮಾಣದ ಗೋಡೆ ಎಲ್ಲೂ ಕಂಡುಬರುವುದಿಲ್ಲ. ಕೋಟೆಯ ಸುತ್ತಲೂ ಸುಮಾರು ೧೫ ಅಡಿ ಅಗಲ ೧೦ ಅಡಿ ಆಳವಾಗಿರುವ ಕಂದಕವಿದೆ. ಶಿಥಿಲಾವಸ್ಥೆಯಲ್ಲಿರುವ ಕೋಟೆಯು ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳಲ್ಲಿ ಗೋಡೆಯ ಅಲ್ಪ-ಸ್ವಲ್ಪ ಭಾಗಗಳು ಕಂಡುಬರುತ್ತವೆ. ಕೋಟೆಯೊಳಗೆ ಎರಡು ಚಿಕ್ಕ ದೇವಾಲಯಗಳಿವೆ.



ಕೋಟೆಯ ಗೋಡೆ


ಬಾವಿ, ಕಣಜ ಮತ್ತು ಪಾರ್ವತಿ ವಿಗ್ರಹಗಳಿವೆ. ಬಾವಿಯನ್ನು ಮಧ್ಯಮ ಗಾತ್ರದ ಕಣಶಿಲೆಯಿಂದ ಕಟ್ಟಲಾಗಿದೆ. ಪಾಳೆಯಗಾರರು ಬಳಸಿದ್ದರು ಎನ್ನಲಾದ ಮೂರು ಅಡಿ ಎತ್ತರದ ಎರಡು ಖಡ್ಗಗಳು, ಒಂದೂವರೆ ಅಡಿ ಎತ್ತರದ ಕೈಗತ್ತಿ, ಕೈಗೊಡಲಿ, ನಾಲ್ಕು ಅಡಿ ಎತ್ತರದ ಬಂದೂಕುಗಳು ದೊರೆತಿವೆ. ಇವುಗಳ ಛಾಯಾಚಿತ್ರವನ್ನು ನೀಡಲಾಗಿದೆ. ಕೋಟೆಯ ಮುಂಭಾಗದಲ್ಲಿ ಆಂಜನೇಯ ಹಾಗೂ ವೀರಭದ್ರ ದೇವಾಲಯದ ಜೊತೆಗೆ ಪಾಳೆಯಗಾರರ ದೊಡ್ಡ ಬಾವಿ ಇದೆ. ಆಂಜನೇಯನ ಗುಡಿಯ ಮುಂದೆ ಭೈರವಿ, ಭೈರವ, ಪಾರ್ವತಿ ಶಿಲ್ಪಗಳಿವೆ.




ಪಾಳೆಯಗಾರರ ಆಯುಧಗಳು

ಟಿಪ್ಪಣಿಗಳು

೧. ಗೋವಿಂದಾಚಾರ್ಯ ಚಿಕ್ಕೇರೂರು. ೧೯೫೩. ಅಪ್ರಕಟಿತ ಹಸ್ತಪ್ರತಿ







ಹಂಪಾಪಟ್ಟಣ ಕೋಟೆಯ ನಕ್ಷೆ

೧. ಬಾಗಿಲು ೨. ಕೊತ್ತಳ ೩. ಬಾವಿ ೪. ಕೋಟೆಯೊಳಗಿನ ಬಾವಿ

೭.೩ ಹನಸಿ

ಹನಸಿ ಗ್ರಾಮವು ಹಗರಿಬೊಮ್ಮನಹಳ್ಳಿಯಿಂದ ಆಗ್ನೇಯದಿಕ್ಕಿಗೆ ೧೮ ಕಿ.ಮೀ. ದೂರದಲ್ಲಿದೆ. ಈ ಊರಿನ ಮೊದಲಹೆಸರು ನಾಗರಕಟ್ಟೆ. ಕಟ್ಟೆಯನ್ನು ತೆಗೆದು ಕೆರೆ ನಿರ್ಮಿಸಿದ ಮೇಲೆ ಭತ್ತ ಬೆಳೆಯಲು ಆರಂಭಿಸಿದರಂತೆ. ಈ ಭತ್ತದಿಂದ ತೆಗೆದ ಅಕ್ಕಿಯ ಅನ್ನ (ಅನ್ನ + ಸಿಹಿ) ಸಿಹಿ ಇದ್ದುದರಿಂದ ಈ ಗ್ರಾಮಕ್ಕೆ 'ಹನಸಿ' ಎಂಬ ಹೆಸರು ಬಂದಿತ್ತೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಹನಸಿ ಎಂದರೆ ನೀರಾಡು, ನೀರುಸುರಿ, ಹಸಿಯಾಗಿರು, ತೇವವಾಗಿರು ಎಂಬರ್ಥಗಳಿವೆ. ಈ ಗ್ರಾಮದ ಪಕ್ಕದಲ್ಲಿಯೇ ಹರಿದಿರುವ ಹಳ್ಳಕ್ಕೆ ಕೆರೆ ಕಟ್ಟಿರುವುದರಿಂದ ಗ್ರಾಮದಲ್ಲಿಯ ಭೂಮಿ ಯಾವಾಗಲು ಹಸಿಯಾಗಿಯೇ ಇರುವ ಕಾರಣಕ್ಕಾಗಿ 'ಹನಸಿ' ಎಂಬ ಹೆಸರು ಬಂದಿರುವ ಸಾಧ್ಯತೆಗಳೂ ಇವೆ. ಈ ಗ್ರಾಮದ ಕ್ರಿ.ಶ. ೧೧೧೧ರ ಶಾಸನವು "ಹನಸೆ" ಎಂದು ಕರೆದಿದೆ.

ಕ್ರಿ.ಶ. ೧೧೧೧ರ ಚಾಳುಕ್ಯರ ಶಾಸನದಿಂದ ಪಾಂಡ್ಯರ ಆಡಳಿತ ವ್ಯಾಪ್ತಿಗೆ ಹನಸಿಯು ಸೇರಿರುವುದು ಸ್ಪಷ್ಟವಾಗುತ್ತದೆ.[೧] ಮುಂದೆ ವಿಜಯನಗರದರಸರು, ಪಾಳೆಯಗಾರರು ಆಳ್ವಿಕೆ ಮಾಡಿದರು. ಇಲ್ಲಿಯ ಕೋಟೆಯನ್ನು ಈ ಮೇಲಿನ ಯಾವ ಅರಸು ಮನೆತನದವರು ಕಟ್ಟಿಸಿದರೆಂಬುದಕ್ಕೆ ಸ್ಪಷ್ಟ ದಾಖಲೆಗಳಿಲ್ಲ. ಆದರೆ ಸ್ಥಳೀಯರು ಇದು ಪಾಳೆಯಗಾರರ ಕೋಟೆಯೆಂದು ಗುರುತಿಸುತ್ತಾರೆ.

ಕ್ರಿ.ಶ. ೧೬೦೮ ರಿಂದ ೧೬೪೦ರ ವರೆಗೆ ಆಳ್ವಿಕೆ ಮಾಡಿದ ಹರಪನಹಳ್ಳಿ ಪಾಳೆಯಗಾರ ಭರಮಣ್ಣನಾಯಕನು ಹನಸಿ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಳ್ಳಲು ಯತ್ನಿಸಿದನು. ಆದರೆ ಕೋಟೆಯು ಹೆಚ್ಚು ಭದ್ರವಾಗಿರುವುದಲ್ಲದೆ ರಾಗಿಯ ಅಂಬಲಿಯನ್ನು ಕೋಟೆ ಗೋಡೆಗೆ ಹಾಕಿದ್ದರಿಂದ ಶತ್ರುಗಳಿಗೆ ಇದನ್ನೇರಲು ಹಾಗಲಿಲ್ಲ. ಹೀಗಾಗಿ ಭರಮನಾಯಕನಿಗೆ ಹನಸಿ ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲವಂತೆ. ಆಗ, ಕೋಟೆ ಹೊರಗಿನ ಹೊಲದ ನವಣೆ ಪೈರಿಗೆ ಬೆಂಕಿ ಹಚ್ಚಿದರು. ಇದನ್ನಾರಿಸಲು ಬಂದ ಹನಸಿ ಕೋಟೆ ಕಾವಲು ಪಡೆಯನ್ನು ಸಂಹರಿಸಿ ಮೂರು ತಿಂಗಳ ನಂತರ ಕೋಟೆಯನ್ನು ವಶಪಡಿಸಿಕೊಂಡರೆಂದು ತಿಳಿದುಬರುತ್ತದೆ.[೨] ಇದರಿಂದ ಹನಸಿ ಕೋಟೆ ಬಲಾಢ್ಯತೆಯ ಅರಿವಾಗುತ್ತದೆ.

ಈ ಮೇಲಿನ ಆಧಾರ ಮತ್ತು ಚರ್ಚೆಗಳ ಹಿನ್ನೆಲೆಯಲ್ಲಿ ಹರಪನಹಳ್ಳಿ ಪಾಳೆಯಗಾರರ ಸಮಕಾಲೀನ ಈ ಭಾಗದ ಪಾಳೆಯಗಾರರೆಂದರೆ ಜರಿಮಲೆ ನಾಯಕರು. ಇವರು ಹರಪನಹಳ್ಳಿ ನಾಯಕರ ಪ್ರತಿಸ್ಪರ್ಧಿಗಳೂ ಹೌದು. ಹಾಗಾಗಿ ಹನಸಿ ಕೋಟೆ ಜರಿಮಲೆ ನಾಯಕರ ವಶದಲ್ಲಿದ್ದಿರಬಹುದೆಂದು ಕಾಣುತ್ತದೆ.

ಕೋಟೆಯ ಲಕ್ಷಣಗಳು

ಹನಸಿ ಕೋಟೆ ಗೋಲಾಕಾರದ ನೆಲದುರ್ಗ. ಕೋಟೆಯ ಸುತ್ತಲೂ ಆಳವಾದ ಕಂದಕ, ಇದರಲ್ಲಿ ನೀರನ್ನು ತುಂಬಿ ಮೊಸಳೆಗಳನ್ನು ಬಿಡುತ್ತಿದುದು ಸ್ಥಳೀಯ ವೃದ್ಧರಿಂದ ತಿಳಿಯುವುದು. ಶತ್ರುಗಳು ಈ ಕೋಟೆಗೆ ಮುತ್ತಿಗೆ ಹಾಕಲು ಸುಲಭವಾಗದಂತೆ ಎಚ್ಚರಿಕೆ ವಹಿಸಿ ಹಳ್ಳದ ಬಳಿ ಕಟ್ಟಲಾಗಿದೆ. ಕೋಟೆಯ ಕಟ್ಟಡಕ್ಕೆ ಮಧ್ಯಮ ಮತ್ತು ಚಿಕ್ಕಗಾತ್ರದ ಕಲ್ಲುಗಳು ಮಣ್ಣು ಮತ್ತು ಮರವನ್ನು ಬಳಸಲಾಗಿದೆ. ಸುಮಾರು ೧೫ ಅಡಿ ಎತ್ತರವಿರುವ ಕೋಟೆಯ ಮೇಲಿನ ಕುಂಬಿಗಳು ಚಿಕ್ಕದಾಗಿವೆ. ಗೋಡೆಯ ಅಗಲ ೩ ರಿಂದ ೪ ಅಡಿಗಳಷ್ಟಿದೆ. ಕೋಟೆ ಸುಮಾರು ೫ ರಿಂದ ೧೦ ಎಕರೆಗಳವರೆಗೂ ವಿಸ್ತೀರ್ಣಗೊಂಡಿದೆ. ಈಗ ಎರಡು ಚಿಕ್ಕ ಗೋಡೆಗಳು ಮಾತ್ರ ಉಳಿದುಕೊಂಡಿವೆ. ಉಳಿದೆಡೆ ಕೋಟೆ ಗೋಡೆ ಬಿದ್ದುಹೋಗಿದೆ.



ಕೋಟೆಯ ಗೋಡೆ

ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕಟ್ಟಿಸಿದ ಒಟ್ಟು ಮೂರು ಕೊತ್ತಳಗಳಿದ್ದವು. ಪ್ರಸ್ತುತ ವೃತ್ತಾಕಾರದ ಅರ್ಧ ಮುಕ್ಕಾಗಿರುವ ಒಂದು ಕೊತ್ತಳ ಮಾತ್ರ ಗೋಚರಿಸುತ್ತದೆ. ಕೋಟೆಯೊಳಗೆ ಜನರು ವಾಸಮಾಡುತ್ತಾರೆ ಇದರ ದಕ್ಷಿಣದಿಕ್ಕಿಗೆ ಪರಮೇಶ್ವರ ದೇವಾಲಯವಿದೆ. ಇದು ಗರ್ಭಗೃಹ ಸಭಾಮಂಟಪ ಹಾಗು ಪ್ರಾಕಾರಗಳಿಂದ ಕೂಡಿದೆ. ದಕ್ಷಿಣಾಭಿಮುಖವಾಗಿರುವ ಈ ದೇಗುಲದ ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಪ್ರವೇಶದ್ವಾರಕ್ಕೆ ತ್ರಿಶೂಲ, ಡಮರು, ಗದೆಗಳನ್ನು ಹಿಡಿದು ನಿಂತಿರುವ ದ್ವಾರಪಾಲಕರ ವಿಗ್ರಹಗಳಿವೆ. ವಿಶಾಲವಾದ ಅಂತರಾಳದ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಸಭಾಮಂಟಪದಲ್ಲಿ ವಿಜಯನಗರ ಮಾದರಿಯ ಕಂಬಗಳಿವೆ. ಇದಕ್ಕೆ ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳಿಗೂ ಪ್ರವೇಶದ್ವಾರಗಳಿವೆ. ಮುಖ್ಯ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ನಂದಿಯ ಉಬ್ಬುಶಿಲ್ಪವಿದೆ. ದೇವಾಲಯದ ಹೊರಗೋಡೆಗಲು ಸರಳ ಶೈಲಿಯಲ್ಲಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ನಂದಿಶಿಲ್ಪಗಳು ಹಾಗೂ ದೇವಕೋಷ್ಠಕಗಳಿಂದ ಕೂಡಿದ ವರ್ತುಲಾಕಾರದ ಕೂಟ ಶಿಖರವಿದೆ. ಸಭಾಮಂಟಪವು ಜೀರ್ಣೋದ್ಧಾರಗೊಂಡಿದೆ.

ಕೋಟೆಯ ಹೊರಗೆ ನೈರುತ್ಯ ದಿಕ್ಕಿಗೆ ರಾಮೇಶ್ವರ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಹಾಗೂ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಅಂತರಾಳದಲ್ಲಿ ಸುಖಾಸನದಲ್ಲಿರುವ ಬನಶಂಕರಿ ಶಿಲ್ಪ, ಇದರ ಪಾರ್ಶ್ವದಲ್ಲಿ ಪಾರ್ವತಿ ಶಿಲ್ಪವಿದೆ. ಸಭಾಮಂಟಪಕ್ಕೆ ಉತ್ತರ ಹಾಗೂ ದಕ್ಷಿಮ ದಿಕ್ಕುಗಳಿಗೂ ಪ್ರವೇಶದ್ವಾರಗಳಿವೆ. ಒಳಗೆ ಸಪ್ತಮಾತೃಕಾ, ಗಣೇಶ ಹಾಗೂ ಶಾಸನ ಶಿಲ್ಪಗಳಿವೆ. ಈ ಶಾಸನದಲ್ಲಿ ಕ್ರಿ.ಶ. ೧೧೧೧ ರಲ್ಲಿ ಕೋಗಳಿ - ೫೦೦ ರ ಹನಸಿಯ `ಪರಶು ರಾಮೇಶ್ವರ ದೇವರಿಗೆ' ಚಿಕ್ಕಲಬ್ಬೆ ಕೆರೆಯನ್ನು ದಾನ ನೀಡಿದ ಉಲ್ಲೇಖವಿದೆ. ಈ ದೇವಾಲಯ ಬದಿಯಲ್ಲಿ ಭೀಮೇಶ್ವರ ದೇವಾಲಯವಿದೆ.

ಹನಸಿ ಗ್ರಾಮಸ್ಥರ ಹೇಳಿಕೆಗಳು, ಕೋಟೆಯ ಲಕ್ಷಣಗಳು, ಈ ಭಾಗದ ರಾಜಕೀಯ ಏರಿಳಿತಗಳು ಮತ್ತು ಪ್ರಾಚೀನ ದೇವಾಲಯಗಳನ್ನು ಗಮನಿಸಲಾಗಿ ಹನಸಿಯು ಕ್ರಿ.ಶ. ೧೧೧೧ರಲ್ಲಿ ಕೋಗಳಿ - ೫೦೦ ಕ್ಕೆ ಸೇರಿದ್ದಾಗ ಇಲ್ಲೊಂದು ಕೋಟೆ ಕಟ್ಟಿಸಿರಬಹುದು. ನಂತರ ಪಾಳೆಯಗಾರರು ಈ ಕೋಟೆಯನ್ನು ಜೀರ್ಣೋದ್ಧಾರಗೊಳಿಸಿರುವ ಸಾಧ್ಯತೆಗಳಿವೆ.

ಟಿಪ್ಪಣಿಗಳು

೧. SII IX (pt.1), No. 184. ಹನಸಿ
೨. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು*, ಪು. ೧೬-೩೦. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು.

೮

ಹಡಗಲಿ ತಾಲೂಕಿನ ಕೋಟೆಗಳು

(Forts of Huvina Hadagali Taluk)

೮

ಹೂವಿನ ಹಡಗಲಿ ತಾಲೂಕಿನ ಕೋಟೆಗಳು

(Forts of Huvina Hadagali Taluk)

ಬಳ್ಳಾರಿ ಜಿಲ್ಲೆಯ ತಾಲೂಕು ಕೇಂದ್ರವಾದ ಹಡಗಲಿ, ಬಳ್ಳಾರಿಯಿಂದ ಪಶ್ಚಿಮಕ್ಕೆ ಸುಮಾರು ೧೫೦ ಕಿ.ಮೀ. ದೂರದಲ್ಲಿದೆ. ತಾಲೂಕನ್ನು ಉತ್ತರದಲ್ಲಿ ಹಗರಿಬೊಮ್ಮನಹಳ್ಳಿ ಮತ್ತು ಹಾವೇರಿ ಜಿಲ್ಲೆಯ ಶಿರಹಟ್ಟಿ ತಾಲೂಕುಗಳು, ಪೂರ್ವದಲ್ಲಿ ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ, ದಕ್ಷಿಣದಲ್ಲಿ ಹರಪನಹಳ್ಳಿ, ಪಶ್ಚಿಮದಲ್ಲಿ ಹಾವೇರಿ ಮತ್ತು ರಾಣೆಬೆನ್ನೂರು ತಾಲೂಕುಗಳು ಸುತ್ತುವರೆದಿವೆ. ಇಟ್ಟಿಗೆ, ಹಿರೇಹಡಗಲಿ, ಮಾಗಳ, ಉತ್ತಂಗಿ, ಹೊಳಲು ಈ ತಾಲೂಕಿನ ಹೋಬಳಿಗಳು.

ತಾಲೂಕಿನ ದಕ್ಷಿಣ ಮತ್ತು ಪಶ್ಚಿಮದ ಅಂಚಿನಲ್ಲಿ ತಾಲೂಕು ಗಡಿಯಾಗಿ ತುಂಗಭದ್ರಾ ನದಿ ಸ್ವಲ್ಪ ದೂರ ಹರಿಯುವುದು. ಈ ನದಿಯೇ ರಾಣಿಬೆನ್ನೂರು, ಹಾವೇರಿ ಮತ್ತು ಶಿರಹಟ್ಟಿ ತಾಲೂಕುಗಳನ್ನು ಹಡಗಲಿ ತಾಲೂಕಿನಿಂದ ಬೇರ್ಪಡಿಸಿದೆ. ಇದರ ಪೂರ್ವದಲ್ಲಿ ಸ್ವಲ್ಪದೂರ ಚಿನ್ನಹಗರಿ ನದಿ ಹರಿಯುವುದು. ಮಲ್ಲಪ್ಪನ ಗುಡ್ಡ ಶ್ರೇಣಿ ಈ ತಾಲೂಕಿನಲ್ಲಿ ಹಾದುಹೋಗಿದೆ. ಈ ಶ್ರೇಣಿಯ ಮಲ್ಲಪ್ಪನ ಬೆಟ್ಟ ೯೭೮ ಮೀ. ಎತ್ತರವಿದೆ. ಉತ್ತಮ ಹವಾಗುಣವಿರುವ ಈ ತಾಲೂಕಿನ ವಾರ್ಷಿಕ ಸರಾಸರಿ ಮಳೆ ೬೭೧.೬೧ ಮಿ.ಮೀ. ಎಣ್ಣೆ ಉತ್ಪಾದನೆ ಮತ್ತು ಹತ್ತಿ ಸಂಸ್ಕರಣೆ ಕೈಗಾರಿಕೆಗಳುಂಟು. ಈ ಹಿನ್ನೆಲೆಯಲ್ಲಿ ವಾಣಿಜ್ಯದಲ್ಲಿ ಬಹುಪ್ರಗತಿಯತ್ತ ಸಾಗಿದೆ. ಇದು ಇಂದಿನ ದೃಶ್ಯವಾದರೆ ಹಿಂದೆ ಈ ತಾಲೂಕು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿತ್ತು.

ಆದಿಹಳೆಯ ಶಿಲಾಯುಗ ಸಂಸ್ಕೃತಿ ನೆಲೆಯ ಉಪಕರಣಗಳು ತಾಲೂಕಿನ ಕುರುವತ್ತಿಯಲ್ಲಿ ಕಂಡುಬಂದರೆ,[೧] ಅಲ್ಲೀಪುರ, ಮಾಗಳ, ಮೈಲಾರ, ರಾಜವಾಳಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಿವೆ.[೨]

ಶಿಲಾ ತಾಮ್ರಯುಗದ ಸಂಸ್ಕೃತಿಯ ಮಸುಕಾದ ಕೆಂಪುವರ್ಣದ ಮಡಿಕೆ ಭಾಗದ ಅವಶೇಷಗಳು ಅಲ್ಲೀಪುರದಲ್ಲಿ ಪತ್ತೆಯಾಗಿದೆ.[೩] ಕೊಟ್ನಿಕಲ್ಲು, ಅಲ್ಲಿಪುರ, ನವಲಿ, ಮಾಗಳ, ಮೈಲಾರ, ರಾಜವಾಳ ಹುಲಿಗುಡ್ಡ ಮತ್ತು ಹೂವಿನಹಡಗಲಿಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಕಲ್ಗೋರಿಗಳು ಕಪ್ಪುವರ್ಣದ ಮಡಿಕೆ ಭಾಗಗಳು ಹಾಗೂ ಜನವಾಸ್ತವ್ಯದ ನೆಲೆಗಳು ಕಂಡುಬಂದಿವೆ.[೪] ಇತಿಹಾಸ, ಆರಂಭಯುಗದ ಅವಶೇಷಗಳು ಮೈಲಾರ, ಕೋಗಳಿ, ಮಾಗಳಗಳಲ್ಲಿ ಇರುವುವು.[೫] ಇವುಗಳ ಆಧಾರದಿಂದಾಗಿ ಈ ತಾಲೂಕು ಪ್ರಾಚೀನ ಮಾನವನ ಆವಾಸಸ್ಥಾನವಾಗಿತ್ತೆಂದು ತಿಳಿದುಬರುವುದು.

ಮೌರ್ಯರು ಇಲ್ಲಿ ಆಳ್ವಿಕೆ ಮಾಡಿದ ಬಗ್ಗೆ ಅನುಮಾನಗಳಿವೆ. ಆದರೆ ಮೌರ್ಯರ ಆಡಳಿತ ವ್ಯಾಪ್ತಿಗೆ ಈ ಹಡಗಲಿ ತಾಲೂಕು ಸೇರಿತ್ತೆಂಬುದು ಸಮೀಪದ ಕೊಪ್ಪಳ, ಸಿರುಗುಪ್ಪ ತಾಲೂಕಿನಲ್ಲಿ ದೊರೆತ ಮೌರ್ಯರ ಶಾಸನಗಳೇ ಆಧಾರಗಳಾಗಿವೆ. ಶಾತವಾಹನರು ಮತ್ತು ಪಲ್ಲವರಿಗೂ ಈ ಪ್ರದೇಶ ಸೇರಿರುವುದು ಇದೇ ತಾಲೂಕಿನ ಹಿರೇಹಡಗಲಿಯಲ್ಲಿ ದೊರೆತ ಪ್ರಾಕೃತ ಶಾಸನದಿಂದ ತಿಳಿಯುತ್ತದೆ.[೬] ಬಾದಾಮಿ ಚಾಳುಕ್ಯರ ಯಾವುದೇ ಸ್ಮಾರಕಾವಶೇಷಗಳು, ಶಾಸನಗಳು ಇಲ್ಲಿ ದೊರೆಯುವುದಿಲ್ಲ. ರಾಷ್ಟ್ರಕೂಟರ ಸುಮಾರು ಹನ್ನೊಂದು ಶಾಸನಗಳು ಪಕ್ಕದ ಹರಪನಹಳ್ಳಿ ತಾಲೂಕಿನಲ್ಲಿ ಕಂಡುಬಂದಿರುವುದರಿಂದ ಈ ಪ್ರದೇಶದಲ್ಲಿ ರಾಷ್ಟ್ರಕೂಟರು ಆಳ್ವಿಕೆ ಮಾಡಿರುವುದು ವೇದ್ಯವಾಗುತ್ತದೆ.[೭] ಕಲ್ಯಾಣ ಚಾಳುಕ್ಯರ ಶಾಸನಗಳು ಮತ್ತು ದೇವಾಲಯಗಳು ಕುರುವತ್ತಿ, ಹೊಳಲು, ಕತ್ತೆಬೆನ್ನೂರು, ಹಿರೇಹಡಗಲಿ, ಹೊಳಗುಂದಿ, ತುಂಬಿಗೆರೆ, ಮಸಲವಾಡ, ರಂಗಾಪುರ, ಕೊಟ್ನಿಕಲ್ಲು, ಹೂವಿನಹಡಗಲಿ, ಸೋಗಿ, ಉತ್ತಂಗಿಗಳಲ್ಲಿ ಕಂಡುಬಂದಿವೆ. ಕಲ್ಯಾಣ ಚಾಳುಕ್ಯರು ನೇರವಾಗಿ ಇಲ್ಲಿ ಆಳ್ವಿಕೆ ಮಾಡಲಿಲ್ಲ. ಇವರ ಸಾಮಂತರಾಗಿ ನೊಳಂಬರು ನೊಳಂಬವಾಡಿ ೩೨೦೦೦ ಎಂಬ ದೊಡ್ಡ ಪ್ರಾಂತದ ಅಧಿಕಾರಿಗಳಾಗಿ ಆಳ್ವಿಕೆ ಮಾಡಿದರು. ಆಗ ಈ ತಾಲೂಕು ಸಂಪೂರ್ಣವಾಗಿ ಅವಳ ಆಡಳಿತ ವ್ಯಾಪ್ತಿಗೆ ಸೇರಿತ್ತು. ಆಗ ಕುರುವತ್ತಿ, ಹೊಳಲು, ಸೋಗಿ, ಹೂವಿನಹಡಗಲಿ, ಮಾಗಳ, ಹೊಳಗುಂದಿ, ಉತ್ತಂಗಿಗಳಲ್ಲಿ ಕೋಟೆಗಳಿದ್ದುದಾಗಿ ತಿಳಿದುಬರುತ್ತದೆ.[೮] ಆದರೆ ಶಾಸನಗಳಲ್ಲಿ ಮಾತ್ರ ಹೂವಿನಹಡಗಲಿ,[೯] ಹಿರೇಹಡಗಲಿ,[೧೦] ಮತ್ತು ಸೋಗಿ[೧೧]ಯ ಕೋಟೆಗಳ ಪ್ರಸ್ತಾಪವಿದೆ. ಆದರೆ ಈ ಯಾವ ಕೋಟೆಗಳಾಗಲಿ ಅಥವಾ ಅದರ ಅವಶೇಷಗಳಾಗಲಿ ಇಂದು ಉಳಿದಿಲ್ಲ. ಹೊಳಲು, ಹೂವಿನಹಡಗಲಿಗಳಲ್ಲಿ ಕೋಟೆಯ ಮಾಹಿತಿಗಳಿರುವುದರಿಂದ ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ನೊಳಂಬರ ನಂತರ ತಾಲೂಕು ಹೊಯ್ಸಳರ ಆಡಳಿತಕ್ಕೆ ಒಳಗಾಗಿರುವುದನ್ನು ಈ ಪ್ರದೇಶದ ಮಾಗಳ, ರಂಗಾಪುರ, ಹೊಳಲು, ಶಾಸನಗಳಿಂದ ಅರಿಯಬಹುದು.[೧೨] ನಂತರ ವಿಜಯನಗರದ ಅರಸರು, ಪಾಳೆಯಗಾರರು, ಬ್ರಿಟಿಷರು ಇಲ್ಲಿ ಆಳ್ವಿಕೆ ಮಾಡಿದರು. ವಿಜಯನಗರೋತ್ತರ ಕಾಲದಲ್ಲಿ ಹ್ಯಾರಡ, ಬುದನೂರುಗಳಲ್ಲಿ ಕೋಟೆ

ನಿರ್ಮಾಣವಾಗಿರುವ ಪ್ರಸ್ತಾಪಗಳಿವೆ. ಇವು ಕೂಡ ಸುಸ್ಥಿತಿಯಲ್ಲಿಲ್ಲ. ಅಳಿದುಳಿದ ಅವಶೇಷಗಳಿಂದ ಹ್ಯಾರಡ ಕೋಟೆಯ ಬಗ್ಗೆ ಕೆಳಗೆ ಚರ್ಚಿಸಲಾಗಿದೆ.

ಟಿಪ್ಪಣಿಗಳು

೧. Foote, R.B. 1916. *The Foote collection of Prehistoric and Protohistoric Antiquities Notes on their ages and Distribution,* p. 77. Madras : Government Museum

೨. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕ ಪುರಾತತ್ವ ನೆಲೆಗಳು,* ಪು. ೩೬೬-೩೬೭. ಹಂಪಿ : ಕನ್ನಡ ವಿಶ್ವವಿದ್ಯಾಲಯ

೩. *ಅದೇ,* ಪು. ೩೬೬

೪. *ಅದೇ,* ಪು. ೩೬೬-೬೮

೫. *ಅದೇ,* ಪು. ೩೬೬-೬೮

೬. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧,* ಪು. ೧೮. ಹಂಪಿ : ಕನ್ನಡ ವಿಶ್ವವಿದ್ಯಾಲಯ

೭. *ಅದೇ,* ಪು. ೧೯

೮. ಜೋಶಿ, ಎಸ್.ಕೆ. ೨೦೦೧. *ಕರ್ನಾಟಕದ ಪ್ರಾಚೀನ ಕೋಟೆಗಳು, ಸೂರ್ಯಕೀರ್ತಿ* (ಸಂ: ಕೃಷ್ಣಮೂರ್ತಿ ಪಿ.ವಿ ಮತ್ತು ಕೆ. ವಸಂತಲಕ್ಷ್ಮಿ), ಪು.೧೪೬-೧೫೨. ಬೆಂಗಳೂರು : ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ

೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೪೧೪

೧೦. *ಅದೇ,* ಪು. ೩೫೮

೧೧. *ಅದೇ,* ಪು. ೪೪೨

೧೨. *ಅದೇ,* ಪು. ೪೫೦

೮.೧ ಹ್ಯಾರಡ

ಹ್ಯಾರಡ ಗ್ರಾಮವು ಹೂವಿನಹಡಗಲಿ ತಾಲೂಕಿನಲ್ಲಿದ್ದು, ತಾಲೂಕು ಕೇಂದ್ರದಿಂದ ಸುಮಾರು ೩೮ ಕಿ.ಮೀ. ದೂರದಲ್ಲಿದೆ. ಗ್ರಾಮದ ಮಧ್ಯದಲ್ಲಿ ಈ ಕೋಟೆ ಇದೆ. ಹ್ಯಾರಡವನ್ನು ಶಾಸನಗಳು 'ಹೆರಡ'ವೆಂದು ಕರೆದಿವೆ.[೧] ಗ್ರಾಮದ ಪಶ್ಚಿಮಕ್ಕೆ ೧೨ ಕಿ.ಮೀ. ದೂರದಲ್ಲಿರುವ ಮೈಲಾರದಲ್ಲಿ ನೂತನ, ಬೃಹತ್ ಮತ್ತು ಇತಿಹಾಸ ಆರಂಭಯುಗ ಹಂತದ ಅವಶೇಷಗಳು ಕಂಡುಬಂದಿವೆ.[೨] ಗ್ರಾಮದ ಆಗ್ನೇಯಕ್ಕೆ ಹೊಲದಲ್ಲಿರುವ ಕ್ರಿ.ಶ. ೧೨೬೩ರ ಯಾದವ ದೊರೆ ಮಹಾದೇವರಾಯನ ಶಾಸನದಲ್ಲಿ[೩] ಮಲ್ಲಿಕಾರ್ಜುನ ದೇವರ ಸೇವಾಕಾರ್ಯಗಳಿಗಾಗಿ ಹೆರಡ ಗ್ರಾಮವನ್ನು ದಾನಮಾಡಿದಂತೆ ತಿಳಿದುಬರುತ್ತದೆ. ಈ ಮೇಲಿನ ಆಧಾರಗಳ ಹಿನ್ನೆಲೆಯಲ್ಲಿ ಹ್ಯಾರಡ ಗ್ರಾಮವು ಬಹುಪ್ರಾಚೀನವಾದುದು ಎಂಬುದು ಸ್ಪಷ್ಟವಾಗುತ್ತದೆ. ಹರಪನಹಳ್ಳಿ ಪಾಳೆಯಗಾರರ ಮೂರ್‍ನಾಲ್ಕು ಶಾಸನಗಳು[೪] ಪಾಳೆಯಗಾರರ ಆಳ್ವಿಕೆಯ ವಿವರಗಳನ್ನು ನೀಡುತ್ತವೆ. ಆದರೆ ಈ ಯಾವ ಶಾಸನಗಳಲ್ಲಿಯೂ ಕೋಟೆಯ ಬಗ್ಗೆ ಪ್ರಸ್ತಾಪಗಳಿಲ್ಲ. ಹರಪನಹಳ್ಳಿ ಪಾಳೆಯಗಾರರು ತಮ್ಮ ಗಡಿ ರಕ್ಷಣೆಗಾಗಿ ಹಲವೆಡೆ ಸೈನಿಕ ನೆಲೆಗಳನ್ನು ಸ್ಥಾಪಿಸಿ ಕೋಟೆ ಕಟ್ಟಿಕೊಂಡಿದ್ದರು. ಇವುಗಳ ಆಧಾರದಿಂದ ಹೇಳುವುದಾದರೆ ತಮ್ಮ ರಾಜ್ಯದ ಪಶ್ಚಿಮದ ಗಡಿ ರಕ್ಷಣೆಗಾಗಿ ಹ್ಯಾರಡ ಗ್ರಾಮದಲ್ಲಿ ಕೋಟೆ ಕಟ್ಟಿಕೊಂಡಿರಬೇಕು. ಇದರ ಲಕ್ಷಣಗಳು ಸುಮಾರು ೧೭-೧೮ ಶತಮಾನದ ಕೋಟೆ ಎಂಬುದನ್ನು ದೃಢಪಡಿಸುತ್ತವೆ.

ಕೋಟೆಯ ಲಕ್ಷಣಗಳು

ಚೌಕಾಕಾರದ ಚಿಕ್ಕ ಕೋಟೆಯಿದು. ಇದನ್ನು ಕೆತ್ತಿ ನಯಮಾಡಿದ ಮಧ್ಯಮ ಗಾತ್ರದ ಕಣಶಿಲೆಯನ್ನು ಬಳಸಿ ಇವುಗಳ ಮಧ್ಯದಲ್ಲಿ ಸಂದುಗಳಿಗೆ ಮಣ್ಣನ್ನು ಹಾಕಿ ಒಂದು ಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಜೋಡಿಸಲಾಗಿದೆ. ಗೋಡೆಯ ಮಧ್ಯದಲ್ಲಿ ಯಾವುದೇ ಗಾರೆ ಲೇಪನ ಮಾಡಿಲ್ಲ. ಸುಮಾರು ೧೫ ಅಡಿ ಎತ್ತರವಿರುವ ಕೋಟೆಯ ಮೇಲಿನ ಕಲ್ಲಿನ ಸಾಲು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಕೋಟೆಯ ಅಗಲ ಸುಮಾರು ೩ ಅಡಿಗಳಾಗಿದ್ದು, ಕೆಲವೆಡೆ ಹೆಚ್ಚು ಕಡಿಮೆ ಇದೆ. ಇದರ ಮೇಲಿದ್ದ ಮಣ್ಣಿನ ಕುಂಬೆಯ ಅವಶೇಷಗಳು ಕಾಣುತ್ತವೆ. ಕೋಟೆಯ ಹೊರಮೈಯನ್ನು ಮಧ್ಯಮ ಗಾತ್ರದ ಕಲ್ಲುಗಳಿಂದ ಮತ್ತು ಒಳಮೈಯನ್ನು ಚಿಕ್ಕ ಕಲ್ಲುಗಳಿಂದ ಮಧ್ಯದಲ್ಲಿ ಮಣ್ಣುತುಂಬಿ ಕಟ್ಟಿದೆ. ಕೋಟೆಯ ಉತ್ತರದ ಹೊರಮೈ ಮಾತ್ರ ಸುಸ್ಥಿತಿಯಲ್ಲಿದ್ದು, ಉಳಿದೆಡೆ ಬಿದ್ದುಹೋಗಿದೆ. ಕೋಟೆಯ ನಾಲ್ಕು ಮೂಲೆಗಳಲ್ಲಿ ನಾಲ್ಕು ವೃತ್ತಾಕಾರದ ಕೊತ್ತಳಗಳಿವೆ. ಇವುಗಳ ಪೈಕಿ ಈಶಾನ್ಯ ಮೂಲೆಯ ಕೊತ್ತಳ ಮಾತ್ರ ಸ್ವಲ್ಪ ಚೆನ್ನಾಗಿದೆ. ಕೋಟೆಯ ಉತ್ತರದ ಗೋಡೆಯಲ್ಲಿ ಬಾಗಿಲನ್ನು ಜೋಡಿಸಲಾಗಿದೆ. ಇದರ ಪೂರ್ವದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಈ ಕೋಟೆಯ ತುಂಬೆಲ್ಲಾ ವಾಸದ ಮನೆಗಳಿವೆ.



ಕೋಟೆಯ ಪ್ರವೇಶದ್ವಾರ

ಕೋಟೆಯ ನೈರುತ್ಯ ಭಾಗದಲ್ಲಿ ಪಾಳೆಯಗಾರರ ಕುಲದೈವವಾದ ಆಂಜನೇಯನ ದೇವಾಲಯವಿದ್ದು, ಇದರಲ್ಲಿ ಗರ್ಭಗೃಹ ಮಾತ್ರ ಇದೆ. ಕೋಟೆಯ ಮಧ್ಯಭಾಗದಲ್ಲಿ ಬಸವೇಶ್ವರ ದೇವಾಲಯವು ಕಂಡುಬರುವುದು.

ಟಿಪ್ಪಣಿಗಳು

೧. *A.R. No.* 488 of 1984; *SII IX* (pt.1) No. 373

೨. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕ ಪುರಾತತ್ವ ನೆಲೆಗಳು,* ಪು. ೩೬೭. ಹಂಪಿ : ಕನ್ನಡ ವಿಶ್ವವಿದ್ಯಾಲಯ

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೩೫೦. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. *ಅದೇ,* ಪು. ೩೫೧-೩೫೨



೮.೨ ಹೂವಿನ ಹಡಗಲಿ

ಹೂವಿನ ಹಡಗಲಿ ತಾಲೂಕು ಕೇಂದ್ರ. ಈ ಪಟ್ಟಣದ ಉತ್ತರ ಭಾಗದಲ್ಲಿ ಕೋಟೆ ಇತ್ತು. ಶಾಸನಗಳು ಈ ನಗರವನ್ನು 'ಪೂವಿನ ಪೊಸ ಪಡಂಗಿಲೆ' ಎಂದು ಕರೆದಿವೆ.[೧] ಬೃಹತ್ ಶಿಲಾಯುಗ ಸಂಸ್ಕೃತಿಯ ಕಲ್ಗೋರಿ, ಕಪ್ಪುವರ್ಣದ ಮಡಿಕೆಭಾಗ ಹಾಗೂ ಜನವಾಸ್ತವ್ಯದ ನೆಲೆಗಳು ಇಲ್ಲಿ ಕಂಡುಬಂದಿವೆ.[೨]

ತುಂಗಭದ್ರಾ ನದಿಯ ದಕ್ಷಿಣ ತಟದಲ್ಲಿರುವ ಪ್ರಸಿದ್ಧ ಅಗ್ರಹಾರಗಳಲ್ಲಿ ಹೂವಿನ ಹಡಗಲಿಯು ಒಂದು.[೩] ಇದು ಕಲ್ಯಾಣ ಚಾಳುಕ್ಯರ ದೊರೆ ತ್ರಿಭುವನಮಲ್ಲದೇವನ ಸೇನಾಪತಿ ರವಿದೇವನ ಪತ್ನಿಯಾದ ರೆಬ್ಬಲದೇವಿಯ ಹುಟ್ಟೂರು.[೪] ಈಕೆ ಇಲ್ಲಿಯ ಕೇಶವ ದೇವಾಲಯವನ್ನು ತನ್ನ ಹುಟ್ಟೂರಿನ ನೆನಪಿಗಾಗಿ ಕಟ್ಟಿಸಿದ್ದಳು.[೫] ಕಲ್ಯಾಣ ಚಾಳುಕ್ಯರ ಹಡಗಲಿ[೬] ಮತ್ತು ಕೊಟ್ನಿಕಲ್[೭] ಶಾಸನಗಳು ಇಲ್ಲಿ ಕೋಟೆ ಇದ್ದುದನ್ನು ಪ್ರಸ್ತಾಪಿಸುತ್ತವೆ. ಈ ಮೇಲಿನ ಆಧಾರಗಳಿಂದ ಹೂವಿನ ಹಡಗಲಿ ಬಹುಪ್ರಾಚೀನ ನೆಲೆ ಎನ್ನುವ ಹಾಗೂ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಇಲ್ಲಿ ಕೋಟೆ ಇದ್ದಿರಬಹುದಾದುದು ಸ್ಪಷ್ಟವಾಗುತ್ತದೆ.

ಕೋಟೆಯ ಅವಶೇಷಗಳು

ಹೂವಿನ ಹಡಗಲಿ ಪಟ್ಟಣದ ಉತ್ತರದ ಮೂಲೆಯಲ್ಲಿನ ಪ್ರದೇಶವನ್ನು ಈಗಲೂ ಜನ ಕ್ಯಾಟೆ, ಕೋಟೆ ಎಂದು ಗುರುತಿಸುತ್ತಾರೆ. ಪ್ರಸ್ತುತ ಅಲ್ಲಿ ಕೋಟೆ ಇರದೆ ಜನನಿಬಿಡ ಸ್ಥಳವಾಗಿದೆ. ಕೋಟೆಯ ಅವಶೇಷಗಳೆನ್ನಬಹುದಾದ ಬಾವಿ, ಕಲ್ಲುಗಳ ರಾಶಿಗಳು, ದೇವಾಲಯಗಳಿವೆ. ಇಲ್ಲಿರುವ ಕೋಟೆಯ ಸಮಕಾಲೀನ ದೇವಾಲಯಗಳೆನ್ನಬಹುದಾದ ಕಲ್ಲೇಶ್ವರ, ಕೇಶವ, ಕೃಷ್ಣ, ಯೋಗನಾರಾಯಣ ಮತ್ತು ಆಂಜನೇಯನ ದೇಗುಲಗಳು ಮುಖ್ಯವಾಗಿವೆ. ಇವುಗಳಲ್ಲಿ ಕಲ್ಲೇಶ್ವರ ಹಾಗೂ ಕೇಶವ ದೇವಾಲಯಗಳು ಸುಸ್ಥಿತಿಯಲ್ಲಿವೆ. ಈ ಸುಸ್ಥಿತಿಗೆ ಕಾರಣ ಕೇಂದ್ರ ಪುರಾತತ್ವ ಇಲಾಖೆಯ ರಕ್ಷಣೆ.

ಕಲ್ಲೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಎರಡು ಮುಖಮಂಟಪಗಳಿಂದ ಕೂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ ಚಿಕ್ಕಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಬಾಗಿಲವಾಡವು ಐದು ಶಾಖೆಗಳನ್ನು ಹೊಂದಿದೆ. ಈ ಶಾಖೆಗಳಲ್ಲಿ ಹೂಬಳ್ಳಿಗಳು, ಪದ್ಮಗಳನ್ನು ಹಿಡಿದಿರುವ ಸ್ತ್ರೀಯರು, ಶೈವ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಸುಂದರ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳು ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿದ್ದು, ಅವುಗಳಲ್ಲಿ ಶಿವ, ವಿಷ್ಣು, ಕೇಶವ, ನರಸಿಂಹ, ಹಿರಣ್ಯ ಕಶ್ಯಪುವಿನ ಸಂಹಾರ, ಸೂರ್ಯ, ಬ್ರಹ್ಮ, ಗಣೇಶ ಇತ್ಯಾದಿ

ಉಬ್ಬುಶಿಲ್ಪಗಳಿವೆ. ಸಭಾಮಂಟಪಕ್ಕೆ ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಿಗೆ ಪ್ರವೇಶದ್ವಾರಗಳಿವೆ. ದಕ್ಷಿಣದ ಬಾಗಿಲು ಸುಂದರ ಕೆತ್ತನೆಯಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಹೊಂದಿದೆ. ಮುಂಭಾಗ ಮಂಟಪದಲ್ಲಿ ಕಕ್ಷಾಸನವನ್ನು ನಿರ್ಮಿಸಲಾಗಿದೆ. ಪೂರ್ವದ ಬಾಗಿಲು ಹೂ ಸುರುಳಿಗಳು, ನೃತ್ಯಗಾರ್ತಿಯರು, ಆನೆ, ಸಿಂಹ, ಯಕ್ಷ, ಪೂರ್ಣಕುಂಬ, ಗಣೇಶ, ನಾಗನಾಗಿನಿ ಕನ್ನಡಿಯನ್ನು ಹಿಡಿದಿರುವ ಸ್ತ್ರೀಯರು, ಶೈವ ದ್ವಾರಪಾಲಕರ ಶಿಲ್ಪಗಳಿಂದ ಅಲಂಕರಿಸಲ್ಪಟ್ಟ ಏಳು ಶಾಖೆಗಳಿಂದ ಕೂಡಿದೆ.

ಇದರ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಕೆತ್ತನೆಯಿದೆ. ಮುಂಭಾಗದ ಮಂಟಪದಲ್ಲಿ ಕುಳಿತು ವಿಶ್ರಮಿಸಲು ಅನುಕೂಲವಾಗುವಂತೆ ಕಟ್ಟೆಗಳನ್ನು ನಿರ್ಮಿಸಲಾಗಿದೆ. ಈ ದೇವಾಲಯದ ಹೊರಗೋಡೆಯ ಅದಿಷ್ಠಾನವು ಉಪಾನ, ಜಗತಿ, ಕಂಠ, ಕುಮುದ, ಪದ್ಮಗಳಿಂದ ಕೂಡಿದೆ. ಗರ್ಭಗೃಹದ ಹೊರಭಾಗದಲ್ಲಿರುವ ಭಿತ್ತಿಯಲ್ಲಿ ಅರ್ಧಗಂಬಗಳ ಮಧ್ಯೆ ವೇಸರ ಶೈಲಿಯ ಕೋಷ್ಠಕಗಳು, ಇಕ್ಕೆಲಗಳಲ್ಲಿ ಹಿಂಜರಿತ ಹಾಗೂ ಮುಂಜರಿತಗಳಿವೆ. ಗರ್ಭಗೃಹದ ಮೇಲೆ ಐದು ಹಂತದ ವೇಸರ ಶೈಲಿಯ ಶಿಖರವಿದೆ. ಕಪ್ಪು ಮಿಶ್ರಿತ ನೀಲಿ ಛಾಯೆಯ ಕಲ್ಲಿನಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ.

ಕೇಶವ ದೇವಾಲಯವು ಉತ್ತರಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ. ಇದನ್ನು ಕ್ರಿ.ಶ. ೧೯೯೦ರಲ್ಲಿ ಕಲ್ಯಾಣ ಚಾಳುಕ್ಯರ ಸೇನಾಪತಿ ರವಿದೇವನ ಪತ್ನಿಯಾದ ರೆಬ್ಬಲದೇವಿಯು ಕಟ್ಟಿಸಿದಳು. ಚೌಕಾಕಾರದ ಗರ್ಭಗೃಹದಲ್ಲಿ ಗರುಡಪೀಠದ ಮೇಲೆ ಕೇಶವನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಸಮಭಂಗಿಯಲ್ಲಿರುವ ಕೇಶವನ ಕೈಗಳಲ್ಲಿ ಶಂಖ, ಚಕ್ರ, ಗದೆ ಮತ್ತು ಪದ್ಮಗಳಿವೆ. ಇಕ್ಕೆಲಗಳಲ್ಲಿ ದೇವತೆಯರಿದ್ದಾರೆ. ಇದರ ಪ್ರಭಾವಳಿಯನ್ನು ಮಕರ ತೋರಣಗಳಿಂದ ಅಲಂಕರಿಸಲಾಗಿದೆ. ದೇವಾಲಯದ ಲಕ್ಷಣಗಳು ಕಲ್ಲೇಶ್ವರ ದೇವಾಲಯದಂತಿವೆ.

ಈ ಎರಡು ದೇವಾಲಯಗಳು ಕೋಟೆ ಗೋಡೆಗೆ ಹೊಂದಿಕೊಂಡಿದ್ದವೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಪ್ರಸ್ತುತ ಕೋಟೆಯ ಯಾವ ಕಟ್ಟಡಾವಶೇಷಗಳು ಅಲ್ಲಿಲ್ಲ.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೪೧೦. ಹಂಪಿ : ಕನ್ನಡ ವಿಶ್ವವಿದ್ಯಾಲಯ
೨. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕ ಪುರಾತತ್ವ ನೆಲೆಗಳು*, ಪು. ೩೬೬-೬೮. ಹಂಪಿ : ಕನ್ನಡ ವಿಶ್ವವಿದ್ಯಾಲಯ
೩. ವೀಣಾ, ಎಂ.ಪಿ. ೧೯೯೬. ಹೂವಿನ ಹಡಗಲಿಯ ಕಲ್ಯಾಣ ಚಾಳುಕ್ಯರ ಒಂದು ಅಪ್ರಕಟಿತ ಶಾಸನ. *ಇತಿಹಾಸ ದರ್ಶನ* - ೧೧. ಪು. ೧೧೮
೪. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ*, ಪು. ೧೭೮. ಕುಂಚೂರು : ಮಾಲತೇಶ ಪ್ರಕಾಶನ
೫. *ಅದೇ*, ಪು. ೧೭೯
೬. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪೂರ್ವೋಕ್ತ. ಪು. ೪೧೪
೭. *ಅದೇ*, ಪು. ೪೦೭.

೮.೩ ಹೊಳಲು

ಹೊಳಲು ಹೂವಿನಹಡಗಲಿ ತಾಲೂಕಿಗೆ ಸೇರಿದ ಹೋಬಳಿಕೇಂದ್ರ. ತಾಲೂಕು ಕೇಂದ್ರದಿಂದ ನೈರುತ್ಯದಿಕ್ಕಿಗೆ ೩೨ ಕಿ.ಮೀ. ದೂರದಲ್ಲಿದೆ. ಈ ಗ್ರಾಮಕ್ಕೆ ಸಮೀಪದಲ್ಲಿ ಮೈಲಾರ ಮತ್ತು ಹಿರೇಕುರುವತ್ತಿ ಐತಿಹಾಸಿಕ ಸ್ಥಳಗಳಿದ್ದು, ಉತ್ತರ ದಿಕ್ಕಿನಲ್ಲಿ ತುಂಗಭದ್ರಾ ನದಿಯು ಹರಿದಿದೆ. ಪೂರ್ವದಿಕ್ಕಿನಲ್ಲಿ ಹ್ಯಾರಡ ಗ್ರಾಮವಿದ್ದು, ಪ್ರಸ್ತುತ ಗ್ರಾಮದ ಪಶ್ಚಿಮ ಭಾಗಕ್ಕೆ ಕೋಟೆಯ ಅವಶೇಷಗಳು ಕಂಡುಬರುತ್ತವೆ.

ಹೊಳಲು ಪ್ರಾಚೀನ ಗ್ರಾಮ ಇಲ್ಲಿ ಕಲ್ಯಾಣ ಚಾಳುಕ್ಯರು, ಹೊಯ್ಸಳರು, ವಿಜಯನಗರದರಸರು, ಹರಪನಹಳ್ಳಿ ಪಾಳೆಯಗಾರರು ಆಳ್ವಿಕೆ ಮಾಡಿದ್ದಾರೆ.[೧] ಈ ಗ್ರಾಮಕ್ಕೆ ಗಂಡರಾದಿತ್ಯನ ಹೊಳಲು ಎಂದು ಕರೆಯುವರು. ಇದನ್ನು ಪ್ರಾಚೀನ ಶಾಸನಗಳು ಗಂಡಾರಾದಿತ್ಯನ 'ಪೊಳಲ್ ' ಎಂದು ಕರೆದಿವೆ.[೨] ಗಂಡಾರಾದಿತ್ಯನು ಕಲ್ಯಾಣಚಾಳುಕ್ಯರ ಮಹಾಮಂಡಳೇಶ್ವರ. ಇವನು ದೀರ್ಘಾವಧಿಯವರೆಗೆ ಹೊಳಲನ್ನು ಆಳಿದನು. ಹಾಗಾಗಿ ಹೊಳಲು ಗ್ರಾಮಕ್ಕೆ ಈತನ ಹೆಸರನ್ನು ಜೋಡಿಸಲಾಗಿದೆ. ಹಳೆಗನ್ನಡದ "ಪೊಳಲ್" ಎಂದರೆ ಭಾಗ ಎಂದರ್ಥ. ಮಹಾಮಂಡಳೇಶ್ವರ ಗಂಡಾರಾದಿತ್ಯನ ಆಳ್ವಿಕೆ ಪ್ರದೇಶದಲ್ಲಿ ಇದು ಒಂದು ಭಾಗವಾಗಿರಬೇಕು. ಹಾಗಾಗಿ 'ಪೊಳಲ್' ಎಂಬ ಹೆಸರು ಅನ್ವರ್ಥವಾಗಿರಬಹುದು. ಪೊಳಲ್ > ಹೊಳಲು ಎಂಬುದಾಗಿದೆ. ರೂಢಿಯಲ್ಲಿ ಗಂಡಾರಾದಿತ್ಯ ಎಂಬುದನ್ನು ಜನ ಕೈಬಿಟ್ಟು ಹೊಳಲು ಎಂದಷ್ಟೆ ಕರೆಯುವರು.

ಹೊಳಲು ಪ್ರಾಚೀನ ಅಗ್ರಹಾರ. ಇಲ್ಲಿ ಬಹುಸಂಖ್ಯೆಯಲ್ಲಿ ಬ್ರಾಹ್ಮಣರಿದ್ದರು.[೩] ೧೨೦ ಮಹಾಜನರು ಗ್ರಾಮದ ಅಭಿವೃದ್ಧಿ ಕಾರ್ಯದಲ್ಲಿ ಆಡಳಿತಾಧಿಕಾರಿಗಳಿಗೆ ನೆರವಾಗಿದ್ದರು.[೪] ವಿಜಯನಗರವು ಪ್ರಬಲವಾಗಿದ್ದಾಗ ಈ ಗ್ರಾಮ ವಿಜಯನಗರದ ಒಂದು ಆಡಳಿತ (ಸೀಮೆ) ಕೇಂದ್ರವಾಗಿದ್ದಿತು.[೫] ನಂತರ ಹರಪನಹಳ್ಳಿ ಪಾಳೆಯಗಾರರ ಗಡಿಪ್ರದೇಶವಾಗಿ ಪ್ರಮುಖ ಪಾತ್ರವಹಿಸಿದೆ. ಹರಪನಹಳ್ಳಿ ಬಸವಂತನಾಯಕನು ಆಳ್ವಿಕೆ ಮಾಡುವಾಗ ತಮ್ಮ ರಾಜ್ಯದ ಪಶ್ಚಿಮ ಗಡಿಯಲ್ಲಿ ಗುತ್ತಲ, ಹಾವನೂರು, ಸವಣೂರು ಅರಸರು ಸದಾ ಕಿರುಕುಳ ಕೊಡುತ್ತಿದ್ದರಂತೆ ಹಾಗಾಗಿ ತಮ್ಮ ಸೈನ್ಯದಲ್ಲಿದ್ದ ಬಸವನಾಯಕ ಎಂಬುವವನನ್ನು ಪಶ್ಚಿಮದ ಗಡಿಯಾದ ಹೊಳಲು ಕೋಟೆಗೆ ಮುಖ್ಯಸ್ಥನನ್ನಾಗಿ ನೇಮಕ ಮಾಡಿದ ವಿಷಯವು ತಿಳಿದುಬರುತ್ತದೆ.[೬] ಈ ಮೇಲಿನ ವಿಷಯಕ್ಕೆ ಪ್ರತ್ಯಕ್ಷ ಸಾಕ್ಷಿಗಳೆಂಬಂತೆ ಕಲ್ಯಾಣ ಚಾಳುಕ್ಯಾರಾದಿಯಾಗಿ ಪಾಳೆಯಗಾರರವರೆಗಿನ ದೇವಾಲಯಗಳು, ಶಾಸನಗಳು, ಇಲ್ಲಿ ಹೇರಳವಾಗಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಹೊಳಲು ಗ್ರಾಮದಲ್ಲಿ ಪ್ರಾಚೀನ ಕೋಟೆ ಇದ್ದಿರಬೇಕು. ಬದಲಾದ ರಾಜಕೀಯ ಸ್ಥಿತಿಗನುಗುಣವಾಗಿ ಈ ಕೋಟೆ ರೂಪಾಂತರ ಹೊಂದಿ ಇಂದು ಅವನತಿ ಹೊಂದಿದೆ. ಅಳಿದುಳಿದ ಕೆಲವು ಕೋಟೆಯ ಅವಶೇಷಗಳನ್ನು ಇಟ್ಟುಕೊಂಡು ಅದರ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗಿದೆ.

ಕೋಟೆಯ ಲಕ್ಷಣಗಳು

ಹೊಳಲುಕೋಟೆ ಚೌಕಾಕಾರದ ಮಧ್ಯಮಗಾತ್ರದ್ದಾಗಿದೆ. ಇದನ್ನು ಕೆತ್ತಿ ನಯಮಾಡಿದ ಮಧ್ಯಮಗಾತ್ರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳ ಮಧ್ಯದಲ್ಲಿ ಸಂದಿಗಳಿಗೆ ಮಣ್ಣನ್ನು ತುಂಬಿ ಒಂದು ಕಲ್ಲು ಮತ್ತೊಂದಕ್ಕೆ ಹೊಂದಿಕೊಳ್ಳುವಂತೆ ಅಂಚುಗಳನ್ನು ಕೆತ್ತಿ ಜೋಡಿಸಿದೆ. ಕೋಟೆಯ ಪಶ್ಚಿಮಭಾಗದ ಕೊತ್ತಳ ಮಾತ್ರ ಸ್ವಲ್ಪ ಸುಸ್ಥಿತಿಯಲ್ಲಿದೆ. ಉಳಿದೆಡೆ ಕೋಟೆಯ ಅವಶೇಷಗಳೇ ಇಲ್ಲ. ಆದ್ದರಿಂದ ಸ್ಥಳೀಯರ ಹೇಳಿಕೆಗಳು ಇಲ್ಲಿ ಮುಖ್ಯಪಾತ್ರ ವಹಿಸುತ್ತವೆ. ಕೋಟೆಯ ಮಧ್ಯದಲ್ಲಿ ಗ್ರಾಮಸ್ಥರ ವಾಸದ ಮನೆಗಳಿವೆ. ವಾಯುವ್ಯ ಮೂಲೆಯಲ್ಲಿ ಕೋಟೆಗೆ ಹೊಂದಿಕೊಂಡು ಚೌಕಾಕಾರದ ದೊಡ್ಡ ಬಾವಿ ಇದ್ದು, ಸುಮಾರು ೧೦೦ ಅಡಿಗಳಷ್ಟು ಆಳವಾಗಿದೆ. ಪ್ರಾಯಶಃ ಕೋಟೆಯೊಳಗಿನವರಿಗೆ ಈ ಬಾವಿಯಿಂದಲೇ ನೀರನ್ನು ಪೂರೈಸುತ್ತಿರಬೇಕು. ಕೋಟೆಯ ಉತ್ತರದ ಗೋಡೆಯಲ್ಲಿ ಮುಖ್ಯಬಾಗಿಲನ್ನು ನಿರ್ಮಿಸಿರಬಹುದು. ಇದರ ಬಳಿ ಕೋಟೆ ಆಂಜನೇಯನ ದೇವಾಲಯವಿದೆ. ಈ ದೇಗುಲವನ್ನು ಜೀರ್ಣೋದ್ಧಾರ ಮಾಡಿರುವುದರಿಂದ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿದೆ. ಕೋಟೆಯ ಮಧ್ಯದಲ್ಲಿ ವೀರಭದ್ರ, ಕೊಯಲೇಶ್ವರ ದೇಗುಲಗಳಿವೆ. ಇತ್ತೀಚೆಗೆ ಮಸೀದಿ ಕಟ್ಟಡ ನಿರ್ಮಿಸುವದಕ್ಕಾಗಿ ತಳಪಾಯ ಅಗೆಯುವಾಗ ಪ್ರಾಚೀನ ದೇವಾಲಯದ ಅವಶೇಷಗಳು ಪತ್ತೆಯಾಗಿವೆ. ಈ ಹಿನ್ನೆಲೆಯಲ್ಲಿ ಇಲ್ಲಿ ಭೂ - ಉತ್ಖನನ ನಡೆಸಿದರೆ ಹೊಸ ಸಂಗತಿಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ. ಆಳವಾದ ಕಂದಕವು ಕೋಟೆಯನ್ನು ಸುತ್ತುವರೆದಿರುವಂತೆ ಕಂಡುಬರುತ್ತದೆ.

ಟಿಪ್ಪಣಿಗಳು

೧. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ*, ಪು. ೧೮೨-೧೮೩. ಕುಂಚೂರು : ಮಾಲತೇಶ ಪ್ರಕಾಶನ
೨. SII IX (pt.I) No. 169. ಹೊಳಲು
೩. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ*, ಪೂರ್ವೋಕ್ತ. ಪು. ೧೮೩-೧೮೪
೪. *ಅದೇ*, ಪು. ೧೮೪
೫. SII IX (pt II) No. 657. ತಿಮ್ಮಲಾಪುರ
೬. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು*, ಪು. ೫೧. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

೯

ಹರಪನಹಳ್ಳಿ ತಾಲೂಕಿನ ಕೋಟೆಗಳು

(Forts of Harapanahalli Taluk)

೯

ಹರಪನಹಳ್ಳಿ ತಾಲೂಕಿನ ಕೋಟೆಗಳು

(Forts of Harapanahalli Taluk)

ಈ ಮುಂಚೆ ಹರಪನಹಳ್ಳಿಯು ಬಳ್ಳಾರಿ ಜಿಲ್ಲೆಯಲ್ಲಿತ್ತು. ನಂತರ ನೂತನವಾಗಿ ರಚಿತವಾದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾಗಿದ್ದು, ದಾವಣಗೇರಿಯಿಂದ ಉತ್ತರಕ್ಕೆ ೫೦ ಕಿ.ಮೀ. ದೂರದಲ್ಲಿದೆ. ದಾವಣಗೆರೆ ಜಿಲ್ಲೆಯು ಒಂದು ತಾಲೂಕು ಕೇಂದ್ರ. ಈ ತಾಲೂಕನ್ನು ಉತ್ತರದಲ್ಲಿ ಹಡಗಲಿ, ಪೂರ್ವದಲ್ಲಿ ಕೂಡ್ಲಿಗಿ ಮತ್ತು ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕುಗಳು, ದಕ್ಷಿಣದಲ್ಲಿ ದಾವಣಗೆರೆ ಜಿಲ್ಲೆಯ ಹರಿಹರ ಮತ್ತು ದಾವಣಗೆರೆ ತಾಲೂಕುಗಳು ಪಶ್ಚಿಮದಲ್ಲಿ ಹಡಗಲಿ ಮತ್ತು ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕುಗಳು ಸುತ್ತುವರೆದಿವೆ. ಚಿಗಟೇರಿ, ಅರಸಿಕೇರಿ, ಹರಪನಹಳ್ಳಿ, ತೆಲಗಿ, ಉಚ್ಚಂಗಿದುರ್ಗ ಪ್ರಮುಖ ಹೋಬಳಿ ಕೇಂದ್ರಗಳಾಗಿವೆ. ಉತ್ತರಕ್ಕೆ ಇಳಿಜಾರಾಗಿರುವ ಈ ತಾಲೂಕಿನ ಕಲ್ಲಹಳ್ಳಿ ಗುಡ್ಡ ಶ್ರೇಣಿಯಿಂದ ಕಲ್ಲಹಳ್ಳಿ ಶಿಖರ ೮೫೩ ಮೀ. ಎತ್ತರವಿದೆ. ಮುಂದೆ ಈ ಶ್ರೇಣಿಯು ಕವಲೊಡೆದು ತೆಲಿಗಿ ಗುಡ್ಡ ಸಮೂಹ ಮತ್ತು ಹರಪನಹಳ್ಳಿಯ ದಕ್ಷಿಣ ಗುಡ್ಡ ಸಮೂಹವಾಗಿದೆ. ಈ ಶ್ರೇಣಿಯೇ ತಾಲೂಕಿನ ದಕ್ಷಿಣ ಭಾಗದಲ್ಲಿ ಉಚ್ಚಂಗಿದುರ್ಗದವರೆಗೂ ಮುಂದುವರೆದಿದೆ. ತಾಲೂಕಿನ ಪಶ್ಚಿಮದ ಎಲ್ಲೆಯಲ್ಲಿ ತುಂಗಭದ್ರಾ ನದಿ ಗಡಿಯಾಗಿ ಸ್ವಲ್ಪದೂರ ಹರಿದು ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕನ್ನು ಬೇರ್ಪಡಿಸಿದೆ. ತಾಲೂಕಿನ ಪೂರ್ವದಲ್ಲಿ ಚಿಕ್ಕಹಗರಿ ನದಿ ಉತ್ತರಾಭಿಮುಖವಾಗಿ ಹರಿಯುವುದು. ಸಹ್ಯವೆನಿಸುವ ಉತ್ತಮ ಹವಾಗುಣವಿದೆ. ಈ ಪ್ರದೇಶದ ವಾರ್ಷಿಕ ಸರಾಸರಿ ಮಳೆ ೭೩೦.೨೦ ಮಿ.ಮೀ. ಇದೆ.

ಹರಪನಹಳ್ಳಿಯು ಈ ಹಿಂದೆ ಒಂದು ಅಗ್ರಹಾರವಾಗಿದ್ದಿರಬೇಕು. ಅದರ ಮೂಲ ಹೆಸರು ಬ್ರಹ್ಮಪುರಿ ಹೊಮ್ಮನಹಳ್ಳಿ ನಂತರ ಹರಿಯಣ್ಣ ಹರಿಯಪ್ಪ ಪರ್ಗಡೆಯ ಹೆಸರಿನಲ್ಲಿ ಬದಲಾವಣೆ ಹೊಂದಿ 'ಹರಪನಹಳ್ಳಿ'

ಎಂದಾಯಿತು. ಕೊಟ್ಟೂರಿನ ಉಡುಕೇಶ್ವರ ದೇವಾಲಯದ ಶಾಸನದಲ್ಲಿ ಈ ಹರಿಯಪ್ಪನ ಪ್ರಸ್ತಾಪವಿದೆ. ಪ್ರಾಚೀನ ಕಾಲದ ಗ್ರಾಮಗಳ ಸ್ಥಳನಾಮಗಳು ಹೆಚ್ಚಾಗಿ ಆಳುವ ಅರಸರ, ಇಲ್ಲವೆ ದೇವ ದೇವತೆಗಳ ಹೆಸರುಗಳಿಂದ ಉಂಟಾಗಿರುವವು. ಮುತ್ತಿಗೆ ಗ್ರಾಮದಲ್ಲಿ ದೊರೆತ ದಾಖಲೆಯಂತೆ ಮುತ್ತಿಗೆ ಗ್ರಾಮದ ಕಟ್ಟೆ ಮನೆಗೆ ಸಂಬಂಧಿಸಿದಂತೆ ಒಂದು ವಿವಾದವನ್ನು ಈ ಹರಿಯಪ್ಪ - ಪರ್ಗಡೆ ವಂಶಕ್ಕೆ ಸೇರಿದವರು ವಿಚಾರಿಸಿ ತೀರ್ಮಾನ ಕೊಟ್ಟಿದ್ದು ಕಂಡುಬಂದಿದೆ. ಅದು ಈಗಲೂ ಮುತ್ತಿಗೆ ಗ್ರಾಮದಲ್ಲಿ ದೊರಕುವುದು. ಮುತ್ತಿಗೆ ಶಾನುಭೋಗರು ಹರಪನಹಳ್ಳಿ ಪಟ್ಟಣದವರೇ ಆಗಿರುವರು. ಹದಿಮೂರನೇ ಶತಮಾನದಲ್ಲಿ ಹರಪನಹಳ್ಳಿ, ಮೂವತ್ತರ ಮುತ್ತಿಗೆ ರಾಜ್ಯದಿಂದ ಬಾಗಳಿ ರಾಜ್ಯಕ್ಕೆ ಸೇರಿದ್ದು ಎಂದು, ಒಂದು ಕಂಚಿನ ಪತ್ರದಿಂದ ತಿಳಿಯುತ್ತದೆ. 'ಹರಿಯಪ್ಪನಹಳ್ಳಿ' ಶ್ರೀಸಾಮಾನ್ಯರ ಆಡುಮಾತಿನಲ್ಲಿ ಹರಿಯಾತನಹಳ್ಳಿ ಕಾಲಾಂತರದಲ್ಲಿ ಹರಪನಹಳ್ಳಿ ಎಂದು ಕರೆಯಿಸಿಕೊಂಡಿದೆ ಎಂಬ ವಿಷಯವನ್ನು ಕುಂ.ಬಾ. ಸದಾಶಿವಪ್ಪನವರು ವ್ಯಕ್ತಪಡಿಸುತ್ತಾರೆ.[೧] ಹರಪನಹಳ್ಳಿಯ ಇತಿಹಾಸವು ನಮಗೆ ಸ್ಪಷ್ಟವಾಗಿ ತಿಳಿಯುವುದು ವಿಜಯನಗರೋತ್ತರ ಪಾಳೆಯಗಾರರ ಆಳ್ವಿಕೆಯಿಂದ. ಆದರೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಬರುವ ಬಹುತೇಕ ಗ್ರಾಮಗಳು ತುಂಬಾ ಪ್ರಾಚೀನ ಇತಿಹಾಸವನ್ನು ಹೊಂದಿರುವುದು ಶಾಸನಗಳಿಂದ ದೃಢಪಡುತ್ತದೆ. ಆದರೆ ಈ ಯಾವ ಶಾಸನಗಳಲ್ಲಿಯೂ ಹರಪನಹಳ್ಳಿಯ ಉಲ್ಲೇಖ ಇರುವುದಿಲ್ಲ.

ಕ್ರಿ.ಶ. ೯೩೧ರ ರಾಷ್ಟ್ರಕೂಟರ ಶಾಸನವು ಗೋವಿಂದ ವಲ್ಲಭನ ಕಾಲದಲ್ಲಿ ಪಡಿಗನೊಂಬಾ ಎಂಬ ವೀರನು ಊರ ದಾಳಿಯಲ್ಲಿ ಸತ್ತಂತೆ ಉಲ್ಲೇಖಿಸುತ್ತದೆ. ಕ್ರಿ.ಶ. ೯೫೬, ಕ್ರಿ.ಶ. ೯೪೪, ಕ್ರಿ.ಶ. ೯೬೨, ಕ್ರಿ.ಶ.೯೯೧ರ ರಾಷ್ಟ್ರಕೂಟರ ಶಾಸನಗಳು[೨] ಬಾಗಳಿಯಲ್ಲಿ ಕಂಡುಬರುತ್ತವೆ. ಇವು ರಾಷ್ಟ್ರಕೂಟರ ಕನ್ನರದೇವನ ದೊರೆಯ ದಾನ-ದತ್ತಿಗಳನ್ನು ತಿಳಿಸುತ್ತವೆ. ಬಾಗಳಿ ಮತ್ತು ಉಚ್ಚಂಗಿದುರ್ಗಗಳಲ್ಲಿ ರಾಷ್ಟ್ರಕೂಟರ ದೇವಾಲಯಗಳೂ ಕಂಡುಬಂದಿವೆ. ಕೋಟೆಗಳ ವಿಷಯದಲ್ಲಿ ರಾಷ್ಟ್ರಕೂಟರ ಶಾಸನಗಳು ಮೌನವಾಗಿವೆ.

ಕಲ್ಯಾಣ ಚಾಲುಕ್ಯರ ಸಾಮಂತರಾದ ನೊಳಂಬರು, ನೊಳಂಬವಾಡಿ ೩೨೦೦೦ ದ ಮಹಾಮಂಡಳೇಶ್ವರರಾಗಿ ಆಳ್ವಿಕೆ ಮಾಡಿದಂತೆ ಉಲ್ಲೇಖಿಸುವ ನೂರಾರು ಕಲ್ಯಾಣ ಚಾಲುಕ್ಯರ ಶಾಸನಗಳು ಈ ಭಾಗದಲ್ಲಿ ಕಂಡುಬರುತ್ತವೆ. ಹಿಂದೆ ಬಳ್ಳಾರಿ ಜಿಲ್ಲೆಯು ಸಮಗ್ರವಾಗಿ ನೊಳಂಬವಾಡಿ ೩೨೦೦೦ ವಿಭಾಗದಲ್ಲಿತ್ತು. ತಮಿಳಿನಲ್ಲಿ ನೊಳಂಬವಾಡಿ ಎಂದರೆ ದೊಡ್ಡ ವಿಭಾಗ ಎನ್ನುವ ಅರ್ಥವುಂಟು. ಹಿಂದೆ ಈ ಪ್ರದೇಶವನ್ನು ಪಲ್ಲವರು ಆಳುತ್ತಿದ್ದರು.[೩] ಈ ನೊಳಂಬವಾಡಿ ೩೨೦೦೦ದಲ್ಲಿ ಕೋಗಳಿ ೫೦೦ ಬರುತ್ತದೆ. ಇದಕ್ಕೆ ಹಗರಿಬೊಮ್ಮನಹಳ್ಳಿ, ಹಡಗಲಿ, ಕೂಡ್ಲಿಗಿ, ಹರಪನಹಳ್ಳಿ ತಾಲ್ಲೂಕುಗಳ ಕೆಲವು ಗ್ರಾಮಗಳು ಒಳಗೊಂಡಿದ್ದವು. ಕೋಗಳಿ ೫೦೦ರ ಉಪವಿಭಾಗವಾಗಿ ಹಾಲ್ಪೊಳ - ೧೨, ಬಿಕ್ಕಿಗ - ೭೦, ಹಲುವಾಗಿಲು - ೧೨, ಬೆಣ್ಣೆವೂರು - ೧೨, ಕಂಪಣ ಮೊಗೆ - ೧೨, ಉರಯಿ - ೧೨, ಮೊಳವಾಡ - ೧೨, ಮುತ್ತಗಿ - ೩೦, ಕೊಟ್ಟೂರು - ೧೨, ಬೆಣ್ಣೆಕಲ್ಲು - ೧೨, ಸುಂದವತ್ತಿ- ೧೨, ಸೇರುತ್ತವೆ.[೪] ಇದರಲ್ಲಿ ಬಿಕ್ಕಿಗ - ೭೦, ಹಲುವಾಗಿಲು - ೧೨, ಮುತ್ತಗೆ - ೩೦ ಇವು ಅಲ್ಲದೆ ಕದಂಬಳಿಗೆ ೧೦೦೦ ದರಲ್ಲಿ

ಉಚ್ಚಂಗಿದುರ್ಗ - ೩೦ ಕೂಡ ಸೇರುತ್ತದೆ. ಈ ಮೇಲಿನ ಆಡಳಿತ ಕೇಂದ್ರಗಳಲ್ಲಿ ಉಚ್ಚಂಗಿದುರ್ಗ - ೩೦, ಹಲುವಾಗಿಲು - ೧೨, ಮುತ್ತುಗೆ - ೩೦, ಬೆಣ್ಣೆಕಲ್ಲು - ೧೨ ಇವು ಹರಪನಹಳ್ಳಿ ತಾಲ್ಲೂಕಿಗೆ ಒಳಪಡುತ್ತವೆ. ಹರಪನಹಳ್ಳಿ ತಾಲ್ಲೂಕಿನ ದುಗ್ಗತ್ತಿ, ಮಾಡಲಗೇರಿ, ಬಾಗಳಿಗಳಲ್ಲಿ ಜೈನ ಬಸದಿಗಳು ಇದ್ದ ಉಲ್ಲೇಖವನ್ನು ಈ ಪ್ರದೇಶದ ಕಲ್ಯಾಣ ಚಾಳುಕ್ಯರ ಶಾಸನಗಳಲ್ಲಿ ಕಾಣಬಹುದು. ಅರಸಿಕೇರಿಯನ್ನು ನೊಣಬನ ಅರಸಿಕೇರಿ ಎಂದು ಕೆರೆಗುಡಿಹಳ್ಳಿಯಲ್ಲಿರುವ ಕ್ರಿ.ಶ. ೧೫೨೭ರ ಶಾಸನವೊಂದು ತಿಳಿಸುತ್ತದೆ. ಪಾಂಡ್ಯರಂತು ಉಚ್ಚಂಗಿದುರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು.[೫] ಹಾಗಾಗಿ ಇವರಿಗೆ ಉಚ್ಚಂಗಿಯ ಪಾಂಡ್ಯರೆಂದೆ ಗುರುತಿಸಲಾಗಿದೆ. ಕಲ್ಯಾಣ ಚಾಳುಕ್ಯರ ಅವಧಿಯ ಪೂರ್ವದಲ್ಲಿಯೇ ಉಚ್ಚಂಗಿದುರ್ಗದಲ್ಲಿ ಕೋಟೆಯೊಂದು ನಿರ್ಮಾಣವಾಗಿದ್ದ ಉಲ್ಲೇಖಗಳು ಅಂದಿನ ಶಾಸನಗಳಿಂದ ತಿಳಿದುಬರುತ್ತದೆ.

ಕಡತಿ, ಹಲುವಾಗಿಲು, ಕುಂಚೂರುಗಳಲ್ಲಿ ಯಾದವರ ಶಾಸನಗಳಿವೆ.[೬] ಉಚ್ಚಂಗಿದುರ್ಗ, ಅಲಗಿಲವಾಡ, ನೀಲಗುಂದ, ಬಾಗಳಿಯಲ್ಲಿ ಹೊಯ್ಸಳರ ಶಾಸನಗಳು ಕಂಡುಬರುತ್ತಿವೆ.[೭] ಕ್ರಿ.ಶ.೧೨೨೪ರ ನೀಲಗುಂದದ ಶಾಸನವೊಂದು ೨ನೇ ನರಸಿಂಹನ ತಂದೆ ಬಲ್ಲಾಳನು ಸೇವುಣರ ಸೈನ್ಯವನ್ನು ಸೊರಟೂರಿನಿಂದ ಕೃಷ್ಣವೇಣಿ ನದಿಯವರೆಗೆ ಏಕಾಂಗಿಯಾಗಿ ತಳ್ಳಿದ್ದನೆಂದು ತಿಳಿಸುತ್ತದೆ.[೮] ಚಿರಸ್ತಹಳ್ಳಿ, ಉಚ್ಚಂಗಿದುರ್ಗ, ಹಲುವಾಗಿಲುಗಳಲ್ಲಿ ವಿಜಯನಗರದ ಶಾಸನಗಳು ಸಿಗುತ್ತವೆ. ಈ ಎಲ್ಲಾ ಶಾಸನಗಳಲ್ಲಿ ಸಾಂದರ್ಭಿಕವಾಗಿ ಉಚ್ಚಂಗಿದುರ್ಗ ಕೋಟೆಯ ಉಲ್ಲೇಖಗಳು ಕಂಡುಬರುತ್ತವೆ. ಈ ಯಾವುದೇ ಶಾಸನಗಳಲ್ಲಿ ಹರಪನಹಳ್ಳಿ ಹೆಸರು ಕಂಡುಬರುವುದಿಲ್ಲ. ಹಾಗಾಗಿ 'ಹರಪನಹಳ್ಳಿ' ಎಂಬ ಹೆಸರು ಹರಪನಹಳ್ಳಿ ಪಾಳೆಯಗಾರರ ಕಾಲದ್ದು. ಹರಪನಹಳ್ಳಿ ಹಾಗೂ ಹರಿಹರ ತಾಲೂಕಿನ ಎಲ್ಲಾ ಶಾಸನಗಳನ್ನು ಗಮನಿಸಲಾಗಿ ಉಚ್ಚಂಗಿದುರ್ಗದ ಕೋಟೆಯು ಕ್ರಿ.ಶ. ೧೦ನೇ ಶತಮಾನಕ್ಕೆ ಮುಂಚಿನದೆಂದು ಅಂದಾಜಿಸಬಹುದು. ಹರಪನಹಳ್ಳಿ ಪಾಳೆಯಗಾರ ಶಾಸನ, ಹಸ್ತಪ್ರತಿಗಳಲ್ಲಿ ಮತ್ತು ಕೆಳದಿನೃಪವಿಜಯದಲ್ಲಿ ಹರಪನಹಳ್ಳಿ, ಬಾಗಳಿ, ಹಲುವಾಗಿಲು, ಚಿಗಟೇರಿ ಮತ್ತು ಬಂಡ್ರಿ ಕೋಟೆಗಳ ಪ್ರಸ್ತಾಪಗಳಿವೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಇರುವ ಈ ಮೇಲಿನ ಕೋಟೆಗಳ ಕುರಿತಾಗಿ ಮುಂದೆ ಚರ್ಚಿಸಲಾಗಿದೆ.

ಟಿಪ್ಪಣಿಗಳು

೧. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು,* ಪು ೧-೨. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

೨. SII IX (pt. I) No. 66. ಬಾಗಳಿ

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೧೮. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. *ಅದೇ,* ಪು. ೨೫

೫. ಕೊಟ್ರೇಶ್, ಎಂ. ೧೯೯೬. *ಉಚ್ಚಂಗಿದುರ್ಗ* (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಎಂ.ಫಿಲ್ ಪ್ರಬಂಧ, ಪು. ೧೮. ಹಂಪಿ : ಕನ್ನಡ ವಿಶ್ವವಿದ್ಯಾಲಯ

೬. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೩೨

೭. *ಅದೇ,* ಪು. ೩೧

೮. *ಅದೇ,* ಪು. ೩೨

೯. ೧ ಉಚ್ಚಂಗಿದುರ್ಗ

ಉಚ್ಚಂಗಿದುರ್ಗವು ದಾವಣಗೇರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿದ್ದು, ಹರಪನಹಳ್ಳಿಯಿಂದ ದಕ್ಷಿಣಕ್ಕೆ ದಾವಣಗೇರಿಯಿಂದ ಉತ್ತರಕ್ಕೆ ೨೮ ಕಿ.ಮೀ. ಸಮಾನ ಅಂತರದಲ್ಲಿದೆ. ಉಚ್ಚಂಗಿದುರ್ಗದ ಬೆಟ್ಟವು ಸಮುದ್ರ ಮಟ್ಟದಿಂದ ೨೯೭೫ ಅಡಿ ಎತ್ತರವಾಗಿದೆ. ಈ ಬೆಟ್ಟವನ್ನು ಸುತ್ತುವರೆದಿರುವ ಕೋಟೆಯು ಗಿರಿದುರ್ಗಗಳ ಸಾಲಿಗೆ ಸೇರುವುದು.

ಉಚ್ಚಂಗಿದುರ್ಗದ ಹಾಲಮ್ಮನಗುಡಿ ಮುಂದಿರುವ ಶಾಸನವೊಂದರಲ್ಲಿ[೧] ಉಚ್ಚಂಗಿದುರ್ಗಕ್ಕೆ ಕೃತಯುಗದಲ್ಲಿ ಮೇಘನಾದ ತ್ರೇತಾಯುಗದಲ್ಲಿ ಕನಕಗಿರಿ, ದ್ವಾಪರಯುಗದಲ್ಲಿ ಉತ್ತುಂಗ ಪರ್ವತ, ಕಲಿಯುಗದಲ್ಲಿ ಉಚ್ಚಂಗಿ ಎಂಬ ಹೆಸರು ಬಂದಿರುವ ಉಲ್ಲೇಖಗಳಿವೆ. ಉಚ್ಚಂಗಿ ಎಂಬಲ್ಲಿ ಕೊನೆಗೆ ಬರುವ 'ಗಿ' ಕಾರ ಹಚ್ಚಿಕೊಂಡು ಬರುವ ಗ್ರಾಮನಾಮಗಳು ಉತ್ತರ ಕರ್ನಾಟಕದಲ್ಲಿ ಅನೇಕ ಕಡೆ ದೊರೆಯುತ್ತವೆ. ನಿದರ್ಶನಕ್ಕಾಗಿ ಕೆಲವನ್ನು ನೀಡಲಾಗಿದೆ. ಗೊಣಸಗಿ, ತೆಲಗಿ, ಉತ್ತಂಗಿ, ಹುಣಸಗಿ, ಮೆಣಸಗಿ, ಚಿಮ್ಮಲಗಿ, ಹಂಗರಗಿ, ಅರಸಂಗಿ, ನರಸಂಗಿ, ಕೂಡ್ಲಿಗಿ, ಮುತ್ತಗಿ, ತಂಗಡಗಿ, ಅಂಕಲಗಿ, ಅಸಂಗಿ, ಇತ್ಯಾದಿ ಇಲ್ಲಿಯ 'ಗಿ' ಗಾವ ಗ್ರಾಮ ಹ್ರಸ್ವರೂಪ ಕೆಯ್ >ಗೆಯ್, ಕೆಯ್, ಹೊಲ-ಸ್ಥಳದ ಅರ್ಥವನ್ನು ನೀಡುತ್ತದೆ. ಗ್ರಾಮದ ಚರಿತೆಗೆ ಭಾಷಿಕ ಅಧ್ಯಯನ ಒಂದು ಮುಖ್ಯ ಆಕರವಾಗಿದೆ. ಜಗಳೂರಿನ ತಾಲ್ಲೂಕಿನ ಹುಚ್ಚಂಗಿಪುರ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನಲ್ಲಿ ಉಚ್ಚಗೇರಿ ಇದೆ. ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನಲ್ಲಿ ಉಚಗೇರಿ ಎಂಬ ಊರುಗಳಿವೆ.

ಉಚ್ಚ - ಎತ್ತರ, ಶ್ರೇಷ್ಠ, ಉಚ್‌ಶೃಂಗಿ - ಉಚ್ಚಶೃಂಗಿ, ಉಚ್ - ಎತ್ತರವಾದ ಶೃಂಗ - ಕೋಡು, ಶಿಖರ ಎಂದಾಗಿರಬೇಕು. ಉಚ್ಚಶೃಂಗಿ - ಉಚ್ಚಂಗಿಯಾಗಿ ಈ ರೂಪ ಪಡೆದುಕೊಂಡಿರಬಹುದಾಗಿದೆ. ಇದು ಸಂಸ್ಕೃತ ಪದವಾದರೂ ಸಧ್ಯಕ್ಕೆ ಈ ಮೂಲವನ್ನು ಒಪ್ಪಲಾಗಿದೆ.

ಈ ಪ್ರದೇಶದ ರಾಜಕೀಯ ಇತಿಹಾಸವನ್ನು ಅವಲೋಕಿಸಿದರೆ ಮಧ್ಯಕಾಲೀನ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಅವಧಿ ನಿರ್ಣಾಯಕ ಕಾಲಘಟ್ಟವಾಗಿದೆ ಎನ್ನಬಹುದು. ಈ ಕುರಿತು ಪ್ರಾದೇಶಿಕ ಸಂಶೋಧನೆಗಳು ಸಾಕಷ್ಟು ನಡೆದಿದ್ದು ಹೊಸ ಸಂಗತಿಗಳು ಬೆಳಕಿಗೆ ಬಂದಿವೆ. ವಿಜಯನಗರಕ್ಕಿಂತ ಮೊದಲು ಉಚ್ಚಂಗಿದುರ್ಗವು ಬನವಾಸಿ ಕದಂಬರಿಗೆ, ಕಲ್ಯಾಣ ಚಾಳುಕ್ಯರಿಗೆ, ನೊಳಂಬರಿಗೆ, ಪಾಂಡ್ಯರಿಗೆ, ಹೊಯ್ಸಳರಿಗೆ ಪ್ರಮುಖ ಕೇಂದ್ರವಾಗಿತ್ತು. ಅಲ್ಲದೆ ಬಳ್ಳಾರಿ, ದಾವಣಗೇರಿ, ಚಿತ್ರದುರ್ಗ, ಧಾರವಾಡ ಮತ್ತು ಕರ್ನಾಟಕದ ದಕ್ಷಿಣ ಭಾಗದ ಕೆಲವು ಪ್ರದೇಶಗಳನ್ನೊಳಗೊಂಡ ನೊಳಂಬವಾಡಿ ೩೨೦೦೦ ಕ್ಕೆ ಉಚ್ಚಂಗಿದುರ್ಗವು ರಾಜಧಾನಿಯಾಗಿತ್ತು. ಆಗ ಪಾಂಡ್ಯರು ಇಲ್ಲಿ ರಾಜ್ಯವಾಳುತ್ತಿದ್ದರು. ವಿಜಯನಗರದ ನಂತರ ಉಚ್ಚಂಗಿದುರ್ಗ ಪಾಳೆಯಗಾರರ ಪ್ರಮುಖ

ನೆಲೆಯಾಗಿದ್ದಿತು. ಒಂದು ಕಾಲಕ್ಕೆ ರಾಜಕೀಯ ಶಕ್ತಿ ಕೇಂದ್ರವಾಗಿದ್ದ ಉಚ್ಚಂಗಿದುರ್ಗವು ಸಾಂಸ್ಕೃತಿಕ ಹಾಗೂ ಧಾರ್ಮಿಕ ಕೇಂದ್ರವಾಗಿ ಬೆಳೆಯುತ್ತಿರುವ ಕಾರಣ ಇದರ ರಾಜಕೀಯ ಚರಿತ್ರೆ ಮಸುಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇದರ ರಾಜಕೀಯ ಇತಿಹಾಸದೊಂದಿಗೆ ಇಲ್ಲಿಯ ರಕ್ಷಣಾ ಸ್ಮಾರಕಗಳಾದ ಕೋಟೆ ಕೊತ್ತಳಗಳ ಬಗ್ಗೆ ಅಧ್ಯಯನ ಮಾಡುವುದು ಇಲ್ಲಿ ಪ್ರಮುಖವೆನಿಸುತ್ತದೆ.

ಮನುಷ್ಯ ಜೀವನದ ಅವಶ್ಯಕತೆಗಳಾದ ಹಿತಕರವಾದ ವಾಯುಗುಣ, ಫಲವತ್ತಾದ ಭೂ ಪ್ರದೇಶ, ಜಲಸಮೃದ್ಧಿ ಈ ಅನುಕೂಲಗಳು ಇವುಗಳ ಜೊತೆಗೆ ವಾಸಿಸಲು ಗಿರಿಕಂದರಗಳು ಉಚ್ಚಂಗಿದುರ್ಗದಲ್ಲಿ ಇರುವುದರಿಂದ ಈ ಪ್ರದೇಶದಲ್ಲಿ ಅತೀ ಪ್ರಾಚೀನ ಕಾಲದಿಂದಲೂ ಜನರು ನೆಲೆಸಿರುವುದಕ್ಕೆ ಕುರುಹುಗಳಿವೆ.

ಶಾತವಾಹನರ ಸಾಮಂತರಾದ ಕಾಂಚಿಯ ಪಲ್ಲವರು ಸ್ವಲ್ಪಕಾಲ ಇಲ್ಲಿ ಆಳ್ವಿಕೆ ಮಾಡಿದ್ದಾರೆ.[೨] ಉಚ್ಚಂಗಿದುರ್ಗಕ್ಕೆ ಸಂಬಂಧಿಸಿದಂತೆ ಪಲ್ಲವರ ಯಾವ ಕುರುಹುಗಳು ದೊರಕುವುದಿಲ್ಲ. ಆದರೆ ಕೈಫಿಯತ್ತುಗಳು ಮತ್ತು ಕೆಲವು ದಾಖಲೆಗಳಲ್ಲಿ ಈ ಕೋಟೆಯ ಬಗ್ಗೆ ಕೆಲವು ಮಾಹಿತಿಗಳಿವೆ. ಕಾಂಚಿಯ ಪಲ್ಲವರು ಮಧುರೆಯ ಅರಸರು ಒಂದಾಗಿ ಪ್ರಬಲತರ ಗಿರಿದುರ್ಗವೆಂದು ಹೆಸರಾಗಿದ್ದ ಉಚ್ಚಂಗಿದುರ್ಗವನ್ನು ತಮ್ಮ ಸೈನ್ಯದೊಡನೆ ಮುತ್ತಿಗೆ ಹಾಕಿದರು.[೩] ಸಂಗ್ರಾಮವಾದ ನಂತರ ದುರ್ಗವು ಶತ್ರುಗಳ ವಶವಾಯಿತು. ಆದರೂ ರಾಜ್ಯಲೋಲಪರರಾದ ಕಾಂಚಿಯ ರಾಜರು ಮತ್ತು ಮಧುರೆಯ ಅರಸರು ತಮ್ಮಲ್ಲಿಯೇ ಸಂಧಾನ ಮಾಡಿಕೊಂಡು ದುರ್ಗದ ಕೋಟೆಯನ್ನು ವಶಪಡಿಸಿಕೊಂಡು ನೀರಾವರಿ ಯೋಜನೆಗಳಿಂದ ವೃದ್ಧಿ ಮಾಡಿಕೊಂಡರು.[೪] ಉಭಯತ್ರಯರು ಸೇರಿ ಒಂದು ಕೆರೆಯನ್ನು ನಿರ್ಮಿಸಿದರು. ಅದಕ್ಕೆ ಮೂರು ಕಡೆ ಕಟ್ಟೆಯನ್ನು ಕಾಂಚಿ ಮತ್ತು ಮಧುರೆಯ ಪಲ್ಲವರು ಕಟ್ಟಿಸಿದರು. ಕಾಂಚಿಯವರು ಗುಡ್ಡದ ಕೆಳಭಾಗದಲ್ಲಿ ಕೋಟೆಯನ್ನು ನಿರ್ಮಿಸಿ ಇಲ್ಲಿ ಹನುಮಂತನನ್ನು ಪ್ರತಿಷ್ಠಾಪಿಸಿದರು ಎಂಬ ಪ್ರತೀತಿ ಇದೆ. ಉಚ್ಚಂಗಿದುರ್ಗದ ವಾಯುವ್ಯಕ್ಕೆ ೨ ಮೈಲು ದೂರದಲ್ಲಿ ಕಂಚಿ ಪಲ್ಲವರ, ಮಧುರೆಯವರ ಸೈನ್ಯ ಬಿಡಾರ ಮಾಡಿ ಜಯ ಸಂಪಾದಿಸಿತು.[೫] ಕದಂಬ ವಂಶದ ಉಚ್ಚಂಗಿ ದೊರೆಗಳು ಸಿಂಹ ವಿಷ್ಣುವಿನ ವಂಶದ ಪಲ್ಲವರಿಂದ ನೆರವು ಪಡೆದರು. ಉಚ್ಚಂಗಿ ವಿಷ್ಣುಶರ್ಮಕದಂಬನಿಗೆ ಶಾಂತಿವರ್ಮಪಲ್ಲವನು ಪಟ್ಟ ಕಟ್ಟಿದ್ದು ವಿಷ್ಣುವರ್ಮನ ಮಗನಾದ ಸಿಂಹವರ್ಮನಿಗೂ ಪಲ್ಲವರು ನೆರವು ನೀಡಿದರು. ನಂತರ ಕಾಡುವೆಟ್ಟಿಯನ್ನು ಚಾಳುಕ್ಯರು ಸೋಲಿಸಿದರು.[೬]

ಬನವಾಸಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಕದಂಬರು ಕ್ರಿ.ಶ. ೪ನೆಯ ಶತಮಾನದಿಂದ ೬ನೆಯ ಶತಮಾನದವರೆಗೆ ಆಳಿದುದನ್ನು ಚರಿತ್ರೆಯಿಂದ ತಿಳಿಯಬಹುದು.[೭] ಮಯೂರವರ್ಮನಿಂದ ಕ್ರಿ.ಶ. ೩೪೫ ರಲ್ಲಿ ಕದಂಬವಂಶ ಆರಂಭವಾಯಿತು.[೮] ಕದಂಬವಂಶದ ದೊರೆಗಳೆಂದರೆ ಕೊಂಗವರ್ಮ, ಭಗೀರಥ ವರ್ಮ. ರಘುವರ್ಮ, ಕಾಕುತ್ಸವರ್ಮ, ಶಾಂತಿವರ್ಮ, ಕುಮಾರವರ್ಮ, ಮೊದಲನೆ ಕೃಷ್ಣ, ಮೃಗೇಶವರ್ಮ ಮುಂತಾದವರು

ಮುಂದೆ ಕಾಕುತ್ಸವರ್ಮನಿಗೆ ಕುಮಾರವರ್ಮ (ಮಂಧಾತ) ಮತ್ತು ಕೃಷ್ಣವರ್ಮ ಎಂಬ ಎರಡು ಮಕ್ಕಳಾಗಿ ಉಚ್ಚಂಗಿಯ ಅಧಿಪತಿಯಾದ ಕೃಷ್ಣ ವರ್ಮನು ತನ್ನ ಹಿರಿಯಣ್ಣನ ಮಗ ಮೃಗೇಶನಿಗೆ ವಿರುದ್ಧವಾಗಿ ಪಲ್ಲವರ ಬೆಂಬಲ ಪಡೆದನು. ಹೀಗೆ ಕದಂಬರ ರಾಜ್ಯವು ಇಬ್ಭಾಗವಾಯಿತು.[೯] ಒಂದು ಭಾಗವು ತಲಕಾಡಿನ ಗಂಗರ ಬೆಂಬಲ ಪಡೆದು ಬನವಾಸಿ ಶಾಖೆ ಆರಂಭಿಸಿತು.[೧೦] ಮತ್ತೊಂದು ಪಲ್ಲವರ ಹಾಗೂ ಪಾರವಿ ಗಂಗರ ಬೆಂಬಲ ಪಡೆದು ಉಚ್ಚಂಗಿ ಶಾಖೆ ಆರಂಭಿಸಿ ಇವರು ಸುಮಾರು ೧೧೭ ವರ್ಷಗಳವರೆಗೆ ಆಳ್ವಿಕೆ ಮಾಡಿದರು.[೧೧]

ಗಂಗರು ಮತ್ತು ರಾಷ್ಟ್ರಕೂಟರ ಕುರುಹುಗಳು ಇಲ್ಲಿ ಅಲಭ್ಯ. ನೊಳಂಬ ಪಲ್ಲವರು ಪಲ್ಲವ ವಂಶದ ಕಿರುಶಾಖೆಗೆ ಸೇರಿದವರು. ಸುಮಾರು ಕ್ರಿ.ಶ. ೭೦೦ರಲ್ಲಿ ಈ ಶಾಖೆ ಆರಂಭವಾಗಿ ಕೊನೆಗೆ ಹೊಯ್ಸಳ ಹಾಗೂ ಕಲ್ಯಾಣ ಚಾಳುಕ್ಯರಲ್ಲಿ ಐಕ್ಯವಾಯಿತೆಂದು ತಿಳಿದುಬರುತ್ತದೆ.[೧೨] ಕ್ರಿ.ಶ. ೧೦ನೆಯ ಶತಮಾನದಲ್ಲಿ ಇವರ ಆಡಳಿತ ಪ್ರದೇಶವು ನೊಳಂಬವಾಡಿ ೩೨೦೦೦ದ ಜಿಲ್ಲೆಯಾಯಿತು. ಹಾಗಾಗಿ ನೊಳಂಬರಿಗೆ ೩೨೦೦೦ಕ್ಕೆ ಬಳ್ಳಾರಿ, ಕೋಲಾರ, ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳು ಸೇರಿಕೊಂಡವು. ಈ ವಂಶದ ಸ್ಥಾಪಕ ತ್ರಿನಯನ ಪಲ್ಲವ ಆಗ ಉಚ್ಚಂಗಿದುರ್ಗವು ನೊಳಂಬರ ಆಡಳಿತಕ್ಕೆ ಒಳಗಾದ ಪ್ರದೇಶವಾಗಿದೆ. ಇದೇ ಸಮಯದಲ್ಲಿ ನೊಳಂಬರು ತಮ್ಮ ನಿಷ್ಠೆಯನ್ನು ಕಲ್ಯಾಣ ಚಾಳುಕ್ಯರಿಗೆ ವರ್ಗಾಯಿಸಿದಂತೆ ಕಂಡುಬರುತ್ತದೆ.[೧೩] ಉಚ್ಚಂಗಿ ೩೦ ಇದೊಂದು ಪ್ರಮುಖ ಆಡಳಿತ ನೆಲೆಯಾಗಿ ಇವರಿಗೆ ರಾಜಧಾನಿಯಾಯಿತು.[೧೪] ಪಾಂಡ್ಯರು ಈ ಸಂಪ್ರದಾಯವನ್ನು ಮುಂದುವರೆಸಿದರು.

ಪಾಂಡ್ಯರು ಸುಮಾರು ಕ್ರಿ.ಶ. ೧೧ನೇ ಶತಮಾನದಿಂದ ೧೩ನೇ ಶತಮಾನದ ಆರಂಭದವರೆಗೆ ಸುಮಾರು ೧೨ ಜನ ಪಾಂಡ್ಯ ಅರಸರು ಉಚ್ಚಂಗಿದುರ್ಗವನ್ನು ರಾಜಧಾನಿ ಮಾಡಿಕೊಂಡು ಇಲ್ಲಿ ಆಳ್ವಿಕೆ ಮಾಡಿದರು.[೧೫] ಆ ಸಮಯದಲ್ಲಿ ಉಚ್ಚಂಗಿದುರ್ಗದ ಮೇಲಿರುವ ತೈಲೇಶ್ವರ ದೇವರಿಗೆ ನೊಳಂಬ ಪಲ್ಲವ ಪೆರ್ಮಾಡಿ ದೇವನು ಗಂಟಿಗನ ಕೆರೆಯನ್ನು ದಾನವಿಟ್ಟಂತೆ ಕ್ರಿ.ಶ. ೧೧೭೦ರ ಶಾಸನ ತಿಳಿಸುತ್ತದೆ.[೧೬] ಕ್ರಿ.ಶ.೧೧೬೫ರ ಶಾಸನವು[೧೭] ವಿಜಯ ಪಾಂಡ್ಯದೇವನು ಉಚ್ಚಂಗಿ ಪಟ್ಟಣದ ತೆರಿಗೆಯನ್ನು ದೇವರಿಗೆ ದತ್ತಿ ಬಿಟ್ಟಂತೆ ತಿಳಿಸುತ್ತದೆ.

ಕ್ರಿ.ಶ. ೧೧೦೦ರ ಶಾಸನವೊಂದು[೧೮] ತ್ರಿಭುವನಮಲ್ಲ ಪಾಂಡ್ಯದೇವನು ಉಚ್ಚಂಗಿ ದೇವಿಗೆ ದತ್ತಿ ನೀಡಿದ ವಿವರ ನೀಡುತ್ತದೆ. ಕ್ರಿ.ಶ. ೧೦೬೪ರ ಶಾಸನವು ವಿಜಯಾದಿತ್ಯದೇವನು ಆಡಳಿತ ಅವಧಿಯಲ್ಲಿ ಸೂಳೆಮಾಳ ಮಾರಮಯ್ಯನು ಮಾರೇಶ್ವರ ದೇವರಿಗೆ ಗದ್ದೆ, ತೋಟ ದಾನಬಿಟ್ಟಂತೆ ತಿಳಿಸುತ್ತದೆ.[೧೯] ಹೀಗೆ ಉಚ್ಚಂಗಿದುರ್ಗದಲ್ಲಿ ಪಾಂಡ್ಯ ಅರಸರು ದೇವಸ್ಥಾನಗಳಿಗೆ ದಾನ ದತ್ತಿಗಳನ್ನು ನೀಡುವುದರೊಂದಿಗೆ ವೈಭವ ಆಳ್ವಿಕೆ ಮಾಡಿದರು. ಇವರು ಯುದ್ಧ ನಿಪುಣರು, ಶೂರರು ಆಗಿದ್ದರು. ಪಾಂಡ್ಯರಲ್ಲಿ ವಿಜಯಪಾಂಡ್ಯದೇವರು ಅತ್ಯಂತ ಪರಾಕ್ರಮದ ದೊರೆಯಾಗಿದ್ದನು. ಇವನ ಬಗ್ಗೆ ಶಾಸನವೊಂದರಲ್ಲಿ

ಚಿಂತಾಂತಃ ಕರಣಂ ಯಾಧವ ಭರಣಂ ಪಾಂಡ್ಯ ಕುಳಕಮಳ ಮಾರ್ತ್ತಂಡಂ
ಪರಿಚ್ಛೇದಗಂಡಂ ರಾಜಿಗ ಚೋಳ ಮನೋಭಂಗಂ ಸಾಹಸೋತ್ತುಂಗಂ
ನಿಖಿಳ ನಾಮಾವಳೀ ವಿರಾಜಿತಮಪ್ಪ ಶ್ರೀ ಮನ್ಮಹಾಮಂಡಳೇಶ್ವರ

ವಿಜಯಪಾಂಡ್ಯದೇವಗು ಎಂದಿದೆ.[೨೦] ಅಂದರೆ ವಿಜಯ ಪಾಂಡ್ಯನು ಚೋಳರನ್ನು ಗೆದ್ದ ಬಗೆಯನ್ನು ವರ್ಣಿಸಿದೆ. ಹೊಯ್ಸಳರ ೩ನೇ ಬಲ್ಲಾಳನು ಕ್ರಿ.ಶ.೧೧೭೭ರಲ್ಲಿ ಪ್ರಯಾಸಮಾನವಾಗಿ ಉಚ್ಚಂಗಿದುರ್ಗವನ್ನು ವಿಜಯಪಾಂಡ್ಯನನ್ನು ಸೋಲಿಸುವುದರೊಂದಿಗೆ ಹೊಯ್ಸಳರು ವಶಪಡಿಸಿಕೊಂಡರು.[೨೧] ಮುಂದೆ ಕಾಲಾಂತರದಲ್ಲಿ ಉಚ್ಚಂಗಿದುರ್ಗವು ಹೊಯ್ಸಳರಿಗೆ ಸೇರಿದ್ದು ಕಂಡುಬರುತ್ತದೆ. ಚಾಳುಕ್ಯರ ಪತನದ ಹಾದಿ ಮತ್ತು ಚಾಳುಕ್ಯರ ರಾಜ್ಯದಲ್ಲಿ ಹೊಯ್ಸಳರ ಪ್ರದೇಶವು ಪ್ರಮುಖವಾದ ಹಂತವಾಗಿದ್ದರಿಂದ ಹೊಯ್ಸಳರಿಗೆ ಉಚ್ಚಂಗಿದುರ್ಗವನ್ನು ವಶಪಡಿಸಿಕೊಂಡಿದ್ದು ಒಂದು ಪ್ರತಿಷ್ಠೆಯ ಸಂಗತಿಯು ಆಗಿರಬಹುದಾಗಿದೆ.

ಚೋಳರು ಮತ್ತು ಚಾಳುಕ್ಯರ ನಡುವೆ ಈ ಭಾಗದಲ್ಲಿ ಸದಾ ಯುದ್ಧಗಳು ಜರುಗುತ್ತಿದ್ದವು. ಇಂತಹ ಸನ್ನಿವೇಶದಲ್ಲಿ ಹೊಯ್ಸಳರು ಬೆಳಕಿಗೆ ಬಂದರು. ಒಂದನೇ ಬಲ್ಲಾಳ, ಎರಡನೇ ಬಲ್ಲಾಳ, ಮೂರನೇ ಬಲ್ಲಾಳ, ಒಂದನೇ ನರಸಿಂಹ, ಸೋಮೇಶ್ವರ, ಎರಡನೇ ನರಸಿಂಹ ಮತ್ತು ಮೂರನೇ ನರಸಿಂಹ ಹೊಯ್ಸಳ ದೊರೆಗಳಲ್ಲಿ ಪ್ರಮುಖರು. ಇವರು ಕ್ರಿ.ಶ. ೧೦ನೇ ಶತಮಾನದಿಂದ ೧೪ನೇ ಶತಮಾನದ ಮಧ್ಯಭಾಗದವರೆಗೆ ಅಂದರೆ ೩ ಶತಕಗಳ ಕಾಲ ಇಲ್ಲಿ ಆಳ್ವಿಕೆ ಮಾಡಿದರು. ಕ್ರಿ.ಶ. ೧೧೧೭ರಲ್ಲಿ ಚಾಳುಕ್ಯರ ಸಾಮಂತರಾಗಿದ್ದ ಉಚ್ಚಂಗಿಯ ಪಾಂಡ್ಯರನ್ನು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ದುಮ್ಮಿ ಎಂಬ ಸ್ಥಳದಲ್ಲಿ ಸೋಲಿಸಿದರು.[೨೨] ಉಚ್ಚಂಗಿದುರ್ಗವು ಹೊಯ್ಸಳರ ಕ್ಷೀಣಾವಸ್ಥೆಯ ನಂತರ ವಿಜಯನಗರ ಆಡಳಿತಕ್ಕೆ ಒಳಪಟ್ಟಿತ್ತು. ಆಗಲೆ ವಿಜಯನಗರಕ್ಕೆ ಸಹಾಯಕವಾದ ಕಾವ್ಯವೊಂದು ಬಾಗಳಿಯಲ್ಲಿ ಉದಯಿಸಿತು. ವಿಜಯನಗರದ ಪತನಾನಂತರ ಪಾಳೆಯಗಾರರ ದಾದನಾಯಕ ಸ್ವತಂತ್ರ ರಾಜನಾದ. ಕ್ರಮೇಣ ಹರಪನಹಳ್ಳಿಯಲ್ಲಿ ಕೋಟೆ ಕಟ್ಟಿಕೊಂಡು ರಾಜ್ಯ ವಿಸ್ತರಿಸಿದ. ಚಿತ್ರದುರ್ಗ ಅರಸರಿಗೆ ಯುದ್ಧದಲ್ಲಿ ಸಹಾಯ ಮಾಡಿದ್ದರಿಂದ ಉಚ್ಚಂಗಿದುರ್ಗವು ಹರಪನಹಳ್ಳಿ ಪಾಳೆಯಗಾರರಾದ ದಾದನಾಯಕನಿಗೆ ದೊರಕಿತು.[೨೩] ಉಚ್ಚಂಗಿದುರ್ಗ ಭದ್ರ ಹಾಗೂ ವ್ಯವಸ್ಥಿತ ಆಯಕಟ್ಟು ಪ್ರದೇಶವಾದ್ದರಿಂದ ತಮ್ಮ ರಾಜಧಾನಿಯನ್ನು ಹರಪನಹಳ್ಳಿಯಿಂದ ಉಚ್ಚಂಗಿದುರ್ಗಕ್ಕೆ ವರ್ಗಾಯಿಸಿ ದಾದನಾಯಕ ಇಲ್ಲಿ ಆಳ್ವಿಕೆ ಮಾಡಿದ. ಮುಂದೆ ರಂಗಣ್ಣ ನಾಯಕ, ಭರಮಣ್ಣ ನಾಯಕ, ಬಸವಂತ ನಾಯಕ, ಹರಿಬೊಮ್ಮಾಜಿ, ಮುಮ್ಮಡಿ ಬಸಪ್ಪ ನಾಯಕ, ಸೋಮಶೇಖರ ನಾಯಕ ಇವರು ಆಳ್ವಿಕೆ ಮಾಡಿದರು. ಇವರ ಕಾಲದಲ್ಲಿ ಉಚ್ಚಂಗಿದುರ್ಗದ ಕೋಟೆಯ ಜೀರ್ಣೋದ್ಧಾರ ಕಾರ್ಯವು ನಡೆಯಿತು. ನಂತರ ಉಚ್ಚಂಗಿದುರ್ಗ ಟಿಪ್ಪುಸುಲ್ತಾನ ಮತ್ತು ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು.

ಕೋಟೆಯ ನಿರ್ಮಾಣದ ಕಾಲ

ಪ್ರಾಚೀನ ಕಾಲದ ದೇವಾಲಯ ಮತ್ತು ಕೋಟೆಯ ಕಾಲವನ್ನು ನಿರ್ಣಯಿಸುವುದು ಕಠಿಣವಾದದು. ಆಧಾರಗಳ ಕೊರತೆಯೇ ಇದಕ್ಕೆ ಕಾರಣ. ಬನವಾಸಿ ಕದಂಬರ ಒಂದು ಶಾಖೆ ಉಚ್ಚಂಗಿಯಿಂದ ಆಳ್ವಿಕೆ ನಡೆಸಿತು.[೨೪] ಆದರೆ ಅವರ ಕಾಲದಲ್ಲಿ ಇಲ್ಲಿ ಕೋಟೆ ಇದ್ದಿರಬಹುದಾದರೂ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಕದಂಬರ ಆಳ್ವಿಕೆಯ ನಂತರ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಬಾದಾಮಿಯ ಚಾಳುಕ್ಯರು ಮತ್ತು ರಾಷ್ಟ್ರಕೂಟರ ಕಾಲದ ಯಾವುದೇ ಶಾಸನಗಳಾಗಲೀ ಅವಶೇಷಗಳಾಗಲೀ ಇಲ್ಲಿ ಕಂಡುಬರುವುದಿಲ್ಲ. ಮುಂದೆ ಕಲ್ಯಾಣ ಚಾಳುಕ್ಯರ ಕಾಲದ ಶಾಸನಗಳಲ್ಲಿ ಉಚ್ಚಂಗಿ ಕೋಟೆಯ ಕೆಲ ಉಲ್ಲೇಖಗಳಿವೆ.

ಶ್ರೀಮತ್ರಿಭುವನಮಲ್ಲ ಪಾಂಡ್ಯದೇವ ಪಾಧಾರದಕಂ ವೈರಿಬಳಸಾಧಕಂ ನಮಾದಿ ಸಮಸ್ತ ಪ್ರಶಸ್ತಿ ಸಂಹಿತಂ ಮನ್ಮಹಾ ಸಾಮನ್ತಯಂ ಒಳನಾಡಳ್ವರು ಶ್ರೀ ಪಾಂಡ್ಯ ದೇವರ್ಗೆ ಬಿನ್ನಪಮ ಗೈಯ್ಯಲು ಅನಾದಿ ಸಂಸಿದ್ಧಿಯ ಪಟ್ಟಣಂ ಉಚ್ಚಂಗಿ ಕೋಟೆಯ[೨೫] ಎಂದು ಒಂದು ಶಾಸನವು ಹೇಳಿದರೆ ಮತ್ತೊಂದು ಶಾಸನವು ಉಚ್ಚಂಗಿ ಕೋಟೆ ಉಲ್ಲೇಖವನ್ನು ಈ ರೀತಿ ವಿವರಿಸಿದೆ : ವೆಂಗೀಯ ಮಂಡಳೇಶ್ವರ ಶ್ರೀ ವಿಷ್ಣುವರ್ಧನ ಮಹಾರಾಜ ವಿಜಯಾದಿತ್ಯ ದೇವರು ನೊಳಂಬವಾಡಿ ೩೨೦೦೦ವನ್ನು ಆಳುವಾಗ ಮಾರೇಶ್ವರ ದೇವರ್ಗೆ ಉಚ್ಚಂಗಿ ಕೋಟೆಯ ನೈರುತ್ಯದ ದೆಸೆಯಂ.[೨೬]

ಚಾಳುಕ್ಯರ ಚೂಡಾಮಣಿಯೆಂದು ಕರೆಸಿಕೊಂಡ ರಾಜಾಧಿತ್ಯನು ಆಳುತ್ತಿದ್ದಾಗ ಗಂಗ ವಂಶದ ೨ನೇ ಮಾರಸಿಂಹನು ಕ್ರಿ.ಶ. ೯೭೧ರಲ್ಲಿ ಕೋಟೆಯನ್ನು ಮುತ್ತಿ ವಶಪಡಿಸಿಕೊಂಡನು.[೨೭] ಉಚ್ಚಂಗಿದುರ್ಗದ ಕೋಟೆಯು ಈ ಮೇಲಿನ ಆಧಾರಗಳ ಹಿನ್ನಲೆಯಲ್ಲಿ ಕ್ರಿ.ಶ. ೯೭೧ಕ್ಕಿಂತ ಮೊದಲೇ ನಿರ್ಮಾಣವಾಗಿರುವುದು ಕಂಡುಬರುತ್ತದೆ.

ಕೋಟೆಯ ಲಕ್ಷಣಗಳು

ಶತೃಗಳಿಂದ ರಕ್ಷಣೆಯನ್ನು ಪಡೆಯುವುದೇ ಕೋಟೆಗಳ ನಿರ್ಮಾಣದ ಮೂಲ ಉದ್ದೇಶ. ಶತೃಗಳ ಹಾವಳಿ, ಅವಶ್ಯಕತೆಗಳ ಹೆಚ್ಚಳ ಮತ್ತು ರಾಜ್ಯವು ವಿಸ್ತಾರವಾಗುತ್ತಾ ಹೋದಂತೆ ಕೋಟೆಯ ಸುತ್ತುಗಳು ಬೆಳೆದಿವೆ. ಆಡಳಿತದ ಪ್ರಮುಖ ಕೇಂದ್ರವಾಗಿದ್ದ ಉಚ್ಚಂಗಿ ಕೋಟೆಯು ಹಲವು ಬಾರಿ ದುರಸ್ತಿಯೊಂದಿಗೆ, ಹೊಸ ಸುತ್ತುಗಳನ್ನು ಹೊಂದಿದೆ. ಪಾಳೆಯಗಾರರ ಅವಧಿಯಲ್ಲಿ ದಾದಯ್ಯ ನಾಯಕನು ಉಚ್ಚಂಗಿದುರ್ಗದ ಕೋಟೆಯನ್ನು ಬಲಪಡಿಸಿಕೊಂಡು ಪ್ರಬಲನಾಗಿದ್ದನು.[೨೮] ಸ್ಥಳೀಯರು ಇದು ಏಳು ಸುತ್ತಿನ ಕೋಟೆ ಎಂದು ಅಭಿಪ್ರಾಯ ಪಟ್ಟರೆ ಡಾ.ಸಿ.ಎಸ್.ಪಾಟೀಲರ ರೀತ್ಯಾ ಇದು ಹಲವು ಸುತ್ತುಗಳನ್ನು ಒಳಗೊಂಡಿತ್ತು[೨೯] ಎಂದಿದ್ದಾರೆ. ಕದಂಬರಿಂದ

ಮೊದಲುಮಾಡಿ ವಿಜಯನಗರದ ಅರಸರವರೆಗೆ ಕೋಟೆಯನ್ನು ಭದ್ರಪಡಿಸಿಕೊಂಡಿರುವುದಕ್ಕೆ ಆಧಾರಗಳು ಲಭ್ಯವಾಗಿಲ್ಲ. ಉಚ್ಚಂಗಿ ಕೋಟೆಯು ವಿಸ್ತಾರವಾಗಿದ್ದು ಹಲವು ಸುತ್ತುಗಳನ್ನು ಒಳಗೊಂಡಿರಬಹುದಾದುದಕ್ಕೆ ಈ ಕೆಳಗಿನ ಅಂಶಗಳು ಗಮನಾರ್ಹ.

ಒಂದನೆಯದಾಗಿ ಜನಸಾಮಾನ್ಯರಿಗಾಗಿ ಕೋಟೆಯ ಪಕ್ಕದಲ್ಲಿ ಊರುಗಳು ನಿರ್ಮಾಣವಾಗುತ್ತಿದ್ದವು. ರಾಜಸಂತತಿ ಮತ್ತು ಪ್ರಮುಖ ವರ್ಗದವರು ಕೋಟೆಯೊಳಗಿರುತ್ತಿದ್ದರು. ಉಚ್ಚಂಗಿದುರ್ಗದ ಆಗ್ನೇಯ ಭಾಗಕ್ಕೆ ಊರಿದ್ದಿರಬಹುದು. ಅದರ ಅವಶೇಷಗಳು ಇಂದಿಗೂ ಇದ್ದು, ಪಕ್ಕದಲ್ಲಿ ಹರಕಲು ಗೋಡೆಗಳಿರುವುದರಿಂದ ಹೊರ ಕೋಟೆಯ ವಿಸ್ತಾರ ಈಗಿರುವುದಕ್ಕಿಂತಲೂ ದೊಡ್ಡದಾಗಿತ್ತು. ಕೋಟೆಯ ಒಳಗೆ ಪ್ರವೇಶಿಸಲು ಮೂರು ಬಾಗಿಲುಗಳನ್ನು ದಾಟಬೇಕಾಗಿದ್ದು ಕ್ಷೇತ್ರ ವೀಕ್ಷಣೆಯ ಅವಧಿಯಲ್ಲಿ ಗಮನಿಸಿದಂತೆ ಉಚ್ಚಂಗಿ ಕೋಟೆಯು ಸದ್ಯದಲ್ಲಿ ಹರಿದ, ಮುರುಕಲಾದ ಮೂರು ಸುತ್ತುಗಳನ್ನು ಒಳಗೊಂಡಿದ್ದು ಈ ಸುತ್ತುಗಳು ದಕ್ಷಿಣಭಾಗಕ್ಕೆ ವಿಸ್ತರಿಸಿವೆ.



ಕೋಟೆ

ದಕ್ಷಿಣೋತ್ತರವಾಗಿ ಹಬ್ಬಿರುವ ಎರಡು ಬೆಟ್ಟಗಳನ್ನು ಬಳಸಿ ಹೊರಕೋಟೆಯನ್ನು ಕಟ್ಟಿದ್ದು, ಇದೊಂದು ಗಿರಿದುರ್ಗವಾಗಿದೆ. ಇದನ್ನು ತಳಪಾಯದ ಆಧಾರವಿಲ್ಲದೆ ಹಾಸು ಬಂಡೆಯ ಮೇಲೆ ನಿರ್ಮಿಸಿದಂತಿದೆ. ಬೆಟ್ಟದ ತುದಿಯನ್ನು ತಲುಪಲು ಶತ್ರುಗಳಿಗೆ ಸಾಧ್ಯವಾಗದಂತೆ ಕೋಟೆ ಭದ್ರವಾಗಿದೆ. ಕೋಟೆಯ ಗೋಡೆಯು ೧೦ ಅಡಿ ಎತ್ತರವಾಗಿದ್ದು ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದರ ಅಗಲ ಸುಮಾರು ೫ ಅಡಿಗಳಾಗಿದ್ದು ಕೆಲವು ಸ್ಥಳಗಳಲ್ಲಿ ೧೦ ಅಡಿಯವರೆಗೂ ಇದೆ. ಕೋಟೆ ಗೋಡೆಯ ಕೆಳಭಾಗದಲ್ಲಿ ಆಯತಾಕಾರದ ಕಲ್ಲುಗಳನ್ನು ಬಳಸಿದ್ದು ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಕಲ್ಲುಗಳ ಬಳಕೆಯಾಗಿದೆ. ಸೂಕ್ಷ್ಮವಾಗಿ ಇದನ್ನು ಅವಲೋಕಿಸಿದರೆ ಮೂರು ವಿಧದ ಹಂತಗಳನ್ನು ಗುರುತಿಸಬಹುದು ಮತ್ತು ಮೇಲ್ಭಾಗದ ಗೋಡೆಯಲ್ಲಿ ಗಾರೆಯ ಉಪಯೋಗವಿದ್ದು ಬಂದೂಕನ್ನು ಬಳಸಲು ಕಿಂಡಿಗಳನ್ನು ಅಳವಡಿಸಲಾಗಿದೆ. ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ (ಬತೇರಿ)




ಕೊತ್ತಳಗಳಿದ್ದು, ಅವು ೧೨೦ಕ್ಕೂ ಹೆಚ್ಚಿವೆಯೆಂದು ಊರಿನವರು ಅಭಿಪ್ರಾಯಪಟ್ಟರೂ, ಪ್ರಸ್ತುತ ಸುಮಾರು ೩೦ ಕೊತ್ತಳಗಳು ಮಾತ್ರ ಗೋಚರಿಸುತ್ತವೆ. ಇವುಗಳನ್ನು ಶಸ್ತ್ರಗಳ ಸಹಿತ ಮೇಲೇರಲು ಅನುಕೂಲವಾಗದಂತೆ ಚೌಕಾಕಾರ ಮತ್ತು ವರ್ತುಲಾಕಾರದಲ್ಲಿ ನಿರ್ಮಿಸಲಾಗಿದೆ.



ಕೋಟೆಯ ಹೊರನೋಟ

ಶತೃಗಳ ಬರುವಿಕೆಯನ್ನು ಗ್ರಹಿಸುವುದು ಮತ್ತು ಕೋಟೆಯ ರಕ್ಷಣೆ ಮಾಡಿಕೊಳ್ಳುವುದು ಇವುಗಳ ನಿರ್ಮಾಣದ ಮೂಲ ಉದ್ದೇಶವಾಗಿದೆ. ಉಚ್ಚಂಗಿ ಕೋಟೆಗೆ ಆರು ಪ್ರಮುಖ ಬಾಗಿಲುಗಳಿದ್ದು, ದಿಡ್ಡಿ ಮತ್ತು ಉಪಬಾಗಿಲುಗಳೂ ಇವೆ. ಕೋಟೆಯ ಪೂರ್ವದಿಂದ ಒಳ ಪ್ರವೇಶಿಸಲು ಇರುವುದೇ ಮಳಿಬಾಗಿಲಾಗಿದ್ದು ದೂರದಿಂದ ಇದು ಗೋಚರಿಸುವುದಿಲ್ಲ. ಇದರ ಬಾಗಿಲವಾಡದಲ್ಲಿ ಲಿಂಗವನ್ನು ಕೆತ್ತಿದ್ದು, ಅದಕ್ಕೆ ಎರಡು ಆನೆಗಳು ನೀರನ್ನು ಸುರಿಯುವ ದೃಶ್ಯವಿದೆ. ಇದರ ಪಾರ್ಶ್ವಗಳಲ್ಲಿ ಬೃಹದಾಕಾರದ ಗೋಡೆಗಳಿದ್ದು ಇದಕ್ಕೆ ೨೦ ಮೀಟರ್ ಅಂತರದಲ್ಲಿ ಎರಡನೇ ಬಾಗಿಲಿದೆ. ಇದು ಉತ್ತರಾಭಿಮುಖವಾಗಿರುವುದಲ್ಲದೆ ಇದರ ಮೇಲ್ಭಾಗದಲ್ಲಿ ಗಣೇಶನ ಶಿಲ್ಪವನ್ನು ಕೆತ್ತಲಾಗಿದ್ದು, ಪಾರ್ಶ್ವಗೋಡೆಯಲ್ಲಿ ದೊಡ್ಡಗಾತ್ರದ ತೆನೆಗಳನ್ನು ಕಾಣಬಹುದಾಗಿದೆ.



ಕೋಟೆಯ ಎರಡನೇ ಬಾಗಿಲು





ಮೂರನೇ ಬಾಗಿಲು, ಎರಡು ಚೌಕಾಕಾರದ ಕೊತ್ತಳಗಳ ಮಧ್ಯದಲ್ಲಿದ್ದು ಕಂಬಗಳ ಕಟ್ಟೆಯ ಮೇಲಿರುವುದು ಕಾಣುವುದು. ಇದರ ಎಡಬಲಕ್ಕೆ ಒಳಗೋಡೆಯಲ್ಲಿ ೧೨ನೇ ಶತಮಾನಕ್ಕೂ ಮೊದಲೇ ನಿರ್ಮಾಣಗೊಂಡಿರಬಹುದಾದ ಕಂಬಗಳ, ಶಿಲ್ಪಗಳ ಅವಶೇಷಗಳನ್ನು ಕಾಣಬಹುದಾಗಿದೆ. ನಾಲ್ಕನೆಯದು ಹರಿಹರದ ದಿಕ್ಕಿಗೆ ಮುಖವಾಗಿರುವುದರಿಂದ ಹರಿಹರದ ಬಾಗಿಲೆಂದು ಕರೆಯಲ್ಪಟ್ಟಿದ್ದು, ಇದು ವೈರಿಗಳಿಗೆ ಗೋಚರಿಸದಂತಿರಲು ಇಂಗ್ಲೀಷಿನ 'L' ಅಕ್ಷರದಾಕಾರದಲ್ಲಿ ಗೋಡೆಯನ್ನು ಕಟ್ಟಲಾಗಿದೆ. ಪಶ್ಚಿಮ ಭಾಗದಿಂದ ಉಚ್ಚಂಗಿ ಕೋಟೆಯನ್ನು ಪ್ರವೇಶಿಸಲು ಈ ಬಾಗಿಲನ್ನು ಬಿಟ್ಟರೆ ಬೇರೆ ಯಾವ ಮಾರ್ಗವೂ ಇಲ್ಲ. ಐದನೆಯದು ತುಂಬಾ ಇಕ್ಕಟ್ಟಾದ ಬಾಗಿಲಾಗಿದ್ದು ೮ ಅಡಿ ಎತ್ತರವಾಗಿದೆ. ಈ ಬಾಗಿಲಿಗೆ ಇಂದಿಗೂ ಬಾಳೆಹಣ್ಣನ್ನು ತಿಕ್ಕುವ ಪದ್ಧತಿ ರೂಢಿಯಲ್ಲಿದೆ ಮತ್ತು ಉಚ್ಚಂಗೆಮ್ಮ ದೇವಿಯ ದರ್ಶನಕ್ಕೆ ಈ ಮಾರ್ಗವನ್ನು ಬಳಸಲೇಬೇಕು. ಆರನೆಯದು ಮುಖ್ಯವಾದುದು: ಈ ಬಾಗಿಲು ಎರಡು ಚೌಕಾಕಾರದ ಕೊತ್ತಳಗಳ ಮಧ್ಯದಲ್ಲಿದ್ದು ಬಾಗಿಲಿನ ಮೇಲೆ ಗಣೇಶನನ್ನು ಕೆತ್ತಲಾಗಿದೆ. ಇದು ಆರು ಅಂಕಣಗಳನ್ನು ಮತ್ತು ಪಾರ್ಶ್ವಗಳಲ್ಲಿ ಕಟ್ಟೆಗಳನ್ನು ಹೊಂದಿದೆ. ಬಾಗಿಲಿನ ಒಳ ಮೈಯನ್ನು ಕಮಾನಿನಿಂದ ಅಲಂಕರಿಸಲಾಗಿದ್ದು, ಕಮಾನಿನ ಕಲ್ಲುಗಳನ್ನು ಮುಂದೆ ಚಾಚಿ ಸ್ವಲ್ಪಭಾಗ ತುಂಡರಿಸಿದಂತಿದೆ.

ಮೂರನೇ ಬಾಗಿಲಿನ ದಕ್ಷಿಣದ ಗೋಡೆಯ ಪೂರ್ವಭಾಗಕ್ಕೆ ದಿಡ್ಡಿಯ ಬಾಗಿಲಿದ್ದು, ಇದು ಸುಮಾರು ೫ ಅಡಿ ಎತ್ತರ ೪ ಅಡಿ ಅಗಲವಾಗಿದ್ದು ಬೇರೆ ಬಾಗಿಲುಗಳಿಗಿಂತ ಭಿನ್ನವಾಗಿದೆ. ಇಲ್ಲಿಂದ ಕೋಟೆಯ ದಕ್ಷಿಣಭಾಗಕ್ಕೆ ಹೋಗಲು ಇದು ಹತ್ತಿರದ ಮಾರ್ಗವಾಗಿದೆ. ಇದು ಗುಪ್ತದ್ವಾರವೆಂತಲೂ ಸ್ಥಳೀಯರಿಂದ ಗುರುತಿಸಲ್ಪಟ್ಟಿದೆ.

ಎರಡನೆಯ ಬಾಗಿಲಿನ ಬಲಕ್ಕಿರುವುದೇ ಅದರ ಉಪಬಾಗಿಲು. ಇದನ್ನು ದೊಡ್ಡಬಾಗಿಲು ಮುಚ್ಚಿದಾಗ ಉಪಯೋಗಿಸುತ್ತಿದ್ದರು. ಉಚ್ಚಂಗಿ ಕೋಟೆಯ ದಕ್ಷಿಣಭಾಗದ ಹಿರೇಹೊಂಡದಿಂದ ಮಾರ್ಗವೊಂದು ಅದೇ ದಿಕ್ಕಿನಿಂದ ಕೋಟೆಯ ಒಳ ಪ್ರವೇಶಿಸುತ್ತದೆ ಮತ್ತು ಮಾರ್ಗದ ಉದ್ದಕ್ಕೂ ಹಾಕಿರುವ ಕಲ್ಲುಗಳು ತುಂಬಾ ಸವೆದಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಈ ಕೋಟೆಗೆ ನೀರಿನ ಸರಬರಾಜು ಇಲ್ಲಿಂದ ಆಗಿರಬಹುದು. ಈ ಭಾಗದಲ್ಲಿ ಪ್ರಾಚೀನ ದೇವಾಲಯವಿದ್ದಿರಬಹುದಾದ ಕುರುಹುಗಳನ್ನು ಕಾಣಬಹುದು.

ಕೋಟೆಯ ಮಹತ್ವ

ಒಂದು ರಾಜ್ಯದ ಅಳಿವು ಉಳಿವಿಗೆ ರಾಜನ ಪಾತ್ರ ಎಷ್ಟು ಮುಖ್ಯವೋ ಕೋಟೆಗಳ ಪಾತ್ರವು ಅಷ್ಟೇ ಮುಖ್ಯವಾದುದು. ಕೋಟೆ ನೀರನ್ನು ಸಂಗ್ರಹಿಸುವ ಕೊಡ ಇದ್ದ ಹಾಗೆ. ಕೊಡಕ್ಕೆ ತೂತುಬಿದ್ದರೆ ನೀರು ಉಳಿಯಲಾರದು. ಹಾಗೆಯೇ ಕೋಟೆಯು ಸಡಿಲವಾದರೆ ರಾಜ್ಯ ಉಳಿಯಲಾರದು. ಕೋಟೆಯನ್ನು ಗೆದ್ದುದಾದರೆ ಇಡೀ ರಾಜ್ಯವೇ ಸಿಕ್ಕಂತೆ. ಅಂದು ಕೋಟೆಯನ್ನು ಕಟ್ಟಿಸುವುದು ಮತ್ತು ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿತ್ತು.

ಉಚ್ಚಂಗಿ ಕೋಟೆಯು ಮಹತ್ವದ ಮತ್ತು ಅಭೇದ್ಯವಾದ ಕೋಟೆಯಾಗಿದ್ದು, ಕಾಡುವೆಟ್ಟಿ ಎಂಬ ಪಲ್ಲವ ದೊರೆಯು ಇದನ್ನು ದೀರ್ಘಕಾಲದವರೆಗೆ ಮುತ್ತಿ ತನ್ನ ಶೌರ್ಯದಿಂದ ಸ್ಥಳೀಯರನ್ನು ದಂಗುಬಡಿಸಿದರೂ ಅವನಿಂದ ಕೋಟೆಯನ್ನು ಗೆಲ್ಲಲಾಗಲಿಲ್ಲ.[೨೯] ಗಂಗವಂಶದ ಎರಡನೇ ಮಾರಸಿಂಹನು ಕ್ರಿ.ಶ. ೯೭೧ರಲ್ಲಿ ಚಾಳುಕ್ಯರಿಂದ ಇದನ್ನು ವಶಪಡಿಸಿಕೊಂಡನಲ್ಲದೆ ಈ ಕೋಟೆಯನ್ನು ಜಯಿಸುವುದರಲ್ಲಿ ಚಾವುಂಡರಾಯನ ಪಾತ್ರ ಮಹತ್ವದ್ದಾಗಿದ್ದುದರಿಂದ ಅವನಿಗೆ ರಣರಂಗ 'ಸಿಂಹ' ಎಂಬ ಬಿರುದು ಬಂದಿದೆ.[೩೦] ಹೊಯ್ಸಳಬಲ್ಲಾಳರ ಉಚ್ಚಂಗಿಯ ಅಭೇದ್ಯವಾದ ಕೋಟೆಯನ್ನು ಭೇದಿಸಲು ತಂಡೋಪತಂಡ ಆನೆಗಳನ್ನು ಉಪಯೋಗಿಸಿದನು. ಇವು ಕ್ರೂರವಾಗಿ ಕೋರೆಗಳಿಂದ ಅಗೆದು ಕೋಟೆಯ ಗೋಡೆಗಳನ್ನು ಕೆಡಹಿದ ನಂತರ ಸೈನ್ಯವು ಒಳಹೊಕ್ಕು ಸ್ತ್ರೀಯರು, ಕುದುರೆ ಸವಾರ, ಸೈನ್ಯವನ್ನು ಮತ್ತು ಖಜಾನೆಯನ್ನು ಸುಲಿಗೆ ಮಾಡಲಾಯಿತು.

ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳನ್ನೆತ್ತಿ ಸದ್ಯ ಚರ್ಚಿಸಲಾಗಿದೆ.

೧. ಉಚ್ಚಂಗಿ ದುರ್ಗವನ್ನು ಗೆಲ್ಲಲು ಕಷ್ಟಕರವಾಗಿರಬಹುದೇಕೆ?

೨. ಇದನ್ನು ಗೆಲ್ಲುವುದರ ಮಹತ್ವವೇನು?

೩. ಗೆದ್ದವರ ಪ್ರತಿಷ್ಠೆ ಏಕೆ ಹೆಚ್ಚುತ್ತಿತ್ತು?

ಒಂದನೇ ಪ್ರಶ್ನೆಗೆ ಪೂರಕವಾದಂತೆ ಉಚ್ಚಂಗಿದುರ್ಗವು ಭೌಗೋಳಿಕವಾಗಿ ಇದರ ಸುತ್ತಮುತ್ತಲಿನ ಪ್ರದೇಶಗಳಿಗಿಂತಲೂ ಎತ್ತರವಾಗಿದ್ದು, ಸುತ್ತಲೂ ಆಳವಾದ ಕಂದಕಗಳು ಮತ್ತು ಕಡಿದಾದ ಬೆಟ್ಟವನ್ನು ಹೊಂದಿದ್ದು ಕೋಟೆಯೊಳಗೆ ಪ್ರವೇಶಿಸಲು ಸುಲಭವಾಗಿರಲಿಲ್ಲ. ಎರಡನೆಯದಾಗಿ ಈ ಕೋಟೆಯು ೨೫ ಕಿ.ಮೀ. ಉದ್ದವಾಗಿದ್ದು ಉತ್ತರದಿಂದ ದಕ್ಷಿಣಭಾಗದ ಮಧ್ಯಭಾಗಕ್ಕೆ ಇಳಿಮುಖವಾಗಿದ್ದು ಮತ್ತೆ ಇದೇ ಇಳಿಮುಖವನ್ನು ಪುನಃ ದಕ್ಷಿಣಭಾಗಕ್ಕೆ ಕಾಣಲಾಗುವುದು. ತುಂಬಾ ಅಗಲ ಮತ್ತು ಎತ್ತರವಾದ ಗೋಡೆಗಳ ರಚನೆಯಿದ್ದು ಗಾರೆಯನ್ನು ಬಳಸಿ ಭದ್ರಪಡಿಸಲಾಗಿದೆ. ಕೋಟೆಯ ಬಾಗಿಲುಗಳನ್ನು ಪತ್ತೆಹಚ್ಚಿ ಮೊದಲ ಐದು ಬಾಗಿಲುಗಳನ್ನು ದಾಟಿ ಒಳಬರುವುದು ಕಠಿಣತರ ಕೆಲಸವೇ ಸರಿ. ಬೆಟ್ಟದ ಮೇಲಿನ ಕೋಟೆಗೆ ಆನೆಗಳಾಗಲೀ ಕುದುರೆ ಮತ್ತು ಶಸ್ತ್ರಗಳನ್ನು ತೆಗೆದುಕೊಂಡು ಹೋಗಲು ಸಶಕ್ತವಾದ ಸೈನ್ಯವಿರಲೇಬೇಕಾಗುವುದು. ಮೂರನೆಯದಾಗಿ ಕೋಟೆಯ ಒಳಗಡೆ ನೀರಿನ ಸೌಲಭ್ಯವಿದ್ದುದರ ಗುರುತುಗಳು ಕಂಡುಬರುತ್ತವೆ ಮತ್ತು ಪೂರ್ವದ ಬಾಗಿಲು ಆಕ್ರಮಿಸಲ್ಪಟ್ಟರೂ ಪಶ್ಚಿಮದ ಹರಿಹರದ ಬಾಗಿಲಿನಿಂದ ಹೊರಬರುವ ಸೌಲಭ್ಯವಿರುವುದು ಕಾಣಬಹುದಾಗಿದೆ. ಎರಡನೆಯ ಪ್ರಶ್ನೆಯನ್ನು ಗಮನಿಸಿದರೆ ಉಚ್ಚಂಗಿದುರ್ಗ ಒಂದು ಪಟ್ಟಣವಾಗಿದ್ದು ವಿಶಾಲ ಪ್ರದೇಶಗಳನ್ನು ಒಳಗೊಂಡಿತ್ತು. ನೊಳಂಬವಾಡಿ ೩೨೦೦೦ವನ್ನು ವೆಂಗಿಮಂಡಳೇಶ್ವರ ವಿಷ್ಣುವರ್ಧನ ವಿಜಯಾದಿತ್ಯ ದೇವನು ಆಳುವಾಗ ಉಚ್ಚಂಗಿದುರ್ಗ ಪ್ರಮುಖ ಕೇಂದ್ರವಾಗಿದ್ದಿರಬೇಕು; ಆಗ ಉಚ್ಚಂಗಿ ಮೂವತ್ತನ್ನು ದೇವಪ್ಪಯ್ಯ ಆಳುತ್ತಿದ್ದ.

ಮೂವತ್ತು ಗ್ರಾಮಗಳಿಗೆ ಉಚ್ಚಂಗಿ ಕೇಂದ್ರವಾಗಿರಬಹುದು ಮತ್ತು ಅದು ನೊಳಂಬವಾಡಿ ೩೨೦೦೦ಕ್ಕೆ ಪಾಂಡ್ಯರ ಕಾಲದಲ್ಲಿ ರಾಜಧಾನಿಯಾಗಿತ್ತು. ಮತ್ತು ದಕ್ಷಿಣದಿಂದ ಗಂಗಾ ಹೊಯ್ಸಳರಿಗೆ ಉತ್ತರದಿಂದ ರಾಷ್ಟ್ರಕೂಟ ಚಾಳುಕ್ಯರಿಗೆ ಗಡಿಭಾಗವಾಗಿರಲಿಕ್ಕೂ ಸಾಧ್ಯತೆಯಿರುವುದರಿಂದ ಉಚ್ಚಂಗಿ ಕೋಟೆಯನ್ನು ಗೆಲ್ಲುವುದು ಒಂದು ಪ್ರತಿಷ್ಠೆಯ ವಿಷಯವಾಗಿದ್ದುದಲ್ಲದೆ ಮಹತ್ವದ ಭಾಗವೂ ಆಗಿತ್ತು ಎಂದೆಲ್ಲ ಹೇಳಬಹುದು. ಪಾಳೆಯಗಾರರ ಅವಧಿಯಲ್ಲಿ ಈ ಕೋಟೆಯ ಪ್ರಮುಖವಾದ ದುರಸ್ತಿಕಾರ್ಯ ನಡೆದಿರುವುದು ಕಂಡುಬರುತ್ತದೆ.

ಕೋಟೆಯಲ್ಲಿರುವ ಸ್ಮಾರಕಗಳು

ಈ ಕೋಟೆ ಪ್ರದೇಶದಲ್ಲಿ ಆ ಕಾಲದ ಹತ್ತಾರು ಗುಡಿಗೋಪುರಗಳು, ಬಾವಿಹೊಂಡಗಳು, ಕಲಾಸ್ಮಾರಕಗಳು ಕಂಡುಬರುತ್ತವೆ. ಅವುಗಳ ಕುರಿತಾಗಿ ಇಲ್ಲಿ ಚರ್ಚಿಸಲಾಗಿದೆ.

ಬನಶಂಕರಿ ದೇವಾಲಯ : ಬಾದಾಮಿ ಚಾಳುಕ್ಯರ ಆರಾಧನಾ ದೇವತೆ ಈಕೆ. ಬಾದಾಮಿ ಚಾಳುಕ್ಯರ ಕಾಲಾವಧಿಯಿಂದ ವಿಜಯನಗರದ ಅರಸರಾದಿಯಾಗಿ ಬನಶಂಕರಿಯ ನೂರಾರು ದೇವಾಲಯಗಳನ್ನು ನಿರ್ಮಿಸಿದ ನಿದರ್ಶನಗಳಿವೆ. ಕಾಡಿನ ಮಧ್ಯ ವಾಸಿಸುವ ಬುಡಕಟ್ಟು ಜನರ ಪ್ರಮುಖ ದೇವತೆಗಳಲ್ಲಿ ಈ ದೇವತೆಯು ಒಬ್ಬಳು. ಉಚ್ಚಂಗಿ ದುರ್ಗದ ಆಗ್ನೇಯಕ್ಕೆ ಅರಸನ ಬಾವಿ ಇದೆ. ಇದರ ಬಳಿ ಇರುವುದೇ ಬನಶಂಕರಿ ದೇವಾಲಯ. ಇದರಲ್ಲಿ ಗರ್ಭಗೃಹ, ಅಂತರಾಳ ಹಾಗೂ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಚೇಳು, ರುಂಡಮಾಲೆ ಮತ್ತು ಪತ್ರಕುಂಡಲಗಳಿಂದ ಕೂಡಿದ ಪೀಠದ ಮೇಲೆ ಬಿಲ್ಲು, ಬಾಣ, ತ್ರಿಶೂಲ, ಖಡ್ಗ ಮತ್ತು ಢಮರುಗಳನ್ನು ಹಿಡಿದಿರುವ ಬನಶಂಕರಿಯ ವಿಗ್ರಹವಿದೆ. ಜಟಾ ಮುಕುಟಧಾರಿಯಾದ ಈ ಶಿಲ್ಪವು ಶಿಥಿಲವಾಗಿದೆ.

ಗರ್ಭಗೃಹ ಮತ್ತು ಅಂತರಾಳದ ಪ್ರವೇಶ ದ್ವಾರಗಳು ಸಾದಾ ಕೆತ್ತನೆಯಿಂದ ಕೂಡಿವೆ. ಸಭಾಮಂಟಪದ ಮಧ್ಯಭಾಗದಲ್ಲಿ ೬ x ೬ ಅಳತೆಯ ಹಾಸುಬಂಡೆಯಿದೆ. ಇದರಲ್ಲಿ ೧೪ ಕಂಬಗಳಿವೆ. ಇವುಗಳು ವೃತ್ತಾಕಾರದ ೮ ಮೂಲೆಯ ಪಟ್ಟಿಕೆಯಿಂದ ಕೂಡಿದ್ದು ಕೆಳಭಾಗಗಳಲ್ಲಿ ಕುಂಭ ಮೇಲ್ಭಾಗದಲ್ಲಿ ಮುಚ್ಚಳ, ಫಲಕ ಮತ್ತು ಬೋದಿಗೆಗಳಿವೆ. ಸಭಾಮಂಟಪವು ಜೀರ್ಣೋದ್ಧಾರವಾಗಿದ್ದು ಇದರ ಗೋಡೆಯಲ್ಲಿ ವೀರಗಲ್ಲನ್ನು ಸೇರಿಸಿ ನಿರ್ಮಿಸಲಾಗಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯವು ಸುಮಾರು ೩೦ ಅಡಿ ಉದ್ದ ೧೫ ಅಡಿ ಅಗಲವಾಗಿದೆ. ಇದನ್ನು ಕಪ್ಪುಮಿಶ್ರಿತ ನೀಲಿಛಾಯೆಯ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇಲ್ಲಿರುವ ಶಿಲ್ಪಗಳು, ವೀರಗಲ್ಲು ಹಾಗೂ ದೇವಾಲಯದ ರಚನೆಯು ಕಲ್ಯಾಣ ಚಾಳುಕ್ಯರ ಶೈಲಿಯನ್ನು ಹೋಲುತ್ತದೆ.

ತವಕ್ಲೇಶ್ವರ ದೇವಾಲಯ : ಗ್ರಾಮದ ಆಗ್ನೇಯದ ಕೋಟೆಯ ಹೊರಭಾಗಕ್ಕೆ ಈ ದೇಗುಲವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ಸಭಾಮಂಟಪಗಳಿಂದ ಕೂಡಿದೆ. ಐವತ್ತು ಅಡಿ ಉದ್ದ ಮೂವತ್ತು ಅಡಿ ಅಗಲವಾಗಿರುವ ಇದು ವಿಶಾಲವಾಗಿದೆ. ಗರ್ಭಗೃಹದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಶಿವಲಿಂಗವು ಬ್ರಹ್ಮಸೂತ್ರವನ್ನು ಹೊಂದಿರುವುದಿಲ್ಲ. ಇದರ ಪ್ರವೇಶದ್ವಾರದ ಲಲಾಟಬಿಂಬ ಹಾಗೂ ಅಂತರಾಳದ ಪ್ರವೇಶದ್ವಾರದ ಲಲಾಟಬಿಂಬಗಳಲ್ಲಿ ಗಜಲಕ್ಷ್ಮಿ ಶಿಲ್ಪಗಳಿವೆ. ಇವುಗಳ ಭುವನೇಶ್ವರಿಯಲ್ಲಿ ಪದ್ಮಾಲಂಕೃತ ಕೆತ್ತನೆಗಳಿವೆ. ಅಂತರಾಳ ಪ್ರವೇಶದ ಪಾರ್ಶ್ವಗಳಲ್ಲಿ ಸುಮಾರು ಆರು ಅಡಿ ಎತ್ತರದ ಶೈವದ್ವಾರಪಾಲಕರ ಶಿಲ್ಪಗಳಿವೆ. ಸಭಾಮಂಟಪದ ಮಧ್ಯಭಾಗದ ನೆಲಕ್ಕೆ ೧೦ x ೧೦ ಚದುರಡಿಯ ಒಂದೇ ಕಲ್ಲಿನ ಚಪ್ಪಡಿಯನ್ನು ಹಾಸಲಾಗಿದೆ. ಇದರಲ್ಲಿ ಕಲ್ಯಾಣ ಚಾಲುಕ್ಯ ಮಾದರಿಯ ೨೦ ಕಂಬಗಳಿದ್ದು, ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೂ ಪ್ರವೇಶದ್ವಾರಗಳಿವೆ.

ಈ ದೇವಾಲಯವನ್ನು ಕಪ್ಪುಶಿಲೆಯಲ್ಲಿ ನಿರ್ಮಿಸಿದ್ದು, ಶಾಸನಗಳು ಈ ದೇವಾಲಯವನ್ನು ಗಳಗೇಶ್ವರ ದೇವರೆಂದು ಉಲ್ಲೇಖಿಸುತ್ತವೆ.

ಹಾಲಮ್ಮನ ದೇವಾಲಯ : ಗ್ರಾಮದ ಆಗ್ನೇಯದ ಕೋಟೆ ಹೊರಮುಖಕ್ಕೆ ಈ ದೇವಾಲಯವಿದೆ. ನಾಗರಪಂಚಮಿಯಲ್ಲಿ ಇಲ್ಲಿಯ ಹುತ್ತಕ್ಕೆ ಹಾಲು ಹಾಕುವುದರಿಂದ ಇದಕ್ಕೆ ಹಾಲಮ್ಮನಗುಡಿ ಎಂದು ಹೆಸರು ಬಂದಿದೆ. ಇದು ೧೦ x ೧೦ ಅಡಿ ಸುತ್ತಳತೆ ಹೊಂದಿದ್ದು, ಗರ್ಭಗೃಹ ಮಾತ್ರ ಕಂಡುಬರುತ್ತದೆ. ಗರ್ಭಗೃಹದಲ್ಲಿ ಆಯತಾಕಾರದ ಆರು ಅಡಿ ಎತ್ತರದ ನಾಲ್ಕು ಕಂಬಗಳು, ಬ್ರಾಹ್ಮಣ ಕನ್ಯೆಯರ ಮೂರು ವಿಗ್ರಹಗಳು ಸಪ್ತಮಾತೃಕಾ ವಿಗ್ರಹ ಹಾಗೂ ಕುದುರೆಯ ಮೇಲೆ ಆಸೀನರಾದ ಜೋಡಿ ಪುರಕ್ಷರ ವೀರಗಲ್ಲು ಇದೆ. ಈ ವೀರಗಲ್ಲನ್ನು ಮೈಲಾರ ದೇವರೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಈ ದೇವಾಲಯವನ್ನು ಕಪ್ಪುಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲು ಬಳಸಿ ೧೨ನೆಯ ಶತಮಾನದಲ್ಲಿ ಉಚ್ಚಂಗಿ ದೇವಿಯ ಹೆಸರಿನಲ್ಲಿ ಕಟ್ಟಲಾಗಿದೆ.

ಬಸವಣ್ಣ ದೇವಾಲಯ : ಕೋಟೆ ಆಂಜನೇಯನ ಬಲಭಾಗದಲ್ಲಿ ಈ ದೇಗುಲವಿದೆ. ದಕ್ಷಿಣಾಭಿಮುಖ ವಾಗಿರುವ ಇದರಲ್ಲಿ ಗರ್ಭಗೃಹ ಮಾತ್ರ ಗೋಚರಿಸುತ್ತದೆ. ಗರ್ಭಗೃಹದ ಮಧ್ಯಭಾಗದಲ್ಲಿ ಖಾಲಿ ಪೀಠವಿದ್ದು, ಇದರ ಪಕ್ಕದಲ್ಲಿ ನಂದಿಯ ಶಿಲ್ಪವಿದೆ. ಪ್ರವೇಶದ್ವಾರವು ಮೂರು ಶಾಖೆಗಳಿಂದ ಕೂಡಿದೆ. ಶಾಖೆಗಳು ಶಿಲಾಬಾಲಿಕೆಯರು ಮತ್ತು ಸುಂದರ ಕೆತ್ತನೆಗಳಿಂದ ಕೂಡಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳ ಹಾಗೂ ಸಭಾಮಂಟಪಗಳಿದ್ದಿರಬಹುದಾದ ಕುರುಹುಗಳು ಮಾತ್ರ ಗೋಚರಿಸುತ್ತವೆ. ಈ ದೇವಾಲಯದ ಲಕ್ಷಣಗಳಿಂದ ಹೊಯ್ಸಳರ ಕಾಲದ್ದೆಂದು ದೃಢಪಡುತ್ತದೆ.

ಕೆಳಕೋಟೆ ಆಂಜನೇಯ ದೇವಾಲಯ : ಗ್ರಾಮದ ಪೂರ್ವದ ಹೊಲವೊಂದರಲ್ಲಿರುವ ಈ ದೇವಾಲಯವು ದಕ್ಷಿಣಕ್ಕೆ ಮುಖವಾಗಿದೆ. ಕೋಟೆಯ ಕೆಳಭಾಗದಲ್ಲಿರುವುದರಿಂದ ಕೆಳಕೋಟೆ ಆಂಜನೇಯನೆಂಬ ಹೆಸರು ಈ ದೇವಾಲಯಕ್ಕೆ ಬಂದಿದೆ. ಇದರಲ್ಲಿ ಗರ್ಭಗೃಹ ಹಾಗೂ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಸುಮಾರು ಆರು ಅಡಿ ಎತ್ತರದ ಆಂಜನೇಯನ ಶಿಲ್ಪವಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ಆರು ಕಂಬಗಳಿವೆ. ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದ್ದು, ಇದರ ಸುತ್ತಲೂ ಪ್ರಾಕಾರ ಹಾಗೂ ಗರುಡಗಂಬವಿದೆ. ಉಚ್ಚಂಗಿದುರ್ಗದ ಪಾಳೆಯಗಾರರ ಅವಧಿಯಲ್ಲಿ ಇದು ನಿರ್ಮಾಣವಾಗಿದ್ದಿರಬೇಕು.

ವೀರಭದ್ರ ದೇವಾಲಯ : ಗ್ರಾಮದಿಂದ ದಾವಣಗೇರಿಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಕೋಟೆ ಗೋಡೆಗೆ ಹೊಂದಿಕೊಂಡು ಈ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಇದು ಗರ್ಭಗೃಹ ಹಾಗೂ ಸಭಾಮಂಟಪಗಳಿಂದ ಕೂಡಿದೆ. ಸುಮಾರು ಮುವತ್ತು ಅಡಿ ಉದ್ದ ಮತ್ತು ಹತ್ತು ಅಡಿ ಅಗಲವಾಗಿದ್ದು, ಎತ್ತರದ ಸ್ಥಳದಲ್ಲಿದೆ. ಗರ್ಭಗೃಹದಲ್ಲಿ ಬಿಲ್ಲು, ಬಾಣ, ಖಡ್ಗ, ಹಾಗೂ ಗುರಾಣಿಗಳನ್ನು ಹಿಡಿದಿರುವ ವೀರಭದ್ರನು ತ್ರಿಭಂಗಿಯಲ್ಲಿದ್ದಾನೆ. ವೀರಭದ್ರನ ಪಾರ್ಶ್ವದಲ್ಲಿ ಗಣೇಶನ ಶಿಲ್ಪವಿದೆ. ವೀರಭದ್ರನ ಶಿಲ್ಪವನ್ನು ಹೊಯ್ಸಳರ ಕಾಲದ ಶಾಸನವನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ತಿಪ್ಪನಕೆರೆ ಮತ್ತು ಈಶ್ವರ ದೇವಾಲಯಗಳ ಉಲ್ಲೇಖಗಳು ಈ ಶಾಸನದಲ್ಲಿ ಬರುತ್ತವೆ. ಸಭಾಮಂಟಪವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ದೇವಾಲಯದ ಸುತ್ತಲೂ ಪ್ರಾಕಾರವಿದೆ. ಇದರಲ್ಲಿ ಸಪ್ತಮಾತೃಕಾ ಹಾಗೂ ಕಲ್ಲುಗಳಿವೆ.

ಈ ದೇವಾಲಯವು ವಿಜಯನಗರೋತ್ತರ ಕಾಲದ್ದು. ಇದರ ನಿರ್ಮಾಣಕ್ಕೆ ಕಣಶಿಲೆಯನ್ನು ಬಳಸಲಾಗಿದೆ.

ನೊಣಬೇಶ್ವರ ದೇವಾಲಯ : ಗ್ರಾಮದ ದಕ್ಷಿಣ ಭಾಗಕ್ಕೆ ಚಿಕ್ಕಹೊಂಡದ ಪೂರ್ವದಂಡೆಯ ಮೇಲಿರುವ ಕೋಟೆಗೆ ಹೊಂದಿಕೊಂಡಿರುವ ದೇಗುಲವಿದು. ಇದು ಪಶ್ಚಿಮಾಭಿಮುಖವಾಗಿದೆ. ಇದರಲ್ಲಿ ಗರ್ಭಗೃಹ ಹಾಗೂ ಅಂತರಾಳಗಳು ಮಾತ್ರ ಗೋಚರಿಸುತ್ತಿದ್ದು, ಸಭಾಮಂಟಪದ ಅವಶೇಷಗಳು ಕಂಡುಬರುತ್ತವೆ. ಗರ್ಭಗೃಹದಲ್ಲಿ ಉದ್ಭವ ಶಿವಲಿಂಗವಿದೆ. ಗರ್ಭಗೃಹ ಹಾಗೂ ಅಂತರಾಳಗಳ ಭುವನೇಶ್ವರಿಯಲ್ಲಿ ಪದ್ಮಗಳಿವೆ. ಲಲಾಟಬಿಂಬಗಳಲ್ಲಿ ಗಜಲಕ್ಷ್ಮಿ ಶಿಲ್ಪಗಳಿವೆ. ನಕ್ಷತ್ರಾಕಾರದ ಅಧಿಷ್ಠಾನದ ಮೇಲಿರುವ ದೇವಾಲಯದ ಹೊರಗೋಡೆಯಲ್ಲಿ ಹೊಯ್ಸಳ ಶೈಲಿಯ ದೇವಕೋಷ್ಠಕಗಳಿವೆ. ಕ್ರಿ.ಶ. ೧೨೮೫ರ ಕಾಲ ಸೂಚಿಸುವ ಶಾಸನ ಹಾಗೂ ತುಂಡಾದ ಶಿಲಾಬಾಲಿಕೆ ಹಾಗೂ ವೀರಗಲ್ಲುಗಳಿವೆ. ಶಾಸನ ಅಸ್ಪಷ್ಟವಾಗಿದೆ. ೧೩ನೇ ಶತಮಾನದಲ್ಲಿ ನೊಣಬೇಶ್ವರ, ನೊಣಬೇಶ್ವರ ದೇವ, ಸೊಯ್ಯೇಶ್ವರ ದೇವ, ನೊಳಂಬೇಶ್ವರ, ನೊಳಂಬೇಶ್ವರ ದೇವರ ಹೆಸರಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಈ ದೇವಾಲಯವು ೧೩ನೇ ಶತಮಾನದ ಆದಿಭಾಗದಲ್ಲಿ ನಿರ್ಮಾಣವಾದಂತೆ ಭಾಸವಾಗುತ್ತದೆ.

ಇತರ ದೇವಾಲಯಗಳು : ಉಚ್ಚಂಗಿ ದುರ್ಗದ ಕೋಟೆಯ ಮಧ್ಯ ಎತ್ತರ ಪ್ರದೇಶದಲ್ಲಿ ಉಚ್ಚಂಗೆಮ್ಮ ದೇವತೆಯ ದೇಗುಲವಿದೆ. ಇದು ಪ್ರಾಚೀನ ಕಾಲದ ವಾಸ್ತುವಾದರೂ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತಾ ಬಂದಿದೆ. ಕೋಟೆಯೊಳಗೆ ಹರಿಹರದ ಬಾಗಿಲ ಬಳಿ ದಕ್ಷಿಣಾಭಿಮುಖವಾದ ಗಣೇಶನ ಗುಡಿ ಇದೆ. ಕೋಟೆಯ ಮಧ್ಯದ ಸೇದುಬಾವಿಯ ಬಳಿ ಉತ್ತರಾಭಿಮುಖವಾದ ಆಂಜನೇಯ ದೇವಾಲಯವಿದೆ. ಸಿದ್ಧೇಶ್ವರ ಮಠ ಒಳ ಕೋಟೆ ಗೋಡೆಗೆ ಹೊಂದಿಕೊಂಡಿದೆ. ಇದು ಪ್ರಾಚೀನ ಕಾಲದ ದೇಗುಲವಾಗಿದ್ದು ಇತ್ತೀಚೆಗೆ ಮಠವಾಗಿ ಪರಿವರ್ತನೆ ಹೊಂದಿದೆ. ಕುಷ್ಟದ ಎಲ್ಲಮ್ಮ ಇಲ್ಲಿಯ ಜನರ ಕುಷ್ಟ ನಿವಾರಕ ದೇವತೆಯಾಗಿದ್ದಾಳೆ. ಈ ಕೋಟೆಯ ೩ನೇ ಬಾಗಿಲುವಾಡದ ಹಿಂಬದಿಯಲ್ಲಿ ಬಸವಣ್ಣ ದೇವಾಲಯ ಕಂಡುಬರುತ್ತದೆ. ವಿರೂಪಾಕ್ಷ ದೇವಾಲಯವು ರಾಣಿ ಅರಮನೆಯ ಕೆಳಗಿಳಿಯುವ ಮಾರ್ಗ ಮಧ್ಯದಲ್ಲಿ ಬಟ್ಟಲಬಾವಿ ಬಲಭಾಗದಲ್ಲಿದೆ. ಕೋಟೆಯ ಒಳಗೆ ಹಾಗೂ ಗೋಡೆಗೆ ಹೊಂದಿಕೊಂಡಿರುವ ದೇಗುಲಗಳೆಂದರೆ ಶಿವ, ರಾಮಲಿಂಗೇಶ್ವರ, ಜೈನ, ಹಾಲಮ್ಮದೇವಾಲಯಗಳು.


ಅರಮನೆಗಳು: ಸಾಮಾನ್ಯವಾಗಿ ಅರಮನೆಗಳೆಂದರೆ ಅರಸರು ವಾಸಿಸುತ್ತಿದ್ದ ಮನೆಗಳೆಂದು ಗುರುತಿಸುತ್ತೇವೆ. ದೊಡ್ಡ ಕಟ್ಟಡವನ್ನು ಹೊಂದಿರುವ ಮನೆಗಳಿಗೆ ಅರಮನೆ ಎಂದು ಕರೆಯುವ ವಾಡಿಕೆಯುಂಟು.



ಅರಮನೆ

ಉಚ್ಚಂಗಿ ದುರ್ಗದ ಬೆಟ್ಟದ ಮೇಲಿನ ಕೋಟೆಯೊಳಗೆ ರಾಜ ಮತ್ತು ರಾಣಿಯ ಎರಡು ಅರಮನೆಗಳಿವೆ. ರಾಜನ ಅರಮನೆಗೆ ಉತ್ತರದಿಂದ ಪ್ರವೇಶದ್ವಾರವಿದೆ. ಇದರ ಮುಖಭಾಗದಲ್ಲಿ ಉಚ್ಚಂಗೆಮ್ಮ ದೇವತೆಯ ಗುಡಿಯಿದೆ. ಈ ಅರಮನೆ ಚೌಕಕಾರದಲ್ಲಿದ್ದು ನಾಲ್ಕು ಮೂಲೆಗಳಿಂದ ಕೂಡಿದೆ. ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸುಮಾರು ೧೦೦ ಅಡಿ ಅಂತರವಿದೆ. ನಾಲ್ಕು ಮೂಲೆಗಳ ಮೇಲೆ ಚೌಕಾಕಾರದ ಬುರುಜುಗಳಿವೆ.

ಈ ಬುರುಜುಗಳು ಮೂರು ಅಂತಸ್ತುಗಳಿಂದ ಕೂಡಿವೆ. ಮೇಲಿನ ಅಂತಸ್ತಿಗೆ ಹೋಗಲು ಕೆಳಮಟ್ಟದಿಂದ ಮೆಟ್ಟಿಲುಗಳನ್ನು ಜೋಡಿಸಲಾಗಿದೆ. ಈ ಬುರುಜುಗಳ ಸುತ್ತಲೂ ಕಿಂಡಿಗಳಿವೆ. ಶತ್ರುಗಳ ಚಲನವಲನ



ಗಮನಿಸಲೆಂದು ಮತ್ತು ಅರಮನೆಯ ರಕ್ಷಣೆಗೆ ಈ ಕಿಂಡಿಗಳಿರಬಹುದು. ಸುತ್ತಲೂ ಗೋಡೆಗಳು ಮಾತ್ರ ಉಳಿದುಕೊಂಡಿವೆ. ಇದೇ ಸ್ಥಿತಿಯನ್ನು ಹೋಲುವ ರಾಣಿಯ ಅರಮನೆಯು ರಾಜನ ಅರಮನೆಯ ಹಿಂಭಾಗಕ್ಕೆ ಇದೆ. ಗೋಡೆಗಳಲ್ಲಿ ಉಬ್ಬು ಚಿತ್ರಗಳಿವೆ. ಇಲ್ಲಿ ಅರಸನ ಬಾವಿ, ಅರಸಿಯ ಹೊಂಡ, ಹಿರೇ ಹೊಂಡ, ಚಿಕ್ಕ ಹೊಂಡ, ಆನೆ, ಬಟ್ಟಲ ಬಾವಿ, ತೊಟ್ಟಿಲ ಬಾವಿಗಳು ಕಂಡುಬರುತ್ತವೆ.

ಟಿಪ್ಪಣಿಗಳು

೧. ಉಚ್ಚಂಗಿದುರ್ಗದ ಹಾಲಮ್ಮನ ದೇವಾಲಯದ ಗೋಡೆಗೆ ಒರಗಿಸಿರುವ ಶಾಸನ.
೨. ಕೊಟ್ರೇಶ್, ಎಂ. ೧೯೯೬. *ಉಚ್ಚಂಗಿದುರ್ಗ* (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಎಂ.ಫಿಲ್ ಪ್ರಬಂಧ, ಪು. ೧೭. ಹಂಪಿ : ಕನ್ನಡ ವಿಶ್ವವಿದ್ಯಾಲಯ
೩. *ಅದೇ,* ಪು. ೧೭
೪. *ಅದೇ,* ಪು. ೧೬
೫. ಗೋವಿಂದಾಚಾರ್ಯ ಚಿಕ್ಕೆರೂರು. ಅಪ್ರಕಟಿತ ಹಸ್ತಪ್ರತಿ
೬. *ಉಚ್ಚಂಗಿದುರ್ಗ* (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಪೂರ್ವೋಕ್ತ. ಪು. ೧೬
೭. ಪಂಚಮುಖಿ, ಆರ್.ಎಸ್. ೧೯೬೭. *ಕರ್ನಾಟಕ ಇತಿಹಾಸ,* ಪು. ೧೦೫. ಧಾರವಾಡ : ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ
೮. *ಅದೇ,* ಪು. ೧೦೬
೯. *ಅದೇ,* ಪು. ೧೩೪
೧೦. *ಉಚ್ಚಂಗಿದುರ್ಗ* (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಪೂರ್ವೋಕ್ತ. ಪು. ೧೮
೧೧. *ಅದೇ,* ಪು. ೧೮
೧೨. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. , ಹಂಪಿ : ಕನ್ನಡ ವಿಶ್ವವಿದ್ಯಾಲಯ.
೧೩. *ಅದೇ,* ಪು. ೩೫
೧೪. *ಅದೇ,* ಪು. ೩೮
೧೫. Zakia Khanum Ansari. 1998. *Some Feudatory Families of medieval Karnataka - A Study,* Pp. 148-152. Dharwad : Shrihariu Prakashana
೧೬. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧,* ಪೂರ್ವೋಕ್ತ. ಪು. ೪೭೩
೧೭. *ಅದೇ,* ಪು. ೪೭೩
೧೮. *ಅದೇ,* ಪು. ೪೬೫
೧೯. *ಅದೇ,* ಪು. ೪೬೭
೨೦. SII IX (pt. I) No. 572. ಉಚ್ಚಂಗಿದುರ್ಗ
೨೧. ಸೂರ್ಯನಾಥ, ಯು. ಕಾಮತ್. ೧೯೮೯. *ಕರ್ನಾಟಕದ ಇತಿಹಾಸ,* ಪು. ೪೪೧. ಬೆಂಗಳೂರು : ಪ್ರಕಾಶ ಸಾಹಿತ್ಯ
೨೨. *ಅದೇ,* ಪು. ೪೪೫
೨೩. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು,* ಪು ೭-೧೪. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು
೨೪. *ಉಚ್ಚಂಗಿದುರ್ಗ* (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಪೂರ್ವೋಕ್ತ. ಪು. ೧೭-೧೮
೨೫. *SII IX* (pt. I) No. 126. ಉಚ್ಚಂಗಿದುರ್ಗ
೨೬. *SII IX* (pt. I) No. 575. ಉಚ್ಚಂಗಿದುರ್ಗ
೨೭. *EC, Vol-2.* ಶ್ರವಣಬೆಳಗೊಳ
೨೮. *ಹರಪನಹಳ್ಳಿ ಪಾಳೆಯಗಾರರು,* ಪೂರ್ವೋಕ್ತ. ಪು. ೭-೫೦
೨೯. ಚನ್ನಬಸಪ್ಪ, ಎಸ್. ಪಾಟೀಲ. ೧೯೯೫. ಹೊಯ್ಸಳರಿಗೆ 'ಗಿರಿದುರ್ಗಮಲ್ಲ' ಮತ್ತು 'ಶನಿವಾರಸಿದ್ಧಿ' ಬಿರುದುಗಳನ್ನಿತ್ತ ಉಚ್ಚಂಗಿದುರ್ಗ, *ಇತಿಹಾಸ ದರ್ಶನ - ೧೦.* ಪು. ೧೫೭-೧೬೦
೩೦. *ಉಚ್ಚಂಗಿದುರ್ಗ* (ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ), ಪೂರ್ವೋಕ್ತ. ಪು. ೮೨

೬.೨ ಕರಡಿದುರ್ಗ

ಕರಡಿದುರ್ಗ ಇರುವ ಹರಪನಹಳ್ಳಿ ತಾಲ್ಲೂಕು ಮೊದಲು ಬಳ್ಳಾರಿ ಜಿಲ್ಲೆಯಲ್ಲಿದ್ದು, ಇತ್ತೀಚಿಗಷ್ಟೇ ಪುನರ್ ರಚಿತ ದಾವಣಗೇರಿ ಜಿಲ್ಲೆಗೆ ಸೇರಿರುತ್ತದೆ. ಇದು ಹರಪನಹಳ್ಳಿ ದಕ್ಷಿಣ ದಿಕ್ಕಿಗೆ ೨೯ ಕಿ.ಮೀ. ದೂರದ ಇತಿಹಾಸ ಪ್ರಸಿದ್ಧ ಉಚ್ಚಂಗಿದುರ್ಗದ ಹಿಂಭಾಗದಲ್ಲಿದೆ. ಇದೊಂದು ಸುಮಾರು ೧೦೦ ಮನೆಗಳಿರುವ ಕುಗ್ರಾಮ. ಇದರ ಉತ್ತರ ದಿಕ್ಕಿನಲ್ಲಿರುವ ಬೆಟ್ಟದ ಮೇಲೆ ಕೋಟೆ ಇದೆ.

ಇತಿಹಾಸ

ಈ ಪ್ರದೇಶ ಶಿಲಾಯುಗಗಳ ಕಾಲದಿಂದಲೂ ಮಾನವನಿಗೆ ತಾಣವಾಗಿ ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಪ್ರಸಿದ್ಧಿ ಹೊಂದಿರುವುದು ಸತ್ಯಸಂಗತಿಯಾಗಿದೆ. ಅಂತೆಯೇ ಹಲವಾರು ಕೋಟೆಗಳನ್ನು ಈ ಸುತ್ತಮುತ್ತಲಿನ ಪರಿಸರದಲ್ಲಿ ಕಾಣಬಹುದು. ಅವುಗಳಲ್ಲಿ ವೀರನದುರ್ಗ, ಹರಪನಹಳ್ಳಿ, ಚಿಗಟೇರಿ, ಬಂಡ್ರಿ, ದೇವಲಾಪುರ, ಉಚ್ಚಂಗಿದುರ್ಗದ ಕೋಟೆಗಳು ಮುಖ್ಯವಾಗಿವೆ. ಇವುಗಳಂತೆಯೇ ಇದುವರೆಗೂ ಬೆಳಕಿಗೆ ಬಾರದ ಹಾಗೂ ವ್ಯವಸ್ಥಿತವಾಗಿ ನಿರ್ಮಾಣವಾಗಿರುವ ಕೋಟೆಗಳಲ್ಲಿ ಕರಡಿದುರ್ಗವು ಒಂದು. ಈ ಕೋಟೆಯನ್ನು ಕುರಿತು ಇದುವರೆಗೆ ಯಾವುದೇ ಅಧ್ಯಯನ ನಡೆದಿಲ್ಲ. ಸ್ಥಳೀಯರು ಕೋಟೆ ಮತ್ತು ಗ್ರಾಮವನ್ನು ಒಳಗೊಂಡ ಬೆಟ್ಟವನ್ನು ಹೆಸರಿಸುತ್ತಿರುವುದು ಕರಡಿದುರ್ಗವೆಂದು. ಇಲ್ಲಿ ದಟ್ಟವಾದ ಕಾಡು ಗಿರಿ-ಕಂದಕಗಳಿರುವುದರಿಂದ ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕರಡಿಗಳು ವಾಸಿಸುತ್ತಿದ್ದವಂತೆ. ಈ ಕಾರಣವಾಗಿಯೇ ಆ ಗ್ರಾಮಕ್ಕೆ ಕರಡಿದುರ್ಗವೆಂದು ಕರೆಯಲಾಗಿದೆ ಎನ್ನುವುದು ಇಲ್ಲಿಯ ಪ್ರತೀತಿ. ಕನ್ನಡ ನಿಘಂಟುವಿನಲ್ಲಿ ಬರುವ *ಕರಡಿಗೆ* ಎಂಬುದರ ಶಬ್ದ ಅರ್ಥವು ಪೆಟ್ಟಿಗೆ, ಚಿಕ್ಕದು ಎಂಬ ಪದಗಳನ್ನು ನಿರ್ದೇಶಿಸುತ್ತಿದ್ದು, ಈ ಕೋಟೆಯು ಚಿಕ್ಕದಿದ್ದು, ಪೆಟ್ಟಿಗೆಯಾಕಾರದಲ್ಲಿರುವುದನ್ನು ಕಂಡಾಗ ಅಲ್ಲಿಯ ಕೋಟೆಯನ್ನು ಸೂಚಿಸಲು ಕರಡಿಗೆ ಎಂಬ ವಿಶೇಷಣವನ್ನು ಸೇರಿಸಿಕೊಂಡಿರಬೇಕು. ಹಾಗಾಗಿ ಈ ಗ್ರಾಮಕ್ಕೆ ಕರಡಿದುರ್ಗ ಎಂಬ ಹೆಸರು ಪ್ರಾಪ್ತವಾಗಿರಬಹುದು. ಪ್ರಾಯಶಃ ಇಲ್ಲಿಯ ಪಾಳೆಯಗಾರರು ನಶಿಸಿದ ನಂತರ ಈ ಕೋಟೆಯು ಕರಡಿಗಳ ವಾಸಸ್ಥಾನವಾಗಿರಬೇಕು. ಈ ಹಿನ್ನೆಲೆಯಲ್ಲಿಯೂ ಕರಡಿದುರ್ಗ ಎಂಬ ನಾಮವು ಪ್ರಚಲಿತದಲ್ಲಿದೆ.

ಉಚ್ಚಂಗಿದುರ್ಗದಂತೆ ಕರಡಿದುರ್ಗದ ಪ್ರದೇಶವೂ ಮೌರ್ಯರಿಗೆ, ಕದಂಬರಿಗೆ, ಕಲ್ಯಾಣ ಚಾಳುಕ್ಯರಿಗೆ, ನೊಳಂಬರಿಗೆ, ಪಾಂಡ್ಯರಿಗೆ, ಹೊಯ್ಸಳರಿಗೆ, ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿದ್ದಲ್ಲದೆ ಹರಪನಹಳ್ಳಿಯ ಪಾಳೆಯಗಾರರಿಗೆ ಪ್ರಮುಖ ಸೈನಿಕ ನೆಲೆಯಾಗಿತ್ತು. ಹರಪನಹಳ್ಳಿಯ ಪಾಳೆಯಪಟ್ಟು ಕ್ರಿ.ಶ. ೧೫೬೫ ರಲ್ಲಿ ದಾದಯ್ಯ ನಾಯಕನಿಂದ ಆರಂಭವಾಯಿತು. ಕ್ರಿ.ಶ. ೧೭೮೯ ರಲ್ಲಿ ಇಮ್ಮಡಿ ಸೋಮಶೇಖರ ನಾಯಕನ ಪತ್ನಿ

ನೀಲಮ್ಮಾಜಿಯವರಿಗೆ ನಡೆಸಿದ ಈ ಮನೆತನದ ಆಳ್ವಿಕೆ ಬ್ರಿಟಿಷರಿಂದ ಕೊನೆಗೊಂಡಿದೆ.[೧] ಸುಮಾರು ೨೫೦ ವರ್ಷಗಳ ಅವಧಿಯಲ್ಲಿ ಹರಪನಹಳ್ಳಿ ಪಾಳೆಯಗಾರರು ರಾಜ್ಯ ವಿಸ್ತರಿಸುವ ನಿಟ್ಟಿನಲ್ಲಿ ತಮ್ಮ ಸೈನಿಕ ನೆಲೆಗಳನ್ನು ಹಲವೆಡೆ ಸ್ಥಾಪಿಸಿದರು. ಅವುಗಳಲ್ಲಿ ಬಂಡ್ರಿ, ಚಿಕ್ಕಹಳ್ಳಿ, ಬೂದುನೂರು, ವೀರನದುರ್ಗ, ಉಚ್ಚಂಗಿದುರ್ಗ, ಚಿಗಟೇರಿ, ತಂಬ್ರಹಳ್ಳಿ, ಕುರದಗಡ್ಡೆ, ಹೊಳಲು, ಹ್ಯಾರಡ ಮತ್ತು ಕರಡಿದುರ್ಗಗಳು ಮುಖ್ಯವಾಗಿವೆ. ಕರಡಿದುರ್ಗದಲ್ಲಿ ಸೈನ್ಯದ ಒಂದು ಭಾಗವನ್ನು ಇಡಲಾಗಿದ್ದಿತೆಂಬುದು ಕೋಟೆಯ ಅವಶೇಷಗಳಿಂದ ಮತ್ತು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ.[೨]

ಕೋಟೆಯ ನಿರ್ಮಾಣ

ವಿಜಯನಗರೋತ್ತರ ಕಾಲದಲ್ಲಿ ತಲೆ ಎತ್ತಿ ಪ್ರಸಿದ್ಧಿ ಹೊಂದಿದ ಪಾಳೆಯಪಟ್ಟುಗಳಲ್ಲಿ ಹರಪನಹಳ್ಳಿಯು ಒಂದು. ಈ ಪಾಳೆಯಗಾರರು ತಮ್ಮ ರಾಜ್ಯದ ವಿಸ್ತರಣೆಯ ದಾಹದಿಂದ ತಮ್ಮ ಸೈನಿಕ ನೆಲೆಗಳಾಗಿ ಬಹುತೇಕ ಕಡೆ ಕೋಟೆಗಳನ್ನು ಕಟ್ಟಿಸಿದರು. ಅಂಥವುಗಳಲ್ಲಿ ಈ ಕರಡಿದುರ್ಗವು ಮುಖ್ಯವಾದುದು. ಈ ಕೋಟೆಯನ್ನು ಹರಪನಹಳ್ಳಿ ಪಾಳೆಯಗಾರ ಮುಮ್ಮಡಿ ಬಸಪ್ಪ ನಾಯಕನು ಕಟ್ಟಿಸಿರಬಹುದೆಂದು ಸ್ಥಳೀಯರ ಪ್ರತೀತಿ ಇದೆ. ಇದಕ್ಕೆ ಪೂರಕವೆಂಬಂತೆ ಕರಡಿದುರ್ಗದ ಕೋಟೆಯೊಳಗೆ ಇರುವ ಆಂಜನೇಯನ ಗುಡಿಯಲ್ಲಿರುವ ಶಾಸನವು ಮುಂಮಡಿ ಬಸಪ್ಪನಾಯಕನದು. ಈ ಶಾಸನದ ಪಾಠವು ಪೂರ್ಣವಾಗಿ ಲಭ್ಯವಿಲ್ಲ. ಈಗ ಲಭ್ಯವಿರುವ ಪಾಠವನ್ನು ಕೆಳಗೆ ಕೊಡಲಾಗಿದೆ.

ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷಂ
ಗಳು ೧೬೨೨ ನೆಯ ವಿಕ್ರಮ ಸಂವತ್ಸರದ
ಆಶ್ವಿಜ ಶುದ್ಧ ೧ ಲು ಮುಂಮಡಿ ಬಸಪ್ಪ ನಾಯಕೈಯ್ಯನವರು
ಹನುಮಂಥ ದೇವರ ....
ಮೈದೂರು ....

ಈ ಶಾಸನದಲ್ಲಿ ಒಟ್ಟು ಹದಿನೈದು ಸಾಲುಗಳಿವೆ. ದೊರೆತಿರುವ ಪಾಠದಲ್ಲಿ ಕ್ರಿ.ಶ. ೧೭೦೦ರಲ್ಲಿ ಮುಂಮಡಿ ಬಸಪ್ಪ ನಾಯಕನು ಹನುಮಂತ ದೇವರ ಗುಡಿಗೆ ಎಂಬುವುದು ಮಾತ್ರ ಇದೆ. ದೇವಾಲಯಕ್ಕೆ ಏನಾದರೂ ಮಾಡಿಸಿರಬಹುದೇ? ಅಥವಾ ಕೋಟೆ ಕಟ್ಟಿಸಿದ ಉಲ್ಲೇಖವಿದೆಯೇ? ಏನೂ ತಿಳಿಯದು. ಆದರೆ ಮುಮ್ಮಡಿ ಬಸಪ್ಪ ನಾಯಕನು ಈ ರೀತಿಯ ದೇವಾಲಯಗಳಿಗೆ ದಾನ-ದತ್ತಿ ನೀಡಿದಂತೆ ಉಲ್ಲೇಖಿಸುವ ಹಲವಾರು ಶಾಸನಗಳಿವೆ. ಕೆಲವನ್ನು ಉದಾಹರಣೆಗಾಗಿ ಇಲ್ಲಿ ನೀಡಲಾಗಿದೆ.

ಮುಂಮಡಿ ಬಸಪ್ಪ ನಾಯಕನ ಕ್ರಿ.ಶ. ೧೭೦೮ರ ಶಾಸನವು[೨] ಉಚ್ಚಂಗೆಮ್ಮ ದೇವಾಲಯದ ಗಂಟೆಯ ಮೇಲಿದೆ. ಇದು ಈ ನಾಯಕ ಗಂಟೆಯನ್ನು ಸಮರ್ಪಿಸಿದಂತೆ ತಿಳಿಸುತ್ತದೆ. ಅಲ್ಲೇ ಇನ್ನೊಂದು ಗಂಟೆಯಲ್ಲಿ ಕ್ರಿ.ಶ. ೧೭೦೦ರಲ್ಲಿ ಮುಂಮಡಿ ಬಸಪ್ಪ ನಾಯಕನು ಇನ್ನೊಂದು ಗಂಟೆಯನ್ನು ಮಾಡಿಸಿದ ಉಲ್ಲೇಖವಿದೆ.[೩] ಕ್ರಿ.ಶ. ೧೭೩೪ರ ಶಾಸನದಲ್ಲಿ ಮುಂಮಡಿ ಬಸಪ್ಪ ನಾಯಕರು ಕೊಟ್ಟೂರು ಬಸವೇಶ್ವರ ದೇವಸ್ಥಾನದಲ್ಲಿ ನಡೆಯುವ ದಾಸೋಹಕ್ಕೆ ಕಂನಾಯಕನಕಟ್ಟೆ ಗ್ರಾಮವನ್ನು ದತ್ತಿಯಾಗಿ ನೀಡಿದ ಉಲ್ಲೇಖವಿದೆ.[೪] ಈ ಮೇಲಿನ ಯಾವ ಶಾಸನಗಳಲ್ಲಿಯೂ ಕರಡಿದುರ್ಗದ ಕೋಟೆಯ ಪ್ರಸ್ತಾಪ ಬಂದಿಲ್ಲ. ಆದರೆ ಈತನ ಆಡಳಿತಾವಧಿಯಲ್ಲಿ ಅನೇಕ ಕೋಟೆಗಳನ್ನು ಗೆದ್ದು ಹರಪನಹಳ್ಳಿ ಸೀಮೆಯನ್ನು ವಿಸ್ತರಿಸಿದ್ದನಲ್ಲದೆ ೪೬೦ ಕಂದಾಯದ ಹಳ್ಳಿಗಳನ್ನು ತನ್ನ ವ್ಯಾಪ್ತಿಯಲ್ಲಿಟ್ಟುಕೊಂಡಿದ್ದ.[೫] ಈ ವ್ಯಾಪ್ತಿಯ ಗಡಿಗಳಾಗಿ ಪಶ್ಚಿಮಕ್ಕೆ ಹಿರೇಕುರುವತ್ತಿ, ಮೈಲಾರ, ಉತ್ತರಕ್ಕೆ ನಾರಾಯಣದೇವರ ಕೆರೆ, ದಕ್ಷಿಣಕ್ಕೆ ಉಚ್ಚಂಗಿದುರ್ಗ ಮತ್ತು ಕರಡಿದುರ್ಗಗಳಾಗಿದ್ದವು. ದಕ್ಷಿಣದ ರಾಜ್ಯದ ರಕ್ಷಣೆಗಾಗಿ ಹಾಗೂ ವಿಸ್ತರಣೆಗಾಗಿ ಕರಡಿದುರ್ಗದಲ್ಲಿ ತನ್ನ ಸೈನ್ಯದ ತುಕಡಿಯನ್ನು ಇಡುವುದಕ್ಕಾಗಿ ಮುಂಮಡಿ ಬಸಪ್ಪ ನಾಯಕನು ಕೋಟೆಯನ್ನು ಕಟ್ಟಿಸಿರಬಹುದು.

ಕೋಟೆಯ ಲಕ್ಷಣಗಳು

ಕರಡಿದುರ್ಗದ ಬೆಟ್ಟವು ಸುತ್ತಲೂ ಕಿರಿದಾದ ಕಂದಕವನ್ನು ಹೊಂದಿ ಕೊಡದ ರೂಪದಲ್ಲಿದೆ. ಈ ಬೆಟ್ಟವನ್ನು ಬಳಸಿ ಕೋಟೆಯನ್ನು ಕಟ್ಟಲಾಗಿದೆ. ಈ ಗಿರಿದುರ್ಗವು ಆಕಾರದಲ್ಲಿ ಬಹು ಚಿಕ್ಕದಿದ್ದರೂ ಬಲಿಷ್ಟವಾಗಿರುವುದು. ಈ ಭಾಗವೆಲ್ಲವೂ ಬೆಟ್ಟ-ಗುಡ್ಡಗಳಿಂದ ಸುತ್ತುವರೆದಿದ್ದು, ಪ್ರಕೃತಿದತ್ತವಾದ ಕಂದಕಗಳಿರುವುದರಿಂದಲೇ ಈ ಕೋಟೆ ಬಲಿಷ್ಠವಾಗಿದೆ. ಈ ಹಿನ್ನೆಲೆಯಲ್ಲಿ ಈ ಸ್ಥಳವನ್ನು ಕೋಟೆ ಕಟ್ಟಲು ಆಯ್ಕೆ ಮಾಡಿಕೊಂಡಿರಬೇಕು.



ಕೋಟೆಯ ಒಳನೋಟ

ಈ ಕೋಟೆಗೆ ದಕ್ಷಿಣ (ಗ್ರಾಮ ಇರುವ ದಿಕ್ಕಿನಿಂದ) ಪ್ರವೇಶವಿದೆ. ಇದೇ ಮುಖ್ಯದ್ವಾರ. ಸ್ವಲ್ಪ ಶಿಥಿಲವಾಗಿದೆ. ಇದರ ಎರಡೂ ಬದಿಗೆ ೩೦ ರಿಂದ ೪೦ ಅಡಿ ಎತ್ತರವಿರುವ ವೃತ್ತಾಕಾರದ ಕೊತ್ತಳಗಳಿವೆ. ಪ್ರವೇಶದ್ವಾರದ ಎದುರಿಗೆ ಆಂಜನೇಯನ ದೇವಾಲಯವಿರುವುದು. ಇದರ ಹಿಂಭಾಗದಲ್ಲಿ ನೂರಾರು ವಾಸದ ಮನೆಗಳು ಗುಂಪು ಗುಂಪಾಗಿವೆ. ಚೌಕಾಕಾರದಲ್ಲಿ ನಿರ್ಮಿಸಲಾದ ಕೆಲವು ಮನೆಗಳಿಗೆ ನಾಲ್ಕು, ಇನ್ನು ಕೆಲವು ಮನೆಗಳಿಗೆ ಐದು, ಚಿಕ್ಕ ಮನೆಗಳಿಗೆ ಎರಡು ಕೋಣೆಗಳಿವೆ. ಕೋಣೆಗಳ ಗೋಡೆಗಳಲ್ಲಿ ಚಿಕ್ಕ, ಚಿಕ್ಕ, ಗೂಡುಗಳಿವೆ. ಇವುಗಳನ್ನು ಮನೆ ಬಳಕೆಯ ವಸ್ತುಗಳನ್ನಿಡುವುದಕ್ಕಾಗಿ ಮಾಡಿರಬಹುದು. ಮುಖ್ಯವಾದ ಕೋಷ್ಠಕದಲ್ಲಿ ದೇವರನ್ನು ಇಟ್ಟು ಪೂಜಿಸುವುದಕ್ಕಾಗಿ ನಿರ್ಮಿಸಿದ್ದರು. ಕೋಣೆಗಳ ಮುಂಭಾಗದಲ್ಲಿ ಹಜಾರ ಅಥವಾ ಪಡಸಾಲೆಗಳಿವೆ. ಕೋಟೆ ತುಂಬಾ ಕಿರಿದಾಗಿದ್ದು, ಇದರ ತುಂಬಾ ಮನೆಗಳಿರುವುದರಿಂದ ವಿಶಾಲವಾದ ಬೀದಿಗಳಿಲ್ಲ. ಮನೆಗಳನ್ನು ಬಹಳ ಹತ್ತಿರ-ಹತ್ತಿರವಾಗಿ ನಿರ್ಮಿಸಿದ್ದು, ಓಡಾಡಲು ಐದು ಅಡಿಗಳಷ್ಟು ಸ್ಥಳವನ್ನು ಮಾತ್ರ ಬಿಡಲಾಗಿದೆ. ಅಲ್ಲಿಯೇ ಹೇರಳವಾಗಿ ದೊರೆಯುವ ಕಣಶಿಲೆಯಿಂದ ಈ ಮನೆಗಳನ್ನು ನಿರ್ಮಿಸಲಾಗಿದೆ. ಇವುಗಳ ಛಾವಣಿಗಳು ಮಾತ್ರ ಉಳಿದಿಲ್ಲ. ಈ ಮನೆಗಳ ಮಧ್ಯದಲ್ಲಿ ಅಲ್ಲಲ್ಲಿ ದವಸ-ದಾನ್ಯಗಳನ್ನು ಸಂಗ್ರಹಿಸುವುದಕ್ಕಾಗಿ ಉಗ್ರಾಣಗಳ (ಕಣಜ)ನ್ನು ನಿರ್ಮಿಸಲಾಗಿದೆ. ಇವುಗಳನ್ನು ಮಧ್ಯಮ ಗಾತ್ರದ ಕಲ್ಲು ಮತ್ತು ಮಣ್ಣಿನಿಂದ ಕಟ್ಟಲಾಗಿದೆ. ಕೆಲವು ವರ್ತುಲಾಕಾರ ಮತ್ತು ಕೆಲವು ಆಯತಾಕಾರವನ್ನು ಹೊಂದಿವೆ.

ಕೋಟೆಯ ಮಧ್ಯಭಾಗದಲ್ಲಿ ಸುಮಾರು ೫೦ ಅಡಿ ಎತ್ತರದ ಬೃಹದಾಕಾರದ ಕೊತ್ತಳವಿದೆ. ಇದು ಸುಮಾರು ೫೦ ಅಡಿ ಸುತ್ತಳತೆಯನ್ನು ಹೊಂದಿದೆ. ಇದರ ಮೇಲ್ತುದಿಗೆ ಹೋಗಲು ಮೆಟ್ಟಲುಗಳಿವೆ. ಈ ಕೊತ್ತಳದ ಮೇಲ್ಭಾಗದಿಂದ ನೋಡಿದರೆ ಸಂಪೂರ್ಣ ಕೋಟೆ ಭಾಗವಲ್ಲದೆ ಗುಡ್ಡದ ಸುತ್ತಲಿನ ಪರಿಸರವೆಲ್ಲವೂ ಗೋಚರಿಸುತ್ತದೆ. ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ.



ಕೋಟೆಯ ಗೋಡೆ ಮತ್ತು ಕೊತ್ತಳ

ಕೋಟೆಯ ಗೋಡೆಯು ಸರಾಸರಿ ೧೫ ಅಡಿ ಎತ್ತರವಾಗಿದೆ. ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದು ಸರಾಸರಿ ೨ ರಿಂದ ೪ ಅಡಿಗಳವರೆಗೆ ಅಗಲವಾಗಿದೆ. ಕೋಟೆಯ ಗೋಡೆಯು ತಳಪಾಯವಿಲ್ಲದೆ ಹಾಸುಬಂಡೆಯ



ಮೇಲೆ ನಿಂತಿದೆ. ಇದನ್ನು ಕೆಳಭಾಗದಲ್ಲಿ ಆಯತಾಕಾರದ ಕಲ್ಲುಗಳನ್ನು ಬಳಸಿ, ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಕಲ್ಲುಗಳಿಂದ ಕಟ್ಟಲಾಗಿದೆ. ಈ ಗೋಡೆಯ ಸುತ್ತಲೂ ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳಿವೆ.

ಕೋಟೆಯಲ್ಲಿ ನೀರು ಪೂರೈಕೆ

ಕೋಟೆಯಲ್ಲಿ ಕುಡಿಯುವ ನೀರಿಗೆ ಈ ಪಾಳೆಯಗಾರರು ಸಾಕಷ್ಟು ಗಮನಹರಿಸಿರುವುದು ಕಂಡುಬರುತ್ತದೆ. ಬಂಡೆಗಳ ಸಂದುಗಳಿಗೆ ಗೋಡೆಗಳನ್ನು ಕಟ್ಟಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಇಂತಹ ಮಳೆಯ ನೀರಿನ ಸಂಗ್ರಹದ ಹೊಂಡಗಳು ಇಂದಿಗೂ ಇವೆ.

ಕೋಟೆಯಲ್ಲಿರುವ ದೇವಾಲಯ

ಕೋಟೆಯ ಪ್ರವೇಶದ ಎದುರು ಭಾಗದಲ್ಲಿರುವುದೇ ಆಂಜನೇಯ ದೇವಾಲಯ. ಇದು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ೬ ಅಡಿ ಎತ್ತರದ ಆಂಜನೇಯನ ಉಬ್ಬು ಶಿಲ್ಪವಿದೆ. ಪಾಳೆಯಗಾರರ ಆರಾಧ್ಯದೈವ ಇಂದಿಗೂ ದೊಡ್ಡ ಪ್ರಮಾಣದಲ್ಲಿ ಪೂಜೆ, ಜಾತ್ರೆ ಜರುಗುತ್ತವೆ. ಇಲ್ಲಿ ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಲ್ಲಿ ದೇವರ ಹೇಳಿಕೆ ನಡೆಯುತ್ತದೆ. ಅದಕ್ಕಾಗಿ ನೂರಾರು ಭಕ್ತರೂ ದೂರ ದೂರದ ಸ್ಥಳಗಳಿಂದ ಬರುತ್ತಾರೆ. ಇಂದಿಗೂ ಕರಡಿದುರ್ಗದ ಆಂಜನೇಯನೆಂದರೆ ಬಹಳ ಖ್ಯಾತಿ. ಈ ದೇವಾಲಯದ ಸಭಾಮಂಟಪದಲ್ಲಿರುವ ಮುಂಮಡಿ ಬಸಪ್ಪ ನಾಯಕನ ಶಾಸನಕ್ಕೂ ಎಣ್ಣೆ ಅಭಿಷೇಕ ನಡೆಯುತ್ತದೆ.

ಸಮೀಕ್ಷೆ

ಕರಡಿದುರ್ಗದ ಕೋಟೆಯು ಉಚ್ಚಂಗಿ ದುರ್ಗದ ಕೋಟೆಗೆ ಬಹು ಸಮೀಪವಿದೆ. ಉಚ್ಚಂಗಿದುರ್ಗದ ಪಶ್ಚಿಮ ದಿಕ್ಕಿನಲ್ಲಿರುವ ಹರಿಹರದ ಬಾಗಿಲು ಕರಡಿದುರ್ಗದ ಕಡೆಯಿಂದ ಬರುವವರೆಗೆ ಬಹು ಸಮೀಪದ ಮಾರ್ಗವಾಗಿದೆ. ಹರಿಹರದ ಬಾಗಿಲಿನಿಂದ ಇಳಿದು ಪಶ್ಚಿಮಕ್ಕೆ ಸಣ್ಣ ಸಣ್ಣ ಬೆಟ್ಟಗಳನ್ನು ದಾಟಿಕೊಂಡು ಕರಡಿದುರ್ಗದವರೆಗೆ ನಡೆದುಕೊಂಡು ಹೋಗುವುದಕ್ಕೆ ಅಂದಿನ ಕಾಲದಲ್ಲಿ (ಪಾಳೆಯಗಾರರ) ನಿರ್ಮಿಸಿದ ದಾರಿ ಇದೆ. ಇದರ ಮೂಲಕ ಗದ್ದೆಗಳ ಬಯಲಿನಿಂದ ಕರಡಿದುರ್ಗದ ಕೆಳಭಾಗಕ್ಕೆ ಬಂದರೆ ಕೋಟೆಯೊಳಗೆ ಹೋಗಲು ಸಹಾಯಕವಾಗುವಂತೆ ಸವೆದ ಕಲ್ಲುಹಾಸಿನ ದಾರಿ ಕಂಡುಬರುತ್ತದೆ. ಉಚ್ಚಂಗಿದುರ್ಗದ ಕೋಟೆಗಿಂತ ಇದು ಬಹು ಚಿಕ್ಕದು. ಉಚ್ಚಂಗಿದುರ್ಗದ ಕೋಟೆಯನ್ನು ಜೀರ್ಣೋದ್ಧಾರ ಮಾಡಿಕೊಂಡು ಹರಪನಹಳ್ಳಿ ಪಾಳೆಯಗಾರರು ಆಳ್ವಿಕೆ ಮಾಡಿದರು. ಇಂತಹ ಐದು ಸುತ್ತಿನ ಬಹುದೊಡ್ಡ ಕೋಟೆ ಇದ್ದರೂ ಇದಕ್ಕೆ ಸಮೀಪದಲ್ಲಿಯೇ ಇನ್ನೊಂದು ಚಿಕ್ಕ ಕೋಟೆಯನ್ನು ಕಟ್ಟುವ ಉದ್ದೇಶವಾದರೂ ಏನಿತ್ತು?

ಉಚ್ಚಂಗಿದುರ್ಗದಿಂದ ಇಲ್ಲಿಗೆ ಪ್ರತ್ಯೇಕ ದಾರಿಯೆ ಇರುವುದರಿಂದ ಇವೆರಡು ದುರ್ಗಗಳ ಮಧ್ಯೆ ಇದ್ದಿರಬಹುದಾದ ಸಂಬಂಧವೂ ಖಚಿತವಾಗುತ್ತದೆ. ಉಚ್ಚಂಗಿದುರ್ಗದ ಮೇಲೆ ಶತ್ರುಗಳು ಆಕ್ರಮಿಸಿದಾಗ ಸಹಾಯವಾಗಲೇಂದೇ ಸೈನ್ಯದ ಒಂದು ತುಕಡಿಯನ್ನು ಗುಪ್ತವಾಗಿ ಇಡುವುದಕ್ಕಾಗಿಯೇ ಕರಡಿದುರ್ಗದ ಕೋಟೆಯನ್ನು ಹರಪನಹಳ್ಳಿ ಪಾಳೆಯಗಾರರು ನಿರ್ಮಿಸಿರಬೇಕು. ಅಥವಾ ಅರಸರ ಪರಿವಾರದವರು, ಸೈನಿಕರು, ಉನ್ನತವರ್ಗದವರು ವಾಸಿಸಲೆಂದೇ ಈ ಕೋಟೆ ಕಟ್ಟಿರಬೇಕು. ಈ ಹಿನ್ನೆಲೆಯಲ್ಲಿ ಪಾಳೆಯಗಾರರ ಕಾಲದ ಸಾಮಾಜಿಕ ಮತ್ತು ಆರ್ಥಿಕ ಚಿತ್ರಣವನ್ನು ಅರಿಯಲು ಈ ಕೋಟೆ ಬಹಳ ಮಹತ್ವದ್ದು. ಒಟ್ಟಿನಲ್ಲಿ ಕರಡಿದುರ್ಗವನ್ನು ಪರಿಶೀಲಿಸಿದಾಗ ಅಲ್ಲಿನ ಕೋಟೆ-ಕೊತ್ತಳಗಳು, ವಸತಿಗೃಹಗಳಿಂದ ಮಧ್ಯಯುಗೀನ ಕಾಲದ ಅಚ್ಚುಕಟ್ಟಾದ ಮನೆಗಳು ಹೇಗಿದ್ದವೆಂಬುದು ತಿಳಿದುಕೊಳ್ಳಬಹುದು. ಅದೂ ಅಲ್ಲದೇ ವಿಜಯನಗರ ಕಾಲದ ವಸತಿಗೃಹಗಳನ್ನು ಅಥವಾ ಪಾಳೆಯಗಾರರ ಕಾಲದ ಮನೆಗಳನ್ನು ಅಧ್ಯಯನ ಮಾಡುವವರಿಗೆ ಕರಡಿದುರ್ಗವು ಒಂದು ಅತ್ಯುತ್ತಮವಾದ ಆಕರವಾಗಬಲ್ಲದು.

ಟಿಪ್ಪಣಿಗಳು

೧. ಸೂರ್ಯನಾಥ, ಯು. ಕಾಮತ್ (ಸಂ.), ೧೯೮೬. *ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ* - ೩. ಬೆಂಗಳೂರು : ಗ್ಯಾಸೆಟಿಯರ್ ಇಲಾಖೆ


೨. ಕರಡಿದುರ್ಗದ ಆಂಜನೇಯ ದೇವಾಲಯದ ಸಭಾಮಂಟಪದಲ್ಲಿರುವ ಶಾಸನ (ಅಪ್ರಕಟಿತ)ದಲ್ಲಿ ಹಾಗೂ ಕೋಟೆಯಲ್ಲಿರುವ ವಾಸದ ಮನೆಗಳು

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೪೭೩. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. *ಅದೇ,* ಪು. ೪೭೪

೫. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು,* ಪು. ೧೦೭. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

೬. *ಅದೇ,* ಪು. ೧೮



ಕರಡಿದುರ್ಗದ ಕೋಟೆಯ ನಕ್ಷೆ

೧. ಬಾಗಿಲು ೨. ಕೊತ್ತಳ ೩. ಆಂಜನೇಯ ದೇವಾಲಯ ೪. ಬೃಹದಾಕಾರದ ಕೊತ್ತಳ ೫. ವಾಸದ ಮನೆಗಳು

೯.೩ ಬಂಡ್ರಿ

ಹರಪನಹಳ್ಳಿ ತಾಲೂಕಿನಲ್ಲಿರುವ ಬಂಡ್ರಿಯು ಹರಪನಹಳ್ಳಿಯಿಂದ ಹಡಗಲಿಗೆ ಹೋಗುವ ದಾರಿ ಮಧ್ಯದಲ್ಲಿ ೯ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ವಾಯುವ್ಯ ದಿಕ್ಕಿಗಿರುವ ಬೆಟ್ಟದ ಮೇಲೆ ಕೋಟೆ ಇದೆ.

ಹರಪನಹಳ್ಳಿ ಪಾಳೆಯಗಾರರು ತಮ್ಮ ಸೈನ್ಯದ ತುಕಡಿಗಳನ್ನು ಇಡುವುದಕ್ಕಾಗಿ ಕೆಲವು ಆಯಾಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದರು. ಅವುಗಳಲ್ಲಿ ಈ ಬಂಡ್ರಿಯ ಕೋಟೆಯು ಒಂದು. ಇದುವರೆಗೆ ಬೆಳಕಿಗೆ ಬಾರದ ಹಾಗೂ ವ್ಯವಸ್ಥಿತವಾಗಿ ನಿರ್ಮಾಣವಾಗಿರುವ ಕೋಟೆಗಳ ಸಾಲಿಗೆ ಇದು ಸೇರ್ಪಡೆಯಾಗುತ್ತದೆ. ಸ್ಥಳೀಯರು ಕೋಟೆಯನ್ನು ಒಳಗೊಂಡ ಬೆಟ್ಟವನ್ನು ಹೆಸರಿಸುತ್ತಿರುವುದು ಬಂಡ್ರಿ ಎಂದು. ಕನ್ನಡ ನಿಘಂಟುವಿನಲ್ಲಿ 'ಬಂಡೆ' ಎಂದರೆ ಹಾಸುಗಲ್ಲು, ದೊಡ್ಡಕಲ್ಲು, ದೊಡ್ಡ, ಅಡೆ - ತಡೆ ಎಂಬಿತ್ಯಾದಿ ಅರ್ಥಗಳಿವೆ. ಈ ಗ್ರಾಮವನ್ನು ಸೇರಿದಂತೆ ಕೋಟೆಯು ಬೃಹದಾಕಾರದ ಹಾಸುಬಂಡೆಯ ಮೇಲಿದೆ. ಬಂಡೆ ಜನರ ಆಡುಭಾಷೆಯಲ್ಲಿ ಬಂಡಿಹ - ಬಂಡ್ರಿಯಾಗಿದೆ.

ಕೋಟೆಯ ನಿರ್ಮಾಣ

ಬಂಡ್ರಿಯ ಕೋಟೆಯನ್ನು ಗೋಣಿ ಬಸಪ್ಪ ಮತ್ತು ಚಿಗಟೇರಿ ಶಿವಪ್ಪನಾಯಕರು ಸೇರಿ ನಿರ್ಮಿಸಿದರೆಂದು ಪ್ರತೀತಿ. ಚಿಗಟೇರಿ ಶಿವಪ್ಪನಾಯಕ ಬಂಡ್ರಿಗೆ ಹಾಗಾಗ ಬಂದು ಹೋಗುತ್ತಿದ್ದ. ಈ ಕಾರಣವಾಗಿಯೇ ಕೂಲಹಳ್ಳಿಯ ಗೋಣಿ ಬಸಪ್ಪ ಹಾಗೂ ಶಿವಪ್ಪನಾಯಕರ ಮಧ್ಯೆ ಸಂಬಂಧ ಬೆಳೆಯಿತು. ಇದರ ನೆನಪಿಗಾಗಿ ಅವರು ಕಟ್ಟಿಸಿದ ಕೋಟೆ ಮಾತ್ರ ಉಳಿದುಕೊಂಡಿದೆ ಎಂಬುದು ಗ್ರಾಮದ ಹಿರಿಯರ ಹೇಳಿಕೆಯಾಗಿದೆ.

ಕೂಲಹಳ್ಳಿ ಗೋಣಿ ಬಸವೇಶ್ವರರನ ಜಾತ್ರೆಯು ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಜರುಗುತ್ತದೆ. ಇದರಲ್ಲಿ ಶ್ರೀ ಗೋಣಿ ಬಸವೇಶ್ವರನನ್ನು ಕ್ರೂರವಾಗಿ ನಡೆಸಿಕೊಳ್ಳುವ ಪ್ರಸಂಗಗಳಿವೆ. ಬಂಡ್ರಿ ಗ್ರಾಮಸ್ಥರ ಹೇಳಿಕೆಗೂ ಮತ್ತು ಈ ಮೇಲಿನ ಪ್ರಸಂಗಕ್ಕೂ ಪರಸ್ಪರ ವಿರುದ್ಧವಾಗಿದೆ. ಗೋಣಿ ಬಸವೇಶ್ವರ ಯಾರು, ಎಲ್ಲಿಂದ ಬಂದ, ಏಕೆ ಬಂದ, ಈತನ ಕಾಲಾವಧಿ ಏನು? ಜೀವನ ಹೇಗಿತ್ತು ಇತ್ಯಾದಿಗಳ ಬಗ್ಗೆ ಸರಿಯಾದ ದಾಖಲೆಗಳಿಲ್ಲ.

ಲಭ್ಯವಿರುವ ಕೆಲವು ದಾಖಲೆಗಳು, ಸ್ಮಾರಕಾವಶೇಷಗಳು ಮತ್ತು ಭೌಗೋಳಿಕ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಈ ಕೋಟೆಯ ನಿರ್ಮಾಣ ಮತ್ತು ರಚನೆಯನ್ನು ಊಹಿಸಲಾಗಿದೆ.

ಈಗಿರುವ ಕೋಟೆಯ ದಕ್ಷಿಣಭಾಗದಲ್ಲಿ ದಾದಣ್ಣ ಮತ್ತು ರಂಗಣ್ಣರ ದೇವರಗುಡಿಗಳಿವೆ. ಅಲ್ಲಿ ಇಂದಿಗೂ ಆರಾಧನೆ, ಉತ್ಸವ, ಜಾತ್ರೆಗಳು ಜರುಗುತ್ತವೆ. ದಾದನಾಯಕ ಮತ್ತು ರಂಗನಾಯಕರುಗಳು ಹರಪನಹಳ್ಳಿಯ ಆರಂಭದ ಪಾಳೆಯಗಾರರೆಂಬುದು ಗಮನಿಸಬೇಕಾದ ಅಂಶ.

ಬಂಡ್ರಿಯ ಪಶ್ಚಿಮದಿಕ್ಕಿಗೆ ೨ ಕಿ.ಮೀ. ದೂರದಲ್ಲಿ ''ದಾದಪುರ'' ಎಂಬ ಗ್ರಾಮವಿದೆ. ಇದು ಹರಪನಹಳ್ಳಿ ದಾದಾನಾಯಕನಿಂದ ನಿರ್ಮಾಣವಾದುದೆಂಬ ಪ್ರತೀತಿ ಇದೆ.[೭]

ಕ್ರಿ.ಶ. ೧೬೯೯ ಶಾಸನದಲ್ಲಿ ಮುಮ್ಮಡಿ ಬಸಪ್ಪನಾಯಕನು ರಾಜ ಪುರೋಹಿತನಿಗೆ ಆಲಮರಸಿಕೇರಿ ಗ್ರಾಮದಲ್ಲಿರುವ ಭೂಮಿಯನ್ನು ದತ್ತಿಯಾಗಿ ನೀಡಿದ ಉಲ್ಲೇಖವಿದೆ.[೮] ಈ ಆಲಮರಸಿಕೇರಿ ಗ್ರಾಮವು ಬಂಡ್ರಿಯಿಂದ ನೈರುತ್ಯದಿಕ್ಕಿಗೆ ೨ ಕಿ.ಮೀ. ಅಂತರದಲ್ಲಿದೆ.

ಕ್ರಿ.ಶ. ೧೭೦೮ ರ ಶಾಸನದಲ್ಲಿ ಮುಮ್ಮಡಿ ಬಸಪ್ಪನಾಯಕನು ಚಿಗಟೇರಿ ಶಿವಪ್ಪನ ಮೂಲಕ ಉಚ್ಚಂಗಿದುರ್ಗದ ಉಚ್ಚಂಗೆಮ್ಮನಿಗೆ ಗಂಟೆಯನ್ನು ಸಮರ್ಪಿಸಿದಂತೆ ತಿಳಿದುಬರುತ್ತದೆ.[೯] ಬಂಡ್ರಿಗ್ರಾಮದ ಮಧ್ಯದಲ್ಲಿರುವ ಚಿಕ್ಕ ಬೆಟ್ಟದ ಮೇಲೆ ಪಾಳೆಯಗಾರರ ಅವಧಿಯಲ್ಲಿ ನಿರ್ಮಾಣವಾಗಿರುವ ದೇಗುಲವಿದೆ.ಇದನ್ನು ಬಂಡಿ ಬಸಪ್ಪನೆಂದು ಆರಾಧಿಸುವರು.

ಈ ಮೇಲಿನ ಆಧಾರಗಳನ್ನು ಗ್ರಹಿಸುವದಾದಲ್ಲಿ ಹರಪನಹಳ್ಳಿ ಪಾಳೆಯಗಾರರೇ ಈ ಸುತ್ತಲಿನ ಪ್ರದೇಶಗಳನ್ನು ನೋಡಿಕೊಳ್ಳುವುದಕ್ಕಾಗಿ ಕೇಂದ್ರಬಿಂದುವಾದ ಬಂಡ್ರಿಯಲ್ಲಿ ಕೋಟೆಯನ್ನು ಕಟ್ಟಿಸಿರಬೇಕು. ಅದು ಅಲ್ಲದೆ ಹರಪನಹಳ್ಳಿ ಪಾಳೆಯಗಾರರಿಗೆ ಯುದ್ಧಾಸ್ತ್ರಗಳನ್ನು ತಯಾರು ಮಾಡುವ ಕುಲುಮೆ ಇದ್ದುದು ಮಾಡಲಗೇರಿ ಗ್ರಾಮದಲ್ಲಿ. ಇದು ಬಂಡ್ರಿಯಿಂದ ೪ ಕಿ.ಮೀ. ಅಂತರದಲ್ಲಿದೆ.

ಕೋಟೆಯ ಲಕ್ಷಣಗಳು


ಬೃಹದಾಕಾರದ ಹಾಸು ಬಂಡೆಯ ಬೆಟ್ಟವನ್ನು ಬಳಸಿ ಈ ಗಿರಿದುರ್ಗವನ್ನು ಕಟ್ಟಲಾಗಿದೆ. ಇದು ವಿಸ್ತೀರ್ಣದಲ್ಲಿ ಕರಡಿ ದುರ್ಗಕ್ಕಿಂತ ದೊಡ್ಡದು. ಬಂಡ್ರಿಯ ಸುತ್ತಲಿನ ಪ್ರದೇಶದಲ್ಲಿ ಇದಕ್ಕಿಂತ ಎತ್ತರವಾದ ಯಾವುದೇ ಬೆಟ್ಟ - ಗುಡ್ಡಗಳಿಲ್ಲ, ಹಾಗೂ ಇದು ತುಂಬಾ ಆಯಾ ಕಟ್ಟಿನ ಸ್ಥಳ. ಈ ಹಿನ್ನೆಲೆಯಲ್ಲಿಯೇ ಹರಪನಹಳ್ಳಿ ಪಾಳೆಯಗಾರರು ಕೋಟೆ ಕಟ್ಟಲು ಈ ಸ್ಥಳವನ್ನು ಆಯ್ಕೆ ಮಾಡಿಕೊಂಡಿರಬಹುದು. ಈ ಕೋಟೆಯು ಸುಮಾರು ಐದು ಎಕರೆಯಷ್ಟು ಸ್ಥಳವನ್ನು ಒಳಗೊಂಡಿದೆ. ಇಲ್ಲಿನ ಕೋಟೆ ಮತ್ತು ಇತರ ಸ್ಮಾರಕಾವಶೇಷಗಳು ಕಲ್ಲುಕುಟಿಗರ ದವಡೆಗೆ ಸಿಕ್ಕು ನಲುಗಿವೆ. ಈಗ ಉಳಿದಿರುವ ಅಲ್ಪ ಸ್ವಲ್ಪ ಭಾಗಗಳನ್ನೆ ಇಲ್ಲಿ ಗುರುತಿಸಿ ದಾಖಲಿಸಲು ಪ್ರಯತ್ನಿಸಿದೆ.

ಸದ್ಯ ಸುಸ್ಥಿತಿಯಲ್ಲಿರುವುದೆಂದರೆ ಕೋಟೆಯ ಹೆಬ್ಬಾಗಿಲು ಮಾತ್ರ. ಇದು ಕೋಟೆಯ ಆಗ್ನೇಯ ದಿಕ್ಕಿಗಿದೆ. ಇದನ್ನು ಸ್ಥಳೀಯರು "ಹುಲಿಮುಖ"ವೆಂದು ಕರೆಯುತ್ತಾರೆ. ಈ ಹುಲಿಮುಖದ ವರ್ಣನೆಯನ್ನು ನಂಜುಂಡ ಕವಿ ರಾಮನಾಥ ಚರಿತೆಯಲ್ಲಿ ಈ ಕೆಳಗಿನಂತೆ ಹೇಳಿದ್ದಾನೆ.

ಅಗಳಾಳ್ವೇರಿ ಕೋಟೆ ಕೊತ್ತಳ

ನೆಲದಿಡ್ಡಿ ಮುಗಿಲಟ್ಟಣೆ ನೆಲಗಟ್ಟು

ಪುಗಿಸಿ ಕೊಯೊಳಗಾಗಿಸಿ ಕೊಂಬ ಪಲ "ಪುಲಿ ಮೊಗ" ಗಳನ್ನು ಮಾಡಿಸಿದುದು.[೫] ಅಂದರೆ ಹಳೇಗನ್ನಡದ ಪುಲಿಯೊಗ ಹೊಸಗನ್ನಡದ ಹುಲಿಮುಖವಾಗಿದೆ. ಹುಲಿಮುಖ ಎಂದರೆ ಹೆಬ್ಬಾಗಿಲು ಎಂಬ ಅರ್ಥವನ್ನು ಕನ್ನಡ ನಿಘಂಟು ನೀಡುತ್ತದೆ. ಈ ಹೆಬ್ಬಾಗಿಲು ಸುಮಾರು ೧೦ ಅಡಿ ಅಗಲ, ೧೫ ಅಡಿ ಎತ್ತರವಾಗಿದೆ. ಕುದುರೆ ಹತ್ತಿ ಬರುವವನ ಮೇಲೆ ಎರಡು ಕೈಗಳ ಉದ್ದ ಪ್ರಮಾಣವಿರುವ ಹಾಗೆ ಕೋಟೆ ದ್ವಾರವನ್ನು ನಿರ್ಮಿಸಲಾಗಿದೆ. ಇದರ ಲಲಾಟ ಬಿಂಬದಲ್ಲಿ ಪದ್ಮದ ಕೆತ್ತನೆ ಇದ್ದು, ಬಾಗಿಲುವಾಡದ ಮೇಲ್ಭಾಗದಲ್ಲಿ ಗೋಡೆಯಲ್ಲಿಯೇ ಕಮಾನನ್ನು ಮಾಡಲಾಗಿದೆ. ಮುಖ್ಯದ್ವಾರವನ್ನು ಮುಚ್ಚಿದಾಗ, ಆಪತ್ತು ಸಂಭವಿಸಿದಾಗ ಪಲಾಯನವಾಗುವುದಕ್ಕೆ ಯೋಗ್ಯವಾಗಿ ಮುಖ್ಯದ್ವಾರದ ಪಕ್ಕದಲ್ಲಿಯೇ ಉಪಬಾಗಿಲನ್ನು ನಿರ್ಮಿಸಲಾಗಿದೆ. ಇದು ೩ ಅಡಿ ಅಗಲ ಮತ್ತು ೫ ಅಡಿ ಎತ್ತರವಿದೆ. ಹೆಬ್ಬಾಗಿಲಿನ ಒಳಬದಿಗೆ ಪರಸ್ಪರ ಅಭಿಮುಖವಾದ ಮಂಟಪಗಳಿವೆ. ಇವುಗಳಲ್ಲಿ ಒಟ್ಟು ಎಂಟು ಚೌಕಾಕಾರದ ಕಂಬಗಳಿವೆ. ಈ ಕಂಬಗಳು ಹಾಗೂ ಬಾಗಿಲುವಾಡವು ಗರಗಸ ಕಲ್ಲಿನಿಂದ ನಿರ್ಮಿಸಲಾದವು. ಮಂಟಪಗಳ ಮೇಲ್ಭಾವಣಿಗೆ ಹಾಸುಗಲ್ಲು, ಗಾರೆ ಮತ್ತು ಮಣ್ಣನ್ನು ಬಳಸಲಾಗಿದೆ.



ಹೆಬ್ಬಾಗಿಲು

ಹಾಸು ಬಂಡೆಗಳೇ ಈ ಕೋಟೆಗೆ ತಳಪಾಯವಾಗಿದೆ. ಕೋಟೆಯ ಒಳಗೆ ಶತ್ರುಗಳು ನುಸಳದಂತೆ ಕೆಲವು ಮರ್ಮಗಳನ್ನು ಬಳಸಿ ಕೋಟೆಯನ್ನು ಭದ್ರ ಪಡಿಸಿದ್ದರಾದರೂ ಇಂದು ಶಿಥಿಲ ಸ್ಥಿತಿಯಲ್ಲಿದೆ. ಕೋಟೆಯ

ಗೋಡೆಯೂ ಸರಾಸರಿ ೧೫ ರಿಂದ ೧೮ ಅಡಿ ಎತ್ತರವಾಗಿದ್ದರೂ, ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದರ ಅಗಲ ಸುಮಾರು ೨ ರಿಂದ ೩ ಅಡಿಗಳಾಗಿದ್ದು ಇನ್ನು ಹಲವೆಡೆ ಹೆಚ್ಚು ಕಡಿಮೆ ಇದೆ. ಕೋಟೆಯ ಗೋಡೆಯ ಕೆಳಭಾಗದಲ್ಲಿ ಸ್ಥಳೀಯವಾಗಿ ದೊರೆಯುವ ಮಧ್ಯಮ ಗಾತ್ರದ ಕಣಶಿಲೆಯನ್ನು ಬಳಸಿದ್ದು, ಮೇಲ್ಭಾಗದಲ್ಲಿ ಈ ಶಿಲೆಯಗಾತ್ರ ಚಿಕ್ಕದಾಗಿದೆ. ಮೇಲ್ತುದಿಯಲ್ಲಿ ಬಂದೂಕು ಕಿಂಡಿಗಳಿದ್ದು ಅವುಗಳಿಗೆ ಗಾರೆಯ ಲೇಪನ ಮಾಡಲಾಗಿದೆ. ಈ ಕೋಟೆಯ ಆಯಾ ಕಟ್ಟಿನ ಸ್ಥಳಗಳಲ್ಲಿ ಒಟ್ಟು ೧೨ ಕೊತ್ತಳಗಳಿದ್ದವೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪೂರಕವಾಗಿ ಮೂರು ಕೊತ್ತಳವು ಕೋಟೆಯ ಮಧ್ಯಭಾಗದಲ್ಲಿ ಎತ್ತರಸ್ಥಳದಲ್ಲಿದೆ. ಇದು ವೃತ್ತಾಕಾರವಾಗಿದ್ದು, ಸುಮಾರು ೫೦ ಅಡಿ ಸುತ್ತಳತೆ ಹಾಗೂ ೧೫ ಅಡಿ ಎತ್ತರವಾಗಿದ್ದು, ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳು ಮತ್ತು ಕೊತ್ತಳದ ಮೇಲೆರಲು ವ್ಯವಸ್ಥೆ ಮಾಡಲಾಗಿದೆ. ಇದನ್ನು ಸ್ಥಳೀಯರು ಕರಡಿ ಹುಡೇವು ಎನ್ನುತ್ತಾರೆ. ಉಳಿದ ಕೊತ್ತಳಗಳು ಭಾಗಶಃ ಹಾಳಾಗಿವೆ.

ಹಿಂದೆ ಬಂಡ್ರಿ ಗ್ರಾಮವು ಕೋಟೆಯೊಳಗೆ ಇತ್ತು. ಅಲ್ಲಿ ಆನೆಹೊಂಡ, ದೊಡ್ಡಹೊಂಡ, ತುಪ್ಪದಕೊಳ, ಕುಂಬಾರರ ಹಾವಗಿ ಮತ್ತು ನುಪ್ಪಣ್ಣನ ಗದ್ದುಗೆಗಳಿದ್ದವೆಂದು ಸುಮಾರು ೮೦ ವರ್ಷದ ವೃದ್ಧ ಬಣಕಾರ ತಿಂದಪ್ಪ ನೆನಪು ಮಾಡಿಕೊಳ್ಳುತ್ತಾರೆ. ಈಗ ಅವೆಲ್ಲ ನಾಶವಾಗಿವೆ. ಸರಕಾರವೇ ಕೋಟೆಯೊಳಗಿನ ಕಲ್ಲು ಗುಡ್ಡವನ್ನು ಗುತ್ತಿಗೆದಾರರಿಗೆ ನೀಡಿದೆ ಎಂಬ ತಮ್ಮ ಮನದಾಳದ ಅಳಲನ್ನು ನಮ್ಮುಂದೆ ಹೇಳಿಕೊಳ್ಳುವರು.



ಕೊತ್ತಳ

ಕೋಟೆಯಲ್ಲಿರುವ ದೇವಾಲಯಗಳು

ಊರಿಗೊಂದು ಆಂಜನೇಯನ ಗುಡಿಗಳಿರುವುದು ಸರ್ವ ಸಾಮಾನ್ಯವಾಗಿದೆ. ಹಾಗೆಯೇ ಪ್ರತಿ ಕೋಟೆಗೊಂದು ಆಂಜನೇಯನ ದೇಗುಲಗಳಿರುವುದು ವಿಶೇಷವೇನಲ್ಲ. ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ಎತ್ತರ



ಸ್ಥಳದಲ್ಲಿದೆ. ಒಳಗೆ ಗರ್ಭಗೃಹ ಹಾಗೂ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಸಭಾಮಂಟಪ ಈಗ ಗೋಚರಿಸದು. ಕೋಟೆಯ ನೈರುತ್ಯಕ್ಕೆ ನುಪ್ಪಿನಪ್ಪನ ಗುಡಿ ಇದೆ. ಇದು ಉತ್ತರಾಭಿಮುಖವಾಗಿದ್ದು, ಒಳಗಡೆ ಗದ್ದುಗೆಯನ್ನು ಹೊಂದಿದೆ. ಇದರ ಹತ್ತಿರದಲ್ಲಿಯೇ ದಾದಣ್ಣ ಮತ್ತು ರಂಗಣ್ಣರ ಚಿಕ್ಕ ಚಿಕ್ಕ ಗುಡಿಗಳಿವೆ. ಈ ಕೋಟೆಯ ಬೆಟ್ಟಕ್ಕೆ ಸಮಾನ ಎತ್ತರದಲ್ಲಿರುವ ಇನ್ನೊಂದರಲ್ಲಿ ಬಂಡಿ ಬಸಪ್ಪನ ದೇಗುಲವಿದೆ. ಉತ್ತರಾಭಿಮುಖವಾಗಿರುವ ಇದರಲ್ಲಿ ಗರ್ಭಗೃಹ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ನಂದಿಯ ಶಿಲ್ಪವಿದೆ. ಸಭಾಮಂಟಪದಲ್ಲಿ ವಿಜಯನಗರೋತ್ತರ ಕಾಲದ ೪ ಕಂಬಗಳಿವೆ. ಪ್ರತಿವರ್ಷವೂ ಇಲ್ಲಿ ಜಾತ್ರೆ ಜರುಗುತ್ತದೆ.

ಸಮೀಕ್ಷೆ

ಒಟ್ಟಿನಲ್ಲಿ ಬಂಡ್ರಿ ಕೋಟೆಯು ಹರಪನಹಳ್ಳಿ ಪಾಳೆಯಗಾರರ ಅವಧಿಯಲ್ಲಿ ನಿರ್ಮಾಣಗೊಂಡಿದ್ದು, ಆಗ ಮಹತ್ವದ ಪಾತ್ರವನ್ನು ವಹಿಸಿತ್ತು. ಹರಪನಹಳ್ಳಿ ಪಾಳೆಯಗಾರರ ಹಲವು ಸೈನಿಕ ನೆಲೆಗಳಲ್ಲಿ ಇದು ಒಂದು. ಹರಪನಹಳ್ಳಿ ಪಾಳೆಯಗಾರರ ರಾಜಕೀಯ, ಆರ್ಥಿಕ, ಸಾಮಾಜಿಕ ಇತಿಹಾಸವನ್ನು ತಿಳಿಯಲು ಈ ಕೋಟೆಯು ಬಹು ಉಪಯುಕ್ತವಾಗಿದೆ.

ಟಿಪ್ಪಣಿಗಳು

೧. ಗಿರಿಜ, ಟಿ. ೨೦೦೧. *ದಾವಣಗೇರಿ ಜಿಲ್ಲಾ ದರ್ಶನ*
೨. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು,* ಪು. ೧೦೭. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು
೩. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೪೭೪. ಹಂಪಿ : ಕನ್ನಡ ವಿಶ್ವವಿದ್ಯಾಲಯ
೪. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು,* ಪು. ೧೧೦. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು
೫. ದೇವೀರಪ್ಪ, ಎಚ್. (ಸಂ.), ೧೯೯೪. *ರಾಮನಾಥ ಚರಿತೆ-೨,* ಪು. ೩೭. ಮೈಸೂರು : ಮೈಸೂರು ವಿಶ್ವವಿದ್ಯಾಲಯ

೯.೪ ಹರಪನಹಳ್ಳಿ

ಹರಪನಹಳ್ಳಿಯು ಬಳ್ಳಾರಿಗೆ ನೈರುತ್ಯಕ್ಕೆ ೧೨೭ ಕಿ.ಮೀ. ಬೆಂಗಳೂರಿಗೆ ೩೧೪ ಕಿ.ಮೀ. ದೂರದಲ್ಲಿದೆ. ಈಗ ದಾವಣಗೆರೆ ಜಿಲ್ಲೆಗೆ ಸೇರಿದ ತಾಲೂಕು ಕೇಂದ್ರವಾಗಿದೆ. ಹರಪನಹಳ್ಳಿ ಪಾಳೆಯಗಾರರಿಂದ ಈ ಪ್ರದೇಶವು ಪ್ರಸಿದ್ಧಿಗೆ ಬಂದು, ಕ್ರಿ.ಶ. ೧೬ನೆಯ ಶತಮಾನದಿಂದ ಕ್ರಿ.ಶ. ೧೯ನೆಯ ಶತಮಾನದವರೆಗೆ ಅಂದರೆ ಮುಂದೆ ಬ್ರಿಟಿಷರ ವಶವಾಗುವವರೆಗೂ ಹರಪನಹಳ್ಳಿ ಪಾಳೆಯಗಾರರ ಬಲಿಷ್ಠ ಆಡಳಿತ ಕೇಂದ್ರವಾಗಿತ್ತು. ಪಾಳೆಯಗಾರರೇ ಇಲ್ಲೊಂದು ಕೋಟೆಯೊಂದನ್ನು ಕಟ್ಟಿಕೊಂಡಿದ್ದರು.

ಇತಿಹಾಸ

ವಿಜಯನಗರ ಅರಸ ಸಂತತಿ ಆನೆಗೊಂದಿ ಮತ್ತು ಚಂದ್ರಗಿರಿ ನೆಲೆವೀಡುಗಳಿಂದ ಸುಮಾರು ಒಂದು ಶತಮಾನಕ್ಕೂ ಹೆಚ್ಚುಕಾಲ ರಾಜ್ಯಭಾರ ಮಾಡಿದರು. ಈ ಅವಧಿಯಲ್ಲಿ ವಿಜಯನಗರದ ಅರಸರು ಹೆಸರಿಗೆ ಮಾತ್ರ ಅರಸರಾಗಿದ್ದರು. ಇವರ ಸೇನೆಯಲ್ಲಿ ಸೇವೆ ಸಲ್ಲಿಸಿದ ದಳವಾಯಿಗಳು, ಸರದಾರರು, ಕೆಲಸದವರು ಚಿಕ್ಕ ಚಿಕ್ಕ ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು. ಅಂಥವುಗಳಲ್ಲಿ ಬಳ್ಳಾರಿ, ಸಂಡೂರು, ಗುಡೇಕೋಟೆ, ಜರಿಮಲೆ ಮತ್ತು ಹರಪನಹಳ್ಳಿ ಈ ಐದು ರಾಜ್ಯಗಳು ಸೇರಿದ್ದವು. ಇವುಗಳಲ್ಲಿ ಹರಪನಹಳ್ಳಿ ಪಾಳೆಯಪಟ್ಟು ಪ್ರಮುಖವಾದುದು.

ಹರಪನಹಳ್ಳಿಯು ಮೊದಲು ಅಗ್ರಹಾರವಾಗಿದ್ದರೂ, ಪ್ರಸಿದ್ಧಿಗೆ ಬಂದದ್ದು ಪಾಳೆಯಗಾರರ ಅವಧಿಯಲ್ಲಿ. ಹರಪನಹಳ್ಳಿ ಸಂಸ್ಥಾನವನ್ನು ಆಳಿದ ಪಾಳೆಯಗಾರರಲ್ಲಿ ದಾದಾನಾಯಕ, ಓಬಣ್ಣನಾಯಕ, ರಂಗಣ್ಣನಾಯಕ, ಮುಮ್ಮಡಿ ಬಸಪ್ಪನಾಯಕ, ವೀರಮುಮ್ಮಡಿನಾಯಕ, ಮೊದಲ ಬಸವಂತ ನಾಯಕ, ಮರಿಕೊಟ್ಟಪ್ಪನಾಯಕ, ಹರಿಯಾಮ್ಮಾಜಿ, ಮೊದಲ ಹಾಗೂ ಎರಡನೆಯ ಸೋಮಶೇಖರ ನಾಯಕ, ಎರಡನೆಯ ವೀರಬಸಪ್ಪ ನಾಯಕರುಗಳು ಪ್ರಮುಖರಾಗಿದ್ದರು.

ಈ ಪಾಳೆಯಗಾರರು ನೆರೆಹೊರೆಯ ರಾಜ್ಯಗಳಾದ ಜರಿಮಲೆ, ಗುಡೇಕೋಟೆ, ರಾಯದುರ್ಗ, ತರೀಕೆರೆ ಮತ್ತು ಸವಣೂರು ಇವುಗಳೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದರು. ಇದಕ್ಕೆ ಪೂರಕವೆಂಬಂತೆ ಜರಿಮಲೆ, ಗುಡೇಕೋಟೆ ಮತ್ತು ತರೀಕೆರೆ ಪಾಳೆಯಗಾರರೊಂದಿಗೆ ವೈವಾಹಿಕ ಸಂಬಂಧಗಳು ಏರ್ಪಟ್ಟಿದ್ದವು.

ಹರಪನಹಳ್ಳಿಯವರು ಚಿತ್ರದುರ್ಗದ ಪಾಳೆಯಗಾರರೊಂದಿಗೆ ಆರಂಭದಲ್ಲಿ ಉತ್ತಮ ಸಂಬಂಧವನ್ನು ಹೊಂದಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಹರಪನಹಳ್ಳಿ ದಾದನಾಯಕ ದುರ್ಗದ ತಿಮ್ಮಣ್ಣನಾಯಕರ ಮಗಳಾದ

ಹೊನ್ನವ್ವನಾಗತಿಯನ್ನು ಮದುವೆಯಾಗಿದ್ದನು.[೧] ಮತ್ತಿ ತಿಮ್ಮಣ್ಣನಾಯಕರ ಸಾವಿನ ನಂತರ ಕಸ್ತೂರಿರಂಗಪ್ಪ ನಾಯಕನಿಗೂ ದಾದನಾಯಕನಿಗೂ ರಾಜಕೀಯ ಕಾರಣದಿಂದಾಗಿ ವೈಮನಸ್ಸಾಗಿ ಇಬ್ಬರ ಮಧ್ಯೆ ಕದನ ಆರಂಭವಾಯಿತು. ಕ್ರಿ.ಶ. ೧೬೫೭ ರಲ್ಲಿ ಇವರಿಬ್ಬರ ಗಡಿಪ್ರದೇಶದ ವಿಷಯದಲ್ಲಿ ಅಣಜಿ ಕೋಟೆಯ ಸಂಬಂಧವಾಗಿ ಆರಂಭವಾದ ಕದನ[೭] ಮುಂದೆ ಕ್ರಿ.ಶ. ೧೭೪೮ ರ ಮಾಯಕೊಂಡ ಯುದ್ಧದಲ್ಲಿ ಹಿರೇ ಮದಕರಿನಾಯಕನ ಸಾವಿನೊಂದಿಗೆ ಯುದ್ಧಗಳು ಕೊನೆಗೊಂಡವು. ಈ ನಡುವೆ ಸುಮಾರು ೨೦೦ ವರ್ಷಗಳ ಕಾಲಾವಧಿಯಲ್ಲಿ ಚಿತ್ರದುರ್ಗ ಹಾಗೂ ಹರಪನಹಳ್ಳಿ ಪಾಳೆಯಗಾರರಿಗೆ ಹತ್ತು ಬಾರಿ ವಿವಿದೆಡೆ ಘೋರ ಯುದ್ಧಗಳು ನಡೆದಿವೆ. ಚಿತ್ರದುರ್ಗದಂಥಹ ದೊಡ್ಡ ಸಂಸ್ಥಾನದ ವಿರುದ್ಧ ಹರಪನಹಳ್ಳಿಯವರು ಅವರ ಸರಿಸಮಾನವಾಗಿ ನಿಂತು ಹೋರಾಡಿದ್ದು ಇತಿಹಾಸದಲ್ಲಿ ಅಳಿಸಲಾಗದ ದಾಖಲೆಯಾಗಿದೆ. ಇಂಥ ಬಲಾಢ್ಯ ಸಂಸ್ಥಾನಕ್ಕೆ ಹತ್ತಾರು ಸೈನಿಕ ನೆಲೆಗಳಿದ್ದವು. ಇವುಗಳ ಕೇಂದ್ರಸ್ಥಾನ ಹರಪನಹಳ್ಳಿ. ಹಾಗಾಗಿ ಹರಪನಹಳ್ಳಿಯಲ್ಲಿ ಭದ್ರವಾದ ಕೋಟೆಯೊಂದನ್ನು ಕಟ್ಟಿಕೊಂಡಿದ್ದರು.

ಕೋಟೆ ನಿರ್ಮಾಣದ ಕಾಲ

ಕೋಟೆಯ ಕಾಲವನ್ನು ನಿರ್ಣಯಿಸುವುದು ತುಂಬಾ ಕಷ್ಟದ ಕೆಲಸ, ಕಾರಣ ಆಧಾರಗಳ ಕೊರತೆ. ಕೆಳದಿನೃಪವಿಜಯದಲ್ಲಿ ಹರಪನಹಳ್ಳಿಯ ಕೋಟೆಯ ಉಲ್ಲೇಖಗಳು ಈ ಕೆಳಗಿನಂತಿವೆ :

ಆದಿಯೊಳು ವುಚ್ಚಂಗಿಯೆಂಬ ಸ್ಥಳ
ದೊಳಿರ್ದು ಆನಂತರಂ ಹರಿಹರ
ತಿನಾಮ ಹರಪನಹಳ್ಳಿಯೆಂಬ ಕೋಂಟೆ
ಯಂ ಬಲಿಸಿ ಆ ಕೋಟೆ ಯೊಳಿರ್ದು
ರಾಜ್ಯಂಗೆದ್ದ ದಾದಾನಯಾಕ, ರಂಗರಾಜರು
ಹಿರಿಯ ಬಸಂತನಾಯಕ ಕೊಟ್ಟೂರಪ್ಪನಾಯಕ ಎಂದಿದೆ.[೮]

ಅಂದರೆ ಈ ಪಾಳೆಯಗಾರರು ಮೊದಲು ಉಚ್ಚಂಗಿ ಎಂಬ ಸ್ಥಳದಲ್ಲಿ ಇದ್ದು, ನಂತರ ಹರಪನಹಳ್ಳಿ ಎಂಬ ಕೋಟೆಯನ್ನು ಭದ್ರಪಡಿಸಿಕೊಂಡು, ಅಲ್ಲಿಯೇ ಇದ್ದು ರಾಜ್ಯಭಾರ ಮಾಡಿದರೆಂಬ ವಿಷಯವು ತಿಳಿದುಬರುತ್ತದೆ.

ಮೊದಲು ಬಾಗಳಿಯಲ್ಲಿ ನೆಲೆನಿಂತಿದ್ದ ದಾದಾನಾಯಕ ಒಂದು ದಿನ ನೀಲಗುಂದಕ್ಕೆ ಹೋಗುವ ದಾರಿಯಲ್ಲಿ ದಟ್ಟ ಅಡವಿಯಲ್ಲಿ ಬೇಟೆಯನ್ನು ಆಡುವಾಗ ಒಂದು ಸ್ಥಳದಲ್ಲಿ ಕೆಲವು ಮೊಲಗಳನ್ನು ಕಂಡು ಅವುಗಳ

ಬೇಟೆಯಾಡಲು ನಾಯಿಗಳನ್ನು ಬಿಟ್ಟನು. ಆ ಮೊಲಗಳು ನಾಯಿಗಳಿಗೆ ತಿರುಗಿಬಿದ್ದು ನಾಯಿಗಳನ್ನೆ ಅಟ್ಟಿಸಿಕೊಂಡು ಬಂದುದನ್ನು ಕಂಡು ಆಶ್ಚರ್ಯಚಕಿತರಾಗಿ ಇದು ಯಾವ ಜಾತಿಯ ಮೊಲವಿರಬಹುದೆಂದು ನೋಡಲಿಚ್ಛಿಸಿ ಧಾವಿಸಿ ಬಂದರು. ಆ ಮೊಲಗಳು ಇವರು ನೋಡುತ್ತಿದ ಹಾಗೆಯೇ ಒಂದು ಹುತ್ತದಲ್ಲಿ ಪ್ರವೇಶ ಮಾಡಿದವು. ಕಿರಾತ ಸೇನೆಯು ಆ ಹುತ್ತವನ್ನು ಬಗಿಯಲಾರಂಭಿಸಿತು. ಆ ಹುತ್ತದಲ್ಲಿ ಒಂದು ಶಿಲಾಮಯವಾದ ಹನುಮಂತ ದೇವರ ಪ್ರತಿಮೆಯು ಕಾಣಿಸಿತು. ಇದನ್ನು ನೋಡಿ ಇದು ಗಂಡುಮೆಟ್ಟಿನ ಭೂಮಿಯೆಂದು ಅರಿತು ಅಲ್ಲೇ ರಾಜ್ಯ ಸ್ಥಾಪಿಸಿ, ಕೋಟೆ ಕಟ್ಟಿಕೊಂಡರು. ಇದೇ ಹರಪನಹಳ್ಳಿ ಎಂಬುದಾಗಿ ದಂತಕಥೆ ಹೇಳುತ್ತದೆ.[೫] ಈ ರೀತಿಯ ಕಥೆಗಳು ಚಿತ್ರದುರ್ಗ, ವಿಜಯನಗರದ ಮೂಲವನ್ನು ಹುಡುಕುವಾಗಲೂ ಕಂಡುಬರುತ್ತವೆ.

ಪ್ರಾಚೀನ ಯುಗದ ಕೊನೆ ಹಾಗೂ ಮಧ್ಯಯುಗದ ಆರಂಭದ ಕಾಲಗಳ ಸಂಧಿಕಾಲದಲ್ಲಿ ಈ ಕೋಟೆ ನಿರ್ಮಾಣವಾಗಿದೆ ಎಂದು ಡಾ. ಎಸ್.ಕೆ. ಜೋಶಿಯವರು ಅಭಿಪ್ರಾಯ ಪಡುವರು.[೬] ದಾದನಾಯಕನು ಕ್ರಿ.ಶ. ೧೫೫೮ರಲ್ಲಿ ಹರಪನಹಳ್ಳಿಯಲ್ಲಿ ಪಾಳೆಯಗಾರಿಕೆ ಸ್ಥಾಪಿಸಿದ. ಈತನೇ ಅಲ್ಲಿ ಕೋಟೆ ಕಟ್ಟಿಸಿದನೆಂಬುದು ಸದಾಶಿವಪ್ಪನವರ ಅಭಿಪ್ರಾಯವಾಗಿದೆ.[೭]

ಈ ಮೇಲಿನ ಹೇಳಿಕೆಗಳನ್ನು ಗಮನಿಸಿದಾಗ ಕೆಳದಿನೃಪವಿಜಯದಲ್ಲಿ ಉಲ್ಲೇಖಗೊಂಡಂತೆ ಮೊದಲು ಉಚ್ಚಂಗಿದುರ್ಗ ನಂತರ ಹರಪನಹಳ್ಳಿಯ ಪಾಳೆಯಗಾರರು ಕೋಟೆಗಳನ್ನು ನಿರ್ಮಿಸಿಕೊಂಡಿರುವುದನ್ನು ಒಪ್ಪಬಹುದಾಗಿದೆ.

ಕೋಟೆಯ ಲಕ್ಷಣಗಳು

ಇಂದಿನ ಹರಪನಹಳ್ಳಿ ಪಟ್ಟಣದ ನೈರುತ್ಯ ದಿಕ್ಕಿಗೆ ಪಾಳೆಯಗಾರರ ಕೋಟೆಯನ್ನು ಕಾಣಬಹುದು. ಇದು ನೆಲದುರ್ಗವಾಗಿದ್ದು, ಶುಕ್ರನೀತಿಸಾರದಲ್ಲಿ ಪ್ರಸ್ತಾಪಿಸಲಾದ ಪ್ರಕಾರಗಳಲ್ಲಿ 'ಪರಿಘ'ಕ್ಕೆ ಸೇರುತ್ತದೆ.

ಪಾಳೆಯಗಾರರ ಕೋಟೆ ಪಾಳುಬಿದ್ದರೂ ಕೋಟೆಯಲ್ಲಿಯ ಜನರು ಮಾತ್ರ ೧೯೧೬ - ೨೦ ರ ವರೆಗೂ ಅಲ್ಲಿಯೇ ವಾಸಿಸುತ್ತಿದ್ದು, ಕೊನೆಗೆ ಸಂಪೂರ್ಣವಾಗಿ ಬಿಟ್ಟ ನಂತರ ಕೋಟೆಯು ನೆಲಸಮವಾಯಿತು. ಆದರೆ ಸುತ್ತಲೂ ಗೋಡೆ, ಬುರುಜು ಬಾಗಿಲು ಮತ್ತು ಹೆಬ್ಬಾಗಿಲುಗಳು ಪಾಳೆಯಗಾರರ ಕುರುಹುಗಳಾಗಿ ನಿಂತೇ ಇದ್ದವು. ಕೊನೆಗೆ ರಾಜಕೀಯ ಸಂತಸ್ತರಿಗೆ ಅರ್ಧ ಕೋಟೆಯನ್ನು ದಯಪಾಲಿಸಿದರು. ಆಗಲೇ ಕೋಟೆಯ ಎಲ್ಲಾ ಭಾಗಗಳನ್ನು ಹೊಡೆದು ಹಾಕಿದರು. ಅವರುಗಳಿಗೆ ಸಾಕಷ್ಟು ಧನ-ಕನಕಾದಿಗಳು ದೊರೆತವೆಂದು ಮತ್ತು ಈ ಕೋಟೆ ನಾಶವಾದುದಕ್ಕೆ ಬೇರೆ ಕಾರಣಗಳನ್ನು ಕಲ್ಪಿಸಿಕೊಂಡು ಚಿಂತಿಸುವುದಕ್ಕಿಂತ ಅದರ ಭೋಗವು ತೀರಿಹೋದುದರಿಂದ ನಿರ್ನಾಮವಾಯಿತ್ತೆಂದು ಸ್ಥಳೀಯರು ಪ್ರತಿಕ್ರಿಯಿಸುತ್ತಾರೆ.

ಸಮತಟ್ಟಾದ ಸುಮಾರು ೩೦ ಎಕರೆ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಿದೆ. ಇದರ ಸುತ್ತಲೂ ಕಡಿದಾದ ಕಂದಕಗಳಿದ್ದವು. ಕೋಟೆಗೆ ಮಧ್ಯಮ ಗಾತ್ರದ ಕಲ್ಲು ಹಾಗು ಮಣ್ಣನ್ನು ಬಳಸಲಾಗಿದೆ. ಕೋಟೆ ಆಂಜನೇಯನ ಗುಡಿಯ ಬಳಿ ಇರುವುದೇ ಮುಖ್ಯ ಪ್ರವೇಶದ್ವಾರ. ಈಗ ಯಾವುದೇ ಅವಶೇಷಗಳು ಉಳಿದಿಲ್ಲ. ಸಾಮಾನ್ಯವಾಗಿ ಆಂಜನೇಯನ ದೇವಾಲಯಗಳು ಕೋಟೆಯ ಪ್ರವೇಶದ್ವಾರದ ಬಳಿಯೇ ಇರುತ್ತವೆ.



ಕೊತ್ತಳ

ಈ ಕೋಟೆಯನ್ನು ಸ್ಥಳೀಯರು ಎರಡು ಸುತ್ತಿನಕೋಟೆ ಎಂದು ಕರೆಯುತ್ತಾರೆ. ಇದಕ್ಕೆ ಪೂರಕವೆಂಬಂತೆ ಆ ಕೋಟೆ ಸುತ್ತುಗಳಿಗೆ ಇಟ್ಟಿರುವ ಹೆಸರುಗಳು ಇಂದಿಗೂ ರೂಢಿಯಲ್ಲಿವೆ. ಒಂದನೆಯದು ಹೊನ್ನವ್ವ ನಾಗತಿಯದ್ದಾದರೆ, ಎರಡನೆಯದು ಸಂಜೀವನಾಯಕನದು. ಹೊನ್ನವ್ವನಾಗತಿ ಹರಪನಹಳ್ಳಿಯ ಮೊದಲ ಪಾಳೆಯಗಾರನಾದ ದಾದಯ್ಯನಾಯಕನ ಪ್ರೀತಿಯ ಪತ್ನಿ. ಈಕೆ ಚಿತ್ರದುರ್ಗದ ತಿಮ್ಮಣ್ಣನಾಯಕನ ಮಗಳು. ಯುದ್ಧದಲ್ಲಿ ಸಹಾಯ ಮಾಡಿದ್ದಕ್ಕಾಗಿ ತಿಮ್ಮಣ್ಣನಾಯಕ ಮಗಳನ್ನು ದಾದಾನಾಯಕನಿಗೆ ಕೊಟ್ಟು ಮದುವೆ ಮಾಡಿದ್ದ. ಇವಳ ಆಕಾಲಿಕ ಮರಣ ಇವನಿಗೆ ತುಂಬಾಲಾರದ ಮಾನಸಿಕ ನಷ್ಟವಾಯಿತು. ಹಾಗಾಗಿ ಕೋಟೆಯ ಮೊದಲ ಸುತ್ತಿಗೆ ದಾದಯ್ಯನಾಯಕ ಅವಳ ಹೆಸರನ್ನೆ ಇಟ್ಟನೆಂಬುದು ಪ್ರತೀತಿ.

ಸಂಜೀವನಾಯಕ ಹರಪನಹಳ್ಳಿ ಸಂಸ್ಥಾನದ ಸೋಮಶೇಖರ ನಾಯಕನ ಸೇನೆಯಲ್ಲಿದ್ದನು. ಅರಸರ ಅಂಗರಕ್ಷಕ ಪಡೆಯ ಮುಖ್ಯಸ್ಥನು, ಪರಾಕ್ರಮಿಯು ಆದ ಸಂಜೀವನಾಯಕನು ಅನ್ಯ ಅರಸರು ಯುದ್ಧಕ್ಕೆ ಸೈನದೊಂದಿಗೆ ಬಂದು ದಾಳಿ ಮಾಡಿದಾಗ ಆ ಸೈನ್ಯದ ಮೇಲೆ ಪ್ರತಿದಾಳಿ ಮಾಡಿ ಅವರನ್ನು ಹಿಮ್ಮೆಟಿಸುತ್ತಿದ್ದನು. ಮೊದಲ ಸೋಮಶೇಖರ ನಾಯಕನು ಮಾಡಿದ ಅನೇಕ ಯುದ್ಧಗಳಲ್ಲಿ ಅವರಿಗೆ ನೆರಳಿನಂತೆ ಇದ್ದು ಯುದ್ಧಮಾಡಿ ಜಯ ಸಂಪಾದಿಸಿ ಕೊಟ್ಟಿದ್ದನು. ಸಂಜೀವನಾಯಕನು ಬೇಟೆಗಾಗಿ ಹೊರಗೆ ಹೋಗಿದ್ದ ಸಂದರ್ಭದಲ್ಲಿ ಚಿತ್ರದುರ್ಗದ ಸೈನಿಕರು ಬಂದು ಕಲ್ಲಾಗಿನ ದುರುಗವ್ವನ ಗುಡಿಯ ತಗ್ಗುಪ್ರದೇಶದಲ್ಲಿ ಅಡಗಿದ್ದು, ಸಂಜೆ ಹೊತ್ತಿಗೆ ಕೂಲಹಳ್ಳಿ



ಬಯಲಿಗೆ ಬಂದು ದಂಗೆ ಎಬ್ಬಿಸಿದರು. ಆಗ ಸಂಜೀವ ನಾಯಕನ ಮಡದಿ ವೀರಗಚ್ಚೆ ಹಾಕಿ ಶತ್ರು ಸೈನ್ಯವನ್ನು ಎದುರಿಸಿದಳು. ಅವಳ ಜೊತೆಯಲ್ಲಿ ಕೆಲ ಮಹಿಳಾ ವೀರಮಾತೆಯರೂ ಇದ್ದರು. ಈ ಯುದ್ಧದಲ್ಲಿ ಸಂಜೀವನಾಯಕನ ಮಡದಿ ಸಾವನ್ನಪ್ಪಿದಳು. ಬೇಟೆಯಿಂದ ಹಿಂದಿರುಗಿದ ಸಂಜೀವನಾಯಕ ತನ್ನ ಫೌಜುನೊಂದಿಗೆ ಯುದ್ಧ ಆರಂಭಿಸಿ ಹೋರಾಟ ಮಾಡಿ ಶತ್ರು ಸೇನೆಯನ್ನು ಹೊಡೆದು ಹಿಂದಕ್ಕೆ ಅಟ್ಟಿದನು. ಮಡದಿಯ ಮೃತದೇಹವನ್ನು ಲೆಕ್ಕಿಸದೇ ಯುದ್ಧ ಮಾಡಿದ ವೀರಾಗ್ರಣಿ. ಹಾಗಾಗಿ ಈ ಸಂಜೀವ ನಾಯಕನ ಹೆಸರನ್ನು ಈ ಕೋಟೆಯ ಎರಡನೆಯ ಸುತ್ತಿಗೆ ಇಡಲಾಯಿತೆಂಬುದು ಇಲ್ಲಿಯ ಜನರಲ್ಲಿರುವ ನಂಬಿಕೆ.

ಪ್ರಸ್ತುತ ಅರಕಲು - ಮುರುಕಲು ಗೋಡೆಯ ಅವಶೇಷಗಳು ಮಾತ್ರ ಅಲ್ಲಲ್ಲಿ ಗೋಚರಿಸುತ್ತವೆ. ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಕೊತ್ತಳವಿರುವುದು ಇನ್ನುಳಿದ ಕೊತ್ತಳಗಳು ಸಂಪೂರ್ಣ ನಾಶವಾಗಿವೆ. ಕೋಟೆಯ ಮಧ್ಯಭಾಗದಲ್ಲಿ ವಿಶಾಲವಾದ ಬಯಲಿದೆ. ಇಲ್ಲಿ ಸೈನಿಕರಿಗೆ ತರಬೇತಿ ನೀಡಲಾಗುತ್ತಿತ್ತೆಂದು, ಹಾಗೂ ಇಲ್ಲಿಂದ ಪಶ್ಚಿಮಕ್ಕೆ ಸೈನಿಕರ ವಸತಿಗಳಿದ್ದವೆಂದು ಸ್ಥಳೀಯ ಮೂಲಗಳು ತಿಳಿಸುತ್ತವೆ. ಇದಕ್ಕೆ ಪೂರಕವೆಂಬಂತೆ ವಸತಿಗೃಹಗಳ ತಳಪಾಯಗಳು ಇಲ್ಲಿ ಕಂಡುಬಂದಿವೆ. ಇತ್ತೀಚಿಗೆ ಇದರ ಪಕ್ಕದಲ್ಲಿ ಪದವಿ ಕಾಲೇಜನ್ನು ಕಟ್ಟಲಾಗಿದೆ.

ಡಾ. ಎಸ್.ಕೆ. ಜೋಶಿಯವರು "ಈ ಕೋಟೆಯ ವಿನ್ಯಾಸ, ರಚನಾ ಕ್ರಮ ಹಾಗೂ ಅವಶ್ಯಕತೆಗಳಲ್ಲಿ ಹಿಂದೂ ಪದ್ಧತಿಯಿದ್ದು ಇದನ್ನು ಹಿಂದೂ ವಾಸ್ತುಕೋಟೆ ಎಂದಿದ್ದಾರೆ."[೮] ಈ ಕೋಟೆಯಲ್ಲಿ ಉಳಿದಿರುವ ಏಕೈಕ ಪಾಳೆಯಗಾರರ ವಾಸ್ತುಕೃತಿ ಎಂದರೆ ಆಂಜನೇಯ ದೇವಾಲಯ. ಇದು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಇಂದಿಗೂ ಕೂಡ ಕೋಟೆ ಆಂಜನೇಯನೆಂದೇ ಆರಾಧನೆಗೊಳ್ಳುತ್ತಿದೆ. ಇಲ್ಲಿ ಪ್ರತಿವರ್ಷ ದೊಡ್ಡ ಪ್ರಮಾಣದಲ್ಲಿ ಜಾತ್ರೆ ಜರುಗುತ್ತದೆ.

ಟಿಪ್ಪಣಿಗಳು

೧. ಪುಟ್ಟಣ್ಣ, ಎಂ.ಎಸ್. ೧೯೨೪. *ಚಿತ್ರದುರ್ಗದ ಪಾಳೆಯಗಾರರು*, ಪು. ೧೭. ಬೆಂಗಳೂರು
೨. *ಅದೇ*, ಪು. ೨೭
೩. *ಅದೇ*, ಪು. ೪೯೪.
೪. ಶಾಮಶಾಸ್ತ್ರಿ, ಆರ್. (ಸಂ), ೧೯೭೩. ಕೆಳದಿನೃಪವಿಜಯ (ಲಿಂಗಣ್ಣ ಕವಿ). ಮೈಸೂರು : ಮೈಸೂರು ವಿಶ್ವವಿದ್ಯಾಲಯ
೫. ಗೋವಿಂದಚಾರ್ಯ ಚಿಕ್ಕರೂರ. ಅಪ್ರಕಟಿತ ಹಸ್ತಪ್ರತಿ
೬. ಜೋಶಿ, ಎಸ್.ಕೆ, ೨೦೦೦. ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, *ಸೂರ್ಯಕೀರ್ತಿ* (ಸಂ: ಕೃಷ್ಣಮೂರ್ತಿ ಪಿ.ವಿ, ಮತ್ತು ಕೆ. ವಸಂತಲಕ್ಷ್ಮಿ), ಪು. ೧೪೮-೫೧. ಬೆಂಗಳೂರು : ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ
೭. ಸದಾಶಿವಪ್ಪ, ಕುಂ.ಬಾ. ೧೯೯೬. *ಹರಪನಹಳ್ಳಿ ಪಾಳೆಯಗಾರರು*, ಪು. ೧೩. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು
೮. *ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ*, ಪೂರ್ವೋಕ್ತ, ಪು. ೧೪೮-೫೧

೯.೫ ಹಲುವಾಗಿಲು

ಹರಪನಹಳ್ಳಿ ತಾಲೂಕಿನಲ್ಲಿರುವ ಈ ಗ್ರಾಮವು ಹರಪನಹಳ್ಳಿಯಿಂದ ನೈರುತ್ಯಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಮಾನವನ ಆವಾಸಸ್ಥಾನವಾದ ಹಲುವಾಗಿಲನ್ನು ಕಲ್ಯಾಣ ಚಾಳುಕ್ಯರು, ಯಾದವರು, ವಿಜಯನಗರದ ಅರಸರು, ಹರಪನಹಳ್ಳಿ ಪಾಳೆಯಗಾರರು ಇಲ್ಲಿ ಆಳ್ವಿಕೆ ನಡೆಸಿದಂತೆ ಶಾಸನ ಹಾಗೂ ಸಾಹಿತ್ಯಾಧಾರಗಳು ದೃಢಪಡಿಸುತ್ತವೆ.

ನೊಳಂಬವಾಡಿ ೩೨ ಸಾವಿರ ಕದಂಬಳಿಕೆ ಸಾವಿರ ಕೋಗಳಿ ಐದುನೂರು ಇದರಲ್ಲಿ ಉಚ್ಚಂಗಿ ೩೦ ಸೇರುತ್ತದೆ. ಉಚ್ಚಂಗಿ ಮುವತ್ತರಲ್ಲಿ ಹಲುಬಾಗಿಲು - ೧೨ ಒಂದು. ಈ ಹಲುಬಾಗಿಲು ಗ್ರಾಮವು ಉಚ್ಚಂಗಿ ಮುವತ್ತರ ಪಟ್ಟಣಕ್ಕೆ ಪ್ರವೇಶದ್ವಾರವಾಗಿತ್ತು. ಹಲುವಾಗಿಲು ಬಳಿಯ ತುಂಗಭದ್ರಾ ನದಿಯ ದಂಡೆಯಲ್ಲಿ ಕಟ್ಟಿದ ಪ್ರವೇಶದ್ವಾರವಾಗಿತ್ತು. ಹಲುವಾಗಿಲು ಬಳಿಯ ತುಂಗಭದ್ರಾ ನದಿಯ ದಂಡೆಯಲ್ಲಿ ಕಟ್ಟಿದ ಪ್ರವೇಶದ್ವಾರಕ್ಕೆ ಆನೆಯ ದಂತಗಳಿಂದ ಕೊರೆದು ಮಾಡಿದ ಬಾಗಿಲುಗಳಿದ್ದ ಕಾರಣದಿಂದಲೇ ಸಂಸ್ಕೃತ ಭಾಷೆಯಲ್ಲಿ ಈ ಹಳ್ಳಿಗೆ ದಂತದ್ವಾರವೆಂದು ಹೆಸರಿಟ್ಟರು. ಅದೇ ಹಲುವಾಗಿಲು ಎಂಬುದಾಗಿ ಚಿಕ್ಕೇರೂರು ಗೋವಿಂದಚಾರ್ಯರು ಪ್ರಸ್ತಾಪಿಸಿರುವರು.[೧]

ಈ ಗ್ರಾಮದ ವಾಯುವ್ಯ ದಿಕ್ಕಿಗೆ ತುಂಗಭದ್ರಾ ನದಿ ಇದೆ. ಈ ನದಿಗೆ ಹೊಂದಿಕೊಂಡು ಪೂರ್ವಕ್ಕೆ ಹಬ್ಬಿರುವ ಪರ್ವತದ ಸಾಲು ಇದೆ. ಈ ಪರ್ವತದ ಸಾಲಿನಲ್ಲಿಯೇ ಕೋಟೆ ಕಂಡುಬರುತ್ತದೆ. ಪೂರ್ವ ಪಶ್ಚಿಮವಾಗಿ ಹಬ್ಬಿರುವ ಈ ಬೆಟ್ಟವನ್ನು ಬಳಸಿಕೊಂಡು ಕೋಟೆ ನಿರ್ಮಿಸಲಾಗಿದೆ. ಪಶ್ಚಿಮ ದಿಕ್ಕಿಗೆ ನದಿ ಹರಿಯುವುದರಿಂದ ಶತ್ರುಗಳಿಗೆ ಈ ಕೋಟೆ ತಲುಪಲು ಕಷ್ಟಸಾಧ್ಯ. ಬೆಟ್ಟದ ದಕ್ಷಿಣ ಹಾಗೂ ಉತ್ತರ ಭಾಗಗಳಲ್ಲಿ ಅಲ್ಲಲ್ಲಿ ಕೋಟೆ ಗೋಡೆ ಕಂಡುಬರುತ್ತದೆ. ಒಳಭಾಗದಲ್ಲಿ ಕೊತ್ತಳಗಳಿದ್ದ ಅವಶೇಷಗಳಿವೆ. ಪ್ರಾಯಶಃ ಹಲುವಾಗಿಲು ಗ್ರಾಮದ ದಕ್ಷಿಣಕ್ಕಿರುವುದರಿಂದ ಕೋಟೆ ದ್ವಾರವೂ ಸಹ ಈ ಭಾಗಕ್ಕೆ ಇದ್ದಿರಬಹುದು. ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಈ ಕೋಟೆಯನ್ನು ಮಧ್ಯಮಗಾತ್ರದ ಕಣಶಿಲೆಯಿಂದ ಕಟ್ಟಲಾಗಿದೆ. ಕ್ರಿ.ಶ. ೧೩ನೆಯ ಶತಮಾನದ ವೀರಗಲ್ಲಿನಲ್ಲಿ ಹಲುವಾಗಿಲ ಬಡಗಮಟ್ಟಿ ಪುಣೋಜನು ಕದಿರು ಮಿಡಿಯ ಕಾಳಗದಲ್ಲಿ ಸತ್ತ ಉಲ್ಲೇಖವಿದೆ.[೨] ಬಡಗ ಎಂದರೆ = ಉತ್ತರ. ಮಟ್ಟಿ ಎಂದರೆ = ಎತ್ತರ, ದಿನ್ನೆ ಪ್ರದೇಶವೆಂದು ಅರ್ಥವಾಗುತ್ತದೆ. ಅಂದರೆ ಹಲುವಾಗಿಲು ಕೋಟೆ ಪ್ರದೇಶವನ್ನು ಈ ವೀರಗಲ್ಲು ಗುರುತಿಸುತ್ತದೆ. ಯಾದವ ರಾಮಚಂದ್ರರಾಯನು ಹೊಯ್ಸಳರ ರಾಜ್ಯವನ್ನು ಗೆದ್ದು ಮುಸ್ಲಿಂರಿಂದ ಈ ಭೂಮಿಯನ್ನು ಕಾಪಾಡಿದಂತೆ ಇಲ್ಲಿಯ ಕಲ್ಲೇಶ್ವರ ದೇವಾಲಯದ ಶಾಸನವು ತಿಳಿಸುತ್ತದೆ.[೩] ಯಾದವ ರಾಮಚಂದ್ರರಾಯನ ಈ ರಾಜ್ಯದಲ್ಲಿ ರಕ್ಷಣೆಗಾಗಿ ಹೋರಾಡಿ ಪ್ರಾಣತೆತ್ತ ಸೆಜೆಯ ಮಲ್ಲಯ್ಯನನ್ನು

ಉಲ್ಲೇಖಿಸುವ ವೀರಗಲ್ಲು ಕಲ್ಲೇಶ್ವರ ದೇವಾಲಯದ ಬಳಿ ಇದೆ.[೪] ಶಾಸನಗಳನ್ನು ಗಮನಿಸಲಾಗಿ ಇಲ್ಲಿಯ ಕೋಟೆ ೧೨ ರಿಂದ ೧೩ನೇ ಶತಮಾನದಲ್ಲಿಯೇ ಅಸ್ತಿತ್ವದಲ್ಲಿರುವಬಹುದಾದ್ದು ಎಂದು ತಿಳಿದುಬರುತ್ತದೆ. ಕೋಟೆಯ ಮುಂದಣ ಪ್ರದೇಶ ಯುದ್ಧಭೂಮಿಯಾಗಿತ್ತು. ಏಕೆಂದರೆ, ಸ್ಥಳವು ವಿಶಾಲವಾಗಿದ್ದು, ಈ ನೆಲದಲ್ಲಿ ಮಾನವನ ಅಸ್ಥಿಪಂಜರಗಳು ಕಂಡುಬಂದಿವೆ. ಸದ್ಯ ಕೋಟೆ ಶಿಥಿಲಾವಸ್ಥೆಯನ್ನು ತಲುಪಿದೆ. ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣವಾಗಿದ್ದರೆ ಬೆಟ್ಟದ ಮೇಲಿರುವದರಿಂದ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಎರಡನೆಯದಾಗಿ ವಿಜಯನಗರ ಪೂರ್ವದ ಕೋಟೆಗಳಾದ ದೊರವಾರಿ ಹಾಗೂ ಹೊಸಮಲೆದುರ್ಗಗಳು ಹಲುವಾಗಿಲು ಕೋಟೆಯ ಅವಸ್ಥೆಯನ್ನೇ ತಲುಪಿವೆ. ಈ ಎಲ್ಲಾ ಕಾರಣಗಳಿಂದಾಗಿ ಯಾದವ ರಾಮಚಂದ್ರರಾಯನು ಹೊಯ್ಸಳರನ್ನು ಸೋಲಿಸಿ, ತನ್ನ ರಾಜ್ಯವನ್ನು ಹಲುವಾಗಿಲುವರೆಗೆ ವಿಸ್ತರಿಸಿದನು. ತನ್ನ ಅವಧಿಯಲ್ಲಿ ಶತ್ರುಗಳಿಂದ ರಾಜ್ಯದ ಗಡಿಯನ್ನು ರಕ್ಷಿಸಲು ಹಲುವಾಗಿಲು ಕೋಟೆ ನಿರ್ಮಾಣ ಮಾಡಿರಬಹುದು.

ಕೋಟೆಯ ದಕ್ಷಿಣದ ಭೂಭಾಗದಲ್ಲಿ ನೂತನ ಶಿಲಾಯುಗದ ಅವಶೇಷಗಳು ದೊರೆತಿರುವುದರಿಂದ ಇಲ್ಲಿಯ ಪ್ರಾಚೀನತೆಯ ಅರಿವಾಗುತ್ತದೆ. ಇತ್ತೀಚಿಗೆ ಕ್ರಿ.ಶ. ೮ನೆಯ ಶತಮಾನದ ಶಾಸನವೂ ಈ ಪ್ರದೇಶದಲ್ಲೇ ದೊರೆತಿದೆ.[೫] ಗ್ರಾಮದಲ್ಲಿ ಕಲ್ಲೇಶ್ವರ ಮತ್ತು ಆಂಜನೇಯ ದೇವಾಲಯಗಳಿವೆ. ಕಲ್ಲೇಶ್ವರ ದೇವಾಲಯವು ಕಲ್ಯಾಣ ಚಾಳುಕ್ಯರ ಕಾಲದ್ದು. ಈ ದೇವಾಲಯಕ್ಕೆ ೧೩ನೇ ಶತಮಾನದಲ್ಲಿ ಇಲ್ಲಿ ಆಳ್ವಿಕೆ ನಡೆಸಿದ ಯಾದವ ರಾಮಚಂದ್ರರಾಯನ ಅಧಿಪತ್ಯದಲ್ಲಿ ನಾಚರಸನು ಈ ದೇವಾಲಯಕ್ಕೆ ದಾನ ಬಿಟ್ಟಂತೆ ತಿಳಿಸುತ್ತದೆ.[೬] ವಿಜಯನಗರದ ಬುಕ್ಕರಾಯನ ಶಾಸನವು ಈ ಗ್ರಾಮದ ಆಂಜನೇಯ ದೇವಾಲಯದ ಬಳಿ ಇದೆ.[೭] ಕೋಟೆಯು ಸಂಪೂರ್ಣ ನಾಶವಾಗಿರುವುದರಿಂದ ಪತ್ತೆಹಚ್ಚುವುದು ಕಷ್ಟಕರವಾಗಿದೆ. ಹೀಗಾಗಿ ಇದು ಐತಿಹಾಸಿಕ ಮಹತ್ವದ ಸ್ಥಳ ಎಂಬುದು ಸ್ಪಷ್ಟ.

ಟಿಪ್ಪಣಿಗಳು

೧. ಗೋವಿಂದಚಾರ್ಯ ಚಿಕ್ಕರೂರು. ಅಪ್ರಕಟಿತ ಹಸ್ತಪ್ರತಿ
೨. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೫೨೩. ಹಂಪಿ : ಕನ್ನಡ ವಿಶ್ವವಿದ್ಯಾಲಯ
೩. ಅದೇ, ಪು. ೫೧೯
೪. ಅದೇ, ಪು. ೫೧೭
೫. ಅದೇ, ಪು. ೫೧೯
೬. ಅದೇ, ಪು. ೫೨೧
೭. ಅದೇ, ಪು. ೫೨೨

೧೦

ಹೊಸಪೇಟೆ ತಾಲೂಕಿನ ಕೋಟೆಗಳು

(Forts of Hospet Taluk)

೧೦

ಹೊಸಪೇಟೆ ತಾಲೂಕಿನ ಕೋಟೆಗಳು

(Forts of Hospet Taluku)

ಹೊಸಪೇಟೆ ನಗರ ಬಳ್ಳಾರಿ ಜಿಲ್ಲೆಯ ತಾಲ್ಲೂಕು ಹಾಗೂ ಉಪವಿಭಾಗ ಕೇಂದ್ರವಾಗಿದೆ. ಇದು ಬಳ್ಳಾರಿಯಿಂದ ಪಶ್ಚಿಮ ದಿಕ್ಕಿಗೆ ೬೪ ಕಿ.ಮೀ. ದೂರದಲ್ಲಿದೆ. ನೀರಾವರಿ, ಕೃಷಿ ಮತ್ತು ಕೈಗಾರಿಕೆ ಸಂಪನ್ಮೂಲ ಹೊಂದಿರುವ ಈ ಪರಿಸರವು ನಗರದ ನಿರಂತರ ಬೆಳವಣಿಗೆಗೆ ಕಾರಣವಾಗಿದೆ.

ಈಗಿನ ಹೊಸಪೇಟೆ ನಗರವು ವಿಜಯನಗರ ಕಾಲದಲ್ಲಿ ಎಂದರೆ ಸುಮಾರು ನಾಲ್ಕುನೂರು ವರ್ಷಗಳಿಗಿಂತಲೂ ಪೂರ್ವದಲ್ಲಿ (ಕ್ರಿ.ಶ. ೧೫೬೫ ಕ್ಕೂ ಮೊದಲು) ಇದ್ದಂತೆ ಇಲ್ಲವಾದರೂ, ಅದು ಕಾಲಕಾಲಕ್ಕೆ ಬದಲಾದ ಪರಿಸ್ಥಿತಿಗಳಿಗನುಗುಣವಾಗಿ ಅನೇಕ ಮಾರ್ಪಾಟುಗಳಿಗೆ ಗುರಿಯಾದುದಾಗಿದೆ. ಆದುದರಿಂದ ಅದರ ಪೂರ್ವದ ವಿವರಣೆಗಳನ್ನು ಈಗ ಕೊಡುವುದು ಅಸಾಧ್ಯ. ಆದರೂ ಈಗ ಸಣ್ಣಕ್ಕಿ ವೀರಭದ್ರದೇವರ ಗುಡಿಯ ಆವರಣದಲ್ಲಿ,[೧] ಇಂದಿರಾನಗರ ಬಡಾವಣೆಯ,[೨] ಅಮರಾವತಿಯ ಪೂಜಾರಿ ಹನುಮಂತಪ್ಪನವರ ಹಿತ್ತಲಿನಲ್ಲಿ,[೩] ಹಾಗೂ ಸಂಡೂರು ರಸ್ತೆ ಹತ್ತಿರ ಸಹಾಯಕ ಆಯುಕ್ತರ ಕಚೇರಿ ಆವರಣದಲ್ಲಿ [೪] ಕಂಡುಬರುವ ಶಾಸನಗಳ ಪ್ರಕಾರ ಈ ಪ್ರದೇಶವು ತಿರುಮಲದೇವಿ ಪಟ್ಟಣವೆಂದು ಪ್ರಸಿದ್ಧಿಯಾಗಿತ್ತು.[೫] ತಿರುಮಲಾದೇವಿಯು ಕೃಷ್ಣಾದೇವರಾಯನ ಇಬ್ಬರು ಪಟ್ಟದರಸಿಯರಲ್ಲಿ ಒಬ್ಬಳಾಗಿದ್ದಳೆಂಬುದು ಅನೇಕ ಶಾಸನಗಳಿಂದ ಮತ್ತು ತಿರುಪತಿಯ ಬೆಟ್ಟದ ಮೇಲೆ ವೆಂಕಟೇಶ್ವರ ಸ್ವಾಮಿಯ ಎದುರಿನಲ್ಲಿ ಸ್ಥಾಪಿತವಾಗಿರುವ ಕೃಷ್ಣದೇವರಾಯ ಮತ್ತು ಆತನ ಪಟ್ಟದರಸಿಯರ ಕಂಚಿನ ಪ್ರತಿಮೆಗಳಿಂದ ವೇದ್ಯವಾಗುತ್ತದೆ.

ತಿರುಮಲಾದೇವಿ ಅಮ್ಮನವರ ಪಟ್ಟಣದಲ್ಲಿದ್ದ ಸಣ್ಣಕ್ಕಿ ವೀರಭದ್ರದೇವರ ಗುಡಿಯ ಪರಿಸರಕ್ಕೆ ಸಣ್ಣಕ್ಕಿ ಪೇಟೆ ಎಂಬ ಹೆಸರಿರುವುದು ಈಗಲೂ ಜನರ ವಾಡಿಕೆಯಲ್ಲಿದೆ. ಅಂದರೆ ವ್ಯಾಪಾರಿಪೇಟೆ ಪ್ರದೇಶವಾಗಿದ್ದಿತೆಂದಾಯಿತು ಮತ್ತು ಇಲ್ಲಿಯ ಶಾಸನದ ದಾನಿಗಳು ವ್ಯಾಪಾರಿ ಬಣಕ್ಕೆ ಸೇರಿದ ಶೆಟ್ಟಿ ಪಟ್ಟಣದ ಸ್ವಾಮಿಗಳು, ಎಂದರೆ ಬಣಜಿಗರು. ಮತ್ತೊಂದು ಗಣನೀಯ ವಿಷಯವೆಂದರೆ ಗೌರೀಶ್ವರ ಎಂಬ ಹೆಸರಿನ ಈಶ್ವರ ದೇವರು ಶೆಟ್ಟಿ ಬಣಜಿಗರ ಕುಲದೇವತೆ.[೬] (ಕನ್ನಿಕಾಪರಮೇಶ್ವರಿಯು ವೈಶ್ಯರ ಕುಲದೇವತೆಯಾಗಿರುವಂತೆ ಗೌರೀಶ್ವರನೆಂಬ ದೇವರು ಶೆಟ್ಟಿ ಬಣಜಿಗರ ಕುಲದೇವತೆಯಾಗಿದ್ದ ವಿಷಯವು ಅನೇಕ ಶಾಸನಗಳಿಂದ ಮತ್ತು ಗ್ರಂಥಗಳಿಂದ ತಿಳಿದುಬರುತ್ತದೆ) ಪ್ರಾಯಶ: ಈಗಿನ ವೀರಭದ್ರದೇವರ ದೇಗುಲವು ಗೌರೀಶ್ವರ ದೇವಸ್ಥಾನವಾಗಿದ್ದಿರಬೇಕು ಮತ್ತು ಇಲ್ಲಿಯ ವೀರಭದ್ರದೇವರ ಮೂರ್ತಿ ಆನಂತರದಲ್ಲಿ ಸ್ಥಾಪನೆಯಾಗಿರಬಹುದು.

ವಿಜಯನಗರ ಪತನಾನಂತರ ಈ ಭಾಗವು ಹಾಳುಬಿದ್ದು ಜನವಸತಿಯು ಕ್ರಮೇಣ ಕಡಿಮೆಯಾಗುತ್ತಾ ಬಂದು[೭] ಸ್ವಲ್ಪ ಸ್ಥಳಾಂತರವಾಗಿರಲೂ ಸಾಕು. ಒಂದು ತಲೆಮಾರು ಹಿಂದಿನ ಇಲ್ಲಿಯ ಜನರನ್ನು ಕೇಳಿದರೆ ಈ ಭಾಗದಲ್ಲಿ ಕೋಟೆ-ಕೊತ್ತಲಗಳಿದ್ದುದನ್ನು ತಿಳಿಸುತ್ತಾರೆ. ಅದೆಲ್ಲವೂ ಹಾಳಾದನಂತರ ಜನವಸತಿ[೮] ಸ್ವಲ್ಪ ಸ್ಥಳಾಂತರಗೊಂಡು ಅದೇ ಇಂದಿನ ಹೊಸಪೇಟೆಯಾಗಿರಬೇಕು.

ನೈಜವಾಗಿ ಹೊಸಪೇಟೆ ಚಾರಿತ್ರಿಕ ಮಹತ್ವ ಕಳಚೂರಿ ಬಿಜ್ಜಳದೇವನ ಕಾಲದಿಂದ ಅಥವಾ ಅದಕ್ಕೂ ಪೂರ್ವದಿಂದ ಪ್ರಾರಂಭವಾಗುತ್ತದೆ. ಸುಮಾರು ೧೨ ನೆಯ ಶತಮಾನಕ್ಕೆ ಸೇರುವ ಒಡೆದ ಶಾಸನವು,[೯] ಜೈನ ತೀರ್ಥಂಕರನ ಶಿಲ್ಪಗಳು ಸಣ್ಣಕ್ಕಿ ವೀರಭದ್ರ ದೇಗುಲದ ಹಿಂಭಾಗದಲ್ಲಿವೆ.

ಇನ್ನು ಈ ತಾಲ್ಲೂಕಿನ ಇತಿಹಾಸದ ಕುರಹುಗಳು ಬಹು ಹಿಂದಕ್ಕೆ ಹೋಗುತ್ತವೆ. ಇಂದಿಗೆ ಒಂದು ಲಕ್ಷದಿಂದ ನಾಲ್ಕು ಲಕ್ಷ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತ್ತೆಂದು ಹೇಳಲಾಗುವ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ಕೈಗೊಡಲಿ ಹೆರೆಗತ್ತಿ, ಮಚ್ಚುಗತ್ತಿಗಳು ಈ ತಾಲ್ಲೂಕಿನ ಕಮಲಾಪುರ[೧೦] ಹಾಗೂ ಗಾದಿಗನೂರುಗಳಲ್ಲಿ[೧೧] ಕಂಡುಬಂದಿವೆ. ಸುಮಾರು ೨೫೦೦ ವರ್ಷದಿಂದ ೧೦,೦೦೦ ವರ್ಷಗಳಷ್ಟು ಪೂರ್ವದ್ದೆನ್ನುವ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಚರ್ಟ್ ಶಿಲೆಯಲ್ಲಿ ರೂಪಿಸಲಾಗಿರುವ ಉಪಕರಣಗಳು ಕಾರಿಗನೂರು[೧೨] ಗಾದಿಗನೂರು[೧೩] ತಿಮ್ಮಲಾಪುರ[೧೪] ದಾನಾಪುರ[೧೫] ಭುವನಹಳ್ಳಿ[೧೬] ಗಳಲ್ಲಿ ಕಂಡುಬರುತ್ತವೆ. ಸುಮಾರು ಕ್ರಿ.ಪೂ. ೨೪೦೦ ರಿಂದ ೧೦೦೦ ವರ್ಷಗಳಷ್ಟು ಹಳೆಯದಾದ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳು ಇಂಗಳಗಿ, ಕಾಕಬಾಳು, ಗಾದಿಗನೂರು, ತಿಮ್ಮಲಾಪುರ, ದಾನಾಪುರ, ಬೆಳಗೋಡುಹಾಳ್, ವೆಂಕಟಾಪುರಗಳಲ್ಲಿ ಕಂಡುಬರುತ್ತವೆ.[೧೭] ಶಿಲಾ ತಾಮ್ರಯುಗ ಕಾಲದ ನೆಲೆಗಳು ಹಂಪಿ, ಹಳಕಂಡಿ, ವೆಂಕಟಾಪುರ, ಬೆಳಗಲ್ಲು, ಬೆಳಗೋಡಹಾಳು, ನಿಂಬಾಪುರ,

ಗುಡಿ ಓಬಳಾಪುರಗಳಲ್ಲಿ ಕಂಡುಬಂದಿವೆ.[೧೮] ಮಹಾಕಾವ್ಯಗಳಲ್ಲಿ ಒಂದಾದ ರಾಮಾಯಣದ ಕಿಷ್ಕಿಂಧ ಕಾಂಡದಲ್ಲಿ ಈ ಪ್ರದೇಶದ ಉಲ್ಲೇಖಗಳು ಬರುತ್ತವೆ. ಮುಂದೆ ಚಾರಿತ್ರಿಕಯುಗವಾದ ಮೌರ್ಯರು, ಶಾತವಾಹನರ, ಆಡಳಿತಕ್ಕೂ ಈ ಪ್ರದೇಶ ಒಳಪಟ್ಟು ನಂತರ ಕಾಲದಲ್ಲಿ ಕದಂಬರು, ಬಾದಾಮಿ ಚಾಳುಕ್ಯರು, ಗಂಗರು, ರಾಷ್ಟ್ರಕೂಟರ ಗಡಿಸೀಮೆಯಾಗಿತ್ತೆಂಬುದು ಗಮನಾರ್ಹ ಅಂಶ.[೧೯]

ಕ್ರಿ.ಶ. ೧೦೨೨ ರ ನಂತರ ನೊಳಂಬವಾಡಿ ೩೨೦೦೦ ಚಾಳುಕ್ಯರ ಆಡಳಿತಕ್ಕೆ ಒಳಪಟ್ಟಿದ್ದಿತು. ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಅವರ ಪ್ರಾದೇಶಿಕ ರಾಜಧಾನಿಯಾಯಿತು. ಜಗದೇಕಮಲ್ಲ ನೊಳಂಬ ಪಲ್ಲವನು ಈ ಪ್ರದೇಶವನ್ನು ಆಳಿದನು. ಅವನು ಮತ್ತು ಅವನ ಉತ್ತರಾಧಿಕಾರಿಗಳು ಚಾಳುಕ್ಯ ರಾಜರೆಂದು ಕರೆದುಕೊಂಡರು. ಕ್ರಿ.ಶ. ೧೦೫೭ ರಲ್ಲಿ ನೊಳಂಬವಾಡಿ ೩೨೦೦೦ ಮೊದಲ ಸೋಮೇಶ್ವರ ಮತ್ತು ಆರನೇ ವಿಕ್ರಮಾದಿತ್ಯರ ಕಾಲದಲ್ಲಿ ಚಾಳುಕ್ಯರ ನೇರ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿತು. ಆರನೇ ವಿಕ್ರಮಾದಿತ್ಯನ ಪರವಾಗಿ ಮಹಾಮಂಡಳೇಶ್ವರ ಪಾಂಡ್ಯದೇವ (ಕ್ರಿ.ಶ.ಸು. ೧೧೨೧-೨೨) ಈ ಪ್ರದೇಶವನ್ನು ಆಳುತ್ತಿದ್ದನು. ಈ ಮಹಾಮಂಡಳೇಶ್ವರನ ಆಡಳಿತಕ್ಕೆ ಮೊದಲು ಕ್ರಿ.ಶ. ೧೦೬೪ ರಲ್ಲಿ ಆರನೇ ವಿಕ್ರಮಾದಿತ್ಯನ ಸೋದರ ವಿಷ್ಣುವರ್ಧನ ವಿಜಯಾದಿತ್ಯ ಈ ಪ್ರದೇಶದ ರಾಜ್ಯಪಾಲನಾಗಿದ್ದನು. ಅನಂತರ ಕ್ರಿ.ಶ. ೧೦೬೧ ರಲ್ಲಿ ನೊಳಂಬರ ಹೆಸರಿನಿಂದ ಎರಡನೇ ಸೋಮೇಶ್ವರ ಅಥವಾ ಭುವನೈಕ್ಯಮಲ್ಲನ ಅಧೀನದಲ್ಲಿ ಜಯಸಿಂಗದೇವನೆಂಬುವನು ಆಳಿದನು. ಕ್ರಿ.ಶ. ೧೦೫೭ ರಿಂದ ನೊಳಂಬವಾಡಿ ಚಾಳುಕ್ಯ ರಾಜರ ನೇರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಅವರು ತಮ್ಮ ಕುಟುಂಬದ ಸದಸ್ಯರನ್ನು ರಾಜಧಾನಿ ಕಂಪ್ಲಿಯಲ್ಲಿ ರಾಜಪ್ರತಿನಿಧಿಗಳಾಗಿ ನೇಮಿಸಿದರು. ಬಹುಶ: ಆಗಲೇ ಕಂಪ್ಲಿಯಲ್ಲಿ ಅವರು ಕೋಟೆ ಕಟ್ಟಿಕೊಂಡಿರಬೇಕು. ನಂತರ ಈ ಕಂಪ್ಲಿಯು ಕುಮ್ಮಟದುರ್ಗದ ಮುಮ್ಮಡಿ ಸಿಂಗೇನಾಯಕ, ಕಂಪಿಲರಾಯ ಹಾಗೂ ಕುಮಾರರಾಮನ ಆಡಳಿತ ಕ್ಷೇತ್ರವಾಗಿ ಮಾರ್ಪಟ್ಟಿತು. ವಿಜಯನಗರ ಸ್ಥಾಪನೆಯ ನಂತರ ಕ್ರಿ.ಶ. ೧೩೩೬ ರಿಂದ ೧೫೬೫ ರವರೆಗೆ ಸಂಗಮ, ಸಾಳ್ವ, ತುಳು ಮತ್ತು ಅರವೀಡು ವಂಶಗಳು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದವು. ಈ ಅವಧಿಯಲ್ಲಿ ಸಾವಿರಾರು ದೇಗುಲಗಳು, ಕೆರೆ-ಬಾವಿಗಳು, ಕೋಟೆ-ಕೊತ್ತಲಗಳು ಸ್ಥಾಪನೆಗೊಂಡವು.

ಇವುಗಳಲ್ಲಿ ಈಗ ಅಸ್ತಿತ್ವದಲ್ಲಿರುವ ಕೋಟೆಗಳೆಂದರೆ ಕಂಪ್ಲಿ, ಹೊಸಪೇಟೆ, ಹಂಪಿ, ಕಮಲಾಪುರ, ಪಾಪನಾಯಕನಹಳ್ಳಿ, ರಾಮಸಾಗರ. ಇವುಗಳಲ್ಲಿ ಪ್ರಾಚೀನವಾದ ಕೋಟೆ ಎಂದರೆ ಕಂಪ್ಲಿಯದು. ವಿಸ್ತಾರದಲ್ಲಿ ಹಂಪಿ ಕೋಟೆಯು ಬಹುದೊಡ್ಡದು.

ವಿಜಯನಗರ ಸೈನ್ಯದಲ್ಲಿ ಅಧಿಕಾರಿಗಳಾಗಿದ್ದವರು, ಸೇನಾ ಪ್ರಮುಖರಿಗೆ ಕೆಲವು ಗ್ರಾಮಗಳನ್ನು ವಿಜಯನಗರದ ಅರಸರು ದತ್ತಿ ನೀಡಿದ್ದರು. ಅಂಥವುಗಳಲ್ಲಿ ಕೊಂಡನಾಯಕನಹಳ್ಳಿ, ಕಮಲಾಪುರ

ಮುಂತಾದವುಗಳಿವೆ. ಇದಕ್ಕೆ ಪೂರಕವೆಂಬಂತೆ ಈ ಗ್ರಾಮಗಳಲ್ಲಿ ಬೃಹದಾಕಾರದ ಕೊತ್ತಳಗಳಿವೆ. ಇವು ಗ್ರಾಮ ರಕ್ಷಣೆಗೆ ಕೇಂದ್ರಬಿಂದುವಾಗಿದ್ದವು.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೧೩೮. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೨. *ಅದೇ*, ಪು. ೧೪೦

೩. ಕೊಟ್ರೇಶ್, ಎಂ. ೧೯೯೯. ವಿಜಯನಗರ ಕಾಲದ ಶಾಸನ ಶೋಧ, *ವಿಜಯನಗರ ಅಧ್ಯಯನ ಸಂಪುಟ* - ೪.ಪು. ೬೮

೪. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೧೪೪

೫. ಕೊಟ್ರೇಶ್, ಎಂ. ೧೯೯೯. ಪೂರ್ವೋಕ್ತ, ಪು. ೬೯

೬. ಕೊಟ್ರಯ್ಯ, ಸಿ.ಟಿ.ಯಂ. ೧೯೯೭. ಹೊಸಪೇಟೆ ಚಾರಿತ್ರಿಕ ವಿವೇಚನೆ : ಐತಿಹ್ಯ : ಪರಿಶೀಲನೆ, *ಹೊಸಪೇಟೆ ನಗರ ಚಾರಿತ್ರಿಕ ವಿವೇಚನೆ*, ಪು. ೬. ಹೊಸಪೇಟೆ : ಶರಣರ ಸುವಾಸಿನಿ ಬಳಗ

೭. ಸದಾನಂದ ಕನವಳ್ಳಿ. (ಅನುವಾದ), ೧೯೯೨. *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ*, ಪು. ೧೬೨. ಹಂಪಿ : ಕನ್ನಡ ವಿಶ್ವವಿದ್ಯಾಲಯ

೮. ಸೂರ್ಯನಾಥ, ಯು.ಕಾಮತ್. (ಸಂ), ೧೯೮೪. *ಕರ್ನಾಟಕ ರಾಜ್ಯ ಗ್ಯಾಸೆಟಿಯರ್* ೩. ಪು. ೪೮೬

೯. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೧೩೯

೧೦. ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕದ ಪುರಾತತ್ವ ನೆಲೆಗಳು*, ಪು. ೩೬೮. ಹಂಪಿ : ಕನ್ನಡ ವಿಶ್ವವಿದ್ಯಾಲಯ

೧೧. *ಅದೇ*, ಪು. ೩೬೯

೧೨. *ಅದೇ*, ಪು. ೩೬೯

೧೩. *ಅದೇ*, ಪು. ೩೬೯

೧೪. *ಅದೇ*, ಪು. ೩೭೦

೧೫. *ಅದೇ*, ಪು. ೩೭೧

೧೬. *ಅದೇ*, ಪು. ೩೭೧

೧೭. *ಅದೇ*, ಪು. ೩೭೨

೧೮. *ಅದೇ*, ಪು. ೩೭೨

೧೯. ಕೊಟ್ರಯ್ಯ, ಸಿ.ಟಿ.ಯಂ. ೧೯೯೭. ಪೂರ್ವೋಕ್ತ. ಪು. ೧೦

೧೦.೧ ಕಂಪ್ಲಿ

ಕಂಪ್ಲಿಯು ಹೊಸಪೇಟೆ ತಾಲ್ಲೂಕಿಗೆ ಸೇರಿದ ಒಂದು ಪಟ್ಟಣಪ್ರದೇಶ. ಹೊಸಪೇಟೆಯಿಂದ ನೈರುತ್ಯದಿಕ್ಕಿಗೆ ೩೩ ಕಿ.ಮೀ. ದೂರದ ಗಂಗಾವತಿ ಮಾರ್ಗದಲ್ಲಿ ತುಂಗ - ಭದ್ರಾ ನದಿಯ ದಂಡೆಯ ಮೇಲಿದೆ. ಕೃಷಿ ವ್ಯಾಪಾರದಿಂದ ಸಮೃದ್ಧವಾಗಿರುವ ಕಂಪ್ಲಿಯು, ಹತ್ತಾರು ಅಕ್ಕಿ ಗಿರಣಿಗಳನ್ನು ತನ್ನೊಡಲಿನಲ್ಲಿ ಇಟ್ಟುಕೊಂಡು ವಿಸ್ತೃತವಾಗಿ ಬೆಳೆದಿದೆ. ಇದು ಪ್ರಸ್ತುತ ಪರಿಸ್ಥಿತಿಯಾದರೆ, ಪ್ರಾಚೀನದಲ್ಲಿ ನೊಳಂಬರ ನೊಳಂಬವಾಡಿ ೩೨೦೦೦ ಕ್ಕೆ ಹಿಂದೆ ರಾಜಧಾನಿಯಾಗಿತ್ತು. ಕಂಪ್ಲಿ ಪಟ್ಟಣವು ಹಳೇ - ಹೊಸ ಊರುಗಳನ್ನು ಸೇರಿಕೊಂಡಿದೆ. ಹಳೇ ಊರಿನಲ್ಲಿ ಕೋಟೆ ಇರುವುದು.

ಇತಿಹಾಸ

ಕ್ರಿ.ಶ. ೧೦೬೨ ರ ಹೂವಿನ ಹಡಗಲಿಯ ಪಾಂಡುರಂಗ ದೇವಾಲಯದ ಆವರಣದಲ್ಲಿರುವ ಶಾಸನದಿಂದ ತಿಳಿದುಬರುವಂತೆ,[೧] ಕಲ್ಯಾಣದಲ್ಲಿ ತ್ರೈಲೋಕ್ಯ ಮಲ್ಲದೇವನು (ಒಂದನೆಯ ಸೋಮೇಶ್ವರ) ಆಳುತ್ತಿರುವಾಗ ಆತನ ಮಗ ವಿಜಯಾದಿತ್ಯನು ನೊಳಂಬವಾಡಿ ೩೨೦೦೦ ವನ್ನು ಕಂಪಿಲಿಯಿಂದ ಆಳುತ್ತಿದ್ದನು. ನೊಳಂಬವಾಡಿ - ೩೨೦೦೦ ದಕ್ಷಿಣಭಾಗದ ಬಹುದೊಡ್ಡ ಪ್ರಾಂತ. ಇದು ಕರ್ನಾಟಕದ ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಹಾಸನ, ಬಳ್ಳಾರಿ ಜಿಲ್ಲೆಗಳು, ಆಂಧ್ರದ ಅನಂತಪುರ, ಚಿತ್ತೂರು ಜಿಲ್ಲೆಗಳು, ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಧರ್ಮಾಪುರಿ ಜಿಲ್ಲೆಗಳನ್ನು ಒಳಗೊಂಡ ವಿಶಾಲ ಪ್ರಾಂತವಾಗಿತ್ತು.[೨] ಈ ಪ್ರಾಂತಕ್ಕೆ ''ಕಂಪಲಿ'' ರಾಜಧಾನಿ. ಕಲ್ಯಾಣ ಚಾಳುಕ್ಯರ ನಂತರ ಈ ಪ್ರದೇಶ ಹೊಯ್ಸಳರ ವಶಕ್ಕೆ ಹೋಯಿತು. ಹೊಯ್ಸಳ ವಿಷ್ಣುವರ್ಧನನು ಕಂಪಲಿ ಕೋಟೆಯನ್ನು ಗೆದ್ದಿದನು.[೩] ಇವರ ನಂತರ ಸೇವುಣರು ಇಲ್ಲಿ ರಾಜ್ಯಭಾರ ಮಾಡಿದಂತೆ ಕ್ರಿ.ಶ. ೧೧೮೦ ರ ಶಾಸನವು ತಿಳಿಸುತ್ತದೆ.[೪] ಸೇವುಣರ ರಾಮಚಂದ್ರನ ಸೇನಾಧಿಪತಿ ಚಾವುಂಡರಸನು ಮುಮ್ಮಡಿ ಸಿಂಗೇನಾಯಕನಿಂದ ಕೊಲ್ಲಲ್ಪಟ್ಟನು. ಆಗ ಕಂಪಲಿರಾಜ್ಯವು ಮುಮ್ಮಡಿ ಸಿಂಗೇನಾಯಕನಿಗೆ ಸೇರಿತ್ತು. ಕುಮ್ಮಟದುರ್ಗವು ಮುಮ್ಮಡಿಸಿಂಗನ ರಾಜಧಾನಿಯಾದರೂ ಕಂಪಲಿಯು ಇವರ ವಶದಲ್ಲಿದ್ದ ಒಂದು ಮುಖ್ಯಸ್ಥಳ. ಕಂಪಲಿಯು ಎಂದೂ ಕುಮ್ಮಟದರಸರ ರಾಜಧಾನಿಯಾಗಿರಲಿಲ್ಲ. ಆದರೂ ಇವರು ಕಂಪಲಿಯ ಅರಸರೆಂದು ಗುರುತಿಸಲ್ಪಟ್ಟರು. ಇದಕ್ಕೆ ಕಾರಣ ಇಲ್ಲದಿಲ್ಲ. ಮುಮ್ಮಡಿ ಸಿಂಗನಿಗೆ ಮಕ್ಕಳಿಲ್ಲವಾದ್ದರಿಂದ ಕಂಪಲಿಯ ಸೋಮೇಶ್ವರನಿಗೆ ಮರೆಹೋದನು. ಈ ದೈವಾನುಗ್ರಹದಿಂದಾಗಿ ಮುಮ್ಮಡಿ ಸಿಂಗನಿಗೆ ಗಂಡು ಸಂತಾನವಾಯಿತು. ಕಂಪಲಿದೇವರ ವರಪ್ರಸಾದದಿಂದಾಗಿ ಹುಟ್ಟಿದ್ದಕ್ಕಾಗಿ ಈ ಮಗುವಿಗೆ ಕಂಪಲಿರಾಯ, ಖಂಡೇರಾಯ ಎಂಬುದಾಗಿ ಕರೆದಿವೆ.[೫] ಕಂಪಿಲನ ಮತ್ತೊಂದು ಹೆಸರು ಖಂಡೇರಾಯ ಈ ಎರಡೂ ಹೆಸರುಗಳು ಕಂಪಿಲ ಸೋಮೇಶ್ವರನಿಗೆ

ಸಂಬಂಧಿಸಿದಂತೆ ಕಂಡುಬರುತ್ತದೆ. ಈ ಪಟ್ಟಣದ ಮುಖ್ಯ ದೇವರಾದ ಸೋಮೇಶ್ವರನನ್ನು ಕಂಪಿಲದೇವ ಹಾಗೂ ಖಡ್ಗವನ್ನು ಹಿಡಿದು ರೌದ್ರಭಾವವನ್ನು ವ್ಯಕ್ತಪಡಿಸುವ ಇವನನ್ನು ಖಂಡೇರಾಯ ಎಂದು ಕರೆದಿರಬಹುದು. ಅದೇನೆ ಇದ್ದರು ಕಂಪಿಲರಾಯ ಮತ್ತು ಅವನ ಪುತ್ರ ಕುಮಾರರಾಮರು ಕಂಪಿಲಿಯನ್ನು ಆಳಿದರು.


ಕ್ರಿ.ಶ. ೧೩೧೩ ರಲ್ಲಿ ದೆಹಲಿ ಸುಲ್ತಾನರು ದೇವಗಿರಿ-ವಾರಂಗಲ್‌ಗಳನ್ನು ನೋಡಿಕೊಳ್ಳಲು ರಾಜ್ಯಪಾಲರನ್ನು ನೇಮಿಸಿದ್ದರು. ಆಗ ಕಂಪಲಿಯು ಸೇವುಣ ಹಾಗೂ ಹೊಯ್ಸಳರ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಶ. ೧೩೧೪ - ೧೫ ರಲ್ಲಿ ಮಲ್ಲಿಕಾಫರನು ಕಂಪಲಿಯ ವಿರುದ್ಧ ದಾಳಿಮಾಡಿದನು. ಅದರಲ್ಲಿ ಅವನಿಗೆ ಜಯ ದೊರಕಲಿಲ್ಲ. ಮಹಮ್ಮದ್ ಬಿನ್ -ತುಘಲಕ್ ನ ಸಹೋದರ ಸಂಬಂಧಿ ಬಹುದ್ದೀನ್ - ಗುರುಶಾಪ್ ಗುಲ್ಬರ್ಗಾದ ಬಳಿ ಇರುವ ಸಾಗರದ ರಾಜ್ಯಪಾಲನಾಗಿದ್ದನು. ಅವನು ಕಂಪಲಿಯ ಮೇಲೆ ಎರಡು ಭಾರಿ ದಾಳಿಮಾಡಿದನು. ಆದರೂ ಅವನಿಗೆ ಜಯ ದೊರಕಲಿಲ್ಲ. ಮೂರನೆಯದಾಳಿ ಮಲ್ಲಿಕಾ ಜಾದಾನಿಂದ ಜರುಗಿ ಕ್ರಿ.ಶ. ೧೩೨೭ ರಲ್ಲಿ, ಕಂಪಲಿರಾಯನು ಸೋತು ಸೆರೆಯಾದನು. ಕಂಪಿಲಿನ ಪುತ್ರ ಕುಮಾರರಾಮನು ಘೋರ ಕದನ ಮಾಡಿ ಕೊನೆಗೂ ಸೋಲುಂಡನು. ಇವರ ವೀರ ಹೋರಾಟದ ಸಾಹಸಗಾಥೆಯು ಕಂಪಲಿ ಜನತೆಯ ಮನೆ ಮಾತಾಗಿದೆ.

ಇವರ ನಂತರ ಕಂಪಲಿಯು ವಿಜಯನಗರ ಆಡಳಿತಕ್ಕೆ ಒಳಪಟ್ಟಿತು. ಈ ಅವಧಿಯಲ್ಲಿ ಕಂಪಲಿ ಪ್ರಮುಖ ಪಟ್ಟಣ ಕೇಂದ್ರವಾಗಿತ್ತೆಂಬುದು ಕ್ರಿ.ಶ. ೧೬೧೯ ರ ವೆಂಕಟಪತಿ ದೇವರಾಯನ ಶಾಸನದಿಂದ ತಿಳಿದುಬರುತ್ತದೆ.[೬] ಅದರಲ್ಲಿ ಕಂಪಲಿ ಪೇಟೆಯ ನರಸಿಂಹ ಮತ್ತು ಕೆಲವು ದೇವಾಲಯಗಳಿಗೆ ದಾರಿಯನ್ನು ನಿಗದಿಪಡಿಸಿದಂತೆ ತಿಳಿಯುವುದು. ಕಂಪ್ಲಿಯಲ್ಲಿ ವಿಜಯನಗರದ ಅರಸರು ದೇವಾಲಯಗಳನ್ನು ಕಟ್ಟಿಸಿ ಅವುಗಳಿಗೆ ದಾನ ನೀಡಿದಂತೆಯೂ ಬಹುತೇಕ ಶಾಸನಗಳಲ್ಲಿ ಕಂಡುಬರುತ್ತದೆ.[೬] ನಂತರ ಕ್ರಮವಾಗಿ ಕಂಪಲಿಯು ಪಾಳೆಯಗಾರರ ಹಾಗೂ ಬ್ರಿಟಿಷರ ವಶವಾಯಿತು.

ಕೋಟೆಯ ಲಕ್ಷಣಗಳು

ಕಂಪ್ಲಿಯ ಹಳೇಗ್ರಾಮವಿರುವುದು ಈ ಕೋಟೆಯೊಳಗೆ. ಇದು ಸುಮಾರು ೨೫ ಎಕರೆ ಪ್ರದೇಶವನ್ನು ಆವರಿಸಿದೆ. ಉತ್ತರಕ್ಕೆ ತುಂಗಾಭದ್ರಾನದಿ ಸುತ್ತುವರೆದಿರುವುದರಿಂದ ಭಾಗಶಃ ಜಲದುರ್ಗವಾಗಿದೆ. ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಿಗೆ ಆಳವಾದ ಕಂದಕವಿದೆ. ನದಿಯ ನೀರನ್ನು ಈ ಕಂದರಕ್ಕೆ ಹರಿಸುತ್ತಿದ್ದರು. ಶತ್ರುಗಳು ಈ ಕಂದಕವನ್ನು ದಾಟ ಬರದಂತೆ ಮೊಸಳೆಗಳನ್ನು ಬಿಡಲಾಗುತ್ತಿತ್ತು. ಕೋಟೆಗೆ ಪೂರ್ವದಿಕ್ಕಿನಿಂದ ಪ್ರವೇಶವಿದ್ದು, ಈ ಪ್ರವೇಶದ್ವಾರವು ಸುಮಾರು ೨೦ ಅಡಿ ಅಗಲ, ೩೦ ಅಡಿ ಎತ್ತರವಾಗಿದೆ. ಮೇಲ್ಭಾಗದಲ್ಲಿ ಕಮಾನು, ಹಾಗೂ ಸಾಲಾಗಿ ಬಂದೂಕು ಕಿಂಡಿಗಳಿವೆ. ಗೋಡೆಯ ತುದಿಭಾಗದಲ್ಲಿ ಕೋಟೆ ತೆನೆಗಳು ಹಾಗೂ

ತೋರಣದ ಅಲಂಕರಣೆ ಮಾಡಲಾಗಿದೆ. ಈ ಹೆಬ್ಬಾಗಿಲನ್ನು ಮುಚ್ಚಿದಾಗ ದಿನನಿತ್ಯದ ಚಟುವಟಿಕೆಗಳಿಗಾಗಿ ಕೋಟೆಯೊಳಗಿನ ಜನ ಹೊರಗೆ ಬಂದುಹೋಗಲು ಅನುಕೂಲವಾಗುವಂತೆ ಉಪಬಾಗಿಲನ್ನು ನಿರ್ಮಿಸಲಾಗಿದೆ. ಹೆಬ್ಬಾಗಿಲ ಮುಂಭಾಗದಲ್ಲಿ ಕೋಟೆ ಆಂಜನೇಯ ಹಾಗೂ ಬನ್ನಿಮಹಾಂಕಾಳಿಯ ದೇಗುಲಗಳಿದ್ದರೆ ಹೆಬ್ಬಾಗಿಲ ಒಳಬದಿಗೆ ಕಿಲ್ಲಾ ಮತ್ತು ದಿಡ್ಡಿ ಆಂಜನೇಯನ ಗುಡಿಗಳಿವೆ.



ಕೋಟೆಯ ಬಾಗಿಲು

ಕೋಟೆಯು ವೃತ್ತಾಕಾರವಾಗಿದ್ದು, ಇದರ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಿದ್ದಾರೆ. ಪ್ರಸ್ತುತ ೯ ಕೊತ್ತಳಗಳು ಮಾತ್ರ ಗೋಚರಿಸುತ್ತವೆ. ಕೊತ್ತಳಗಳು ವೃತ್ತಾಕಾರವಾಗಿದ್ದು, ಸುಮಾರು ೨೦ ಅಡಿ ಎತ್ತರ ಹಾಗೂ ಬಂದೂಕು ಕಿಂಡಿಗಳನ್ನು ಹೊಂದಿವೆ. ಪ್ರತಿ ಕೊತ್ತಳದಲ್ಲಿಯು ಕಲ್ಲುಗುಂಡನಿಟ್ಟು ಆರಾಧಿಸುತ್ತಾರೆ. ಇವುಗಳಿಗೆ ದ್ಯಾಮವ್ವ, ತಾಯಮ್ಮ, ಗಂಗಮ್ಮನ ಕಬನದ ವೀರಣ್ಣ ನಾಗರಕಟ್ಟೆ ಕೊತ್ತಳಗಳೆಂದು ಜನ ಗುರುತಿಸುತ್ತಾರೆ.



ಕೋಟೆಯ ಬಾಗಿಲ ಒಳಬದಿ





ಆಳವಾದ ತಳಪಾಯವನ್ನು ಹಾಕಿ, ಮಧ್ಯಮ ಹಾಗೂ ಚಿಕ್ಕಗಾತ್ರದ ಕಣಶಿಲೆ, ಗಚ್ಚು - ಗಾರೆ ಸುಣ್ಣವನ್ನು ಬಳಸಿ ಈ ಕೋಟೆಯನ್ನು ಕಟ್ಟಲಾಗಿದೆ.

ಕೋಟೆಯ ನಿರ್ಮಾಣ

ರಾಜಕೀಯವಾಗಿ ಬಹಳ ಮಹತ್ವದ ಸ್ಥಾನ ಪಡೆದುಕೊಂಡಿದ್ದ ಕಂಪಲಿಯು ಸೇವುಣರು, ಕಾಕತೀಯರು ಹಾಗೂ ಹೊಯ್ಸಳರು ಇವರ ಪೈಪೋಟಿಯ ತ್ರಿಕೋಣದ ಮಧ್ಯೆ ತಡೆ - ರಾಜ್ಯ (Buffer State) ಆಗಿ ಇದ್ದು ತನ್ನದೆ ಸ್ವಂತಿಕೆಯನ್ನು ಪ್ರತ್ಯೇಕತೆಯನ್ನು ಉಳಿಸಿ ಬೆಳೆಸಿಕೊಳ್ಳಲು ಸಮರ್ಥವಾದುದು.

ನೈಸರ್ಗಿಕವಾಗಿ ಸಮೃದ್ಧವಾಗಿ ತುಂಬಿಹರಿಯುವ ತುಂಗ - ಭದ್ರ ಫಲವತ್ತಾದ ಮಣ್ಣು ಇಲ್ಲಿ ಹೇರಳವಾಗಿ ದೊರೆಯುವ ಕಣಶಿಲೆ. ಹೀಗೆ ರಾಜಕೀಯ ಹಾಗೂ ನೈಸರ್ಗಿಕ ಹಿನ್ನೆಲೆಯಲ್ಲಿ ಇಲ್ಲಿ ಕೋಟೆಯನ್ನು ಕಟ್ಟಲಾಗಿರುವುದು. ಆದರೆ ಕೋಟೆ ನಿರ್ಮಾಣಗೊಂಡಿರುವ ಕಾಲಾವಧಿಯ ಬಗ್ಗೆ ಜಿಜ್ಞಾಸೆಗಳಿವೆ.

ತುಂಗ-ಭದ್ರಾ ನದೀ ತೀರದಲ್ಲಿರುವ ಕಂಪ್ಲಿಕೋಟೆಯನ್ನು ಬಳ್ಳಾರಿಯ ಒಬ್ಬ ಪಾಳೆಯಗಾರನು ಕಟ್ಟಿಸಿದನೆಂದು, ಗ್ಯಾಸಿಟಿಯರ್‌ನಲ್ಲಿ ಹೇಳಲಾಗಿದೆ.[೮] ಮುಮ್ಮಡಿ ಸಿಂಗನಾಯಕನಿಗೆ ಕಂಪಲಿಯ ಸೋಮೇಶ್ವರ ದೇವರ ವರಪ್ರಸಾದದಿಂದಾಗಿ ಹುಟ್ಟಿದ ಮಗುವಿಗೆ "ಕಂಪಿಲರಾಯ ಎಂಬ ನಾಮಕರಣ ಮಾಡಿ ಅಲ್ಲೇ ಕೋಟೆ ಕಟ್ಟಿಸಿದನೆಂದು" ಕೈಫಿಯತ್ತು ಹೇಳುತ್ತದೆ.[೯] ನೊಳಂಬವಾಡಿ ೩೨೦೦೦ ವನ್ನು ಕ್ರಿ.ಶ. ೧೦೬೪ ರಲ್ಲಿ ಚಾಳುಕ್ಯರ ವಿಜಯಾದಿತ್ಯನು ಕಂಪಲಿಯನ್ನು ಮುಖ್ಯಪಟ್ಟಣವಾಗಿಟ್ಟುಕೊಂಡು ಆಳುತ್ತಿರುವಾಗ ಹೊಯ್ಸಳರ ಶ್ರೇಷ್ಠ ಅರಸನಾದ ವಿಷ್ಣುವರ್ಧನನು ಈ ಕೋಟೆಯನ್ನು ಗೆದ್ದನೆಂದು ಅಭಿಪ್ರಾಯವಿದೆ.[೧೦] ಈ ಮೇಲಿನ ಹೇಳಿಕೆಗಳನ್ನು ಗಮನಿಸಲಾಗಿ, ನೊಳಂಬವಾಡಿ ೩೨೦೦೦ ದಂಥ ದೊಡ್ಡ ಪ್ರಾಂತಕ್ಕೆ ರಾಜಧಾನಿಯಾಗಿ ಕ್ರಿ.ಶ. ೧೧ ನೆಯ ಶತಮಾನದಲ್ಲಿಯೇ ಕಂಪಲಿಯು ಪ್ರಸಿದ್ಧಿ ಹೊಂದಿತ್ತು. ಕೈಫಿಯತ್ತಿನಲ್ಲಿ ಉಲ್ಲೇಖವಾದಂತೆ ಮುಮ್ಮಡಿ ಸಿಂಗೇನಾಯಕನು ಈಗಾಗಲೇ ಕಂಪ್ಲಿಗೆ ಅನತಿ ದೂರದಲ್ಲಿ ಕುಮ್ಮಟದುರ್ಗ ಕೋಟೆ ನಿರ್ಮಿಸಿರುವುದರಿಂದ ಇಲ್ಲಿ ಇನ್ನೊಂದು ಕೋಟೆಯ ಅವಶ್ಯಕತೆ ಇರಲಿಲ್ಲ. ಹಾಗಾಗಿ ಕ್ರಿ.ಶ. ೧೨ ನೆಯ ಶತಮಾನದ ಆರಂಭದಲ್ಲಿಯೇ ಈ ಕೋಟೆ ನಿರ್ಮಾಣವಾಗಿರಬೇಕು. ನಂತರ ಹೊಯ್ಸಳ ವಿಷ್ಣುವರ್ಧನನು ಈ ಕೋಟೆಯನ್ನು ಗೆದ್ದಿದನು. ಮುಮ್ಮಡಿಸಿಂಗ ಹಾಗೂ ಪಾಳೆಯಗಾರರು ಈ ಕೋಟೆಯನ್ನು ಜೀರ್ಣೋದ್ಧಾರ ಮಾಡಿರಬಹುದು. ಹಾಗಾಗಿ ಕೋಟೆಯು ತನ್ನ ಮೂಲರೂಪವನ್ನು ಕಳೆದುಕೊಂಡಿದೆ.

ಕೋಟೆಯಲ್ಲಿರುವ ಸ್ಮಾರಕಗಳು

ಕೋಟೆಯ ಒಳಗೆ ಹಾಗೂ ಆಸು-ಪಾಸುಗಳ ದೇಗುಲಗಳು, ವೀರಗಲ್ಲುಗಳು, ಶಾಸನಗಳು ಕಂಡುಬರುತ್ತವೆ. ಕೋಟೆ ಆಂಜನೇಯ ದೇವಾಲಯ ಕೋಟೆಯ ಹೆಬ್ಬಾಗಿಲಿನ ಮುಂಭಾಗದಲ್ಲಿದೆ. ಇದು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ, ಹಾಗೂ ತೆರೆದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ. ಗರ್ಭಗೃಹದ ಮೇಲೆ ಶಿಖರ ಹಾಗೂ ಮುಂಭಾಗದಲ್ಲಿ ಗರುಡಗಂಬವಿದೆ. ಈ ದೇವಾಲಯದ ಹಿಂಭಾಗದಲ್ಲಿ ಬನ್ನಿಮಹಾಂಕಾಳಿಯ ಚಿಕ್ಕ ದೇಗುಲವಿದೆ. ಇದರ ಹಿಂಬದಿ ಕಟ್ಟೆಗೆ ಹೊಂದಿಕೊಂಡು ಎರಡು ಅಡಿ ಎತ್ತರದ ವೀರಗಲ್ಲು ಇದೆ. ಇಲ್ಲಿ ವೀರ ಸಮಭಂಗಿಯಲ್ಲಿದ್ದು, ಎರಡು ಕೈಗಳಲ್ಲಿ ಖಡ್ಗಗಳನ್ನು ಹಿಡಿದಿದ್ದಾನೆ. ಈ ಶಿಲ್ಪಕ್ಕೆ ಕೊರಳಹಾರ, ಸೊಂಟಹಾರ, ಸೊಂಟದಲ್ಲಿ ಖಡ್ಗ, ಕೈಕಡಗ, ಕಾಲಕಡಗ, ಕಿರೀಟ ಮುಕುಟಗಳಿಂದ ಅಲಂಕರಿಸಲಾಗಿದೆ.

ಕೋಟೆಯ ಒಳ ಬದಿಗೆ ಕಿಲ್ಲಾ ಆಂಜನೇಯನ ಗುಡಿ ದಕ್ಷಿಣಾಭಿಮುಖವಾಗಿದೆ. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಆಂಜನೇಯ ಉಬ್ಬುಶಿಲ್ಪವಿದೆ.

ಕೋಟೆಯ ಪಶ್ಚಿಮಕ್ಕೆ ಪಂಪಾಪತಿ ದೇವಾಲಯವಿದೆ. ಇದು ಸುಮಾರು ೧೫ ನೆಯ ಶತಮಾನದಲ್ಲಿ ನಿರ್ಮಾಣವಾಗಿದ್ದು, ದ್ವಿಕೂಟಾಚಲವಾಗಿದೆ. ದಕ್ಷಿಣ, ಪಶ್ಚಿಮ ಭಾಗಗಳಲ್ಲಿ ಗರ್ಭಗೃಹಗಳಿದ್ದು, ಅವುಗಳಿಗೆ ಹೊಂದಿಕೊಂಡು ಸಭಾಮಂಟಪ ಮತ್ತು ಮುಖಮಂಟಪಗಳಿವೆ. ದಕ್ಷಿಣ ಗರ್ಭಗೃಹದಲ್ಲಿ ಚಿಕ್ಕ ಶಿವಲಿಂಗವಿದ್ದರೆ, ಪಶ್ಚಿಮ ಗರ್ಭಗೃಹದಲ್ಲಿ ಪಂಪಾದೇವಿಯ ಚಿಕ್ಕ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದಲ್ಲಿ ಚೌಕಾಕಾರದ ನಾಲ್ಕು ಕಂಬಗಳಲ್ಲಿ ಎರಡರಲ್ಲಿ ಕುಬ್ಜ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಗಾರೆ ಇಟ್ಟಿಗೆಯಿಂದ ನಿರ್ಮಿಸಿದ ದ್ರಾವಿಡ ಮಾದರಿಯ ತ್ರಿತಲ ಶಿಖರದಲ್ಲಿ, ಉಪಶಿಖರಗಳು, ಮುಂಭಾಗ ಶಿವ - ಪಾರ್ವತಿ, ನಾಲ್ಕೂ ಮುಖಗಳಲ್ಲಿ ಶೈವಶಿಲ್ಪಗಳು, ಮೇಲ್ಭಾಗದ ನಾಲ್ಕೂ ಮೂಲೆಗಳಲ್ಲಿ ನಂದಿ ಶಿಲ್ಪಗಳನ್ನು ಅಳವಡಿಸಲಾಗಿದೆ. ಈ ದೇವಾಲಯದ ಆವರಣಗಳಲ್ಲಿ ವಿಜಯನಗರದ ಅರಸ ಸದಾಶಿವರಾಯನ ಕ್ರಿ.ಶ. ೧೫೫೨ ರ ಶಾಸನವಿದೆ.

ಕಂಪ್ಲಿಯ ದಕ್ಷಿಣಕ್ಕೆ ಸೋಮೇಶ್ವರ ದೇವಾಲಯವಿದೆ. ಇದು ಕ್ರಿ.ಶ. ಸುಮಾರು ೧೪ ನೆಯ ಶತಮಾನದಲ್ಲಿ ನಿರ್ಮಾಣಗೊಂಡಿದೆ. ಇದಕ್ಕೆ ವಿಶಾಲವಾದ ಪ್ರಾಕಾರವಿದೆ. ಅದರೊಳಗೆ ಈ ಗುಡಿಯಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಆರು ಅಡಿ ಎತ್ತರದ ಸುಖಾಸನದಲ್ಲಿರುವ ಸೋಮೇಶ್ವರನ ವಿಗ್ರಹವಿದೆ. ಇವನ ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ, ಕಪಾಲಿ ಹಿಡಿದುಕೊಂಡಿದ್ದಾನೆ. ಅಂತರಾಳದಲ್ಲಿ ಸುಮಾರು ಐದು ಅಡಿ ಎತ್ತರದ ಸುಖಾಸನದಲ್ಲಿ ಕುಳಿತ ಶಿಲ್ಪವಿದೆ. ಕೈಗಳಲ್ಲಿ ಖಡ್ಗ, ಕಪಾಲಿ, ಹಿಡಿದುಕೊಂಡಿರುವ ಇದನ್ನು ಸ್ಥಳೀಯರು ಕಂಪಿಲರಾಯನೆಂದು ಕರೆಯುತ್ತಾರೆ. ಈ ದೇವಾಲಯದ ಎಡಭಾಗದಲ್ಲಿ ಪಾರ್ವತಿ ಗುಡಿ ಇದೆ.

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೪೧೯. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. ಕೃಷ್ಣಮೂರ್ತಿ, ಎಂ.ಎಸ್. ೧೯೯೯. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ ೧, ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು (ಸಂ: ಕಲಬುರ್ಗಿ ಎಂ.ಎಂ), ಪು. ೧೭೫. ಹಂಪಿ : ಕನ್ನಡ ವಿಶ್ವವಿದ್ಯಾಲಯ

೩. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ*, ಪು. ೩೧. ಕುಂಚೂರು : ಮಾಲತೇಶ ಪ್ರಕಾಶನ

೪. ಮಹಾದೇವ, ಸಿ. *ಕರ್ನಾಟಕದಲ್ಲಿ ಕಮಾರರಾಮನ ಪಂಥ.* ಅಪ್ರಕಟಿತ ಕೃತಿ

೫. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೧, ಪೂರ್ವೋಕ್ತ. ಪು. ೧೭೭


೬. *ಅದೇ*, ಪು. ೧೭೮

೭. *ಅದೇ*, ಪು. ೧೭೮-೧೭೯

೮. ಸೂರ್ಯನಾಥ, ಯು, ಕಾಮತ್. (ಸಂ.), ೧೯೮೬. ಕರ್ನಾಟಕ ರಾಜ್ಯ ಗ್ಯಾಸಿಟಿಯರ್ ೩, ಪು. ೬೩೮. ಬೆಂಗಳೂರು : ಕರ್ನಾಟಕ ಸರಕಾರ

೯. ಕಲಬುರ್ಗಿ, ಎಂ.ಎಂ. ೧೯೯೪. (ಸಂ.), *ಕರ್ನಾಟಕದ ಕೈಫಿಯತ್ತುಗಳು*, ಪು. ೪೯೨. ಹಂಪಿ : ಕನ್ನಡ ವಿಶ್ವವಿದ್ಯಾಲಯ

೧೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ*, ಪೂರ್ವೋಕ್ತ. ಪು. ೩೧



ಕಂಪ್ಲಿ ಕೋಟೆಯ ನಕ್ಷೆ

೧. ಬಾಗಿಲು ೨. ಕೊತ್ತಳ ೩. ಕಾವಲುಗೋಪುರ ೪. ಉಪಬಾಗಿಲು ೫. ಆಂಜನೇಯ ದೇವಾಲಯ

೧೦.೨ ಕಮಲಾಪುರ

ಹೊಸಪೇಟೆ ತಾಲೂಕಿನ ವಿಶ್ವವಿಖ್ಯಾತ ಸ್ಮಾರಕವೆಂದು ಮನ್ನಣೆ ಪಡೆದ ಹಂಪಿಗೆ ಹೊಂದಿಕೊಂಡಿರುವ ಕಮಲಾಪುರವು ಒಂದು ಪಟ್ಟಣ ಪ್ರದೇಶ. ಹೊಸಪೇಟೆಯಿಂದ ೧೧ ಕಿ.ಮೀ. ದೂರದಲ್ಲಿದೆ. ಇದರ ತೀವ್ರತರ ಬೆಳವಣಿಗೆಗೆ ಪ್ರವಾಸಿ ತಾಣವಾದ ಹಂಪಿಯು ಒಂದು ಕಾರಣ. ಹಂಪಿಗೂ ಕಮಲಾಪುರಕ್ಕೂ ನಿಕಟವಾದ ಸಂಬಂಧಗಳಿವೆ. ಹಾಗಾಗಿ ವಿಜಯನಗರ ಕಾಲದ ಕೋಟೆ ಈ ಪಟ್ಟಣದ ದಕ್ಷಿಣ ಭಾಗದಲ್ಲಿದೆ.

ಕಮಲಾದೇವಿ ಎಂಬ ಇಲ್ಲಿಯ ಆರಾಧ್ಯ ದೇವತೆಯ ಹೆಸರಿನಿಂದ ಈ ಗ್ರಾಮವನ್ನು ಕಮಲಾಪುರವೆಂದು ಕರೆದಿರುವುದಾಗಿ ಕೈಫಿಯತ್ತು ಹೇಳುತ್ತದೆ.[೧] ವಿಜಯನಗರ ಕಾಲದಲ್ಲಿ ವರದ ರಾಜಮ್ಮನ ಪಟ್ಟಣವೆಂದು ಕರೆಯುತ್ತಿದ್ದುದು ತಿಳಿಯುವುದು.[೨] ಕ್ರಿ.ಶ. ೧೫೧೮ರ ಕೃಷ್ಣದೇವರಾಯನ ಶಾಸನದಲ್ಲಿ ಕೃಷ್ಣದೇವರಾಯನ ಹಿರಿಯರಾಣಿ ತಿರುಮಲದೇವಿ ಹಂಪಿ ಹತ್ತಿರದ ಅಂಜನಗಿರಿಯ ಕುಮಾರಗುಂಟೆ ತಿರುವೆಂಗಲನಾಥ ದೇವರ ಸೇವೆಗಾಗಿ ಒಂದು ಮತ್ತರು ಭೂಮಿದಾನ ಮಾಡಿದ ಉಲ್ಲೇಖವಿದೆ. ಇದರಲ್ಲಿ ಬರುವ ಕುಮಾರಗುಂಟೆ ಮುಂದೆ ಕಮಲಾಪುರವಾಯಿತ್ತೆಂದು ಕುಂ.ಬಾ, ಸದಾಶಿವಪ್ಪ ಅಭಿಪ್ರಾಯ ಪಡುತ್ತಾರೆ.[೩] ಕ್ರಿ.ಶ. ೧೫೩೧ರ ಶಾಸನದಲ್ಲಿ ಕಮಲಾಪುರವು ಕೊಂಡಮಾರಸಯ್ಯನ ಪಾಳ್ಯದಲ್ಲಿರುವುದು ಪ್ರಸ್ತಾಪವಾಗುತ್ತದೆ.[೪]

ಮೊದಲನೆಯದಾಗಿ ಈ ಗ್ರಾಮವು ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವುದು ಖಚಿತವಾಗುತ್ತದೆ. ಏಕೆಂದರೆ ಈ ಮುಂಚೆ ಕಮಲಾಪುರ ಇದ್ದ ಬಗ್ಗೆ ಯಾವುದೇ ಆಧಾರವಿಲ್ಲ. ಎರಡನೆಯದಾಗಿ ವಿಜಯನಗರ ಅವಧಿಯಲ್ಲಿ ಸ್ಥಾಪನೆಗೊಂಡ ಬಹುತೇಕ ಗ್ರಾಮಗಳಿಗೆ ವಿಜಯನಗರದ ಅರಸರು ಮತ್ತವರ ರಾಣಿಯರು ಹಾಗೂ ಮಕ್ಕಳುಗಳ ಹೆಸರುಗಳನ್ನೆ ಇಡುತ್ತಿದ್ದುದು ವಾಡಿಕೆ. ಉದಾಹರಣೆಗಾಗಿ ತಿರುಮಲದೇವಿ ಪಟ್ಟಣ (ಹೊಸಪೇಟೆ), ಚಿನ್ನಾಪುರ, ನಾಗಲಾಪುರ, ಕೃಷ್ಣಾನಗರ, ಸಾಲೆ ತಿರುಮಲಪಟ್ಟಣ ಇತ್ಯಾದಿಯಾಗಿ ಈ ಹಿನ್ನೆಲೆಯಲ್ಲಿ ಕಮಲಾ ಎಂದರೆ ಲಕ್ಷ್ಮಿ, ಉತ್ತಮ ಸ್ತ್ರೀ, ಕುಮಾರ, ಲಕ್ಷ್ಮಿಯ ಮಗ, ಮನ್ಮಥ ಇತ್ಯಾದಿ ಅರ್ಥಗಳಿವೆ.

ಕಮಲಾದೇವಿ ಎಂಬುವವಳು ಉತ್ತಮ ಸ್ತ್ರೀ ಇದ್ದು, ಇವಳು ವಿಜಯನಗರದ ಅರಸರೊಂದಿಗೆ ಸಂಬಂಧ ಹೊಂದಿದವಳಾಗಿರಬೇಕು. ಹೀಗಾಗಿ ಅವಳ ಹೆಸರಿನಿಂದಲೇ ಈ ಗ್ರಾಮಕ್ಕೆ ಕಮಲಾಪುರವೆಂದು ಕರೆದಿರಬಹುದು. ಇದಕ್ಕೆ ಪೂರಕವೆಂಬಂತೆ ವಿಜಯನಗರದ ಅರಸರ "ಗಾಣ (ಸೇವಕಿಯಾದ) ಗಿತ್ತಿ" ಹೆಸರಿನಲ್ಲಿಯೇ ಒಂದು ದೇವಾಲಯ ನಿರ್ಮಿಸಿರುವುದು ಕಾಣಬಹುದು.[೫]

ಪ್ರಾಚೀನ ಮಾನವನ ಆವಾಸ ಸ್ಥಾನವಾಗಿ ಇತಿಹಾಸ ಕಾಲದಿಂದಲೂ ಇಂದಿನವರೆಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ಅಸ್ತಿತ್ವದಲ್ಲಿರುವ ಕಮಲಾಪುರದಲ್ಲಿ ವಿಜಯನಗರ ಕಾಲದ ಕೋಟೆಯೊಂದು ಈ ಗ್ರಾಮ ರಕ್ಷಣೆಗಾಗಿ ನಿರ್ಮಾಣಗೊಂಡಂತೆ ಕಂಡುಬರುತ್ತದೆ.

ಕೋಟೆಯ ಲಕ್ಷಣಗಳು

ಕಮಲಾಪುರವು ಬೆಳೆದಂತೆ ಇಲ್ಲಿಯ ಕೋಟೆ ಹಾಳಾಗಿದೆ. ಈಗ ಉಳಿದಿರುವ ಕೆಲವು ಅವಶೇಷಗಳಿಂದ ಈ ಕೋಟೆಯ ಲಕ್ಷಣಗಳನ್ನು ಅರಿಯಲು ಯತ್ನಿಸಿದೆ.

ಸುಮಾರು ೨೦ ಎಕರೆ ಪ್ರದೇಶದಲ್ಲಿ ವಿಸ್ತರಿಸುವ ಈ ಕೋಟೆಯು ಪರಿಘಾ (ನೆಲದುರ್ಗ) ಪ್ರಕಾರಕ್ಕೆ ಸೇರುತ್ತದೆ. ಚೌಕಾಕಾರದ ಕೋಟೆಯನ್ನು ಬೃಹತ್ ಮತ್ತು ಮಧ್ಯಮಗಾತ್ರದ ಕಲ್ಲು ಹಾಗೂ ಗಾರೆಯಿಂದ ಕಟ್ಟಿದೆ. ಕೋಟೆಯ ಮೇಲ್ಭಾಗದಲ್ಲಿ ಕೈಪಿಡಿ ಗೋಡೆಯನ್ನು ಇಟ್ಟಿಗೆ ಹಾಗೂ ಗಾರೆಯಿಂದ ಕಟ್ಟಿರಬಹುದಾದರೂ ಈಗ ಗೋಚರಿಸುವುದಿಲ್ಲ. ಕೋಟೆಯ ಉತ್ತರ ದಿಕ್ಕಿನಲ್ಲಿ ಗೋಡೆಯ ಮಧ್ಯದಲ್ಲಿ ದೊಡ್ಡ ಬಾಗಿಲಿದೆ. ದಕ್ಷಿಣ ದಿಕ್ಕಿನ ಗೋಡೆಯ ಮಧ್ಯದಲ್ಲಿ ಚಿಕ್ಕ ದಿಡ್ಡಿ ಇದ್ದ ಬಗ್ಗೆ ಪ್ರತೀತಿ ಇದೆ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳಿವೆ. ಕೋಟೆಯ ಸುತ್ತಲೂ ಕಂದಕವಿದ್ದ ಬಗ್ಗೆ ಅನುಮಾನವಿದೆ.



ಕೋಟೆಯ ಬಾಗಿಲು

ಉತ್ತರ ದಿಕ್ಕಿನ ಬಾಗಿಲಿನ ಮೇಲಿನ ಕೈಪಿಡಿ ಗೋಡೆಯಲ್ಲಿ ಚಿಕ್ಕ ಚಿಕ್ಕ ರಂಧ್ರಗಳಿವೆ. ಇಕ್ಕೆಲದ ಗೋಡೆಗಳಲ್ಲಿ ಮೀನು, ಮೊಸಳೆ, ನವಿಲು, ಹಂಸಗಳ ಉಬ್ಬುಗೆತ್ತನೆಗಳಿವೆ. ಈ ಬಾಗಿಲಿನ ಎರಡೂ (ಪೂರ್ವ ಮತ್ತು ಪಶ್ಚಿಮ) ದಿಕ್ಕಿಗೆ ವೃತ್ತಾಕಾರದ ಕೊತ್ತಳಗಳಿವೆ. ಪ್ರವೇಶದ ಎರಡೂ ಬದಿಗೆ ಎತ್ತರವಾದ ಕಟ್ಟೆಗಳಿವೆ. ಈ ಕಟ್ಟೆಗಳಿಗೆ ಹೊಂದಿಕೊಂಡು ನಗರೇಶ್ವರ ದೇವಾಲಯವಿದೆ. ಕೋಟೆಯ ಒಳಗೆ ಕಮಲಾಪುರ ಗ್ರಾಮವಿದೆ. ಈ ಪ್ರದೇಶವನ್ನು ಕ್ಯಾಟೆ, ಕೋಟೆ ಎಂದು ಸ್ಥಳೀಯರು ಈಗಲೂ ಗುರುತಿಸುತ್ತಾರೆ. ಇದರ ಮಧ್ಯಭಾಗದಲ್ಲಿ ಬೃಹದಾಕಾರದ ಕೊತ್ತಳವಿದೆ. ಇದು ೬೦ ಅಡಿ ಎತ್ತರ, ಸುಮಾರು ೧೫೦ ಅಡಿ ಸುತ್ತಳತೆಯನ್ನು ಹೊಂದಿದೆ. ಕೊತ್ತಳದ ಮೇಲೇರಲು ಅನುಕೂಲವಾಗುವಂತೆ ಪಶ್ಚಿಮಾ ದಿಕ್ಕಿಗೆ ಮೆಟ್ಟಿಲುಗಳನ್ನು ನಿರ್ಮಿಸಿ, ಇದಕ್ಕೆ ಚಿಕ್ಕ ಬಾಗಿಲನ್ನು ಜೋಡಿಸಲಾಗಿದೆ.



ಈ ಎತ್ತರದ ಕೊತ್ತಳದ ಮೇಲಿಂದ ಇಡೀ ಹಂಪೆ ಪ್ರದೇಶವಲ್ಲದೆ ಸುತ್ತ ಮುತ್ತಲಿನ ಬಹುತೇಕ ಪ್ರದೇಶಗಳು ಕಂಡುಬರುತ್ತವೆ. ಇದರಿಂದ ಈ ಕೊತ್ತಳದ ಉದ್ದೇಶವನ್ನು ತಿಳಿಯಬಹುದು. ಕೊತ್ತಳದ ಕಾಂಡಭಾಗದಲ್ಲಿ ಚಿಕ್ಕ ಗೂಡೊಂದು ನಿರ್ಮಿಸಿ, ಇದರಲ್ಲಿ ಕಲ್ಲುಗುಂಡನ್ನಿಟ್ಟು ತಾಯಾಮ್ಮನೆಂದು ಆರಾಧಿಸುತ್ತಾರೆ.



ಕೋಟೆಯ ಬಾಗಿಲು

ಕೋಟೆಯ ನಿರ್ಮಾಣ

ಕ್ರಿ.ಶ. ೧೫೬೫ ರ ನಂತರ ವಿಜಯನಗರ ಅವಸಾನದತ್ತ ನಡೆದಿರುವಾಗ ಅನೇಕ ಪಾಳೆಯಗಾರರು ಸ್ವತಂತ್ರರಾದರು. ಈ ಹಿನ್ನೆಲೆಯಲ್ಲಿ ಕುರುಗೋಡಿನ ಪರಗಣೆಯಲ್ಲಿ ಕಮಲಾಪುರವು ಸೇರಿತ್ತು. ಆಗ ಕುರುಗೋಡಿನ ಪರಗಣೆಯನ್ನು ಆಳುತ್ತಿದ್ದ ಚಿನ್ನರಾಯ ಕ್ರಿ.ಶ. ೧೭೦೩ ರಲ್ಲಿ ಕಮಲಾಪುರ ಕೋಟೆ, ಹುಲಿಮುಖ, ಹುಡೇವುಗಳನ್ನು ಕಟ್ಟಿಸಿದನೆಂದು ಕೈಫಿಯತ್ತಿನಲ್ಲಿ ಹೇಳಲಾಗಿದೆ.[೬] ಕಮಲಾಪುರದ ಕೋಟೆಯ ಲಕ್ಷಣಗಳಿಗೂ ಮತ್ತು ವಿಜಯನಗರದ ಕೋಟೆ (ಹಂಪಿ)ಯ ಲಕ್ಷಣಗಳಿಗೂ ವ್ಯತ್ಯಾಸಗಳು ಬಹಳ ಕಡಿಮೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಕೋಟೆಯು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಪಾಳೆಯಗಾರರ ಅವಧಿಯಲ್ಲಿ ಜೀರ್ಣೋದ್ಧಾರ ಕಂಡಿದೆ.

ಟಿಪ್ಪಣಗಳು

೧. ಕಲಬುರ್ಗಿ, ಎಂ.ಎಂ. (ಸಂ.), ೧೯೯೪. *ಕರ್ನಾಟಕದ ಕೈಫಿಯತ್ತುಗಳು*, ಪು. ೪೩೧. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. ಸುರೇಶ್, ಕೆ.ಎಂ. ಮತ್ತು ಇತರರು. ೧೯೯೮. *ಕರ್ನಾಟಕ ದೇವಾಲಯ ಕೋಶ : ಬಳ್ಳಾರಿ ಜಿಲ್ಲೆ*, ಪು. ೬೫. ಹಂಪಿ : ಕನ್ನಡ ವಿಶ್ವವಿದ್ಯಾಲಯ

೩. ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ*. ಪು. ೨೫. ಕುಂಚೂರು : ಮಾಲತೇಶ ಪ್ರಕಾಶನ

೪. SII. IX (pt II.). No. 533

೫. ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆಯ ಬದಿಯಲ್ಲಿ ಅಂದರೆ ಕಮಲಾಪುರದಿಂದ ೧ ಕಿ.ಮೀ. ಅಂತರದಲ್ಲಿ ಈ ದೇಗುಲವಿದೆ.

೬. ಕಲಬುರ್ಗಿ, ಎಂ.ಎಂ. (ಸಂ.). ೧೯೯೪. *ಕರ್ನಾಟಕದ ಕೈಫಿಯತ್ತುಗಳು*, ಪು. ೪೩೬. ಹಂಪಿ : ಕನ್ನಡ ವಿಶ್ವವಿದ್ಯಾಲಯ



೧೦.೩ ಪಾಪಿನಾಯಕನಹಳ್ಳಿ

ಹೊಸಪೇಟೆಯಿಂದ ೧೨ ಕಿ.ಮೀ. ದೂರದ ಪಶ್ಚಿಮ ದಿಕ್ಕಿಗಿರುವ ಪಾಪಿನಾಯಕನಹಳ್ಳಿಯು ಒಂದು ಗ್ರಾಮ ಪಂಚಾಯಿತಿ ಕೇಂದ್ರ. ಗ್ರಾಮದ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಿಗೆ ಬಯಲು ಸೀಮೆಯ ಹೊಲ - ಗದ್ದೆಗಳಿವೆ. ಉತ್ತರ ದಿಕ್ಕಿಗೆ ಬೆಟ್ಟದ ಸಾಲಿದೆ. ಪಾಪಿನಾಯಕನಹಳ್ಳಿಯಿಂದ ಈ ಬೆಟ್ಟದ ಸಾಲು ಸಾಗಿ ದರೋಜಿ ಬೆಟ್ಟದ ಶ್ರೇಣಿಗೆ ಸೇರುತ್ತದೆ. ಈ ಬೆಟ್ಟದಲ್ಲಿರುವುದೇ ಪಾಪಿನಾಯಕನಹಳ್ಳಿಯ ಗಿರಿದುರ್ಗ.


ಪಾಪನಾಯಕ ಎನ್ನುವ ಪಾಳೆಯಗಾರನಿಂದಾಗಿಯೇ ಈ ಗ್ರಾಮಕ್ಕೆ ಪಾಪಿನಾಯಕನಹಳ್ಳಿ ಎಂದು ಕರೆದಿರುವುದು. ಈತನೇ ಇಲ್ಲಿ ಕೋಟೆ ಕಟ್ಟಿಸಿರಬಹುದೆಂದು ಸ್ಥಳೀಯರಿಂದ ತಿಳಿದುಬರುವ ಅಂಶ. ಈ ಪಾಳೆಯಗಾರರು ಹಂಪಿ ಕಡೆಯಿಂದ ಬಂದಿರುವನೆಂದೂ ಹೇಳುತ್ತಾರೆ. ಹಾಗಾದರೆ ಪಾಪನಾಯಕ ಯಾರು? ಮ್ಯಾಸಬೇಡ ಜನಾಂಗದ ಸಾಂಸ್ಕೃತಿಕ ವೀರನೆಂದು ಗುರುತಿಸಿರುವ ಗಾದರಿ ಪಾಲನಾಯಕನ ವಂಶಸ್ಥರಾದ ತೊರ್ಲೆ ಮಲ್ಲನಾಯ್ಕನ ಮಗ ಪಾಪನಾಯಕನಿರಬಹುದು.[೧] ಈತನು ಪಶುಪಾಲನೆ ವೃತ್ತಿಗಾಗಿ ಈ ಪ್ರದೇಶಕ್ಕೆ ಬಂದಿರುವನೆ. ಇದಕ್ಕೆ ಒತ್ತುನೀಡುವ ಇನ್ನೊಂದು ಅಂಶವೆಂದರೆ ಆನೆಗೊಂದಿ ರಾಜರ ಮರ್ಯಾದೆಗೆ ಕುಂದು ಉಂಟಾಗುವಂತೆ ಊರ ಬಾಗಿಲಿಗೆ ತನ್ನ ಇಜಾರ ಕಟ್ಟಿಸಿ ಮೆರೆಯುತ್ತಿದ್ದ ಭೀಮಾಜೆಟ್ಟಿ ಎಂಬುವನನ್ನು ಸೋಲಿಸಿದ್ದು, ಪಾಪನಾಯಕನ ಮೊಮ್ಮಗ ಜೋಡಿ ಮಲ್ಲಪ್ಪನಾಯಕ ಎಂಬುವುದಿದೆ.[೨]

ಕೈಫಿಯತ್ತು ಈ ಗ್ರಾಮವನ್ನು ಮೊದಲು ಅಪಲಾಪುರವೆಂದು[೩] ಕರೆದಿದ್ದು, ನಂತರ ಪಾಪನಾಯಕನಹಳ್ಳಿ ಎಂದು ಉಲ್ಲೇಖಿಸಿ,ಇಲ್ಲಿ ತಿಮ್ಮಪ್ಪನಾಯಕನು ಕೋಟೆ ಕಟ್ಟಿಸಿದಂತೆ ತಿಳಿಸುತ್ತದೆ.[೪] ಪಾಪಿನಾಯಕನಹಳ್ಳಿಯ ದಕ್ಷಿಣ ದಿಕ್ಕಿಗಿರುವ ಅಂಕಾಲಮ್ಮನ ಗುಡಿಯ ಮುಂದೆ ಶಾಸನವಿದೆ. ಕ್ರಿ.ಶ. ೧೫೩೨ರ ಈ ಶಾಸನದಲ್ಲಿ ಈ ಗ್ರಾಮವನ್ನು ಪಾ(ಅ)ಪಿನಾಯಕನ ಪುರ ಮತ್ತು ಇಲ್ಲಿ ತಲಾರಿ ತಿಮ್ಮನಾಯಕನು ಆಳ್ವಿಕೆ ಮಾಡಿದಂತೆ ತಿಳಿಸುತ್ತದೆ.[೫] ಪಾ(ಅ)ಪಿನಾಯಕನ ಪುರ, ಜನ ಭಾಷೆಯಲ್ಲಿ ಪಾಪಿನಾಯಕನಹಳ್ಳಿಯಾಗಿದೆ. ತಿಮ್ಮನಾಯಕ ಎನ್ನುವವನು ಇಲ್ಲಿ ಕೋಟೆ ಕಟ್ಟಿಸಿರಬೇಕು. ಇವನೇ ಸ್ಥಳೀಯರು ಹೇಳುವ ಪಾಪನಾಯಕನು. ವಿಜಯನಗರ ಕಾಲದಲ್ಲಿ ಕಮಲಾಪುರ (ಕೊಂಡ ಮಾರಸಯ್ಯನವಾಡಿ)ದ ಪಾಳ್ಯದಂತೆ ಇದು ಒಂದು ಪಾಳ್ಯ.

ಕೋಟೆಯ ಲಕ್ಷಣಗಳು

ಪಾಪಿನಾಯಕನಹಳ್ಳಿ ಕೋಟೆಯು ನಿಸರ್ಗದತ್ತವಾದ ಬೆಟ್ಟವನ್ನು ಬಳಸಿ ನಿರ್ಮಿಸಿದ ಚಿಕ್ಕ ಕೋಟೆಯಾಗಿದೆ. ಇದರ ಪಕ್ಕದಲ್ಲಿ ವಸತಿ ತಾಣವಿದ್ದ ಈ ಕೋಟೆಯನ್ನು ಸ್ಥಳೀಯರು ಸಂತಗುಡ್ಡದ ಕೋಟೆಯೆಂದು ಕರೆಯುತ್ತಾರೆ.

ಇದಕ್ಕೆ ಪೂರಕವಾಗಿ ಕೋಟೆಯ ಪೂರ್ವ ಭಾಗಕ್ಕೆ ವಿಶಾಲವಾದ ಬಯಲಿದೆ. ಇದನ್ನು ಸಂತೆ ಬಯಲು ಎನ್ನುವರು. ಉತ್ತರದಿಂದ ದಕ್ಷಿಣ ದಿಕ್ಕಿಗೆ ಇಳಿಜಾರಾಗಿರುವ ಬೆಟ್ಟದ ಮೇಲ್ತುದಿಯನ್ನು ಆವರಿಸಿ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆಗೆ ದಕ್ಷಿಣದಿಂದ ಪ್ರವೇಶ ಕಲ್ಪಿಸಿರುವರು. ಈ ಪ್ರವೇಶ ದ್ವಾರವು ಬಹು ಕಿರಿದಾಗಿದ್ದು, ಇದರ ಇಕ್ಕೆಲಗಳಲ್ಲಿ ತಾಯಮ್ಮ ಹಾಗೂ ವೀರಭದ್ರನ ಚಿಕ್ಕ ಚಿಕ್ಕ ಗುಡಿಗಳನ್ನು ಹೊಂದಿ. ಸುಮಾರು ೨ ಎಕರೆ ವಿಸ್ತೀರ್ಣವನ್ನು ಹೊಂದಿರುವ ಕೋಟೆಯ ಮಧ್ಯದಲ್ಲಿ ಯಾವುದೇ ಸ್ಮಾರಕಾವಶೇಷಗಳು ಗೋಚರಿಸುವುದಿಲ್ಲ. ಕೋಟೆ ಗೋಡೆಯು ೫ ರಿಂದ ೧೦ ಅಡಿಗಳ ವರೆಗೆ ಎತ್ತರ ಹಾಗೂ ೫ ಅಡಿ ಅಗಲವಾಗಿದೆ. ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಸ್ಥಳೀಯವಾಗಿ ದೊರೆಯುವ ಚಿಕ್ಕ ಮತ್ತು ಮಧ್ಯಮಗಾತ್ರದ ಶಿಲೆಗಳನ್ನು ಕೋಟೆ ಕಟ್ಟಡಕ್ಕೆ ಬಳಸಲಾಗಿದೆ. ಇದರ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದ್ದು, ಒಟ್ಟು ಮೂರು ಕೊತ್ತಳಗಳಿವೆ. ಕೋಟೆಯ ಹಿಂಭಾಗ ಗೋಡೆಗಿರುವ ಕೊತ್ತಳವು ಬೃಹದಾಕಾರವಾಗಿದೆ. ವೃತ್ತಾಕಾರವಾಗಿರುವ ಈ ಕೊತ್ತಳವು ಸುಮಾರು ೨೦ ಅಡಿಗಳಷ್ಟು ಎತ್ತರವಾಗಿರುವುದು. ಇದರ ಮೇಲಿನಿಂದ ನೋಡಿದರೆ ಇಡೀ ಕೋಟೆಯು ತಲೆ ಕೆಳಗಾಗಿ ಕಾಣುತ್ತದೆ. ಶತ್ರುಗಳ ಬರುವಿಕೆಯನ್ನು ಗ್ರಹಿಸುವುದಕ್ಕಾಗಿ ಕೊತ್ತಳವನ್ನು ನಿರ್ಮಿಸಿದ್ದಾರೆ. ಇನ್ನುಳಿದ ಎರಡು ಕೊತ್ತಳಗಳು ಕೋಟೆಯ ಪ್ರವೇಶದ ಎರಡು ಬದಿಗಳಲ್ಲಿವೆ. ಇವು ಸಾದಾರಣ ಮಟ್ಟದವು.



ಬೆಟ್ಟದ ಮೇಲಿರುವ ಕೋಟೆ

ಈ ಕೋಟೆಯಿರುವ ಬೆಟ್ಟದಿಂದ ಕೆಳಗೆ ಪಶ್ಚಿಮಕ್ಕೆ ವಸತಿಯ ಅವಶೇಷಗಳಿವೆ. ನಮ್ಮ ಊರು ಮೊದಲು ಅಲ್ಲೇ ಇತ್ತು. ನಮ್ಮ ಮನೆಗಳು ಅಲ್ಲಿದ್ದವೆಂದು ಸುಮಾರು ೮೦ ವರ್ಷದ ದುರುಗಮ್ಮ ಹೇಳುತ್ತಾರೆ.[೬] ಈ ಹಳೇ ಊರಿನಿಂದ ಹಂಪಿಗೆ ನೆಲಮಾಳಿಗೆ ಇದೆಯಂತೆ, ಇಲ್ಲಿಂದ ಹಂಪಿಗೆ ದಾರಿ ಇದೆ ಎನ್ನುವುದು ಸ್ಥಳೀಯರ ನಂಬಿಕೆ. ಇದಕ್ಕೆ ಪೂರಕವೆಂಬಂತೆ ಈಗಲೂ ಹಳೇ ಊರಿನಲ್ಲಿ ಭೂಮಿಯೊಳಗೆ ನೆಲಮಾಳಿಗೆ ಇದೆ. ಅದು ಎಲ್ಲಿಯವರೆಗೆ ಹೋಗಿದೆ ಎಂಬುದು ತಿಳಿಯದು.



ಕೋಟೆಯ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿರುವ ವೆಂಕಟೇಶ್ವರನ ದೇವಾಲಯವಿದೆ. ಇದು ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಸುತ್ತಲೂ ಪ್ರಾಕಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ವೆಂಕಟೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹ ಹಾಗೂ ಅಂತರಾಳದ ಬಾಗಿಲುಗಳು ಸರಳವಾಗಿವೆ. ಸಭಾಮಂಟಪದಲ್ಲಿ ಯಾಳಿ ಶಿಲ್ಪಗಳುಳ್ಳ ನಾಲ್ಕು ಕಂಬಗಳಿವೆ. ಇದರ ಬಲ ಪಾರ್ಶ್ವದಲ್ಲಿ ಆಂಜನೇಯನ ಶಿಲ್ಪವಿದೆ. ಸಭಾಮಂಟಪದ ಪ್ರವೇಶದ ಎರಡು ಬದಿಗೆ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ದ್ರಾವಿಡಶೈಲಿಯ ಶಿಖರ, ಸಭಾಮಂಟಪದ ಮೇಲೆ ಕೈಪಿಡಿ ಗೋಡೆ ಇದೆ. ದೇವಾಲಯದ ಮುಂಭಾಗದಲ್ಲಿ ಗರುಡಗಂಬವಿದೆ. ದೇವಾಲಯಕ್ಕೆ ಕಣಶಿಲೆ, ಇಟ್ಟಿಗೆ, ಗಾರೆಯನ್ನು ಬಳಸಲಾಗಿದೆ. ಈ ದೇವಾಲಯದ ವಾಸ್ತು ಮತ್ತು ಶೈಲಿಗಳನ್ನು ಗಮನಿಸಿದಾಗ ವಿಜಯನಗರದೆಂದು ಹೇಳಬಹುದು.

ಸಮೀಕ್ಷೆ

ಈ ಕೋಟೆಯು ಹೊಸಪೇಟೆ ತಾಲೂಕಿನ ರಾಮಸಾಗರದಷ್ಟೇ ದೊಡ್ಡದಿದ್ದು, ರಕ್ಷಣಾ ದೃಷ್ಟಿಯಿಂದ ತುಂಬಾ ಅನುಕೂಲವಾಗಿದೆ. ಗ್ರಾಮದ ರಕ್ಷಣೆಗೆ ಈ ಕೋಟೆಯನ್ನು ಕಟ್ಟಿರಬಹುದು.

ಟಿಪ್ಪಣಿಗಳು

೧. ಶಿವಣ್ಣ ಮೀರಾಸಾಬಿಹಳ್ಳಿ. ೨೦೦೧. ನಾಯಕನಹಟ್ಟಿ ಪಾಳೆಯಗಾರರು, *ದಕ್ಷಿಣ ಕರ್ನಾಟಕದ ಅರಸು ಮನೆತನಗಳು* (ಸಂ: ವಸು ಎಂ.ವಿ), ಪು. ೭೯. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೨. *ಅದೇ*, ಪು. ೮೦

೩. ಕಲಬುರ್ಗಿ, ಎಂ.ಎಂ. (ಸಂ.), ೧೯೯೪. *ಕರ್ನಾಟಕದ ಕೈಫಿಯತ್ತುಗಳು*, ಪು. ४೮೯. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. *ಅದೇ*, ಪುಟ ೪೧೨

೫. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೩೫೦. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೬. ದುರುಗಮ್ಮ. ಪಾಪಿನಾಯಕನಹಳ್ಳಿ ಗ್ರಾಮದ ಹಿರಿಯರಲ್ಲಿ ಒಬ್ಬರು

೧೦.೪ ರಾಮಸಾಗರ

ರಾಮಸಾಗರವು ಹೊಸಪೇಟೆಯಿಂದ ಆಗ್ನೇಯ ದಿಕ್ಕಿಗೆ ಸುಮಾರು ೨೫ ಕಿ.ಮೀ. ದೂರದಲ್ಲಿದೆ. ರಾಮಸಾಗರದ ಈಶಾನ್ಯ ದಿಕ್ಕಿನ ಬೆಟ್ಟದ ಮೇಲೆ ಈ ಕಿರಿದಾದ ಕೋಟೆ ಇದೆ. ಇದರ ಬಗ್ಗೆ ಯಾವುದೇ ನಿಖರವಾದ ಆಧಾರಗಳಿಲ್ಲ ಆದರೂ ಸಿಕ್ಕಿರುವ ಕೆಲವು ಅಲ್ಪ ಮಾಹಿತಿಗಳಿಂದಲೇ ಈ ಕೋಟೆಯ ಬಗ್ಗೆ ಚರ್ಚಿಸಲಾಗಿದೆ.

ತೆಲುಗು ಭಾಷೆಯ ಕನ್ನಡ ಲಿಪಿಯ ತಾಮ್ರಶಾಸನವೊಂದು ತಿಳಿಸುವಂತೆ[೧] ಭೀಮಾ ಜೆಟ್ಟಿ ಎಂಬುವವನು, ಬಲಿಷ್ಠರಾದ ಆನೆಗೊಂದಿ ರಾಜರ ಮರ್ಯಾದೆಗೆ ಕುಂದು ಉಂಟಾಗುವಂತೆ ಊರ ಬಾಗಿಲಿಗೆ ತನ್ನ ಇಜಾರವನ್ನು ಕಟ್ಟಿಸಿ ಮೆರೆಯುತ್ತಿದ್ದನು. ಬೋಡಿ ಮಲ್ಲಪ್ಪನಾಯಕ ಎನ್ನುವವನು, ಈ ಭೀಮಾಜೆಟ್ಟಿಯನ್ನು ಸೋಲಿಸಿದ್ದಕ್ಕಾಗಿ ಆನೆಗೊಂದಿ ಅರಸ ರಾಯರಾಯ ತಿರುಮಲರಾಜ ದೇವನು, ಬುಕ್ಕಸಾಗರ ಹರಿಯ ಸಮುದ್ರ ಗ್ರಾಮಗಳ ನಡುವೆ ಇದ್ದ ಕಳಸಾಪುರ ಗ್ರಾಮವನ್ನು ಅದರ ಸಮೀಪವೇ ಇದ್ದ ಕಮಲಾಪುರದ ಕೆರೆಯ ಕೆಳಗಿನ ೩ ಖಂಡುಗದ ಬೀಜಾವರ್ರಿ ಭೂಮಿಯನ್ನು ಉಂಬಳಿಯಾಗಿ ಕೊಟ್ಟನು. ಅಲ್ಲದೆ ಜೋಡಿಯಲ್ಲಪ್ಪನಾಯಕನಿಗೆ ಭೀಮ ಎಂಬ ಬಿರುದನ್ನು ನೀಡಿದರು. ಈ ಬಿರುದು ನೀಡಿದ ನೆನಪಿಗಾಗಿ ಭೀಮನಕೆರೆ, ಹಿರೇಕರೆ, ಚಿಕ್ಕಕೆರೆ, ಹೊಸಕೆರೆ ಹಾಗೂ ರಾಮಸಾಗರದ ಕೆರೆಯನ್ನು ನಿರ್ಮಿಸಿದರು. ಕೆರೆಗಳನ್ನು ಕಟ್ಟಿಸುವುದರ ಮೂಲಕ ಜನಪರ ಕಾರ್ಯಗಳನ್ನು ಮಾಡಿದುದಲ್ಲದೆ ಆನೆಗೊಂದಿ ರಾಜರ ಹೆಸರಿನಲ್ಲಿ ತಿಮ್ಮಾಪುರಹಳ್ಳಿ, 'ರಾಮಸಾಗರ' ಗ್ರಾಮಗಳನ್ನು ಕಟ್ಟಿಸಿರುವಂತೆ, ಆನೆಗೊಂದಿ ಅರಸರೇ ಈ ಗ್ರಾಮಗಳನ್ನು ಅಸ್ತಿತ್ವಕ್ಕೆ ತಂದರೆಂದು ಮೇಲಿನ ತಾಮ್ರಶಾಸನ ಹೇಳುತ್ತದೆ.[೨]

ಕ್ರಿ.ಶ. ೧೫೬೧ ರ ಸದಾಶಿವರಾಯನ ಶಾಸನದಲ್ಲಿ ವಿಠ್ಠಲ ದೇವರ ಅಮೃತ ಪಡಿಗೆ ರಾಮಸಾಗರದಲ್ಲಿ ಹತ್ತು ಕೊಳಗ ಗದ್ದೆ ನೀಡಿದಂತೆ ವ್ಯಕ್ತವಾಗುತ್ತದೆ.[೩] ಬುಕ್ಕರಾಯನ ಶಾಸನವು ಇಂದಿನ ರಾಮಸಾಗರದ ಪಶ್ಚಿಮಾ ಭಾಗದಲ್ಲಿ ದೊರೆತಿದೆ ಆದರೂ ಅದರಲ್ಲಿ ರಾಮಸಾಗರದ ಉಲ್ಲೇಖವಿಲ್ಲ.[೪] ಈ ಮೇಲಿನ ಆಧಾರಗಳಿಂದ ರಾಮಸಾಗರವು ಕ್ರಿ.ಶ. ೧೫೬೧ ಕ್ಕಿಂತಲೂ ಮೊದಲೇ ಅಸ್ತಿತ್ವದಲ್ಲಿದ್ದುದು ಕಂಡುಬರುತ್ತದೆ. ಏಕೆಂದರೆ ತಾಮ್ರಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ ಮತ್ತು ಬುಕ್ಕರಾಯನ ಶಾಸನದಲ್ಲಿ ರಾಮಸಾಗರದ ಪ್ರಸ್ತಾಪವೂ ಇಲ್ಲ.

ಈ ಮೇಲಿನ ಆಧಾರಗಳನ್ನು ಇಟ್ಟುಕೊಂಡು ಮುಂದುವರೆದಂತೆ ಕೋಟೆ ನಿರ್ಮಾಣವನ್ನು ಚರ್ಚಿಸಲಾಗುವುದು. ರಾಮಸಾಗರದ ಕೋಟೆಯ ಪ್ರವೇಶದಲ್ಲಿ ಮೊದಲು ಕಂಡುಬರುವುದು 'ಭೀಮೇಶ್ವರ' ದೇವಸ್ಥಾನ. ಆನೆಗೊಂದಿ ಅರಸರು ಕಷ್ಟಕಾಲದಲ್ಲಿ ಸಹಾಯ ಮಾಡಿದ ಬೋಡಿ ಮಲ್ಲಪ್ಪನಾಯಕ 'ಭೀಮಾ' ಎಂಬ ಬಿರುದನ್ನು ನೀಡಿ ಗೌರವಿಸಿದ್ದರು. ಈ ಸಹಾಯಾರ್ಥ ನೆನಪಿಗಾಗಿ 'ಭೀಮಾ' ಎಂಬ ಬಿರುದಿನ ಹೆಸರಿನಿಂದಲೇ

ಭೀಮೇಶ್ವರ ದೇವಸ್ಥಾನ ನಿರ್ಮಾಣವಾಗಿರಬಹುದು. ಪ್ರಾಯಶಃ ಆಗಲೇ ಅಲ್ಲಿ ಕೋಟೆ ನಿರ್ಮಾಣ ಮಾಡಿರಬೇಕು. ಇಂಥಹ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟಿವೆ.


ಕೋಟೆಯ ಲಕ್ಷಣಗಳು

ರಾಮಸಾಗರದ ಈಶಾನ್ಯಕ್ಕಿರುವ ಚಿಕ್ಕ ಬೆಟ್ಟವೊಂದರ ಮೇಲೆ ಸುಮಾರು ನಾಲ್ಕು ಎಕರೆ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಇದು ಗ್ರಾಮರಕ್ಷಣೆಯ ಗಿರಿದುರ್ಗವಾಗಿದೆ. ಕೋಟೆ ಇರುವ ಬೆಟ್ಟದ ಪೂರ್ವಕ್ಕೆ ಕಣಿವೆ ಇದ್ದು ಇದರಲ್ಲಿ ಹೊಲಗಳಿವೆ. ಇದೇ ಹಿಂದೆ (ವಿಜಯನಗರ ಕಾಲದಲ್ಲಿ) ಉದಯಗಿರಿಗೆ ದಾರಿಯಾಗಿತ್ತು. ಏಕೆಂದರೆ ಈ ಕಣಿವೆ ಮೂಲಕ ನೈರುತ್ಯಕ್ಕೆ ಸಾಗಿದರೆ ಉದಯಗಿರಿ (ವಿಜಯನಗರ ಕೋಟೆಯ) ಹೆಬ್ಬಾಗಿಲು ಸಿಗುತ್ತದೆ.




ಬೆಟ್ಟದ ಮೇಲಿರುವ ಕೋಟೆ

ಪಶ್ಚಿಮ ದಿಕ್ಕಿಗೆ ರಾಮಸಾಗರ ಗ್ರಾಮವಿದೆ. ಉತ್ತರಕ್ಕೆ ಇತ್ತೀಚಿಗೆ ನಿರ್ಮಾಣವಾದ ಮನೆಗಳಿವೆ. ದಕ್ಷಿಣಕ್ಕೆ ರಾಮಸಾಗರ ಗ್ರಾಮವು ವಿಸ್ತರಿಸಿದೆ. ಈ ಕೋಟೆಯು ಉತ್ತರಾಭಿಮುಖವಾಗಿದ್ದು, ಸರಳ ಬಾಗಿಲುವಾಡವನ್ನು ಹೊಂದಿದೆ. ಒಳ ಮಧ್ಯಭಾಗದಲ್ಲಿ ದೊಡ್ಡ ಕೊತ್ತಳವಿದೆ. ಇದು ಸುಮಾರು ೩೦ ಅಡಿ ಸುತ್ತಳತೆ ಹಾಗೂ ೩೦ ಅಡಿ ಎತ್ತರವಾಗಿದೆ. ವೃತ್ತಕಾರದಲ್ಲಿರುವ ಈ ಕೊತ್ತಳವನ್ನು ಮೇಲೇರಿ ಶತ್ರುಗಳನ್ನು ಗಮನಿಸಲು ಅನುಕೂಲವಾಗುವಂತೆ ಕಟ್ಟಲಾಗಿದೆ. ಇದೇ ಲಕ್ಷಣಗಳನ್ನು ಹೋಲುವ ಆರು ಕೊತ್ತಳಗಳು ಕೋಟೆ ಗೋಡೆಗಳಲ್ಲಿವೆ. ಕೋಟೆಯು ಸರಿ ಸುಮಾರು ೧೦ ಅಡಿ ಎತ್ತರವಾಗಿದೆ. ಕೆಲವು ಕಡೆ ಹೆಚ್ಚು ಕಡಿಮೆ ಎತ್ತರದಿಂದ ಕೂಡಿದೆ. ಇದು ೩ ರಿಂದ ೪ ಅಡಿಗಳಷ್ಟು ಅಗಲವಾಗಿದ್ದು, ಸುಮಾರು ೩೦೦ ಮೀಟರುಗಳಷ್ಟು ಸುತ್ತಳತೆಯನ್ನು ಹೊಂದಿದ ಬಹು ಕಿರಿದಾದ ಕೋಟೆಯಾಗಿದೆ. ತಳಪಾಯವಿಲ್ಲದೆ ಹಾಸುಬಂಡೆಯ ಮೇಲೆ ಮಧ್ಯಮ ಗಾತ್ರದ ಕಣಶಿಲೆಯಿಂದ ಕೋಟೆಯನ್ನು ನಿರ್ಮಿಸಲಾಗಿದೆ. ಮಧ್ಯದಲ್ಲಿ ಕೆಲವು ವಾಸದ ಮನೆಗಳಿದ್ದ ಅವಶೇಷಗಳಿವೆ. ಇಲ್ಲಿ ವಾಸಿಸುತ್ತಿದ್ದ



ಜನರಿಗಾಗಿ ಬಾವಿಯೊಂದನ್ನು ನಿರ್ಮಿಸಲಾಗಿತ್ತು. ಇಂದಿಗೂ ಬಾವಿಯಲ್ಲಿ ಜಲ ಉತ್ಪತ್ತಿಯಾಗುತ್ತಲೇ ಇದೆ. ಕೋಟೆಯಲ್ಲಿ ಆಂಜನೇಯ ಹಾಗೂ ಭೀಮೇಶ್ವರ ದೇಗುಲಗಳಿವೆ. ಆಂಜನೇಯನ ಗುಡಿಯು ದಕ್ಷಿಣಾಭಿಮುಖವಾಗಿದ್ದು, ಉತ್ತರದ ಕೋಟೆಗೋಡೆಗೆ ಹೊಂದಿಕೊಂಡಿದೆ. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಗೆತ್ತನೆಯ ಶಿಲ್ಪ ಹಾಗೂ ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ. ಭೀಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕಲ್ಲುಗುಂಡನಿಟ್ಟು ಆರಾಧಿಸುತ್ತಾರೆ. ಇಂದಿಗೂ ನಿತ್ಯ ಪೂಜೆ ನಡೆಯುತ್ತದೆ.



ಕೋಟೆಯ ಗೋಡೆ ಮತ್ತು ಕೊತ್ತಳ

ಈ ಪ್ರದೇಶದ ಸುತ್ತಲೂ ಇರುವ ಬೆಟ್ಟಗಳಿಗಿಂತ ಇದು ಎತ್ತರವಾಗಿದೆ. ಮತ್ತು ಮೇಲ್ತುದಿಯಲ್ಲಿ ವಿಶಾಲ ಪ್ರದೇಶವನ್ನು ಹೊಂದಿದೆ. ಈ ಕಾರಣವಾಗಿಯೇ ಇಲ್ಲಿ ಕೋಟೆ ಕಟ್ಟಿರಬೇಕು. ಪ್ರಾಯಶಃ ವಿಜಯನಗರಕ್ಕೆ ಪೂರ್ವದಿಂದ ಶತ್ರುಗಳನ್ನು ತಡೆ ಹಿಡಿಯುವದಕ್ಕಾಗಿಯೇ ಈ ಚಿಕ್ಕ ಕೋಟೆಯನ್ನು ನಿರ್ಮಿಸಿ ಇಲ್ಲೊಬ್ಬ ಸೈನಿಕನನ್ನು ನೇಮಿಸಿರಬೇಕು.

ಟಿಪ್ಪಣಿಗಳು


೧. ಶಿವಣ್ಣ ಮೀರಾಸಾಬಿಹಳ್ಳಿ. ೨೦೦೧. ನಾಯಕನಹಟ್ಟಿ ಪಾಳೆಯಗಾರರು, *ದಕ್ಷಿಣ ಕರ್ನಾಟಕದ ಅರಸು ಮನೆತನಗಳು* (ಸಂ: ವಸು ಎಂ.ವಿ), ಪು. ೮೦. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. *ಅದೇ,* ಪು. ೮೧

೩. ದೇವರಕೊಂಡಾರೆಡ್ಡಿ ಮತ್ತು ಇತರರು. ೨೦೦೦. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಹಂಪಿ)* - ೩, ಪು. ೧೩೫. ಹಂಪಿ : ಕನ್ನಡ ವಿಶ್ವವಿದ್ಯಾಲಯ

೪. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೧೬೬. ಹಂಪಿ : ಕನ್ನಡ ವಿಶ್ವವಿದ್ಯಾಲಯ.





ರಾಮಸಾಗರ ಕೋಟೆಯ ನಕ್ಷೆ

೧. ಬಾಗಿಲು ೨. ಕೊತ್ತಳ ೩. ಆಂಜನೇಯ ದೇವಾಲಯ ೪. ಬಾವಿ

೧೦.೫ ಹಂಪಿ (ವಿಜಯನಗರ)

ಇತಿಹಾಸ ಪ್ರಸಿದ್ಧ ಹಂಪಿಯು ಹೊಸಪೇಟೆಯಿಂದ ೧೨ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯ ದಂಡೆಯಲ್ಲಿದೆ. ಉತ್ತರ ಅಕ್ಷಾಂಶ ೧೫, ೧೮.೫ ಯಿಂದ ೧೫.೨೧ ಮತ್ತು ಪೂರ್ವ ರೇಖಾಂಶ ೭೬. ೨೭.೫ ರಿಂದ ೭೬. ೩೦ರ ವರೆಗಿನ ಮಧ್ಯದಲ್ಲಿ ಈ ಗ್ರಾಮ ಬರುತ್ತದೆ. ಇದು ಸುಮಾರು ೨೫ ಚ.ಕಿ.ಮೀ. ರಷ್ಟು ವಿಸ್ತಾರವನ್ನು ಹೊಂದಿದೆ.

ಹಂಪಿ ಅನೇಕ ಪುರಾಣ - ಇತಿಹಾಸ ಪ್ರಸಿದ್ಧ ಕ್ಷೇತ್ರಗಳಿಂದ ಸುತ್ತುವರೆದಿದೆ. ಉತ್ತರಕ್ಕೆ ರಾಮಾಯಣದ ಕುರುಹುಗಳಾಗಿ ಕಿಷ್ಕಿಂಧೆ, ಅಂಜನಾದ್ರಿ ದಕ್ಷಿಣಕ್ಕೆ ಮಾತಂಗ ಪರ್ವತ, ಜಂಬುನಾಥನ ಗುಡ್ಡಗಳಿವೆ. ಅಂಜನಾದ್ರಿಯಲ್ಲಿ ಹನುಮಂತನು ಜನಿಸಿದರೆ, ಪಂಪಾ ಸರೋವರದ ಬಳಿ ಶಬರಿ ವಾಸವಾಗಿದ್ದಳು ಎಂಬ ಹೇಳಿಕೆಗಳಿವೆ. ಶಾಸನಗಳಲ್ಲಿ ಹಂಪಿಯನ್ನು ಬಾಸ್ಕರ ಕ್ಷೇತ್ರವೆಂದು ಕರೆದಿವೆ. ಮೊದಲಿನಿಂದ ಶೈವ - ಶಾಕ್ತರ ಬಳಿಕ ವೈಷ್ಣವ, ಜೈನ ಇತ್ಯಾದಿ ಧರ್ಮಗಳ ಪ್ರದೇಶವಾಗಿ ಬೆಳೆಯುತ್ತಾ ಬಂದಿದೆ. ಇಲ್ಲಿ ಬೆಟ್ಟಗಳು ದೊಡ್ಡ ಗುಂಡುಗಳಿಂದ ಕೂಡಿದ್ದು, ಇವುಗಳ ಮಧ್ಯದಲ್ಲಿ ಕೋಟೆಯನ್ನು ಕಟ್ಟಲಾಗಿದೆ.

ಹಂಪಿಯು ಆದಿಮಾನವನ ಕಾಲದಿಂದಲೂ ಜನವಸತಿಯ ಕೇಂದ್ರವಾಗಿತ್ತು. ವಿರೂಪಾಕ್ಷ ದೇವಾಲಯದ ಹಿಂಬದಿಯಲ್ಲಿ ಹಾಗೂ ಹೇಮಕೂಟದ ಪಕ್ಕದಲ್ಲಿ ಪ್ರಾಗೈತಿಹಾಸಿಕ ಕಾಲದ ಕೆಂಪುವರ್ಣದ ಚಿತ್ರಗಳಿವೆ. ವೆಂಕಟಾಪುರದ ಬಳಿಯ ವಾಲಿ ದಿಬ್ಬವೂ ಪ್ರಾಗೈತಿಹಾಸಿಕ ಕಾಲದ ನೆಲೆಯಾಗಿದೆ.

ಹಂಪಿಯನ್ನು ಪಂಪಾಕ್ಷೇತ್ರ, ಪಂಪಾತೀರ್ಥ, ಪಂಪಾಪುರ, ಪಂಪಾಪಟ್ಟಣ ಎಂದು ಶಾಸನಗಳಲ್ಲಿ, ಪುರಾಣಗಳಲ್ಲಿ ಕರೆದಿದ್ದು, ವಿಜಯನಗರ ಸ್ಥಾಪನೆಯ ನಂತರ ಹಂಪೆ ವಿಜಯನಗರ ಪಟ್ಟಣದ ಒಂದು ಭಾಗವಾಯಿತು. ರಾಜಕೀಯವಾಗಿ ಪತನ ಹೊಂದಿ ಹಾಳಾದ ಮೇಲೆ ವಿಜಯನಗರ ಪಟ್ಟಣ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಆದರೆ ಹಂಪೆಯು ಪುಣ್ಯಕ್ಷೇತ್ರವಾಗಿ ಮುಂದುವರೆಯಿತು.

ಇತಿಹಾಸ

ಐತಿಹಾಸಿಕವಾಗಿ ಹಂಪೆಯ ಪ್ರಾಚೀನತೆ ೭ನೆಯ ಶತಮಾನದಷ್ಟು ಹಿಂದೆ ಹೋಗುತ್ತದೆ. ಬಾದಾಮಿ ಚಾಳುಕ್ಯರ ಕ್ರಿ.ಶ. ೬೯೧ರ ಶಾಸನದಲ್ಲಿ, ಕ್ರಿ.ಶ. ೧೦೧೮ ರ ನೊಳಂಬ ಉದಯಾದಿತ್ಯನ ಬಾಗಳಿ ಶಾಸನದಲ್ಲಿ ಪಂಪಾತೀರ್ಥದ ಉಲ್ಲೇಖಗಳಿವೆ. ಕ್ರಿ.ಶ. ೧೦೫೩ ರ ಶಾಸನದಲ್ಲಿ ಹಂಪೆಯ ತೀರ್ಥದ ಉಲ್ಲೇಖ ಬರುತ್ತದೆ. ಕ್ರಿ.ಶ. ೧೧೯೯ರ

ಕುರುಗೋಡು ಶಾಸನವು[೨] ಈ ಪ್ರದೇಶವನ್ನು ವಿರೂಪಾಕ್ಷ ಸೀಮೆ ಎಂದು ಕರೆದಿದ್ದು, ಇದರಲ್ಲಿ ಸಿಂದ ಕಲಿದೇವರಸ ಕುರುಗೋಡಿನಿಂದ ಆಳುತ್ತಿದ್ದ ವಿಷಯವು ಸೇರಿದೆ.

ಬಾದಾಮಿ ಚಾಳುಕ್ಯರ ರಾಷ್ಟ್ರಕೂಟರ ಆಳ್ವಿಕೆಗೆ ಈ ಪ್ರದೇಶ ಸೇರಿತ್ತೆಂಬ ಬಗ್ಗೆ ಯಾವುದೇ ಗೊಂದಲಗಳಿಲ್ಲವಾದರೂ ಅವರದೆಂದು ಹೇಳಬಹುದಾದ ಶಾಸನಗಳಾವು ಹಂಪಿಯ ಪರಿಸರದಲ್ಲಿ ದೊರೆತಿಲ್ಲ. ಬೇರೆ ಕಡೆ (ಹಂಪಿಯ ಹೊರಗೆ) ಕಂಡುಬಂದಿರುವ ಶಾಸನಗಳಲ್ಲಿ ಪಂಪಾತೀರ್ಥ ಹಾಗೂ ಪಂಪಾತೀರದ ಉಲ್ಲೇಖಗಳಿವೆ. ಈ ಕಾಲದ ಕೆಲವು ವಾಸ್ತು ಕುರುಹುಗಳು ಹೇಮಕೂಟದ ಬೆಟ್ಟದಲ್ಲಿವೆ. ಮರಳು ಗಲ್ಲಿನಲ್ಲಿ ಕಟ್ಟಿರುವ ದೇವಾಲಯ ಸಮುಚ್ಚಯದ ಭಾಗವೊಂದು ಈಗಿನ ವಿರೂಪಾಕ್ಷ ದೇವಾಲಯದ ಹಿಂಬದಿ ಮೇಲ್ಭಾಗದಲ್ಲಿದೆ. ಹೀಗಾಗಿ ಸು.ಕ್ರಿ.ಶ. ೮ ನೆಯ ಶತಮಾನದವರೆಗೆ ಅವರ ಚಟುವಟಿಕೆಗಳು ಕಾಣಬರುತ್ತವೆ.

ಕಲ್ಯಾಣ ಚಾಳುಕ್ಯರು, ನೊಳಂಬರು, ಸಿಂಧರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿರುವುದು ಶಾಸನಗಳಿಂದ ವೇದ್ಯವಾಗುತ್ತದೆ. ಹೊಯ್ಸಳ ಅರಸ ಸೋಮೇಶ್ವರನು ಕ್ರಿ.ಶ. ೧೨೩೬ ರಲ್ಲಿ ಪಂಪಾಕ್ಷೇತ್ರದ ವಿರೂಪಾಕ್ಷನಿಗೆ ಒಂದು ಹಳ್ಳಿಯನ್ನು ದಾನ ಮಾಡಿದನು.[೩] ದ್ವಾರ ಸಮುದ್ರವು ಮುಸ್ಲಿಂರ ದಾಳಿಯಿಂದ ನಾಶವಾದ ಮೇಲೆ ಮೂರನೆಯ ಬಲ್ಲಾಳನು ಕ್ರಿ.ಶ. ೧೩೩೧ ರಲ್ಲಿ ವಿರೂಪಾಕ್ಷ ಹೊಸದುರ್ಗದಿಂದ ಆಳುತ್ತಿದ್ದನು. ಹಂಪೆಯನ್ನು ವಿರೂಪಾಕ್ಷ ಹೊಸದುರ್ಗವೆಂದು ಕರೆದಿರುವುದರಿಂದ ಬಲ್ಲಾಳನು ಹೊಸತಾಗಿ ಈ ಕೋಟೆಯನ್ನು ಕಟ್ಟಿಸಿರಬೇಕೆಂದು ಸಿ.ಎಸ್.ಪಾಟೀಲರು ಅಭಿಪ್ರಾಯಪಟ್ಟಿದ್ದಾರೆ.[೪] ಕ್ರಿ.ಶ. ೧೩೨೦ ರ ಬಲ್ಲಾಳನ ಶಾಸನದಲ್ಲಿರುವಂತೆ ಬಲ್ಲಾಳನು ಪುದುಪಡ್ಯೆ ವೀಡಿನಲ್ಲಿದ್ದ[೫] ಅರಸಿಕೇರಿ ತಾಲೂಕಿನ ಶಾಸನ ಪ್ರಕಾರ ಬಲ್ಲಾಳನು ಹೊಸಪಟ್ಟಣದಲ್ಲಿದ್ದ[೬] ಗುಬ್ಬಿ ತಾಲೂಕಿನ ಶಾಸನ ಪ್ರಕಾರ ಅದರ ಹೆಸರು ವಿರೂಪಾಕ್ಷ ಹೊಸಪಟ್ಟಣ.[೭] ಹೊಸಕೋಟೆ ಶಾಸನ ಪ್ರಕಾರ ಅದರ ಹೆಸರು ವಿಜಯಾ ವಿರುಪಾಪುರ, ಮುಮ್ಮಡಿ ಬಲ್ಲಾಳನ ಮಗನ ಹೆಸರು ವೀರವಿಜಯ ಬಲ್ಲಾಳ, ಅಥವಾ ವೀರ ವಿರೂಪಾಕ್ಷ ಬಲ್ಲಾಳ, ಹೀಗೆ ಹೊಯ್ಸಳರು ಅಂತಃಕಾಲದಲ್ಲಿಯೇ ವಿರೂಪಾಕ್ಷನ ಸಮೀಪ ಒಂದು ನೆಲೆವೀಡನ್ನು ಹೊಯ್ಸಳರು ಹೊಂದಿದ್ದರು. ಡಾ. ಸಿ.ಎಸ್.ಪಾಟೀಲರ ಅಭಿಪ್ರಾಯಕ್ಕೆ ಸ್ಪಂಧಿಸುತ್ತಾ ಈ ಸ್ಪಷ್ಟನೆ ನೀಡಲಾಗಿದೆ.

ಕ್ರಿ.ಶ. ೧೪ನೆಯ ಶತಮಾನದ ಆರಂಭದಲ್ಲಿ ಕುಮ್ಮಟದುರ್ಗದ ಅರಸನಾದ ಕಂಪಿಲರಾಯ ಮತ್ತು ಕುಮಾರರಾಮರು ತುಂಬಾ ಪ್ರಸಿದ್ಧಿಗೆ ಬಂದಿದ್ದರು. ಆಗ ಹಂಪಿ ಪ್ರದೇಶ ಸಂಪೂರ್ಣವಾಗಿ ಅವರ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ಸ್ಪಷ್ಟವಾಗಿದೆ.[೮]

ಕ್ರಿ.ಶ. ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ಸಂಗಮ ಸಹೋದರರಾದ ಹರಿಹರ, ಬುಕ್ಕ, ಕೆಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪರಿಂದ ಆಯಿತು. ಈ ವಂಶದ ಮೊದಲ ಅರಸರು ಮೊದಲನೆಯ

ಹರಿಹರ (ಕ್ರಿ.ಶ. ೧೩೩೬ - ೧೩೫೬) ಮತ್ತು ಮೊದಲನೆಯ ಬುಕ್ಕ (ಕ್ರಿ.ಶ. ೧೩೫೬ - ೧೩೭೭) ಆನೆಗೊಂದಿಯಿಂದ ಆಳಿದರೆಂಬ ಪ್ರತೀತಿ ಇದೆ.[೯] ಆದರೆ ಕ್ರಿ.ಶ. ೧೩೪೦ರ ಹಂಪೆಯ ಶಾಸನವು ವಿಜಯ ಎಂಬ ಹೆಸರಿನ ಪಟ್ಟಣದಲ್ಲಿ ಒಂದನೆಯ ಹರಿಹರ ಮತ್ತು ಬುಕ್ಕನು ಆಳುತ್ತಿದ್ದಂತೆಯೂ ಅದು ಇಂದ್ರನ ಅಮರಾವತಿಯಂತೆ ಇತ್ತೆಂದೂ ವರ್ಣಿತವಾಗಿದೆ.[೧೦] ಅಂದರೆ ಹರಿಹರ ಮತ್ತು ಬುಕ್ಕರಾಯನ ರಾಜಧಾನಿಯು ಪಂಪಾಕ್ಷೇತ್ರದ ಬಳಿಯಿದ್ದ "ವಿಜಯ" ಎಂಬ ಪಟ್ಟಣವೆಂದಾಯಿತು. ಈ ವಿಜಯ ವಿರೂಪಾಕ್ಷಪುರವೇ ತನ್ನ ಹೆಸರನ್ನು ಮೊಟಕು ಮಾಡಿಕೊಂಡು ವಿಜಯನಗರವಾಗಿ ಬೆಳೆಯಿತು. ಈ ವಿಜಯನಗರದಲ್ಲಿ ಸಂಗಮ, ಸಾಳ್ವ, ತುಳು ಮತ್ತು ಅರವೀಡು ವಂಶಗಳು ಸುಮಾರು ೩೦೦ ವರ್ಷಗಳ ಕಾಲ ಆಳ್ವಿಕೆ ಮಾಡಿದವು. ಈ ವಂಶಗಳಲ್ಲಿ ಹರಿಹರ, ಪ್ರೌಢದೇವರಾಯ, ಕೃಷ್ಣದೇವರಾಯರು ಪ್ರಸಿದ್ಧಿ ಅರಸರು.

ಕೋಟೆಯ ಲಕ್ಷಣಗಳು

ಪ್ರಾರಂಭದಲ್ಲಿ ಚಿಕ್ಕದಾಗಿದ್ದ ಪಟ್ಟಣದ ಸುತ್ತಲೂ ಕಟ್ಟಿಸಿದ ಕೋಟೆಯು ಈಗ ಒಳಕೋಟೆಯಾಗಿದೆ. ಈ ಕೋಟೆಯು ಮಹಾನವಮಿ ದಿಬ್ಬವಿರುವ ಅರಮನೆ ಪ್ರದೇಶ, ಹಜಾರ ರಾಮಸ್ವಾಮಿ ದೇವಾಲಯ, ರಾಣಿ ಸ್ನಾನಗೃಹ, ಆನೆಸಾಲಿನ ಹಿಂದಿನ ಜೈನ ದೇವಾಲಯ, ಭೂಮಿಯ ಕೆಳಮಟ್ಟದ ದೇವಾಲಯ ಮುಂತಾದವುಗಳ ಪ್ರದೇಶವನ್ನು ಸುತ್ತುವರೆದಿದೆ. ಈ ಕೋಟೆಯಲ್ಲಿ ಸಿಂಘಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಗಾಣಿಗಿತ್ತಿ ಜೈನ ದೇವಾಲಯದ ಉತ್ತರಕ್ಕಿರುವ ಬಾಗಿಲು ಭೂಮಿಯ ಕೆಳಮಟ್ಟದ ದೇವಾಲಯದ ಉತ್ತಕ್ಕಿರುವ ಬಾಗಿಲು, ಅದೇ ದೇವಾಲಯದ ಆಗ್ನೇಯ ದಿಕ್ಕಿಗಿರುವ ಹೂವಿನ ಬಾಗಿಲು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಅರಮನೆ ಪ್ರದೇಶದ ಉತ್ತರಕ್ಕಿರುವ ಬಾಗಿಲುಗಳಿವೆ. ಈ ಕೋಟೆಯ ಸುತ್ತು ಬುಕ್ಕನ ಕಾಲದಲ್ಲಿ ನಿರ್ಮಾಣಗೊಂಡಿದ್ದನ್ನು ಸಿಂಘಾರದ ಹೆಬ್ಬಾಗಿಲನ್ನು ಉಲ್ಲೇಖಿಸುವ ಶಾಸನವು ಪುಷ್ಟಿಕರಿಸುತ್ತದೆ. ಶಾಸನವು ಹೀಗಿದೆ.[೧೧]

ಶ್ರೀ ವೀರ ಬುಕ್ಕರಾಯನ ವಿಜಯ
ನಗರ ಪಟ್ಟಣದ ಮೂಡಣ ಸಿಂ
ಘಾರದ ಹೆಬ್ಬಾಗಿಲ ಬಡಗಣ ಮೂಲೆ
ಯ ಅರೆಯ ಮೇಲಣ ಆನೆಯ ಗೊಂದಿಯ ಕೊತ್ತಣಕ್ಕೆ ಮಂಗಳಮ
ಹಾ ಶ್ರೀ ಶ್ರೀ - - - - - - - - - -

ಜೈನ ಬಸದಿಯ ಸಮೀಪದ ಸೋಮವಾರ ಬಾಗಿಲಿನ ಉತ್ತರಕ್ಕಿರುವ ಬೆಟ್ಟದ ಮೇಲಿನ ಗುಂಡಿನ ಶಾಸನದಲ್ಲಿ ಬರುವ "ಶ್ರೀ ವೀರಬುಕ್ಕರಾಯನ ವಿಜಯನಗರ ಪಟ್ಟಣದ ಮೂಡಣ ಸೋಮವಾರದ ಬಾಗಿಲ ಬಡಗಣ ಬೆಟ್ಟ ಸೋಮಯ ದೇವರ ಕೊತ್ತಳದ ಎಂಬ ವಿಷಯವು ಈ ಮೇಲಿನ ಅಂಶಕ್ಕೆ ಒತ್ತು ನೀಡುತ್ತದೆ.[೧೨]

ಸಾಮ್ರಾಜ್ಯ ಬೆಳೆದಂತೆ ರಾಜಧಾನಿಯೂ ಬೆಳೆಯತೊಡಗಿತು. ಬೆಳೆದ ಪಟ್ಟಣದ ಸುತ್ತಲೂ ಎರಡನೆಯ ಸುತ್ತಿನ ಕೋಟೆಯನ್ನು ಕಟ್ಟಲಾಯಿತು. ಈ ಸುತ್ತಿನ ಸ್ವಲ್ಪ ಭಾಗ ಮಾತ್ರ ಆಗ್ನೇಯ ಭಾಗದಲ್ಲಿ ಕಾಣುತ್ತದೆ. ಇದರಲ್ಲಿ ಭೀಮನ ಬಾಗಿಲು ಇರುತ್ತದೆ. ಎರಡನೆಯ ಹರಿಹರನ ಕಾಲದಲ್ಲಿ (ಕ್ರಿ.ಶ. ೧೩೭೭ - ೧೪೦೪) ಬೆಳೆದ ಪಟ್ಟಣದ ಸುತ್ತ ಮೂರನೆಯ ಕೋಟೆಯನ್ನು ಕಟ್ಟಲಾಯಿತು. ಈ ಕೋಟೆಯ ಸುತ್ತನ್ನು, ಬೇಟೆಕಾರರ ಹೆಬ್ಬಾಗಿಲು ಹಾಗೂ ಹೊದೆಯ ಬಾಗಿಲನ್ನು ಉಲ್ಲೇಖಿಸುವ ಶಾಸನಗಳು ದೃಢಿಕರಿಸುತ್ತವೆ. ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯ ದಿಕ್ಕಿನ ಕಣಿವೆಯಲ್ಲಿರುವ ಬೇಟೆಕಾರರ ಹೆಬ್ಬಾಗಿಲಿನ ಪೂರ್ವಕ್ಕಿರುವ ಗುಂಡಿನ ಮೇಲಿನ ಕ್ರಿ.ಶ. ೧೩೮೦ರ ಶಾಸನದಲ್ಲಿ[೧೩] ಈ ಮೊದಲೇ ಇಲ್ಲಿ ಕೋಟೆ ಇದ್ದುದನ್ನು ಸ್ಪಷ್ಟಪಡಿಸುತ್ತದೆ. ಸುಸ್ಥಿತಿಯಲ್ಲಿರುವ ಈ ಕೋಟೆಯು ಮಾಲ್ಯವಂತ ಪರ್ವತವನ್ನು ಒಳಗೊಂಡ ವಿಶಾಲ ಪ್ರದೇಶವನ್ನು ಸುತ್ತುವರೆದಿದೆ. ಇದರಲ್ಲಿ ಕೋಟಿಶಂಕರ ದೇವರ ಬಾಗಿಲು, ಜಡೆಶಂಕರ ದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ ಹೊದೆಯ ಬಾಗಿಲು, ಅರೆಶಂಕರ ಬಾಗಿಲು ರೆಮ್ಮುದಿಡ್ಡಿ, ಉದಯಗಿರಿ ಬಾಗಿಲು ಗುಮ್ಮಟದ ಹೆಬ್ಬಾಗಿಲುಗಳಿವೆ.

ಎರಡನೆಯ ದೇವರಾಯನ ಕಾಲದಲ್ಲಿ (ಕ್ರಿ.ಶ. ೧೪೨೪ - ೧೪೪೬) ಪಟ್ಟಣವು ಸಮೃದ್ಧಿಯಿಂದ ವಿಜೃಂಭಿಸಿತು. ಆಗಲೇ ರಾಜ್ಯದ ವಿಸ್ತಾರ ಹೆಚ್ಚುತ್ತಾ ಹೋಯಿತು. ಹಾಗಾಗಿ ಇಮ್ಮಡಿ ದೇವರಾಯನು ಕೋಟೆಯ ನಾಲ್ಕನೆಯ ಸುತ್ತನ್ನು ಕಟ್ಟಿಸಿರಬಹುದು.[೧೪] ಇದು ಪ್ರಸ್ತುತ ಆಗ್ನೇಯ ಹಾಗೂ ನೈರುತ್ಯ ಭಾಗಗಳಲ್ಲಿ ಮಾತ್ರ ಉಳಿದುಕೊಂಡಿದೆ. ಇದರೊಳಗೆ ವರದರಾಜಮ್ಮನ ಪಟ್ಟಣವಿತ್ತು. ಈ ಕೋಟೆಯ ಸುತ್ತಿನಲ್ಲಿ ಪೆನುಗೊಂಡ ಬಾಗಿಲು ಇರುವುದನ್ನು ಶಾಸನದಲ್ಲಿ ಕಾಣಬಹುದು.[೧೫]

ಕೋಟೆಯ ಕೊನೆಯ ಸುತ್ತಿನ ಹೊರಗೆ ಇನ್ನೊಂದು ತರಹದ ಸಂರಕ್ಷಣಾ ವ್ಯವಸ್ಥೆ ಇದ್ದುದು ಕ್ರಿ.ಶ. ೧೫೨೦ ರಲ್ಲಿ ವಿಜಯನಗರಕ್ಕೆ ಭೇಟಿನೀಡಿದ್ದ ಪೋರ್ಚ್‌ಗೀಸ್ ಪ್ರವಾಸಿ ಡಾಮಿನಿಗೊ ಪಾಯಸ್ ನಿಂದ ತಿಳಿಯುತ್ತದೆ. ಕೆಳಮಟ್ಟದಲ್ಲಿಯ ಭೂಮಿಯಲ್ಲಿ ಎದೆ ಮಟ್ಟದ ಚೂಪಾದ ಕಲ್ಲುಗಳನ್ನು ನೆಟ್ಟಿದ್ದರು. ಇವು ಗುಡ್ಡ ಪ್ರದೇಶಗಳನ್ನು ತಲುಪುವವರೆಗೆ ಮುಂದುವರೆದಿದ್ದವು. ಇಂತಹ ಕಲ್ಲುಗಳನ್ನು ಕುದುರೆ ಮತ್ತು ಮನುಷ್ಯನ ಚಲನೆಯನ್ನು ತಡೆಯಲು ನೆಟ್ಟಿದ್ದುದನ್ನು ಅಬ್ದುಲ್ ರಜಾಕ್ ಸಹ ದಾಖಲಿಸಿದ್ದಾನೆ. ಈ ಕಲ್ಲುಗಳು ಈಗ ಹಂಪಿ ಪರಿಸರದಲ್ಲಿ ಕಾಣದಿದ್ದರೂ ಕುಮ್ಮಟದುರ್ಗದಲ್ಲಿ ಕಂಡುಬರುತ್ತವೆ.

ಕೋಟೆಯ ಕೊನೆಯ ಸುತ್ತು ಕಮಲಾಪುರದ ರಾಯರ ಕೆರೆಯ ಹಿಂಭಾಗದಿಂದ ಸಾಗಿ ಮಲಪನಗುಡಿಯ ಮೂಲಕ ಹೊಸಪೇಟೆಯನ್ನು ಬಳಸಿಕೊಂಡು ಈಗಿನ ತುಂಗಭದ್ರಾ ಅಣೆಕಟ್ಟಿನ ಹಿಂಭಾಗದವರೆಗೂ ವಿಸ್ತರಿಸಿರುವುದನ್ನು ಗುರುತಿಸಬಹುದು. ಇದಕ್ಕೆ ಪೂರಕವೆಂಬಂತೆ ಮಲಪನಗುಡಿ ಹಾಗೂ ತುಂಗಭದ್ರಾ ಅಣೆಕಟ್ಟಿನ ಹಿಂಬದಿಯಲ್ಲಿ ಪ್ರವೇಶದ್ವಾರಗಳಿವೆ. ಅಣೆಕಟ್ಟಿನ ಹಿಂಬದಿಯ ದ್ವಾರಕ್ಕೆ ಗೋವಾ ಗೇಟ್ ಎಂದು ಕರೆಯಲಾಗುತ್ತಿದೆ.


ಇಂದಿಗೂ ಸುಸ್ಥಿತಿಯಲ್ಲಿದೆ. ಪ್ರಾಯಶಃ ವಿಜಯನಗರದಿಂದ ಗೋವಾಕ್ಕೆ ಹೋಗವವರಿಗೆ ಹಾಗೂ ಬರುವವರಿಗಾಗಿ ಈ ಗೇಟ್ ಬಳಕೆಯಾಗುತ್ತಿದ್ದರಿಂದ ಗೋವಾ ಗೇಟ್ ಎಂದೇ ಖ್ಯಾತಿಯಾಗಿದೆ. ಇದು ಹಂಪಿಯ ಹಿಂಭಾಗದಿಂದ ನಗರಕ್ಕೆ ಪ್ರವೇಶವನ್ನು ಕೊಡುತ್ತಿತ್ತು.

ಸುಮಾರು ಮೂನ್ನೂರು ವರ್ಷಗಳ ಕಾಲ ವಿಜೃಂಭಿಸಿದ ವಿಜಯನಗರ ಅವಸಾನ ಹೊಂದುವ ಕಾಲ ಹತ್ತಿರವಾಯಿತು. ಕ್ರಿ.ಶ. ೧೫೬೫ ರಲ್ಲಿ ರಕ್ಕಸ-ತಂಗಡಿಯಲ್ಲಿ ನಡೆದ ನಿರ್ಣಯಕ ಕದನದಲ್ಲಿ ವಿಜಯನಗರ ಪರಾಜಯ ಹೊಂದಿತು. ಆಗ ಅಳಿಯ ರಾಮರಾಯ ಹತನಾದ ಉಳಿದ ತಿರುಮಲ ರಾಜಧಾನಿಗೆ ಹಿಂದಿರುಗಿ ರಾಣಿವಾಸದವರನ್ನು ಹಾಗೂ ಬಂಧು ವರ್ಗದವರನ್ನು ಸಾಧ್ಯವಾದಷ್ಟು ಧನ ಕನಕಗಳನ್ನು ಸಾವಿರಾರು ಆನೆಗಳ ಮೇಲೆ ಹೇರಿಕೊಂಡು ಚಂದ್ರಗಿರಿಗೆ ಹೋದನು. ಬೆನ್ನಟ್ಟಿ ಬಂದ ಶತ್ರುಸೇನೆ ರಾಜಧಾನಿಯನ್ನು ಬೆಂಕಿ, ಖಡ್ಗ, ಹಾರೆ ಮತ್ತು ಕೊಡಲಿಗಳಿಂದ ಐದು ತಿಂಗಳು ಕಾಲ ಧ್ವಂಸ ಮಾಡಿ ಹಾಳುಗೆಡುವಿತಂತೆ. ಆಗ ಕೋಟೆಯ ಬಹುತೇಕ ಭಾಗಗಳು ಭಗ್ನಗೊಂಡಿವೆ.

ರಾಜಧಾನಿಯನ್ನು ಕಟ್ಟುವಾಗ ಈ ಸ್ಥಳವನ್ನು ಆಯ್ಕೆ ಮಾಡಲು ಸ್ವಾಭಾವಿಕವಾಗಿ ರಕ್ಷಣೆ ನೀಡುವ ನದಿ ಮತ್ತು ಗುಡ್ಡಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ರಾಜಧಾನಿಯ ಉತ್ತರಕ್ಕೆ ತುಂಗಭದ್ರಾನದಿ ಮತ್ತು ಗುಡ್ಡಗಳ ಸಾಲು ನೈಸರ್ಗಿಕ ರಕ್ಷಣೆಯನ್ನು ನೀಡುತ್ತವೆ. ಪೂರ್ವ ದಿಕ್ಕಿಗೂ ಅನೇಕ ಗುಡ್ಡಗಳ ಸಾಲುಗಳಿವೆ. ಈ ಗುಡ್ಡಗಳ ಮಧ್ಯದಲ್ಲಿ, ಮೇಲೆ ಕೆಲವೆಡೆ ನೆಲಮಟ್ಟದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಭದ್ರವಾದ ಕೋಟೆಯು ಅನೇಕ ಸುತ್ತುಗಳಲ್ಲಿದ್ದು, ರಾಜಧಾನಿಯನ್ನು ರಕ್ಷಿಸುತ್ತಿತ್ತು. ಈ ಮೇಲಿನ ಅಂಶಗಳಿಂದ ಇದು ನೆಲದುರ್ಗ, ಗಿರಿದುರ್ಗ ಮತ್ತು ಜಲದುರ್ಗದ ಲಕ್ಷಣಗಳನ್ನು ಹೊಂದಿದೆ. ಸಂಪ್ರದಾಯ ಹಾಗೂ ವಿದೇಶಿ ಪ್ರವಾಸಿಗರ ಪ್ರಕಾರ ವಿಜಯನಗರ ಏಳುಸುತ್ತಿನಕೋಟೆಯಿಂದ ಸುತ್ತುವರೆಯಲ್ಪಟ್ಟಿತ್ತು. ಈಗ ಕೆಲವು ಸುತ್ತುಗಳು ಮಾತ್ರ ಕಾಣುತ್ತವೆ.


ಅಳ್ವೇರಿಗಳು ಬಹಳ ದಪ್ಪವಾಗಿದ್ದು, ಹೊರಮೈಗೆ ದಪ್ಪ ಕಲ್ಲುಗಳಿದ್ದು, ಒಳಮೈಗೆ ಮಣ್ಣಿನ ಇಳಿವೊರೆ (ramp) ಇದೆ. ಹೊರಭಾಗದಲ್ಲಿ ದೊಡ್ಡ ಕಲ್ಲುಗಳ ಮಧ್ಯದಲ್ಲಿ ಯಾವುದೇ ಗಾರೆಯನ್ನು ಉಪಯೋಗಿಸದೆ ಒಂದು ಕಲ್ಲು ಮತ್ತೊಂದರ ಜೊತೆಗೆ ಸರಿಯಾಗಿ ಹೊಂದಿಕೊಳ್ಳುವಂತೆ ಸಂದುಗಳಿಲ್ಲದೆ ಕಟ್ಟಲಾಗಿದೆ. ದೊಡ್ಡ ಕಲ್ಲುಗಳನ್ನು ಮೇಲೆಕ್ಕೆತ್ತುವಾಗ ಆಗುವ ಭಾರವನ್ನು ಕಡಿಮೆ ಮಾಡುವದಕ್ಕಾಗಿ ಬೆಣೆಯಾಕಾರದ (wedge- shaped) ಕಲ್ಲುಗಳನ್ನು ಬಹಳ ಜಾಣ್ಮೆಯಿಂದ ಆಯಾತಾಕಾರದ ಕಲ್ಲುಗಳ ಬದಲಿಗೆ ಉಪಯೋಗಿಸಲಾಗಿದೆ. ಇವುಗಳ ಹೊರಭಾಗ ಅಗಲವಾಗಿದ್ದು, ಒಳಭಾಗವು ಚೂಪಾಗಿರುತ್ತದೆ. ಒಳಭಾಗದಲ್ಲಿ ಕಲ್ಲುಗಳ ಮಧ್ಯದ ಸಂದುಗಳನ್ನು ಸಣ್ಣ ಕಲ್ಲು ಮತ್ತು ಮಣ್ಣಿನಿಂದ ತುಂಬಲಾಗಿದೆ. ಕೋಟೆ ಗೋಡೆಯ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಅಲ್ಲಲ್ಲಿ ಚೌಕಾಕಾರದ

ಕೊತ್ತಳಗಳನ್ನು ನಿರ್ಮಿಸಲಾಗಿದೆ. ಈ ಕೊತ್ತಳಗಳು ಚೌಕಾಕಾರದಲ್ಲಿದ್ದು ಮುಂದೆ ಚಾಚಿಕೊಂಡಿರುವ ಕೋಟೆ ಗೋಡೆಯ ಭಾಗಗಳಾಗಿವೆ. ಯುದ್ಧದ ಸಮಯದಲ್ಲಿ ಹೆಚ್ಚು ಸೈನಿಕರು ನಿಲ್ಲಲು ಸಹ ಕೊತ್ತಳಗಳು ಉಪಯೋಗವಾಗುತ್ತವೆ. ಕೊತ್ತಳಗಳ ಮೇಲೆ ಕಾವಲಿನವರು ನಿಂತು ಕೋಟೆಯನ್ನು ಸಂರಕ್ಷಿಸುತ್ತಿದ್ದರು. ಇವರಿಗಾಗಿ ನಿರ್ಮಿಸಿದ ಚಿಕ್ಕ ಕಟ್ಟಡಗಳ ಅವಶೇಷಗಳು ಕೆಲವು ಕೊತ್ತಳಗಳ ಮೇಲೆ ಈಗಲೂ ಕಾಣುತ್ತಿವೆ. ಕೋಟೆ ಪಕ್ಕದಲ್ಲಿ ನೈಸರ್ಗಿಕವಾಗಿ ಎತ್ತರದಲ್ಲಿರುವ ಕೆಲವು ಸ್ಥಳಗಳನ್ನು ಸಹ ಕೊತ್ತಳಗಳಂತೆ ಉಪಯೋಗಿಸಲಾಗಿದೆ. ಕೋಟೆಯ ಪಕ್ಕದಲ್ಲಿದ್ದ ಅಗಳು ಈಗ ಮುಚ್ಚಿಹೋಗಿದೆ. ಕೋಟೆ ಗೋಡೆಗಳಲ್ಲಿರುವ ಬಾಗಿಲುಗಳು ಒಂದೇ ತರಹವಿಲ್ಲ. ಪ್ರಾಮುಖ್ಯತೆ ಹಾಗೂ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳೆಂದು ವಿಂಗಡಿಸಿದ್ದುದು ಅಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ.



ಕೋಟೆಯ ಗೋಡೆ

ಹೆಬ್ಬಾಗಿಲುಗಳು ಅತಿ ದೊಡ್ಡವು. ಇವುಗಳನ್ನು ಮುಖ್ಯ ಪ್ರವೇಶದ್ವಾರಗಳಾಗಿ ಉಪಯೋಗಿಸುತ್ತಿದ್ದರು. ಬಾಗಿಲುಗಳು ಮಧ್ಯಮಗಾತ್ರದವು. ದಿಡ್ಡಿಗಳು ಚಿಕ್ಕ ಬಾಗಿಲುಗಳಾಗಿದ್ದು, ಜನರು ತಮ್ಮ ದಿನ ನಿತ್ಯದ ಕೆಲಸಗಳಿಗಾಗಿ ಪಟ್ಟಣದ ಎಲ್ಲಾ ದಿಕ್ಕಿಗೂ ಸುಲಭವಾಗಿ ಹೋಗಲು ಅನುಕೂಲವಾಗುವಂತೆ ನಿರ್ಮಿಸಲ್ಪಟ್ಟವು. ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳ ವಿನ್ಯಾಸವನ್ನು ಯುದ್ಧ ತಂತ್ರದ ದೃಷ್ಟಿಯಿಂದ ಬಹಳ ಎಚ್ಚರಿಕೆಯಿಂದ ಮಾಡಲಾಗಿದೆ. ಕೋಟೆಯೊಳಗೆ ನೇರವಾದ ಪ್ರವೇಶವನ್ನು ಇವು ನೀಡುವುದಿಲ್ಲ. ದೂರದಿಂದ ನೋಡಿದಾಗ ಪ್ರವೇಶದ್ವಾರವೇ ಕಾಣುವುದಿಲ್ಲ. ಪ್ರವೇಶದ್ವಾರದ ಎರಡೂ ಪಾರ್ಶ್ವದಲ್ಲಿ ಮತ್ತು ಮುಂಭಾಗದಲ್ಲಿ ಅದೇ ರೀತಿಯ ಗೋಡೆಗಳನ್ನು ಕಟ್ಟಿ ಅದನ್ನು ಮರೆಮಾಡಿ ಗೋಡೆಯಲ್ಲಿ ಎರಡನೆಯ ಪ್ರವೇಶದ್ವಾರವನ್ನು ಕಲ್ಪಿಸಲಾಗಿದೆ. ಎರಡನೆಯ ದ್ವಾರವು ಪಾರ್ಶ್ವದಲ್ಲಿರುವದರಿಂದ ಇದೂ ಸಹ ದೂರದಿಂದ ಕಾಣುವುದಿಲ್ಲ. ಹೀಗಾಗಿ ಒಳಗೆ ಬರುವ ದಾರಿಯು ಅಂಕು ಡೊಂಕಾಗುವುದು. ಸಾಮಾನ್ಯವಾಗಿ ಬಾಗಿಲುಗಳ ಪಾರ್ಶ್ವದಲ್ಲಿ ಎರಡು ದೊಡ್ಡ ಕೊತ್ತಳಗಳಿವೆ. ಬಾಗಿಲಿನ ಮೂಲಕ ಅಂಕುಡೊಂಕಾದ ದಾರಿಯಲ್ಲಿ ಒಳಪ್ರವೇಶಿಸಲು ಪ್ರಯತ್ನಿಸುವ ವೈರಿ ಪಡೆಯನ್ನು ಕೋಟೆ ಗೋಡೆಯ ಮತ್ತು



ಕೊತ್ತಳಗಳ ಮೇಲೆ ಸಂರಕ್ಷಣೆಗಾಗಿ ನಿಂತ ಸೈನಿಕರು ಸುಲಭವಾಗಿ ಸೆದೆ ಬಡಿಯಲು ಅನುಕೂಲವಾಗುತ್ತಿತ್ತು. ಬಾಗಿಲುಗಳಲ್ಲಿ ಕಾವಲುಗಾರರಿರುತ್ತಿದ್ದರು. ಇವರು ಖಡ್ಗ, ದೊಣ್ಣೆ ಮತ್ತು ಚಾವಟಿಗಳನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ಇಂತಹ ಕೆಲವು ಶಿಲ್ಪಗಳನ್ನು ಬಾಗಿಲುಗಳ ತೋಳಗಂಬಗಳ ಮೇಲೆ ಕೆತ್ತಲಾಗಿದೆ.

ಪ್ರವೇಶದ್ವಾರಗಳು ಕಂಬ ಮತ್ತು ತೊಲೆಗಳಿಂದ, ಇಟ್ಟಿಗೆ ಗಾರೆ ಬಳಸದೆ, ಹಿಂದೂ ಶೈಲಿಯಲ್ಲಿ ಕಟ್ಟಲಾಗಿದೆ. ಬಾಗಿಲು ತೋಳುಗಳ ಮೇಲೆ ದ್ವಾರಪಾಲಕರು ಮತ್ತು ಅಲಂಕಾರಿಕ ಶಾಖೆಗಳನ್ನು ಕೆತ್ತಿದೆ. ಪ್ರವೇಶಕ್ಕಿಂತ ಮೊದಲು ದೊಡ್ಡ ಆವರಣವಿದೆ. ಪ್ರವೇಶದ ಇಕ್ಕೆಲಗಳಲ್ಲಿ ಕಂಬಗಳ ಅಂಕಣಗಳುಳ್ಳ ಕಟ್ಟೆಗಳಿವೆ. ಸೈನಿಕರು ಮತ್ತು ಪ್ರವಾಸಿಗರು ವಿಶ್ರಾಂತಿ ಪಡೆಯಲು ಇವು ಅನುಕೂಲವಾಗಿವೆ. ನೇರ ಪ್ರವೇಶದ ಕದಗಳನ್ನು ಹಾಕಿದಾಗ ಬಳಸಲು ಪಕ್ಕದಲ್ಲಿ L ಅಥವಾ U ಆಕಾರದ ಉಪ ಪ್ರವೇಶಗಳನ್ನು ಒದಗಿಸಿವೆ. ಕೆಲವು ಪ್ರವೇಶದ್ವಾರಗಳ ರಚನೆಯಲ್ಲಿ ಮುಸ್ಲಿಂ ವಾಸ್ತುವಿನ ಪ್ರಭಾವವು ಕಾಣುತ್ತದೆ. ಗುಮ್ಮಟದ ಬಾಗಿಲೆಂದೆ ಕರೆಯುವ ಪ್ರವೇಶದ್ವಾರದ ಮೇಲಿನ ಗುಮ್ಮಟ ಮತ್ತು ಬೇಟೆಕಾರರ ಹೆಬ್ಬಾಗಿಲು ಮತ್ತು ಅರೆಶಂಕರ ಬಾಗಿಲುಗಳ ಮೇಲಿನ ಕಮಾನುಗಳು ಮುಸ್ಲಿಂ ಶೈಲಿಯಲ್ಲಿವೆ. ಕೆಲವು ಬಾಗಿಲುಗಳ ಗೋಡೆಗಳನ್ನು ಶಿಲ್ಪಗಳಿಂದ ಅಲಂಕರಿಸಿದೆ ಹಾಗೂ ಕೆಲವು ಬಾಗಿಲುಗಳ ಆವರಣದಲ್ಲಿ ದೇವಾಲಯಗಳಿವೆ.

ವಿಜಯನಗರದ ಕೋಟೆಯು ಬಹುದೊಡ್ಡದಿದೆ. ಇದರ ಭಾಗಗಳನ್ನು ವೇಗವಾಗಿ ಪತ್ತೆ ಹಚ್ಚುವುದು ಯುದ್ಧ ಸಮಯದಲ್ಲಿ ಅತ್ಯವಶ್ಯಕವಾಗುತ್ತದೆ. ಕೋಟೆಯ ಯಾವುದಾದರೊಂದು ಭಾಗಕ್ಕೆ ಸೈನಿಕರನ್ನು ಕಳುಹಿಸುವಾಗ ಅವರು ಯಾವುದೇ ಗೊಂದಲಕ್ಕೊಳಪಡದೆ ನೇರವಾಗಿ ವೇಗದಲ್ಲಿ ಹೋಗಿ ಆ ಭಾಗವನ್ನು ಸೇರುವಂತೆ ಕೋಟೆಯ ವಿವಿಧ ಭಾಗಗಳಿಗೆ ಹೆಸರುಗಳನ್ನು ಕೊಟ್ಟು ಗುರುತಿಸುವುದು ಅತಿ ಮುಖ್ಯವಾದ ವಿಷಯ. ಹಂಪಿ ಕೋಟೆಯಲ್ಲಿ ಇಂತಹ ವ್ಯವಸ್ಥೆ ಇದ್ದುದು ಇತ್ತೀಚೆಗಷ್ಟೆ ಪತ್ತೆ ಮಾಡಿ ಹೊರತಂದ ಹಲವಾರು ಶಾಸನಗಳಿಂದ ಬೆಳಕಿಗೆ ಬಂದಿದೆ. ಕೋಟೆಯ ಬಾಗಿಲುಗಳಿಗೆ ಹಾಗೂ ಕೊತ್ತಳಗಳಿಗೆ ಹೆಸರುಗಳನ್ನಿಟ್ಟು ಅವುಗಳನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ ಮಾಡಲಾಗಿದೆ. ಶಾಸನ ಮತ್ತು ಇತರೆ ಆಧಾರದ ಮೇಲೆ ಇದುವರೆಗೆ ಪತ್ತೆ ಹಚ್ಚಿದ ಬಾಗಿಲು ಹಾಗೂ ಕೊತ್ತಳಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಸಿಂಘಾರದ ಹೆಬ್ಬಾಗಿಲು : ರಾಜಧಾನಿಯ ಸಿಂಘಾರಪುರಕ್ಕೆ ಈ ಹೆಬ್ಬಾಗಿಲು ಪ್ರವೇಶ ನೀಡುವದರಿಂದ ಇದನ್ನು ಸಿಂಘಾರದ ಹೆಬ್ಬಾಗಿಲೆಂದೆ ಕರೆಯಲಾಗಿದೆ. ಆನೆ ಸಾಲಿನ ಹಿಂಭಾಗದಲ್ಲಿ ಈ ಹೆಬ್ಬಾಗಿಲು ಬರುತ್ತದೆ. ಇದರ ಉಲ್ಲೇಖವು ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕಿರುವ ಚಿಕ್ಕ ಬೆಟ್ಟವೊಂದರ ಕಲ್ಲಿನಲ್ಲಿರುವ ಶಾಸನದಲ್ಲಿ ಬರುತ್ತದೆ.[೧೬]



ಸಿಂಘಾರದ ಹೆಬ್ಬಾಗಿಲು

ದೂರದಿಂದ ನೋಡಿದಾಗ ಈ ಹೆಬ್ಬಾಗಿಲು ಕಾಣುವುದಿಲ್ಲ. ಪ್ರವೇಶದ್ವಾರದ ಎರಡೂ ಬದಿಗೆ ಬಲಿಷ್ಠವಾದ ಗೋಡೆಗಳಿವೆ. ಮುಂಭಾಗದಲ್ಲಿಯೂ ಇದೇ ರೀತಿಯ ಗೋಡೆಗಳಿವೆ. ಹಾಗಾಗಿ ಒಳಗೆ ಬರುವ ದಾರಿಯು ಅಂಕುಡೊಂಕಾಗುವುದು. ಮಧ್ಯದಲ್ಲಿ ವಿಶಾಲವಾದ ಆವರಣವಿದೆ. ಈ ಆವರಣದ ಎಡಭಾಗದ ವೇದಿಕೆಯ ಮೇಲೆ ವೈಷ್ಣವ ದೇವಾಲಯವಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರವೇಶದ್ವಾರದ ಎರಡೂ ಬದಿಗೆ ಬಾಗಿಲು ತೋಳುಗಳಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬದಲ್ಲಿ ಯಾಳಿ, ಆಂಜನೇಯ ಇತ್ಯಾದಿ ಉಬ್ಬುಗೆತ್ತನೆಗಳಿವೆ. ಆವರಣದ ಪಶ್ಚಿಮದ ಗೋಡೆಯಲ್ಲಿ ಗಣೇಶ ಸಿಂಗಾರ ಮಾಡಿಕೊಳ್ಳುವ ಸ್ತ್ರೀ, ನಂದಿ, ಆನೆ, ವೀರರ ಉಬ್ಬುಶಿಲ್ಪಗಳಿವೆ. ಬಾಗಿಲು ತೋಳುಗಳಲ್ಲಿ ಎರಡೂ ಬದಿಗೆ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಪ್ರವೇಶದ್ವಾರದ ಒಳಬದಿಗೆ ಇಕ್ಕೆಲಗಳಲ್ಲಿ ಕಟ್ಟೆಗಳಿವೆ. ಪ್ರವೇಶದ್ವಾರದ ಪಾರ್ಶ್ವದಲ್ಲಿ ಉಪಬಾಗಿಲನ್ನು ನಿರ್ಮಿಸಲಾಗಿದೆ. ಈ ದ್ವಾರದ ಮೂಲಕ ಪಶ್ಚಿಮಕ್ಕೆ ಸಾಗಿದರೆ ಸಿಂಘಾರದಪುರ ಪ್ರದೇಶ ಸಿಗುವುದು. ಸಿಂಘಾರಪುರದ ಉಲ್ಲೇಖ ಬರುವ ಶಾಸನವು ವಿಠ್ಠಲ ಸ್ವಾಮಿ ದೇವಾಲಯದ ಮುಂದಿರುವ ಮಂಟಪದ ದಕ್ಷಿಣ ಗೋಡೆಯಲ್ಲಿದೆ.[೨೭] ಈ ಹೆಬ್ಬಾಗಿಲು ನಗರಕ್ಕೆ ನೇರವಾಗಿ ಪ್ರವೇಶವನ್ನು ಕೊಡುತ್ತದೆ.

ಬೇಟೆಕಾರರ ಹೆಬ್ಬಾಗಿಲು : ವಿಜಯನಗರ ಕಾಲದಲ್ಲಿ ಬೇಟೆಗೆ ಪ್ರಧಾನ ಪಾತ್ರವಿತ್ತು. ಅಂತೆಯೇ ಅರಸರು ತಮ್ಮ ಮನೋರಂಜನೆಗಾಗಿ ಬೇಟೆಯಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಅಡವಿಯಲ್ಲಿ ಬೇಟೆಯಾಡಿ ಈ ದ್ವಾರದ ಮೂಲಕ ನಗರದೊಳಕ್ಕೆ ಪ್ರವೇಶ ಮಾಡಲಾಗುತ್ತಿತ್ತು. ಹಾಗಾಗಿ ಇದನ್ನು ಬೇಟೆಕಾರರ ಹೆಬ್ಬಾಗಿಲೆಂದು ಕರೆದಿರುವುದು.



ಬೇಟೆಕಾರರ ಹೆಬ್ಬಾಗಿಲು

ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯ ದಿಕ್ಕಿಗೆ ಬೇಟೆಕಾರರ ಹೆಬ್ಬಾಗಿಲು ಕಂಡುಬರುತ್ತದೆ. ಹೆಬ್ಬಾಗಿಲಿನ ಪೂರ್ವಕ್ಕಿರುವ ಕಲ್ಲುಗುಂಡಿನ ಮೇಲಿರುವ ಶಾಸನವು ಈ ಕೆಳಗಿನಂತಿದೆ.

ಶ್ರೀ ಶಕ ವರುಷ ೧೩೧೨ ರ ಉದ್ರಿ ಸಂವತ್ಸರದ ಆಶ್ವೀಜ ಸು ೧ ಗು
ಶ್ರೀ ಮನ್ಮಹಾರಾಜಾಧಿರಾಜ
ರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ಹರಿಹರ ಮಹಾರಾಯರ ಮ
ನೆಯ ಎಡವಂಕದ ಬೇಟೆಕಾರ ಮಲಗೆಯ ನಾಯ್ಕನ ಮಗ ಬಢ್ಢೆಯನಾಯ್ಕ
ನು "ಬೇಟೆಕಾರರ ಹೆಬ್ಬಾಗಿಲ" ಮೂಡಣ ದಿಕ್ಕಿನ ಒರತೆಯ ಮೈಲಾರದೇವರ ಪ್ರ
ತಿಷ್ಠೆ ಆಗ್ನಿದಿಸೆಯ ಆಲದ ಅರವೆ ಆ ದೇವರ ಹಿಂದಣ ವಾಯುತ್ಯದ ದಿಕ್ಕಿ
ನ ಒರತೆಯ್ವು ಕೊಂಡವನು ಮಾಡಿದನು ಮಂಗಳ ಮಹಾ ಶ್ರೀ ಶ್ರೀ ಶ್ರೀ

ಈ ಶಾಸನವು ಬೇಟೆಕಾರರ ಹೆಬ್ಬಾಗಿಲಿನ ಪರಿಚಯವನ್ನು ಸ್ಪಷ್ಟವಾಗಿ ಮಾಡಿಕೊಡುತ್ತದೆ. ಈ ಹೆಬ್ಬಾಗಿಲು ಸಿಂಘಾರದ ಹೆಬ್ಬಾಗಿಲಿನಂತೆ ಪ್ರಧಾನವಾದ ಮಹದ್ವಾರವೆನಿಸಿದೆ. ಸಿಂಘಾರದ ಹೆಬ್ಬಾಗಿಲು ೨ನೆ ಹಂತಕ್ಕೆ ಪೂರ್ವದಿಂದಲೇ ನಗರಕ್ಕೆ ಪ್ರವೇಶ ಕೊಟ್ಟಿದೆ. ಹೊರಕೋಟೆಯ ಬೇಟೆಕಾರರ ಹೆಬ್ಬಾಗಿಲು ಮೊದಲಿಗೆ ಪೂರ್ವದಿಂದಲೇ ನಗರಕ್ಕೆ ಪ್ರವೇಶವನ್ನು ಕೊಡುತ್ತದೆ. ಇದರ ಸುತ್ತಲೂ ಬೆಟ್ಟ - ಗುಡ್ಡ ಮತ್ತು ಕಾಡು ಆವರಿಸಿದೆ. ಎರಡು ಬೆಟ್ಟಗಳ ಸಂದನ್ನು (ಕಣಿವೆ) ಉಪಯೋಗಿಸಿ ಬಹು ಜಾಣ್ಮೆಯಿಂದ ಈ ಹೆಬ್ಬಾಗಿಲನ್ನು ಕಟ್ಟಲಾಗಿದೆ. ದೂರದಿಂದ ನೋಡಲು ಕಾಣದಂತೆ ಗೋಡೆಗಳ ಮರೆಯಲ್ಲಿದೆ. ಪ್ರವೇಶದ್ವಾರದ ಪಾರ್ಶ್ವದಲ್ಲಿರುವ ಗೋಡೆಗಳು ವಿಶಾಲ ಆವರಣವನ್ನು ನಿರ್ಮಿಸಿ ಮುಂದೆ ಹಾಗೆಯೇ ಗೋಡೆಗಳನ್ನು ಉತ್ತರಕ್ಕೆ ತಿರುಗಿಸಲಾಗಿದೆ. ಮಧ್ಯದಲ್ಲಿರುವ ವಿಶಾಲವಾದ ಆವರಣದಲ್ಲಿ ದಕ್ಷಿಣಾಭಿಮುಖವಾದ ದೇಗುಲವಿದೆ. ಇದು ಗರ್ಭಗೃಹ, ಸಭಾಮಂಟಪಗಳನ್ನು



ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಗಳಿಲ್ಲ. ಸಭಾಮಂಟಪದಲ್ಲಿ ಆಂಜನೇಯನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲೆ ದ್ರಾವಿಡಶೈಲಿಯ ಶಿಖರವಿದೆ. ಸಭಾಮಂಟಪದ ಮೇಲೆ ಕೈಪಿಡಿಗೋಡೆಯಲ್ಲಿ ದೇವಕೋಷ್ಠಕಗಳಿವೆ.

ಬೇಟೆಕಾರರ ಹೆಬ್ಬಾಗಿಲು ಪೂರ್ಣವಾಗಿ ಗೋಚರಿಸದಿದ್ದರೂ ಇಟ್ಟಿಗೆ - ಗಾರೆ ಕಲ್ಲಿನ ಅವಶೇಷಗಳು ವ್ಯಾಪಕವಾಗಿ ಕಂಡುಬರುತ್ತವೆ. ಬೇಟೆಕಾರರಿಗಾಗಿ ಪ್ರತ್ಯೇಕ ಹೆಬ್ಬಾಗಿಲನ್ನೇ ನಿರ್ಮಿಸಿರುವ ವಿಜಯನಗರ ಅರಸು ಬೇಟೆಗೆ ಬಹು ಪ್ರಾಮುಖ್ಯತೆಯನ್ನು ನೀಡಿದ್ದರು. ಅಂತೆಯೇ ವಿದೇಶಿ ಯಾತ್ರಿಕರಾದ ಅಬ್ದುಲ್ ರಜಾಕ್, ನ್ಯೂನಿಜ್ ಮತ್ತು ಬಾರ್ಬೋಸರು ಬೇಟೆಯ ಸಂದರ್ಭಗಳನ್ನು ವಿಸ್ತೃತವಾಗಿ ಹೇಳಿದ್ದಾರೆ.[೧೯]


ಗುಮ್ಮಟದ ಬಾಗಿಲು : ಕಮಲಾಪುರದ ಈಶಾನ್ಯ ದಿಕ್ಕಿಗೆ ಸುಮಾರು ೧ ಕಿ.ಮೀ. ದೂರದಲ್ಲಿ (H.P.C.ಯ ಬಳಿ) ಈ ಗುಮ್ಮಟದ ಬಾಗಿಲಿದೆ. ಗುಮ್ಮಟದಂತಿರುವದರಿಂದ ಇದನ್ನು ಗುಮ್ಮಟದ ಬಾಗಿಲೆಂದು ಗುರುತಿಸುತ್ತಾರೆ. ಬೃಹದಾಕಾರದ ಹಾಗೂ ಸುಸ್ಥಿತಿಯಲ್ಲಿರುವ ಹೆಬ್ಬಾಗಿಲುಗಳಲ್ಲಿ ಇದು ಒಂದು. ಪೆನುಗೊಂಡದಿಂದ ಬರುವವರು ಮೊದಲು ಪೆನುಗೊಂಡೆ ಬಾಗಿಲನ್ನು ಬಳಸಿಕೊಂಡು ಗುಮ್ಮಟ ಹಾಗೂ ಭೀಮನ ಹೆಬ್ಬಾಗಿಲುಗಳ ಮೂಲಕ ನಗರ ಪ್ರವೇಶ ಮಾಡುತ್ತಿದ್ದರು. ಹಿಂದೂ ಮುಸ್ಲಿಂ ಶೈಲಿಯಲ್ಲಿ ನಿರ್ಮಾಣವಾಗಿರುವ ಸ್ಮಾರಕಗಳಲ್ಲಿ ಗುಮ್ಮಟದ ಬಾಗಿಲು ಒಂದು.



ಗುಮ್ಮಟದ ಬಾಗಿಲು


ಪ್ರವೇಶದ್ವಾರದ ಮುಂಭಾಗಕ್ಕೆ ೨೦ ಅಡಿ ಅಗಲ ಅಂತರದಲ್ಲಿ ಅಭಿಮುಖವಾದ ಎರಡು ಗೋಡೆಗಳು ದಕ್ಷಿಣಕ್ಕೆ ಮುಂಚಾಚಿವೆ. ಇವುಗಳ ಮುಂದಿರುವುದೇ ವಿಶಾಲವಾದ ಆವರಣ. ಈ ಆವರಣದ ಪಶ್ಚಿಮ ಗೋಡೆಯಲ್ಲಿ ಉಪಬಾಗಿಲನ್ನು ಜೋಡಿಸಲಾಗಿದೆ.






ಗುಮ್ಮಟದ ಬಾಗಿಲಿನ ಪೂರ್ಣನೋಟ

ಈ ಆವರಣವನ್ನು ಸುತ್ತುವರೆದಿರುವ ಗೋಡೆಯು ಪೂರ್ವ ದಿಕ್ಕಿಗೆ ಸುಮಾರು ೧೦೦ ಅಡಿಗಳಷ್ಟು ಉದ್ದವಾಗಿದೆ. ಇದಕ್ಕೆ ಅಭಿಮುಖವಾದ ಇನ್ನೊಂದು ಗೋಡೆ ಇದೆ. ಇದರಲ್ಲಿ ಮೀನು ಮೊಸಳೆಯು ಉಬ್ಬುಗೆತ್ತನೆಗಳಿವೆ. ಇದಕ್ಕೆ ಹೊಂದಿಕೊಂಡು ಆಂಜನೇಯನ ಗುಡಿಯನ್ನು ನಿರ್ಮಿಸಲಾಗಿದೆ. ಇದು ಗರ್ಭಗೃಹ ಮಾತ್ರ ಹೊಂದಿದ್ದು, ಅದರಲ್ಲಿ ಸುಮಾರು ಆರು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಈ ಗುಡಿಯ ಎದುರಿನ ಗೋಡೆಯಲ್ಲಿ ಇಮ್ಮಡಿ ದೇವರಾಯನನ್ನು ಪ್ರತಿನಿಧಿಸುವ ಉಬ್ಬುಶಿಲ್ಪವಿದೆ.[೨೦] ಇಲ್ಲಿ ದೊರೆಯು ವಿಜಯನಗರ ಕಾಲದ ಸಾಂಪ್ರದಾಯಿಕ ಉಡುಗೆಯಲ್ಲಿ ಅಂಜಲಿ ಬದ್ಧನಾಗಿ ಶಿವಲಿಂಗದ ಎದುರು ನಿಂತಿದ್ದಾನೆ. ಇವೆರಡು ಶಿಲ್ಪಗಳ ನಡುವೆ ನಂದಿ ವಿಗ್ರಹವಿದೆ.



ಗೋಡೆಯ ಮೇಲಿರುವ ಉಬ್ಬುಶಿಲ್ಪಗಳು





ಪೂರ್ವದಿಂದ ಈ ಬಾಗಿಲಿನೊಳಗೆ ಮೊದಲು ಪ್ರವೇಶ ಮಾಡುವಾಗ ಇಕ್ಕೆಲಗಳಲ್ಲಿ ಬೃಹದಾಕಾರದ ಗೋಡೆಗಳಿವೆ. ಈ ಪ್ರವೇಶದ ಮೇಲೆ ಕಮಾನಿನಾಕಾರದ ಗುಮ್ಮಟವಿದೆ. ಇದು ಮೂರು ಸ್ತರಗಳಲ್ಲಿದ್ದು, ಪ್ರಥಮ ಹಂತದಲ್ಲಿ ನಾಲ್ಕೂ ದಿಕ್ಕುಗಳಿಗೆ ಕಮಾನುಗಳಿವೆ. ಇದರ ಮೇಲೆ ಅಡ್ಡಪಟ್ಟಿಕೆ ಹಾಕಲಾಗಿದೆ. ಎರಡನೆಯ ಹಂತದಲ್ಲಿ ಚೌಕಾಕಾರದ ನಾಲ್ಕು ಮೂಲೆಯ ಕಟ್ಟಡವಿದೆ. ಮೂರನೆಯ ಹಂತದಲ್ಲಿ ವೃತ್ತಾಕಾರದ ಗುಮ್ಮಟವಿದೆ. ಗೋಡೆಗೆ ಹಾಗೂ ಬಾಗಿಲಿನ ಪ್ರಥಮ ಹಂತಕ್ಕೆ ಮಧ್ಯಮ ಗಾತ್ರದ ಕಲ್ಲು ಹಾಗೂ ಗಾರೆಯನ್ನು ಬಳಸಲಾಗಿದೆ. ಕಮಾನಿನ ಎರಡು ಮತ್ತು ಮೂರನೆಯ ಹಂತದಲ್ಲಿ ಇಟ್ಟಿಗೆ - ಗಾರೆಯನ್ನು ಬಳಕೆಮಾಡಿದ್ದಾರೆ.

ಭೀಮನ ಹೆಬ್ಬಾಗಿಲು : ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆ ಬದಿಯಲ್ಲಿ ಬರುವ ಗಾಣಗಿತ್ತಿ ದೇವಾಲಯದ ಆಗ್ನೇಯ ದಿಕ್ಕಿಗೆ ಈ ಹೆಬ್ಬಾಗಿಲಿದೆ. ಸುಸ್ಥಿತಿಯಲ್ಲಿರುವ ಬೃಹದಾಕಾರದ ಬಾಗಿಲುಗಳಲ್ಲಿ ಇದು ಒಂದು. ಇದರ ಆಕಾರದ ಕಾರಣದಿಂದಾಗಿಯೇ ಇದಕ್ಕೆ ಭೀಮನ ಹೆಬ್ಬಾಗಿಲೆಂದು ಹೆಸರು ಬಂದಿರಬಹುದು. ಈ ಬಾಗಿಲು ಸುಮಾರು ೨೦ ಅಡಿ ಎತ್ತರ ಹಾಗೂ ೧೫ ಅಡಿ ಅಗಲವಾಗಿದೆ. ಬಾಗಿಲು ತೋಳುಗಳು ಸರಳ ಅಲಂಕರಣೆ ಹೊಂದಿದ್ದು, ಲಾಲಾಟ ಬಿಂಬದ ಎರಡೂ ಬದಿಯ ಕೆಳಗೆ ಇಳಿಬಿದ್ದ ಪದ್ಮದ ಮೊಗ್ಗುಗಳಿವೆ. ಹೆಬ್ಬಾಗಿಲ ಮುಂಭಾಗದಲ್ಲಿ ವಿಶಾಲವಾದ ಆವರಣವಿದೆ. ಇದು ದಕ್ಷಿಣಕ್ಕೆ ಹೆಚ್ಚು ವಿಸ್ತರಿಸಿದೆ.



ಭೀಮನ ಹೆಬ್ಬಾಗಿಲು

ಇಲ್ಲಿ ಸುಮಾರು ೮ ಅಡಿ ಎತ್ತರದ ಭೀಮನ ಬಿಡಿ ಶಿಲ್ಪ ಹಾಗೂ ಶಾಸನಗಳಿವೆ. ಹತ್ತಿರದ ಗೋಡೆಯಲ್ಲಿ ಭೀಮನು ಕೀಚಕನನ್ನು ಸಂಹಾರ ಮಾಡುವ ದೃಶ್ಯವನ್ನು ಕೆತ್ತಲಾಗಿದೆ. ದಕ್ಷಿಣದ ಗೋಡೆಗೆ ಹೊಂದಿಕೊಂಡು ಉತ್ತರಾಭಿಮುಖವಾಗಿರುವ ಮೂರು ಗರ್ಭಗೃಹಗಳಿವೆ. ಇವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ. ಪ್ರವೇಶದ ಇಕ್ಕೆಲದ ತೋಳುಗಳಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಗೆತ್ತನೆಗಳಿವೆ. ಇದೇ ಗೋಡೆಗೆ ಉಪಬಾಗಿಲನ್ನು ತೆರೆಯಲಾಗಿದೆ. ಈ ಭೀಮನ ಹೆಬ್ಬಾಗಿಲಿಗೆ ಪ್ರವೇಶ ಮಾಡಲು ಮೊದಲು ಉತ್ತರದಿಂದ ದಕ್ಷಿಣಕ್ಕೆ ಬಂದು ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಪೂರ್ವದಿಂದ ಮುಖ್ಯ ಪ್ರವೇಶದ್ವಾರಕ್ಕೆ ಪ್ರವೇಶಿಸಬೇಕಾಗುತ್ತದೆ.






ಭೀಮನ ಶಿಲ್ಪ



ಭೀಮನು ಕೀಚಕನನ್ನು ಸಂಹರಿಸುವ ದೃಶ್ಯ

ಸೋಮವಾರದ ಬಾಗಿಲು : ವಿಜಯನಗರದಲ್ಲಿ ಕೃಷಿಪ್ರಧಾನ ಸಂಸ್ಕೃತಿ ಇತ್ತು. ಕೃಷಿಕರಿಗೆ ಸೋಮವಾರ ಬಿಡುವಿನ ದಿನ. ಅಂದು ಬೇಸಾಯಕ್ಕೆ ದನಗಳನ್ನು ಹೂಡುತ್ತಿರಲಿಲ್ಲ. ಆ ಸಂಸ್ಕೃತಿ ಇಂದಿಗೂ ಇದೆ. ಹಾಗಾಗಿ ಸೋಮವಾರ ಮಾರುಕಟ್ಟೆಯ ದಿನ. ಈ ಬಾಗಿಲಿನ ಸುತ್ತಮುತ್ತಲಿನಲ್ಲಿ ವಿಶಾಲವಾದ ಬಯಲು ಜಾಗವಿದೆ. ಇಲ್ಲಿಯೆ ಕೃಷಿ ಮಾರುಕಟ್ಟೆ ಇತ್ತು[೨೧] ಎನ್ನುವ ಅಬ್ದುಲ್ ರಜಾಕ್ ಅಭಿಪ್ರಾಯವು ಮೇಲಿನ ಅಂಶಕ್ಕೆ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ ಕೃಷಿಕರಿಗೆ ಶ್ರೇಷ್ಠ ದಿನವಾದ ಸೋಮವಾರ ಈ ಪ್ರದೇಶದಲ್ಲಿ ಮಾರುಕಟ್ಟೆ ನಡೆಯುತ್ತಿದ್ದರಿಂದ ಬಾಗಿಲಿಗೆ ಈ ನಾಮ ಅನ್ವರ್ಥವಾಗಿರಲು ಸಾಧ್ಯತೆಗಳಿವೆ. ಕ್ರಿ.ಶ. ೧೫೪೫ರ ಸದಾಶಿವರಾಯನ ಶಾಸನವು ಮೇಲಿನ ಅಂಶವನ್ನು ಸಮರ್ಥಿಸುತ್ತದೆ (SII pt No. 4, p. 266). ಅಥವಾ ಸೋಮಯ್ಯ ಎನ್ನುವ ದೇವರ ಹೆಸರಿನಿಂದ ಈ ಬಾಗಿಲನ್ನು ಕರೆದಿರಬಹುದು. ಇದಕ್ಕೆ ಪೂರಕವೆಂಬಂತೆ ಈ ಬಾಗಿಲ ಮುಂಭಾಗದಲ್ಲಿ ಶೈವ ದೇಗುಲವಿದೆ.







ಸೋಮವಾರದ ಬಾಗಿಲು

ಈ ಬಾಗಿಲು ಸಿಂಘಾರದ ಹೆಬ್ಬಾಗಿಲಿನ ದಕ್ಷಿಣಭಾಗದಲ್ಲಿದೆ. ಇಲ್ಲಿಯೇ ಉತ್ತರದ ಬೆಟ್ಟದ ಮೇಲಿನ ಗುಂಡಿನಲ್ಲಿರುವ ವೀರಬುಕ್ಕರಾಯನ ಶಾಸನವು ಸೋಮವಾರದ ಬಾಗಿಲು ಹೆಸರನ್ನು ಉಲ್ಲೇಖಿಸುತ್ತದೆ.[೨೨] ಈ ಬಾಗಿಲು ಭಾಗಶಃ ಹಾಳಾಗಿದೆ. ಸುಮಾರು ೨೦ ಅಡಿ ಅಗಲ, ೨೦ ಅಡಿ ಎತ್ತರವಾಗಿರುವ ಬಾಗಿಲಿನ ಪಾರ್ಶ್ವದ ಗೋಡೆಗಳಲ್ಲಿ ಆಂಜನೇಯ, ಆನೆ, ಹಂಸ, ಗಣೇಶ, ಬಿಲ್ಲು ಬಾಣಗಳನ್ನು ಹಿಡಿದು ನಿಂತಿರುವ ವೀರನ ಉಬ್ಬುಗೆತ್ತನೆಗಳಿವೆ. ಮುಂಭಾಗದಲ್ಲಿ ದಕ್ಷಿಣಾಭಿಮುಖವಾಗಿರುವ ಶೈವ ದೇಗುಲವಿದೆ. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಗರ್ಭಗೃಹದ ಪ್ರವೇಶದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಉಬ್ಬುಗೆತ್ತನೆಗಳಿವೆ. ಸೋಮವಾರದ ಬಾಗಿಲು ಪೂರ್ವಾಭಿಮುಖವಾಗಿದೆ.

ಉದಯಗಿರಿಯ ಬಾಗಿಲು : ಕಮಲಾಪುರದಿಂದ - ಕಂಪ್ಲಿಗೆ ಹೋಗುವ ರಸ್ತೆಯ ಬದಿಯಲ್ಲಿ ಇದನ್ನು ಎರಡು ಬೆಟ್ಟಗಳ ನಡುವಿನ ಕಣವೆಯನ್ನು ಬಳಸಿ ಕಟ್ಟಲಾಗಿದೆ. ಉದಯಗಿರಿಯಿಂದ ವಿಜಯನಗರಕ್ಕೆ ಬರುವವರು ಈ ಬಾಗಿಲನ್ನು ಬಳಸಿಕೊಂಡೇ ಬರಬೇಕು. ಹಾಗಾಗಿ ಇದಕ್ಕೆ ಉದಯಗಿರಿ ಬಾಗಿಲೆಂದೇ ಹೆಸರು ಬಂದಿದೆ. ವಿಠ್ಠಲ ದೇವಾಲಯದ ಗರ್ಭಗೃಹದ ಮುಂದಿನ ಮಂಟಪದಲ್ಲಿರುವ ಶಾಸನವು ಉದಯಗಿರಿ ಬಾಗಿಲನ್ನು ಉಲ್ಲೇಖಿಸುತ್ತದೆ.[೨೩] ಪೂರ್ವಾಭಿಮುಖವಾಗಿರುವ ಈ ಬಾಗಿಲು ದೂರದಿಂದ ನೋಡಲು ಕಾಣದಂತೆ ಗೋಡೆಗಳನ್ನು ಮರೆಮಾಡಲಾಗಿದೆ. ಇತರೆ ಬಾಗಿಲುಗಳ ಲಕ್ಷಣಗಳನ್ನೇ ಇದು ಹೋಲುತ್ತದೆ. ಇಲ್ಲಿ ದೇವಾಲಯವು ಪಾಳು ಬಿದ್ದಿದೆ.



ಉದಯಗಿರಿಯ ಬಾಗಿಲು

ಅರೆಶಂಕರ ಬಾಗಿಲು : ಕಮಲಾಪುರದಿಂದ ಆನೆಗೊಂದಿಗೆ ಹೋಗುವ ದಾರಿಯಲ್ಲಿ (ಸುಮಾರು ೪ ಕಿ.ಮೀ. ದೂರದಲ್ಲಿ) ಈ ಬಾಗಿಲಿದೆ. ದಕ್ಷಿಣಾಭಿಮುಖವಾಗಿರುವ ಇದು ವಾಸ್ತವವಾಗಿ ಸಂಪೂರ್ಣ ಹಾಳಾಗಿದೆ. ಇದನ್ನು ತಳವಾರಘಟ್ಟದ ಬಾಗಿಲು, ಆನೆಗೊಂದಿ ಬಾಗಿಲು ಎಂತಲೂ ಕರೆಯುತ್ತಾರೆ. ಈಗ ಗೋಚರಿಸುವ ಬಾಗಿಲು ಎರಡು ಮಹಡಿಗಳನ್ನು ಹೊಂದಿದೆ. ಪ್ರವೇಶದ ಪಾರ್ಶ್ವದಲ್ಲಿ ಮಂಟಪಗಳಿವೆ. ಎ.ಜಿ. ಗ್ರೀನ್ ಲಾ ಅವರು ೧೫೦ ವರ್ಷಗಳ ಹಿಂದೆ ತೆಗೆದಿರುವ ಈ ಬಾಗಿಲಿನ ದೃಶ್ಯವು ಇತರೆ ಬಾಗಿಲುಗಳಂತೆಯೇ ದೊಡ್ಡ ಪ್ರಮಾಣದಲ್ಲಿರುವುದನ್ನು ತೋರಿಸುತ್ತದೆ. ಒಳಭಾಗದಲ್ಲಿ ಪೂರ್ವಾಭಿಮುಖವಾಗಿರುವ ಆಂಜನೇಯನ ದೇಗುಲವಿದೆ. ಇಲ್ಲಿ ಕಲ್ಲುಗೋಡೆ ಹಾಗೂ ಹಿಂದೂ ಮುಸ್ಲಿಂ ಶೈಲಿಯ ಕಿಟಕಿಗಳಿದ್ದವೆಂದು ತಿಳಿದುಬರುತ್ತದೆ.



ಅರೆಶಂಕರ ಬಾಗಿಲು





ಒಂದನೇ ಪೆನುಗೊಂಡ ಬಾಗಿಲು : ಹೊರಬದಿ ಕೋಟೆಯ ಈ ಬಾಗಿಲು ಕಮಲಾಪುರದ ಆಗ್ನೇಯ ದಿಕ್ಕಿಗಿರುವ ಪಟ್ಟಾಭಿರಾಮ ದೇವಾಲಯದ ಹತ್ತಿರದಲ್ಲಿದೆ. ಇದು ಪೆನುಗೊಂಡದಿಂದ ವರದರಾಜಮ್ಮನ ಪಟ್ಟಣಕ್ಕೆ ಪ್ರವೇಶವನ್ನು ಕಲ್ಪಿಸುತ್ತದೆ. ವರದಾದೇವಿ ಅಚ್ಯುತರಾಯನ ಪಟ್ಟದರಸಿ. ಈಕೆಯ ನೆನಪಿಗಾಗಿ ಕಟ್ಟಿಸಿದ ಪಟ್ಟಣವೇ ವರದರಾಜಮ್ಮನ ಪಟ್ಟಣ. ವರದಾದೇವಿ ಪೆನುಗೊಂಡದವಳೆಂದು ಕಾಣುತ್ತದೆ. ಈ ಕಾರಣಗಳಿಂದಾಗಿ ಪೆನುಗೊಂಡ ಬಾಗಿಲೆಂದು ಕರೆದಿರಬಹುದು.



ಒಂದನೇ ಪೆನುಗೊಂಡ ಬಾಗಿಲು

ಕ್ರಿ.ಶ. ೧೫೪೦ ರ ಅಚ್ಯುತರಾಯನ ಶಾಸನದಲ್ಲಿ ಪೆನುಗೊಂಡ ಬಾಗಿಲು ಹಾಗೂ ಅಲ್ಲಿ ಪ್ರತಿಷ್ಠಾಪಿಸಿದ ರಘುನಾಥದೇವರ ಉಲ್ಲೇಖಗಳಿವೆ.[೨೪] ಪೆನುಗೊಂಡ ಬಾಗಿಲಿಗೆ ಸಣ್ಣಕ್ಕಿಪ್ಪನ ಅಗಸೆ ಯೆಂದು ಸ್ಥಳೀಯರು ಅಭಿಪ್ರಾಯಿಸುವರು. ಬಾಗಿಲ ಹೊರಭಾಗದಲ್ಲಿ ಈಗಲೂ ಸಣ್ಣಕ್ಕಿ ವೀರಭದ್ರ ದೇವಾಲಯ ಇರುವುದನ್ನು ನೋಡಬಹುದು. ಅದರ ಹೆಸರನ್ನೆ ಈ ಬಾಗಿಲಿಗೆ ಅನ್ವಯಿಸಿರುವರು. ಇದರ ಹಿಂಬದಿ ಮುಂಬದಿಗೆ ಸಾಲುಮಂಟಪಗಳು ಮಧ್ಯದಲ್ಲಿ ಬೀದಿ ಇದೆ. ಇದನ್ನೆ ವರದರಾಜಮ್ಮನ ಬಜಾರು ಎಂದು ಕರೆಯುತ್ತಾರೆ. ಬಾಗಿಲು ಮತ್ತು ಕೋಟೆ ಗೋಡೆಗೆ ಹೊಂದಿಕೊಂಡು ಮೂರು ದೇವಾಲಯಗಳಿವೆ. ಅವುಗಳಲ್ಲಿ ಒಂದನ್ನು ಅಚ್ಯುತರಾಯನ ಕಾಲದಲ್ಲಿ ಕಟ್ಟಲಾದ ರಘುನಾಥ ದೇವಾಲಯವೆಂದು ಶಾಸನವು ಸ್ಪಷ್ಟವಾಗಿ ಹೇಳಿದರೂ ಸ್ಥಳೀಯರು ಮಾತ್ರ ಕಳ್ಳರ ಗುಡಿಯೆಂದೇ ಗುರುತಿಸುತ್ತಾರೆ. ಉತ್ತರಾಭಿಮುಖವಾಗಿರುವ ಈ ದೇಗುಲವು ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಗಳಿಲ್ಲ. ಇದರ ಸುತ್ತಲೂ ಗರ್ಭಗೃಹಕ್ಕಿಂತ ಕೆಳಮಟ್ಟದಲ್ಲಿ ನಿರ್ಮಿಸಿದ ಪ್ರದಕ್ಷಿಣಾಪಥವಿದೆ. ಎದುರು ಭಾಗದಲ್ಲಿ ಒಂದು ದೇವಾಲಯವಿದೆ. ಇದು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ ಹಾಗೂ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದ ಬಾಗಿಲು



ತೋಳುಗಳಲ್ಲಿರುವ ವೈಷ್ಣವ ದ್ವಾರಪಾಲಕರಿಂದ ಇದು ವೈಷ್ಣವ ದೇವಾಲಯವೆಂದು ದೃಢಪಟ್ಟರೂ ಗರ್ಭಗೃಹ ಖಾಲಿಯಿದೆ. ರಘುನಾಥ ದೇವಾಲಯದ ಬಲಬದಿಗೆ ಕೋಟೆ ಬಾಗಿಲಿಗೆ ಹೊಂದಿಕೊಂಡಿರುವ ಚಿಕ್ಕ ದೇವಾಲಯದ ಗರ್ಭಗೃಹದಲ್ಲಿ ಇಲಿಯನ್ನು ಕಡೆದಿರುವ ಪೀಠದ ಮೇಲೆ ಗಣೇಶನ ಭಗ್ನ ಶಿಲ್ಪವಿದೆ. ಹಾಗಾಗಿ ಇದು ಗಣೇಶನ ಗುಡಿಯೆಂದು ಖಚಿತವಾಗುವುದು.

ಬಾಗಿಲಿನ ಮುಂಭಾಗದಲ್ಲಿ ವೀರಭದ್ರ ದೇವಾಲಯವಿದೆ. ಇದನ್ನು ಸಣ್ಣಕ್ಕಿ ವೀರಭದ್ರನೆಂದು ಕರೆಯುವರು. ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿಯಿದೆ. ಈ ದೇವಾಲಯಕ್ಕೆ ಕಣಶಿಲೆ, ಶಿಖರ ಹಾಗೂ ಕೈಪಿಡಿ ಗೋಡೆಗಳಿಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ.

ಎರಡನೇ ಪೆನುಗೊಂಡ ಬಾಗಿಲು : ಇದು ಕಮಲಾಪುರದ ಆಗ್ನೇಯಕ್ಕೆ ಸುಮಾರು ೨ ಕಿ.ಮೀ. ಅಂತರದಲ್ಲಿ ಮೊದಲ ಪೆನುಗೊಂಡ ಬಾಗಿಲಿನ ಉತ್ತರಕ್ಕಿದೆ. ಪೆನುಗೊಂಡಕ್ಕೂ ವಿಜಯನಗರಕ್ಕೂ ನಿಕಟವಾದ ಸಂಬಂಧಗಳಿವೆ. ಪೆನುಗೊಂಡದಿಂದ ಬರುವವರು ಈ ಮಾರ್ಗವಾಗಿಯೇ ಹೋಗಬೇಕಿತ್ತು. ಹಾಗಾಗಿ ಇದಕ್ಕೆ ಪೆನುಗೊಂಡದ ಎರಡನೆಯ ಬಾಗಿಲೆಂದು ಗುರುತಿಸಲಾಗಿದೆ.



ಎರಡನೇ ಪೆನುಗೊಂಡ ಬಾಗಿಲು

ಕಳ್ಳರಗುಡಿ ಹತ್ತಿರ ಪೆನುಗೊಂಡ ಬೀದಿ ಇದೆ. ಇದರ ದಕ್ಷಿಣಕ್ಕೆ ಪೆನುಗೊಂಡ ಬಾಗಿಲು ಇರುತ್ತದೆ. ಪೆನಗೊಂಡ ಬೀದಿಯ ಒಂದು ಮಾರ್ಗವು ಗುಮ್ಮಟದ ಬಾಗಿಲಿಗೆ ಹೋಗಿ ಅಲ್ಲಿಂದ ಭೀಮನ ಅಗಸಿ ಮೂಲಕ ವಿಜಯನಗರದತ್ತ ಕರೆದ್ಯೊಯ್ಯುತ್ತದೆ. ಪೆನುಗೊಂಡ ಬಾಗಿಲಿಗೆ ಹೊಂದಿಕೊಂಡ ಕೋಟೆಗೋಡೆ ಮಲಪನಗುಡಿ ಕೋಟೆಗೋಡೆಗೆ ಹತ್ತಿಕೊಂಡಿದೆಂದು ವಸುಂಧರಾ ಫಿಲಿಯೋಜ ಅಭಿಪ್ರಾಯ ಪಡುತ್ತಾರೆ.[೨೫] ಪ್ರಸ್ತುತ ಪೆನುಗೊಂಡ ಬಾಗಿಲಿನಿಂದ ಕಮಲಾಪುರದ ಕೆರೆಯ ಹಿಂಭಾಗದವರೆಗೆ ಕೋಟೆಗೋಡೆ ಗೋಚರಿಸುತ್ತದೆ. ಅಲ್ಲಿಂದಾಚೆಗೆ




ಕೋಟೆಗೋಡೆಯ ಯಾವುದೇ ಅವಶೇಷಗಳಿಲ್ಲ ಹಾಗೂ ಅವರ ಅಭಿಪ್ರಾಯವು ಸಮಂಜಸವಾಗಿಲ್ಲ. ಪೂರ್ವಾಭಿಮುಖವಾಗಿರುವ ಈ ಬಾಗಿಲು ಸುಮಾರು ೧೫ ಅಡಿ ಅಗಲ, ೨೦ ಅಡಿ ಎತ್ತರವಾಗಿದೆ. ಬಾಗಿಲ ತೋಳುಗಳಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳು, ಲಾಲಾಟ ಬಿಂಬದ ಎರಡೂ ಬದಿಯ ಕೆಳಗೆ ಇಳಿಬಿದ್ದ ಮೊಗ್ಗುಗಳಿವೆ. ಎಡಭಾಗದಲ್ಲಿ ಉಪಬಾಗಿಲು, ಬಲಭಾಗದ ಗೋಡೆಯಲ್ಲಿ ಶಿವಲಿಂಗ, ನಂದಿ, ಅಂಜನಮುದ್ರೆಯಲ್ಲಿ ನಿಂತಿರುವ ರಾಜ (ಈತನನ್ನೇ ಪ್ರೌಢದೇವರಾಯನೆಂದು ಕರೆದಿರುವರು) ನ ಉಬ್ಬುಶಿಲ್ಪಗಳಿವೆ. ಪ್ರವೇಶದ ಎರಡೂಬದಿಗೆ ಕಟ್ಟೆಯ ಮೇಲೆ ಮಂಟಪಗಳನ್ನು ನಿರ್ಮಿಸಿರುವರು. ಹತ್ತಿರದ (ಒಳಭಾಗದಲ್ಲಿ) ಲ್ಲಿಯೇ ಆಂಜನೇಯ ಮತ್ತು ಗಣೇಶನ ದೇವಾಲಯಗಳಿವೆ.



ಗೋಡೆಯಲ್ಲಿರುವ ಉಬ್ಬುಶಿಲ್ಪಗಳು

ಕೋಟಿಶಂಕರ ದೇವರ ಬಾಗಿಲು : ಕಮಲಾಪುರದಿಂದ ಹಂಪಿಗೆ ಹೋಗುವ ರಸ್ತೆಯ ಬದಿಯಲ್ಲಿರುವ ಅಕ್ಕ-ತಂಗಿಯ (Sisters Stone)ರ ಗುಡ್ಡದ ಹಿಂಬದಿಗೆ ಕೋಟಿಶಂಕರ ದೇವರ ಬಾಗಿಲಿದೆ. ಕೋಟೆಗೆ ಹೊಂದಿಕೊಂಡು ಶಂಕರದೇವರ ಗುಡಿ ಇದೆ. (ಕಲ್ಲು ಬಂಡೆಯ ಮೇಲೆ ಲಿಂಗಗಳ ಸಮೂಹವೇ ಇದೆ.) ಈ ಹಿನ್ನೆಲೆಯಲ್ಲಿ ಬಾಗಿಲಿಗೆ ಆ ಹೆಸರೇ ರೂಢಿಗತವಾಗಿ ಬಂದಿದೆ. ಪ್ರಸನ್ನ ವಿರೂಪಾಕ್ಷ ದೇವಾಲಯದ ಹತ್ತಿರವಿರುವ ಗುಂಡಿನ ಮೇಲಿರುವ[೨೬] ಹಾಗೂ ಇದರ ಪಕ್ಕದಲ್ಲಿರುವ ಬಂಡೆಯ ಶಾಸನಗಳಲ್ಲಿ[೨೭] ಕೋಟಿಶಂಕರ ದೇವರ ಬಾಗಿಲಿನ ಪ್ರಸ್ತಾಪಗಳಿವೆ. ಈ ಬಾಗಿಲು ದಕ್ಷಿಣಾಭಿಮುಖವಾಗಿದ್ದು, ಪ್ರವೇಶದ ಆರಂಭದಲ್ಲಿ ಬೃಹದಾಕಾರದ ಬಂಡೆಯ ಮೇಲೆ ಭೀಮಾನಾಕೃತಿಯಲ್ಲಿ ಕೆತ್ತಲಾಗಿದೆ. ಭಗ್ನಾವಸ್ಥೆಯಲ್ಲಿರುವ ಈ ಬಾಗಿಲು ಸುಮಾರು ೧೦ ಅಡಿ ಅಗಲ ಹಾಗೂ ೨೦ ಅಡಿ ಎತ್ತರವಾಗಿದೆ.





ಕೋಟಿಶಂಕರ ದೇವರ ಬಾಗಿಲು

ಹೊದೆಯ ಬಾಗಿಲು : ಇದು ಉತ್ತರಾಭಿಮುಖವಾಗಿದ್ದು, ಅರಮನೆ ಪ್ರದೇಶದಿಂದ ಮಾತಂಗ ಗುಡ್ಡಕ್ಕೆ ಹೋಗುವುದಕ್ಕಾಗಿ ನಿರ್ಮಿಸಿರುವರು. ಮಾಲ್ಯವಂತ ಪರ್ವತದ ಪಶ್ಚಿಮಕ್ಕಿರುವ ಶಾಸನದಲ್ಲಿ "ಹೊದೆಯ ಬಾಗಿಲು ವಿನಾಯಕ"ನಿಗೆ (ಹರಿಹರ) ದಾನ ನೀಡಿದಂತೆ ಉಲ್ಲೇಖವಿದೆ.[೨೮]

ಹೂವಿನ ಬಾಗಿಲು : ಕೋಟೆಯ ನೈರುತ್ಯ ದಿಕ್ಕಿನಲ್ಲಿ ಹೂವಿನ ಬಾಗಿಲಿದೆ. ದಕ್ಷಿಣಾಭಿಮುಖವಾಗಿರುವ ಇದು ನೇರ ಅಂತಃಪುರಕ್ಕೆ ಪ್ರವೇಶವನ್ನು ಕೊಡುತ್ತದೆ. ಸಂಡೂರು ತಾಲೂಕಿನ ಹೊಸಮಲ್ಲೈದುರ್ಗದ ರಾಮನ ದೇಗುಲದ ಮುಂದಿರುವ ಶಾಸನದಲ್ಲಿ ಹೂವಿನ ಬಾಗಿಲ (ವಿಜಯನಗರ) ಆಂಜನೇಯ ದೇವಾಲಯದ ಪೂಜಾರಿಯ ಪ್ರಸ್ತಾಪಗಳಿವೆ.[೨೯] ಇದಕ್ಕೆ ಪೂರಕವೆಂಬಂತೆ ಹೂವಿನ ಬಾಗಿಲ ಮುಂಭಾಗದಲ್ಲಿ ಆಂಜನೇಯನ ಗುಡಿ ಇದೆ. ಇದು ವಿಜಯನಗರದ ಅರಸ ಮಲ್ಲಿಕಾರ್ಜುನ (ಕ್ರಿ.ಶ ೧೪೪೭ - ೧೪೬೬) ನ ಅವಧಿಯಲ್ಲಿ ನಿರ್ಮಾಣಗೊಂಡಿದೆ.[೩೦]

ದೂರದಿಂದ ಈ ಬಾಗಿಲು ಗೋಚರಿಸುವುದಿಲ್ಲ. ೧೦ ಅಡಿ ಅಗಲ ೨೦ ಅಡಿ ಎತ್ತರವಾಗಿರುವ ಇದರ ಲಲಾಟಬಿಂಬದ ಕೆಳಬದಿಗೆ ಇಳಿಬಿದ್ದ ಮೊಗ್ಗುಗಳಿವೆ. ಮುಂಭಾಗದಲ್ಲಿ ವಿಶಾಲವಾದ ಆವರಣವಿದೆ. ಈ ಆವರಣದಿಂದ ಪೂರ್ವಕ್ಕೆ ಆಂಜನೇಯ ದೇವಾಲಯವಿದೆ. ಇದು ಗರ್ಭಗೃಹ ಹಾಗೂ ತೆರೆದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪವಿದೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬಗಳಲ್ಲಿ ಆನೆ, ಯಾಳಿ, ಆಂಜನೇಯ, ಗಣೇಶ ಇತ್ಯಾದಿ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ಮೇಲೆ ಇಟ್ಟಿಗೆ - ಗಾರೆಯಿಂದ ಶಿಖರವನ್ನು ನಿರ್ಮಿಸಲಾಗಿದೆ. ಸಭಾಮಂಟಪದ ಮೇಲಿರುವ ಕೈಪಿಡಿ ಗೋಡೆಯಲ್ಲಿ ದೇವಕೋಷ್ಠಗಳಿವೆ.





ಹೂವಿನ ಬಾಗಿಲು

ಕೊತಾರದ ಬಾಗಿಲು : ಕೋಟೆಯ ಈಶಾನ್ಯ ದಿಕ್ಕಿಗೆ ಈ ಬಾಗಿಲಿದೆ. ಪೂರ್ವಾಭಿಮುಖವಾಗಿರುವ ಈ ಬಾಗಿಲು ಇಂದು ಪೂರ್ಣ ಭಗ್ನಾವಸ್ಥೆಯಲ್ಲಿದೆ. ಕೋಷ್ಠಾಗಾರ ಎಂದರೆ ಕೊಟ್ಟಗಾರ, ಸಂಗ್ರಹಾಲಯ, ಖಜಾನೆ, ಕಣಜ ಎಂಬರ್ಥಗಳಿವೆ. ಈ ಬಾಗಿಲ ಮೂಲಕ ಒಳಸಾಗಿದರೆ ಖಜಾನೆ, ಕಣಜಗಳು ಇದ್ದವೇನೊ? ಈ ಕಾರಣವಾಗಿಯೇ ಇದಕ್ಕೆ ಕೊತಾರದ ಬಾಗಿಲೆಂದು ಕರೆದಿರಬೇಕು. ನಿಂಬಾಪುರದ ಕಪಿಲಾಶ್ರಮದ ಬಳಿಯ ಶಾಸನದಲ್ಲಿ ಈ ಬಾಗಿಲಿನ ಉಲ್ಲೇಖವಿದೆ.[೩೧]

ಉಪ್ಪರಿಗೆ ಬಾಗಿಲು : ಇದು ವಿಠ್ಠಲಾಪುರ ಹಾಗೂ ನದಿಯಿಂದ ನಗರದೊಳಗೆ ಬರುವವರಿಗೆ ಪ್ರವೇಶವನ್ನು ನೀಡುತ್ತದೆ. ಇದನ್ನು ಎರಡು ಅಂತಸ್ತುಗಳಲ್ಲಿ ನಿರ್ಮಿಸಲಾಗಿದ್ದು, ಇದರ ಮುಂಭಾಗದಲ್ಲಿ ರಾಮನ ದೇವಾಲಯವು ಕಂಡುಬರುತ್ತದೆ.



ಉಪ್ಪರಿಗೆ ಬಾಗಿಲು





ಜಡೆಯಶಂಕರ ದೇವರ ದಿಡ್ಡಿ : ಇದು ಕಮಲಾಪುರದಿಂದ ಹಂಪಿಗೆ ಹೋಗುವ ರಸ್ತೆಯ ಬದಿಯಲ್ಲಿರುವ ಅಕ್ಕ - ತಂಗಿಯರ ಗುಡ್ಡದ ಹಿಂಬದಿಗೆ ಇದೆ. ಶಾಸನದಲ್ಲಿ ಜಡೆಯಶಂಕರ ದೇವರ ದಿಡ್ಡಿಯ ಸ್ಥಳ ನಿರ್ದೇಶನವನ್ನು ನೀಡುತ್ತದೆ.[೩೨] ಉತ್ತರಾಭಿಮುಖವಾಗಿರುವ ಇದು ದೊಡ್ಡ ಕಂದಕದಲ್ಲಿದೆ.



ಜಡೆಯಶಂಕರ ದೇವರ ದಿಡ್ಡಿ

ಹಂಪಾದೇವಿಯ ದಿಡ್ಡಿ : ಜಡೆಯಶಂಕರ ದೇವರ ದಿಡ್ಡಿ ಬಾಗಿಲಿನ ಉತ್ತರಕ್ಕೆ ಸ್ವಲ್ಪ ಅಂತರದಲ್ಲಿಯೇ ಹಂಪಾದೇವಿಯ ದಿಡ್ಡಿ ಬಾಗಿಲಿದೆ. ಈಗ ಪೂರ್ಣ ಭಗ್ನಾವಸ್ಥೆ ಸ್ಥಿತಿಯಲ್ಲಿರುವ ಈ ದಿಡ್ಡಿಯ ಪಶ್ಚಿಮ ದಿಕ್ಕಿಗಿರುವ ಬಂಡೆಯ ಮೇಲಿರುವ ಶಾಸನದಲ್ಲಿ ಹಂಪಾದೇವಿಯ ದಿಡ್ಡಿ ಎಂದಿದೆ.[೩೩]

ರೆಮ್ಮುದಿಡ್ಡಿ : ಬೇಟೆಕಾರರ ಹಾಗೂ ಅರೆಶಂಕರ ಹೆಬ್ಬಾಗಿಲುಗಳ ಮಧ್ಯದ ಬೆಟ್ಟಗಳ ಕಣಿವೆಯಲ್ಲಿ ರೆಮ್ಮುದಿಡ್ಡಿ ಬಾಗಿಲಿದೆ. ಪೂರ್ವಾಭಿಮುಖವಾಗಿರುವ ಇದು ಸಂಪೂರ್ಣ ಹಾಳಾಗಿದ್ದು, ಪ್ರಸ್ತುತ ಎರಡು ಮಂಟಪಗಳು ಮಾತ್ರ ಗೋಚರಿಸುತ್ತವೆ. ಇಲ್ಲಿರುವ ಬಂಡೆಯ ಮೇಲಿನ ಶಾಸನದಲ್ಲಿ ಈ ದಿಡ್ಡಿಯ ಉಲ್ಲೇಖವಿದೆ.[೩೪]



ರೆಮ್ಮು ದಿಡ್ಡಿ





ಕೊತ್ತಳಗಳು

ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳ ಇಕ್ಕೆಲಗಳಲ್ಲಿ, ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ, ಕೋಟೆ ಗೋಡೆಯ ಮೇಲೆ ನಿಂತು ಹೋರಾಟ ಮಾಡಲು ಅನುಕೂಲವಾಗುವಂತೆ ಮತ್ತು ಕೆಲವು ಗುಪ್ತ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಇವುಗಳ ಲಕ್ಷಣಗಳನ್ನು ಈಗಾಗಲೇ ಮೇಲೆ ತಿಳಿಸಲಾಗಿದೆ. ಇಲ್ಲಿ ಶಾಸನೋಕ್ತ ಮತ್ತು ಇತರೆ ಕೊತ್ತಳಗಳ ವಿವರಣೆಗಳನ್ನು ನೀಡಲಾಗಿದೆ.

ಪ್ರತಾಪ ಕೊತ್ತಳ : ಪ್ರತಾಪ ಕೊತ್ತಳವು ಕೋಟಿ ಶಂಕರ ಬಾಗಿಲು ಮುಂಭಾಗದಲ್ಲಿದ್ದು, ಅಕ್ಕ - ತಂಗಿಯರ ಗುಂಡಗಳ ಪಶ್ಚಿಮದ ಬಂಡೆಯ ಮೇಲಿನ ಶಾಸನವು ಇದನ್ನು ಗುರುತಿಸುತ್ತದೆ.[೩೫] 'ಪ್ರತಾಪ' ಎನ್ನುವುದು ವಿಜಯನಗರದ ಅರಸರುಗಳಿಗಿದ್ದ 'ಬಿರುದು'

ಸ್ವಾಮಿದ್ರೋಹರ ಗಂಡನ ಕೊತ್ತಳ : ಹಂಪಾದೇವಿ ದಿಡ್ಡಿಬಾಗಿಲು ಹಾಗೂ ಜಡೆಯಶಂಕರ ದೇವರ ದಿಡ್ಡಿಬಾಗಿಲುಗಳ ಮಧ್ಯದಲ್ಲಿರುವುದೇ ಸ್ವಾಮಿದ್ರೋಹರ ಗಂಡನ ಕೊತ್ತಳ. ಕೋಟೆ ಗೋಡೆಯಲ್ಲಿರುವ ಶಾಸನವು ಈ ಕೊತ್ತಳವನ್ನು ಸೂಚಿಸುತ್ತದೆ.[೩೬]

ಮತಂಗದೇವರ ಕೊತ್ತಳ : ಹೊದೆಯ ಬಾಗಿಲ ಪಶ್ಚಿಮ ದಿಕ್ಕಿಗಿರುವುದೇ ಮತಂಗ ದೇವರ ಕೊತ್ತಳ. ಹಂಪಾದೇವಿ ದಿಡ್ಡಿಯ ಉತ್ತರಕ್ಕಿರುವ ಬಂಡೆ ಶಾಸನವು ಮತಂಗದೇವರ ಕೊತ್ತಳವನ್ನು ಹೆಸರಿಸುತ್ತದೆ.[೩೭] ಮಾತಂಗಿ ವಿಜಯನಗರದ ಅರಸರ ಆರಾಧ್ಯ ದೇವತೆ. ಮಾತಂಗ ಪರ್ವತದ ಮೇಲೆ ಈ ದೇವತೆಯ ಗುಡಿ ಇದೆ.

ಮಳಲ ವಿನಾಯಕ ಕೊತ್ತಳ : ಇದು ಮತಂಗ ದೇವರ ಕೊತ್ತಳದ ಉತ್ತರ ದಿಕ್ಕಿಗಿದೆ. ಇಲ್ಲಿಯೇ ಕೋಟೆ ಗೋಡೆಯಲ್ಲಿರುವ ಶಾಸನವು ಮಳಲ ವಿನಾಯಕ ಕೊತ್ತಳವನ್ನು ಹೆಸರಿಸಿದೆ.[೩೮]

ಜಲಸೇನ ದೇವರ ಕೊತ್ತಳ : ಇದು ಮಳಲ ವಿನಾಯಕ ಕೊತ್ತಳದ ಆಗ್ನೇಯ ದಿಕ್ಕಿಗಿದೆ. 'ಜಲಸೇನ' ವಿಜಯನಗರ ಅರಸರು ಆರಾಧಿಸುತ್ತಿದ್ದ ದೇವರು. ಈ ಕೊತ್ತಳವನ್ನು ಹೆಸರಿಸುವ ಶಾಸನವು ಉದ್ದಾನ ವೀರಭದ್ರ ದೇವಾಲಯದ ಪೂರ್ವದ ಕೋಟೆ ಗೋಡೆಯಲ್ಲಿದೆ.[೩೯]

ಹಂಪಿಯ ಕೊತ್ತಳ : ಕೋಟಿ ಶಂಕರ ದೇವರ ಬಾಗಿಲಿನ ಪೂರ್ವ ದಿಕ್ಕಿಗಿದೆ. ಹಂಪಿ ವಿಜಯನಗರದ ಅರಸರ ರಾಜಧಾನಿ, ಇಂದು ಪ್ರಸಿದ್ಧ ಪ್ರವಾಸಿ ತಾಣ.

ಹನುಮನ ಕೊತ್ತಳ : ಹೊದೆಯ ಬಾಗಿಲಿನ ಆಗ್ನೇಯ ದಿಕ್ಕಿಗಿರುವುದೇ ಹನುಮನ ಕೊತ್ತಳ. ಹನುಮನ ಇನ್ನೊಂದು ಹೆಸರು ಆಂಜನೇಯ. ರಾಮಯಾಣದಲ್ಲಿ ಶ್ರೀರಾಮಚಂದ್ರನ ಭಕ್ತ, ಸೇವಕ. ಹಂಪಿಯಲ್ಲಿ ಆಂಜನೇಯನ ಗುಡಿಗಳು ಸಾಕಾಷ್ಟಿವೆ.

ಶಂಕರ ದೇವರ ಕೊತ್ತಳ : ಈ ಕೊತ್ತಳವು ಹನುಮನ ಕೊತ್ತಳದ ಪೂರ್ವ ದಿಕ್ಕಿಗಿದೆ. ಶಂಕರ ದೇವರ ಕೊತ್ತಳವನ್ನು ಹೆಸರಿಸುವ ಶಾಸನವು ಈ ಕೊತ್ತಳದ ದಕ್ಷಿಣದ ಬಂಡೆಯ ಮೇಲಿದೆ.[೪೦] ಶಂಕರ ದೇವರ ಹೆಸರನ್ನು ಈ ಕೊತ್ತಳಕ್ಕೆ ಇಡಲಾಗಿದೆ.



ಹನುಮನ ಮತ್ತು ಶಂಕರ ದೇವರ ಕೊತ್ತಳ

ಮದನ ಕೊತ್ತಳ :ಮತಂಗೇಶ್ವರ ದೇವರ ದಿಡ್ಡಿ ಬಾಗಿಲಿನ ಆಗ್ನೇಯ ದಿಕ್ಕಿಗಿರುವುದೇ ಮದನ ಕೊತ್ತಳ. ರಾಣಿವಾಸದ ಆವರಣದ ಉತ್ತರಕ್ಕೆ ಬೆಟ್ಟದ ಮೇಲೆ ನಾಲ್ಕು ಕಂಬಗಳುಳ್ಳ ಕಾವಲು ಗೋಪುರದ ಕೆಳಬಂಡೆಯ ಮೇಲಿನ ಶಾಸನದಲ್ಲಿ ಇದರ ಉಲ್ಲೇಖವಿದೆ.[೪೧]



ಮದನ ಕೊತ್ತಳ

ಮೀಸರ ಗಂಡನ ಕೊತ್ತಳ : ಈ ಕೊತ್ತಳವು ಮದನ ಕೊತ್ತಳದ ಪೂರ್ವ ದಿಕ್ಕಿಗಿದೆ. ಹತ್ತಿರದ ಬಂಡೆಯ ಮೇಲೆ 'ಮೀಸರ ಗಂಡನ ಕೊತ್ತಳ'ವೆಂದು ಕಡೆಯಲಾಗಿದೆ.[೪೨]







ಮೀಸರ ಗಂಡನ ಕೊತ್ತಳ

ಆನೆಗೊಂದಿಯ ಕೊತ್ತಳ : ಈ ಕೊತ್ತಳವು ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕಿರುವ ಬೆಟ್ಟದ ಮೇಲಿದೆ. ಆನೆಗೊಂದಿ ವಿಜಯನಗರದ ಅರಸರ ಎರಡನೆಯ ರಾಜಧಾನಿ. ಈಗಲೂ ವಿಜಯನಗರದ ವಂಶಸ್ಥರು ಇಲ್ಲಿದ್ದಾರೆ. ಗಜಶಾಲೆಯ ಹಿಂಭಾಗದ ಬೆಟ್ಟದಲ್ಲಿರುವ ಬಂಡೆಯಮೇಲೆ ಆನೆಗೊಂದಿ ಕೊತ್ತಳವೆಂದು ಕೆತ್ತಲಾಗಿದೆ.[೪೩]

ಸೋಮಯದೇವರ ಕೊತ್ತಳ : ಈ ಕೊತ್ತಳವು ಸಿಂಘಾರದ ಹಾಗೂ ಸೋಮವಾರದ ಬಾಗಿಲುಗಳ ಮಧ್ಯಭಾಗದಲ್ಲಿದೆ. ಇಲ್ಲಿಯೇ ಉತ್ತರಕ್ಕಿರುವ ಬೆಟ್ಟದ ಮೇಲೆ ಸೋಮಯ್ಯ ದೇವರ ಕೊತ್ತಳವೆಂದು ಕಡೆಯಲಾಗಿದೆ.[೪೪] ಸೋಮಯ್ಯ ದೇವರ ಹೆಸರಿನಿಂದ ಅಥವಾ ಸೋಮವಾರ ಮಾರುಕಟ್ಟೆ (ಸಂತೆ) ನಡೆಯುವ ದಿನವೆಂದು, ಈ ಹೆಸರಿನಿಂದಲೇ ಕೊತ್ತಳಕ್ಕೆ ಸೋಮಯ್ಯದೇವರ ಕೊತ್ತಳವೆಂದು ಕರೆದಿರುವುದು.

ಕೋಟೆಯಲ್ಲಿ ನೀರಿನ ಪೂರೈಕೆ

ವಿಜಯನಗರದ ಕೋಟೆಯೊಳಗೆ ಉತ್ತಮವಾದ ನೀರಿನ ಸೌಕರ್ಯವಿದ್ದುದು ಇತಿಹಾಸಕಾರರಿಗೆ ತಿಳಿದಿರುವ ವಿಷಯವೆ. ಕೋಟೆಯಲ್ಲಿ ವಾಸಿಸುವ ಜನರ ದೈನಂದಿನ ಉಪಯೋಗಕ್ಕೆ ಹೊಲಗದ್ದೆ ತೋಟಗಳಿಗೆ ಮತ್ತು ಪ್ರವಾಸಿಗಳಿಗೆ ಒದಗಿಸಿದ್ದ ನೀರಿನ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಆಣೆಕಟ್ಟು, ಕಾಲುವೆ, ಕೆರೆ - ಬಾವಿ ಅರವಟ್ಟಿಗೆಗಳನ್ನು ಕಟ್ಟಿಸಿದ್ದರು.

ಜನರಿಗೆ, ಪ್ರಾಣಿಗಳಿಗೆ ಮತ್ತು ವ್ಯವಸಾಯಕ್ಕೆ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಒಂದು ಸಾಮಾಜಿಕ ಜವಾಬ್ದಾರಿಯಾಗಿತ್ತೆಂಬುದಕ್ಕೆ ಹಂಪಿಯ ಕಡಲೆಕಾಳು ಗಣೇಶನ ಗುಡಿಯ ಮುಂದಿರುವ ಶಾಸನವು ಮುಖ್ಯ ಸಾಕ್ಷಿಯಾಗುತ್ತದೆ. ಕ್ರಿ.ಶ. ೧೪೧೧ರ ಪ್ರೌಢದೇವರಾಯನ ಶಾಸನದಲ್ಲಿ ಈತನ ಮಂತ್ರಿಯಾದ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಾ ಕಿವಿಯಲ್ಲಿ ಹೇಳಿದ ಒಂದು ಪದ್ಯ ಹೀಗಿದೆ.[೪೫]



ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಗಾರಮಂ
ಮಾಡಿಸಜ್ಜೆರೆ ಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗೆಬುಕೆಯಿ
ನಂಬಿದರ್ಗ್ಗೆರವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂ ತೆಲ್ಲವಂ
ಪಿಂದೆ ತಾಂಯೆರದಳ್ವಾಲೆರವಂದು ತೊಟ್ಟು ಕಿವಿಯೊಳ್
ಲಕ್ಷ್ಮೀಧರಾಮಾತ್ಯನಾ |

ಆಣೆಕಟ್ಟು ಮತ್ತು ಕಾಲುವೆಗಳು : ವಿಜಯನಗರ ಪಟ್ಟಣದ ಪಕ್ಕದಲ್ಲಿಯೇ ಹರಿಯುತ್ತಿರುವ ತುಂಗಭದ್ರಾ ನದಿಗೆ ಆಣೆಕಟ್ಟನ್ನು ಕಟ್ಟಿ ಅಲ್ಲಿಂದ ಕಾಲುವೆ ಮುಖಾಂತರ ಕೋಟೆಯೊಳಗೆ ನೀರು ಹರಿಸಲಾಗಿತ್ತು. ಇಂದಿಗೂ ಅಂಥಹ ಕಾಲುವೆಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ಮುಖ್ಯವಾದ ಕಾಲುವೆಗಳಲ್ಲಿ ವಿಜಯನಗರ ತುರ್ತಾ ಕಾಲುವೆ[೪೬]ಯೂ ಒಂದು. ಇದನ್ನು ಶಾಸನಗಳು ಹಿರಿಯ ಕಾಲುವೆ ಎಂದು ಕರೆದಿವೆ.[೪೭] ಈ ಕಾಲುವೆಯು ಆಣೆಕಟ್ಟೆನಿಂದ ಪ್ರಾರಂಭವಾಗಿ ೬.೨ ಕಿ.ಮೀ. ದೂರದಲ್ಲಿ ಮಾತಂಗ ಪರ್ವತದ ಪೂರ್ವಕ್ಕೆ ಕಲ್ಲು ಬಂಡೆಯನ್ನು ಸೀಳಿಕೊಂಡು ಮುಂದೆ ಸಾಗುತ್ತದೆ. ಬಂಡೆಯನ್ನು ಒಡೆಸಿ ಕಾಲುವೆಯನ್ನು ಕಟ್ಟಿಸಿದ್ದು, ಶಾಸನಗಳಿಂದ ತಿಳಿಯುತ್ತದೆ. ಈ ಕಾಲುವೆಯು ಕೋಟೆಯೊಳಗಿನ ಉದ್ದಾನ ವೀರಭದ್ರ ದೇವಾಲಯದ ಹತ್ತಿರ ಹರಿದು ಕೃಷ್ಣಾಪುರದ ಪೇಟೆಗೆ ನೀರನ್ನು ಒದಗಿಸಿದೆ.[೪೮] ಊಟದ ಕಾಲುವೆಯು ಮಹಾನವಮಿ ದಿಬ್ಬವಿರುವ ಆವರಣದ ಬಳಿ ರಸ್ತೆಯ ಎಡಕ್ಕೆ ಬೋಜನಶಾಲೆಯೆಂದು ಕರೆಯುವ ಸ್ಥಳದ ಬಳಿ ಹರಿದಿದೆ. ಇಲ್ಲಿ ಒಂದು ಚಿಕ್ಕ ಕಾಲುವೆಯ ದಂಡೆಯ ಮೇಲೆ ಹಸಿರು ಬಣ್ಣದ ಕಲ್ಲು ಚಪ್ಪಡಿಗಳನ್ನು ಜೋಡಿಸಿದೆ. ಚಪ್ಪಡಿಗಳ ಮಧ್ಯದಲ್ಲಿ ತಟ್ಟೆ ಮತ್ತು ಬಾಳೆ ಎಲೆಯ ಆಕಾರದ ತಗ್ಗು ಇದ್ದು ಸುತ್ತಲೂ ಬಟ್ಟಲಿನಾಕಾರದ ತಗ್ಗುಗಳಿವೆ. ಇವುಗಳನ್ನು ಊಟಕ್ಕೆ ಉಪಯೋಗಿಸುತ್ತಿದ್ದರೆಂಬುದು ಸ್ಥಳೀಯ ಪ್ರತೀತಿ. ಹಾಗಾಗಿ ಇದರ ಪಕ್ಕದಲ್ಲಿ ಹರಿದಿರುವ ಕಾಲುವೆಗೆ ಊಟದ ಕಾಲುವೆ ಎಂದು ಹೆಸರು ಬಂದಿದೆ. ಹೀಗೆ ತುರ್ತಾ ಹಾಗೂ ಊಟದ ಕಾಲುವೆಗಳು ಕೋಟೆಯೊಳಗಿನ ಜನರ ದಾಹವನ್ನು ಇಂಗಿಸಿವೆ.

ಕೆರೆಗಳು : ವಿಜಯನಗರದ ರಾಜಧಾನಿಯಲ್ಲಿ ಕೆರೆಗಳು ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿವೆ. ಅರಸರು ಈ ಭಾಗದ ಮಳೆಯ ವೈಪರಿತ್ಯ ಸ್ವಭಾವಗಳನ್ನು ಪರಿಗಣಿಸಿ ಕೆರೆಗಳನ್ನು ನಿರ್ಮಿಸಿದ್ದಾರೆ.[೪೯] ವಿಜಯನಗರ ಕೆರೆಗಳ ಬಗ್ಗೆ ಎಂ.ಎಲ್. ಸರಸ್ವತಿಯವರು, ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಸಿ.ಟಿ.ಯಂ. ಕೊಟ್ರಯ್ಯ, ಡಾ. ವಾಸುದೇವನ್, ಎಂ. ಕೊಟ್ರೇಶ್ ಇವರು ಸಂಶೋಧನೆ ಮಾಡಿರುವರು. ರಾಜಧಾನಿಯ ಕೋಟೆಯ ಒಳಗೂ ನೀರಿನ ವ್ಯವಸ್ಥೆಗಾಗಿ ಕೆರೆಗಳನ್ನು ನಿರ್ಮಿಸಿರುವುದು ಶಾಸನಗಳಿಂದ ತಿಳಿದು ಬರುವ ಅಂಶ. ಇಲ್ಲಿ ಭೂಪತಿ ಕೆರೆ,[೫೦] ಕಮಲಾಪುರದ ಕೆರೆ,[೫೧] ಕೃಷ್ಣರಾಯ ಸಮುದ್ರದ ಕೆರೆ,[೫೨] ಕೋಟೆಯೊಳಗಿರುವ ಮುಖ್ಯ ಕೆರೆಗಳಾಗಿವೆ. ಇವುಗಳಲ್ಲಿ ಕಮಲಾಪುರದ ಕೆರೆ ಮಾತ್ರ ಉಳಿದುಕೊಂಡಿದೆ.

ಕೊಂಡಗಳು : ನಿಸರ್ಗದತ್ತ ಕಲ್ಲುಬಂಡೆಗಳನ್ನು ಕಡಿದು ನೀರಿನ ವ್ಯವಸ್ಥೆಗಾಗಿ ಕೊಂಡಗಳನ್ನು ನಿರ್ಮಿಸಿಕೊಂಡಿದ್ದರು. ಅವುಗಳಲ್ಲಿ ನರಸಿಂಹ ದೇವಾಲಯದ ಉತ್ತರಕ್ಕೆ ನದಿಯ ದಡದಲ್ಲಿರುವ ಸೀತಾಕೊಂಡ.[೫೩] ಬೇಟೆಕಾರರ ಹೆಬ್ಬಾಗಿಲಿನ ಹಿಂದೆ ಇರುವ ಒರತೆಯ ಕೊಂಡ[೫೪] ಮುಖ್ಯವಾಗಿವೆ.

ಬಂಡೆಯ ಮೇಲೆ ಪ್ರಕೃತಿ ನಿರ್ಮಿತ ಚಿಕ್ಕ ತೊಟ್ಟಿಯಾಕಾರದ ತಗ್ಗುಗಳನ್ನು ನೀರಿನ ಸಂಗ್ರಹಣೆಗಾಗಿ ಉಪಯೋಗಿಸಿಕೊಂಡಿದ್ದರು. ಇಂಥಹ ತೊಟ್ಟಿಗಳನ್ನು ರಾಜಧಾನಿಯ ಅನೇಕ ಭಾಗಗಳಲ್ಲಿ ಕಾಣಬಹುದು ಮತ್ತು ಕೆಲವು ತೊಟ್ಟಿಗಳನ್ನು ಸಮಾಜದ ಬಗ್ಗೆ ಕಾಳಜಿ ಇರುವವರು ಮಾಡಿಸಿರುವಂತೆ ಶಾಸನಗಳು ಹೇಳುತ್ತವೆ. ವಿರೂಪಾಕ್ಷ ತೇರುಬೀದಿಯಲ್ಲಿ ಕಂಪ್ಲಿಮಠದ ಪಕ್ಕದಲ್ಲಿರುವ ತೊಟ್ಟಿಯನ್ನು ಅಬರಾಜು ತಿಮಪ ಮಾಡಿಸಿದ.[೫೫] ಕೊದಂಡರಾಮ ದೇವಾಲಯದ ಹತ್ತಿರವಿರುವ ತೊಟ್ಟಿಯನ್ನು ತುಳು ಬನವಾಸಿಯ ಮಗ ಕತ್ತೆಲಬಯ್ಯನು ಮಾಡಿಸಿದ.[೫೬] ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತಾ ಕಾಲುವೆಯ ಬಲದಂಡೆಯ ಹತ್ತಿರ ದೊಡ್ಡ ಕಲ್ಲಿನೊಳಗೆ ತೊಟ್ಟಿಯನ್ನು[೫೭] ಕಟ್ಟಿಸಿರುವಂತೆ ತಿಳಿದು ಬರುವುದು.

ಬಾವಿಗಳು : ಬಾವಿಗಳು ಮಾನವ ನಿರ್ಮಿತವಾದವು. ಇವುಗಳಲ್ಲಿ ಎರಡು ಪ್ರಕಾರಗಳಿವೆ, ಕುಡಿಯುವ ನೀರಿನ ಬಾವಿ ಮತ್ತು ಬಳಸುವ ನೀರಿನ ಬಾವಿಗಳೆಂದು. ವಿಜಯನಗರ ರಾಜಧಾನಿಯಲ್ಲಿ ನೂರಾರು ಬಾವಿಗಳು ಇದ್ದವಾದರೂ ಇಲ್ಲಿ ಶಾಸನಗಳಲ್ಲಿ ಬರುವ ಬಾವಿಗಳನ್ನು ಮಾತ್ರ ಹೇಳಲಾಗಿದೆ. ಮಾತಂಗ ಪರ್ವತದ ಹತ್ತಿರ ದೊಡ್ಡಬಾವಿ ಇದೆ. ಇದನ್ನು ಶಾಸನಗಳಲ್ಲಿ ಮಹಾದೇವಿ ಅಕ್ಕನ ಬಾವಿ ಮತ್ತು ಕೆಳಬಾವಿಯೆಂದು ಉಲ್ಲೇಖಿಸಿದೆ.[೫೮] ಹೊದೆಯ ಬಾಗಿಲ ಉತ್ತರಕ್ಕೆ ಗುಡ್ಡದ ಪಕ್ಕದಲ್ಲಿರುವ ಬಾವಿಯನ್ನು ದೇವರಾಯನು ಕ್ರಿ.ಶ. ೧೪೧೧ ರಲ್ಲಿ ಕಟ್ಟಿಸಿದಂತೆ ಶಾಸನವು ಹೇಳುತ್ತದೆ.[೫೯] ಸಿಂಘಾರದ ಹೆಬ್ಬಾಗಿಲಿನ ಈಶಾನ್ಯಕ್ಕೆ ಕಟ್ಟಿಗೆ ಅಹ್ಮದ್ ಖಾನನ ಧರ್ಮಶಾಲೆ ಇರುವುದು ಇದರ ಪಕ್ಕದಲ್ಲಿ ಬಾವಿ ಇದೆ. ಇದನ್ನು ಅಹ್ಮದ್ ಖಾನನು ಕ್ರಿ.ಶ. ೧೪೩೯ ರಲ್ಲಿ ನಿರ್ಮಿಸಿದಂತೆ ಶಾಸನವಿದೆ.[೬೦] ಬೇಟೆಕಾರರ ಹೆಬ್ಬಾಗಿಲಿನ ಈಶಾನ್ಯಕ್ಕೆ ಲಿಂಗನಬಾವಿ ಮತ್ತು ರಂಗನಾಥನ ಬಾವಿಗಳಿವೆ.[೬೧] ಇವುಗಳು ಕೋಟೆಯೊಳಗಿನ ಜನತೆಯ ಜೀವಸೆಲೆಯಾಗಿದ್ದವು.

ವಿದೇಶಿಯರು ಕಂಡ ವಿಜಯನಗರದ ಕೋಟೆ

(Vijayanagara Fort as seen by Foreign Travellers)

ವಿಶ್ವವಿಖ್ಯಾತ ಹಂಪಿಗೆ ಕ್ರಿ.ಶ. ೧೪ನೆಯ ಶತಮಾನದಿಂದ ಇಂದಿನವರೆಗೂ ವಿದೇಶಿ ಪ್ರವಾಸಿಗರು, ಸಂಶೋಧಕರು, ವ್ಯಾಪಾರಿಗಳು, ಸಂದರ್ಶಕರು, ರಾಯಭಾರಿಗಳು ಬರುತ್ತಲೇ ಇದ್ದು, ಅವರು ತಮಗಾದ ಅನುಭವಗಳನ್ನು ದಾಖಲಿಸುತ್ತಲೇ ಬಂದಿದ್ದಾರೆ. ವಿಜಯನಗರದ ಸಮಕಾಲೀನ ಪಾಶ್ಚಾತ್ಯ ಬರಹಗಾರರು ಮತ್ತು

ಪ್ರವಾಸಿಗರು ತಾವು ಇಲ್ಲಿ ಕಂಡುಂಡ ಅನುಭವ ಕಥನಗಳನ್ನು ತಮ್ಮ ಬುದ್ಧಿಮತ್ಯಕ್ಕೆ ಅನುಸಾರವಾಗಿ ಆತ್ಮಕಥನಗಳಲ್ಲಿ, ದಿನಚರಿಗಳಲ್ಲಿ ಬರೆದಿಟ್ಟಿದ್ದಾರೆ. ಅಂಥವರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದವರೆಂದರೆ ನೀಕೋಲೊ ಕೌಂಟಿ, ಅಬ್ದುಲ್ ರಜಾಕ್, ನಿಕೇಟಿನ್, ಡ್ಯೂರಾಟೆ ಬಾರ್ಬೋಸ್, ಡಾಮಿನಿಗೊ ಪೇಸ್, ವಾರ್ಥಿಮಾ, ನ್ಯೂನಿಜ್ ಇವರುಗಳು ತಾವು ಕಂಡ ವಿಜಯನಗರದ ಕೋಟೆಯ ಬಗ್ಗೆ ಈ ಕೆಳಗಿನಂತೆ ವರ್ಣಿಸಿದ್ದಾರೆ.

ನೀಕೋಲೊ ಕೌಂಟಿ (Nicolo Conti) : ಇವನು ದಕ್ಷಿಣ ಯುರೋಪಿನ ವೆನಿಸ್ ಪಟ್ಟಣದವನು. ಈತ ತನ್ನ ಹೆಂಡತಿಯೊಡನೆ ಕ್ರಿ.ಶ. ೧೪೨೦ ರಲ್ಲಿ ಎರಡನೇ ದೇವರಾಯನ ಆಳ್ವಿಕೆಯಲ್ಲಿ ವಿಜಯನಗರಕ್ಕೆ ಬಂದಿದ್ದನು. ಈತನು ಕೋಟೆಯ ಬಗ್ಗೆ ಈ ಕೆಳಗಿನಂತೆ ಹೇಳಿದ್ದಾನೆ : "ದೊಡ್ಡ ಪಟ್ಟಣವಾದ ವಿಜಯನಗರವು ಕಡಿದಾದ ಗುಡ್ಡಗಳ ಹತ್ತಿರ ಇದೆ. ಈ ಪಟ್ಟಣದ ಸುತ್ತಳತೆ ೬೦ ಮೈಲುಗಳು. ಪಟ್ಟಣದ ಕೋಟೆ ಗೋಡೆಗಳನ್ನು ಗುಡ್ಡದ ಮೇಲೆಯೂ ಏರಿಸಲಾಗಿದೆ. ಆ ಪಟ್ಟಣದಲ್ಲಿ ೯೦,೦೦೦ ಸೈನಿಕರಿದ್ದಾರೆ."[೬೨]

"The great city of Bijenegalia is Situated near very steep mountains. The circumtrance of the city is sixty miles, its walls are carried up to mountains and Enclose the valleys at their foot, so that its Extent is there by increased. in this city there are ninety thousand men fit to bear arms"[೬೩]

ಅಬ್ದುಲ್ ರಜಾಕ್ (Abdul Razak) : ಇವನು ಪರ್ಶಿಯಾದ ರಾಯಭಾರಿ. ಕ್ರಿ.ಶ. ೧೪೪೩ ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದನು. ಆತ ತನ್ನ ಪ್ರವಾಸ ಕಥನದ ಅನುಭವದಲ್ಲಿ ವಿಜಯನಗರದ ಕೋಟೆಯ ಬಗ್ಗೆ ಹೀಗೆ ಹೇಳುತ್ತಾನೆ. "ಬಿಜನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳು ಏಳು ಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ."

ಒಂದನೆಯದುರ್ಗದ ಸುತ್ತ ಮನುಷ್ಯನ ಎತ್ತರದ ಕಲ್ಲು ಕಂಬಗಳನ್ನು ಭೂಮಿಯಲ್ಲಿ ಅರ್ಧ ಹೂತು ಇನ್ನರ್ಧ ಮೇಲೆ ಕಾಣುವಂತೆ ನೆಟ್ಟಿದ್ದಾರೆ. ಇವುಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಹೇಗೆ ಹೂತಿದ್ದಾರೆಂದರೆ ರಾವುತನಾಗಲೀ ಪದಾತಿಯಾಗಲೀ ಧೈರ್ಯವಾಗಿ ಅಥವಾ ಸುಲಭವಾಗಿ ದುರ್ಗದ ಕಡೆ ಹೋಗುವಂತಿಲ್ಲ. ಈ ಕೋಟೆ ಚಕ್ರಾಕಾರವಾಗಿದೆ. ಇದನ್ನು ಬೆಟ್ಟದ ತುದಿಯಮೇಲೆ ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಗಳು ಬಹು ಬಲವಾಗಿವೆ. ಈ ಹೆಬ್ಬಾಗಿಲುಗಳನ್ನು ಒಂದೇ ಸಮನೆ ಕಾಯುತ್ತಾರೆ. ಯಾರನ್ನೂ ಸಂಪೂರ್ಣ ಪರೀಕ್ಷೆ ಮಾಡದೇ ಒಳಗೆ ಬಿಡುವುದಿಲ್ಲ. (ಇವರು ಸುಂಕವಸೂಲಿಯನ್ನೂ ಮಾಡುತ್ತಾರೆ) ಎರಡನೆಯ ಕೋಟೆ ವಿಶಾಲವಾದ ಜಾಗವನ್ನ ಆಕ್ರಮಿಸಿದೆ. ಇದರಂತೆ ನಾಲ್ಕು ಐದು ಮತ್ತು ಆರನೆಯ ಕೋಟೆಗಳಿವೆ. ಎಲ್ಲಾ ಕೋಟೆಗಳ

ಮಧ್ಯದಲ್ಲಿರುವ ಎಳನೆಯ ಕೋಟೆ ಆಕ್ರಮಿಸಿಕೊಂಡಿರುವ ಜಾಗ ಹೆರಾತ್ ನಗರದ ಮಾರ್ಕೆಟ್ ಜಾಗದ ಹತ್ತರಷ್ಟು ವಿಶಾಲವಾಗಿದೆ. ಇಲ್ಲಿ ರಾಜನು ವಾಸಮಾಡುವ ಅರಮನೆಯಿದೆ. ಉತ್ತರದಿಕ್ಕಿನಲ್ಲಿ ಮೊದಲನೆ ಕೋಟೆಯ ಹೆಬ್ಬಾಗಿಲಿನಿಂದ ಹಿಡಿದು ದಕ್ಷಿಣದಲ್ಲಿರುವ ಹೆಬ್ಬಾಗಿಲಿಗೆ ಎರಡು ಪರಸಾಂಗುಗಳಷ್ಟು ದೂರವಿದೆ. ಪೂರ್ವದಿಂದ ಪಶ್ಚಿಮಕ್ಕೂ ಅಷ್ಟೇ ದೂರ.[೬೪]

ಮೊದಲನೆಯ ಕೋಟೆಗೂ ಎರಡನೆಯ ಕೋಟೆಗೂ ಮಧ್ಯ ಇರುವ ಜಾಗದಲ್ಲಿ ಅಂದರೆ ಮೂರನೆ ಕೋಟೆವರೆಗೆ ಇರುವ ಜಾಗದಲ್ಲಿ ಬೇಸಾಯದ ಹೊಲಗಳೂ, ಮನೆಗಳೂ ಮತ್ತು ತೋಟಗಳಿವೆ. ಮೂರನೆ ಕೋಟೆಯಿಂದ ಎರಡನೆಯ ಕೋಟೆಯವರೆಗೆ ಅಸಂಖ್ಯಾತ ಜನಗಳನ್ನು ಅನೇಕ ಅಂಗಡಿಗಳನ್ನೂ, ಅಂಗಡಿ ಬೀದಿಗಳನ್ನೂ ನೋಡಬಹುದು. ರಾಜನ ಅರಮನೆಯ ಹೆಬ್ಬಾಗಿಲಿನಲ್ಲಿ ಎದುರು ಬದಿರಾಗಿ ನಾಲ್ಕು ಅಂಗಡಿ ಬೀದಿಗಳಿವೆ. ಉತ್ತರದಲ್ಲಿ ರಾಯ್‌ನ ಅರಮನೆಯ ಮಹಾದ್ವಾರವಿದೆ.[೬೫]

"The city of Bidinagar is such that the pupil of the eye has never seen a place like it, and the year of interlligence has never been informed that there existed any thing to equal it in the world. it is built in such a manner that seven citadels and the same number of walls enclose ezch other. Around the first citadel are stones of the height of a man, one half of which sunk in the ground while the other half rises above it. These are fixed one beside other in such a manner that no horse or foot soldier could boldly or with ease approach the citadel"

"Other citadel appeared like round shape built on summit of mountain and constructed of stone and lime. It has very solid gates, the guards of which are constantly at their post and examine every thing with severe inspection."

"The seventh fortress is to north and is the place of the king. The space which seperates the first fortress, is filled with the third fields and with houses and gardens. In the space from the third to the seventh, one meets a numberless crowed of people, many shops and bazars. By the king's palace are four bazars, placed opposite each other. On the north is the portico of 'Rai'. Above each bazar is lofty arcode with magnificant gallery, but the audiance hall of the King's palace is elevated above all the rest. The bazars are extremely long and Broad."

"Each elephant has a seperate compartment, the walls of which are solid, and roof compose of strong pieces of wood.... opposite the mint is the house of the Governor, where are stationed twelve thousand soldiers on guard..."[೬೬]

ನಿಕೆಟಿನ್ (Niketin) : ಈತ ರಷ್ಯಾದ ಪ್ರವಾಸಿ. ವ್ಯಾಪಾರಕ್ಕಾಗಿ ಕ್ರಿ.ಶ. ೧೪೭೦ ರಲ್ಲಿ ಭಾರತಕ್ಕೆ ಬಂದ. ಬೀದರ್ ನಲ್ಲಿ ನಾಲ್ಕು ವರ್ಷಗಳಿದ್ದು, ಬಹುಮನಿ ರಾಜ್ಯದ ಬಗ್ಗೆ ತನ್ನ ಅನುಭವಗಳನ್ನು ಹೇಳುತ್ತಾ ವಿಜಯನಗರದ ಬಗ್ಗೆಯೂ ಪ್ರಸ್ತಾಪಿಸಿದ್ದಾನೆ. "ವಿಜಯನಗರದಲ್ಲಿ ಒಂದು ಲಕ್ಷ ಸೈನಿಕರು ಮತ್ತು ೫೦,೦೦೦ ಕುದುರೆಗಳುಳ್ಳ ಅಶ್ವದಳವೂ ಇದೆ. ಇಲ್ಲಿ ಹಿಂದೂ ಸುಲ್ತಾನನಾದ ಕದಮ್ ಬಹಳ ಬಲಶಾಲಿಯಾಗಿದ್ದಾನೆ. ಅವನಲ್ಲಿ ದೊಡ್ಡ ಸೈನ್ಯವಿರುವುದರಿಂದ ವಿಜಯನಗರದ ಸುತ್ತಲೂ ಮೂರು ಕೋಟೆಗಳಿವೆ. ಒಂದು ಬದಿಗೆ ನದಿ ಹರಿಯುತ್ತಿದೆ. ಇನ್ನೊಂದು ಬದಿಗೆ ದಟ್ಟವಾದ ಕಾಡು ಇದೆ.[೬೭]

Vijayanagara City is surrounded by three Forts and intersected by a River, bordering on the side by a dreadful jungle and on the other a dale, the town is impregnable.[೬೮]

ಡ್ಯೂರಾಟೆ ಬಾರ್ಬೋಸ್ (Durate Barbose) : ಇವನು ಕ್ರಿ.ಶ. ೧೫೧೪-೧೫ ರಲ್ಲಿ ಕೃಷ್ಣದೇವರಾಯನ ಆಳ್ವಿಕೆ ಅವಧಿಯಲ್ಲಿ ವ್ಯಾಪಾರಕ್ಕಾಗಿ ಭಾರತಕ್ಕೆ ಪೋರ್ಚುಗಲ್ಲಿನಿಂದ ಬಂದಿದ್ದನು. ವಿಜಯನಗರದ ಬಗ್ಗೆ ಹೇಳುವಾಗ ಕೋಟೆಯನ್ನು ಕುರಿತು : "ಪರ್ವತಗಳಿಂದ ೪೫ ರಹದಾರಿ ದೂರದಲ್ಲಿ ಬಿಜನಗರ ಎಂಬ ಬಹುದೊಡ್ಡ ನಗರವಿದೆ. ಅದು ವಿಪುಲ ಜನಸಂಖ್ಯೆ ಉಳ್ಳದ್ದೂ, ಒಂದು ಬದಿಯಲ್ಲಿ ಉತ್ತಮ ಗೋಡೆಯಿಂದ ಇನ್ನೊಂದು ಬದಿಯಲ್ಲಿ ನದಿಯಿಂದ ಮತ್ತೊಂದು ಬದಿಯಲ್ಲಿ ಪರ್ವತದಿಂದ ಸುತ್ತುವರೆಯಲ್ಪಟ್ಟಿದೆ. ನಗರವು ಸಮತಲ ನೆಲದ ಮೇಲಿದೆ"[೬೯] ಎಂದು ದಾಖಲಿಸಿದ್ದಾನೆ.

"Forty five leagues from these mountains, there is very large city, which is called Bijanagar, Very populors and surrounded on one side by a very good wall and another by river and on the another by mountain. The city is on a level ground...". "The King keeps at all times nine hundred elephants and more than twenty thousand houses, all are brought with his own money."[೭೦]

ಡಾಮಿನಿಗೊ ಪೇಸ್ (Domingo Paes) : ಈತನು ಕ್ರಿ.ಶ. ೧೫೨೦ ರಲ್ಲಿ ವಿಜಯನಗರಕ್ಕೆ ಭೇಟಿಕೊಟ್ಟ ಪೋರ್ಚ್‌ಗೀಸ್ ಪ್ರವಾಸಿಗ. ವಿಜಯನಗರ ಕೋಟೆಯ ಬಗ್ಗೆ : "ಇಲ್ಲಿಯ ನಗರ ಮತ್ತು ಪಟ್ಟಣಗಳು ಕೋಟೆಗಳನ್ನು

ಹೊಂದಿದ್ದು, ಅವು ಸ್ವಾವಲಂಬಿಯಾಗಿದ್ದು, ಸುಂದರವಾಗಿದೆ. ಪಶ್ಚಿಮಾ ಕರಾವಳಿಯಿಂದ ವಿಜಯನಗರಕ್ಕೆ (ಮಾರ್ಗದ ಬಗೆಗೆ ಹೇಳುತ್ತಾ) ಪ್ರಥಮಶ್ರೇಣಿ ಅರ್ಥಾತ್ ಬಯಲಿನಿಂದ ಮೇಲೆ ಸಾಗುವಾಗ ಮೊದಲು ಕಾಣುವ ಶ್ರೇಣಿಯನ್ನು ವರ್ಣಿಸುತ್ತಾ ಈ ಗುಡ್ಡಗಳಲ್ಲಿ ಆ ಬದಿಯಿಂದ ಮುಖ್ಯ ಪ್ರವೇಶ ಮಾರ್ಗವಿತ್ತು" ಎಂದು ಹೇಳುತ್ತಾನೆ. ಇದನ್ನು ಸೇರಿದಂತೆ ಇಲ್ಲಿಯ ಗೋಡೆಯನ್ನು ರಾಜಾ ಕೃಷ್ಣ ಕಟ್ಟಿಸಿದನೆಂದು ಹೇಳುತ್ತಾನೆ[೬೧]

"Bisnaga (Hampi-Vijayanagara) is the capital of all the kingdom where the king always resides, inside the city, very beautiful rows of buildings made after their manner with flat roofs... and on the pillers are other images, smaller images, yet more subordinable, between these images and pillers run a design of foliage"[೬೨]

ವಾರ್ಥಿಮಾ (Varthema) : ವಿಜಯನಗರಕ್ಕೆ ಕ್ರಿ.ಶ. ೧೫೦೫ ರಲ್ಲಿ ಬಂದ ಇಟಾಲಿಯನ್ ಪ್ರವಾಸಿಯಾಗಿದ್ದಾನೆ. ವಿಜಯನಗರವನ್ನು ಬಲ ಮತ್ತು ಭದ್ರ ಗೋಡೆಗಳುಳ್ಳ ಮಹಾನಗರವೆಂದು ವರ್ಣಿಸಿದ್ದಾನೆ. ಅದು ಗುಡ್ಡದ ಬದಿಯಲ್ಲಿ ಸ್ಥಾಪಿತವಾಗಿದೆ ಮತ್ತು ಅದರ ಸುತ್ತಳತೆ ೭ ಮೈಲು ಇದೆ. ಅದಕ್ಕೆ ಗೋಡೆಗಳ ಮುಮ್ಮಡಿ ವೃತ್ತಕವಿದೆ ಎಂದಿದ್ದಾನೆ.[೬೩]

"A very large and strongly walled city, seven miles in circumference, well sheltered by mountains, very wealthy and well e quipped city situated on a beautiful site and enjoying and excellent climate"[೬೪]

ನ್ಯೂನಿಜ್ (Nuniz) : ಪೋರ್ಚಗೀಸ್ ಪ್ರವಾಸಿಯಾದ ಈತನು ಕ್ರಿ.ಶ. ೧೫೩೫ - ೩೭ ರಲ್ಲಿ (ಅಂದರ ಅಚ್ಯುತದೇವರಾಯನ ಕಾಲದಲ್ಲಿ) ವಿಜಯನಗರಕ್ಕೆ ಭೇಟಿನೀಡಿದ್ದನು. "೨ನೇ ಹರಿಹರನ ಉತ್ತರಾಧಿಕಾರಿ ಹೊಸ ಗೋಡೆಗಳು ಮತ್ತು ಗೋಪುರಗಳನ್ನು ಕಟ್ಟಿ ಅದರ ವ್ಯಾಪ್ತಿಯನ್ನು ವಿಸ್ತರಿಸಿ ಮತ್ತು ಕೋಟೆಗಳಿಗೆ ಇನ್ನು ಹೆಚ್ಚು ಸುತ್ತಗಳನ್ನು ಕಟ್ಟಿಸಿ ವಿಜಯನಗರ ಪಟ್ಟಣವನ್ನು ಬಹಳ ಅಭಿವೃದ್ಧಿ ಪಡಿಸಿದನೆಂದು ಹೇಳಿದ್ದಾನೆ.[೬೫]

"His Cronick is more historical than descriptive of the empire or its capital. He laboured to gather full History of Vijayanagara empire right from the days of its foundation by Harihara and his brothers. He says, it was best provided city in the world".[೬೬]

ಟಿಪ್ಪಣಿಗಳು

೧. A.R.No. 87 of 1904; SII IX (Pt I), No. 80. ಹಂಪಿ

೨. ದೇವರಕೊಂಡಾರೆಡ್ಡಿ ಮತ್ತು ಇತರರು. ೨೦೦೦. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಹಂಪಿ)* - ೩, ಪು. xx. ಹಂಪಿ : ಕನ್ನಡ ವಿಶ್ವವಿದ್ಯಾಲಯ

೩. *ಅದೇ,* ಪು. xxiii

೪. ಚನ್ನಬಸಪ್ಪ ಎಸ್. ಪಾಟೀಲ, ೧೯೯೯. *ಕರ್ನಾಟಕದ ಕೋಟೆಗಳು ಸಂಪುಟ ೧,* ಪು. ೯೧. ಹಂಪಿ : ಕನ್ನಡ ವಿಶ್ವವಿದ್ಯಾಲಯ

೫. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ. ಪು. xxiv

೬. Ec X, kl. 75

೭. Ec X, (R). AR 66

೮. Ec XII, GB. 75

೯. *ಕರ್ನಾಟಕದ ಕೋಟೆಗಳು,* ಪೂರ್ವೋಕ್ತ. ಪು. ೯೧

೧೦. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ. ಪು. ೭೭

೧೧. *ಅದೇ,* ಪು. ೨೪೫

೧೨. *ಅದೇ,* ಪು. ೨೪೨

೧೩. *ಅದೇ,* ಪು. ೨೬೨

೧೪. ಪೆನುಗೊಂಡ ಮತ್ತು ಗುಮ್ಮಟದ ಬಾಗಿಲುಗಳ ಬಲಭಾಗದ ಗೋಡೆಗಳಲ್ಲಿ ನಂದಿ, ಶಿವಲಿಂಗ ಇದರ ಮುಂದೆ ಕೈಮುಗಿದು ನಿಂತಿರುವ ರಾಜ (ಪ್ರೌಢದೇವರಾಯ?) ನ ಉಬ್ಬು ಶಿಲ್ಪಗಳಿವೆ

೧೫. VPR, No 2 of 1983-84; ವಿಶಾ. ಪು. ೩೪೬

೧೬. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ. ಪು. ೧೬೪

೧೭. *ಅದೇ,* ಪು. ೧೬೪

೧೮. *ಅದೇ,* ಪು. ೨೬೨

೧೯. ರಾಮರಾವ್, ಜಿ.ಎನ್. *ವಿದೇಶೀಯರು ಕಂಡ ವಿಜಯನಗರ.* ಬೆಂಗಳೂರು : ಐಬಿಎಚ್ ಪ್ರಕಾಶನ

೨೦. ದೀಕ್ಷಿತ್, ಜಿ.ಎಸ್. ಮತ್ತು ವಿಶ್ವೇಶ್ವರಯ್ಯ, ಎಂ.ವಿ. ೧೯೭೧. *ಸಂಗಮರ ಕಾಲದ ವಿಜಯನಗರ,* ಪು. ೯೪-೯೫. ಬೆಂಗಳೂರು : ಬಿ.ಎಂ.ಶ್ರೀ ಪ್ರತಿಷ್ಠಾನ

೨೧. ಬಾಲಸುಬ್ರಹ್ಮಣ್ಯ. (ಅನುವಾದ). ೨೦೦೦. *ಮರೆಯಲಾಗದ ಮಹಾಸಾಮ್ರಾಜ್ಯ,* ಪು. ೩೫೦. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨೨. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ. ಪು. ೨೪೩

೨೩. *ಅದೇ,* ಪು. ೧೪೧

೨೪. *ಅದೇ,* ಪು. ೨೩೮-೩೯

೨೫. ವಸುಂಧರಾ ಫಿಲಿಯೋಜಾ. ೧೯೮೨. *ಅಳಿದುಳಿದ ಹಂಪೆ,* ಪು. ೧೦೪. ಬೆಂಗಳೂರು : ಮಾನಸೋಲ್ಲಾಸ ಪ್ರಕಾಶನ

೨೬. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ, ಪು. ೧೮೯

೨೭. *ಅದೇ,* ಪು. ೧೮೯

೨೮. Supra Ins, No. 124. Pp. 23-24

೨೯. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೨೦೩. ಹಂಪಿ : ಕನ್ನಡ ವಿಶ್ವವಿದ್ಯಾಲಯ.

೩೦. ಹೂವಿನ ಬಾಗಿಲ ಮುಂದಿರುವ ಆಂಜನೇಯ ದೇವಾಲಯದ ಗರ್ಭಗೃಹದ ಪ್ರವೇಶದ್ವಾರ ಪಾರ್ಶ್ವಗಳಲ್ಲಿಯ ಬಾಗಿಲ ತೋಳುಗಳಲ್ಲಿರುವ ಶಾಸನದಲ್ಲಿ

೩೧. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ, ಪು. ೨೮೨

೩೨. *ಅದೇ,* ಪು. ೧೮೮

೩೩. *ಅದೇ,* ಪು. ೧೮೬

೩೪. *ಅದೇ,* ಪು. ೨೭೦

೩೫. *ಅದೇ,* ಪು. ೧೮೯

೩೬. *ಅದೇ,* ಪು. ೧೮೮

೩೭. ಅದೇ, ಪು. ೧೮೫

೩೮. ಅದೇ, ಪು. ೧೮೫

೩೯. ಅದೇ, ಪು. ೧೨೦

೪೦. ಅದೇ, ಪು. ೨೧೫

೪೧. ಅದೇ, ಪು. ೨೧೫

೪೨. ಅದೇ, ಪು. ೨೧೬

೪೩. ಅದೇ, ಪು. ೨೪೫

೪೪. ಅದೇ, ಪು. ೨೪೨

೪೫. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ. ಪು. ೫೬

೪೬. ಅದೇ, ಪು. ೧

೪೭. ಅದೇ, ಪು. ೮೨

೪೮. ಅದೇ, ಪು. ೮೩

೪೯. ಕೊಟ್ರೇಶ್, ಎಂ. ೧೯೯೭. ವಿಜಯನಗರ ಕೆರೆಗಳು, *ವಿಜಯನಗರ ಸಾಂಸ್ಕೃತಿಕ ಆಯಾಮಗಳು,* ಪು. ೮೨. ಆನೆಗೊಂದಿ : ಹೊಸಪೇಟೆ, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್

೫೦. ಚನ್ನಬಸಪ್ಪ, ಎಸ್. ಪಾಟೀಲ್. ೧೯೯೬. ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ, *ವಿಜಯನಗರ ಅಧ್ಯಯನ ಸಂಪುಟ ೧,* ಪು. ೮೨. ಮೈಸೂರು : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

೫೧. ಅದೇ, ಪು. ೬೩

೫೨. ಅದೇ, ಪು. ೬೩

೫೩. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ. ಪು. ೬೮

೫೪. ಅದೇ, ಪು. ೮೭

೫೫. ಅದೇ, ಪು. ೯೨

೫೬. ಅದೇ, ಪು. ೬೮

೫೭. *ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ,* ಪೂರ್ವೋಕ್ತ. ಪು. ೬೪

೫೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - ೩, ಪೂರ್ವೋಕ್ತ. ಪು. ೯೩

೫೯. *ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ,* ಪೂರ್ವೋಕ್ತ. ಪು. ೬೫

೬೦. SII ix (pt II). No. 447

೬೧. *ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ,* ಪೂರ್ವೋಕ್ತ. ಪು. ೬೫

೬೨. ಬಾಲಸುಬ್ರಹ್ಮಣ್ಯ. (ಅನುವಾದ), ೨೦೦೦. *ಮರೆಯಲಾಗದ ಮಹಾಸಾಮ್ರಾಜ್ಯ,* ಪು. ೩೨೫. ಹಂಪಿ : ಕನ್ನಡ ವಿಶ್ವವಿದ್ಯಾಲಯ

೬೩. Major, India in the 15th Century, Kaklayuts, London, 1857. P. 12

೬೪. ಅದೇ, ಪು. ೩೫೦

೬೫. ನಾಗೇಗೌಡ, ಎಚ್.ಎಲ್. ೧೯೯೬. *ಪ್ರವಾಸಿ ಕಂಡ ಇಂಡಿಯಾ,* ಪು. ೧೫೫. ಮೈಸೂರು : ಮೈಸೂರು ವಿಶ್ವವಿದ್ಯಾಲಯ

೬೬. Suresh, K.M. 1993. *Sculptural Art of Hampi,* p. 9. Mysore : Directorate of Archealogy and Museums

೬೭. ಅಪರಂಜಿ, ಎಸ್.ಆರ್. ೧೯೮೨. *ಕರ್ನಾಟಕದ ಇತಿಹಾಸ.* ಪು. ೧೭೪. ಗದಗ : ವಿಜಯ ಬುಕ್ ಡಿಪೊ

೬೮. Sewell Robert, 1962. *Forgatton Empire,* P.138, New Delhi.

೬೯. ಸದಾನಂದ ಕನವಳ್ಳಿ. (ಅನುವಾದ). ೧೯೯೨. *ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ,* ಪು. ೧೩೮. ಹಂಪಿ : ಕನ್ನಡ ವಿಶ್ವವಿದ್ಯಾಲಯ

೭೦. ಅದೇ, ಪು. ೧೨೯

೭೧. ಅದೇ, ಪು. ೧೭೬


೭೨. ಅದೇ, ಪು. ೨೪೩, ೨೭೭

೭೩. ಅದೇ, ಪು. ೧೨೭

೭೪. ಅದೇ, ಪು. ೧೧೮

೭೫. ಅದೇ, ಪು. ೫೪

೭೬. ಅದೇ, ಪು. ೩೦೧, ೩೦೩



ಹಂಪಿ ಕೋಟೆಯ ನಕ್ಷೆ

೧. ಸಿಂಘಾರದ ಹೆಬ್ಬಾಗಿಲು ೨. ಸೋಮವಾರದ ಬಾಗಿಲು ೩. ಅರಮನೆ ಪ್ರದೇಶ ೪. ಕೋಟಿಶಂಕರ ದೇವರ ಬಾಗಿಲು ೫. ಭೀಮನ ಹೆಬ್ಬಾಗಿಲು ೬. ಗುಮ್ಮಟದ ಬಾಗಿಲು ೭. ಬೇಟೆಕಾರರ ಹೆಬ್ಬಾಗಿಲು ೮. ಉದಯಗಿರಿ ಬಾಗಿಲು ೯. ಅರೆಶಂಕರ ಬಾಗಿಲು ೧೦. ಎರಡನೆಯ ಪೆನುಗೊಂಡ ಬಾಗಿಲು ೧೧. ಒಂದನೆಯ ಪೆನುಗೊಂಡ ಬಾಗಿಲು ೧೨. ಹೂವಿನ ಬಾಗಿಲು ೧೩. ಆನೆಗೊಂದಿ ೧೪. ಹೇಮಕೂಟ ೧೫. ಮಾತಂಗ ಪರ್ವತ ೧೬. ಮಲ್ಯವಂತ ಪರ್ವತ ೧೭. ದೇವಾಲಯದ ಪುಷ್ಕರಣಿಗಳು ೧೮. ಅಚ್ಯುತಪುರದ ಅಚ್ಯುತಪೇಟೆ ೧೯. ರೆಮ್ಮುದಿಡ್ಡಿ ೨೦. ಮೀಸರಗಂಡನ ಕೊತ್ತಳ ೨೧. ಮದನ ಕೊತ್ತಳ ೨೨. ಆನೆಗೊಂದಿ ಕೊತ್ತಳ ೨೩. ಪ್ರತಾಪ ಕೊತ್ತಳ ೨೪. ಮಾತಂಗ ದೇವರ ಕೊತ್ತಳ ೨೫. ಮಳಲ ವಿನಾಯಕ ಕೊತ್ತಳ ೨೬. ಹಂಪೆಯ ಕೊತ್ತಳ

ಕೋಟೆಯನ್ನು ಸೂಚಿಸಿರುವ ಸ್ಥಳ ಅಷ್ಟೊಂದು ಸ್ಥಿರವಲ್ಲ ಮತ್ತು ಕೋಟೆ ಗೋಡೆಯನ್ನು ಕೆಲವು ಸ್ಥಳಗಳಲ್ಲಿ ಪುನಾರಚಿಸಿ ತೋರಿಸಿದೆ

೧೦.೬ ಹೊಸಪೇಟೆ

ಹೊಸಪೇಟೆಯು ಒಂದು ತಾಲೂಕು ಕೇಂದ್ರ. ಹೊಸಪೇಟೆ ತಾಲೂಕು ಇತಿಹಾಸ ಎಂಬುವದರಲ್ಲಿ ನಗರದ ಇತಿಹಾಸದ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ನಗರದ ದಕ್ಷಿಣ ಭಾಗಕ್ಕೆ ಇರುವ ಹಳೇ ಊರಿನ ಜನ ವಸತಿ ಪ್ರದೇಶವನ್ನು ಈಗಲೂ ಕ್ವಾಟೆ, ಕೋಟೆ ಎಂದು ಕರೆಯುವರು. ಆದರೆ ಕೋಟೆ - ಕೊತ್ತಳಗಳ ಯಾವುದೇ ಅವಶೇಷಗಳು ಇಂದು ಅಲ್ಲಿ ಕಾಣುವುದಿಲ್ಲ. ನಗರವು ವೇಗವಾಗಿ ಬೆಳೆಯುತ್ತಿರುವುದರಿಂದ ಇಲ್ಲಿಯ ಕೋಟೆ - ಕೊತ್ತಲಾವಶೇಷಗಳನ್ನು ನುಂಗಿ ಹಾಕಿದೆ. ಇಲ್ಲಿಯ ಭೌಗೋಳಿಕ ಲಕ್ಷಣಗಳು ಹಾಗೂ ಸ್ಥಳೀಯರ ಹೇಳಿಕೆಯಿಂದಾಗಿ ಕೋಟೆಯು ಉತ್ತರಾಭಿಮುಖವಾಗಿದಂತೆ ತಿಳಿದುಬರುವುದು.

ಹೊಸಪೇಟೆ ಪಟ್ಟಣದ ಇಂದಿರಾನಗರ ಬಡಾವಣೆಯ ಈಶ್ವರನ ಗುಡಿಯಲ್ಲಿರುವ ಶಾಸನದಲ್ಲಿ ಹೊಸಪೇಟೆ ಪ್ರದೇಶದಲ್ಲಿ ಕೋಟೆ ಇದ್ದುದಕ್ಕೆ ಪೂರಕವಾಗಿ ಪ್ರಸ್ತಾಪವು ಕೆಳಗಿನಂತಿದೆ.[೧]

ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ
ಶಕ ವರ್ಷಗಳು ೧೪೪೩ ನೆಯ ವಿಷು ಸಂವತ್ಸರ ಕಾರ್ತಿ
ಕ ಶು ೧೧ ಪುಣ್ಯಕಾಲದಲ್ಲು ಶ್ರೀಮನ್ ಮಹಾರಾಜಾಧಿ ರಾ
ಜಾ ರಾಜಪರಮೇಶ್ವರ ಶ್ರೀ ವೀರ ಪ್ರತಪ ಶ್ರೀ ವೀರ ಕೃಷ್ಣರಾಯಮ
ಹರಾಯರು ಪೃಥವಿ ರಾಜ್ಯಂ ಗೈಉತಯಿರಲು ತಿರುಮ
ಲದೇವಿಯರ ಪಟ್ಟಣದ ನಾಲ್ಕು ಬಾಗಿಲ ಬಳಿಯ ಶ್ರೀ ಕಾಸಿ ವಿ
ಶ್ವೇಶ್ವರನ ಪ್ರತಿಷ್ಠಾ ಕಾಲದಲ್ಲು ಅಭಿಷೇಕ ಪೂಜಾ ನೈವೇದ್ಯಕ್ಕೆ
ತಿರುಮಲದೇವಿ ಪಟ್ಟಣಕ್ಕೆ ಸಲ್ಲುವ ಕೋಟೆಗೆ ಬಡಗಲು (ನ)
ಯಲ್ಲಂಪಣನ ಕೆರೆಯನು ಶ್ರೀ ಕಾಸಿ ವಿಶ್ವನಾಥ ದೇವರಿಗೆ.....

ಈ ಶಾಸನವು ತಿರುಮಲದೇವಿ ಅಮ್ಮನವರ ಪಟ್ಟಣದಲ್ಲಿ ಯಲ್ಲಪಣ್ಣನ ಕೆರೆಯ ದಕ್ಷಿಣಕ್ಕೆ ಕೋಟೆ ಇರುವುದನ್ನು ಸೂಚಿಸುತ್ತದೆ. ಯಲ್ಲಪಣ್ಣನ ಕೆರೆಯು ಇಂದು ಬಸವೇಶ್ವರ ಬಡಾವಣೆಯಾಗಿದೆ. ಈಗ ಕೋಟೆಯೆಂದು ಕರೆಯುವ ಪ್ರದೇಶವು ಬಸವೇಶ್ವರ ಬಡಾವಣೆಯಿಂದ ದಕ್ಷಿಣ ದಿಕ್ಕಿಗೆ ೧ ಕಿ.ಮೀ. ದೂರದಲ್ಲಿದೆ. ಕೋಟೆಯಲ್ಲಿ ವಿಜಯನಗರ ಕಾಲದ ರಾಮಲಿಂಗೇಶ್ವರ, ಈಶ್ವರ, ಒಡಕರಾಯ ಆಂಜನೇಯನ ಗುಡಿಗಳಿವೆ. ಒಂದೆರಡು ಕಡೆ ಕೋಟೆಗೆ ಬಳಸಿದ್ದ ಮಧ್ಯಮಗಾತ್ರದ ಕಣಶಿಲೆಗಳು ಕಂಡುಬಂದಿವೆ.

ವಾಸ್ತವವಾಗಿ ಹೊಸಪೇಟೆಯ ಚಾರಿತ್ರಿಕ ಮಹತ್ವ ಕಳಚೂರಿ ಬಿಜ್ಜಳ ದೇವನ ಕಾಲದಿಂದ ಅಥವಾ ಅದಕ್ಕೂ ಪೂರ್ವದಿಂದ ಪ್ರಾರಂಭವಾಗುತ್ತದೆ.[೨] ಹೊಸಪೇಟೆಯ ಸಣ್ಣಕ್ಕಿ ವೀರಭದ್ರ ದೇವಾಲಯದ ಹಿಂಭಾಗದಲ್ಲಿರುವ ಮರದ ಬುಡದಲ್ಲಿ ಕಲ್ಯಾಣ ಚಾಳುಕ್ಯರ ಶಾಸನ ಶಿಲ್ಪಗಳು ಕಂಡುಬರುತ್ತವೆ. ಇಲ್ಲಿ ಕೋಟೆ ಇದ್ದುದರ ಬಗ್ಗೆ ಚಾಳುಕ್ಯರ ಶಾಸನಗಳು ಏನು ಹೇಳುವುದಿಲ್ಲ. ಆಗ ಹೊಸಪೇಟೆಯು ಚಿಕ್ಕ ಗ್ರಾಮವಾಗಿತ್ತೆಂದು ತಿಳಿಯುವುದು.[೩]

ಹೊಸಪೇಟೆಯ ಜಂಬುನಾಥ ದೇವಾಲಯದ ಪೂಜಾರಿ ವೀರಯ್ಯಸ್ವಾಮಿ ಅವರ ವಶದಲ್ಲಿದ್ದ ತಾಮ್ರಶಾಸನದ ಕಾಗದ ಪ್ರತಿಯಲ್ಲಿ ಚೋಳರಾಯನು ಹೊಸಪೇಟೆಯ ಕೋಟೆ ಕಟ್ಟಿಸಿ, ಜೋಳದ ರಾಶಿ ಗುಡ್ಡದ ಬಳಿಯ ಕೆರೆಗಳನ್ನು ಕಟ್ಟಿಸಿದನೆಂದು ಹೇಳಿದೆ.[೪] ಈ ತಾಮ್ರ ಪತ್ರವು ಇತ್ತೀಚಿಗೆ ಅಂದರೆ ೨೦ ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಇದರಲ್ಲಿ ವಿಷಯಗಳು ಕ್ರಮಬದ್ಧವಾಗಿಲ್ಲ. ಕ್ರಿ.ಶ. ೧೫೨೧ರ ಕೃಷ್ಣದೇವರಾಯನ ಕಾಲದ ಶಾಸನವು ತಿರುಮಲದೇವಿ ಅಮ್ಮನವರ ಪಟ್ಟಣದಲ್ಲಿ ಕೋಟೆ ಇದ್ದುದನ್ನು ಹೇಳುತ್ತದೆ. ಆದರೆ ಕಲ್ಯಾಣ ಚಾಳುಕ್ಯರ ಇಲ್ಲಿಯ ಶಾಸನಗಳಲ್ಲಿ ಕೋಟೆಯ ಯಾವುದೇ ಉಲ್ಲೇಖಗಳು ಬರುವುದಿಲ್ಲ. ಹಾಗಾಗಿ ಇವೆರಡರ ಮಧ್ಯದ ಅವಧಿಯಲ್ಲಿ ಹೊಸಪೇಟೆ (ತಿರುಮಲದೇವಿ ಪಟ್ಟಣ) ಯಲ್ಲಿ ಕೋಟೆ ನಿರ್ಮಾಣವಾಗಿರಬಹುದು.

ಸ್ಥಳೀಯ ಮಾಹಿತಿಯನ್ನು ಗಮನಿಸಿದಾಗ ದ್ವಾರಸಮುದ್ರದ ಅರಸನಾದ ೩ನೇ ಬಲ್ಲಾಳನು ತನ್ನ ಕೋಟೆಯ ರಕ್ಷಣೆಗಾಗಿ ಸುತ್ತಲೂ ಕಿರಾತಪಡೆಗಳನ್ನು ಸ್ಥಾಪಿಸಿದನೆಂದು ಅವೇ ಕಾಲಕ್ರಮದಲ್ಲಿ ಗ್ರಾಮಗಳಾದವೆಂದು ತಿಳಿದುಬರುತ್ತದೆ.[೫] ಅವುಗಳೆಂದರೆ ಇಂದಿನ ಹೊಸಪೇಟೆಯ ಶ್ರೀ ಜಗಳೀ ಕಚ್ಚೆರಾಯನೆಂಬ ಆಂಜನೇಯ ಗುಡಿಯ ಹತ್ತಿರ ಜಗಳೀಕಟ್ಟೆ, ಬೈಲುಹನುಮಪ್ಪನ ಗುಡಿಯ ಹತ್ತಿರ ಹಂದಿಗನೂರು, ಉತ್ತರಾದಿ ಮಠದ ಹತ್ತಿರ ವಿರೂಪಾಕ್ಷಪುರ ಸಣ್ಣಕ್ಕಿ ವೀರಭದ್ರನ ಗುಡಿಯ ಹತ್ತಿರ ತಿರುಮಲಾಪುರ ಮತ್ತು ಶ್ರೀ ವೇಣುಗೋಪಾಲಕೃಷ್ಣ ದೇವಾಲಯದ ಹತ್ತಿರ ವಿಜಯಪುರ ಗ್ರಾಮಗಳು ಮತ್ತೊಂದು ಮಾಹಿತಿಯಂತೆ ಹರಪನಹಳ್ಳಿ ಸೋಮಶೇಖರ ನಾಯಕನ (ಕ್ರಿ.ಶ. ೧೭೪೨-೬೬) ಕಾಲದಲ್ಲಿ ಜಗಳೀಕಟ್ಟೆ ವಿರೂಪಾಕ್ಷಪುರ, ವಿಜಯಪುರ, ತಿರುಮಲಪುರ ಮತ್ತು ಹಂದಿಗನೂರು ಗ್ರಾಮಗಳನ್ನು ಒಂದುಗೂಡಿಸಿ ಹೊಸಪೇಟೆಯನ್ನಾಗಿ ಪರಿವರ್ತಿಸಲಾಯಿತ್ತೆಂದು ತಿಳಿದುಬರುತ್ತದೆ.[೬] ಹೊಸಪೇಟೆಯ ಹಳೆಯ ವಸತಿ ಸ್ಥಾನಗಳಲ್ಲಿ ಕೋಟೆಯ ಪ್ರದೇಶ ಮುಖ್ಯವಾಗಿದ್ದು, ಪ್ರಾಯಶ: ವಿಜಯನಗರಕಾಲದ ತಿರುಮಲದೇವಿ ಪಟ್ಟಣವೇ ಇದಾಗಿದೆ. ಇದರ ಮೇರೆಗಳು ಪೂರ್ವಕ್ಕೆ ಮುದಿಯಪ್ಪನ ಗುಡಿ, ಉತ್ತರಕ್ಕೆ ಬಳ್ಳಾರಿ ದುರ್ಗಮ್ಮನ ಗುಡಿ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೋಟೆ ಗೋಡೆಯಿದ್ದು, ಉತ್ತರದಲ್ಲಿ ಗೋಡೆಯ ಹೊರಗೆ ಕಬ್ಬೇರ, ಅಗಸ ಮತ್ತು ಕುರುಬರ ಕೇರಿಗಳಿವೆಯೆಂದು ಹೇಳಲಾಗುತ್ತದೆ. ಇಲ್ಲಿನ ದೇಸಾಯಿ ಮನೆತನದ ನರಸಪ್ಪನಿಗೆ ಸಹಾಯಕರಾಗಿದ್ದ ೭೦೦೦ ಬೇಡರಿಗೆ ಹೊಸಪೇಟೆ ಕೋಟೆಯ ಸುತ್ತಲೂ ವಾಸಿಸಲು ನಿವಾಸಗಳನ್ನು ಏರ್ಪಡಿಸಲಾಯಿತು. ನಂತರದ ಕಾಲದಲ್ಲಿ ಸಂಭವಿಸಿದ ಮಲೇರಿಯಾ ಕಾಯಿಲೆ ಪರಿಣಾಮವಾಗಿ ಸಮೀಪದ

ಗ್ರಾಮಗಳಿಂದ ಎತ್ತರದ ಹೊಸಪೇಟೆಗೆ ಜನರ ವಲಸೆ ಬಂದಿತು. ಹಾಗೂ ಪ್ಲೇಗ್‌ನಂತಹ ಕಾಯಿಲೆ ನಿಯಂತ್ರಣಕ್ಕೆ ಇಲ್ಲಿನ ಕೋಟೆಗಳನ್ನು ಕೆಡವಿ ಹಳ್ಳಕೊಳ್ಳಗಳನ್ನು ಮುಚ್ಚಲಾಯಿತ್ತೆಂದು ಸ್ಥಳೀಯರು ಹೇಳುತ್ತಾರೆ. ಈ ಮೇಲಿನ ವಿಷಯಕ್ಕೆ ಪೂರಕವೆಂಬಂತೆ ಈ ಕೋಟೆಯ ಪ್ರದೇಶದ ಪಶ್ಚಿಮಕ್ಕೆ ಸಂಪೂರ್ಣವಾಗಿ ನಾಯಕರ ಮನೆಗಳೇ ಇವೆ. ಕೋಟೆಯೊಳಗೆ ದೇಸಾಯಿಗಳು, ಪಾಂಡೆಯವರ ವಂಶದವರು ಈಗಲೂ ತಮ್ಮ ಪುರಾತನ ಸ್ಥಳದಲ್ಲಿಯೇ ಇದ್ದಾರೆ. ಹೊಸಪೇಟೆ ಎಂಬ ಗ್ರಾಮವು ಪೂರ್ವಕಾಲದಲ್ಲಿ ವಿಜಯನಗರ ರಾಜ್ಯದ ರಕ್ಷಾದುರ್ಗವಾಗಿದ್ದಿತು. ಇದೊಂದು ಚಿಕ್ಕಹಳ್ಳಿಯಾಗಿದ್ದರೂ ಭದ್ರತರವಾದ ಕೋಟೆ ಕೊತ್ತಲಗಳಿಂದ ಸುರಕ್ಷಿತವಾಗಿತ್ತೆಂದು ಚಿಕ್ಕೇರೂರು ಗೋವಿಂದಚಾರ್ಯರು ಅಭಿಪ್ರಾಯ ಪಡುತ್ತಾರೆ.[೭] ಹೊಸಪೇಟೆಯ ದುರ್ಗವನ್ನು ಮಾತ್ರ ಅಚ್ಚಳಿಯದೇ ಉಳಿಸಿಕೊಂಡು ಇಲ್ಲಿಯೇ ಕೋಟೆಯಲ್ಲಿ ಒಂದು ಸಿಂಹಾಸನವನ್ನು ಸ್ಥಾಪಿಸಿಕೊಂಡು ಒಂದನೇ ಬುಕ್ಕನು ಆಳ್ವಿಕೆ ಮಾಡಿದಂತೆ ತಿಳಿದುಬರುತ್ತದೆ.[೮] ಹಾಳು ಬಿದ್ದ ಕಂದಕ - ಕೋಟೆ - ಕೊತ್ತಳಗಳು ಕ್ರಿ.ಶ. ೧೯೫೭ರ ವರೆಗೆ ಇದ್ದವೆಂದು ತಿಳಿಯುವುದು.[೯]

ಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ)* - ೧, ಪು. ೧೪೧. ಹಂಪಿ : ಕನ್ನಡ ವಿಶ್ವವಿದ್ಯಾಲಯ

೨. *Annual Report on Indian Epigraphy,* No. 122, Date About 12th Century A.D.1980-81. Hospet

೩. ಗೋವಿಂದಚಾರ್ಯ ಚಿಕ್ಕೇರೂರು. ೧೯೯೭. ಹೊಸಪೇಟೆ : ಐತಿಹ್ಯ, *ಹೊಸಪೇಟೆ ಚಾರಿತ್ರಿಕ ವಿವೇಚನೆ : ಐತಿಹ್ಯ: ಪರಿಶೀಲನೆ,* ಪು. ೧೨. ಹೊಸಪೇಟೆ : ಶರಣರ ಸುವಾಸಿನಿ ಬಳಗ.

೪. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ* - *೧,* ಪೂರ್ವೋಕ್ತ. ಪು. ೧೪೮

೫. ಮಹಾದೇವ, ಸಿ. ೧೯೯೭. ಹೊಸಪೇಟೆ : ಐತಿಹ್ಯ, *ಹೊಸಪೇಟೆ ಚಾರಿತ್ರಿಕ ವಿವೇಚನೆ : ಐತಿಹ್ಯ: ಪರಿಶೀಲನೆ,* ಪು. ೨೦. ಹೊಸಪೇಟೆ : ಶರಣರ ಸುವಾಸಿನಿ ಬಳಗ.

೬. *ಅದೇ,* ಪು. ೨೦

೭. ಗೋವಿಂದಚಾರ್ಯ ಚಿಕ್ಕೇರೂರು. ೧೯೯೭. ಪೂರ್ವೋಕ್ತ. ಪು. ೧೨

೮. *ಅದೇ,* ಪು. ೧೩

೯. *ಅದೇ,* ಪು. ೧೫

❑❑

೧೧

ಸಮಾರೋಪ

(Conclusion)

೧೧

ಸಮಾರೋಪ

(Conclusion)

ಬಳ್ಳಾರಿ ಜಿಲ್ಲೆಯ ಇತಿಹಾಸ ಆದಿಮಾನವನಿಂದ ಪ್ರಾರಂಭವಾಗುತ್ತದೆ. ಈ ಮಾನವನು ನಾಗರೀಕ ಜೀವನವನ್ನು ಆರಂಭಿಸುತ್ತಿದ್ದಂತೆ ಇವನಲ್ಲಿ ಜೀವಿತಪ್ರಜ್ಞೆ ಬೆಳೆಯಿತು. ಆಗ ಸಮುದಾಯದೊಂದಿಗೆ ತನ್ನ ಬದುಕನ್ನು ರೂಢಿಸಿಕೊಂಡು, ಜತೆಜತೆಗೆ ತನ್ನ ಮತ್ತು ಸಮುದಾಯದ ಲೌಕಿಕ ಸಂಪತ್ತನ್ನು ಹೆಚ್ಚಿಸುತ್ತಾ ಹೋದನು. ಆಗ ಸಹಜವಾಗಿ ಇದರ ರಕ್ಷಣೆಗಾಗಿ ಕೋಟೆ ಕಟ್ಟಿಕೊಳ್ಳುವ ಸಂದರ್ಭ ಒದಗಿಬಂತು. ಈ ರೀತಿಯ ಕೋಟೆ ಕಟ್ಟಡಗಳಂತಹ ಅವಶೇಷಗಳನ್ನು ಜಿಲ್ಲೆಯ ಪ್ರಾಚೀನ ನೆಲೆಗಳಾದ ಸಂಗನಕಲ್ಲು, ತೆಕ್ಕಲಕೋಟೆ ಮುಂತಾದೆಡೆಗಳಲ್ಲಿ ಕಾಣಬಹುದು. ತದನಂತರ ರಾಜ್ಯಗಳ ಸ್ಥಾಪನೆಯಾದ ಮೇಲೆ, ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಗಳಲ್ಲಿ ಹಾಗೂ ಗಡಿಪ್ರದೇಶದಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಕಟ್ಟಿಸಿದರು. ಹೀಗೆ ಆರಂಭವಾದ ಕೋಟೆಗಳ ನಿರ್ಮಾಣ ಕಾರ್ಯ ಈ ಜಿಲ್ಲೆಯಲ್ಲಿ ಕ್ರಿ.ಶ. ೯ನೇ ಶತಮಾನದಿಂದ ೧೯ನೆಯ ಶತಮಾನದವರೆಗೆ ನಿರಂತರವಾಗಿ ನಡೆದುದು ಇತಿಹಾಸ ಮತ್ತು ಕೋಟೆಗಳ ಅಧ್ಯಯನದಿಂದ ತಿಳಿಯುತ್ತದೆ. ನಿರ್ಮಾಣಗೊಂಡ ಎಲ್ಲಾ ಕೋಟೆಗಳು ಈ ಜಿಲ್ಲೆಯಲ್ಲಿ ಉಳಿದಿಲ್ಲ. ಕೆಲವು ಸಂಪೂರ್ಣ ನಾಶವಾಗಿವೆ. ಅವುಗಳಲ್ಲಿ ಕೋಳೂರು, ಕೊಟ್ಟೂರು, ಕೋಗಳಿ, ಹೂವಿನಹಡಗಲಿ, ಮಾಗಳ, ಕುರುವತ್ತಿ ಕೋಟೆಗಳು ಮುಖ್ಯವಾಗಿವೆ. ಕೆಲವು ಪದೇ ಪದೇ ದುರಸ್ಥಿ ಇಲ್ಲವೆ ಬಲಪಡಿಸಿರುವುದರಿಂದ ಮೂಲ ರಚನೆಯಲ್ಲಿ ಬದಲಾವಣೆ ಕಂಡಿವೆ. ಅವುಗಳೆಂದರೆ ಉಚ್ಚಂಗಿದುರ್ಗ, ಬಳ್ಳಾರಿ ಮತ್ತು ಕುರುಗೋಡಿನವು. ಕೋಟೆಗಳಿದ್ದ ಸ್ಥಳಗಳಲ್ಲಿಯೇ ನಂತರದ ಅರಸರು ವಿಶಾಲವಾದ ಕೋಟೆಗಳನ್ನು ಹೊಸ ವಿನ್ಯಾಸದೊಂದಿಗೆ ಕಟ್ಟಿರುವುದರಿಂದ ಮೊದಲಿದ್ದ ಕೋಟೆಗಳ ರೂಪುರೇಷೆಗಳು ಸಂಪೂರ್ಣವಾಗಿ ಅಳಿಸಿಹೋಗಿವೆ. ಹಂಪಿ ಕೋಟೆ ಇದಕ್ಕೆ ಉತ್ತಮ ಉದಾಹರಣೆ.

ಈ ಜಿಲ್ಲೆಯಲ್ಲಿ ಜಲ, ಸ್ಥಳ ಮತ್ತು ಗಿರಿದುರ್ಗಗಳೆಂಬ ಮೂರು ಪ್ರಕಾರದ ಕೋಟೆಗಳು ಮಾತ್ರ ಕಂಡುಬರುತ್ತವೆ. ಇವುಗಳನ್ನು ರಕ್ಷಣಾದೃಷ್ಟಿಯಿಂದ ಆಯಕಟ್ಟಿನ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಕಟ್ಟಲಾಗಿದೆ. ನದಿಯ ದಂಡೆಯ ಮೇಲೆ ನೀರಿನಿಂದ ಸುತ್ತುವರೆದಿರುವ ಕೋಟೆಗಳನ್ನು ಇಲ್ಲಿ ಜಲದುರ್ಗವೆಂದು ಪರಿಗಣಿಸಲಾಗಿದೆ. ನದಿ ಹರಿಯುವ ಬದಿಯಿಂದ ಈ ಕೋಟೆಗಳೆಡೆಗೆ ಹೋಗಲು ವೈರಿಪಡೆಗೆ ಸಾಧ್ಯವಾಗುವುದಿಲ್ಲ. ನಡಿವಿ, ಹಲುವಾಗಿಲು, ಕೆಂಚನಗುಡ್ಡದ ಕೋಟೆಗಳು ತುಂಗಭದ್ರಾ ನದಿಯಿಂದ ಸುತ್ತುವರೆದ ಜಲದುರ್ಗಗಳಿಗೆ ನಿದರ್ಶನಗಳಾಗಿವೆ. ನಡಿವಿ ಜಲದುರ್ಗ ಅಭೇದ್ಯವಾಗಿರುವುದರಿಂದ ಸುಸ್ಥಿತಿಯಲ್ಲಿದೆ. ಕೋಟೆಗಳ ರೂಪುರೇಷೆಗಳು ಬಹುತೇಕ ಅವುಗಳನ್ನು ಕಟ್ಟಿರುವ ಸ್ಥಳವನ್ನವಲಂಬಿಸಿವೆ. ನೆಲದ ಮೇಲೆ ಕಟ್ಟಿದ ಸ್ಥಲದುರ್ಗಗಳು ನಿಯಮಿತವಾಗಿ ಆಯತ, ಚೌಕ, ವೃತ್ತಾಕಾರದಲ್ಲಿವೆ. ಇನ್ನೂ ಕೆಲವು ನಿರ್ದಿಷ್ಟ ಆಕಾರ ಹೊಂದಿಲ್ಲ. ತೆಕ್ಕಲಕೋಟೆ, ಕೃಷ್ಣಾನಗರ, ಹಂಪಾಪಟ್ಟಣ, ಹ್ಯಾರಡದ ಈ ಸ್ಥಳ ದುರ್ಗಗಳು ಆಯಾತಾಕಾರವಾಗಿವೆ. ಹರಪನಹಳ್ಳಿ, ಹನಸಿ, ಹೊಳಲು ಕೋಟೆಗಳು ವೃತ್ತಾಕಾರದಲ್ಲಿವೆ. ಬೆಟ್ಟಗಳ ಆಕಾರಕ್ಕೆ ತಕ್ಕಂತೆ ಕಟ್ಟಿರುವ ಗಿರಿದುರ್ಗಗಳನ್ನು ಅರ್ಧಭಾಗ ನೆಲದ ಮೇಲೆ ಇನ್ನರ್ಧ ಭಾಗ ಬೆಟ್ಟದಮೇಲೆ ಕಟ್ಟಲಾಗಿದೆ. ಇಲ್ಲಿ ಆಳ್ವಿಕೆ ಮಾಡಿದ ಬಹುಪಾಲು ಪಾಳೆಯಗಾರರು ತಮ್ಮ ರಾಜಧಾನಿಯನ್ನು ದುರ್ಗಮವಾದ ಗುಡ್ಡ ಅಥವಾ ಬೆಟ್ಟದ ಮೇಲೆ ಕಟ್ಟಿಕೊಂಡಿರುತ್ತಿದ್ದರು. ಕಾರಣ ಶತ್ರುಗಳಿಂದ ರಕ್ಷಣೆ ಪಡೆಯಲು ಇವು ಸೂಕ್ತ ಸ್ಥಳಗಳಾಗಿದ್ದವು. ಇಂಥಹ ಗಿರಿದುರ್ಗಗಳನ್ನು ಉಚ್ಚಂಗಿದುರ್ಗ, ಕುರುಗೋಡು, ದರೋಜಿ, ಹೊಸಮಲೆ, ಬಳ್ಳಾರಿ, ಕರಿಡಿದುರ್ಗ, ಬಂಡ್ರಿ, ಗುಡೇಕೋಟೆ, ಜರಿಮಲೆ, ಪಾಲಯ್ಯನ ಕೋಟೆ, ತಂಬ್ರಹಳ್ಳಿ ಮುಂತಾದ ಕಡೆ ನೋಡಬಹುದು. ಹಂಪಿ ಕೋಟೆಯು ಜಲ, ಸ್ಥಳ ಮತ್ತು ಗಿರಿದುರ್ಗಗಳ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ.

ಕೋಟೆಗಳನ್ನು ಹಲವು ಸುತ್ತುಗಳಲ್ಲಿ ಕಟ್ಟಿಕೊಂಡಿದ್ದರು. ಚಿಕ್ಕಕೋಟೆಗಳಲ್ಲಿ ಒಂದು ಎರಡು ಸುತ್ತುಗಳಿದ್ದರೆ, ದೊಡ್ಡ ಕೋಟೆಗಳು ಎರಡಕ್ಕಿಂತ ಹೆಚ್ಚು ಸುತ್ತುಗಳನ್ನು ಹೊಂದಿದ್ದವು. ಕೋಟೆಯ ಒಂದೊಂದು ಸುತ್ತು ವೈರಿಯ ದಾಳಿಗೆ ತುತ್ತಾಗಿ ಅವನ ವಶವಾದಾಗ, ಹಿಂದಕ್ಕೆ ಸರಿಯುತ್ತಾ ಒಳಕೋಟೆಗಳಲ್ಲಿ ರಕ್ಷಣೆ ಪಡೆಯುವ ಉದ್ದೇಶಕ್ಕಾಗಿ ಸುತ್ತುಗಳು ನಿರ್ಮಾಣಗೊಂಡಿವೆ. ವೈರಿಯು ಅಂತಿಮ ಸುತ್ತಿನ ಕೋಟೆಯು ವಶವಾಗುವವರೆಗೂ ಕಾದಾಡ ಬೇಕಾಗುತ್ತಿತ್ತು. ಇಂತಹ ಎರಡಕ್ಕಿಂತ ಅಧಿಕ ಸುತ್ತುಗಳನ್ನು ಬಳ್ಳಾರಿ, ಹಂಪಿ, ಉಚ್ಚಂಗಿದುರ್ಗ ಮತ್ತು ವೀರನದುರ್ಗಗಳಲ್ಲಿ ಕಾಣಬಹುದು. ಬಳ್ಳಾರಿ ಮತ್ತು ಉಚ್ಚಂಗಿದುರ್ಗದ ಕೋಟೆಯ ಹೊರಸುತ್ತು ಬೆಟ್ಟದ ಬದಿಯಲ್ಲಿರುವ ಊರನ್ನು ಸುತ್ತುವರೆದಿದೆ. ಉಳಿದ ಸುತ್ತುಗಳು ಬೆಟ್ಟದ ವಿವಿಧ ಎತ್ತರಗಳಲ್ಲಿದ್ದು, ಕೊನೆಯ ಸುತ್ತು ಅತಿ ಎತ್ತರದ ಭಾಗಗಳಲ್ಲಿವೆ. ಬೆಟ್ಟದ ಮೇಲಿನ ಒಳಸುತ್ತಿನಲ್ಲಿ ರಾಜ ಪರಿವಾರದವರಿಗೆ ಸಂಬಂಧಿಸಿದ ಕಟ್ಟಡಗಳಿವೆ. ಹಾಗಾಗಿ ಈ ಸುತ್ತನ್ನು ಕಡೆಗಾಪು ಅಥವಾ ರಾಜವಾಡೆಗಳೆಂದು ಕರೆದಿರುವರು. ಯುದ್ಧದ ಸಂದರ್ಭದಲ್ಲಿ ಊರಜನರು ಈ ಸುತ್ತಿನಲ್ಲಿ ಆಶ್ರಯ ಪಡೆಯುವರು.

ನೀರು ಮತ್ತು ಆಹಾರ ಧಾನ್ಯಗಳು ಜೀವನಕ್ಕೆ ಅವಶ್ಯಕವಾದವು. ಇವುಗಳ ಸಂಗ್ರಹಣೆಗೆ ಕೋಟೆಗಳಲ್ಲಿ ವ್ಯವಸ್ಥೆ ಇದೆ. ಮಳೆಗಾಲದಲ್ಲಿ ಬಿದ್ದ ನೀರನ್ನು ಹರಿದು ಹೋಗಲು ಬಿಡದೆ ಅಲ್ಲಲ್ಲೇ ತಡೆ ಗೋಡೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವ ವ್ಯವಸ್ಥೆಯಿದ್ದುದನ್ನು ದರೋಜಿ, ಬಳ್ಳಾರಿ, ಉಚ್ಚಂಗಿದುರ್ಗ, ಗುಡೇಕೋಟೆ, ಜರಿಮಲೆ, ವೀರನದುರ್ಗ, ಪಾಲಯ್ಯನಕೋಟೆ ಹಾಗೂ ತಂಬ್ರಹಳ್ಳಿ ಕೋಟೆಗಳಲ್ಲಿ ಕಾಣಬಹುದು. ಸ್ಥಳದುರ್ಗಗಳಲ್ಲಿ ಈ ವ್ಯವಸ್ಥೆ ತುಂಬಾ ಸುಲಭ. ನೀರಿಗಾಗಿ ಕೆರೆ-ಬಾವಿಗಳನ್ನು ನಿರ್ಮಿಸಿಕೊಂಡಿರುವರು. ಇಂತಹ ಕೆರೆ - ಬಾವಿ, ಹೊಂಡಗಳು ಹಂಪಿ, ಹಂಪಾಪಟ್ಟಣ, ಹರಪನಹಳ್ಳಿ ಮುಂತಾದ ಕೋಟೆಗಳಲ್ಲಿ ಕಾಣಸಿಗುವವು. ಹಂಪಿ ಕೋಟೆಗೆ ತುಂಗಭದ್ರಾ ನದಿಯಿಂದ ಕಾಲುವೆಗಳ ಮೂಲಕ ನೀರನ್ನು ಒದಗಿಸುತ್ತಿದ್ದ ಮಾಹಿತಿಗಳಿವೆ. ಈ ಭಾಗದ ಯಾವುದೇ ಕೋಟೆಗಳಲ್ಲಿ ಈ ವ್ಯವಸ್ಥೆ ಇಲ್ಲದಿರುವುದು ಗಮನೀಯ ಅಂಶ. ಮುನ್ನೆಚ್ಚರಿಕೆಯ ಪ್ರತಿರೂಪವಾಗಿ ತಲೆ ಎತ್ತಿದ ಆಹಾರ ಧಾನ್ಯಗಳ ಕಣಜಗಳು ಗುಡೇಕೋಟೆ, ಜರಿಮಲೆ, ಕರಡಿದುರ್ಗಗಳಲ್ಲಿವೆ. ಇವುಗಳನ್ನು ರಾಗಿ ಕಣಜಗಳೆಂದು ಜನರು ಇಂದಿಗೂ ಗುರುತಿಸುತ್ತಾರೆ. ತುಪ್ಪಾ - ಎಣ್ಣೆಯ ಶೇಖರಣೆಗಾಗಿ ಪ್ರತ್ಯೇಕ ಕಣಜ ಗುಡೇಕೋಟೆಯಲ್ಲಿದೆ. ಕಣಜ (ಉಗ್ರಾಣ)ಗಳು ಆರ್ಥಿಕ ಸ್ಥಿತಿ-ಗತಿಗಳನ್ನು ಪ್ರತಿಬಿಂಬಿಸುತ್ತವೆ. ಇದೇ ರೀತಿ ಒಂದು ರಾಜ್ಯದ ಅಳಿವು, ಉಳಿವು, ಅವುಗಳ ಶಕ್ತಿ ಸಾಮರ್ಥ್ಯದ ಮೇಲೆ ನಿಂತಿದೆ. ಈ ಸಾಮರ್ಥ್ಯವಿರುವುದು ಯುದ್ಧ ಸಾಮಾಗ್ರಿಗಳ ಸಂಗ್ರಹದಲ್ಲಿ ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ನವೀನ ತಂತ್ರಜ್ಞಾನದ ಯುದ್ಧ ಸಾಮಾಗ್ರಿಗಳನ್ನು ಕೂಡಿ ಹಾಕುವುದಕ್ಕಾಗಿ ರಾಷ್ಟ್ರ ಆದಾಯದ ಬಹುಭಾಗವನ್ನು ವೆಚ್ಚಮಾಡುತ್ತಿವೆ. ಕ್ರಿ.ಶ. ೧೮ನೇ ಶತಮಾನದ ಮಧ್ಯಭಾಗದಲ್ಲಿಯೇ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಬಳ್ಳಾರಿ ಹಾಗೂ ಕೃಷ್ಣಾನಗರದ ಕೋಟೆಯ ಭದ್ರವಾದ ಸ್ಥಳಗಳಲ್ಲಿ ಯುದ್ಧ ಸಾಮಗ್ರಿಗಳಾದ ಮದ್ದು-ಗುಂಡಗಳನ್ನು ರಕ್ಷಿಸುವುದಕ್ಕಾಗಿ ಇಟ್ಟಿಗೆ - ಗಾರೆಯಿಂದ ನಿರ್ಮಿಸಿರುವ ಕಣಜ (ಮದ್ದಿನ ಮನೆ)ಗಳನ್ನು ನಾವಿಂದು ನೋಡಬಹುದು.

ಉಚ್ಚಂಗಿದುರ್ಗ ಮತ್ತು ಕುರುಗೋಡಿನ ಕೋಟೆಗಳು ಕ್ರಿ.ಶ. ಹತ್ತನೆಯ ಶತಮಾನದವು. ಇವು ರಾಜಕೀಯ ಏರಿಳಿತಗಳಿಂದಾಗಿ ಮೂಲರೂಪದಲಿಲ್ಲ. ಉಚ್ಚಂಗಿ ಗಿರಿದುರ್ಗದ ಬಾಗಿಲುಗಳು ಸರಳವಾಗಿರದೆ ವೈರಿಗೆ ಗೊಂದಲವುಂಟುಮಾಡುವ ರೀತಿಯಲ್ಲಿವೆ. ದೊಡ್ಡ ಕೊತ್ತಳದಂತೆ ಮುಂದೆ ಚಾಚಿರುವ ಭಾಗದ ಬದಿಯಲ್ಲಿರುವ ಬಾಗಿಲು ಶತ್ರುದೃಷ್ಟಿಗೆ ಬೀಳುವುದಿಲ್ಲ. ಪ್ರವೇಶವು ಹಲವು ದಿಕ್ಕುಗಳನ್ನು ಬದಲಿಸುವುದರಿಂದ ಶತ್ರುವನ್ನು ತಡೆಹಿಡಿಯುವುದು ತೀರಾ ಸುಲಭ. ಈ ಕೋಟೆಯ ಹರಿಹರದ ಬಾಗಿಲಿನ ಮುಂದೆ ವೈರಿಗೆ ಕಾಣದಂತೆ L ಆಕಾರದ ಗೋಡೆಯನ್ನು ಕಟ್ಟಿದೆ. ಬೆಟ್ಟದ ಮೇಲಿನ ನಿಸರ್ಗದತ್ತ ತೊಟ್ಟಿಗಳು, ಕೋಟೆಯ ದಕ್ಷಿಣಬದಿಯ ಚಿಕ್ಕ ಮತ್ತು ಹಿರೇ ಹೊಂಡಗಳು ಬರಿದಾಗಿರುವ ಉದಾಹರಣೆಗಳೇ ಇಲ್ಲ. ಇವು ಕೋಟೆಯೊಳಗಿನ ಜನತೆಯ ಜೀವಸಲೆಯಾಗಿದ್ದವು. ಉತ್ತಮ ನೀರಿನ ಸೌಕರ್ಯ ಹಾಗೂ ಭದ್ರವಾಗಿರುವ ಕೋಟೆ ಇದಾಗಿರುವ ಕಾರಣ ಈ ಗಿರಿದುರ್ಗವನ್ನು ಗೆದ್ದವರಿಗೆ ಪ್ರತಿಷ್ಠೆ ತಾನಾಗಿಯೇ ಹೆಚ್ಚುತ್ತಿತ್ತು. ಕುರುಗೋಡಿನ ಕೋಟೆಯು ಬಹು

ವಿಶಾಲವಾಗಿರುವುದಲ್ಲದೆ, ಕಡಿದಾದ ಬೆಟ್ಟದ ಮೇಲೆಯು ಎತ್ತರವಾದ ಕೋಟೆ - ಗೋಡೆಗಳಿದ್ದವು. ಹೀಗಾಗಿ ಕುರುಗೋಡಿನ ಶಾಸನಗಳು ಈ ಕೋಟೆಯನ್ನು ಮುಗಿಲುದ್ದವಾಗಿ ಮುವಳಿಸಿದ ಕೋಟೆ ಎಂದಿವೆ.

ಹದಿಮೂರನೆಯ ಶತಮಾನದ ಆರಂಭದಲ್ಲಿ ದರೋಜಿ ಕೋಟೆಯನ್ನು ದಿಮ್ಮಿಯಾಕಾರ ಕಲ್ಲುಗಳಿಂದ ನಿರ್ಮಿಸಿದೆ. ಎರಡು ಬೆಟ್ಟಗಳನ್ನು ಬಳಸಿಕೊಂಡು ದಟ್ಟವಾಗಿ ಬೆಳೆದ ಕಾಡಿನಲ್ಲಿ ಕೋಟೆ ಕಟ್ಟಿರುವರು. ತದನಂತರದಲ್ಲಿ ಹೊಸಮಲೆದುರ್ಗದ ಕೋಟೆ ತಲೆ ಎತ್ತಿದೆ. ಇದು ಬಹು ಎತ್ತರದ ಬೆಟ್ಟದ ಮೇಲೆ ಸಮತಟ್ಟಾದ ಪ್ರದೇಶದಲ್ಲಿ ಕಟ್ಟಲ್ಪಟ್ಟಿದೆ. ಕುಮ್ಮಟದುರ್ಗದ ಕೋಟೆಯು ಇದರ ಸಮಕಾಲೀನದು. ಹೊಸಮಲೆ, ಕುಮ್ಮಟದುರ್ಗಗಳೆರಡರಲ್ಲೂ ಕುಮಾರರಾಮನ ಕಥೆಗೆ ಪೂರಕವಾದ ಸ್ಮಾರಕಾವಶೇಷಗಳು ಕಂಡುಬರುತ್ತವೆ. ಮೇಲಿನ ಮೂರು ಕೋಟೆಗಳು ಒಂದೇ ಅರಸು ಮನೆತನಕ್ಕೆ ಸೇರಿದವು. ಆದರೆ ಇವುಗಳು ಪರಸ್ಪರ ಭಿನ್ನವಾಗಿವೆ.

ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರ ಕಾಲದ ಕೋಟೆಯ ರಚನೆಯಲ್ಲಿ ಹಲವು ವ್ಯತ್ಯಾಸಗಳನ್ನು ನೋಡಬಹುದು. ಈ ತನಕ ಬಳಸುತ್ತಿದ್ದ ಉದ್ದವಾದ ದಿಮ್ಮಿಯಾಕಾರ ಮತ್ತು ಚೌಕಾಕಾರದ ಕಲ್ಲುಗಳ ಬದಲಾಗಿ ಬೆಣೆಯಾಕಾರದ ಹಾಗೂ ಮಧ್ಯಮಗಾತ್ರದ ಕಲ್ಲುಗಳ ಬಳಕೆ ಆರಂಭವಾಯಿತು. ಇವು ಹೊರಭಾಗದಲ್ಲಿ ಚೌಕಾಕಾರ ಕಂಡರೂ ಅವು ಗೋಡೆಯಲ್ಲಿ ಆಳವಾಗಿ ಒಳಗೆ ಸೇರುವುದರಿಂದ ಗೋಡೆಗೆ ಹೆಚ್ಚಿನ ಭದ್ರತೆಯನ್ನು ನೀಡುತ್ತವೆ. ಒಳಗಿನ ತುದಿ ಚೌಕಾಕಾರವಾಗಿರದೆ ಬೆಣೆಯಾಕಾರದಲ್ಲಿ ಚೂಪಾಗಿರುತ್ತದೆ. ಈ ವಿಶಿಷ್ಟ ಆಕಾರದಿಂದ ಕಲ್ಲಿನ ಭಾರ ಕಡಿಮೆಯಾಗುತ್ತದೆ. ಎರಡು ತುದಿಗಳು ಚೌಕಾಕಾರವಾಗಿ ದಪ್ಪವಾಗಿದ್ದರೆ ಭಾರ ಹೆಚ್ಚಾಗುತ್ತದೆ. ಕಡಿಮೆ ಭಾರದ ಕಲ್ಲುಗಳನ್ನು ಸಾಗಿಸುವುದು ಮತ್ತು ಕೋಟೆಯ ಮೇಲ್ಭಾಗಕ್ಕೆ ಎತ್ತುವುದು ಸುಲಭ. ಗೋಡೆಯ ಒಳಭಾಗದಲ್ಲಿ ಇಂತಹ ಕಲ್ಲುಗಳ ಮಧ್ಯದಲ್ಲಿ ಉಂಟಾಗುವ ಸಂದಿಗಳಿಗೆ ಕಲ್ಲು, ಮಣ್ಣನ್ನು ತುಂಬಿದೆ. ಗೋಡೆಯ ಒಳಮೈಗೆ ಚಿಕ್ಕಕಲ್ಲುಗಳನ್ನು ಬಳಸಿದಂತೆ ಕಾಣುವುದು. ಹಂಪಿ ಕೋಟೆಯ ಬಾಗಿಲುಗಳು ಕಂಬ ತೊಲೆಗಳಿಂದ ರಚಿತವಾದ ಚೌಕಟ್ಟುಗಳನ್ನು ಹೊಂದಿವೆ. ಈ ಚೌಕಟ್ಟು ಮುಟ್ಟುವ ಮೊದಲು ಪ್ರವೇಶವು ಹಲವು ಕೋನಗಳಲ್ಲಿ ತಿರುಗಿ ಅಂಕುಡೊಂಕಾಗಿದೆ. ಬಾಗಿಲ ಮುಂದಿನ ದೊಡ್ಡ ಆವರಣ ಕೋಟೆಯಷ್ಟೇ ಎತ್ತರವಾದ ಗೋಡೆಗಳಿಂದ ಸುತ್ತುವರೆದಿದೆ. ಚೌಕ ಮತ್ತು ಆಯಾತಾಕಾರದ ಕೊತ್ತಳಗಳ ಮೇಲೆ ಕಾವಲುಗಾರರ ಮಂಟಪ ತಾಣಗಳಿವೆ. ಭೀಮನ ಹೆಬ್ಬಾಗಿಲು, ಸಿಂಘಾರದ ಹೆಬ್ಬಾಗಿಲು, ಹೂವಿನ ಬಾಗಿಲುಗಳಲ್ಲಿ ಮೇಲಿನ ಕೆಲವು ಲಕ್ಷಣಗಳನ್ನು ನಾವಿಂದು ಕಾಣಬಹುದು. ಬಾಗಿಲುಗಳಿಗೆ ಅಲಂಕರಿಸಲು ಗಾರೆಯ ಕಮಾನು ಮತ್ತು ಗುಮ್ಮಟಗಳನ್ನು ವಿಜಯನಗರ ಕಾಲದ ಮಧ್ಯಾವಧಿಯಲ್ಲಿ ಅಳವಡಿಸಿದೆ. ಇದಕ್ಕೆ ಉದಾಹರಣೆ ಎಂದರೆ ಅರೆಶಂಕರ ಹಾಗೂ ಗುಮ್ಮಟದ ಬಾಗಿಲುಗಳು. ಇದರಿಂದ ಹಂಪಿಕೋಟೆಯಲ್ಲಿ ಮುಸ್ಲಿಂರ ಪ್ರಭಾವವನ್ನು ಗುರುತಿಸಬಹುದು. ಈ ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು, ದಿಡ್ಡಿಗಳೆಂದು ವಿಂಗಡಿಸಿದುದು ವಿಶೇಷ. ಕ್ರಿ.ಶ. ೧೪೫೦ರ ಹಂಪಿ ಶಾಸನವು ಬೇಟೆಕಾರರ

ಬಾಗಿಲನ್ನು "ಹೆಬ್ಬಾಗಿಲೆಂದು" ಸೂಚಿಸುತ್ತದೆ. ವಿಜಯವಿಠ್ಠಲ ದೇವಾಲಯ ಗರ್ಭಗೃಹದ ಮುಂದಿನ ಮಂಟಪದಲ್ಲಿರುವ ಶಾಸನವು ಉದಯಗಿರಿಯ ಪ್ರವೇಶದ್ವಾರವನ್ನು "ಬಾಗಿಲೆಂದು" ಕರೆದಿದೆ. ಬಹುಪಾಲು ಶಾಸನಗಳು ದಿಡ್ಡಿ ಹಾಗೂ ಕೊತ್ತಳಗಳನ್ನು ಹೆಸರಿಸುತ್ತವೆ. ಯುದ್ಧದ ಸಮಯದಲ್ಲಿ ಈ ಬೃಹದಾಕಾರದ ಕೋಟೆಯ ವಿವಿಧ ಭಾಗಗಳನ್ನು ಶೀಘ್ರದಲ್ಲಿ ಗುರುತಿಸುವ ಉದ್ದೇಶದಿಂದಾಗಿ ಹೆಸರುಗಳನ್ನು ಇಟ್ಟಿರಬಹುದು. ವಿಜಯನಗರ ವ್ಯಾಪ್ತಿಯಲ್ಲಿ ಬರುವ ರಾಯಚೂರು, ಮುದುಗಲ್ಲು ಕೋಟೆಯ ಭಾಗಗಳನ್ನು ಗುರುತಿಸುವುದಕ್ಕಾಗಿ ಹೆಸರುಗಳನ್ನು ಇಟ್ಟುಕೊಂಡಿರುವುದು ಅಲ್ಲಿಯ ಶಾಸನಗಳಿಂದ ತಿಳಿಯುವುದು.

ವಿಜಯನಗರ ಪತನಾನಂತರ ಕ್ರಿ.ಶ. ೧೬ ರಿಂದ ೧೮ನೆಯ ಶತಮಾನದ ವರೆಗೆ ಪಾಳೆಯಗಾರರು ಪ್ರಬಲರಾಗಿ ರಾಜ್ಯವಾಳಿದರು. ಈ ಅವಧಿಯಲ್ಲಿ ಹತ್ತಾರು ಕೋಟೆಗಳು ನಿರ್ಮಾಣವಾಗಿವೆ. ಇವುಗಳಲ್ಲಿ ಹೆಚ್ಚು ಗಿರಿದುರ್ಗಗಳಿವೆ. ಪಾಳೆಯಗಾರರ ಕೋಟೆಗಳ ರಚನಾಕ್ರಮದಲ್ಲಿ ಬದಲಾವಣೆಗೊಂಡಿವೆ. ಕಾರಣ ಆರ್ಥಿಕವಾಗಿ ಇವರು ಪ್ರಬಲರಾಗಿದ್ದಿಲ್ಲ. ಹೀಗಾಗಿ ಮಧ್ಯಮ ಮತ್ತು ಚಿಕ್ಕಗಾತ್ರದ ಕಲ್ಲುಗಳಿಂದ ಕಿರಿದಾದ ಕೋಟೆಗಳನ್ನು ಊರು ಸುತ್ತಲೂ ಕಟ್ಟಿಸಿದ್ದಾರೆ. ಕೆಲವರು ತಮ್ಮ ಅರಮನೆ ಅಥವಾ ವಾಸಸ್ಥಳಗಳ ಆವರಣ ಗೋಡೆಗಳನ್ನು ಮಾತ್ರ ಕಟ್ಟಿಕೊಂಡಿದ್ದಾರೆ. ಸ್ವಲ್ಪ ಪ್ರಬಲರಾಗಿದ್ದು, ಆರ್ಥಿಕ ಶಕ್ತಿ ಹೊಂದಿದವರು ದೊಡ್ಡ ದುರ್ಗಗಳನ್ನೆ ನಿರ್ಮಿಸಿರುವರು. ಬಳ್ಳಾರಿ, ಗುಡೇಕೋಟೆ, ಜರಿಮಲೆ, ಹರಪನಹಳ್ಳಿ, ವೀರನದುರ್ಗದ ಕೋಟೆಗಳು ಆಕಾರದಲ್ಲಿ ದೊಡ್ಡದಿದ್ದು ಪ್ರಬಲವಾಗಿವೆ. ಇನ್ನುಳಿದ ಪಾಳೆಯಗಾರರ ಕೋಟೆಗಳು ಸಾಧಾರಣವಾಗಿವೆ. ಪಾಳೆಯಗಾರರ ಕೋಟೆಗಳಲ್ಲಿ ಹಿಂದೂ-ಮುಸ್ಲಿಂ ಮಿಶ್ರ ಶೈಲಿಯನ್ನು ಗುರುತಿಸಬಹುದು. ಕಲ್ಲುಗಳ ಜೊತೆಗೆ ಇಟ್ಟಿಗೆ - ಗಾರೆ ಬಳಕೆ ಹಾಗೂ ಕಮಾನಿನಾಕಾರದ ಬಾಗಿಲುಗಳು ರಚನೆಯಾದವು. ಈ ಮೊದಲಿದ್ದ ಆಳ್ವೇರಿಗಳ ಮೇಲಿನ ತೆನೆಗಳ ವಿನ್ಯಾಸದಲ್ಲಿ ಬದಲಾವಣೆಯಾಗಿದೆ. ಮುಂಚಿನ ಕೋಟೆ ತೆನೆಗಳು ಘನರೂಪದವುಗಳಾಗಿದ್ದವು. ಇವುಗಳ ಹಿಂದೆ ನಿಂತು ಬಿಲ್ಲುಗಾರರು ಎರಡು ತೆನೆಗಳ ಮಧ್ಯದ ಸಂದಿಯ ಮೂಲಕ ಬಾಣಗಳನ್ನು ಬಿಡುತ್ತಿದ್ದರು.

ಈ ಕಾಲಾವಧಿಯಲ್ಲಿ ಬಂದೂಕುಗಳ ಬಳಕೆ ಪ್ರಾರಂಭವಾದುದರಿಂದ ಅವುಗಳಿಗಾಗಿ ತೆನೆಗಳಲ್ಲಿ ಹಾಗೂ ಕೋಟೆ ಗೋಡೆಗಳಲ್ಲಿ ರಂಧ್ರಗಳನ್ನು ಮಾಡಿದೆ. ನಡಿವಿ, ಕರಡಿದುರ್ಗ ಹಾಗೂ ವೀರನದುರ್ಗದ ಕೋಟೆ ಗೋಡೆಯ ರಂಧ್ರಗಳಲ್ಲಿ ಬಂದೂಕುಗಳನ್ನು ಇಟ್ಟು, ಬೇಕಾದ ದಿಕ್ಕಿನಲ್ಲಿ ಗುಂಡು ಹಾರಿಸಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಿದೆ. ರಂಧ್ರಗಳ ಅಳತೆ, ಆಕಾರ ಮತ್ತು ಸಂಖ್ಯೆಗಳಲ್ಲಿ ವೈವಿಧ್ಯತೆ ಇದೆ. ಕೆಲವುಗಳಲ್ಲಿ ಒಳಮೈಯಲ್ಲಿ ರಂಧ್ರಗಳ ಸಂಖ್ಯೆ ಕಡಿಮೆ ಇದ್ದು, ಹೊರಮೈಯಲ್ಲಿ ಹೆಚ್ಚಿವೆ. ಕೆಲವು ಇದಕ್ಕೆ ವಿರುದ್ಧವಾಗಿವೆ. ವೈರಿ ಎಸೆಯುವ ಆಯುಧ, ಗುಂಡುಗಳಿಂದ ತಪ್ಪಿಸಿಕೊಳ್ಳಲು ಮತ್ತು ಮಳೆ ಬಿಸಿಲಿನಿಂದ ರಕ್ಷಣೆ ಪಡೆಯಲು ತೆನೆಗಳಲ್ಲಿ ದೊಡ್ಡ ಕೋಷ್ಟಕಗಳನ್ನು ನಿರ್ಮಿಸಿದೆ. ಜೊತೆಗೆ ದೂರದಿಂದಲೇ ವೈರಿಗಳನ್ನು ಗಮನಿಸಿ ದಾಳಿಮಾಡಲು ಗೋಡೆಯಿಂದ ಮುಂದೆ ಚಾಚಿದ ಮುಂಚಾಚುಗಳನ್ನು ರಚಿಸಲಾಗಿರುವುದು.

ಹದಿನೆಂಟನೆಯ ಶತಮಾನದಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನ ಕಟ್ಟಿಸಿದ ಕೋಟೆಗಳು ತಮ್ಮದೇ ಆದ ವಾಸ್ತು ವೈಶಿಷ್ಟ್ಯಗಳನ್ನು ಹೊಂದಿವೆ. ಹೈದರಾಲಿಯು ಕೊಪ್ಪಳದ ಬತೇರಿ ಹಾಗೂ ಬಹಾದ್ದೂರ ಬಂಡೆಯ ಕೋಟೆಯನ್ನು ಐರೋಪ್ಯ ಶೈಲಿಯಲ್ಲಿ ಕಟ್ಟಿಸಿದ್ದನ್ನು ಅಲ್ಲಿಯ ಶಾಸನಗಳು ಉಲ್ಲೇಖಿಸುತ್ತವೆ. ಈ ಜಿಲ್ಲೆಯ ಕೃಷ್ಣಾನಗರದ ಕೋಟೆಯನ್ನು ಹೈದರಾಲಿ ಮತ್ತು ಟಿಪ್ಪುಸುಲ್ತಾನರು ನಿರ್ಮಿಸಿದ್ದಾರೆ. ಇದರ ಪ್ರವೇಶಕ್ಕೆ ಮುನ್ನ ಆಯಾತಾಕಾರದ ಚೌಕಟ್ಟಿನ ಬಾಗಿಲ ಮುಂದೆ ಆವರಣವಿದೆ. ನಂತರದ ಬಾಗಿಲುಗಳಲ್ಲಿ ಕಮಾನುಗಳಲ್ಲದೆ ಒಂದಕ್ಕಿಂತ ಹೆಚ್ಚು ಬಾಗಿಲು ಮತ್ತು ಆವರಣಗಳಿದ್ದು, ಬಾಗಿಲುಗಳು ದೊಡ್ಡ ಸಂಕೀರ್ಣಗಳಾಗಿ ಮಾರ್ಪಡುತ್ತವೆ. ಈ ಕೋಟೆಯ ಕೈಪಿಡಿಗೋಡೆ ಅಗಲವಾಗಿದ್ದು, ಹೊರಬದಿಗೆ ಇಳಿಜಾರಾಗಿದೆ. ಇಂತಹ ಗೋಡೆಯ ಮೇಲಿನ ತುದಿಗೆ ತಗುಲಿದ ತೋಪಿನ ಗುಂಡು ಹಿಂದಕ್ಕೆ ಜಾರಿ ಬೀಳುವಂತೆ ವಿನ್ಯಾಸಗೊಳಿಸಿದೆ. ಇದನ್ನೆ ಫ್ರೆಂಚ್ ಮಾದರಿ ಎನ್ನುವುದು. ಆಳ್ವೇರಿಯ ಮೇಲೆ ಸುಮಾರು ಹದಿನೈದು ಅಡಿ ಅಗಲವಾದ ದಾರಿಯನ್ನು ಫಿರಂಗಿಗಳ ಓಡಾಟಕ್ಕಾಗಿ ರೂಪಿಸಿದೆ. ಇದೇ ಲಕ್ಷಣಗಳು ಹೈದರಾಲಿ ಜೀರ್ಣೋದ್ಧಾರಗೊಳಿಸಿದ ಬಳ್ಳಾರಿ ಕೋಟೆಯಲ್ಲಿಯೂ ಇವೆ.

ಕೋಟೆಗಳ ಜೊತೆಗೆ ಕೊತ್ತಳಗಳೆಂಬ ಪದವು ಸೇರಿಕೊಂಡಿದೆ. ಕೋಟೆಯಿಂದ ಕೊತ್ತಳವನ್ನು ಬೇರ್ಪಡಿಸುವುದೆಂದರೆ ಶರೀರದಿಂದ ಅಂಗಾಂಗಳನ್ನು ವಿಭಜಿಸಿದಂತೆ. ಕೋಟೆಗೆ ಭದ್ರತೆ ಇರುವುದೇ ಕೊತ್ತಳಗಳಿಂದ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳನ್ನು ನಿರ್ಮಿಸುತ್ತಿದ್ದರು. ಕೊತ್ತಳವು ಎರಡು ಗೋಡೆಗಳನ್ನು ಜೋಡಿಸುವುದರ ಜೊತೆಗೆ ರಕ್ಷಣೆಯ ಜವಾಬ್ದಾರಿಯನ್ನು ಹೊರುತ್ತದೆ. ಹೀಗಾಗಿಯೇ ಕೌಟಿಲ್ಯನು ಕೊತ್ತಳಗಳು ಕೋಟೆಗೆ ಅಂಟಿಕೊಂಡಿರಬೇಕೆಂದಿದ್ದಾನೆ.

ವಿಜಯನಗರ ಮತ್ತದರ ಪೂರ್ವಕಾಲದ ಕೋಟೆಗಳಲ್ಲಿ ವೃತ್ತಾಕಾರದ ಕೊತ್ತಳಗಳ ಜೊತೆಗೆ ಚೌಕಾಕಾರದ ಕೊತ್ತಳಗಳು ಹೆಚ್ಚಿದ್ದವು. ಚೌಕಾಕಾರದ ಕೊತ್ತಳಗಳ ಮಧ್ಯೆ ಪ್ರವೇಶದ್ವಾರಗಳನ್ನು ನಿರ್ಮಿಸಿದ್ದರು. ಹಂಪಿ ಕೋಟೆಯಲ್ಲಿ ಬಂಡೆಗಳ ಸಮೂಹಗಳು ಅದರ ಮೇಲಿನ ಕಾವಲು ಗೋಪುರಗಳೂ ಕೊತ್ತಳಗಳೆಂದಿನಿಸಿಕೊಂಡಿವೆ.

ಕೊತ್ತಳಗಳಿಗೆ ಆಳುವ ರಾಜರ, ಅಲ್ಲಿರುವ ದೇವರ, ಪ್ರಭಾವಿ ವ್ಯಕ್ತಿಗಳ, ಕಟ್ಟಿಸಿರುವವರ ಹೆಸರುಗಳನ್ನು ಇಡಲಾಗಿದೆ. ವಿಜಯನಗರದ (ಹಂಪಿ) ಕೋಟೆಯಲ್ಲಿ ಪ್ರತಾಪ ಕೊತ್ತಳ, ಹನುಮನ ಕೊತ್ತಳ, ಮತಂಗದೇವರ ಕೊತ್ತಳ ಇತ್ಯಾದಿ ಹೆಸರುಗಳಿದ್ದರೆ, ಶಿರುಗುಪ್ಪ ಕೋಟೆಯಲ್ಲಿನ ಕೊತ್ತಳಗಳಿಗೆ ಹುಸೇನಿ ಬುರುಜು ಸಾಹೇಬ ಬುರುಜು ಎಂಬ ಹೆಸರುಗಳಿವೆ.

ವಿಜಯನಗರೋತ್ತರದ ಕೊತ್ತಳಗಳು ಹೆಚ್ಚು ವೃತ್ತಾಕಾರದಲ್ಲಿವೆ. ಈ ಕೊತ್ತಳಗಳಿಗೆ ಹೊಂದಿಕೊಂಡು ಕೋಟೆ ಪ್ರವೇಶದ್ವಾರಗಳನ್ನು ರಚಿಸಲಾಗಿದೆ. ಇವುಗಳ ಮೇಲೇರಲು ಮೆಟ್ಟಿಲುಗಳಿವೆ. ಈ ಕಾಲದ ವಿಶೇಷವೆಂದರೆ

ಕೋಟೆಗಳ ಮಧ್ಯದಲ್ಲಿ ಹಾಗೂ ಗ್ರಾಮಗಳಲ್ಲಿ ಬೃಹದಾಕಾರದ ಕೊತ್ತಳಗಳ ನಿರ್ಮಾಣ. ಕರಡಿದುರ್ಗ, ಬಂಡ್ರಿ, ಪಾಲಯ್ಯನ ಕೋಟೆ, ಕಮಲಾಪುರದ ಕೋಟೆಯ ಮಧ್ಯದಲ್ಲಿಯೂ ಬೃಹದಾಕಾರದ ಕೊತ್ತಳಗಳು ಕಂಡುಬರುತ್ತವೆ. ಅಲ್ಲದೆ ಕೊಂಡನಾಯಕನಹಳ್ಳಿ, ಕಮಲಾಪುರ, ಹಗರಿಬೊಮ್ಮನಹಳ್ಳಿ, ಚಿಂತರಪಳ್ಳಿ, ಉಪ್ಪಾರಗಟ್ಟ, ಹಚ್ಚೊಳ್ಳಿ, ಕರೂರು, ಕರಡಿಹಳ್ಳಿ, ಮೀನಹಳ್ಳಿ, ಮಾಡಲಗೇರಿ, ದಾದಾಪುರ ಮುಂತಾದ ಸ್ಥಳಗಳಲ್ಲಿ ಗ್ರಾಮರಕ್ಷಣೆಗಾಗಿ ಕಟ್ಟಿದ ಕೊತ್ತಳಗಳಿವೆ. ಇವುಗಳಿಗೆ ಸ್ಥಳೀಯರು "ಹುಡೇವು" ಎಂದು ಕರೆಯುತ್ತಾರೆ. ಕೆಲವು ಗ್ರಾಮಗಳಲ್ಲಿ ಹುಡೇವುಗಳಿಲ್ಲ. ಆದರೆ ಹುಡೇದ ಲಕ್ಷ್ಮಿಯ ಆರಾಧನೆ ಮಾತ್ರ ಉಳಿದುಕೊಂಡಿದೆ. ಬಹುಮನಿ ಮತ್ತು ಆದಿಲ್‌ಶಾಹಿ ಕಾಲದಲ್ಲಿ ಮುಸ್ಲಿಂ ಪ್ರಭಾವ ಇರುವ ಪ್ರದೇಶದಲ್ಲಿ ಕೊತ್ತಳಗಳಿಗೆ ಬುರುಜುಗಳೆಂದು ಕರೆದರು. ಬಹುಭುಜಾಕೃತಿಯ ಕೊತ್ತಳ ಅಥವಾ ಬುರುಜುಗಳು ರೂಪಿತಗೊಂಡಿದ್ದು ಈ ಅವಧಿಯಲ್ಲಿಯೇ. ಕಾಲಕಾಲಕ್ಕೆ ಆಗಿರುವ ಇಂತಹ ಬದಲಾವಣೆಗಳನ್ನು ನಾವು ಕಾಣುತ್ತೇವೆ. ಇಂದು ಕೊತ್ತಳಗಳು ಪೊಲೀಸ್ ಕಾವಲು ಮನೆಗಳ ರೂಪದಲ್ಲಿ ಮಾರ್ಪಾಡುಗೊಂಡಿವೆ.

❑❑

ಅನುಬಂಧಗಳು

ಕೋಟೆ ಸೂಚಿ

ಕೋಟೆ ಪದಕೋಶ

ಗ್ರಂಥಋಣ

ಕೋಟೆಸೂಚಿ

೧. ಉಚ್ಚಂಗಿದುರ್ಗ
೨. ಕಂಪ್ಲಿ
೩. ಕಮಲಾಪುರ
೪. ಕರಡಿದುರ್ಗ
೫. ಕೃಷ್ಣಾನಗರ
೬. ಕುರುಗೋಡು
೭. ಕೆಂಚನಗುಡ್ಡ
೮. ಗುಡೇಕೋಟೆ
೯. ಜರಿಮಲೆ
೧೦. ತಂಬ್ರಹಳ್ಳಿ
೧೧. ತೆಕ್ಕಲಕೋಟೆ
೧೨. ದರೋಜಿ
೧೩. ದೇವಲಾಪುರ
೧೪. ನಡವಿ
೧೫. ಪಾಪಿನಾಯಕನಹಳ್ಳಿ
೧೬. ಪಾಲಯ್ಯನ ಕೋಟೆ
೧೭. ಬಂಡ್ರಿ
೧೮. ಬಳ್ಳಾರಿ
೧೯. ರಾಮಸಾಗರ
೨೦. ವೀರನದುರ್ಗ
೨೧. ಶಿರುಗುಪ್ಪ
೨೨. ಹಂಪಾಪಟ್ಟಣ
೨೩. ಹಂಪಿ
೨೪. ಹನಸಿ
೨೫. ಹರಪನಹಳ್ಳಿ
೨೬. ಹಲುವಾಗಿಲು
೨೭. ಹ್ಯಾರಡ
೨೮. ಹೂವಿನ ಹಡಗಲಿ
೨೯. ಹೊಸಮಲೆದುರ್ಗ
೩೦. ಹೊಸಪೇಟೆ
೩೧. ಹೊಳಲು

ಕೋಟೆ ಪದಕೋಶ

ಅಂಬುಗಂಡಿ - ಬಾಣ, ಬಂದೂಕುಗಳನ್ನು ಪ್ರಯೋಗಿಸಲು ಮಾಡಿದ ಕೋಟೆ ಗೋಡೆಯಲ್ಲಿ ರಚಿಸಲಾದ ರಂಧ್ರ

ಅಗಸೆ - ಊರ ಹೆಬ್ಬಾಗಿಲು

ಅಗಳು - ಕೋಟೆಯ ಸುತ್ತಲೂ ಅಗೆದ ತಗ್ಗು - ಕಂದಕ

ಅಟ್ಟಣೆ - ಮಂಚಿಕೆ

ಅರಿ - ಶತ್ರು

ಆಳ್ವೇರಿ - ಕೋಟೆ ಗೋಡೆ

ಕತ್ತಿಯಪರಜು - ಕತ್ತಿಯ ಹಿಡಿ, ಮೊನೆ

ಕಿರಾತ - ಬೇಡ, ಪರಾಕ್ರಮ, ಬೇಟೆಗಾರ, ಬೇಡರಪಡೆ

ಕೇತು - ಧ್ವಜ

ಕೊತ್ತಳ - ಬುರುಜು

ಕೋವಿ - ಗುಂಡುಹಾರಿಸುವ ಸಣ್ಣತುಪಾಕಿ, ಬಂದೂಕು

ಗೊಂಟು - ಕೋಟೆ ಗೋಡೆಗಳು ಒಂದಕ್ಕೊಂದು ಸಂಧಿಸುವ ಸ್ಥಳ

ಜಬರಜಂಗಿ - ಒಂದು ಬಗೆಯ ಫಿರಂಗಿ

ಜೆಂಗಿ - ಯುದ್ಧ, ಕದನ

ತುಕಡಿ - ಸೇನಾದಳ, ಪಡೆ, ಭಾಗ

ತೆನೆ - ಕೋಟೆಯ ಮೇಲ್ಭಾಗದ ತೆನೆಯಾಕಾರದ ರಚನೆ

ದಂಡು - ಸೇನೆ, ತುಕಡಿ

ದಿಡ್ಡಿ - ಸಣ್ಣಬಾಗಿಲು

ಬಟ್ಟದೆನೆ - ಕೋಟೆ ತೆನೆ

ಪಟ - ಧ್ವಜ

ಪಾಳೆಯ - ಶಿಬಿರ, ಬೀಡು

ಫಿರಂಗಿ - ಗುಂಡುಹಾರಿಸುವ ಬೃಹತ್ ಗಾತ್ರದ ತುಪಾಕಿ

ಪುಲಿಮೊಗ - ಕೋಟೆಯ ದಿಡ್ಡಿಬಾಗಿಲು, ಹೆಬ್ಬಾಗಿಲು

ಮನ್ನೆಯರು - ಮಾನ್ಯರು, ಸಾಮಂತರು, ಮಾಂಡಲಿಕರು

ಮುಗಿಲಟ್ಟಣೆ - ಮಂಚಿಕೆ

ಮುಸುಂಡಿ - ಮೂರುಮೊನೆಯುಳ್ಳ ಆಯುಧ

ಮೊಗರಂಭ - ಮುಖವಾಡ

ರಣದುಂದುಬಿ - ರಣವಾದ್ಯ

ಲಗ್ಗೆ - ದಾಳಿ

ಲಾಳಿ ವಿಂಡಿಗ - ಅಗುಳಿ

ಲೌಡಿ - ಕಬ್ಬಿಣದ ಗದೆ

ವಂಕಿ - ಒಂದು ಬಗೆಯ ಕತ್ತಿ

ಶತಘ್ನಿ - ತೋಪು, ಸುಮಾರು ನೂರು ಜನರನ್ನು ಕೊಲ್ಲುವ ಒಂದು ಬಗೆಯ ಆಯುಧ

ಸಾರ ಮಾರಿ - ಇದೊಂದು ವಿಶೇಷ ಸಾಧನ

ಹುಯಿಲು - ಕದನ, ಯುದ್ಧ, ಕಾಳಗ

ಹುಲಿಮೊಗ - ಕೋಟೆಯ ಬಾಗಿಲು

ಹುಡೇವು - ಕೊತ್ತಳ, ಬುರುಜು

❑❑

ಗ್ರಂಥಋಣ

English Books

Abhishankar, K. (Ed.), 1972. *Mysore State Bellary District.* Bangalore : Govt. Press

Acharya, P.K. 1927. *Indian Architecture According to Shilpashastra.* Allahabad

Annual Reports on Indian Epigraphy

Annual Reports of the Mysore Archaeological Department

Basavaraju, K.R. (Ed.), 1978. *The Vijayanagara Urbanity.* Hospet : N.S.U.P

Chakravarthi, P.C. 1972. *Art of War in Ancient India.* Delhi : Oriental Publishing House

Date, G.T. 1929. *Art of War in Ancient India.* London

Desai, P.B. and others. 1970. *History of Karnataka.* Dharwar : Karnataka University

Dutta, B.B. *Town Planning in Ancient India*

Epigraphia Carnatica

Epigraphia Indica

Fas Virginia. 1986. *The Forts of India.* Culcutta

Hayavadana Rao, C. 1930. *Mysore Gazetteer Vol-II, Part-III.* Mysore

Heras, H. 1927. *Aravidu Dynasty of Vijayanagara Empire, Vol-I.* New Delhi : Cosmo Publications

Joshi, S.K. 1985. *Defence Architecture in Early Karnataka.* Delhi : Sundeep Prakashan

Kamalapur, J.N. 1964. *The Deccan Forts.* Bombay

Karmarkar, D.P. 1974. *A Cultural History of Karnataka.* Dharwar : Karnataka Vidyavardhaka Sangha.

Longhurst, A.H. 1990. *Hampi Ruins.* New Delhi : A.E.S

Mahalingam, T.V. 1976. *Administration and Social life under Vijayanagara -2.* Madras : Madras University

Misra, B.D. 1993. *Forts and Fortresses of Gwalior and its Interland.* Delhi : Manohara Publisher and Distributors

Nanjundappa, K.S. *Industries and Commerce in Karnataka during the Vijayanagara period,* Ph.D. Thesis. Mysore : Mysore University

Nilakanta Shastri, K.A. 1966. *A History of South India.* Madras : A.E.S

Narvane, M.S. 1995. *Forts of Maharashtra.* New Delhi

Rajashekar, S. 1985. *Mosterpieces of Vijayanagara Art.* Bombay : Taraporevala

Ramachandra Murthy, N.S. 1995. *Forts of Andhra Pradesh.* Delhi : Bharatiya Kala Prakashana

Rangachari, K. *Town Planning and House Building in Ancient India*

Rangarajan, L.N. (Ed.), 1967. *The Arthashastra* (Koutilya). New Delhi : Penguin in Books

Rama Sharma, M.H. 1978. *The History of Vijayanagara Empire Vol. I* (Ed. Gopal. M.H) Bombay : Popular Prakashana

Saletore, B.A. 1934. *Social and Political Life in the Vijayanagara Empire, Vol-I and II.* Madras : B.G Poul and Co

Saletore, R.N. 1982. *Vijayanagara Art.* Delhi : Sundeep Prakashana

Settar, S. 1990. *Hampi*. Bangalore : Kalayatra

Settar, S. and Ravi Korisettar. (Ed.). 2002. *Indian Archaeology in Retrospect Prehistory Archaeology of South Asia Vol-I*. New Delhi : ICHR - Manohara Publisher

Sewell Robert. 1962. *Forgotten Empire*. Delhi : National Book Trust

Shama Sastri, (Ed.), 1920. *Abhilashitartha Chintamani*. Mysore

Sharma, R.K. and Agarwala. 1995. *Krsna-Smrti, Studies in Indian Art and Archaeology*. New Delhi : Books International

Singh, A.P. 1987. *Forts and Fortifications in India : With Special Reference to Central India*. Delhi

South Indian Inscriptions

Srikanta Sastri, S. 1940. *Sources of Karnataka History Vol-I*. Mysore : Mysore University

Straith, H. Treatise on Fortification and Antillary

Sukracharya. 1919. *Nitisara* (Trans : B.K. Sarkar)

Suganda Sarma, V. 1998. *History Antiquities of Raichur Fort*. Delhi : Bharatiya Kala Prakashana

Suryanarain Rao, B. 1993. *The Never to be Forgotten Empire*. New Delhi : A.E.S.

Venkata Ramanayya, N. 1935. *Studies in the History of third dynasty of Vijayanagara*. Madras

Venkata Ratnam, A.V. 1972. *Local Government in the Vijayanagara Empire*. Mysore : Mysore University

ಕನ್ನಡ ಗ್ರಂಥಗಳು

ಇತಿಹಾಸ ದರ್ಶನ. ಸಂಪುಟ : ೭-೧೧-೧೨-೧೫-೧೬-೧೭. ಬೆಂಗಳೂರು : ಕರ್ನಾಟಕ ಇತಿಹಾಸ ಅಕಾದೆಮಿ

ಕಲಬುರ್ಗಿ, ಎಂ.ಎಂ. (ಸಂ.), ೧೯೯೪. *ಕರ್ನಾಟಕ ಕೈಫಿಯತ್ತುಗಳು*. ಹಂಪಿ : ಕನ್ನಡ ವಿಶ್ವವಿದ್ಯಾಲಯ

ಕಲಬುರ್ಗಿ, ಎಂ.ಎಂ. (ಸಂ.), ೨೦೦೧. *ಕುಮಾರರಾಮಯ್ಯನ ಚರತ್ರೆ*. ಹಂಪಿ : ಕನ್ನಡ ವಿಶ್ವವಿದ್ಯಾಲಯ

ಕರ್ನಾಟಕ ಚರಿತ್ರೆ. ೧೯೯೫-೧೯೯೭. ಏಳು ಸಂಪುಟಗಳು. ಹಂಪಿ : ಕನ್ನಡ ವಿಶ್ವವಿದ್ಯಾಲಯ

ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ. ೧೯೭೯. ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ

ಕುಂಬಾಸ. ೧೯೯೦. *ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ*. ಕುಂಚೂರು : ಮಾಲತೇಶ ಪ್ರಕಾಶನ

ಕುಶಾಲಪ್ಪಗೌಡ, ಕೆ. (ಅನುವಾದ), *ಗಂಗಾದೇವಿಯ ಮಧುರಾವಿಜಯಂ ಅಥವಾ ವೀರಕಂಪಣರಾಯ ಚರಿತಂ*. ಪೆರಾಜೆ : ಜಯಗೌರಿ ಪ್ರಕಾಶನ

ಕುಲಕರ್ಣಿ, ಸಾಂ.ರಂ. (ಅನುವಾದ), ೧೯೮೦. *ಯಜ್ಞವಲ್ಕಸ್ಮೃತಿ*. ಧಾರವಾಡ

ಕೃಷ್ಣಭಟ್, ಕೆ. (ಅನುವಾದ), ೧೯೭೨. *ಕೌಟಿಲ್ಯನ ಅರ್ಥಶಾಸ್ತ್ರ*. ಧಾರವಾಡ : ಸಮಾಜ ಪುಸ್ತಕಾಲಯ

ಕೃಷ್ಣಮೂರ್ತಿ, ಪಿ.ವಿ. ಮತ್ತು ಕೆ. ವಸಂತಲಕ್ಷ್ಮಿ. (ಸಂ.), ೨೦೦೦. *ಸೂರ್ಯಕೀರ್ತಿ*. ಬೆಂಗಳೂರು : ಡಾ. ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ

ಕೃಷ್ಣ, ಎಂ.ವಿ. ಮತ್ತು ಕೇಶವಭಟ್, ಎಂ. ೧೯೭೦. *ಕರ್ನಾಟಕ ಇತಿಹಾಸ ದರ್ಶನ*. ಬೆಂಗಳೂರು : ಕರ್ನಾಟಕ ಸಹಕಾರಿ ಪ್ರಕಾಶನ

ಕೃಷ್ಣಶರ್ಮ, ಬೆಟಗೇರಿ. ೧೯೭೧. *ಕರ್ನಾಟಕ ಜನಜೀವನ*. ಧಾರವಾಡ

ಗಿರಿಜ, ಟಿ. ೨೦೦೧. *ದಾವಣಗೇರಿ : ಇದು ನಮ್ಮ ಜಿಲ್ಲೆ*. ದಾವಣಗೇರಿ : ವಿಹಾರಿಕಾ ಪ್ರಕಾಶನ

ಗೋಪಾಲ, ಬಾ.ರಾ. ೧೯೭೧. *ಕರ್ನಾಟಕದಲ್ಲಿ ನವಶಿಲಾಯುಗ*. ಧಾರವಾಡ

ಚನ್ನಬಸಪ್ಪ, ಎಸ್.ಪಾಟೀಲ. ೧೯೯೯. *ಕರ್ನಾಟಕ ಕೋಟೆಗಳು*. ಹಂಪಿ : ಕನ್ನಡ ವಿಶ್ವವಿದ್ಯಾಲಯ

ಚನ್ನಬಸಪ್ಪ, ಎಸ್. ಪಾಟೀಲ. (ಸಂ.). ೧೯೯೭. *ಬಳ್ಳಾರಿ ಜಿಲ್ಲೆಯ ಶಾಸನಗಳು ಭಾಗ ೨*. ಮೈಸೂರು : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಚನ್ನಬಸವಯ್ಯ ಹಿರೇಮಠ. ೧೯೯೫. *ಕುರುಗೋಡು ಸಿಂದರು : ಒಂದು ಅಧ್ಯಯನ*. ಕೊಪ್ಪಳ : ಸಂಗಣ್ಣನವರ ಅಗಡಿ ಪ್ರತಿಷ್ಠಾನ

ಚನ್ನಬಸವೇಶ್ವರ. ೧೯೭೮. *ಬಳ್ಳಾರಿ ಜಿಲ್ಲೆ ದರ್ಶನ*. ಬೆಂಗಳೂರು : ಐಬಿಎಚ್ ಪ್ರಕಾಶನ

ಚಂದ್ರಶೇಖರಯ್ಯ, ಎಂ. ೧೯೮೭. *ಕೂಡ್ಲಿಗಿ ತಾಲ್ಲೂಕು ದರ್ಶನ*. ಬೆಂಗಳೂರು : ಐಬಿಎಚ್ ಪ್ರಕಾಶನ

ಚಿದಾನಂದಮೂರ್ತಿ, ಎಂ. ೧೯೬೮. *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*. ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ

ಜೋಶಿ, ಕೆ.ಜಿ. ೧೯೯೧. *ಕೌಟಿಲ್ಯನ ರಾಜ್ಯ ಪದ್ಧತಿಯ ಸಮೀಕ್ಷೆ*. ಬೆಳಗಾವಿ : ಶರತ್ ಪ್ರಕಾಶನ

ದೀಕ್ಷಿತ್, ಜಿ.ಎಸ್. ಮತ್ತು ಇತರರು. ೧೯೯೭. *ಶ್ರೀ ಕೃಷ್ಣದೇವರಾಯ ಜೀವನ ಸಾಧನೆಗಳು*. ಮೈಸೂರು : ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ

ದೇವರಕೊಂಡಾರೆಡ್ಡಿ, ಕಲವೀರ ಮನ್ಸಾಚಾರ್, ಕೆ.ಜಿ.ಭಟ್ಟಸೂರಿ ಮತ್ತು ಡಿ.ವಿ.ಪರಮಶಿವಮೂರ್ತಿ. ೧೯೯೮. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಬಳ್ಳಾರಿ ಜಿಲ್ಲೆ) - ೧*. ಹಂಪಿ : ಕನ್ನಡ ವಿಶ್ವವಿದ್ಯಾನಿಲಯ

ದೇವೀರಪ್ಪ, ಎಚ್. (ಸಂ.), ೧೯೯೪. *ರಾಮನಾಥ ಚರಿತ, ಸಂ. ೨* ಮತ್ತು ೩. ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ

ದೇವೀರಪ್ಪ, ಎಚ್. ಪದ್ಮನಾಭಶರ್ಮ, ಎಂ.ಸಿ. (ಸಂ.), ೧೯೯೪. *ಅನಂತಪುರಾಣ* (ಜನ್ನಕವಿ). ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ

ನರಸಿಂಹಮೂರ್ತಿ, ಎ.ವಿ. ೧೯೭೧. *ಕರ್ನಾಟಕದ ಸೇವುಣರ ಇತಿಹಾಸ*. ಮೈಸೂರು

ನಾಗೇಗೌಡ, ಎಚ್.ಎಲ್. ೧೯೬೪. *ಪ್ರವಾಸಿ ಕಂಡ ಇಂಡಿಯಾ, ಸಂ. ೧* ಮತ್ತು ೨. ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ

ನಾಗಯ್ಯ, ಜೆಂ.ಎಂ. ೨೦೦೨. *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ*. ಬಳ್ಳಾರಿ : ಲೋಹಿಯಾ ಪ್ರಕಾಶನ

ನಿರುಪಮಾ. ೧೯೭೯. *ಆಮುಕ್ತಮೌಲ್ಯದ* (ಶ್ರೀಕೃಷ್ಣದೇವರಾಯ). ಬೆಂಗಳೂರು : ಶ್ರೀ ಪ್ರಕಾಶನ

ಪಂಚಮುಖಿ, ಆರ್.ಎಸ್. ೧೯೬೭. *ಕರ್ನಾಟಕದ ಇತಿಹಾಸ*. ಧಾರವಾಡ

ಪರಮಶಿವಮೂರ್ತಿ, ಡಿ.ವಿ. ೧೯೯೯. *ಕನ್ನಡ ಶಾಸನಶಿಲ್ಪ*. ಹಂಪಿ : ಕನ್ನಡ ವಿಶ್ವವಿದ್ಯಾಲಯ

ಪುಟ್ಟಣ್ಣ, ಎಂ.ಎಸ್. ೧೯೨೩. *ಚಿತ್ರದುರ್ಗ ಪಾಳೆಯಗಾರರು*. ಬೆಂಗಳೂರು

ಫಿಲಿಯೋಜಾ ವಸುಂಧರಾ. ೧೯೮೦. *ವಿಜಯನಗರ ಸಾಮ್ರಾಜ್ಯ ಸ್ಥಾಪನೆ*. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

ಫಿಲಿಯೋಜಾ ವಸುಂಧರಾ. ೧೯೮೨. *ಅಳಿದುಳಿದ ಹಂಪೆ*. ಬೆಂಗಳೂರು : ಮಾನಸೋಲ್ಲಾಸ ಪ್ರಕಾಶನ

ಬಸಪ್ಪ, ಎಸ್.ಎಂ. (ಸಂ.), ೧೯೭೦. *ಶಿವತತ್ವ ಚಿಂತಾಮಣಿ* (ಲಕ್ಕಣ್ಣ ದಂಡೇಶ). ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ

ಬಸವರಾಜ ಭೂಪಾಲ. ೧೯೯೯. *ಶಿವತತ್ವ ರತ್ನಾಕರ* (ಸಂ : ಪ್ರೊ.ಮಲ್ಲೇಪುರಂ. ಜಿ. ವೆಂಕಟೇಶ) ಸಂ.೧ ಮತ್ತು ೨. ಹಂಪಿ : ಕನ್ನಡ ವಿಶ್ವವಿದ್ಯಾಲಯ

ಬಸವರಾಜ, ಎಚ್.ಎಂ. ೨೦೦೨. *ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ*, ಎಂ.ಫಿಲ್ ಪ್ರೌಢ ಪ್ರಬಂಧ. ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ

ಭೀಮಕವಿ. ೧೯೭೯. *ಬಸವ ಪುರಾಣ*. ಧಾರವಾಡ : ಲಿಂಗಾಯತ ಅಭಿವೃದ್ಧಿ ಸಂಸ್ಥೆ

ಭೂಸನೂರಮಠ, ಸಂ.ಶಿ. (ಸಂ.), ೧೯೫೮. *ವಿಜಯ ಕಲ್ಯಾಣ*. ಹಂಪಿ : ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ

ಮಂಗರಸ. ೧೯೨೩. *ಸಮ್ಯಕ್ತ್ವ ಕೌಮುದಿ*. ಬೆಳಗಾವಿ

ರಡ್ಡೆಪ್ಪ ಪಂಪಣ. ೧೯೯೫. *ರಾಯಚೂರು ಕೋಟೆಯ ಇತಿಹಾಸ*, ಎಂ.ಫಿಲ್ ಪ್ರೌಢಪ್ರಬಂಧ. ಧಾರವಾಡ : ಕರ್ನಾಟಕ ವಿಶ್ವವಿದ್ಯಾನಿಲಯ

ರವಿಕುಮಾರ್, ಎನ್. ಮತ್ತು ವೃಷಭೇಂದ್ರಾಚಾರ್, ಎಂ. (ಸಂ.), ೧೯೯೮. *ಮುನ್ನಡೆಯ ಕೂಡ್ಲಿಗಿ*. ಎಂ.ಬಿ.ಐಯ್ಯನಹಳ್ಳಿ : ಹೇಮಂತ ಪ್ರಕಾಶನ

ರಾಜಶೇಖರ್, ಎಸ್. *ವಿಜಯನಗರಕಾಲದ ಘಟನಾವಳಿ ಸೂಚಿ*. ಧಾರವಾಡ : ಸುಜಾತ ಪಬ್ಲಿಕೇಶನ್ಸ್

ರಾಜಶೇಖರ್, ಎಸ್. ೧೯೮೮. *ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ*. ಧಾರವಾಡ

ರಾಮರಾವ್, ಜೆ.ಎನ್. *ವಿದೇಶಿಯರು ಕಂಡ ವಿಜಯನಗರ*. ಬೆಂಗಳೂರು : ಐ.ಬಿ.ಎಚ್. ಪ್ರಕಾಶನ

ರಾಮಾನುಜ ಅಯ್ಯಂಗಾರ್, ಎಂ.ಎ. *ಪಂಚತಂತ್ರ*

ರಾಮಶೇಷನ್, ನೀ.ಕೃ. ೧೯೮೦. *ಕರ್ನಾಟಕದ ಕೋಟೆ - ಕೊತ್ತಳಗಳು*. ಬೆಂಗಳೂರು

ಲಕ್ಷ್ಮಣ್ ತೆಲಗಾವಿ ಮತ್ತು ಶ್ರೀನಿವಾಸ, ಎಂ. ವಿ. ೧೯೭೬. *ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು*. ಚಿತ್ರದುರ್ಗ

ವಸು, ಎಂ.ವಿ. (ಸಂ.), ೨೦೦೧. *ದಕ್ಷಿಣ ಕರ್ನಾಟಕದ ಅರಸು ಮನೆತನಗಳು*. ಹಂಪಿ : ಕನ್ನಡ ವಿಶ್ವವಿದ್ಯಾಲಯ

ವರದರಾಜ್‌ರಾವ್, ಜಿ. ೧೯೬೬. *ಕುಮಾರರಾಮನ ಸಾಂಗತ್ಯಗಳು*. ಮೈಸೂರು

ವರದರಾಜ್‌ರಾವ್, ಜಿ. ೧೯೮೫. *ಕುಮ್ಮಟದುರ್ಗ.* ಬೆಂಗಳೂರು

ವಿಜಯನಗರ ಅಧ್ಯಯನ ಸಂಪುಟಗಳು ೧ ರಿಂದ ೬

ವಿರೂಪಾಕ್ಷ ಪಂಡಿತ. ೧೯೩೪. *ಚೆನ್ನಬಸವ ಪುರಾಣ.* ಧಾರವಾಡ : ಲಿಂಗಾಯತ ಅಭಿವೃದ್ಧಿ ಸಂಸ್ಥೆ

ಶಿವತಾರಕ್, ಕೆ.ಬಿ. ೨೦೦೧. *ಕರ್ನಾಟಕದ ಪುರಾತತ್ವ ನೆಲೆಗಳು.* ಹಂಪಿ : ಕನ್ನಡ ವಿಶ್ವವಿದ್ಯಾಲಯ

ಶ್ರೀಕಂಠಯ್ಯ, ಕೆ. ೧೯೮೨. *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ.* ಮೈಸೂರು : ಗೀತಾ ಬುಕ್ ಹೌಸ್

ಶ್ರೀಕಂಠಯ್ಯ, ಕೆ. ೧೯೮೩. *ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು.* ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ

ಶೇಷಶಾಸ್ತ್ರಿ, ಆರ್. ೧೯೮೨. *ಕರ್ನಾಟಕದ ವೀರಗಲ್ಲುಗಳು.* ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

ಸಿವೆಲ್ ರಾಬರ್ಟ್. ೧೯೯೨. *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ* (ಅನುವಾದ : ಸದಾನಂದ ಕನವಳ್ಳಿ). ಹಂಪಿ : ಕನ್ನಡ ವಿಶ್ವವಿದ್ಯಾಲಯ

ಸುರೇಶ್, ಕೆ.ಎಂ., ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್ ಮತ್ತು ಎಸ್.ವೈ.ಸೋಮಶೇಖರ್. ೧೯೯೯. *ಕರ್ನಾಟಕ ದೇವಾಲಯ ಕೋಶ : ಬಳ್ಳಾರಿ ಜಿಲ್ಲೆ.* ಹಂಪಿ : ಕನ್ನಡ ವಿಶ್ವವಿದ್ಯಾಲಯ

ಸುರೇಶ್, ಕೆ.ಎಂ., ವಾಸುದೇವ ಬಡಿಗೇರ, ಎಸ್.ವೈ. ಸೋಮಶೇಖರ್ ಮತ್ತು ಮಾಡಲಗೇರಿ ಕೊಟ್ರೇಶ್. ೨೦೦೦. *ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ.* ಹಂಪಿ : ಕನ್ನಡ ವಿಶ್ವವಿದ್ಯಾಲಯ

ಸೂರ್ಯನಾಥ ಕಾಮತ್, ಯು. (ಸಂ.), ೧೯೮೪. *ಕರ್ನಾಟಕ ಗ್ಯಾಸೆಟಿಯರ್ ೩.* ಬೆಂಗಳೂರು : ಸರಕಾರಿ ಕೇಂದ್ರ ಪುಸ್ತಕದ ಮಳಿಗೆ

ಸೋಮಶೇಖರ್, ಎಸ್.ವೈ. ೧೯೯೭. *ಹಂಪೆಯ ಬಜಾರಗಳು.* ಹಂಪಿ : ಕನ್ನಡ ವಿಶ್ವವಿದ್ಯಾಲಯ

ವರದಿಗಳು ಮತ್ತು ಇತರರೆ

Devaraj, D.V. and Patil, C.S. (Ed.), *In vijayanagara : Progress of Research 1983-88.* Mysore : Directorate of Archaeology and Museums

Dallapiccola, Anna Libera. 1985. *Vijayanagar City and Empire.* Stutgart

Friz, John and George Michell. *City of Victory.* New York

Michell, George. 1990. Vijayanagar : *Architectural Inventory of the Urban Core, Vol-I.* Mysore : Directorate of Archaeology and Museums

Michell, George. 1992. *The Vijayanagara Courtly Style.* New Delhi : Manohar American Institute of Indian Studies

Mysore Archaeological Reports

Nagaraj Rao, M.S. (Ed.). *In Vijayanagar : Progress of Research 1979-83.* Mysore : Directorate of Archaeology and Museums

Nagaraj Rao, M.S. and Others. 1985. *In Vijayanagara : Progress of Research 1983-84.* Mysore : Directorate of Archaeology and Museums

Narasimhaiah, B. 1992. *Metropolis Vijayanagara.* Delhi : Book India Publishing House

ದಿಕ್ಸೂಚಿ, ೧೯೯೩. ಜುಲೈ, ಸೆಪ್ಟಂಬರ್ ಮತ್ತು ಅಕ್ಟೋಬರ್

ದಿಕ್ಸೂಚಿ, ೧೯೯೪. ಫೆಬ್ರುವರಿ ಮತ್ತು ಸೆಪ್ಟಂಬರ್

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ. ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು

ಪ್ರಬುದ್ಧ ಕರ್ನಾಟಕ. ಮೈಸೂರು ಮೈಸೂರು : ವಿಶ್ವವಿದ್ಯಾನಿಲಯ

ಶೆಟ್ಟರ್, ಎಸ್. ಮತ್ತು ರಾಜಶೇಖರ್, ಎಸ್. ೧೯೭೭. ನಿಟ್ಟೂರಿನ ಅಶೋಕ ಶಿಲಾಶಾಸನಗಳು, ಕರ್ನಾಟಕ ಭಾರತಿ ಸಂ.೧. ಸಂ.೧. ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ

❑❑